
ಕರ್ನಾಟಕ ಸರ್ಕಾರ

ಭರತೇಶನ ದಿನಚರಿ

# ತಪಸ್ಸಿನ ದಿನಗಳು

ಪಿ.ಕೆ. ನಾರಾಯಣ



ಕನ್ನಡ ಪುಸ್ತಕ ಪ್ರಾಧಿಕಾರ

## ಭರತೇಶನ ದಿನಚರಿ

# ತಪಸ್ಸಿನ ದಿನಗಳು

ಪಿ. ಕೆ. ನಾರಾಯಣ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

ದೂರವಾಣಿ : ೨೨೪೮ ೪೫೧೬

**BHARATESHANA DINACHARI** - **'Tapassina Dinagalu':**
by P.K. Narayana, *Published by:* **Ashoka N. Chalawadi**
Administrative officer Kannada Pustaka Pradhikara Kannada Bhavana, J.C. Road, Banglaore - 560 002

Pages : ii + 229
Price : Rs. 75/-
First Edition :1974
Second Edition : 2009
Copies : 500

© ಈ ಆವೃತ್ತಿಯ ಹಕ್ಕು ಕನ್ನಡ ಪುಸ್ತಕ ಪ್ರಾಧಿಕಾರದ್ದು.

ಪುಟಗಳು : ii + ೨೨೯
ಬೆಲೆ : ರೂ. ೭೫
ಪ್ರಥಮ ಮುದ್ರಣ : ೧೯೭೪
ದ್ವಿತೀಯ ಮುದ್ರಣ : ೨೦೦೯
ಪ್ರತಿಗಳು : ೫೦೦

ಕರಡು ತಿದ್ದಿದವರು : ಡಾ. ವರದಾ ಶ್ರೀನಿವಾಸ್

**ಪ್ರಕಾಶಕರು :**
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ,
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಮುದ್ರಕರು : ಭಾಗ್ಯಂ ಬೈಂಡಿಂಗ್ ವರ್ಕ್ಸ್
ನಂ. ೨೫/೧, ೧ನೇ ಮುಖ್ಯರಸ್ತೆ, ೧ನೇ ಅಡ್ಡರಸ್ತೆ
ನ್ಯೂ ಟಿಂಬರ್ ಯಾರ್ಡ್ ಲೇಔಟ್
ಮೈಸೂರು ರಸ್ತೆ, ಬೆಂಗಳೂರು – ೫೬೦ ೦೨೬
ದೂರವಾಣಿ : ೨೬೭೫೮೨೮೦, ಫ್ಯಾಕ್ಸ್ : ೨೬೭೫೯೦೮೮

# ಅಧ್ಯಕ್ಷರ ಮಾತು

ಕನ್ನಡದ ಪ್ರಸಿದ್ಧ ಕವಿ ರತ್ನಾಕರವರ್ಣಿಯ ಭರತೇಶ ವೈಭವದ ಸರಳ ಕನ್ನಡ ಗದ್ಯಾನುವಾದ ಭರತೇಶನ ದಿನಚರಿ. ಸಾಂಗತ್ಯದಲ್ಲಿ ರಚಿತವಾಗಿರುವ ಈ ಕೃತಿಯನ್ನು ೧೯೭೦ ರಷ್ಟು ಹಿಂದೆಯೇ ಹೊಸಗನ್ನಡಕ್ಕೆ ತಂದ ಶ್ರೇಯಸ್ಸು ಹಿರಿಯರಾದ ದಿ. ಶ್ರೀ. ಪಿ.ಕೆ. ನಾರಾಯಣ ಅವರಿಗೆ ಸಲ್ಲಬೇಕು. ರತ್ನಾಕರವರ್ಣಿ ಭರತನ ಪಾತ್ರಕ್ಕೆ ಹೊಸತನ ನೀಡಿ ಉದಾತ್ತತೆಯನ್ನು ತಂದವನು. ಒಬ್ಬ ಚಕ್ರವರ್ತಿಯಾಗಿ ತನ್ನ ಬದುಕಿನಲ್ಲಿ ಯೋಗಭೋಗದ ಸಮನ್ವಯ ಸಾಧಿಸಿದವನು. ಸರಸಿಯೂ, ಪರಾಕ್ರಮಿಯೂ ಆಗಿದ್ದ ಭರತ ಕೊನೆಯಲ್ಲಿ ಎಲ್ಲವನ್ನು ತೊರೆದು ವೈರಾಗ್ಯಪರನಾದದ್ದು ಅತ್ಯಂತ ಮನನೀಯ ಸಂಗತಿ. ಭರತೇಶನ ದಿನಚರಿ – ಸರಸದ ದಿನಗಳು, ವಿಜಯದ ದಿನಗಳು, ತಪಸಿನ ದಿನಗಳು ಈ ಮೂರು ವಿಭಾಗದಲ್ಲಿ ಲೇಖಕರು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಈ ಕೃತಿಗಳನ್ನು ಹೊರತರಲು ಅನುಮತಿಸಿದ ಲೇಖಕರ ಮಕ್ಕಳಾದ ಶ್ರೀಮತಿ ವರದಾ ಶ್ರೀನಿವಾಸ್ ಅವರಿಗೆ ಆಭಾರಿಯಾಗಿದ್ದೇನೆ.

ಈ ಗ್ರಂಥವನ್ನು ಹೊರತರಲು ಸಹಕರಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಸಂಯೋಜನಾಧಿಕಾರಿ ಶ್ರೀ ಜಿ.ಎನ್. ಶಾಮರಾವ್, ಪ್ರಾಧಿಕಾರದ ಎಲ್ಲಾ ಸದಸ್ಯರು, ಸಿಬ್ಬಂದಿ ವರ್ಗದವರಿಗೆ ಹಾಗೂ ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟಿರುವ ಭಾಗ್ಯಂ ಬೈಂಡಿಂಗ್ ವರ್ಕ್ಸ್‌ಗೆ ನನ್ನ ಕೃತಜ್ಞತೆಗಳು.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಕೃತಜ್ಞತೆಗಳು

ದಿ|| ಪಿ.ಕೆ. ನಾರಾಯಣ ಅವರು ಅನುವಾದಿಸಿರುವ ಕೃತಿ ಇದು. ಇದು ರತ್ನಾಕರವರ್ಣಿಯ ಭರತೇಶ ವೈಭವ (ಸಾಂಗತ್ಯ)ದ ಗದ್ಯಾನುವಾದ. ಈ ಗದ್ಯಾನುವಾದ ೧೯೭೨ರಲ್ಲಿ ಬೆಂಗಳೂರಿನ ಸಹಕಾರಿ ಪ್ರಕಾಶನದ ಮೂಲಕ ಪ್ರಕಟವಾಯಿತು.

ದಿ. ಪಿ.ಕೆ. ನಾರಾಯಣ ಅವರು ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಸಾಹಿತಿ; ಪತ್ರಕರ್ತ, ಕವಿ, ಸಮಾಜ ಸೇವಕ, ಗಾಂಧೀವಾದಿ ಆಗಿದ್ದರು. ಅವರ ಕೃತಿಗಳು ಆ ಕಾಲದ ಸಹೃದಯರಿಗೆ ಚಿರಪರಿಚಿತವಾಗಿದ್ದವು. ಈಗಲೂ ಅವರು ಅಲ್ಲಿಯ ಸ್ಮರಣೀಯ ಸಾಹಿತಿಗಳಲ್ಲೊಬ್ಬರು.

ಆ ಅನುವಾದದ ಬಗ್ಗೆ ಶ್ರೀಯುತ ಬನ್ನಂಜೆ ಗೋವಿಂದಾ ಚಾರ್ಯರು 'ಉದಯವಾಣಿ'ಯಲ್ಲಿ ಶರೀ ಸೇವ ನಮಿರಾಜ ಮಲ್ಲರು 'ಕರ್ಮವೀರ'ದಲ್ಲಿ ವಿಮರ್ಶಿಸಿ, ಪ್ರಶಂಸಿದ್ದಾರೆ. ಕನ್ನಡದ ಕವಿ ಪಂಡಿತ ಶ್ರೀ ಸೇಡಿಯಾಪು ಕೃಷ್ಣಭಟ್ಟರು, ಅಭಿನವ ಕಾಳಿದಾಸ ರೆಂದು ಪ್ರಸಿದ್ಧರಾದ ಪ್ರೊ|| ಎಸ್.ವಿ. ಪರಮೇಶ್ವರ ಭಟ್ಟರು ಈ ಅನುವಾದವನ್ನು ಹೊಗಳಿದ್ದಾರೆ. ಪ್ರೊ|| ಜಿ. ಬ್ರಹ್ಮಪ್ಪನವರಿಗಿಂತ ಮೊದಲು ರತ್ನಾಕರವರ್ಣಿಯ ಸಮಗ್ರ ಕಾವ್ಯವನ್ನು ತಿಳಿಗನ್ನಡದಲ್ಲಿ ಸೊಗಸಾಗಿ ಅನುವಾದಿಸಿದವರು ಪಿ.ಕೆ. ನಾ. ಅವರು.'' ಎಂದು ಡಾ|| ಹಂಪನಾ ಅವರು ತಿಳಿಸಿದ್ದಾರೆ.

ಇಂಥ ಒಂದು ಅನುವಾದ ಮೂವತ್ತೇಳು ವರ್ಷಗಳ ನಂತರ ಪುನರ್ಮುದ್ರಣ ವಾಗುತ್ತಿದೆ. ಇದಕ್ಕೆ ಕಾರಣಕರ್ತರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಸನ್ಮಾನ್ಯ ಡಾ|| ಸಿದ್ಧಲಿಂಗಯ್ಯ ಅವರು. ಅವರ ಈ ತೀರ್ಮಾನಕ್ಕೆ ನಾನು ಆಭಾರಿಯಾಗಿದ್ದೇನೆ.

ನಾನು, ದಿ|| ಪಿ. ಕೆ. ನಾರಾಯಣ ಅವರ ಮಗಳು ಕರಡಚ್ಚು ಪರಿಶೀಲಿಸಿ ಸಂದರ್ಭ ದಲ್ಲಿ ಎರಡೆರಡು ಬಾರಿ ಅನುವಾದ ಓದುವ ಅವಕಾಶ ಕಲ್ಪಿಸಿಕೊಟ್ಟರು. ಸಹೃದಯರಾದ ಡಾ|| ಸಿದ್ಧಲಿಂಗಯ್ಯ ಅವರು.

ರತ್ನಾಕರನ ಈ ಅನುವಾದ ಓದುತ್ತಿದ್ದಂತೆ ಆ ಮಹಾಕವಿಯ ಶಬ್ದಭಂಡಾರ, ತಾತ್ವಿಕ ವಿಚಾರ, ಹಂಸಕಲೆಯ ವಿವರ–ಎಲ್ಲವೂ ಅದ್ಭುತವಾಗಿದ್ದು ಗದ್ಯದಲ್ಲೂ ಅಷ್ಟೇ ಪರಿಣಾಮ ರಮಣೀಯವಾಗಿ ಬಂದಿರುವುದು ಗಮನಾರ್ಹ ಅಂಶವಾಗಿದೆ.

ಇಂಥ ಒಂದು ಬೃಹತ್ ಕೃತಿಯನ್ನು ಪ್ರಕಟಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ನನ್ನ ಹೃತ್ಪೂರ್ವಕ ವಂದನೆಗಳು.

೨೮–೦೪–೦೯

ಡಾ. ವರದಾ ಶ್ರೀನಿವಾಸ
ಬೆಂಗಳೂರು

# ತಪಸ್ಸಿನ ದಿನಗಳು

೧

# ಶ್ರೇಣ್ಯಾರೋಹ

ಭರತೇಶ್ವರನು ಷಟ್ಖಂಡದ ಧಾತ್ರೀಪಾಲರನ್ನೆಲ್ಲ ಗೆದ್ದು ಶತ್ರುಗಳೇ ಇಲ್ಲವೆಂಬಂತೆ ಮಿತ್ರಭಾವದಲ್ಲೇ ಭೂಮಿಯನ್ನು ಏಕಛತ್ರದಡಿಯಲ್ಲಿ ಆಳುತ್ತಿದ್ದನು. ಆ ಮಹಾ ಸುಕೃತಿಯು, ನೆರೆದ ಹೆಣ್ಣು ಗಂಡು ಮಕ್ಕಳ ಮದುವೆ ಮಾಡುತ್ತ, ಹಸುಳೆಗಳನ್ನು ಮುದ್ದಾಡುತ್ತ, ಗುಂಗುರು ಕೂದಲಿನ ಆಬಲೆಯರೊಂದಿಗೆ ಲೀಲೆಮಾಡುತ್ತ ಅಕ್ಕರೆಯಿಂದಿದ್ದನು. ದಿನಂಪ್ರತಿ ತೋರುವ ಹೊಸ ರೀತಿಯ ಒಸಗೆಯಾಟಪಾಟಗಳಲ್ಲಿ ಅಸಮ ಪುಣ್ಯದ ಫಲಪಾಕವನ್ನುಂಡು, ಆತ್ಮಸಾಕ್ಷಿಯಲ್ಲದನ್ನು ತೀರಿಸುತ್ತಿದ್ದನು.

ಹೀಗಿರುವಾಗ ತನ್ನ ಸೋದರ ಮಾವಂದಿರಾದ ಕಚ್ಛ ಮಹಾಕಚ್ಛ ಯೋಗಿಗಳು, ಕೈವಲ್ಯ ಬೋಧವನ್ನು ಪಡೆದ ಸುದ್ದಿಯು ಬಂತು. ಅದನ್ನು ಕೇಳಿ ಭೂವರನು ಸಂತಸಗೊಂಡನು.

''ಅನಂತವೀರ್ಯರಿಗೂ ಮಹಾಬೋಧ ಹುಟ್ಟಿತು'' ಎಂಬ ವಾರ್ತೆಯನ್ನು ಕೇಳಿ ಪಟ್ಟದರಸಿಯೂ ತಾಯಿಯೂ ನಲಿದರು. ಸಾರ್ವಭೌಮನೂ ಸಂತಸಗೊಂಡನು. ಈ ಒಸಗೆಯನ್ನು ತಂದವನಿಗೆ ಚಕ್ರಿಯು, ಉಡಲೂ ತೊಡಲೂ ವಸ್ತ್ರಾಭರಣಗಳನ್ನಿತ್ತನು. ಆರಮನೆಯೊಳಗೆಲ್ಲ ಉತ್ಸಾಹವು ಹಬ್ಬಿತು. ಭರತೇಶನ ಚಿತ್ತದಲ್ಲಿ ಶೋಭಿಸುವ ಧರ್ಮಾನುರಾಗವನ್ನು ಹೇಳಲು ಸಾಧ್ಯವೇ?

''ಭುಜಬಲ ಯೋಗೀಂದ್ರನು ಹೇಗಿರುವನು?''

''ಅವನು, ರಜತಗಿರಿಯನ್ನು ಬಿಟ್ಟು, ಗಜಕಾನನದಲ್ಲಿದ್ದನು. ಅವನ ತಪಸ್ಸಿನ ಹಿರಿಮೆಯನ್ನು ಲಾಲಿಸು. ದೀಕ್ಷೆ ಪಡೆದ ಮೇಲೆ ಒಮ್ಮೆಯಾದರೂ ಭಿಕ್ಷೆಗೆ ಹೋಗಿಲ್ಲ. ಅವನು ವೃಕ್ಷಗಳನ್ನೇ ಶೋಷಣಮಾಡುವಂಥ ಬಿಸಿಲಿನಲ್ಲಿ ಆತ್ಮೇಕ್ಷಣಯೋಗದ ಕ್ರಮದಲ್ಲಿ ನಿಂತನು. ಮುಚ್ಚಿದ ಕಣ್ಣು ಮುಚ್ಚಿದ ತುಟಿ, ಬಿಟ್ಟ ತೋಳು, ಕ್ರಮವಾದ ಉಸಿರು, ಈ ರೀತಿ ಅವನು ಸಚ್ಚಿದಾತ್ಮನನ್ನು ನೋಡುತ್ತಿದ್ದಾನೆ. ಲೋಕವೆಲ್ಲವು, ಆಶ್ಚರ್ಯದಿಂದ ಅವನನ್ನು ನೋಡುತ್ತಿದೆ. ಅಲ್ಲಿ ಹುತ್ತಗಳೆದ್ದುವು. ಬಳ್ಳಿ ಬೆಳೆದು ಮೈಯಲ್ಲಿ ಹಬ್ಬಿತು. ಹಾವುಗಳು ಅಂಗಾಂಗಗಳಲ್ಲಿ ಅತ್ತಿತ್ತ ಹರಿದಾಡಿದವು. ಆ ಯೋಗೀಂದ್ರನು ಯೋಗದ ಕಲ್ಲಿನ ಪುತ್ಥಳಿಯಂತೆ ಚಿತ್ತವನ್ನು ಕಂಪಿಸದೆ ನಿಂತಿರುವನು. ಅರುಹನೆ ಬಲ್ಲನು ಆ ತಪಸ್ಸಿನ ಬಲ್ಮೆಯನ್ನು.''

ಇದನ್ನು ಕೇಳಿದ ಭರತೇಶನು ಅಚ್ಚರಿಗೊಂಡನು. ''ಇಷ್ಟು ಉಗ್ರವಾದ ತಪಸ್ಸು ಏಕೆ? ಇದನ್ನು ಸ್ವಾಮಿಯೊಡನೆ ಕೇಳುವೆನು'' ಎಂದು ಭೋಂಕನೆ ಚಕ್ರಿಯು

ಹೊರಟುಬಿಟ್ಟನು. ಘನಮಾರ್ಗವನ್ನು ಹಿಡಿದು ಕೈಲಾಸಾದ್ರಿಗೆ ಬಂದು ಜನಕಗೆ ಪ್ರೀತಿಯಿಂದೆರಗಿದನು. ಕಚ್ಛ ಮಹಾಕಚ್ಛರಿಗೂ ಅನಂತ ವೀರ್ಯಾಚ್ಛ ಜನನಿಗೂ ಎರಗಿದನು. ಮನದಿಚ್ಛೆಯಂತೆ ಅಯ್ಯನನ್ನು ಮೊದಲು ಪೂಜಿಸಿ ಮತ್ತೆ ಮೂವರನ್ನೂ ಪೂಜಿಸಿದನು. ಅನಂತರ ಅವರನ್ನು ಸುತ್ತಿಸಿದನು.

''ಎಲೆ ಸರ್ವಜ್ಞ, ಭುಜಬಲಿ ಯತಿಗೆ ಇಷ್ಟು ಉಗ್ರವಾದ ತಪಸ್ಸು ಏಕೆ? ಅತಿ ಘೋರವಾದ ತಪಸ್ಸಾದರೂ ಮಹಾಬೋಧವೇಕೆ ಶೋಭಿತವಾಗಿಲ್ಲ?''

''ಎಲೆ ಭವ್ಯಾ, ತಪಸ್ಸು ಘೋರವಾದರೆ ಸಾಲದು; ಒಳಗಿನ ಕಷಾಯಗಳು ಉಪಶಮನವಾಗಬೇಕು. ಚಪಲವಾದ ಚಿತ್ತವನ್ನು ಆತ್ಮಕಲೆಯಲ್ಲಿ ಕೂಡಿಸಬೇಕು. ಕ್ರೋಧ, ಮಾನ, ಮಾಯೆ ಮತ್ತು ಲೋಭಗಳ ಬೋಧದಿಂದ ಒಳಗೊಳಗೆ ನೊಂದುಕೊಳ್ಳುವವರಿಗೆ ಮಹಾಬೋಧೆಯು ಹೇಗಾದೀತು? ಸುಚಿತ್ತದಲ್ಲಿ ಆತ್ಮಸಮಾಧಿಯಲ್ಲಿ ನಿಲ್ಲಬೇಕು. ಹೊರಗಿನ ಸರ್ವವನ್ನೂ ಬಿಡಬಹುದು; ಆದರೆ ಚಿತ್ತದಲ್ಲಿದ್ದ ಕಪ್ಪನ್ನು ಮಾತ್ರ ಬಿಡುವುದು ಕಷ್ಟ. ವಸ್ತ್ರವನ್ನು ಬಿಟ್ಟ ಮಾತ್ರಕ್ಕೆ ತಪಸ್ವಿಯಾಗುವನೆ? ಸರ್ಪವು ಹೆರೆಬಿಟ್ಟ ಮಾತ್ರದಿಂದ ವಿಷ ಹೋಗುವುದೆ? ಮನವನ್ನು ನಿರ್ಮಲಮಾಡಿದವನೆ ಸುಖಿಯು. ಅದು ಮುನಿಗಳಿಗೂ ಒಮ್ಮೊಮ್ಮೆಯಾದರೂ ದೊರೆಯದಿದ್ದರೂ ಇಷ್ಟು ರಾಜ್ಯಭಾರದೊಳಗಿದ್ದ ನಿನಗೆ ದೊರಕಿದೆ. ಆತ್ಮನ ಗುಣವು ಅದ್ಭುತವಾಗಿದೆ. ಉಮಿಯನ್ನು ತಳೆದಿರುವ ಅಕ್ಕಿಯನ್ನು ಥಳಿಸುವಂತೆ, ಎಲ್ಲರೂ ವಿಷಯಗಳನ್ನು ಕಳೆದುಕೊಂಡು ಆತ್ಮನನ್ನು ನೋಡುವರು. ವಿಷಯದೊಳಗಿದ್ದರೂ ನೀನು ಆತ್ಮನನ್ನು ಶುಚಿಯಾಗಿ ಮಾಡುವೆ. ಋಷಿಗಳಲ್ಲಿ ನೀನು ಅಧಿಕನಾಗಿರುವೆ. ಉಮಿಯನ್ನು ಮೊದಲು ತೆಗೆದು ಕೆಂಪಕ್ಕಿಯನ್ನು ಥಳಿಸುತ್ತಾರೆ. ಆದರೆ ಉಮಿಯಿದ್ದರೂ ಬಿಳಿ ಅಕ್ಕಿ, ಬಿಳುಪಾಗಿಯೇ ಇರುತ್ತದೆ. ಅಂತೆ, ಮೆಯ್ಯ ವಸ್ತ್ರವನ್ನು ಹಾಕಿಕೊಂಡೇ ಕೆಲವರು ಧ್ಯಾನಿಸುತ್ತಾರೆ. ನೀನು ಮೆಯ್ಯನ್ನು ಸಿಂಗರಿಸಿಕೊಂಡೇ ಧ್ಯಾನಿಸುವೆಯಲ್ಲ, ಕೆಲವರು ಅಂತರಂಗದ ಶುದ್ಧಿಗಾಗಿ ಬಾಹ್ಯದ ವಸ್ತುಗಳನ್ನೆಲ್ಲ ತೊರೆದುಬಿಡುವರು. ಕೆಲವರು ಬಾಹ್ಯ ವಸ್ತುಗಳಿದ್ದರೂ, ಅವಕ್ಕೆ ಹುಚ್ಚಾಗದೆ, ಅಂತರಂಗದಲ್ಲಿ ಶುದ್ಧರಾಗಿರುತ್ತಾರೆ. ಭೂಷಣದಲ್ಲಿದ್ದು, ಧ್ಯಾನಿಸಿ, ಮುಕ್ತಿಗೆ ಸಂದು ಭೂಷಣಸಿದ್ಧರೆಂಬವರಿದ್ದಾರೆ. ಕೆಲವರು ಭೂಷಣಗಳನ್ನು ತೊರೆದು ಧ್ಯಾನಿಸಿ, ಆತ್ಮ ಸಂತೋಷಿಗಳಾಗಿದ್ದಾರೆ. ಹೀಗೆ ಎರಡು ವಿಧಗಳಿವೆ. ನಾವೆಲ್ಲ ಬಾಹ್ಯವ ತೊರೆದು ಆತ್ಮಧ್ಯಾನದಿಂದ ಕೈವಲ್ಯ ಸಿದ್ಧಿ ಪಡೆದೆವು. ನೀನು ಬಾಹ್ಯದಲ್ಲಿ ಎಲ್ಲವೂ ತುಂಬಿದ್ದರೂ ಆತ್ಮಸುಖವನ್ನು ಪಡೆಯುವೆ, ನೀನು ಧನ್ಯನು. ಜಿನನೆಂದರೆ ಆಯಿತೆ? ತಾಪಸನೆಂದರೆ ಆಯಿತೆ? ಆದರಿಂದ ಆತ್ಮನ ರುಚಿಯೇ ಬೇರೆಯಾಗಿದೆ. ಯಾವಾಗಲೂ ಲೀಲೆಯಲ್ಲಿರುವ ಆತ್ಮಸಿದ್ಧಿವರ್ಧನನೆ, ನೀನಿದನ್ನು ನೋಡು'' ಎಂದು ಆದಿಜಿನನು ನುಡಿದನು.

''ದೇವರ ಕರುಣೆಯಿಂದ ಉಂಟಾದೊಂದು ಪ್ರಭಾವದಿಂದ ನನಗೆ ಲೀಲೆಯಲ್ಲೇ ಕೈವಲ್ಯವನ್ನು ಪಡೆಯಲು ಆಗದೇ? ಮಹಾಬಲಶಾಲಿಯಾದ ಯೋಗಿಯ

ಅಂತರಂಗದಲ್ಲಿರುವ ಪರಿಣತಿಯೇನು? ಚಿದಮಲೇಕ್ಷಣನಾಗಿಯೂ ಚಿತ್ಪ್ರಕಾಶಕನಾಗಿಯೂ ಇರುವ ದೇವರು ನನಗದನ್ನು ತಿಳಿಸಬೇಕು'' ಎಂದು ಭರತೇಶನು ಬೇಡಿಕೊಂಡನು.

''ಆ ಭುಜಬಲಿಯು ನಿನ್ನನ್ನು ಬೀಳ್ಕೊಂಡು ಬರುವಾಗ ಕ್ಷೋಭೆಯಲ್ಲದ ಮಾತನ್ನು ಕೇಳಿದನು. ಆದ್ದರಿಂದ ಅವನ ಚಿತ್ತದಲ್ಲಿ ಕ್ಷೋಭೆಯುಂಟಾಯಿತು. ಆದಕ್ಕಾಗಿ ಘೋರವಾದ ತಪೋಭಾರವನ್ನು ಧರಿಸಿದನು. ನಿನ್ನ ಗೆಳೆಯರಿಬ್ಬರು ''ನಮ್ಮರಸನ ರಾಜ್ಯದ ಅನ್ನಪಾನವ ಬಿಟ್ಟು ಬೇರೆಲ್ಲಿ ತಪಸ್ಸು ಮಾಡುವೆ? ಹೋಗು?'' ಎಂದರು. ಅದನ್ನು ಕೇಳಿ, ಭಿನ್ನ ಮಾನಸನಾದನು. ದೀಕ್ಷೆಯನ್ನು ಪಡೆದು, ಮೋಕ್ಷಮಾರ್ಗವನ್ನು ಕೇಳಿ, ಪಂಸೇಕ್ಷಣಕ್ಕಾಗಿ ಅಡವಿಗೆ ಹೋದನು. ''ಈ ಕ್ಷೇತ್ರವೂ ಚಕ್ರಿಯದಲ್ಲವೆ?'' ಎಂದು ಚಿತ್ತ ಕ್ಷೋಭೆಗೊಂಡನು. ''ಇವನ ಸೀಮೆಯಲ್ಲಿ ಅನ್ನಪಾನ ಕೈಕೊಳ್ಳುವೆನೆ? ಇಲ್ಲ, ವಿವಿಧ ಕರ್ಮವ ಸುಟ್ಟು ಬೇಗ ಶಿವವನ್ನು ಹೊಂದುವೆನು'', ಎಂದು ಗರ್ವದಿಂದ ನಿಂತನು. ಧ್ಯಾನ ಸಂಭವಿಸಲಿಲ್ಲ, ಪರ್ವತದ ಹಾಗೆ ನಿಂತರೇನು, ಒಳಗಿನ ಗರ್ವ ಹೋಗದವನು? ಆ ಮುನಿಗೀಗ, ನಿನ್ನ ಭೂಮಿಯನ್ನು ಮೆಟ್ಟಿರುವೆನೆಂಬ ನೋವಿನಿಂದಾಗಿ ಹಂಸ ತೋರುವುದಿಲ್ಲ, ಬದಲಿಗೆ ವ್ಯವಹಾರ ಧರ್ಮವೇ ತೋರುವುದು. ನಿಶ್ಚಯವಾದ ಧರ್ಮದ ಅವಲಂಬವು ಆತನಿಗೆ ತೋರದು. ಲವಮಾತ್ರವಾದರೂ ಕಷ್ಟಕಷಾಯವಿರುವವನಿಗೆ ಅದು ತೋರದಿರುವುದು ಸಹಜವಾಗಿದೆ. ಒಂದು ವರ್ಷದಿಂದ ಉಪವಾಸಾಗ್ನಿಯಿಂದ ಕಷಾಯದಲ್ಲಿ ನೊಂದನು. ಇಂದು ನೀನು ಹೋಗಿ ವಂದಿಸಿದರೆ ಅವನ ಆ ನೋವು ಬಿಡುವುದು. ಒಳ್ಳಿತಾಗಿ ಉತ್ತಮ ಧ್ಯಾನವುಂಟಾಗುವುದು. ಇಂದು ಘಾತಿಕರ್ಮಗಳು ಕೆಡುವುವು; ಆ ಮುನಿಗೆ ಸುಜ್ಞಾನಜ್ಯೋತಿ ಬಿಂಬಿಸುವುದು. ನೀನೀಗ ತೆರಳು''.

ಎಂದು ಪುರುದೇವರು ಹೇಳಿದಾಗ, ಭರತೇಶನು ಅವರ ಪಾದಗಳಿಗೆರಗಿ, ಅಲ್ಲಿಂದೆದ್ದು ಭುಜಬಲಿಯಿರುವ ತಪೋವನಕ್ಕೆ ನಡೆದನು.

ಘೋರ ವಿಪಿನದಲ್ಲಿ ತನ್ನ ಬಾಹುದಂಡವನ್ನು ಇಳಿಸಿಬಿಟ್ಟು ಕೆಂಡದಂಥ ಬಿಸಿಲಿನಲ್ಲಿ ನಿಂದಿರುವ ಮುನಿಯನ್ನು ಭರತೇಶನು ನೋಡಿ ಆಶ್ಚರ್ಯಪಟ್ಟನು. ಕಡುಬಿಸಿಲಿಗೆ ಹುತ್ತ ಬಿರಿದು ಬೀಳುತ್ತಿತ್ತು. ಖಚರಿಯರು ಬ್ರಾಹ್ಮಿ ಸೌಂದರಿಯರ ರೂಪವನ್ನು ಧರಿಸಿ, ಒಣಗಿದ ಬಳ್ಳಿಗಳನ್ನು ಬಿಡಿಸುತ್ತಿದ್ದರು. ಭರತೇಶನು ಬಂದವನೇ ಆ ಯೋಗೀಂದ್ರನ ಪಾದಪದ್ಮಗಳಲ್ಲಿ ತಲೆಯನ್ನಿಟ್ಟು ಸ್ತುತಿಗೈದನು.

''ಭುಜಬಲ ಯೋಗೀಶ್ವರಾಯ ನಮೋ ನಮೋ! ದಿವಿಜರಾತ್ಮನೇ ನಮೋಸ್ತು!'' ಎಂದು ಭುಜಬಲಿ ಯೋಗೀಂದ್ರನ ಇದಿರಲ್ಲಿ ನಿಂತು ಅವನನ್ನು ಕಾಡುತ್ತಿರುವ ದುಷ್ಟ ಕಷಾಯಗಳನ್ನು ಓಡಿಸುವ ಹಾಗೆ ಭಕ್ತಿಯಿಂದೊಲಿದು ಸವಿಮಾತುಗಳನ್ನಾಡಿದನು.

''ಗುರುವೆ, ಯೋಗೀಶ್ವರಾಯ, ನಿನ್ನ ಅಂತರಂಗದ ನೆಲೆಯನ್ನು ಪುರುನಾಥನಲ್ಲಿ ಕೇಳಿ ಬಂದಿರುವೆನು, ಮಹಾತ್ಮನೇ, ಈ ಧರೆಯನ್ನು ನನ್ನದೆಂದೇಕೆ ಭಾವಿಸುವುದು? ಈ

ಮೊದಲು ಸರ್ವರೂ ಅದನ್ನು ಹಿಡಿದು ಆಳಿರುವರಲ್ಲವೆ? ಮೊದಲು ಹಲವರು ಆಳಿರುವರು. ಇಂದು ನಾನು ಆಳುತ್ತಿರುವೆನು. ಮುಂದೆ ಪ್ರೀತಿಯಿಂದೆಷ್ಟು ಮಂದಿ ಆಳಲಿರುವರೊ! ವೇಶ್ಯೆಯಂತಿರುವ ಈ ಭೂಮಿಯನ್ನು, ಸುಬೋಧಾತ್ಮನಾದ ನೀನು ನನ್ನದೆಂದು ಯೋಚಿಸುವುದೇ? ನಿನ್ನಲ್ಲಿ ಮರೆಮಾಡುವುದಿಲ್ಲ, ಅಂದು ವೃಷಭಾದ್ರಿಯಲ್ಲಿ ನನ್ನ ಹೆಸರು ಬರೆಯಲು ಸ್ಥಳವಿಲ್ಲದಿರುವುದನ್ನು ನೋಡಿ, ಮೊದಲಿದ್ದ ಒಂದು ದುರುದುಂಬಿ ಲಿಪಿಯನ್ನು ಉಜ್ಜಿಸಿ, ನನ್ನ ಹೆಸರನ್ನು ಬರೆಸಿದೆನು. ಇಂಥ ಭೂಮಿಯನ್ನು ನೀನು ನನಗೆ ಹೊರಿಸುವುದೇ? ಈ ನೆಲದ ಹೆಚ್ಚೇನು? ಮಣ್ಣಲ್ಲವೆ? ಸ್ವರ್ಗದ ಉಜ್ವಲವಾದ ರತ್ನಮಯ ವಿಮಾನಗಳೂ ಕಲ್ಪತರುಗಳೂ ದೇವತೆಗಳಿಗೆ ಮಾಸಲಾಗಿವೆ. ಈ ಭೂತಳವನ್ನು ನೀನು ನನಗೆಂದೇ ಹೇಳಬಹುದೇ? ಗುರುವೆ ಹಾಗಲ್ಲ; ಕೇಳು. ನಮ್ಮ ದೇಹಗಳು ನಮ್ಮದಲ್ಲ, ಹಾಗಿರುವಾಗ ಉಳಿದವುಗಳನ್ನೇಕೆ ನಮ್ಮದೆಂದು ಹೇಳುವುದು?''

ಎಂದು ಹೇಳುತ್ತಿರುವಾಗಲೇ ಮುನಿಯ ಅಹಂಕಾರವು ಮೆಲ್ಲಮೆಲ್ಲನೆ ಇಳಿಯುತ್ತಿತ್ತು. ಭರತೇಶನು ಮತ್ತೆ ಮಾತು ಮುಂದುವರಿಸಿದನು.

''ನೀನು ಈ ಭೂಮಿಯನ್ನು ಹುಲ್ಲೆಂದು ಬಿಸಾಡಿ ಬಂದೆ. ನಾನಾದರೆ ಅದನ್ನು ಬಿಸುಡಲಾರದಾದೆ. ನೀನೀಗ ಗುರುವಾದೆ, ನಾನು ಲಘುವಾದೆ''.

ಎಂದಾಗ, ಅದನ್ನು ಕೇಳಿದೊಡನೆ ಮುನಿಯ ಮಾನವೆಲ್ಲ ಜಾರಿತು. ಝೊಂಪಿಸುತ್ತಿರುವ ಶಲ್ಯಭೂತವನ್ನು ಭರತೇಶನು ತನ್ನ ವಾಕ್ಯ ಮಂತ್ರದಿಂದ ಹೊರಡಿಸಿದನು ಆಗ ಮುನಿಯ ಚಿತ್ತ ತಂಪಾಯಿತು. ತಳಮಳವು ಜಾರಿತು. ಧ್ಯಾನಸಂಪತ್ತು ಫಲಿಸಿತು. ಅಂದು ತನಗೆ ನಮಿಸಿದ ತಮ್ಮನಿಗೆ ಚಕ್ರಿಯಿಂದು ಮುನಿಯೆಂದು ನಮಸ್ಕರಿಸಿದನು. ಮತ್ತೆ ಅವನು ಮುನಿಯಾಗಲು ಈತನಿಗೆ ಯಾವ ರೀತಿಯ ಕ್ಲೇಶವೂ ಇಲ್ಲದಾಯಿತು. ಭರತೇಶನೆಂದರೆ ರಾಜನೋ ರಾಜಯೋಗಿಯೋ ಹೇಳುವಂತಿಲ್ಲ.

ಅಂದು ಬಾಹುಬಲಿಯು ಮೈಯನ್ನು ಬತ್ತಲೆ ಮಾಡಿ, ಮನವನ್ನು ಕತ್ತಲೆಮಾಡಿ ಕೈಕೆಳಗಿಳಿಸಿ ನಿಂತುಬಿಟ್ಟನು. ಅವನ ಸಂಕಷ್ಟವನ್ನು ಕಂಡು ಚಕ್ರಿಯು ಅದನ್ನು ಬಿಡಿಸಿದನು ಎಂದಾಗ ಈ ಇಬ್ಬರಲ್ಲಿ ಸಂಯಮವು ಯಾರದ್ದೆಂದು ತಿಳಿವುದು? ಇವನು ಬಾಹ್ಯದಲ್ಲಿದ್ದರೇನಾಯಿತು? ಅವನು ಬಾಹ್ಯವನ್ನು ಬಿಟ್ಟು ಪಡೆದುದೇನು? ತಮ್ಮೊಳಗೆ ಬಾಹ್ಯರಾದವರು, ಹೊರಗೆ ಉಗ್ರತಪಸ್ಸು ಮಾಡಿದ್ದರಿಂದೇನಾಯಿತು? ಭಾವಿತ ಆತ್ಮನ ನುಡಿಗೇಳಿದಷ್ಟಕ್ಕೆ ಚಿತ್ತದ ಕೋಣೆಯ ಕತ್ತಲೆ ಹೋಯಿತು. ಆ ಯತಿಗೆ ದೀವಿಗೆ ಹೊತ್ತಿಸಿದಂತೆ ಆತ್ಮಸ್ವರೂಪವು ಪ್ರಭಾವಿಸುತ್ತಿತ್ತು.

ವ್ಯಗ್ರತೆಯು ಅಳಿದುಹೋಗಿ ಚಿತ್ತವು ಹಣೆಯಲ್ಲಿ ನಿಲ್ಲಲು ವಿಷಯ ಗ್ರಾಮವಾಯುಗಳು ಅಡಗಿದುವು. ವಿಗ್ರಹನಿಷ್ಕಂಪವು ಋಜುವಾಯಿತು. ಆಗ ಬಾಹುಬಲಿಯು ಬಾಹ್ಯ ಸಾಮಗ್ರಿಯಲ್ಲಿ ಸೇರಿಕೊಂಡು ನಿಂತನು. ಧರ್ಮ ಚಿಂತನೆಯಲ್ಲಿದ್ದು ಅದನ್ನು ತಿಳಿಯುತ್ತಿದ್ದು, ಶುದ್ಧಾತ್ಮನು ತಾನೆಂಬ, ತನ್ನಲ್ಲೇ ತಾನು ಸೇರಿಹೋಗುವ, ಸ್ವವಶಧರ್ಮಕ್ಕೆ ಮನಸ್ಸು ಮಾಡಿದನು. ಮೊದಲು ಸಿದ್ಧರನ್ನು

ಧ್ಯಾನಿಸಿದನು. ನಾನು ಸಿದ್ಧರ ಸಿದ್ಧವಾದ ಅಷ್ಟಗುಣಗಳನ್ನು ಕೂಡಿಕೊಂಡು, ನಾನು ಸಿದ್ಧರಂತಿರುವೆನೆಂದು ಒಳಗಿರುವ ನಿರಂಜನಸಿದ್ಧನನ್ನು ನೋಡಿದನು. ಒಳಗೆ ವಿರೋಧಿಯು ಬೆಳೆಯುತ್ತಿತ್ತು. ಅಲ್ಲಿಯೇ ಹಂಸಕಲೆಯೂ ಹೊಳೆಯುತ್ತ ಮಾಯವಾಗುತ್ತ ಮತ್ತೆ ಹೊಳೆಯುತ್ತ ಇತ್ತು. ಅದುವೆ ನಿಶ್ಚಯೋಜ್ವಲವಾದ ಧರ್ಮ. ದರ್ಶನ, ವ್ರತಿಕ, ತಾಪಸನ, ಪ್ರಮತ್ತನ ಎಂಬ ಶ್ರೇಷ್ಠವಾದ ನಾಲ್ಕು ಗುಣಸ್ಥಾನಗಳ ಧರ್ಮವು ದೊರೆಯುವುದು. ಆದರಿಂದ ಬಾಹುಬಲಿಯು ಕರ್ಮದ ನಿರ್ಜರೆ ಮಾಡುತ್ತಿದ್ದನು. ಭಾವಿಸುವಾಗ ಹೊಳೆಯವುದು, ಒಡನೇ ನಾಶವಾಗುವುದು, ಬೆಳ್ಳಗಾಗಿ ತೋರುವುದು, ಕೂಡಲೇ ಕಪ್ಪಾಗುವುದು. ಸಾವಿರ ಸಲ ಪ್ರಮತ್ತ ಮತ್ತು ಅಪ್ರಮತ್ತಗಳನ್ನೂ ಅಪರಾವೃತ್ತಿಯನ್ನೂ ಮಾಡಿದನು. ಸುಪ್ರಭೆಯು ಕಾಣುತ್ತಿರುವಾಗ ಅಪ್ರಮತ್ತನಾಗುವನು. ಒಡನೆ ಸುಪ್ರಭೆಯು ಮಾಸಿದಾಗ ಪ್ರಮತ್ತನಾಗುವನು. ವಿಪ್ರ ಸಿದ್ಧಾಂತ ಶಾಸ್ತ್ರದಲ್ಲಿ ಹೇಳಿದ ಅಪ್ರಮತ್ತನ ಮತ್ತು ವಿಪ್ರಮತ್ತನಗಳೆಂದರೆ ಇಷ್ಟೆ. ಅಪ್ರಮತ್ತಕನೆಂದು, ಅಪೂರ್ವನೆಂದು, ಅನಿವೃತ್ತನೆಂದು, ಮಹಾಮಾರ್ಗಕ್ಕೆ ಹೋಗುವುದು. ಬಾಹುಬಲದ ಕರಣತ್ರಯಗಳಿಂದ ಧರ್ಮಯೋಗವೆಂಬ ಭೂಮಿಯ ಸಿರಿಯು ಹೆಚ್ಚಿದಾಗ, ಬಾಹುಬಲಿಯು ಪ್ರಯಾಸಪಟ್ಟು ನಿಶ್ಚಯ ಧರ್ಮ ಯೋಗಾಯತನಾದನು. ಹಾಗಾಗಲು ಆಯಾಸವಿಲ್ಲದೆ ದೇವ ನಾರಕ ತಿರ್ಯಕ್ ಆಯುಷ್ಯಗಳು ಕೂಡಲೇ ತೀರಿಹೋದುವು. ಏಳು ಕರ್ಮಗಳೂ ಅಳಿದಾಗ ಮುನಿಪತಿಗೆ ಕಾಯಿಕ ಸಮ್ಯಕ್ತ್ವವುಂಟಾಯಿತು. ಭ್ರಮ್ಯಂಗದ ಏಳು ಪ್ರಕೃತಿಗಳೂ ಕೆಟ್ಟಾಗ ಆತ್ಮನಿಗೆ ಸಮ್ಯಕ್ ಈಶ್ವರನೆಂಬ ದೃಢತೆಯು ಗಮ್ಯವಾಗಿ ಹೊಂದಿಕೊಂಡು ನಿಂತಿತು. ಅದನ್ನು ಇಕ್ಷ್ವಾಕು ಸಮ್ಯಕ್ತ್ವವಾಯಿತು ಎನ್ನುವರು.

ಬಾಹುಬಲಿ ಯತಿಯು ಅಪ್ರಮತ್ತತೆಯನ್ನು ದಾಟಿದನು. ಅಪೂರ್ವವೆಂಬ ಎಂಟನೆಯ ಸ್ಥಾನದಲ್ಲಿ ನಿಂತನು. ಆ ಸ್ಥಳದಲ್ಲಿ ಪ್ರಥಮ ಶುಕ್ಲ ಧ್ಯಾನವು ವ್ಯವಹಾರವೆಂದೂ ನಿಶ್ಚಯವೆಂದೂ ಎರಡು ರೀತಿಯಲ್ಲಿವೆ. ವ್ಯವಹಾರ ಶುಕ್ಲಧ್ಯಾನದಿಂದ ದೇವತೆಗಳಾಗುತ್ತಾರೆ. ನಿಶ್ಚಯ ಶುಕ್ಲ ಧ್ಯಾನದಿಂದ ಮೋಕ್ಷಪದವಾಗುವುದು. ನಿಪುಣರಾದವರು ವ್ಯವಹಾರ ಶುಕ್ಲವನ್ನು ಉಪಶಮಶ್ರೇಣಿಗೇರಿಸಿ ಸುರರಾಗುತ್ತಾರೆ. ಕೆಲವರು ಕ್ಷಪಕಾಂತ ಶ್ರೇಣಿಯಲ್ಲಿ ನಿಶ್ಚಯ ಶುಕ್ಲಧ್ಯಾನದಿಂದ ಅಪವರ್ಗವನ್ನು ಪಡೆಯುವರು. ಶ್ರುತಿವಿಕಲ್ಪದಿಂದ ಹೆಚ್ಚಾಗಿ ಹಂಸನಲ್ಲಿ ತೋರುವ ಸಿತಕಾಂತಿಯೇ ವ್ಯವಹಾರ ಶುಕ್ಲವು. ಅದೇ ಚ್ಯುತವಾದ ವಿಕಲ್ಪದಲ್ಲಿ ಆತ್ಮಕಲೆಯು ಹೆಚ್ಚಿ ತೋರಿದರೆ ಅದು ನಿಶ್ಚಿತ ಶುಕ್ಲವು. ತಲೆಯಿಂದ ಕಾಲಿನವರೆಗೆ ಅಚ್ಚ ಬೆಳ್ದಿಂಗಳ ತಿಳಿಬೊಂಬೆಯಂತೆ ಆತ್ಮನು ಕಂಡು ಚಲಿಸುತ್ತಿದ್ದರೆ ಅದು ವ್ಯವಹಾರ ಶುಕ್ಲ. ನಿಶ್ಚಯವಾಗಿ ನೆಲೆಸಿದರೆ ಅದು ನಿಶ್ಚಯ ಶುಕ್ಲಯೋಗವು.

ಒಮ್ಮೆ ಬಾಹುಬಲಿಯು ವ್ಯವಹಾರ ಶುಕ್ಲಧ್ಯಾನದಲ್ಲಿ ಮೂರು ಕರಣಗಳನ್ನೂ ರಚಿಸಿದನು. ಕೂಡಲೇ ಕಾಂತಿಯು ಸ್ಫುರಿಸಿತು. ಹೃದಯದಲ್ಲಿ ನಿಶ್ಚಯ ಶುಕ್ಲಯೋಗವು

ಹೂಂಕರಿಸುತ್ತ ಎದ್ದಿತು. ಬಾಹುಬಲಿಗೆ ಮೊದಲಿನ ಮೂರು ಆಯುಷ್ಯಗಳೂ ಕೆಟ್ಟು ಹೋದುವು. ಆಮೇಲೆ ಮನುಷ್ಯ ಆಯುಷ್ಯವುಂಟಾಯಿತು. ಇದು ಹೊರಗೆ ಆದಂಥ ಏಳು ಕರ್ಮಗಳ ಸ್ಥಿತಿ. ಅವುಗಳ ಶಕ್ತಿಯು ನಿಮಿಷದಲ್ಲಿ ಸುಲಭವಾಯಿತು. ಬಾಹುಬಲಿಯು ಅನಿವೃತ್ತವೆಂಬ ಒಂಬತ್ತನೆಯ ಸ್ಥಾನದಲ್ಲಿ ನಿಂತು, ಮೂವತ್ತಾರು ಕರ್ಮಗಳನ್ನು ಒಂಬತ್ತುಸಲ ಒತ್ತಿ ಕಳೆದನು.

ಆತಪ, ಸೂಕ್ಷ್ಮ, ಸಾಧಾರಣ, ಸ್ಥಾವರ, ದ್ಯೋತ, ದುರ್ಗತಿ ಪಶುಗತಿಗಳನ್ನೂ ಸ್ತ್ಯಾನಗೃದ್ಧಿ ಪ್ರಚಲಾಪ್ರಚಲೆ, ನಿದ್ರಾನಿದ್ರೆ, ಮುಂತಾದ ಕರ್ಮಗಳನ್ನೆಲ್ಲ ಆ ಧ್ಯಾನಿಯು ಹದಿನಾರು ಕ್ಷಣದಲ್ಲಿ ಒಂದೇ ಬಾರಿ ನಾಶ ಮಾಡಿದನು. ಒಮ್ಮೆ ವ್ರತಕಷಾಯಗಳನ್ನೂ ನಿರ್ವೃತ ಕಷಾಯಗಳನ್ನೂ ನಾಶಮಾಡಿದನು. ಮತ್ತೊಮ್ಮೆ ಪುಂವೇದವನ್ನೂ ಮತ್ತು ಸ್ತ್ರೀವೇದದ ಅತುಳಕರ್ಮಗಳನ್ನೂ ತೊರೆದುಬಿಟ್ಟನು. ಪರಮಾತ್ಮಯೋಗ ಧಾರೆಯಲ್ಲಿ ನಿಂತ ಮುನಿಪತಿಯು ಆರತಿ, ಜುಗುಪ್ಸೆ, ಮಹಾಭೀತಿ, ರತಿ, ಶೋಕ ಪರಿಹಾಸವೆಂಬ ಆರನ್ನೂ ಒಮ್ಮೆಗೇ ಕಳೆದನು. ಪುರುಷ ವೇದವನ್ನೂ ಕೆಡಿಸಿದನು. ಒಮ್ಮೆ ಸುಗಮ ಸಂಜ್ವಲನದ ಮುನಿಸೂ, ಒಮ್ಮೆ ಇವುಗಳ ಹಮ್ಮೂ ಅಳಿದು ಹೋದುವು. ಮುಂದೆ ಲೋಭವೂ ಹೋಯಿತು. ಆಗ ಹೆಚ್ಚಾದ ಸೂಕ್ಷ್ಮದಲ್ಲವನು ನಿಂತನು. ಒಡನೆ ಬಾದರವನ್ನೊಳಗೊಂಡ ಮಾಯೆ ಜಾರಿಹೋಯಿತು.

ಆಮೇಲೆ ಬಾಹುಬಲಿ ಯೋಗಿಯು, ಗುರು ಸೂಕ್ಷ್ಮಸಾಂಪರಾಯಕವೆಂಬ ಹತ್ತನೆಯ ಗುಣ ಸ್ಥಾನದಲ್ಲಿರದೆ ಲೋಭವನ್ನು ಕೆಡಿಸಿದನು. ಆಮೇಲೆ ಮೋಹನೀಯ ಕರ್ಮದ ಇಪ್ಪತ್ತೆಂಟು ಪ್ರಕೃತಿಗಳೂ ನಾಶವಾದುವು. ಆ ಬಳಿಕ ಉಪಶಾಂತಿಯೆಂಬ ಹನ್ನೊಂದನೆಯ ಎಡೆಯನ್ನು ಹೊಂದದೆ, ದಾಟಿ ಮುಂದಕ್ಕೆ ಹೋದನು. ಮುಂದೆ ಹನ್ನೆರಡನೆಯ ಶೋಭಿಪ ಸ್ಥಾನದಲ್ಲಿ ಕರ್ಮತತಿಯನ್ನು ಕ್ಷಪಿಸಲು ಪ್ರಯತ್ನಿಸಿದನು. ಕ್ಷೀಣಕಷಾಯವೆಂಬಲ್ಲಿ ದ್ವಿತೀಯ ಶುಕ್ಲಧ್ಯಾನದ ಪ್ರಜ್ಞೆ ಬಂತು. ಅವನು ನಿದ್ರೆಯನ್ನೂ ಪ್ರಚಲೆಯನ್ನೂ ಮಾಡದೆ ಒಂದೇ ಬಾರಿ, ಅವುಗಳನ್ನೂ ಖಂಡಿಸಿದನು. ನಾಲ್ಕು ದರುಶನಾವರಣಗಳೂ ಐದು ಅಂತರಾಯಗಳೂ ಐದು ಜ್ಞಾನಾವರಣಗಳೂ ನಾಶವಾಗಿ ಘಾತಿಕರ್ಮಗಳೆಲ್ಲ ಸರಿದು ಹೋಗಲು ಆ ಮುನಿಯು ಜಿನನಾದನು.

ಸ್ವೇದ, ಹಸಿವು, ತೃಷೆ, ಮುಂತಾದ ಹದಿನೆಂಟು ದೋಷಗಳೂ ಅಳಿದುವು. ದ್ವಾದಶವಳಿದ ಮೇಲೆ ಬಾಹುಬಲಿಯು ಸಂಯೋಗಿಯೆಂಬ ಹದಿಮೂರನೆ ಸ್ಥಾನವನ್ನು ಪಡೆದನು. ಆಗ ಗಾಳಿಯಂತೆ ಏಳುವ ಮನಸ್ಸು, ಶರೀರವನ್ನು ಸೋಂಕದಿರುವ ಆತ್ಮನಲ್ಲಿ ಐಕ್ಯವಾಯಿತು. ಚಾರಿತ್ಯ ಮೋಹನಾಶದಿಂದ ಯಥಾಖ್ಯಾತ ಚಾರಿತ್ರವುಂಟಾಯಿತು. ಮೋಹವೆಂಬ ತಮವು ನಾಶವಾಗಲು ಪ್ರಭೆಯುಂಟಾಯಿತು. ಶ್ರೀಹಂಸ ನಿಶ್ಚಯ ವಾಯಿತು. ಆ ಹಂಸನಲ್ಲೆ ಚಿತ್ತವನ್ನು ನಿಲ್ಲಿಸಿದರೆ, ಅದನ್ನು ಸುಖವೆಂದು ಕೆಲವರು ಹೇಳುತ್ತಾರೆ. ಆವರಣಗಳೆರಡೂ ಅಳಿದಾಗ ಮಹಾಬೋಧದ ಮಹಾದರ್ಶನವಾಯಿತು. ಅಂತರಾಯದ ನಾಶದಿಂದ ಶಕ್ತಿಕೈವಲ್ಯ ಸುಖಗಳು ಫಲಿಸಿದುವು. ಅರವತ್ತ ಮೂರು

ಕರ್ಮಾವಳಿ ಕೆಟ್ಟಾಗ ಶಾಂತಿಯು ಹೊರಹೊಮ್ಮಿ ಅದ್ಭುತವಾಯಿತು! ಕವಿದ ಮೋಡಗಳು ಸರಿದು ಹೋದಾಗ ತೋರುವ ಸೂರ್ಯ ಮಂಡಲದಂತೆ ಆ ಜಿನನ ಆತ್ಮನಲ್ಲಿ ಸುಜ್ಞಾನವು ಮೆರೆದುದು. ಅವನು ಲೋಕದ ಒಳಗನ್ನೂ ಹೊರಗನ್ನೂ ಕಾಣುತ್ತಿರುವನು. ಅದರಿಂದ ಲೋಕವನ್ನುದ್ಧರಿಸುವ ಶಕ್ತಿ ಅವನಿಗುಂಟಾಯಿತು. ಶ್ರೇಷ್ಠವಾದ ಆತ್ಮಸುಖವು ಲಭಿಸಿತು. ನವ ವಿಧ ಲಬ್ಧಿಗಳು ಬಂದುಕೂಡಿದುವು. ನೆಟ್ಟಂತೆ ನಿಂತು ಧ್ಯಾನಿಸುತ್ತಿದ್ದ ಆ ಸ್ವಾಮಿಯು ಬಹುಕರ್ಮಗಳು ಕೆಟ್ಟುಹೋಗಿ, ಆತ್ಮ ಸಿದ್ಧಿಯು ಸಂಗಡಿಸಿದಾಗ, ಬೆಟ್ಟಗಳು ಹಾರುವಂತೆ ಮೈತುಂಬಿ ಆಕಾಶಕ್ಕೆ ನೆಗೆದು ನಿಂತನು. ಆಗ ಎಲ್ಲ ದಿಕ್ಕುಗಳಿಂದಲೂ ನರರೂ ಸುರರೂ ಉರಗರೂ ಜಯ ಜಯವೆಂದು ಹೇಳುತ್ತ ಬಂದರು. ಆ ಜಿನನಿಗಾಗಿ ಉತ್ತರ ದಿಕ್ಕಿನ ಅರಸನಾದ ಕುಬೇರನು ಕೂಡಲೇ ಗಂಧಕುಟಿಯನ್ನು ನಿರ್ಮಿಸಿದನು. ಆಕಾಶದಲ್ಲಿರುವ ಆ ಗಂಧಕುಟಿಯ ಮಧ್ಯದಲ್ಲಿರುವ ತಾವರೆಯ ಮೇಲೆ ನಾಲ್ಕು ಬೆರಳಷ್ಟು ಬಿಟ್ಟು ಅದನ್ನು ಮುಟ್ಟದೆ ಸುಯೋಗಿಯಾದ ಭುಜಬಲೀಶ್ವರನು ಒಪ್ಪಿದನು.

ಇದನ್ನು ನೋಡಿ ಭರತರಾಜೇಂದ್ರನು ಆನಂದಪಟ್ಟನು. ಮನೋಹರನಾಗಿ ಆ ಜಿನನನ್ನೂ, ಪೂಜಿಸಿ ಕೀರ್ತಿಸಿದನು. ಅವನಿಗೆ ಸಾಷ್ಟಾಂಗವೆರಗಿ, ಎದ್ದು ನೋಡಿ, ತಲೆದೂಗಿ ಹೊಗಳಿದನು.

''ಸ್ವಾಮಿ, ನನ್ನಿಂದ ಉಪಸರ್ಗವಾದುದೆ?'' ಭೂಮಿಾಶನು ಮತ್ತೆ ಕೇಳಿದನು. ''ಎಲೆ, ಭವ್ಯ ಆ ಮಾತು ಬೇಡ. ದುಷ್ಕರ್ಮಾವಳಿ ನೇಮಿಸಿತು'' ಎಂದು ಬಾಹುಬಲಿ ಸ್ವಾಮಿ ತಿಳಿಸಿದನು. ಮತ್ತು ಆ ಮಾತನ್ನು ಸ್ವಾಮಿ ಮುಂದುವರಿಸಿದನು.

''ನಮ್ಮ ಪಾಪವು ನಿನ್ನೊಡನೆ ಹೋರಿಸಿತು. ಆ ರೀತಿಯಲ್ಲಿ ನಮ್ಮಿಂದ ತಪಸ್ಸು ಮಾಡಿಸಿತು. ನಮ್ಮ ಪುಣ್ಯವೂ ನಿನ್ನನ್ನಿಲ್ಲಿಗೆ ತಂದು ಒಪ್ಪನ್ನು ಮಾಡಿತು. ನಮಗೆ ನಿಮ್ಮಿಂದಲೇ ಸುಖವಾಯಿತು. ದುರಿತದಲ್ಲಿ ದುಃಖವೂ ಪುಣ್ಯದಿಂದ ಸುಖವೂ ಬರುತ್ತದೆ. ಅದರ ನೆಲೆಯನ್ನು ತಿಳಿಯದೆ ಮಾನವರು ಪರರು ಮಾಡಿದರೆಂದು ಹೇಳುತ್ತಾರೆ. ಆ ಸುಖದುಃಖಗಳನ್ನು ಸರಿಯಾಗಿ ಕಂಡುಕೊಂಡರೆ ಆತ್ಮಶುದ್ಧಿಯಾಗುತ್ತದೆ. ಈ ದೇಹವನ್ನು ಹೊಂದಿಕೊಂಡು ಆಗುವ ಸುಖದುಃಖಗಳೇನು? ಅವು ಕನಸು ಕಂಡಂತೆ ಮಾಸಿ ಹೋಗುತ್ತವೆ. ವಿನುತವಾದ ಆತ್ಮ ಸುಖವೊಂದೇ ನಿತ್ಯವು. ಆ ಸುಖವಾರಿಧಿಯ ಮುಂದೆ ದೇವತೆಗಳ ಸುಖವೆಂಬುದೊಂದು ಬಿಂದುವಿಗೆ ಸಮಾನ. ನಮ್ಮದು ಕಠಿಣವಾದ ಕರ್ಮಗಳಾದುದರಿಂದ ತಪಸ್ಸಿನಲ್ಲಿ ಈ ಜಠರವನ್ನು ಬಿಟ್ಟು ಜಾರಿ ಹೋದುವು. ನೀನಾದರೋ ಸುಟಿವಂತನು. ನಿನ್ನ ಕರ್ಮಗಳೆಲ್ಲವೂ ಮೃದುವಾದವುಗಳು. ಭೋಗ ಮಠದಲ್ಲಿರುವಾಗಲೇ ಫಕ್ಕನೆ ತೊಲಗಿ ಹೋಗುವುವು. ಈ ರೀತಿಯಲ್ಲಿ ಮುಕ್ತಿ ಪಡೆಯುವ ಪ್ರಾಪ್ತಿಯು ನಮಗೆ, ಆ ಪರಿಯಲ್ಲಿ ಸುಖಿಯಾಗಿರುವ ಪ್ರಾಪ್ತಿಯು ನಿನಗೆ. ನಮ್ಮನ್ನು ಹೊದ್ದಿರುವ ಕರ್ಮಲೇಪವು ಅಳಿದುಹೋದಾಗ ಸರ್ವರೂ ಸರಿಸಮಾನರು.

ಕ್ಷಣಬಿಟ್ಟು ಆ ಪರಮಾತ್ಮನು ಮತ್ತೆ ನಿರೂಪಿಸಿದನು.

''ಎಲೆ ಭವ್ಯ, ನಾವೀಗ ರಜತಶೈಲಕ್ಕೆ ಗಮಿಸಬೇಕಾಗಿದೆ. ನೀನು ನಿನ್ನ ಪುರಕ್ಕೆ

ಹೋಗು'' ಎಂದು ಹೇಳಿದೊಡನೆ ವಿಜಿತನಾದ ಭರತೇಶನು ಸ್ವಾಮಿಗೆ ಒಲಿದು ಎರಗಿ, ಅವನಿಂದ ಬೀಳ್ಕೊಂಡನು. ಆ ಜಿನನು ಸುರರ ಸಮೂಹದೊಂದಿಗೆ ಓಜಸ್ಸಿನಿಂದ ಮೇಲೇರಿದನು. ''ಜಯ ಜಯ ಸರ್ವಜ್ಞ'' ಎಂಬ ಸಂಭ್ರಮದಿಂದ ಸ್ವಾಮಿಯ ಗಂಧಕುಟಿಯು ಅತ್ತ ತೆರಳಿತು. ನಿಯಮಿತ ಜನರೊಂದಿಗೆ ಚಕ್ರಿಯು ಇತ್ತ ಕೌಶಲಿಗೆ ಹೊರಟನು. ಭುಜಬಲಿಯ ಧ್ಯಾನ ಸಾಮರ್ಥ್ಯಕ್ಕೆ ಅವನ ಕರ್ಮ ನಾಶವಾದುದಕ್ಕೆ, ಅವನಲ್ಲಿ ಸುಜ್ಞಾನವೂ ತುಂಬಿ ಬಂದುದಕ್ಕೆ, ಚಕ್ರೇಶನು ಆನಂದಪಡುತ್ತ ವಿಮಾನವನ್ನೇರಿ ಆಕಾಶ ಮಾರ್ಗದಲ್ಲಿ ಸಾಗುತ್ತಿದ್ದನು. ಇದು ಆ ಜಿನನಿಗಾದ ಸಿರಿಯಲ್ಲ; ತನಗೇ ಜನಿಸಿದ ಜನಪದವೆಂಬ ಲೀಲೆಯಲ್ಲಿ ಪುಳಕಗೊಳ್ಳುತ್ತ ಪಟ್ಟಣವನ್ನು ಸೇರಿ, ಅರಮನೆಯನ್ನು ಪ್ರವೇಶಿಸಿದನು. ಕೂಡಲೇ ಅವನನ್ನು ಸಂಭ್ರಮದಿಂದ ಇದಿರುಗೊಂಡ ಎಲ್ಲರಿಗೂ ತಾನು ತಾರಾದ್ರಿಗೆ ಹೋದಲ್ಲಿಂದ ಆದ ಎಲ್ಲ ವಿಚಾರಗಳನ್ನು ಎಲ್ಲರಿಗೂ ತಿಳಿಸಿ ತನ್ನ ಆನಂದದಲ್ಲಿ ಅವರೂ ಆನಂದ ಪಡುವಂತೆ ಮಾಡಿ ಭರತಚಕ್ರವರ್ತಿಯು ಸುಖವಾಗಿದ್ದನು.

೨

# ಸ್ವಯಂವರ

ಭುಜಬಲಿ ಸ್ವಾಮಿಗೆ, ಅನಂತವೀರ್ಯ ಸ್ವಾಮಿಗೆ, ಕಚ್ಛನಾಥರಿಗೆ ಪ್ರಚಿತ ಮಹಿಮೆಯಾಗಲು ಭರತ ಚಕ್ರವರ್ತಿಯು ಅದನ್ನು ಮೆಚ್ಚುತ್ತ ಅಯೋಧ್ಯೆಯಲ್ಲಿ ಸುಖವಾಗಿದ್ದನು. ಮಹಾಬಲ ರಾಜನಿಗೂ ಸುಬಲ ರಾಜನಿಗೂ ಮದುವೆಮಾಡಿಸಿ, ತಂದೆ ಹೋದ ಅಳಲನ್ನು ಅವನು ಹಿಂಗಿಸಿದನು. ಹೆಣ್ಣು ಮಕ್ಕಳನ್ನೂ ಅಳಿಯಂದಿರನ್ನೂ ಅರಮನೆಗೆ ಕರೆಸಿಕೊಂಡು, ಅವರನ್ನು ಪ್ರೀತಿಸಿ, ಬಲುವಾಗಿ ಸಿರಿಸಂಪತ್ತನ್ನು ಕೊಟ್ಟು ಬೀಳ್ಕೊಡುತ್ತಿದ್ದನು. ಈ ರೀತಿಯಲ್ಲಿ ವಿಲಾಸದಿಂದ ಕಾಲಕಳೆಯುತ್ತಿದ್ದನು.

ಜನಕನು ಈ ರೀತಿಯಲ್ಲಿ ಪುರದಲ್ಲಿರುವಾಗ ಯುವರಾಜನು ತನ್ನ ತಮ್ಮನೊಬ್ಬನನ್ನು ಕೂಡಿಕೊಂಡು, ಪಿತನ ಅನುಮತಿಯಿಂದ ಲೀಲಾರ್ಥವಾಗಿ ರಾಜ್ಯ ರಂಜನೆಯನ್ನು ನೋಡತೊಡಗಿದನು. ಅತಿ ದೂರವಲ್ಲದ ಆರ್ಯ ಖಂಡದೊಳಗಿರುವ ಪ್ರಸಿದ್ಧವಾದ ಪುರಗಳನ್ನು ಚತುರರಾದ ಆ ಕುಮಾರರು ಈಕ್ಷಿಸುತ್ತ ರಾಜರಿಂದ ಪೂಜೆಗೊಳ್ಳುತ್ತ ಹೋಗುತ್ತಿದ್ದರು.

ಕೆಲವು ದೇಶಗಳನ್ನು ನೋಡುತ್ತ ಹೋಗುತ್ತಿರುವಾಗ ಕರ್ನಾಟಕ ದೇಶದ ರಾಜನು ಬಂದು ತನ್ನ ನಗರಕ್ಕೆ ಕರೆದೊಯ್ದನು. ಅವನಾದರೂ, ಸೋದರಮಾವನ ಅಳಿಯನನ್ನು ಕರೆದೊಯ್ಯದೆ ಇರುವನೇ? ಕುಂತಲಾವತಿಯ ಅಣ್ಣನಾದ ಭಾನುರಾಜನು ಭಾಗ್ಯವಂತನು. ಅದ್ದರಿಂದಲೇ ಅರ್ಕಕೀರ್ತಿ ಆದಿರಾಜರನ್ನು ಕಿಷ್ಕಿಂಧಾಪುರಕ್ಕೆ ಕರೆದೊಯ್ದು ಅನಂತ ವೈಭವಗಳನ್ನು ಮಾಡಿದನು. ಅಂದು ಕಿಷ್ಕಿಂಧಾಪುರವೆಂಬುದು ಇಂದಿನ ಕಲಿಯುಗದಲ್ಲಿ ಆನೆಗೊಂದಿಯೆಂದಾಗಿದೆ. ಭಾನುರಾಜನು ಮಾಡಿದ ನೋಂಪುಗಳೆಲ್ಲ ಫಲಿಸಿದುವೆನ್ನಬೇಕು. ಅವನು ತನ್ನ ಪುತ್ರಿಯರಾದ ಭಾನುಮತಿಯನ್ನು ಅರ್ಕಕೀರ್ತಿ ರಾಜನಿಗೂ ವಸಂತಾಸಿಯನ್ನು ಆದಿರಾಜನಿಗೂ ಕೊಟ್ಟು ಮದುವೆಮಾಡಿಸಿದನು. ಅನಂತರ ಆ ರಾಜಕುಮಾರರಿಬ್ಬರೂ ಮುಂದೆ ಸಾಗಿದರು.

ಕುಸುಮಾಜಿಯ ಅಣ್ಣನಾದ ವೀರವಿಮಲರಾಜನು ಈ ವಾರ್ತೆಯನ್ನು ಕೇಳಿ, ರಾಜಕುಮಾರರಿರುವಲ್ಲಿಗೆ ಬಂದು ಅವರನ್ನು ಸೌರಾಷ್ಟ್ರದೇಶದ ಗಿರಿನಗರಕ್ಕೆ ಕರೆತಂದು ಭೂರಿ ಸತ್ಕಾರವೆಸಗಿದನು. ತನ್ನ ಪುತ್ರಿಯಾದ ವಿಮಲಾಜಿಯನ್ನು ಅರ್ಕಕೀರ್ತಿಗೂ, ತನ್ನ ತಮ್ಮ ಕಮಲರಾಜನ ಪುತ್ರಿ ಕಮಲಾಜಿಯನ್ನು ಆದಿರಾಜನಿಗೂ ಕೊಟ್ಟು ಮದುವೆಮಾಡಿದನು.

ಅವರು ಅಲ್ಲಿಂದೆದ್ದು ಕೆಲವು ದೇಶಗಳಲ್ಲಿ ಅರ್ಚಿಪಡುತ್ತ ಕಾಶಿ ದೇಶವನ್ನು ಹೊಕ್ಕರು. ಅವರು ಅಡಿಯಿಡುವಾಗಲೇ ಅವರಿಗೊಂದು ಹೊಸ ಸುದ್ದಿಯು ಸಿಕ್ಕಿತು.

ವಾರಣಾಸಿಯನ್ನಾಳುತ್ತಿರುವ ಅಕಂಪರಾಜನ ಸುಕುಮಾರಿ ಸುಲೋಚನಾದೇವಿಯು ಎಲ್ಲರ ಕಣ್ಣನ್ನೂ ಕುಕ್ಕುವಂಥ ಹೆಣ್ಣಾಗಿದ್ದಳು. ಅವಳ ಸ್ವಯಂವರವು ಪ್ರಾರಂಭವಾಗಿದೆಯೆಂದು ಹೇಳುತ್ತಿದ್ದರು. ಅಲ್ಲಿ ಯಾರನ್ನು ನೋಡಿ, ಸುಲೋಚನಾದೇವಿಯು ಮಾಲೆಯನ್ನು ಹಾಕುತ್ತಾಳೋ ಆ ವರನಿಗೆ ಅವಳನ್ನಿತ್ತುಮದುವೆ ಮಾಡುವೆನೆಂದು ಕಾಶಿರಾಜನು ನಾಡಿನ ಅರಸುಗಳಿಗೆ ಓಲೆಯನ್ನು ಕಳುಹಿಸಿದ್ದನು. ಅದರಂತೆ ಅರಸುಗಳೆಲ್ಲರು ಅಲ್ಲಿ ಕೂಡಿದ್ದರು. ಹೆಣ್ಣೆಂಬ ವಾರ್ತೆಯನ್ನು ಕೇಳಿ ಕಾಮುಕರ ಎದೆಯು ಹಣ್ಣಾಗಿ ಬಾಕುಳಿಗೊಂಡು, ಹಣ್ಣುಳ್ಳ ಮರಕ್ಕೆ ಹಕ್ಕಿಗಳು ಓಡಿಬರುವಂತೆ ಬಂದಿದ್ದರು. ಅಂಬುಜವಿದ್ದ ತಾಣಕ್ಕೆ ದಿಕ್ಕು ದಿಕ್ಕುಗಳಿಂದ ತುಂಬಿಗಳು ಓಡಿಬರುವಂತೆ ಅಂಬುಜಮುಖಿಯಿದ್ದ ಆ ಪುರಕ್ಕೆ ರಾಜರು ಬಂದು ತುಂಬಿದ್ದರೆಂದು ಹೇಳುತ್ತಿದ್ದರು.

ಬೀಡು, ಊಟ, ಮೋಹ, ಉಡುಗೊರೆಗಳಿಂದಲೂ ನಾಟ್ಯಕ್ರೀಡೆಗಳಿಂದಲೂ ಎಲ್ಲರಿಗೂ ಸಂತೋಷವನ್ನುಂಟು ಮಾಡಿದ ಅಕಂಪರಾಜನಿಗೆ ಸರಿಸಮಾನರಿಲ್ಲವೆಂದು ಅಲ್ಲಿನ ಜನರಾಡಿಕೊಳ್ಳುತ್ತಿದ್ದರು. ಸ್ವಯಂವರ ಮಂಟಪವು ಸೊಗಸಾಗಿದೆ. ಆ ನಗರವೂ ಸಿಂಗರವಾಗಿದೆ. ನಾಳೆಯೋ ನಾಡಿದೋ ರಾಜಕುಮಾರಿ ತಾನೊಲಿದ ರಾಜಕುಮಾರನ ಕೊರಳಲ್ಲಿ ಮಾಲೆ ಹಾಕುವಳು — ಎಂದು ಮುಂತಾಗಿ ಅಲ್ಲಿ ಆಡಿಕೊಳ್ಳುತ್ತಿದ್ದರು.

ಆ ಸುದ್ದಿಯನ್ನು ಕೇಳಿ ಅರ್ಕಕೀರ್ತಿ ಆದಿರಾಜರು ಏಕಾಂತದಲ್ಲಿ ಯೋಜನೆ ಮಾಡಿದರು. ಎಷ್ಟೆಂದರೂ ಅವರು ಭರತೇಶನ ಸುಕುಮಾರರಲ್ಲವೆ?

''ಆದಿರಾಜ, ನಾವು ವಾರಣಾಸಿಗೆ ಹೋದರೆ ಒಳ್ಳಿತೇನಣ್ಣ?''

''ಹೋದರೇನಂತೆ? ನಮ್ಮ ಬಂಟರ ಪುರಕ್ಕೆ ನಾವು ಹೋಗಲು ಕೊರತೆಯೇನಣ್ಣ?''

''ಅವನ ಮಗಳಿಗೆ ಆಸೆಪಟ್ಟು ಓಲೆಯನ್ನು ಹಿಡಿದುಕೊಂಡು ಬಂದವರಂತೆ ನಾವು ಬಂದೆವೆಂದಾಗುವುದು.''

''ಅವನಿಯನ್ನು ನೋಡಲು ಅಪ್ಪಾಜಿಗೆ ಹೇಳಿಬಂದಿರುವ ಈ ವಿಲಾಸವನ್ನು ಲೋಕವೇ ತಿಳಿದಿರುವುದಿಲ್ಲ, ಇದೇ ನಾವು ಹೋಗುವ ದಾರಿ. ನಾವಿನ್ನು ಓರೆಯಾಗಿ ಸಾಗಿದರೆ ಅದು ಗಂಭೀರವಲ್ಲ. ಮದದಾನೆಗಳು ದಾರಿ ಹಿಡಿದು ಸಾಗುತ್ತವಲ್ಲದೆ ಬೇರೆ ದಾರಿಯಿಂದ ಮುಂದು ಸಾಗುತ್ತವೆಯೆ?''

''ಅವರು ನಮ್ಮನ್ನು ಕಂಡಮೇಲೆ ಬಿಡುವಂತಿಲ್ಲ, ಬೇಡಿಕೊಂಡು ತಡೆಯುವರು. ನಿಂತರೆ, ನಮ್ಮನ್ನು ಸ್ವಯಂವರದ ಮಂಟಪಕ್ಕೆ ಕರೆದು ಕೊಂಡು ಹೋದರೆ ಹೇಗೆ?''

''ಕ್ಷೀಣರಾದವರು ಸ್ವಯಂವರ ಶಾಲೆಗೆ ಹೋಗುತ್ತಾರಲ್ಲದೆ ಜಾಣರಾದವರು ಹೋಗುತ್ತಾರೆಯೇ? ಹೋದರೆ ರಾಜಕುಮಾರಿಯು ಒಬ್ಬರಿಗೆ ಮಾಲೆ ಹಾಕುತ್ತಾಳೆ. ಆಗ ಎಲ್ಲರೂ ನ್ಯೂನತೆಯರಿತು ಜಾರುವರು. ಹೆಣ್ಣಿಗಾಗಿ ಬಂದವರು, ಅವಳೊಬ್ಬನಿಗೆ ಮಾಲೆಯನ್ನು ಹಾಕಿದಾಗ, ತಮ್ಮ ಲಜ್ಜೆಯನ್ನು ಮಾರಿ ಜಾರಿದರೆ ಅದು ಬಯಕೆಯೆ? ಒಂದು ಹೆಣ್ಣಿಗೆ ಸರ್ವರೂ ಆಸೆ ಪಡುವುದು ಚಂದವೆ? ಅವಳೊಬ್ಬ ರಾಜನಿಗೆ ಮಾಲೆಯನ್ನು ಸಂಧಿಸಿದಾಗ, ತಾವೆಲ್ಲ ಶೋಭನವೆಂದು ಹಾಡುವುದು ಭಂಡತನವಲ್ಲವೆ? ಆದ್ದರಿಂದ ನಾವಲ್ಲಿಗೆ ಹೋಗಬಾರದು, ನಮ್ಮ ಮಂದಿರದಲ್ಲೇ ಇರುವುದೊಳಿತು.''

''ಅದು ಸರಿಯಾದ ಕಾರ್ಯವಾದೀತು. ಆದರೆ ಅವರು ನಮ್ಮ ಕಾಲುಗಳಿಗೆರಗಿ ಕಾಡಿದರೇನು ಮಾಡುವುದು?''

''ಬರಲಾರೆವೆಂದರೆ ಅಕಂಪರಾಜನಿಗೆ ನೋವಾದೀತು. ಮತ್ತೆ ಉಳಿದ ರಾಜರಿಗೂ ಸಿಗ್ಗು ಆದೀತು. ಆದ್ದರಿಂದ ಅವನು ಕರೆದಾಗ ದೇವರೇನು ಮಾಡಬೇಕೆಂಬುದನ್ನು ಬಿನ್ನೈಸುತ್ತಾನೆ. ಹಲವರಿಗೆ ಓಲೆ ಕಳುಹಿಸಿದಂತೆ ಓಲೆ ಕಳುಹಿಸಿಲ್ಲವೆಂದು ಹೇಳಿ, ಅವನನ್ನು ಹಿಂದೆ ಕಳುಹಿಸು. ನಾವು ಬಿಡಾರದಲ್ಲೇ ಇರುವ; ಅವರು ತಮ್ಮ ಮನಸ್ಸಿನಂತೆ ಮಾಡಲಿ.''

''ಭಲರೆ, ನನ್ನೆದೆಯೊಳಿದ್ದುದನ್ನೇ ನೀನು ತಿಳಿದಂತೆ ಹೇಳಿದೆ. ಅಂತೆ ಆಗಲಿ.''

ಈ ರೀತಿಯಲ್ಲಿ ಆ ಅಣ್ಣತಮ್ಮಂದಿರು ತಮ್ಮೊಳಗೆ ನಿರ್ಣಯಿಸಿ ಹೊರಗಿನವರಿಗೆ ತಿಳಿಯದಂತಿದ್ದರು.

ಇತ್ತ ಯುವರಾಜನು ಬರುತ್ತಿರುವನೆಂಬ ಸುದ್ದಿ ಹುಟ್ಟಿದಾಗ ಕಾಶಿರಾಜನು, ತನ್ನ ಕುವರಿಯ ವಿವಾಹಕ್ಕಾಗಿ ಬಂದನೆಂದೂ ಅದು ತನ್ನ ಪುಣ್ಯವೆಂದೂ ತನ್ನೆದೆಯಲ್ಲೇ ನಲಿದನು. ''ಭೂಚರ ಖೇಚರರು ಬಂದರೇನು? ಮಹಾಚಕ್ರಧರನ ನಂದನರು ಈ ಚೆಲ್ವೆಯನ್ನು ಪ್ರೀತಿಸಿ, ನನ್ನ ಬಳಿಗೆ ಬಂದಾಗ ನಾನೇ ಭಾಗ್ಯಶಾಲಿ.'' ಎಂದು ಮುಂದಿನ ಕಾರ್ಯಕ್ಕಿಳಿದನು. ತನ್ನ ಅರಮನೆಯನ್ನು ತೆರವುಮಾಡಿ ತಾನೊಂದು ಭಿನ್ನಗೃಹದಲ್ಲಿ ಒಕ್ಕಲಾದನು. ತನ್ನ ಪುರಜನರೂ ಪರಿವಾರದವರೂ ಕೂಡಿ. ಅವರನ್ನು ಇದಿರುಗೊಳ್ಳಲು ಮುನ್ನಡೆದನು. ನಾಳಿನ ನಾಡಿದಿನ ಯಜಮಾನರೆಂದು ಭೂಪಾಲರೆಲ್ಲರೂ ಕಾಶಿಯ ಅರಸನೊಂದಿಗೆ ತೆರಳಿದರು. ಒಡೆಯರು ಬರುತ್ತಿರುವುದನ್ನು ಕೇಳಿದಾಗ ಆಳುಗಳು ಮೈಮರೆತು ಇರುವರೆ?

ತಂಡತಂಡವಾಗಿ ನಿವಾಳಿ ಕಾಣಿಕೆಗಳನ್ನಿಟ್ಟು ಅಡ್ಡಬಿದ್ದ ಅರಸರನ್ನೆಲ್ಲ ನೋಡಿ, ಅರ್ಕಕೀರ್ತಿ ರಾಜೇಂದ್ರನು ಅವರನ್ನು ಸಂತೋಷದಿಂದ ಏಳುವಂತೆ ಹೇಳಿದನು. ಎಲ್ಲರೂ ಸಂತೋಷದಿಂದ ಎದ್ದರು. ಅರ್ಕಕೀರ್ತಿಯಾಗ ಅಕಂಪರಾಜನ ಮುಖವನ್ನು ದಿಟ್ಟಿಸಿ ನೋಡಿದನು.

''ಭೂಮಿಯ ರಾಜರೆಲ್ಲರೂ ನಿನ್ನೊಡನೆ ಬಂದಿರುವರು. ಏನಾದರೂ ವಿಶೇಷವಿದೆಯೇ? ಅಕಂಪರಾಜನೆ, ನಾವು ಅಲ್ಲಲ್ಲಿಯ ನಾಡುಗಳನ್ನು ನೋಡುತ್ತ ಬಂದವರು. ಆಗ ಆಯಾ ನಾಡಿನ ಅರಸರೇ ಬಂದು ನಮ್ಮನ್ನು ನೋಡಿದ್ದರು. ಇಲ್ಲಿ ಹಲವು ನಾಡಿನವರು ಕೂಡಿರುವುದೇಕೆ? ಇದೇನು ಚೋದ್ಯವೆಂದು ಹೇಳು? ನಿಮ್ಮಲ್ಲಿ ಅರುಹಂತನ ಪೂಜೆಯಿದೆಯೇ ಮದುವೆಯೋ, ಅಲ್ಲ — ಇದು ಸ್ವಯಂವರಕ್ಕೆ ಕೂಡಿದ ಕೂಟದಂತೆಸೆಗಿದ್ದೇ – ಏನೆಂದು ಹೇಳು ಅಕಂಪಾ?'' ಎಂದು ಏನೂ ಅರಿಯದವರ ಮೋಡಿಯಲ್ಲಿ ಅರ್ಕಕೀರ್ತಿಯು ಕೇಳಿದನು.

''ದೇವರ, ಕಡೆಯ ನಿರೂಪ ಸುಳ್ಳಲ್ಲ. ಚೆಲುವೆಯಾದ ಪುತ್ರಿಯೊಬ್ಬಳಿದ್ದಾಳೆ. ಅವಳ ಒಸಗೆಗಾಗಿ ಈ ರಾಜರು ಬಂದಿದ್ದಾರೆ. ನೀವು ದೇವರಿಬ್ಬರೂ ಬಂದರೆ ಸಂತೋಷಕ್ಕೆ ಸಂತೋಷವಾಗುವುದು. ಭರತೇಶನೇ ಬಂದಂತೆ ಆಯಿತು. ದೇವರಿಬ್ಬರೂ

ಬಿಜಯಮಾಡಿ, ನನ್ನ ಧರೆಯನ್ನು ಪಾವನಮಾಡಿರಿ'' ಎಂದು ಕಾಶಿಯ ದೊರೆಯು ಸಂತೋಷದಿಂದ ಬಿನ್ನವಿಸಿದನು.

ಆಮೇಲೆ ಮೇಘೇಶ ಮೊದಲಾದ ಭೂಚರರೂ ಖೇಚರರೂ ಕೂಡಿ ಇದಿರ್ಗೊಂಡು ಅವರನ್ನು ಹೊಗಳುತ್ತ ಅಕಂಪರಾಜನು ತನ್ನ ಪುರಕ್ಕೆ ಕರೆತಂದನು.

ಅವರು ಪುರಕ್ಕೆ ಬರುವಾಗ ಅಕಂಪನು ಇವರ ಬಿಡಾರಕ್ಕಾಗಿ ಅರಮನೆಯನ್ನೇ ತೆರವು ಮಾಡಿರುವನೆಂದು ಅಣ್ಣ ತಮ್ಮಂದಿರಿಗೆ ತಿಳಿಯಲು, ಅವರು ತಮ್ಮೊಳಗೆ ಪರ್ಯಾಲೋಚಿಸಿದರು. ಕೊನೆಗೆ ಅರ್ಕಕೀರ್ತಿಯು ಅಕಂಪರಾಜನಿಗೆ ತಮಗಾಗಿ ಬೇರೆ ಬಿಡಾರವೇ ಆಗಲಿಯೆಂದನು.

''ನನಗೆಂದು ತೆರವು ಮಾಡಿದಾಗಲೇ ನೀನಿದ್ದ ಅರಮನೆ ನನ್ನ ಬಿಡಾರವಾಯಿತೆ? ನಮಗೆ ಜನಗೋಷ್ಠಿ ಬೇಡ. ಊರಹೊರಗೊಂದು ವನದಲ್ಲಿ ಮನೆಯಿದ್ದರೆ ಉತ್ತಮ.''

ಅಕಂಪರಾಜನು ಅದಕ್ಕೊಪ್ಪಿದನು. ಅವನ ಪೂರ್ವಜನ್ಮದ ಮಿತ್ರನಾದ ಚಿತ್ರಾಂಗದ ಸ್ವಯಂವರಕ್ಕೆಂದು ವನದಲ್ಲಿ ನಿರ್ಮಿಸಿದೆರಡು ಅರಮನೆಗಳಿವೆಯೆಂದೂ ಅದನ್ನು ಚಕ್ರೇಶ್ವರ ಸುಕುಮಾರರು ನೋಡಬಹುದೆಂದೂ ಕಾಶಿರಾಜನು ಬಿನ್ನವಿಸಿದನು. ಅದರಂತೆ ರಾಜರಿಬ್ಬರೂ ಅಲ್ಲಿಗೆ ಹೋಗಿ ಆ ಮನೆಗಳಲ್ಲಿ ಒಕ್ಕಲಾದರು. ಪರಿವಾರವೆಲ್ಲವು ಹೊರಗೆ ಪಾಳೆಯ ಬಿಟ್ಟಿತು.

ಐದು ದಿನಗಳವರೆಗೆ ಸಾರವಸ್ತುಗಳ ಉಲುಪೆ ಹೋಯಿತು. ಕಾಶಿರಾಜನು ಅವರಿಗೆ ಉಪಚಾರಮಾಡಿದನು. ಅನಂತರ ಅವನು ಭೂರಿನೃಪರನ್ನು ಕೂಡಿಕೊಂಡು ಬಂದು ಬಿನ್ನವಿಸಿದನು.

''ಯುವರಾಜ ಬಿನ್ನಹ. ದೇವರು ಬರಲು, ಮೊದಲು ನಿರ್ಣಯಿಸಿದ ಲಗ್ನದಲ್ಲಿ ಸ್ವಯಂವರ ಬೇಡವೆಂದು, ಅವಸರವಾದೀತೆಂದು ಅದನ್ನು ನಿಲ್ಲಿಸಿದೆನು. ನಾಳಿನ ದಿವಸ ಉತ್ತಮ ಲಗ್ನವುಂಟು. ನೀವು ಅಣ್ಣ ತಮ್ಮಂದಿರು ಸ್ವಯಂವರದವರೆಗೆ ಪಣ್ಣೆಯಂತೆ ವಿಜಯಮಾಡಿ, ಹೆಣ್ಣಿನ ಉದ್ವಾಹವನ್ನು ಸೊಬಗಾಗುವಂತೆ ಮಾಡಬೇಕು. ನಮ್ಮ ಕಣ್ಣಿಗೂ ಹಬ್ಬ ಮಾಡಬೇಕು''

''ಅಲ್ಲಿಗೆ ನಾವು ಬಾರೆವು. ನೀನಿನ್ನು ಮಿಕ್ಕಿನ ರಾಜರನ್ನು ಕೂಡಿ ಕೊಂಡು ಈಗಾಗಲೇ ಪ್ರಾರಂಭಮಾಡಿದ ಕಾರ್ಯವನ್ನು ಚಂದಮಾಡು. ಅದೇ ನಮ್ಮ ಹಾರೈಕೆ.''

''ನೀವು ಬರದಿದ್ದರೆ ಉದ್ವಾಹ ಚೆಲುವಾಗುವುದೆ? ಪ್ರಭಾವದಿಂದ ಬರಬೇಕು.'' ಎಂದು ಕಾಶಿರಾಜನು ರಾಜರೊಡನೆ ಪ್ರಾರ್ಥಿಸಿಕೊಂಡನು.

''ಅಕಂಪಾಂಕ ಕೇಳು, ಸರ್ವರಿಗೂ ಓಲೆ ಕಳುಹಿಸಿದಂತೆ ನಮಗೆ ಓಲೆ ಕಳುಹಿಸಲಿಲ್ಲ, ಲೀಲಾರ್ಥವಾಗಿ, ದಾರಿಗರಾಗಿ ಬಂದ ನಾವು ಕನ್ಯಾಲಯಕ್ಕೆ ಅಡಿಯಿಡಬಹುದೆ? ಪ್ರೀತಿಯಿಂದ ಅರಸುಗಳನ್ನು ಕೂಡಿಕೊಂಡು ನೀನು ಆ ಕಾರ್ಯವನ್ನು ಮಾಡು. ನಾವದಕ್ಕೆ ಒಮ್ಮನಸ್ಸಿನಿಂದ ಒಪ್ಪಿರುವೆವು'' ಎಂದು ಅರ್ಕಕೀರ್ತಿ ತೂಕ ತಪ್ಪದಂತೆ ಮಾತನಾಡಿದನು.

''ಸಾರ್ವಭೌಮನ ಕುಮಾರರಿಗೆ ಓಲೆ ಕಳುಹಿಸುವ ತೋಳುಬಲಕ್ಕೆ ಅಳುಕುತ್ತಿದ್ದೆನಲ್ಲದೆ ಗರ್ವದಿಂದಿರಲಿಲ್ಲ'' ಎಂದು ಅಕಂಪನು ಅಪೂರ್ವವಾದ ವಿನಯದಿಂದ ನುಡಿದನು.

''ಸರಿವಂಶದವರನ್ನು ಒಸಗೆಗೆ ಕರೆಯುವುದರಲ್ಲಿ ಭಯವೇಕೆ? ಸಿರಿಯ ಹೆಚ್ಚೇನು? ಕರೆಯದೆ ಬಂದವರು ಅಲ್ಲಿಗೆ ಬರಬಾರದು. ಇದು ಅರಸು ಮಕ್ಕಳ ಸುಮಾರ್ಗ. ಇದು ಅಪ್ಪಾಜಿಯವರ ಚಿತ್ತಕ್ಕೂ ಆಗದು. ನಾವಿಬ್ಬರೂ ಇಲ್ಲೇ ಇರುವೆವು. ನಮ್ಮ ಆಪ್ತಿಗರು ಬರುವರು. ಚಪ್ಪನ್ನ ದೇಶದ ರಾಜರಿದ್ದಾರೆ, ಖೇಚರರಿದ್ದಾರೆ, ಅವರೊಂದಿಗೆ ಒಪ್ಪವನ್ನು ಮಾಡು; ಹೋಗು.''

ಎಂದು ಅರ್ಕಕೀರ್ತಿಯು ತನ್ನ ಸುರಚಂದ್ರ, ಶುಭಚಂದ್ರ, ಗುಣಚಂದ್ರ, ಶ್ರೀಚಂದ್ರ, ವರಚಂದ್ರ, ಹರಿಚಂದ್ರ, ವಿಕ್ರಾಂತಚಂದ್ರ, ರಣಚಂದ್ರರೆಂಬ ಎಂಟು ಮಂದಿ ಚಂದ್ರರನ್ನೂ ಉದ್ದಂಡಮತಿ, ಸನ್ಮತಿಯೆಂಬ ತನ್ನ ಇಬ್ಬರು ಮಂತ್ರಿಗಳನ್ನೂ ಬಿರುದಿನ ಒಸಗೆಯನ್ನು ನೋಡಿಕೊಂಡು ಹೋಗಿರೆಂದು ಹೇಳಿದನು. ''ಇಲ್ಲಿ ನಾವಿದ್ದೇವೆ ಎಂಬ ಅಳುಕು ಬೇಡ. ಶೃಂಗಾರ ಪ್ರಭಾವದ ಆಟಪಾಟಗಳಲ್ಲಿ ನೀವು ಪ್ರೀತಿಯಿಂದಿರುವುದು'' ಎಂದು ಅರಸು ಮಕ್ಕಳೆಲ್ಲರನ್ನೂ ವಿನೋದಾರ್ಥಿಯಾದ ಅರ್ಕಕೀರ್ತಿಯು ಬೀಳ್ಕೊಟ್ಟನು. ಅಷ್ಟಚಂದ್ರರು, ಮಂತ್ರಿಗಳು ಆಪ್ತರು, ಪರಿವಾರದವರು, ಅರಸುಮಕ್ಕಳು, ಎಲ್ಲರೂ ಒಪ್ಪಿಕೊಂಡು ಸಾಗಿದರು.

ಮರುದಿವಸ ಹಗಲಿನ ಮೂರನೆಯ ಜಾವದಲ್ಲಿ ಊರಹೊರಗೆ ರಾರಾಜಿಸುವ ಸ್ವಯಂವರಕ್ಕೆ ನೆರೆದ ಅರಸುಮಕ್ಕಳೆಲ್ಲರೂ ಬರುವುದೆಂದು ಭೇರಿಯು ಸಾರಿತು. ಸಿಂಗರಿಸಿದ ರಾಜಸುತರೆಲ್ಲರೂ ತಮ್ಮ ತಮ್ಮ ಬಲದೊಂದಿಗೆ ವಾದ್ಯಘೋಷ ಮೊಳಗುತ್ತಿರಲು, ಮಂಗಲವು ಶೋಭಿಸುತ್ತಿರುವ ಸ್ವಯಂವರಕ್ಕೆ ಬೆಡಗಿನ ಉಬ್ಬರದಿಂದಲೆ ಬಂದು ಸೇರಿದರು. ಅಗಲವಾದ ಮಂಟಪದಲ್ಲಿ ಸಾಲಾಗಿ ಇಟ್ಟಿದ್ದ ಗದ್ದುಗೆಗಳಲ್ಲಿ ಬೇರೆ ಬೇರೆಯಾಗಿ, ಅರಸು ಮಕ್ಕಳೆಲ್ಲ ಒಪ್ಪವಾಗಿ ಕುಳಿತುಕೊಂಡರು. ರಾಜಸುತರೆಲ್ಲರೂ ಮಾಲೆಯಿಕ್ಕಿದೊಡನೆ ಹೋಗುವರೆಂದು, ಕಾಶಿರಾಜನು ರಾಜಕುಮಾರರು ಬರುವಾಗಲೆ ಅವರಿಗೆ ವೀಳ್ಯವನ್ನೂ ಉಡುಗೊರೆಯ ವಸ್ತ್ರವನ್ನೂ ಪರಿಮಳದ್ರವ್ಯಗಳನ್ನೂ ಇತ್ತು ಮನ್ನಿಸಿದನು.

ಆಗ ಸುಲೋಚನಾದೇವಿಯು ಗೆಲುವಿಕೆಯ ರಭಸದಲ್ಲಿ ತನ್ನ ಸೇವೆಯ ಚೆಲ್ಲಕಾತಿಯರ ಮೇಳದೊಡನೆ, ಪಲ್ಲಕ್ಕಿಯನ್ನೇರಿ ಬರುತ್ತಿದ್ದಳು. ಆಕೆಯಾದರೊ ಕಡುಚೆಲುವೆ. ಸ್ವಯಂವರಕ್ಕೆ ಒಪ್ಪುವ ಮಡದಿ.

ಆಕೆ ಬರುತ್ತಿರುವಾಗ ಅಲ್ಲಲ್ಲಿ ನಿಂತಿದ್ದ ಚೆತ್ತದ ಹೆಣ್ಣುಗಳು ದಾರಿಯನ್ನು ಸರಿಗೊಳಿಸುತ್ತಿದ್ದರು. ಬರುತ್ತಿರುವ ಸುಲೋಚನಾದೇವಿಯನ್ನು ಕಂಡು ''ಮದನನ ಮದದಾನೆ ಬರುತ್ತಿದೆ; ಮೋಹಸಾರದ ರಥವೇ ದೂಡಿದಂತೆ ಬರುತ್ತಿದೆ; ಯಾರೂ ಇದಿರಾಗಬೇಡಿ; ತೊಲಗಿ ಹೋಗಿ,'' ಎಂದವರು ಎಚ್ಚರಿಸುತ್ತಿದ್ದರು. ಎರಡೂ ಕಡೆಗಳಲ್ಲಿ ಗಾಯನವು ಮೊಳಗುತ್ತಿರಲು ಚಾಮರ ಛತ್ರ ಪತಾಕೆಗಳಿಂದ ಕೂಡಿಕೊಂಡು, ಮನ್ಮಥನ ವೀರಸಿರಿಯಂತೆ ಆಕೆ ಬಂದಳು. ಆಗ ಅವಳ ಮೈಯ್ಯ ಗಾಳಿಯು ಘಮ್ಮನೆ ಅಲ್ಲಲ್ಲಿ ಹಬ್ಬಿತು.

ಹೆಚ್ಚಾದ ಅರಸು ಮಕ್ಕಳು ಆಸೆಪಟ್ಟು ಕಣ್ಣಿಕ್ಕಿ ದಾರಿಯನ್ನೇ ನೋಡುತ್ತಿರುವಾಗ, ಸೊಕ್ಕು ಜವ್ವನೆಯಾದ ಸುಲೋಚನಾದೇವಿ ಪಲ್ಲಕಿಯಿಂದ ಇಳಿದಳು, ಆಗ ಬೆತ್ತಹಿಡಿದ ಹೆಣ್ಣುಗಳು, 'ಬಾಂಗು, ಭಲ, ಜಯ' ಎಂದರು. ನಿರಿನಿರಿಯಾದ ಗುಂಗುರು ಕೂದಲಿನ ಸುಲೋಚನೆಯು ಪಲ್ಲಕ್ಕಿಯ ಮೇಲ್ಗಟ್ಟಿನ ಮರೆಯನ್ನು ಜಾರಿಸಿ ನಿಂತಾಗ, ಸ್ಮರನು ಒರೆಯಿಂದ ಜಡಿದು ಹಿಡಿದ ಖಡ್ಗದಂತೆ, ನೋಡುವವರ ಕಣ್ಣುಗಳಿಗೆ ಕಂಗೊಳಿಸಿದಳು. ಆಕೆಯು ಮರೆಯನ್ನು ಜಾರಿಸಿ, ತಟ್ಟನೆ ನಿಂತಾಗ, ಮುಗಿಲು ಸರಿದು ಹೋದಾಗ ತೋರುವ ಚಂದ್ರಲೇಖೆಯೋ ಎಂಬಂತೆ ಒಪ್ಪಿದಳು. ಸ್ಮರನ ಅರಗಿಳಿಯು ಬಂಗಾರದ ಪಂಜರದಿಂದ ಇಳಿದು ಶೃಂಗಾರವನದಲ್ಲಿ ಹೋಗುವಂತೆ ಅವಳು ಪಲ್ಲಕ್ಕಿಯಿಂದಿಳಿದು ಭೂಪಾಲರ ಸಭೆಗೆ ಹೋದಳು. ಅವಳು ಧರಿಸಿದ ಕಾಂಚನರತ್ನ ಭೂಷಣಗಳ ಪ್ರಕಾಶವು ಬಡಿದು ಹೆಚ್ಚಿದ ಶರೀರ ಕಾಂತಿಯಿಂದ ಅವಳು ಮಿಂಚಿನ ಮಾಲೆಯೋ, ಬಾಲೆಯೋ ಎಂಬಂತೆ ನಡೆದಳು. ಅವಳ ಕಣ್ಣುಗಳ ಪ್ರಭೆಯು ತಳತಳಿಸುತ್ತಿರುವಾಗ, ಅವಳು ಖೇಚರ ಭೂಚರ ರಾಜಕುಮಾರರನ್ನು ನೋಡಿದಳು. ಆ ಚೆಲುವೆಗೆ 'ಸುಲೋಚನಾ' ಎಂಬ ಹೆಸರಾಗ ಒಪ್ಪಿದಂತಿತ್ತು.

ತೆಂಕಣಗಾಳಿಯ ತೀಟದಿಂದ ವನತರುಗಳ ಸಮೂಹವು ಚಿಗುರೇರುವಂತೆ, ಸುಲೋಚನೆಯ ನೋಟ ತಾಗಿದೊಡನೆ ಎಲ್ಲರೂ ಪುಳಕಿತರಾದರು. ಚಾರುಚಂದ್ರಮನ ಕಾಂತಿಗೆ ಮೋರೆಯುಬ್ಬಿದ ಚಕೋರ ಪಕ್ಷಿಗಳು ನೋಡುವಂತೆ, ಆ ರಮಣಿಯ ರೂಪಿಗೆ ಎದೆ ಸೋತು ನೋಡಿದವರೆಲ್ಲರೂ ಆಕೆಯ ಕೂಡ ಕೂಟವನ್ನು ಬಯಸಿದರು. ಅಲ್ಲಿದ್ದ ರಾಜರ ಕಣ್ಣುಗಳು ಆಕೆಯ ಮೊಗದಲ್ಲಿ ಕೊರಳಲ್ಲಿ ಎದೆಯಲ್ಲಿ ತೋಳುಗಳಲ್ಲಿ ನಡುವಿನಲ್ಲೆಂದು ಅಂಗಾಂಗಳನ್ನು ಹೊಗುತ್ತಿದ್ದುವು; ಹಾಗೆ ಹೊಕ್ಕ ಕಣ್ಣುಗಳು ಮತ್ತೆ ಹೊರಗೆ ಬಾರದಂತಾಗಿದ್ದುವು. ಅವರ ಕಣ್ಣುಗಳು ಸಿರಿಯೆಂಬ ತೆರೆಯಲ್ಲಿ ಮೀನಿನಂತೆ ಹರಿದಾಡಿದುವು. ನೋಟದ ಸುಖವು ಅವರೆಲ್ಲರಿಗೂ ಆಯಿತು. ಎಲ್ಲರೂ ಅವಳೊಬ್ಬಳ ಬೇಟೆ ಮಾಡಿದರು.

ಹಾಗೆಂದರೆ ಈ ಸ್ವಯಂವರವೆಂಬುದು ಭಂಡಾಟವಲ್ಲವೆ? ಅವಳು ಆಸೆಯಿಂದ ಎಲ್ಲರನ್ನೂ ನೋಡಿದಳು. ಅವರೆಲ್ಲರೂ ಆಸೆಯಿಂದ ಅವಳನ್ನೇ ನೋಡಿದರು. ಆಗ ಅವರ ಭಾವರತಿಯಾಯಿತು. ಈ ಸ್ವಯಂವರವೆಂಬುದು ಪರಿಹಾಸ್ಯವಲ್ಲವೆ? ವಿವೇಕಶೂನ್ಯರಾದ ಅವರೆಲ್ಲರೂ ಅರೆಬಾಯಿಬಿಟ್ಟು, ಕಣ್ಣು ಪೂರ್ಣ ಬಿಟ್ಟು, ಹುಚ್ಚರಂತೆ ಅವಳನ್ನೇ ನೋಡಿದರು. ಜಾಣರ, ದೇವನಾದ ಭರತೇಶ್ವರನ ನಂದನರು ಮಾತ್ರ ಅಲ್ಲಿಗೆ ಬಂದಿರಲಿಲ್ಲ. ಅವರು ಬಲು ಜಾಣರಲ್ಲವೆ!

ಎಡಬಲಗಳಲ್ಲಿರುವ ಚೆಲುವ ರಾಜಕುಮಾರರನ್ನು ನೋಡುತ್ತ ಹೂಮಾಲೆ ಹಿಡಿದ ಸುಲೋಚನಾದೇವಿ ಮುನ್ನಡೆದಳು. ಆಗ ಅವಳೊಡನಿದ್ದ ಮಹೇಂದ್ರಿಕೆಯೆಂಬ ಕಟ್ಟಿಗೆಯವಳು ರಾಜಕುಮಾರರನ್ನು ತೋರಿಸಿದಳು.

''ಈತನು ನೇಪಾಳ ರಾಜನು ನೋಡು'' – ಆಕೆ ಅವನನ್ನು ಸಮಾನನೆಂದು ಕಾಣದೆ ಮುಂದೆ ಹೋದಳು. ಆಗ ಅವನ ಮುಖವು ಬಾಡಿತು. ಲಾಗ ತಪ್ಪಿದ

ಮಂಗನಂತಾದನವನು. ''ಹಮ್ಮೀರ ಪತಿ ಈತನು — ನೋಡು'' ಎಂದಾಗ ನೋಡಿ, ಸುಮ್ಮನೆ ಮುಂದಕ್ಕೆ ನಡೆದಳು. ಆಗ ಅವನು ತನ್ನ ಅಯ್ಯನು ಹೋದನೋ ಎಂಬಂತೆ ಉಮ್ಮುವ ಕಂಬನಿಗಳಿಂದ ಮರುಗಿದನು. ಚೀನದೇಶದ ರಾಯನು ಇವನೆಂದು ಹೇಳಲು ಮೀನಾಕ್ಷಿಯು ಅವನನ್ನು ಈಕ್ಷಿಸಿ, ಮುಂದಕ್ಕೆ ಹೋದಳು. ''ಛೀ ನನ್ನ ಬದುಕೇನು? ಸುಡು ಸುಡು'' ಎಂದವನು ನಾಚಿಕೆಯಿಂದ ತಲೆಯನ್ನು ತಗ್ಗಿಸಿದನು. ಲಾಟದೇಶದ ರಾಯನಿವನೆಂದು ಹೇಳಿದಾಗ ನೋಡಿದರೂ ಕಡೆಗಣಿಸಿ, ಅವಳು ಸಾಗಿದಳು. ಆಗ ನೊಕಿಸಿಕೊಂಡವನಂತೆ ಅವನ ಎದೆಯು ಕೋಟಲೆಗೊಂಡಿತು. ಗೌಡದೇಶದ ಅರಸನಿವನೆಂದು ಹೇಳಿದಾಗ, ಹಳ್ಳಿಯ ಗೌಡನೆಂದು ಭಾವಿಸಿ ಮುಂದೆ ಸಾಗಿದಳು. ''ಬಂಗಾಳದ ಅರಸನೀತನು, ನೋಡು'' ಎಂದಾಗ, ನೋಡಿ, ಕೂಡಲೇ ಮುಂದಕ್ಕೆ ಹೋದಳು.

ಈ ರೀತಿಯಲ್ಲಿ ಅಂಗ, ಕಾಶ್ಮೀರ, ಕಳಿಂಗ, ಕಾಂಭೋಜದ ಅರಸರನ್ನು ತೋರಿಸಿದಾಗ, ನೋಡಿ, ನಗುತ್ತ ಮುಂದೆ ನಡೆದಳು. ಅನಂತರ, ''ಇವರು ಮ್ಲೇಚ್ಛ ರಾಜರು, ಇವರು ವಿಧ್ಯಾಧರ ನೃಪರು. ಇವರು ರವಿಕುಲದವರು, ಇವರು ಚಂದ್ರವಂಶದವರು, ನೋಡು ದೇವಿ'' ಎಂದ ಮಾತನ್ನು ಕೇಳುತ್ತ ಸುಲೋಚನಾದೇವಿ ಮುಂದೆ ಸಾಗಿದಳು. ಗುಣಚಂದ್ರ ರಾಜನು, ಶುಭಚಂದ್ರ ರಾಜನು, ರಣಚಂದ್ರನು, ಸುರಚಂದ್ರನು — ಎಂದು ತೋರಿಸಿದಾಗ ಅವರನ್ನು ತೃಣದಂತೆ ಕಂಡು ಮುಂದಾ ಸಾಗಿದಳು.

ಪರಿಪರಿಯ ಹೂಗಳನ್ನೆಲ್ಲ ಬಿಟ್ಟು ತುಂಬಿಯು ತಾವರೆಯೊಂದನ್ನು ಕಂಡು ನಿಲ್ಲುವಂತೆ ದೊರೆಗಳನ್ನೆಲ್ಲ ತೊರೆದು ಮುಂದೆ ಸಾಗಿದ ಅವಳು, ಒಬ್ಬನ ಒತ್ತಿನಲ್ಲಿ ನಿಂತಳು. ಅವನ ಪುಣ್ಯವೆಷ್ಟೋ. ಒಡತಿಯ ಸೋಲನ್ನು ಅರಿತು, ಸಂತೋಷದಿಂದ ತನ್ನ ಕೈಯಲ್ಲಿದ್ದ ಬಂಗಾರದ ಕೋಲನ್ನು ಎತ್ತಿ ಹಿಡಿದು, ''ದೇವಿ ಈತನ ನೆಲೆಯನ್ನೀಗ ಹೇಳುವೆನು'' ಎಂದು ಹೇಳತೊಡಗಿದಳು.

''ಇವನು ಮಹಾಪರಾಕ್ರಮಿ, ಹಸ್ತಿನಾಪುರದ ಸೋಮಪ್ರಭರಾಜನ ಮಗನು. ಸುಪ್ರಸಿದ್ಧನು, ಕುರುವಂಶ ಭೂಷಣನು, ಕಲಾಪ್ರವೀಣನು, ಗುಣೋತ್ತಮನು. ಭರತೇಶ್ವರನ ಸೇನಾಗ್ರಗಣ್ಯನಾಗಿ ಪರಬಲಕ್ಕೆ ಕಾಲಭೈರವನಂತಿರುವನು. ಅರಿಗಳನ್ನೋಡಿಸಿ ವೀರಾಗ್ರಣಿಯೆಂಬ ಬಿರುದು ಪಡೆದಿರುವನು. ಮೇಘಮುಖ, ಕಾಲಮುಖರೆಂಬವರನ್ನು ಹೊಡೆದೋಡಿಸಿದ ಘನ ವಿಕ್ರಾಂತನಿವನು. ಮೇಘೇಶ್ವರನಿವನು, ಮಾಲೆಯನ್ನು ಹಾಕು'' ಎಂದವಳು ಶ್ಲಾಘಿಸಿದಳು.

ಬೊಗಸೆಗಣ್ಣಿನ ಬೆಳಕಿನ ಮಾಲೆಯನ್ನೂ ನಸುನಗೆಯ ಬೆಳಗಿನ ಮಾಲೆಯನ್ನೂ ಹೂಮಾಲೆಯೊಂದಿಗೆ ಜೊತೆಗೂಳಿಸಿ, ಅವಳು ಆತನಿಗೆ ಹಾಕಿದಳು. ಅಲ್ಲಿದ್ದ ಹೆಣ್ಣುಗಳು ''ಜಯ ಜಯ'' ಎಂದರು.

ಅವಳು ಅವನ ಕೊರಳಿಗೆ ಮಾಲೆ ಹಾಕಿದಾಗ ಅಲ್ಲಿದ್ದ ರಾಜರಿಗೆ ಹೊಟ್ಟೆಯೊಳಗೆ ಶೂಲೆಯಾಯಿತು. ಯುದ್ಧ ನಿಂತಾಗ ಓಡುವವರಂತೆ, ಅಲ್ಲಿ ನಿಲ್ಲದೆ, ಕಂಡ ಕಂಡ ಕಡೆಗೆ ಓಡಿದರು.

ಆನೆಯ ಮೇಲೆ ಅಳಿಯನೂ ಮಗಳೂ ಕುಳಿತುಕೊಂಡು ಹೋಗಲು, ಅಕಂಪರಾಜನು ಸಾನುರಾಗದಿಂದ ಊರನ್ನು ಸೇರಿ, ಸಂತೋಷದಿಂದ ಅರಮನೆಯನ್ನು ಪ್ರವೇಶಿಸಿದನು.

ಇತ್ತ ಸ್ವಯಂವರಕ್ಕೆ ಬಂದಿದ್ದ ರಾಜರೆಲ್ಲರು, ಜೂಜಾಡಿ, ಸೋತವರಂತೆ, ಹಣ ಹಾಳಾದವರಂತೆ, ಹೆತ್ತ ತಾಯಿತಂದೆಗಳನ್ನು ಕಳಕೊಂಡವರಂತೆ, ಮರುಗುತ್ತಿದ್ದರು. ಒಬ್ಬರು ಒಬ್ಬರ ಮುಖನೋಡಿ ನಾಚುತ್ತಿದ್ದರು. ಒಬ್ಬಳಿಗಾಗಿ ಬಂದೆವಲ್ಲಾ ಎಂದವರು ಉಬ್ಬಸ ಪಡುತ್ತಿದ್ದರು.

ಶುಭಚಂದ್ರರಾಜನೇ ಮುಂತಾದ ಅಷ್ಟಚಂದ್ರರು, ಕಾಂತಿಹೀನರಾಗಿ ಚಿಂತಿಸುತ್ತಿರುವಾಗ ಅವರೆದುರಿಗೆ ನಿಂತಿದ್ದ ಉದ್ದಂಡಮತಿಯೊಂದು ಕ್ಷೋಭೆಯ ಮಾತನ್ನು ಹೇಳಿದನು.

''ನೀವು ಕ್ಷತ್ರಿಯರಲ್ಲವೆ? ನಿಮ್ಮನ್ನು ಹೀನವಾಗಿ ಕಂಡು, ಅವಳು ಮಾಲೆಯನ್ನು ಆ ರಾಜನಿಗೆ ಹಾಕಲು ಒಪ್ಪಿ ಜಾರಬಹುದೆ ನೀವು? ಇದೇನು ಅಭಿಮಾನಿಗಳ ರೀತಿಯೇ? ನಿಮಗೂ ಬೇಡ. ಅವನಿಗೂ ಬೇಡ; ಮತ್ತೆ ಆ ಹೆಣ್ಣನ್ನು ಯುವರಾಜನಿಗೆ ಅನುಗೊಳಿಸುವಂತೆ, ರಾಜರೆಲ್ಲರೂ ಕೂಡಿ ಯೋಚಿಸಿ'' ಎಂದು ಹೇಳಿದಾಗ ಅವರೆಲ್ಲರೂ ಕಿವಿಗೊಟ್ಟು ಕೇಳಿದರು.

''ಆನೆ, ಕುದುರೆ, ಹೆಣ್ಣುಗಳೆಲ್ಲ ಉತ್ತಮವಾದುವುಗಳು ನಮ್ಮ ಒಡೆಯರಿಗೆ ಸೇರಬೇಕು. ಈ ರೂಪಿನ ಹೆಣ್ಣು ಆ ಬಂಟನಿಗೆ ಸಲ್ಲುವುದೆ? ಇದು ಸರಿಯಾದ ದಾರಿಯೆ? ನೀವಿದನ್ನು ಒಪ್ಪುವುದೆ?''

ಈ ಮಾತಿಗೆ ಅಲ್ಲಿದ್ದ ರಾಜರೆಲ್ಲರೂ ''ಅಹುದು—ಅಹುದು'' ಎಂದು ರಾಜರೂ ಅಷ್ಟಚಂದ್ರರೂ ಒಪ್ಪಿದರು. ಅದರಿಂದಾಗ ಅಲ್ಲೊಂದು ಕಾಳಗವೇ ಉಂಟಾಯಿತು. ಕ್ರೂರರಿಂದ ಏನಾಗುವುದಿಲ್ಲ? ಹಾಗೆ ಆ ಮಂತ್ರಿಯು ಹೇಳಲು, ಗಂಭೀರವಿಲ್ಲದವರೆಲ್ಲ ಅದಕ್ಕೊಪ್ಪಿ, ''ತಮಗೆ ದೊರೆಯದ ಒಡವೆಯನ್ನು ದೊರೆಗೆ ಕೋರುವಂತೆ'' ಎಲ್ಲರೂ ಒಟ್ಟಾದರು.

ಆಗ ಸನ್ಮತಿಯೆಂಬ ಮಂತ್ರಿಯು, ''ಸಲ್ಲದೀಕೃತಿ'' ಎಂದು ಉದ್ದಂಡಮತಿಗೆ ತಿಳಿಸಿದನು. ಆದಕ್ಕೆ ಎಲ್ಲರೂ ಕೋಪದಿಂದ ಹುಬ್ಬು ಹಾರಿಸಿದರು. ''ನೀನೇನ ಬಲ್ಲೆ? ಸುಮ್ಮನಿರು. ವಸುಧಾಗ್ರಗಣ್ಯನಿಗೆ ನಾವು ಉತ್ತಮ ನಾರಿಯನ್ನು ಬೆಸುಗೆ ಮಾಡುವಾಗ, ನೀನೊಂದು ಕಿಸುರನ್ನು ಹೇಳದಿರು'' ಎಂದು ಸರ್ವರೂ ಹೇಳಿದರು. ಸನ್ಮತಿಯಾಗ ತುಟಿಯಲ್ಲಾಡಿಸದೆ ನಿಂತನು.

ಅಷ್ಟಚಂದ್ರರೂ ದುಷ್ಟಮಂತ್ರಿಯೂ ಕೂಡಿ, ಶಿಷ್ಟಮಂತ್ರಿಯ ಮಾತನ್ನು ಹೂಳಿದರಲ್ಲಾ — ಈ ಕಷ್ಟವನ್ನು ನೆನೆದು ತಾಳದೆ ಹೋದನು ಎನ್ನುವಂತೆ ಸೂರ್ಯನು ಅಷ್ಟರಲ್ಲಿ ಮಾಯವಾದನು.

## ೩.

# ಲಕ್ಷ್ಮೀಮತಿಯ ಉದ್ವಾಹ

ಧೂರ್ತರ ಆಟವನ್ನಿಷ್ಟು ನೋಡಿ, ಅರ್ಕಕೀರ್ತಿ ರಾಜನ ಸುಮಂಗಲದ ವಾರ್ತೆಯನ್ನು ಕೇಳಿ ಹೋಗುವೆನು — ಎಂದು ಬಂದಂತೆ ಸೂರ್ಯನು ಮೂಡಲಲ್ಲಿ ಮೂಡಿದನು.

ಭೂಭುಜರೆಲ್ಲರೂ ಉದಯದಲ್ಲೇ ಎದ್ದು ಮೋರೆ ತೊಳೆದು, ಅರ್ಘ್ಯ ಪಾದ್ಯಗಳನ್ನು ತೀರಿಸಿಕೊಂಡು, ಉದ್ದಂಡಮತಿ ಮಂತ್ರಿಯನ್ನು ಕೂಡಿಕೊಂಡು ಯುವರಾಜನಿದ್ದಲ್ಲಿಗೆ ಹೋಗಿ ಅವನನ್ನು ಕಂಡರು.

ಆಗ, ಆ ನರಪತಿಯು, ನಿಮ್ಮ ಕೂಟವು ಏನಾಯಿತೆಂದು, ನಗುತ್ತ ಕೇಳಿದನು. ರಾಜರೆಲ್ಲರೂ ಮೌನವಾಗಿದ್ದು ಉದ್ದಂಡಮತಿಯನ್ನೇ ಬಿನ್ನವಿಸೆಂದು ಹೇಳಿದರು.

ಮಾಲೆಯನ್ನೊಬ್ಬನಿಗೆ ಇಕ್ಕಿದಳೆಂದರೆ ಯುವರಾಜನಿಗೆ ಆ ಹೆಣ್ಣಿನ ಮೇಲೆ ಆಸೆಯುಂಟಾಗದು ಎಂದು ಥಕ್ಕನೆ ಉದ್ದಂಡಮಂತ್ರಿಯು, ಮತ್ತೊಂದು ತಂತ್ರವನ್ನು ಜಾಳಿಸಿ ನುಡಿದನು.

''ಬಿನ್ನಹ, ವಿಭುವೆ. ಸ್ವಯಂವರ ಶಾಲೆಗೆ ಆ ಕನ್ಯೆ ಬಂದು ಎಲ್ಲರನ್ನೂ ನೋಡಿ ಭಿನ್ನಮಾನಸೆಯಾದಳು. ಆದ್ದರಿಂದ ತನ್ನ ಪ್ರೀತಿಯು ಉಕ್ಕಿ ಬಂದು, ಯಾರಿಗೂ ಆಕೆ ಮಾಲೆ ಹಾಕಲಿಲ್ಲ. ಸ್ವಯಂವರ ಮಂಟಪಕ್ಕೆ ಬಂದ ಮೇಲೆ ಒಬ್ಬರಿಗೆ ಮಾಲೆ ಹಾಕಲೇ ಬೇಕು ಎಂದು ತಮ್ಮವರು ಹೇಳಿದರು. ಆದರೂ ಅವಳು ಸುಮ್ಮನೇ ನಿಂತಿದ್ದಳು. ಅಲ್ಲಿರುವ ಭೂಭುಜರು ಅವಳ ಮನಸ್ಸಿಗೆ ಬರಲಿಲ್ಲವೋ ಏನೋ? ಮೇಘೇಶ್ವರನು ಲಂಚಕೊಟ್ಟಿದ್ದನೋ ಏನೋ — ಒಬ್ಬಳು ಕಂಚುಕಿ ಅವನನ್ನು ಹೊಗಳಿದಳು. ಆದರೂ ಆಕೆ ಅವನನ್ನು ನೋಡಿ ಮೊಗತಿರುಗಿಸಿದಳು. ಆಗ ಅವಳ ತಂದೆಯ ಮನಸ್ಸಿನಲ್ಲಿ ಚಿಂತೆಯ ಅಲೆಗಳೆದ್ದುವು. ಆಗ ಕಾಶಿರಾಜನು ಕೂಡಿದ ನೃಪರಲ್ಲಿ ಒಬ್ಬರಿಗೆ ಮಾಲೆ ಹಾಕದಿದ್ದರೆ ಆಗುವುದಿಲ್ಲ; ಆದ್ದರಿಂದ ಮಾಲೆ ಹಾಕಲೇಬೇಕೆಂದು ತನ್ನ ಮಗಳ ಕಿವಿಯಲ್ಲಿ ಹೇಳಿಸಿದನು. ಆದರೂ ಅವಳು ಒಪ್ಪಲಿಲ್ಲ. ಅವಳು ಕೈಯ್ಯ ಮಾಲೆಯನ್ನು ಯುವತಿಯೊಬ್ಬಳು ಸೆಳೆದುಕೊಂಡು ಅವನ ಕೊರಳಿಗೆ ಹಾಕಿದಳು. ಅವರೆಲ್ಲರೂ ತಮ್ಮೊಳಗೇ ಜಯಜಯವೆಂದು ಜಯಘೋಷ ಮಾಡಿದರು. ನೆರೆದ ಮಗಳಿಗೊಬ್ಬ ಪತಿಯಾಗಬೇಕೆಂಬ ಮರುಕದಲ್ಲಿದ್ದ ಕಾಶಿರಾಜನು ಅವನನ್ನು ಕರೆದುಕೊಂಡು ಹೋದನು. ಆಕೆಯಾದರೆ ಸೆರೆಯಾಳಂತೆ ಅವನೊಂದಿಗೆ ಹೋದಳು. ಅದನ್ನು ತಿಳಿದ ನೃಪರೆಲ್ಲ ಇತ್ತ ಬಂದರು. ಅವಳು ಒಲಿದರೆ ಒಬ್ಬನಿಗೆ ಮಾಲೆಯಿಕ್ಕಬೇಕು. ನಮ್ಮನ್ನು ಹಲವರನ್ನು

ಬರಹೇಳಿ, ಬಲುಹಿನಿಂದ ಒಬ್ಬನಿಗೆ ಕೊಡುವುದೆಂದರೇನು? ಎಂದವರು ಚಿಂತೆಗೊಳಗಾದರು. ಎಷ್ಟೆಂದರೂ ಅರಸುಗಳಲ್ಲವೆ? ನೇರವಾದ ಮಾರ್ಗದಲ್ಲಿ ಬಂದರೆ ತಾಳುವರಲ್ಲದೆ ವಕ್ರಮಾರ್ಗಕ್ಕೆ ನೃಪರು ಸೈರಿಸುವರೇ? ಯಾರಿಗೂ ಬೇಡ ಆ ಹೆಣ್ಣು ಯುವರಾಜರಿಗಿರಲಿ ಎಂದವರು ಒಟ್ಟಾಗಿ ನಿರ್ಣಯಿಸಿದರು. ಆನೆ, ಕುದುರೆ, ಹೆಣ್ಣು— ಮುತಾದ ಅಧಿಕ ವಸ್ತುಗಳು ಮಹಾನರೇಂದ್ರರಿಗೆ ಸಲ್ಲತಕ್ಕವಲ್ಲವೆ? ಆ ನೀರೆ ನಿನಗಲ್ಲದೆ ಉಳಿದವರಿಗೆ ಸಲ್ಲಳು — ಎಂದು ಈ ರಾಜರೆಲ್ಲ ಒಪ್ಪಿದರು. ಅಷ್ಟಚಂದ್ರರೂ ಅದನ್ನೇ ಕಂಡರು. ನಮ್ಮಿಬ್ಬರ ಎದೆಯಲ್ಲೂ ಹಾಗೆ ತೋರಿತು. ಅದನ್ನೇ ಸಂತೋಷದಿಂದ ಭಿನ್ನವಿಸಿದೆ. ಇನ್ನು ಈ ಕಾರ್ಯವೂ ನಿಮಗೆ ಸಲ್ಲುವುದು — ಪರಾಂಬರಿಸಬೇಕು.''

ಎಂದು ಉದ್ದಂಡಮತಿ ತಲೆಬಾಗಿ ಕೈಮುಗಿದು ನಿಂತುಕೊಂಡನು.

''ನೀವು ಹೇಳಿದಂತೆ ಹೆಣ್ಣಿನ ತಂದೆ ಹೇಳಿದರೆ ವಿವಾಹಕ್ಕೆ ನಾನೊಪ್ಪಬಹುದು. ಭಾಮೆಯನ್ನು ನನಗೆ ಕೊಡೆಂದು ಕೇಳುವುದು ಯಾವ ದೊಡ್ಡಸ್ತಿಗೆ? ಹೋಗಿರಿ?''

''ನೀನದನ್ನು ಹಾರೈಸಬೇಡ. ನಾವೇ ಹೋಗಿ ಸಂಧಾನಮಾಡುವೆವು'' ಎಂದು ಮಂತ್ರಿ ಮತ್ತೆ ಸೂಚಿಸಿದನು. ಅರ್ಕಕೀತಿಯು ಇಷ್ಟು ಯೋಚನೆ ಮಾಡುತ್ತಿರುವಾಗ, ಆದಿರಾಜನು ನೋಡಿ ಅನುಮಾನಗೊಂಡನು.

''ಚೊಕ್ಕದಾದ ಸ್ವಯಂವರವನ್ನು ಮಾಡಿ ಮಗಳು ಮಾಲೆ ಹಾಕದಿದ್ದರೆ ಅದು ರಸಭಂಗ. ಅವನು ತಕ್ಕಿನಿಂದ ಈ ಬಣ್ಣಮಾಡಿದ್ದಾನೆಂಬುದು ನಿಜ. ಅವಳು ಕೊಕ್ಕರಿಸಿದರೆ ಮದುವೆಯುಂಟೆ? ಬಾಲೆಗೆ ಬಲಾತ್ಕಾರದಿಂದ ಮದುವೆಯೆನ್ನುವಾಗ ಅವಳು ದೀಕ್ಷೆಪಡೆಯಲು ಎದ್ದರೂ ಏಳುವಳು. ಮಾಲೆ ಹಾಕಿದ ಆ ಸೇವಕಿಯನ್ನು ಮೇಘೇಶ್ವರನಿಗೆ ಊಳಿಗಕ್ಕಾಗಿ ಪ್ರೀತಿಯಿಂದ ಕೊಡಬಹುದು. ಆ ಕಡೆಗೆ ಹೆಣ್ಣು ಒಪ್ಪದಿದ್ದರೆ, ಈ ಕಡೆಗೆಂದರೆ ಎಲ್ಲರ ಎದೆಯೂ ಹಣ್ಣಾಗಿ ಎಲ್ಲರೂ ಒಪ್ಪುವರು. ನೀವು ಅಣ್ಣಾಜಿಯವರಿಗೆ ಅನುಗೊಳಿಸಿರಿ''

ಎಂದು ಹೇಳಿದಾಗ, ಅವರೆಲ್ಲರ ಮೋರೆಗಳಲ್ಲಿ ಬಣ್ಣವೇರಿತು. ಸಂತಸದಿಂದ ಉಬ್ಬಿದರು.

''ಸಂಪತ್ತು ಕೂಡಿಕೊಂಡು ಹೋಗಿ ಆ ಹೆಣ್ಣನ್ನು ಕೇಳಿದರೆ ಅಕಂಪರಾಜನಿಗೆ ಉತ್ಸಾಹ ಉಂಟಾದೀತು. ಆದ್ದರಿಂದ ನಾನು ಸೇನೆಯೊಂದಿಗೆ ಹೋಗುವೆನು'' ಎಂದು ಹೇಳಿದ ಮಂತ್ರಿಯು ಯುವರಾಜನನ್ನು ಬೀಳ್ಕೊಂಡನು.

ಎರಡು ಸಾವಿರ ಗಣಬದ್ಧರನ್ನು ರಾಜನ ಒತ್ತಿನಲ್ಲಿರಿಸಿ, ಮತ್ತೆರಡು ಸಾವಿರವನ್ನು ಕೂಡಿಕೊಂಡು ಅಷ್ಟಚಂದ್ರರೂ ದೊರೆಗಳೂ ಸೇರಿ ಸೇನೆ ಹೊರಟಿತು.

ನಯದಿಂದಲೇ ತರುವೆನೆಂದು ಬಂದು, ಊರಕೋಟೆಯ ಹೊರಗೆ ನಿಂತು, ಬಲು ತಂತ್ರಿಯಾದ ಆ ಮಂತ್ರಿಯು ಭಯದ ಶಾಸನವೊಂದನ್ನು ಬರೆದು ಅಕಂಪ ರಾಜನಿಗೂ ಮೇಘೇಶ್ವರನಿಗೂ ಕಳುಹಿಸಿದನು. ಒಡೆಯನ ಹೆಸರಿನಲ್ಲಿ ಕಳುಹಿಸಿದ್ದ ಆ ರಾಯಸದಲ್ಲಿ

''ಕಡುಚೆಲುವಿನ ಅಬಲೆ ಬಂಟಗೆ ಸಲ್ಲಳು; ಒಡೆಯನಿಗೆ ಅವಳನ್ನು ಸಂಗಡಿಸುವುದು'' ಎಂದಿತ್ತು ಇದನ್ನೋದಿದ ಅವರು ಕಂಗೆಟ್ಟರು.

''ನನ್ನ ಅಭಿಮಾನ ಹಾಳುಮಾಡುವುದು ಲೇಸೆ?'' ಎಂದು ಧ್ಯಾನಿಸಿ ಬಿನ್ನವತ್ತಳೆಯನ್ನು ಮೇಘೇಶ್ವರನು ಆದರಿಸದೆ ಕಳುಹಿಸಿದನು. ಅದನ್ನು ಮಂತ್ರಿಯು ನೋಡಿದನು. ಓಲೆಯನ್ನು ತಂದವನನ್ನು ತಡೆದುಕೊಂಡು, ಒಡೆಯನಿಗೆ ಒಬ್ಬ ಆಳಿನ ಕೈಯಲ್ಲಿ ಕಳುಹಿಸುವಂತೆ, ಪ್ರತಿ ವಾರ್ತೆಯು ಮೇಳೈಸಿ ಬಂದಿತು ಎಂದು. ಅವರ ಆಳಿನ ಕೈಯಲ್ಲೇ ಕಳುಹಿಸಿದನು.

''ಅನುಪಮವಾದ ಆನೆ ಕುದುರೆ ಹೆಣ್ಣು ನನಗಷ್ಟೆ? ನಿನಗೆ ಸಲ್ಲುವವೆ? ನಿನ್ನ ಮನೆಯ ವನಿತೆಯರನ್ನು ಬೇಡಲಿಲ್ಲ. ಅಭಿಮಾನವೆಂದು ಹೇಳಬೇಡ. ಧಾರೆಯಾಗದ ಮೊದಲೇ ಸೂಚಿಸಿರುವೆನು. ಅವಳು ನಿನ್ನ ನಾರಿಯಾಗುವುದು ಹೇಗೆ? ಆಕೆಯನ್ನು ನನಗೆ ಸೇರಿಸುವುದು. ನನಗಲ್ಲದಿದ್ದರೆ ಯುದ್ಧಕ್ಕೆ ಒಡ್ಡಿನಿಲ್ಲುವೆನು.''

ಎಂದಿರುವ ಒಸಗೆಯ ನುಡಿಯನ್ನು ಕೇಳಿ ಅವನು ಚಿಂತೆಗೊಳಗಾದನು.

''ಮಡದಿಯನ್ನು ಕೊಟ್ಟು ಜೀವಿಸುವುದು ಹೇಗೆ? ಒಡೆಯನೊಡನೆ ಯುದ್ಧವನ್ನು ಮಾಡುವುದಾದರೂ ಹೇಗೆ? ಹಿಡಿಯಬಾರದು, ಬಿಡಬಾರದು; ಇನ್ನು ಹೇಗಿರುವುದು'' ಎಂದು ಆ ಅಭಿಮಾನಿಯು ಮಿಡುಕಿ ಚಿಂತಿಸಿದನು.

''ತೋಳಲ್ಲಿರುವ ಅಬಲೆಯನ್ನು ಕೊಡಲು ನಾವೇನು ಅಬಲರೇ? ಸುಡು. ವಾಳೆ ಮೀಸೆಯನ್ನು ತಿದ್ದಿ ಬಾಳುವುದೆಂತು? ಅರಸು ಶಕ್ತಿಯಿಂದ ಒಯ್ಯುವುದಾದರೆ ಒಯ್ಯಲಿ. ನಾವೇನು ವರ್ತಕರೆ? ಒಕ್ಕಲಿಗರೆ? ಇಲ್ಲವೆ ಬ್ರಾಹ್ಮಣರೆ? ನನ್ನ ಪ್ರಾಣವೇ ಹೋಗಲಿ; ಹೆಣ್ಣನ್ನು ಕೊಡುವುದಿಲ್ಲ. ಮೂರ್ತಿ ಕೆಡುವುದಲ್ಲದೆ ಕೀರ್ತಿ ಕೆಡದು. ಹೆಣ್ಣನ್ನು ಪ್ರೀತಿಸಿದ ನನ್ನ ತಲೆಹೋಗಲಿ. ಇನ್ನು ಕೀರ್ತಿಗಾಗಿಯೇ ಸಾಯುವೆನು.''

ಎಂದು ಧೈರ್ಯದಿಂದ ಭರತ ಚಕ್ರವರ್ತಿಯ ಸುತರಿಗೆ ಇದಿರಾದನು.

ವಾರಣಾಸಿಯ ರಾಜನು ತನ್ನಲ್ಲೇ ಸಮರವನ್ನು ಒಪ್ಪಿಕೊಂಡನು. ಭೇರಿ ಸೂಳೈಸಿತು. ಊರ ಹೆಬ್ಬಾಗಿಲನ್ನು ಇಕ್ಕಿದರು. ಪಡೆಯಾಳುಗಳು ಉಬ್ಬಿನಿಂದ ಜಲದುರ್ಗದ ಏರಿಯನ್ನು ಹತ್ತಿದರು.

ತಮಗೆ ಇದಿರಾದರೆಂಬುದನ್ನು ತಿಳಿದು ಅಷ್ಟಚಂದ್ರರಿಗೂ ಆಗ್ಗದ ದೊರೆಗಳಿಗೂ ಕೋಪ ಮಸಗಿತು. ಇವರು ಕೂಡಲೇ ಪಡೆಗೂಡಿ ಕದನಕ್ಕೆ ನಡೆದರು. ಬಹುವಾದ್ಯಗಳು ನಡೆದು ಭಯಂಕರವೆನಿಸಿತು. ಕಲ್ಲುಗುಂಡು, ಅಂಬಿನ ಮಳೆಯನ್ನೇ ಕರೆದರು. ಅವರು ಬೊಬ್ಬಿರಿದು ಕೋಟೆಯ ನೆಮ್ಮಿ, ಅಂಬಿಂದ ಅಂಬುಗಳನ್ನೂ ಹರಿಗೆಗಳನ್ನೂ ತರಿದರು. ವಿಸ್ತಾರದ ಮರೆವಿಡಿದು ಒತ್ತಿದರು. ಕಾಳಗ ಹಿರಿದಾಗಿ ಹಣ್ಣಿತು. ಕಿರಿದಲ್ಲದ ರಕ್ತದ ಕಾಲುವೆ ಹರಿಯಬೇಕಾದ ರೀತಿಯದು. ಆದರೆ ಅವರ ಪುಣ್ಯದಿಂದ ಅದು ನಿಂತಿತು. ಆ ಲೀಲೆಯನ್ನು ಏನೆಂದು ಹೇಳುವುದು.

ಹಿಂದೊಮ್ಮೆ ಮೇಘೇಶ್ವರನು ಹಾವೊಂದು, ಮಡಿಯುತ್ತಿದ್ದಾಗ ಅದನ್ನು ಮನ್ನಿಸಿ, ಅದಕ್ಕೆ ಸದ್ಗತಿ ಮಾಡಿಕೊಟ್ಟಿದ್ದನು. ಅದರಿಂದ ಪನ್ನಗೇಶ್ವರನಾಗಿ ಬಾಳುತ್ತಿದ್ದ ಆತನು ಈಗ ಮೇಘೇಶ್ವರನ ಸನ್ನಿಧಿಗೆ ಬಂದನು. ಮಿತ್ರಾನುಕೂಲವಾದ ಆ ನಾಗರಾಜನು ವೈರಿ ಸೇನೆಯನ್ನು ಈಗಲೇ ಕೊಲ್ಲುವೆನೆಂದು ನುಡಿದನು.

''ಆ ರೀತಿ ಬೇಡ. ಇಂದು ನೀನಿಲ್ಲಿಗೆ ಬಂದುದು ಸಂತೋಷವಾಯಿತು. ಮುಂದೆ ಎಲ್ಲರಿಗೂ ಸಂತೋಷವಾಗುವ ಒಂದನ್ನೇ ಚಿಂತಿಸು. ಅವರನ್ನು ಕೊಂದು, ನಾನೂ ಅವರಿಂದ ಮಡಿವೆನೆಂದು ಯುದ್ಧತೊಡಗಿದೆನು. ಅದು ನಿಜವಾದರೂ ಈಗ ನೀನು ಬಂದಮೇಲೆ ಅವಧಿಯಿಂದ ತಿಳಿದು ನಮಗೂ ಅವರಿಗೂ ಒಳ್ಳೆಯದನ್ನು ಮಾಡು. ಒಡೆಯನ ಸೇನೆಯನ್ನು ಕೊಂದ ಮೇಲೆ ನಾವು ಉಳಿಯುವುದುಂಟೆ? ಅದರಿಂದ ನೀನೀಗ ಅಷ್ಟಚಂದ್ರರನ್ನೂ ಆ ಮಂತ್ರಿಯನ್ನೂ ಮಾತ್ರ ಹಿಡಿದು ಕಟ್ಟಿಕೊಡು. ನನಗೆ ಅಷ್ಟೇ ಸಾಕು'' ಎಂದು ಮೇಘೇಶ್ವರನು ಹೇಳಿದನು.

ಇದು ತನಗೊಂದು ಗಣ್ಯವೇ ಎಂದು ಪನ್ನಗೇಶ್ವರನು ಬೇಗ ಹಾರಿಹೋಗಿ, ನಾಗಪಾಶದಿಂದ ಕಟ್ಟಿ, ಆ ಒಂಬತ್ತು ಮಂದಿಯನ್ನು ಸದರದಿಂದ ಎಳೆದು ತರುತಿದ್ದನು. ಪನ್ನಗೇಶ್ವರನು ಅವರನೊಯ್ಯುವುದನ್ನು ಕಂಡು ಎರಡು ಸಾವಿರ ಗಣಬದ್ಧರು, ಉಗ್ರಾಸಿಗಳನ್ನು ಹಿಡಿದುಕೊಂಡು 'ಆ ಬಣಗನನ್ನು ಹಿಡಿಹಿಡಿ, ಹೊಡೆ ಹೊಡೆ' ಎಂದು ಆರ್ಭಟಿಸಿ, ಉದ್ರೇಕಗೊಂಡು ಬೆನ್ನಟ್ಟಿಕೊಂಡು ಬಂದರು. ಗೋಡೆ ಕಟ್ಟಿದಂತೆ ಒಟ್ಟಾಗಿ ಬಳಸಿಕೊಂಡು ಬರುವ ವೀರರನ್ನು ನೋಡಿ, ನಾಗೇಂದ್ರನು ಮೈಬೆವರಿ, ತನ್ನ ಕಾರ್ಯದ ಪಾಡುತಪ್ಪಿತು, ಎಂದು ಅವರನ್ನು ಬಿಟ್ಟು ತನ್ನ ಊರಿಗೆ ಓಡಿದನು.

ಗಗನದಿಂದ ಬೀಳುತ್ತಿರುವವರನ್ನು ಗಣಬದ್ಧರು ಅಂತು ಕಟ್ಟುಗಳನ್ನು ಬಿಡಿಸಿದರು. ಆ ಹೊತ್ತಿಗೆ ಅಲ್ಲಿ ಮಿಗಿಲಾದ ಹುಯ್ಯಲನ್ನು ಚಕ್ರಿಯ ಸುತರು ಕೇಳಿ, ಕಾಳಗವಾಯಿತೇ ಎಂದು ಯೋಚಿಸಿದರು. ಸಂದೇಹಗೊಂಡ ಆದಿರಾಜನು ತಾನು ತಿಳಿದು ಬರುವೆನೆಂದು ಅಣ್ಣನಿಗೆ ಹೇಳಿ, ದುಂದುಭಿಘೋಷಣ ಎಂಬ ಆನೆಯನ್ನೇರಿ ಬಹಳ ವಿಡಾಯದಿಂದ ಹೊರಟನು. ಸಾವಿರ ಗಣಬದ್ಧರನ್ನೂ ಸುರರನ್ನೂ ಅಗ್ರಜನ ಮೈಗಾವಲಿಗಿರಿಸಿ, ತನ್ನೊಡನೆ ಸಾವಿರ ಗಣಬದ್ಧರನ್ನು ಕರೆದುಕೊಂಡು ಬಂದು, ಅಲ್ಲಿ ಮೊದಲೇ ಇದ್ದ ಸೇನಾಸಾಗರವನ್ನು ಸೇರಿದನು.

ಆನೆಯ ಮೇಲೆ ಬರುತ್ತಿರುವ ಆದಿರಾಜನನ್ನು ಕಂಡು, ಆ ನಗರದ ಪಡೆಯು ಒಂದೇ ಒಂದು ಬಾಣವನ್ನೂ ಎಸೆಯದೆ, ನೋಡುತ್ತಿತ್ತು. ಆದಿರಾಜನ ಸೇನೆಯು ಅವನ ಕಡೆಗೆ ತಿರುಗಿತು. ಕೂಡಿದ ನೃಪರೂ ಮಂತ್ರಿಗಳೂ ಕೈಮುಗಿದರು. ಕಿರೀಟಿಯ ಸುಕುಮಾರನು ಅವರನ್ನು ನೋಡಿ, ''ಕೋಟೆಗೆ ಮುತ್ತಿಗೆ ಏಕೆ? ಹೆಣ್ಣನ್ನು ಈ ರೀತಿಯ ಕೊಂಡಾಟದಿಂದ ತರಬೇಕೆಂದು ಯಾರು ಹೇಳಿದರು?'' ಎಂದು ಕೇಳಿದನು.

ಆಗ ಅಲ್ಲಿದ್ದ ಸನ್ಮತಿ ಮಂತ್ರಿಯು ನಿಜವನ್ನು ಹೇಳಿದನು. ''ಠಕ್ಕರಿವರು ಸ್ವಾಮಿ, ಮೇಘರಾಜಗೆ ಆಕೆ ಮಾಲೆ ಹಾಕಿದಳು. ಆಗ ಇವರು ಚೊಕ್ಕ ಹೆಣ್ಣು ಅಣ್ಣಗಿರಲೆಂದು

ನೆನೆದರು; ನಾನು ಬೇಡವೆಂದೆನು. ಯುವರಾಜನಿಗೆ ಒಳ್ಳೆಯ ಹೆಣ್ಣನ್ನು ಬೇಡವೆಂದೆಯಾ — ಎಂದಿವರು ಕೇಳಿದರು. ಎಲ್ಲರೊಂದಿಗೆ ಕಷ್ಟವೇಕೆಂದು ನಿನ್ನೆಯಿಂದಲೇ ಮೌನವಾಗಿ ನೋಡುತ್ತಿದ್ದೆನು. ಮಡದಿಯನ್ನು ಕೊಡುವವರಾರು? ಆ ನೃಪನು ಕೂಡಲೇ ಕದನವನ್ನು ತೊಡಗಿದನು. ಮಂತ್ರಿಯನ್ನೂ ಅಷ್ಟಚಂದ್ರರನ್ನೂ ಜಡಿದು ಪನ್ನಗೇಶ್ವರನು ಒಯ್ಯುವಾಗ ಗಣಬದ್ಧರು ಅವನನ್ನು ಅಟ್ಟಿ ಈಗ ತಾನೇ ಬಿಡಿಸಿದರು. ಮುಂದಿನ ಸ್ಥಿತಿಯನ್ನು ದೇವರೆ ಬಲ್ಲಿರಿ.''

ಸನ್ಮತಿ ಹೇಳಿದ ಮಾತನ್ನು ಕೇಳಿ, ''ನಿಂದಿತಾರ್ಥವನ್ನು ಮಾಡಿದರಲ್ಲವೆ? ಜಿನ ಜಿನ'' ಎಂದು ಆದಿರಾಜನು ಚಿಂತಿಸಿದನು.

''ಸನ್ಮತಿ, ಹೋಗು. ಮೇಘೇಶ್ವರನ ಕರೆ'' ಎಂದು ಆದಿರಾಜನ ಅಪ್ಪಣೆಯಾದೊಡನೆ ಸನ್ಮತಿಯು ಸಂತೋಷದಿಂದ ಹೋಗಿ ಹೇಳಿದನು. ಸನ್ಮತವರಿದು ಅವನು ಬಂದು ಒಡೆಯನನ್ನು ನೋಡಿದನು. ಆಗ ಅವನಲ್ಲಿ ವ್ಯಾಕುಲೋನ್ಮಾದಗಳು ತೋರುತ್ತಿದ್ದುವು.'' ಬಣ್ಣಿತೆನುವ ಸ್ವಾಮಿ ದ್ರೋಹವನ್ನು ಮಾಡಿದವನನ್ನು ಕಣ್ಣಿಟ್ಟು ಕರೆಸಿದ್ದೇಕೆ?'' ಎಂದು ಕಣ್ಣೀರು ಗಳಗಳನೆ ಸುರಿಯುತ್ತಿರಲು, ಅವನು ಆನೆಯ ಮುಂದೆ ಅಡ್ಡಬಿದ್ದನು.

ವಿಜಯ, ಜಯಂತ, ಅಕಂಪ ಮುಂತಾದವರೂ ಬಂದು ಎರಗಿದರು. ಅದನ್ನು ಕಂಡು ಗಜದ ಮೇಲಿದ್ದೇ, 'ಏಳಿರಿ—ಏಳಿರಿ' ಎಂದ ಭೂಭುಜನ ಮಾತನ್ನು ಕೇಳಿ ಎಲ್ಲರೂ ಎದ್ದರು.

''ದೇವರ ಸೇನೆ, ಮೋಹರಗೊಂಡು ಕವಿದು ಸಾಹಸ ತೋರಿಸುವಾಗ ನಾನೇನು ದ್ರೋಹ ಮಾಡಿದೆನು? ಅಭಿಮಾನಕ್ಕಾಗಿ ಬಲ್ಲಿದರು ಸೇರುವರು. ಆಳುವ ಪ್ರಭುವೆ ತನ್ನ ಆಳಿನ ತೇಜದ ಪ್ರಭೆಯನ್ನು ಕೆಡಿಸುವೆನೆಂದು ಹೇಳಿದರೆ ಕಾಪಾಡುವವರಾರು? ಪರರು ತನ್ನ ಬಂಟನ ಮಾನಗೆಡಿಸದಂತೆ ವಿಚಾರಿಸುವ ದೊರೆಯು, ಬಂಟನ ಸತಿಗೆಳಸಿದರೆ, ಗುರುವೆಂದು ನಮಿಸ ಹೋದವರಿಗೆ ಆ ಗುರುವೆ ಕಾತರಪಟ್ಟರೆ, ಇನ್ನೆಂತೆ ಧರ್ಮ? ಕರುಣಿಸುವ ಒಡೆಯನೆ ಭೃತ್ಯನ ಭೂಮಿಗೂ ಮಾನಕ್ಕೂ ಎರಡಿಲ್ಲದಂಥ ಆಸೆ ಪಟ್ಟಾಗ, ಶರಣು ಹೊಕ್ಕವರ ಮೇಲೆ ದೇವಸ್ಥಾನ ಬಿದ್ದ ಪರಿಯಲ್ಲವೆ? ಅದು ನನ್ನ ಪಾಪದ ಫಲ. ಒಡೆಯನೆ ಬಂಟನ ಬಣ್ಣವನ್ನು ತೆಗೆಯಲು ಮಾಡಿದಾಗ, ತಿಳಿದ ಆಳು ಈ ಒಡಲನ್ನು ಹಿಡಿದುಕೊಂಡಿದ್ದರೆ ಅದು ಬಯಕೆ? ಆದ್ದರಿಂದ ಯುದ್ಧದಿಂದಾದರೂ ಈ ಮೈಯನ್ನು ಬಿಡುವೆನೆಂದು ನಾನು ಎಣಿಸಿದೆ. ನನ್ನ ಅಭಿಮಾನಕ್ಕಾಗಿ ಸಾಯದ ನಾನು, ನಾಳೆ ಹೊನ್ನಿತ್ತನೆಂದು, ಮಣ್ಣಿತ್ತನೆಂದು ನಿನ್ನ ಅಭಿಮಾನಕ್ಕಾಗಿ ಸಾಯುವೆನೆ? ಇದಿರಾದೇನು. ಇನ್ನು ನೀನು ಮಾಡುವುದನ್ನು ಮಾಡು.''

ಎಂದು ದೀನವಾಗಿ, ಕಣ್ಣೀರು ಕರೆದು, ಅಳುತ್ತ ಅಳುತ್ತ ಮಾತನಾಡುತ್ತಿದ್ದ ಮೇಘೇಶನಲ್ಲಿ ಅಭಿಮಾನದ ಕೆಚ್ಚು ಹೆಚ್ಚಿದಂತೆ ಮಾತು ಕಿಡಿಯಂತಾಗ ತೊಡಗಿತು.

''ಅಳ್ಳನ ಸುತರಿಗೆ ಅಂಜಿದೆನೆ? ಅನ್ಯನೃಪರು ಬಾಳನ್ನು ತೋರಿಸಿ ಸೆಣಸಿದರೆ ಅವರನ್ನು ಸೀಳಿ, ದಿಕ್ಕುಗಳಿಗೆ ಬಲಿಗೊಡದೆ ಬಿಡುವೆನೆ?'' ಎಂದು ಅತಿರೋಷತಾಳಿ, ಹಲ್ಲು ಮೊರೆದನು.

''ಹೌದು, ನಿನ್ನ ಎದುರಲ್ಲೇ ಇದನ್ನು ಎಣಿಸಿರುವೆನು. ಪರರು ನನ್ನನ್ನು ಕೆಣಕಿದರಾದರೆ, ಆ ಕೂಡಲೇ ರಣಭೂತಕ್ಕೆ ಉಣಲಿಕ್ಕಿ ಬಿಡೆನೇ?'' ಎಂದು ಮೀಸೆ ಕುಣಿದಾಡಿಸಿ ನುಡಿದನು ಆ ವೀರ. ''ಮೈಯೊಡ್ಡಿ ನಿಂತ ಅರಿಗಳನ್ನು ಗೆಲ್ಲಲಾರದೆ ಒಡೆಯಗೆ ಹುಯ್ಯಲನ್ನು ಹೇಳುವಾಗ ಹೋಗೆನು. ಅಯ್ಯಯ್ಯೋ ನಾನೊಬ್ಬ ವೀರನೆ ನೋಡು? ನಿನ್ನಯ್ಯನು ಪಾಲಿಸಿದ ವೀರನೆ? ನನ್ನ ರಾಯನೆ, ನಿನ್ನ ಅಹಿತರ ಮೇಲೆ ನನ್ನನ್ನು ನೀನು ಈ ರೀತಿ ಆಯಾಸಗೊಳಿಸುವುದೆ?'' ಎಂದನು.

''ನೋಯದಿರು ಮೇಘೇಶ, ನನ್ನ ಅಭಿಪ್ರಾಯವನ್ನು ಕೇಳು'' ಎಂದು ಆದಿರಾಜನು ನುಡಿದನು.

''ಮಾಲೆಯನ್ನು ಹಾಕಲಿಲ್ಲವೆಂದು ಇವರು ನಮ್ಮನ್ನು ಬಾಳ್ಪಸಲು ಒಪ್ಪಿದೆವಷ್ಟೆ? ಕಾಳಗ ಮಾಡಿ ಅನ್ಯರ ಅಬಲೆಯನ್ನು ತರುವುದೆಂದು ದಾಳಿಯನ್ನು ಬಿಡುವೆವೆ ನಾವು? ಆರ ಹೆಂಡಿರನ್ನು ಆರು ಬೇಡುವುದು? ಪರನಾರೀ ಸಹೋದರರೆಂಬ ನೇರವಾದ ಬಿರುದನ್ನು ಬಿಸಾಡಿ, ಬಾಳುವೆವೆ? ನಮ್ಮ ಚಾರಿತ್ರ್ಯದ ಒಳಗನ್ನು ನೀನು ತಿಳಿದುಕೊ? ಹೆಂಡಿರನ್ನು ಯಾರು ಕೊಡುತ್ತಾರೆ? ಒಮ್ಮೆ ಕೊಟ್ಟರೂ ಅವರುಂಡ ಎಂಜಲಿನಂತಿರುವವರನ್ನು ಮಂಡಲೇಶ್ವರರು ಕೈಕೊಳ್ಳುವರೆ? ನಾವೇನು ಮಲೆಯಾಳ ಭಂಡರೆ? ತುಳುವರೆ? ಅದಲ್ಲ, ನೀವು ಅಣ್ಣ ತಮ್ಮಂದಿರು ನಮಗೆ ಮಾಡಿದ ಸೇವೆ ಸ್ವಲ್ಪವೆ? ನಿಮ್ಮ ಹೃದಯವನ್ನು ನೋಯಿಸಿದಾಗ ನಾವೇನು ಕೋವಿದರೆ? ಲೇಸನ್ನು ಅರಿಯದವರಷ್ಟೆ''

ಆದಿರಾಜನು ಒಂದಿಷ್ಟು ನಿಧಾನಿಸಿ, ತನ್ನ ಮಾತನ್ನು ಮತ್ತೆ ಮುಂದುವರಿಸಿದನು.

''ನಾವೆಲ್ಲರೂ ನಮ್ಮಯ್ಯನ ಒತ್ತಿನಲ್ಲಿದ್ದೆವು; ನಾಡನ್ನು ನೀವು ಸಾಧಿಸಿತಂದಿರಲ್ಲವೆ? ನೀವು ಮಾಡಿದ ಸೇವೆಯು ತಿಳಿದೇ ಇದೆಯಲ್ಲವೆ; ಬಿಡು; ಇನ್ನು ಆ ಮಾತು ಬಿಡು. ನಮಗಿಂದು ಅಕಂಪಾಂಕನು ಕಡುಭಕ್ತಿ ಮಾಡಿದನಲ್ಲವೆ? ತೊಡಗಿದ ಮದುವೆಗೆ ಕಿಸುರನ್ನಿಟ್ಟಾಗ ಅರ್ತಿಗೆಡುಕರಲ್ಲದೆ ನಾವು ನೃಪರೆಂತಾದೇವು? ಇದಕ್ಕೆ ನಾವು ಒಪ್ಪಿದೆವಾದರೆ ಅಪ್ಪಾಜಿಯ ಮೃದುಪಾದಪದ್ಮಂಗಳಾಣೆ; ನಮ್ಮನ್ನು ಮೀರಿ ಇವರಿಂತು ಮಾಡಿದರೆ ಅದಕ್ಕೇನಾಯ್ತು? ಕೇಳು; ಅವರಿಗಾಜ್ಞೆಯನ್ನು ಮಾಡಲು ನಾನು ಅರಸಲ್ಲ, ಯುವರಾಜನ ಒತ್ತಿಗೆ ಹೋಗುವ. ಕವಿದ ಚಿಂತೆಯನ್ನು ಬಿಡು. ನನ್ನಾಣೆ ಬಿಡು'' ಎಂದಾಗ ಮೇಘರಾಜನು ಮಹೋತ್ಸವಗೊಂಡನು.

ಹರಿದುದು ಚಿಂತೆಯೆಂದು ಅನುಜರೂ ಮಾವನೂ ಕೂಡಿದಂತೆ ಮತ್ತೆ ಮೇಘೇಶನು ಅಡ್ಡಬಿದ್ದನು. ಆದಿರಾಜನಾಗಿ, ತಾನೇ ಪ್ರತ್ಯಕ್ಷ ಭರತೇಶನೇ ಎಂಬಂತೆ ಪರಿಪರಿಯ ಉಡುಗೊರೆಗಳನ್ನು ನೀಡಿದನು.

ಆದಿರಾಜನು ಮತ್ತೊಂದು ಕಾರ್ಯವನ್ನು ನೆನೆದು ಸನ್ಮತಿ ಮೇಘೇಶ ಮುಂತಾದವರನ್ನೆಲ್ಲ ಒತ್ತಿಗೆ ಕರೆದುಕೊಂಡನು.

''ವಿಜಯ, ಜಯಂತರೆ ಕೇಳಿ, ಮಂತ್ರಿಗಳೇ ಕೇಳಿ, ಅಕಂಪಾಂಕ, ಮೇಘೇಶರೆ ಕೇಳಿ,'' ಎಂದು ಆದಿರಾಜನು ಒಬ್ಬೊಬ್ಬರನ್ನೇ ಕರೆದು ಅವರೆಲ್ಲರೊಡನೆ ಒಂದೇ ಮಾತನ್ನು ಕೇಳಿದನು.

'ಕೆಡುವ ಬಾಳನ್ನು ಬಾಳಿಸುವುದು ಲೇಸೋ, ಹಾಳುಮಾಡುವುದು ಲೇಸೋ?'

''ಕೆಡುವುದನ್ನು ರಕ್ಷಿಸಬೇಕಲ್ಲದೆ, ಅದನ್ನು ಕುಟ್ಟಿ ಕೆಡಿಸಬಹುದೆ?'' ಎಂದವರು ಒಪ್ಪಿಕೊಂಡರು. ''ಈ ಮಾತನ್ನು ನೀವು ಕಡೆವಟ್ಟು ಬಿಡಲಾಗದು'' ಎಂದಾಗ ''ಬಿಡೆವು'' ಎಂದವರು ಆಶ್ವಾಸನೆ ಕೊಟ್ಟರು.

''ಈ ಅಷ್ಟಚಂದ್ರರ, ಈ ಉದ್ದಂಡಮತಿಯ ಮಾತನ್ನು ಕೇಳಿದರೆ, ಅವರನ್ನು ದೇಶಭ್ರಷ್ಟರನ್ನಾಗಿ ಮಾಡೆಂದೇ ಅಯ್ಯನು ಹೇಳುವನು. ಅಷ್ಟಕೊಡುಗೆ ದೊರೆತವರು ದೀಕ್ಷೆ ಕೊಳ್ಳುವರು. ಇಷ್ಟು ನಿಮ್ಮಿಂದ ಆಗಬೇಕೆ? ಇವರು ಬಹಳ ನೋವನ್ನುಂಟುಮಾಡಿದರು ಇವರಿಗೆ ಆಜ್ಞೆಯನ್ನು ಕೊಡೋಣವೆಂದರೆ, ಇವರು ಮೊದಲೇ ಕೆಟ್ಟವರಲ್ಲವೆ? ಆದ್ದರಿಂದ ಕುಲಪಕ್ಷದಿಂದ ಇವರನ್ನು ಮರೆತುಬಿಡುವೆವು'' ಎಂದುದಕ್ಕೆ ಅವರೆಲ್ಲರೂ ಒಪ್ಪಿದರು.

''ಯುವತಿಯನ್ನು ತರಲೆಂದು ಬಂದವರು, ಈಗ ಹೋಗಿ ಅಣ್ಣಾಜಿಯವರನ್ನು ಮನ್ನಿಸುವುದು ಹೇಗೆ?'' ಎಂದು ಆದಿರಾಜಗೊಂದು ಸಮಸ್ಯೆಯುಂಟಾಯಿತು. ''ಕುವರಿಯೊಬ್ಬಳಿದ್ದಾಳೆ. ಆವಳನ್ನು ಕೊಡುವೆನು'' ಎಂದು ಕಾಶಿಯ ರಾಜನು ಆ ಸಮಸ್ಯೆಯನ್ನು ನಿವಾರಿಸುವಂತೆ ವಿವರಿಸಿದನು.

''ಸುಲೋಚನೆಗಿಂತಲೂ ಆಕೆ ಶೋಭಾಂಗಿ. ಸ್ವಯಂವರದಿಂದ ಪತಿಯನ್ನಾರಿಸೆಂದರೆ ಅದೇಕೋ ತನಗದು ಬೇಡವೆಂದಳು'' ಎಂದು ಕಾಶಿರಾಜನು ಹೇಳಿದೊಡನೆ, ಅಣ್ಣನಿಗೆ ಆ ಕಾಂತೆ ತಕ್ಕವಳೆಂದು ಆದಿರಾಜನು ನುಡಿದನು.

ಅಷ್ಟರಲ್ಲಿ ಇನ್ನೊಂದು ಕಂಟಕ ಎದುರಾಯ್ತು ಅಷ್ಟಚಂದ್ರರಿಗೆ, ಮೇಘೇಶರಿಗೆ ನಂಟುಮಾಡುವುದು ಹೇಗೆಂಬುದೆ ಆ ಕಂಟಕ. ಇದನ್ನೂ ಕಾಶಿರಾಜನು ನಿವಾರಿಸಿದನು. ''ಎಂಟು ಮಂದಿಗೆ ಎಂಟು ಹೆಣ್ಣುಗಳನ್ನು ಕೊಡುವೆನು. ನಮ್ಮ ವಂಶದಲ್ಲಿ ಇನ್ನೂ ಹೆಣ್ಣುಗಳಿದ್ದಾರೆ'' ಎಂದು ಕಾಶಿರಾಜನು ಭರವಸೆಯಿತ್ತನು.

ಆದಿರಾಜಗೆ ಸಂತೋಷವಾಯ್ತು ''ಪುರೆ, ಭಾಪುರೆ'' ಎಂದವನು ಹೇಳಿಕೊಂಡನು. ಅಷ್ಟಚಂದ್ರರಿಗೂ ಮೇಘೇಶನಿಗೂ ಇದನ್ನು ತಿಳಿಸಿದಾಗ ಅವರೂ ಒಪ್ಪಿಕೊಂಡರು. ಲೇಸನ್ನಾಡಿದ ಅರಸು ಮಕ್ಕಳ ರೀತಿಯದು. ಉದ್ದಂಡಮತಿಗೂ ಸನ್ಮತಿಗೂ ಸಂತೋಷವನ್ನುಂಟುಮಾಡಿ, ಇದ್ದವರನ್ನೆಲ್ಲ ಕೂಡಿಕೊಂಡು ಆದಿರಾಜನು ಯುವರಾಜನೆಡೆಗೆ ಹೊರಟನು. ಅಂತು ಆದಿರಾಜನು ಜಗದ ಜಾಣರನ್ನೇ ಗೆದ್ದನು.

ದುಂದುಭಿ ಘೋಷಣವೆಂಬ ಆನೆಯಿಂದಿಳಿದ ಆದಿರಾಜನು ಸರ್ವರನ್ನೂ ಕೂಡಿಕೊಂಡು ಅಗ್ರಜನಿಗೆ ಕೈಮುಗಿದನು. ಆಗ ಅರ್ಕಕೀರ್ತಿಯು, ಮೇಘೇಶನು ಎಲ್ಲರೊಂದಿಗೆ ಕೂಡಿಬಂದುದನ್ನು ಕಂಡು, ಆ ಹೆಣ್ಣು ನಿಂತಿತೆಂದು ತಿಳಿದನು. ''ಹೆಣ್ಣು ಇತ್ತಲಾದರೆ, ಅದರಿಂದಿವನು ನಾಚಿ ಬರುತ್ತಿರಲಿಲ್ಲ; ಹೆಣ್ಣು ಅತ್ತಲಾದುದು'' ಎಂದೇ ಯುವರಾಜನು ಭಾವಿಸಿದನು. ಅದರಂತೆ, ''ನಿಮ್ಮ ಕಾರ್ಯವೇನಾಯಿತೆಂದು ಬಣ್ಣಿಸಿ'' ಎಂದು ಮಣ್ಣನೆ ಕೇಳಿದನು. ಎಲ್ಲರೂ ನೋಡುತ್ತ ಸುಮ್ಮನಿದ್ದರು. ಅಷ್ಟರೊಳಗೆ

ಆದಿರಾಜನು ಆಲಸ್ಯವನ್ನು ಮಾಡದೆ, ದುಷ್ಟರು ಮಾಡಿದ ಮೋಸವನ್ನು ಮರೆಯಿಸಿ ಸರಿಮಾಡಿಕೊಂಡು ಮಾತನಾಡಿದನು.

''ದೇವರು ಅವಧರಿಸಿ. ಈ ಹೊತ್ತು ಇವರು ಹೋಗುವುದರೊಳಗೆ ಆ ಕನ್ನೆ ಸಮಸ್ತ ಬಾಂಧವರ ಅನುಮತಿಯಿಂದ ಅವನಿಗೆ ಹೂಮಾಲೆಯನ್ನು ಸುವಿಧಾನದಲ್ಲೇ ಹಾಕಿದ್ದಳು. ಈಗ ಇವರೆಲ್ಲ ಒಂದು ಒಸಗೆಯನ್ನು ಬಿನ್ನವಿಸುವುದಕ್ಕಾಗಿ ಬಂದಿರುವರು. ಕೂಡಲೇ ಒಂದು ಕಾರ್ಯವನ್ನು ತಿಳಿಸಿದರು. ಅದಕ್ಕೆ 'ನಿಮ್ಮ ಒಡೆಯರನ್ನೇ ಕೇಳುವುದು' ಎಂದೆ. ಅಡಗಿಸಿ ಇಡುವುದೇಕೆ ಉದ್ಧಂಡಮತಿ? ಹೇಳು. ಸನ್ಮತಿ ನೀನೂ ನುಡಿ'' ಎಂದು ಜಾಣನಾದ ಕುಮಾರನು ತಿಳಿಸಿದನು.

''ಸ್ವಾಮಿ, ಬಿನ್ನಹ. ಕಾಶಿರಾಜನಿಗೆ ಇನ್ನೊಬ್ಬ ಕೋಮಲಾಂಗದ ಪುತ್ರಿಯಿರುವಳು. ಆ ಮದವತಿಯನ್ನು ಸ್ವಾಮಿಗೆ ಸಂಬಂಧಿಸುವ ಪ್ರೀತಿಯನ್ನವನು ತೋರಿಸಿದ್ದಾನೆ'' ಎಂದು ಅವರೆಲ್ಲರೂ ನುಡಿದರು.

ಅದಕ್ಕೆ ಅರ್ಕಕೀರ್ತಿಯು ನಸುನಕ್ಕನು. ''ಸಾಕು, ಆ ಮಾತು ಹೋಗಲಿ, ಈಗ ನಿಮ್ಮ ಒಸಗೆಯನ್ನು ಮಾಡಿರಿ'' ಎಂದು ಹೇಳಿದನು.

''ಹಸನಾಯ್ತುಸ್ವಾಮಿ. ನಿನ್ನ ಉದ್ವಾಹವೇ ನಮ್ಮ ಒಸಗೆ'' ಎಂದು ಹೇಳುತ್ತ ಅವರೆಲ್ಲ ಅರ್ಕಕೀರ್ತಿಗೆರಗಿದರು.

''ಇಂದು ಎಲ್ಲರನ್ನು ಕಳುಹಿಸಲು ಚಿತ್ತೈಸು. ಒಸಗೆಯನ್ನು ನಾಳೆ ಸಂಗೊಳಿಸುವುದು ಎಂದು ತಮ್ಮನು ನುಡಿದನು. ಕೂಡಲೇ ಎಲ್ಲರನ್ನೂ ಕಳುಹಿಸಿ ಬಿಟ್ಟನು. ಅಂದಿನ ದಿನ ಹೋಯಿತು. ಬೆಳಗಾಗಲು ಮದುವೆ ಪ್ರಾರಂಭವಾಯಿತು. ಹಗಲು, ಸ್ನಾನ ಊಟಗಳಿಗೆ ಹೋಯಿತು. ರಾತ್ರಿಗೆ ಧಾರೆಗೆ ಅನುಕೂಲವಾಯಿತು. ಸುಗಮ ವನದಲ್ಲಿರುವ ಮನೆಗೆ ಕಾಶಿರಾಜನು ತನ್ನ ಮಗಳನ್ನು ಸಿಂಗರಿಸಿ ಕರೆತಂದನು.

ಆ ಕನ್ನೆಯು, ಅಂಗದ ಕೋಮಲದಿಂದಲೂ, ಕೋಮಲದೊಡನೆ ತರಂಗಿಸುವ ತನು ಕಾಂತಿಯಿಂದಲೂ ಶೃಂಗಾರರಸವು ತಾನೇ ಸ್ತ್ರೀ ರೂಪವನ್ನು ಧರಿಸಿದ ಬೆಡಗಿನಲ್ಲಿದ್ದಳು. ಏರುವ ಯೌವ್ವನ, ಅದಕ್ಕೆ ಅನುಕೂಲವಾದ ಶೃಂಗಾರವನ್ನು ಪಡೆದ ಶೃಂಗಾರ. ಯುವರಾಜನ ಚಿತ್ತವನ್ನು ಸೂರೆಗೊಳ್ಳುವಂತೆ ಆ ನೀರೆಯು ಲೀಲೆಯಲ್ಲಿದ್ದಳು. ನಗೆಮೊಗ, ಬಗಸೆಗಣ್ಣು ನಿಡತೋಳು—ಇವುಗಳಿಂದವಳು ಕಡು ಚೆಲುವೆಯಾಗಿದ್ದಳು. ಯುವ ರಾಜನಿವಳನ್ನು ಮೊದಲು ಮಾಡಿದ ತಪದಿಂದ ಪಡೆದನೋ ಎನ್ನುವಂತಿದ್ದಳು. ಪ್ರೀತಿಯಿಂದ ಬಣ್ಣಿಸಹೊರಟರೆ ಹೆಚ್ಚಾದೀತು. ಆ ಮಾತು ಹಾಗಿರಲಿ, ನಾಡ ಮಾತೆ ಸಾಕು. ಅಮರಕಾಂತೆಯರಾದರೂ, ಒಮ್ಮೆ ಆಕೆಯನ್ನು ಕಂಡರೆ, ದೃಷ್ಟಿ ತಾಗುವಂತಿದ್ದಳು. ಆ ಕಾಂತೆ ಲಕ್ಷ್ಮೀಮತಿಯೆಂಬವಳು. ಲಕ್ಷ್ಮಿಯೂ ಆಕೆಗೆ ಪಾಸಟಿಯಲ್ಲ, ಏಕೆಂದರೆ ಆ ಲಕ್ಷ್ಮಿ ಸರ್ವರಿಗೂ ಒಲಿದವಳು. ಇವಳಾದರೆ ಮೀಸಲು ಹೆಣ್ಣಾಗಿದ್ದಳು. ತುಂಬಿ ಸ್ವಯಂವರವಾದರೆ, ತನ್ನನ್ನು ಹಲವರು ಬಯಸುವರೆಂದು, ಸ್ವಯಂವರವನ್ನೆ ಡೊಂಬಿಯೆಂದು ತಿರಸ್ಕರಿಸಿದಳು ಎಂದು ಹೇಳುವಾಗ ಡಂಬದ ಹೆಣ್ಣು ಆಕೆಗೆ ಎಣೆಯೇ?

ಚೆನ್ನಾದ ಚೆಲುವನನ್ನೇ ಬಯಸಿ, ಸರ್ವರಿಗೆ ವೈಗಾಣಿಸದೆ ಗೂಢವಾಗಿರಲು ಭೂಮಿಗೇ ಚೆನ್ನಿಗನೂ ಅತಿ ಸಿರಿವಂತನೂ ಆದವನೇ ದೊರೆಕೊಂಡನು. ಶೀಲಪಾಲರಿಗೆ ಇಲ್ಲದ್ದುಂಟೆ? ಅರಸುಗಳನ್ನೆಲ್ಲ ಕೂಡಿಸಿ, ಸುಲೋಚನೆಯು ಅಲ್ಪನನ್ನು ಪುರುಷನನ್ನಾಗಿ ಪಡೆದಳು. ಈಕೆ ಭರತಚಕ್ರೇಶನ ಸುತನಿಗೆ ಸತಿಯಾದಳು. ಸೌಭಾಗ್ಯವೆಂದರೆ ಬೇರುಂಟೆ!

ವನದಲ್ಲಿ ವಸಂತರಾಜನು ರತಿದೇವಿಯನ್ನು ತಂದು ಮನ್ಮಥರೂಪನಿಗೆ ಮಗಳನ್ನು ಕೊಟ್ಟನು. ಮಂಗಳಾಷ್ಟಕ, ಧಾರೆ, ಹೋಮ, ಮುಂತಾದ ಕ್ರಮಗಳಿಂದ ಸತಿಯ ಕೈ ಹಿಡಿದು, ನೆರೆದವರೆಲ್ಲ ನೋಡುತ್ತಿರಲು ಕಳುಹಿಸಿದನು. ಲೀಲಾಂಗನಾದ ಅರ್ಕಕೀರ್ತಿಯು ಸತಿಯೊಂದಿಗೆ ರಾಜಗೃಹವನ್ನು ಹೊಕ್ಕನು. ಮರುದಿನ ಮೇಘರಾಜನಿಗೂ ಸುಲೋಚನೆಗೂ ಏರಕವುಂಟಾಗಿ ವಿವಾಹವಾಯಿತು. ಅಷ್ಟಚಂದ್ರರಿಗೂ ಸರೂಪರಾದ ಅಷ್ಟಕನ್ಯೆಯರೊಂದಿಗೆ ಮದುವೆಯಾಯಿತು.

೪

# ನಾಗರ ಸಲ್ಲಾಪ

ಮದುವೆಯಾದ ಏಳೆಂಟು ದಿನದ ಮೇಲೆ ಆದಿರಾಜನು ಅಣ್ಣನ ಸದನವನ್ನು ಹೊಕ್ಕನು. ಅಂದು ಆಷ್ಟಚಂದ್ರರೂ ಮಂತ್ರಿಯೂ ಮಾಡಿದ ಕುತಂತ್ರವನ್ನು ತಿಳಿಸಿದನು. ಅದನ್ನು ಕೇಳಿದೊಡನೆ ಅರ್ಕಕೀರ್ತಿಯು, ಭುಗಿಲೆನ್ನುವಂತೆ ಕೋಪಿಸಿದನು. ತಮ್ಮನ ಮುಖವನ್ನು ನೋಡಿದನು, ದುಷ್ಟರಿಗೆ ಕರುಣಿಸಿದ ಮೇಲೆ ಏನೆಂದು ಹೇಳಲಿ? ಒಂದು ಬಾರಿಗೆ ಹೋಗಲಿ ಎಂದು ಯುವರಾಜನು ನುಡಿದನು.

ಅವರು ತಮ್ಮ ಸುಖಕ್ಕಾಗಿ ನೆನೆದರೆ? ಹೆಣ್ಣು ದೇವರ ಸೊತ್ತಾಗಲೆಂದು ನೋಡಿದರು. ನಮ್ಮ ವಂಶದಲ್ಲಿ ಹುಟ್ಟಿದವರಷ್ಟೆ. ಅದು ತಪ್ಪಾದರೂ ಒಮ್ಮೆಗೆ ಪಾಲಿಸಿರಿ ಎಂದು ಆದಿರಾಜನು ಅಣ್ಣನನ್ನು ಸಮಾಧಾನ ಪಡಿಸಿದನು. ಆದಿದೇವರ ಬಗೆಯು ಅಸಮಾನವಾದುದು ಎಂದು ಅಣ್ಣನು ನಸುನಕ್ಕು ತಮ್ಮನನ್ನು ಕಳುಹಿಸಿದನು.

ಬಿಸಿನೆತ್ತರು ಚೆನ್ನಾಗಿ ಹರಿಯುವಂತೆ ಯುದ್ಧವಾಯಿತೆಂದು ದಿಕ್ಕು ದಿಕ್ಕಿಗೂ ವಾರ್ತೆ ಹಬ್ಬಿತು.

ತಾಯಿಯಿಂದಲೂ ಸೋದರಮಾವನ ಪ್ರೇಮವು ಹೆಚ್ಚಿನದೆಂಬುದು ಸುಳ್ಳಲ್ಲ, ಭಾನುರಾಜ ವಿಮಲರಾಜರು ಆಷ್ಟು ಹೊತ್ತಿಗೆ ಅಲ್ಲಿಗೆ ಬಂದು ಆಯಾಸಗೊಂಡರು. ಬಂದಿರುವ ಮಾವಂದಿರಿಗೆ ಅರ್ಕಕೀರ್ತಿಯು ವಿನಯದಿಂದ ಮರ್‍ಯಾದೆ ಮಾಡಿದನು. ಮತ್ತೊಂದು ಹಗಲಿನಲ್ಲಿ ಅರ್ಕಕೀರ್ತಿ ಕುಮಾರನು ಓಲಗದಲ್ಲಿ ಮೆರೆದನು. ಅರಸರೆಲ್ಲ ಸಭೆಯಲ್ಲಿ ತಮ್ಮ ತಮ್ಮ ಸ್ಥಾನದಲ್ಲಿದ್ದು ಯುವರಾಜನನ್ನು ಓಲೈಸಿದರು.

ಸಭೆಯಲ್ಲಾಗ ಉದಯರಾಗದಲ್ಲಿ ಆತ್ಮರಾಗವನ್ನು ಹಾಡಿದರು. ಆಷ್ಟರಲ್ಲಿ ದೂರದಿಂದ ವಾದ್ಯದ ದನಿಯು ಕೇಳಿತು. ಕೂಡಲೇ ಅದರ ವಿಚಾರವು ಆಯಿತು. ಒಬ್ಬನು ಬನದ ಹೊರಗೆ ಹೋಗಿ ನೋಡಿಕೊಂಡು ಬಂದನು. ಹಲವು ವಿಮಾನಗಳು ಬರುತ್ತಿವೆಯೆಂದೂ, ಮುಂದೆ ಒಂದು ವಿಮಾನ ಬರುತ್ತಿದೆಯೆಂದೂ ಆವನು ಹೇಳಿದನು. ಆವನು ಹಾಗೆ ನುಡಿದು ನಿಲ್ಲುವಷ್ಟರಲ್ಲಿ ವಿಮಾನವನ್ನು ಬಹಳ ಬೇಗನೆ ನೂಕಿಕೊಂಡು ಬಂದ ಮನುಷ್ಯನೊಬ್ಬನು ಕೆಳಗಿಳಿದು ಯುವರಾಜನಲ್ಲಿಗೆ ಬಂದು ದೂರದಿಂದಲೇ ನಮಸ್ಕಾರ ಮಾಡಿದನು. ಬರುತ್ತಿರುವವನು ನಾಗರಸಖನೆಂದು ಆವನು ತಿಳಿಸಿದನು. ಯುದ್ಧದ ವಿಶೇಷವಾದ ಸುದ್ದಿಯನ್ನು ಕೇಳಿ ಚಕ್ರೇಶ್ವರನು ಕಳುಹಿಸಿರಬೇಕೆಂದು ಅಲ್ಲಿದ್ದವರೆಲ್ಲ ಹೇಳಿದರು. ಅವರು ಆ ರೀತಿಯಲ್ಲಿ ನೆನೆಯುವಷ್ಟರಲ್ಲಿ ನಾಗರಾಂಕನು ತನ್ನವರನ್ನೆಲ್ಲ ಹೊರಗೆ ನಿಲ್ಲಿಸಿ ಯುವರಾಜನಲ್ಲಿಗೆ ಬಂದನು.

"ದೇವ ಪರಾಕು, ನಾಗರಸಖನು ಬಂದನು ಎಂದು ವೇತ್ರಧಾರಿಗಳು ಸ್ವರವೆತ್ತಿ ಹೇಳುತ್ತಿರಲು ನಾಗರಸಖನು ಚಾವಡಿಯೊಳಗೆ ಬಂದು ಯುವರಾಜನಿಗೆ ನಿವಾಳಿಯಿಟ್ಟು, ಕಾಣಿಕೆ ಕೊಟ್ಟು ಸಾಷ್ಟಾಂಗವೆರಗಿದನು. ಅನಂತರ ಇಟ್ಟ ಕಾಣಿಕೆಗಳ ವಿವರವನ್ನೂ ತಿಳಿಸಿದನು.

"ಇದು ಮಂತ್ರಿ ಕೊಟ್ಟ ಕಾಣಿಕೆ, ಇವು ದಕ್ಷಿಣಾಂಕರೇ ಮೊದಲಾದ ಸಖರು ಭಕ್ತಿಯಿಂದ ಕೊಟ್ಟವುಗಳು" ಎಂದು ಹೇಳುತ್ತ ನಾಗರಸಖನು ಮತ್ತೊಮ್ಮೆ ನಮಸ್ಕರಿಸಿದನು. "ಇತ್ತ ಬಾ ನಾಗರ, ಕುಳಿತುಕೊಳ್ಳು, ಎಂದು ಯುವರಾಜನು ಅವನ ಒತ್ತಿನಲ್ಲಿರುವ ಆಸನವನ್ನು ತೋರಿಸಿದನು. ನಾಗರನು ಹತ್ತಿರದಲ್ಲೇ ಇದ್ದ ಆದಿರಾಜನಿಗೂ ಓಜೆಯಿಂದ ನಮಸ್ಕರಿಸಿ ಕುಳಿತುಕೊಂಡನು."

"ನಮ್ಮ ನಾಗರನ ಒಂದು ಪ್ರೀತಿಯನ್ನು ನೋಡಿರಿ. ನಾವು ನಾಡುಗಳನ್ನು ನೋಡಲೆಂದು ಬಂದಿರುವಾಗ ನಮ್ಮನ್ನು ನೋಡಲೆಂದು ಬಂದಿರುವನು" ಎಂದು ಯುವರಾಜನು ಅಲ್ಲಿದ್ದ ಅರಸರೊಂದಿಗೆ ನುಡಿದನು.

"ಒಡೆಯ ನಿಮ್ಮನ್ನು ಯಾರು ಅಗಲಿ ಇದ್ದಾರು? ನಿಮ್ಮ ಓಲಗವು ಯಾರ್‍ಯಾರ ಮನಸ್ಸನ್ನು ಸೋಲಿಸದು? ನಾಗರೋತ್ತಮನು ಬಾರದಿರುವುದುಂಟೆ?" ಎಂದು ಆ ರಾಜರು ಪ್ರೀತಿಯಿಂದ ನುಡಿದರು.

"ನಾಗರ ಕೇಳು, ಸ್ವಾಮಿಗೆ ಕುಶಲವೆ? ಅರಮನೆಯಲ್ಲಿ ಎಲ್ಲರಿಗೂ ಕುಶಲವೆ? ಆಕಾಶದಲ್ಲಿ ಬಂದುದೇಕೆ? ಇಷ್ಟು ತವಕವೇಕಾಯಿತು?" ಎಂದು ಯುವರಾಜನು ವಿಚಾರಿಸಿದನು,

ಬಿನ್ನವಿಸುವೆನೆಂದು ಅವನೆದ್ದು ನಿಂತನು.

"ಸ್ವಾಮಿ ನಿನ್ನಯ್ಯನಿಗೆ ಅಧಿಕ ಕ್ಷೇಮ. ಹೊನ್ನ ಅರಮನೆಯಲ್ಲಿರುವ ನಿನ್ನ ತಮ್ಮಂದಿರೇ ಮೊದಲಾದ ಎಲ್ಲರಿಗೂ ಸಂತೋಷ. ಯಾನದಲ್ಲಿ ಬರುವುದು ಜೋಲಿಯೆಂದು ವಿಮಾನದಲ್ಲಿ ಬಂದೆವು" ಎಂದು ಹೇಳಿದವನೇ ಏಕಾಂತವನ್ನು ಬಯಸಿದನು. ಅದನ್ನು ತಿಳಿದೊಡನೆ ಎಲ್ಲರನ್ನೂ ಕಳುಹಿಸಿ, ಮೇಘೇಶ ಮೊದಲಾದ ಕೆಲವರೊಂದಿಗೆ ಯುವರಾಜನು ಏಕಾಂತವನ್ನು ನಿರ್ಮಿಸಿದನು. ಅಲ್ಲಿದ್ದವರೆಲ್ಲ ಕೇಳತಕ್ಕವರೆಂದೂ ತಿಳಿಸಿದನು. ಅನಂತರ ನಾಗರನು ಯುವರಾಜನ ಸೂಚನೆಯಂತೆ ಕುಳಿತುಕೊಂಡು ಮಾತನಾಡಿದನು.

"ದೇವ, ನೀವಿಬ್ಬರು ಇತ್ತ ಬಂದಾಗಿನಿಂದ, ನೀವು ಯಾವ ಯಾವ ನಾಡಿಗೆ ಹೋಗುತ್ತೀರೋ ಎಂಬುದನ್ನೆಲ್ಲ ನಮ್ಮರಸರು ಪ್ರೀತಿಯಿಂದ ವಿಚಾರಿಸಿ ತಿಳಿಯುತ್ತಿದ್ದರು. ತನ್ನ ಬಳಿಯಲ್ಲಿ ಹಲವು ಪುತ್ರರಿದ್ದರೂ ನಿಮ್ಮ ಪ್ರಯಾಣವನ್ನು ವಿಚಾರಿಸುತ್ತಲೇ ಇರುವರು. ಪುತ್ರಾನುರಾಗವನ್ನು ಅಂತಿಂತೆಂದು ಹೇಳುವಂತಿಲ್ಲ, ಏಳೆಂಟು ಮಕ್ಕಳಿರುವವರಿಗಾದರೆ ಒಬ್ಬನಲ್ಲಿ ಪ್ರೀತಿಯಿದ್ದರೆ ಉಳಿದವರಲ್ಲಿಲ್ಲ, ಆದರೆ ನಾಲ್ಕು ಮಕ್ಕಳಲ್ಲೂ ನಮ್ಮ ಒಡೆಯರಿಗೆ ಒಂದೇ ರೀತಿಯ ಅಕ್ಕರೆ. ಅವರೇನು ಕಿರಿಯರೆ? ಬೆಳೆದವರು ನಾಡುಗಳನ್ನು ನೋಡಲು ಹೋದರೆ ಇಷ್ಟು ಮರುಕವೇಕೆಂದು ನಾವು

ಕೇಳಿದರೆ, ''ಮರೆಯುವೆನೆಂದರೆ ಚಿತ್ತವು ಮರೆಯುವುದಿಲ್ಲ, ಇದಕ್ಕೆ ತಕ್ಕ ಮರೆವೆಯಿದ್ದರೆ ಕೊಡಿ'' ಎಂದು ನಮ್ಮನ್ನೇ ಕೇಳುವರು. ಒಳನಾಡಿನಲ್ಲೇ ಇದ್ದಾರೆ, ದೂರ ಹೋಗಿಲ್ಲವೆಂದು ನಾವು ಹೇಳಿದೆವು. ಊರಿಂದ ಹೊರಗಿದ್ದರೆ ನನ್ನೆದೆಯು ತಾಳಲಾರದು. ಅವರನ್ನು ಅಗಲಿ ಹೇಗಿರಲಿ?'' ಎಂದು ಒಡೆಯ ಕೇಳುವರು. ಕುವರರು ಇಲ್ಲದವನ ಸಂಪತ್ತು ವಿಪತ್ತು ಸತ್ಕವಿತೆಯಿಲ್ಲದ ಓದು ಬೂದಿ; ಅವರನ್ನು ಅಗಲಿರುವ ನನ್ನ ಸಿರಿಯು ಕಡುಕವಿಲ್ಲದ ಕಿವಿಗಳಂತೆ. ನಮಗೆ ಭೂರಿ ಕುಮಾರರಿರುವರು. ಪದಕದಂತೆ ಹಾರದ ಅಂದವುಂಟೆ? ಹಾರ ಪದಕವಿದ್ದರೂ ಬರಿದಾದ ಕಿವಿಗಳ ಶೃಂಗಾರ ರಮ್ಯವೆ? ಹೇಳಿರೆಂದು ನಮ್ಮನ್ನೇ ಕೇಳುವರು. 'ಹಾಗಾದರೆ ದೇವರು ಅವರನ್ನು ಯಾಕೆ ಕಳುಹಿಸಿದಿರಿ, ಬೇಡವೆಂದು ಹೇಳುತ್ತಿದ್ದರೆ ಇಲ್ಲೇ ಇರುತ್ತಿದ್ದರಲ್ಲ' ಎಂದು ನಾವು ಹೇಳಿದರೆ, 'ಅಂದು ನಾವು ಬೀಳ್ಕೊಡುವಾಗ ನೋವಿರಲಿಲ್ಲ, ಮರುಕವು ಮತ್ತೆ ಉಂಟಾಯಿತು; ಹೇಗೆ ತಾಳಲಿ' ಎನ್ನುವರು 'ಅಲ್ಲಿದ್ದರು ಇಲ್ಲಿದ್ದರು' ಎಂದರೆ ಕೇಳುವರು. ಅಲ್ಲಲ್ಲಿ ನಿಮಗೆ ಅರಸುಗಳು ಗಜಾಶ್ವಗಳನ್ನೂ ಚೆಲುವಿನ ಕನ್ನೆಯರನ್ನೂ ಇತ್ತ ವಾರ್ತೆಯನ್ನು ಕೇಳಿ ಭೂವಲ್ಲಭರು ಪ್ರೀತಿಗೊಳ್ಳುವರು. ಹಗಲಿರುಳೆಂಬಂತೆ ಒಂದೊಂದು ಸಂತೋಷದ ವಾರ್ತೆಯು ಸೊಗಸಾಗಿ ಬರುತ್ತಿತ್ತು. ಆಗ ಒಮ್ಮೆ ಮುಗುಳುಮಾಲೆಯಲ್ಲಿ ಮುಳ್ಳುಬಂದಂತೆ ಕಾಳಗವಾದ ನುಡಿ ಬಂದಿತು. ವಾರಾಣಾಸಿಯಲ್ಲಿ ಚೆಲುವಾದ ಸ್ವಯಂವರ ಗೃಹಕ್ಕೆ ಕಾಂತಾರ್ಥವಾಗಿ ರಾಜರು ಬರಲು ಚಕ್ರಿಯ ಸುತರೂ ಅಲ್ಲಿಗೆ ಹೋದರೆಂಬ ವಾರ್ತೆ ಬಂತು. ಕನ್ನೆಯು ಮೇಘೇಶಗೆ ಮಾಲೆ ಹಾಕಿ, ಆನೆಯನ್ನೇರಿ ಪಟ್ಟಣದೊಳಗೆ ಹೋಗಲು ಬಾಡಿದ ಮೋರೆಯ ರಾಜರೂ ಉದ್ದಂಡಮತಿಯೂ ದೂರನ್ನೊಡ್ಡಿದರು ಎಂಬ ವಾರ್ತೆ ಬಂತು. ಯುವರಾಜನಿದ್ದಂತೆ ಚೆಲುವಿನ ಹೆಣ್ಣು ಮಿಕ್ಕವರಿಗೆ ಸಲ್ಲುವಳೆ — ಎಂದು ನೆವನವೊಡ್ಡಲು, ನೀನು ಅದನ್ನೊಪ್ಪಿ, ತಡೆಯಲು ಯುದ್ಧವಾಯಿತೆಂದು ಘಸಗಿ ಹೇಳಿದರು. ಆ ಯುದ್ಧದಲ್ಲಿ ಕೂರಾಳುಗಳು ಇರಿದು ಕಡಿದು ಕಾದಾಡಿದರೆಂದೂ ಅಷ್ಟಚಂದ್ರರೂ ಸ್ವರ್ಗಕ್ಕೆ ಹೋದರೆಂದೂ ತಿಳಿಸಿದರು. ಅಷ್ಟೇ ಅಲ್ಲ, ಮತ್ತೊಂದು ಮಾತೂ ಬಂತು. ಅದನ್ನು ಹೇಳಲು ಅಂಜಿಕೆಯಾಗುತ್ತಿದೆ'' ಎಂದು ಸಾಗರನು ಮಾತು ನಿಲ್ಲಿಸಿದನು.

''ಅಂಜಿಕೆ ಏಕೆ? ನನ್ನಾಣೆ ಹೇಳು'' ಎಂದು ಯುವರಾಜನು ಪ್ರೋತ್ಸಾಹಿಸಿದನು. ನಾಗರನು ಮುಂದುವರಿಸಿದನು.

''ಫಣಿರಾಜನು ನಿನ್ನನ್ನು ನಾಗಪಾಶದಲ್ಲಿ ಬಂಧಿಸಿ ಮೇಘೇಶ್ವರನಿಗಿತ್ತನು ಎಂದು ಅವರು ಹೇಳಿದರು. ಅದನ್ನು ಕೇಳಿ ನಾವೆಲ್ಲ ಚಿಂತೆಯಲ್ಲಿದ್ದೆವು. ಅಷ್ಟರಲ್ಲಿ ಇನ್ನೊಂದು ವಾರ್ತೆ ಬಂತು. ಯುದ್ಧವಾಗುತ್ತಿರಲು ಕನ್ಯೆಯೊಬ್ಬಳನ್ನು ಯುವರಾಜನಿಗೂ ಮತ್ತೊಬ್ಬಳನ್ನು ಮೇಘೇಶ್ವರನಿಗೂ ಇತ್ತರೆಂಬುದು ಆ ವಾರ್ತೆ.

''ಮಾಲೆ ಹಾಕಿದವಳು ಸತಿಯಾದಳಲ್ಲವೆ? ಅದರ ಮೇಲೆ ಮೇಘೇಶ್ವರನು ನಮಗೆ ಪುತ್ರನಂತಿರುವನು. ಈ ಲೂಟಿ ಯುವರಾಜಗಾಗಬಾರದು'' ಎಂದು ಒಡೆಯರು

ನುಡಿದವರೆ, ನನ್ನನ್ನು ಕರೆದು, ''ನಾಗರ, ಹೋಗಿ ವಿಚಾರಿಸಿ, ತಡಮಾಡದೆ ಬಾ'' ಎಂದು ಆಜ್ಞೆ ಮಾಡಿದರು. ಆದರಂತೆ ಬೇಗನೆ ಬಂದೆನು ಎಂದು ನಾಗರನು ಕೈಮುಗಿದನು.

ಆ ಮಾತನ್ನು ಕೇಳಿ, ಅರ್ಕಕೀರ್ತಿ ಕುಮಾರನು, ಬೆರಳನ್ನು ನಾಸಿಕದ ಮೇಲಿಟ್ಟು ತಲೆದೂಗಿ, 'ಗುರುಹಂಸನಾಥಾ ಹಾ' ಎಂದನು. ''ದುರಿತ ವಶದಲ್ಲಿ ಒಂದು ದುರ್ವಾರ್ತೆ ಲೋಕಕ್ಕೇ ಹಬ್ಬಿತೇ! ಅಷ್ಟಚಂದ್ರರಿಗೂ ಉದ್ದಂಡಮತಿಗೂ ನಾಗಪಾಶದ ಬಂಧನವಾಯಿತು; ಅದೂ ಕೂಡಲೇ ಹರಿದುಹೋಯಿತು. ಅಷ್ಟಲ್ಲದೆ ಉಳಿದ ಅಪವಾದವೆಲ್ಲವೂ ಹುಸಿ, ನಾವು ಸ್ವಯಂವರಕ್ಕೆ ಹೋಗಲಿಲ್ಲ; ಅನ್ಯರ ಭಾಮೆಯನ್ನು ಬಯಸಲಿಲ್ಲ; ಆದರೆ ಮಧ್ಯದಲ್ಲಿ ರಾಜರುಗಳಿಂದ ಒಂದಿಷ್ಟು ಯುದ್ಧವುಂಟಾಯಿತು. ಅದನ್ನು ಒಡನೆ ಆದಿದೇವರು ನಿಲ್ಲಿಸಿದರು. ನನಗೆ, ಮೇಘೇಶಗೆ ಬೇರೆ ಬೇರೆ ಹೆಣ್ಣುಗಳನ್ನಿತ್ತರೆಂದು ಹೇಳಿದ ಮಾತು ಸತ್ಯ. ಅಷ್ಟಚಂದ್ರರಿಗೂ ಬೇರೆ ಹೆಣ್ಣುಗಳನ್ನಿತ್ತು ವಿನಯವಾದುದೂ ಸತ್ಯವೆ. ರಾಜಮಾರ್ಗವನ್ನು ಬಿಟ್ಟು ಬರುವೆನೆ ನಾನು? ಅದನ್ನು ಕೇಳಿ ಆದಿರಾಜ ಸೈರಿಸುವನೆ? ರಾಜಿಸುತ್ತಿರುವ ಪರದಾರ ಸೋದರರು ಎಂಬರ್ಥವನ್ನು ಮಾಜಿ ನಡೆದರೆ ಯಾರಿಗಾದೀತು? ಅಂದು ನಾಡನ್ನು ಸಾಧಿಸುವಂದು ತನ್ನ ಸೋದರರೊಡನೆ ಕೂಡಿಕೊಂಡು ಮೇಘೇಶ್ವರನು ನಮಗೆ ಮಾಡಿದ ಸೇವೆ ಸ್ವಲ್ಪವೇ? ನಾವದನ್ನು ಮರೆತರೆ ನೋಡು, ನಾನು ಭರತೇಶನ ಮಗನೇ? ಅಯ್ಯನ ಒಡವೆಗಳನ್ನು ಶೀರಿಸುವವರು ನಾವು; ಭಂಡಾರವನ್ನು ತುಂಬುವವರು ಅವರು; ತಿಳಿದು ನೋಡಿದರೆ, ನಮ್ಮೆಲ್ಲರಿಂದಲೂ ಅವನು ಚಕ್ರೇಶ್ವರಗೆ ಅಧಿಕನಾದ ಕುಮಾರನಲ್ಲದೆ ಕೆಲಸದ ಆಳೆ? ಅಂದು ಧೂರ್ತ ದೈವಗಳನ್ನು ಓಡಿಸಿದಾಗ, 'ನೀನು ಅರ್ಕಕೀರ್ತಿಯಂತೆ' ಎಂದು ಅಯ್ಯ ಹೇಳಿದರು. ಅವನನ್ನು ಬರಸೆಳೆದು ಅಪ್ಪಿಕೊಂಡರು. ಅದನ್ನೆಲ್ಲ ಮರೆತು ನಾನು ಅಪಕೀರ್ತಿ ಮಾಡುವೆನೆ? ಅಪ್ಪಾಜಿಯವರು ಅಂದು ಪುತ್ರನಂತೆ ಎಂದು ಅಪ್ಪಿಮನ್ನಿಸಿದ ನಿರೂಪವು ತಪ್ಪದೈ. ಇಂದು ನಾವು ಸದ್ದುಕರಾದೆವು'' ಎಂದು ಅರ್ಕಕೀರ್ತಿಯು ಒಪ್ಪವಿಟ್ಟಾಡಿದನು.

''ವಸುಧಾಗ್ರಗಣ್ಯನು ಅಂದು ಆಡಿದ ಉತ್ತಮ ವಾಕ್ಯ ಹುಸಿಯಾಗಬಾರದೆಂದು ಕಾಶಿರಾಜನು ನಮಗೆ ಮಾಡಿದನು'' ಎಂದು ಸಂತೋಷದಿಂದಲೇ ಕುಮಾರನು ಮಾವನೊಡನೆ ಮಾತನಾಡಿದನು.

ಆ ಮಾತನ್ನು ಕೇಳಿ ಮೇಘೇಶ್ವರ ವಿಜಯ ಜಯಂತರು ಉಬ್ಬಿ ನಿಂದೆದ್ದು ''ನಾವು ಮಾಡಿದುದು ನೋಂಪು ಆಯಿತು. ಸ್ವಾಮಿ, ನೀನು ನಮಗಿಂದು ಸುಖದ ವಸಂತವನ್ನೇ ಇಕ್ಕಿದೆ. ಅಂದು ನಾವೇನು ಸೇವೆ ಮಾಡಿದ್ದೇವೆ? ನಿನ್ನ ಪಿತನ ಪ್ರಭಾವದಿಂದಲೇ ಲೋಕವು ಸಾಧ್ಯವಾಯಿತು. ಸೇವಕರನ್ನು ನಿನ್ನ ಸದ್ದುಕರೆಂದು ಕರೆದು ನಮ್ಮ ಜೀವವನ್ನೇ ನೀನು ಸೂರೆಗೊಂಡೆ. ಅಂದು ನಿನ್ನ ಅಯ್ಯನು ಮಾಡಿದ ತೇಜಕ್ಕೆ, ಒಲಿದು ನೀನಿಂದು ಮನ್ನಿಸಿದ ಮನ್ನಣೆಗೆ ನಮ್ಮ ದೇಹವೇ ನಿವಾಳಿಹೋಗಲಿ, ಇದಕ್ಕೆ ಸಂದೇಹಬೇಡ.''

ಎಂದು ಅವರು ಅಡ್ಡಬಿದ್ದರು. ಅಕಂಪಾಂಕನು ತನ್ನ ಮಂತ್ರಿಯ ಕೈಗೆ ನಿವಾಳಿಯನ್ನು ಕೊಟ್ಟು, ಬಿನ್ನಾಣಿಸಿದನು. ಮೊದಲು ಅಡ್ಡಬೀಳುತ್ತಿದ್ದ ಅವನು ಕನ್ನೆಯನ್ನು ಕೊಟ್ಟು ಗೌರವದಿಂದ ಕುಳಿತಿರುವಂತಾಯಿತು.

''ಇದನ್ನೆಲ್ಲ ಕೇಳಿ ಅಪ್ಪಾಜಿಗೆ ಚಿಂತೆಯಾಯಿತು. ನಾವಿನ್ನು ವಿಶ್ರಾಂತಿಯಲ್ಲೇ ತಡೆಯಬಹುದೆ? ಮುಂದಿನ ಪಯಣಕ್ಕೆ ಯೋಚಿಸುವುದೇ? ಅಷ್ಟಚಂದ್ರರೂ ಉಳಿದವರೊಡನೆ ಭೂಮಿಯಲ್ಲಿ ನಡೆದುಕೊಂಡು ಬರಲಿ. ನಾವು ಈ ಮಿತ್ರನೊಂದಿಗೆ ಪುಷ್ಪಕವೇರಿ ಇಂದೇ ಸಾಗುವ, ಎಂದು ಅಣ್ಣನಿಗೆ ಆದಿರಾಜನು ಸೂಚಿಸಿದನು.

''ಏನಿಷ್ಟು ತವಕ? ನೀವು ಮುಂದಿನ ನಾಡುಗಳನ್ನೆಲ್ಲ ನೋಡಿಕೊಂಡು ಮೆಲ್ಲನೆ ಬನ್ನಿ. ನಾನು ಇಂದೇ ಹೋಗಿ ಸ್ವಾಮಿಗೆ ಸ್ವಸ್ಥ ಮಾಡುವೆನು. ನಾನಿಲ್ಲಿಗೆ ಚಾರನೊಬ್ಬನಂತೆ ವಾರ್ತೆಯನ್ನು ತಂದರೆ ನೀವೂ ಹೊರಟುಬಿಡುವುದೆ? ನೀವು ಬರುವುದೇಕೆ? ನೀವು ಭೂಮಿಯ ಮೇಲೆ ಮೆಲ್ಲಗೆ ನಡೆದು ಬನ್ನಿ. ನಾನು ಇಂದೇ ಹೋಗಿ ಒಡೆಯನಿಗೆ ಹೇಳಿ, ಅವರಿಗೆ ಒಪ್ಪುವುದನ್ನೇ ಮಾಡುವೆನು'' ಎಂದು ನಾಗರಾಂಕನು ಕುಮಾರರೊಡನೆ ಹೇಳಿದನು.

''ಕುಮಾರರನ್ನೂ ರಾಜರನ್ನೂ ಮೇಘೇಶನನ್ನೂ ವಿಚಾರಿಸಿ ತವಕದಿಂದ ಬಾ'' ಎಂದು ಒಡೆಯನು ನನಗೆ ಹೇಳಿದನು. ನಿಮಗೆ ತಳಮಳ ಬೇಡ. ನೀವು ನಿಧಾನವಾಗಿ ಬನ್ನಿ'' ಮತ್ತೊಮ್ಮೆ ನಾಗರಾಂಕನು ಮಾತು ಕೂಡಿಸಿದನು,

''ಒಪ್ಪಿದೆವು, ಅಯ್ಯನನ್ನು ಕಾಣುವವರೆಗೆ ನಮಗೆ ಹಾಲು ತುಪ್ಪ ಬೇಡ'' ಎಂದರು ಕುಮಾರರು.

''ಈ ನಿಮ್ಮ ಮಾತನ್ನು ಕೇಳಿದರೆ ಒಡೆಯನು ಉಪ್ಪನ್ನೇ ತೊರೆಯುವನು. ಈ ನಿಮ್ಮ ವಚನ ಬೇಡ. ನೀವು ಸುಖವಾಗಿ ಪಯಣ ಮಾಡಿ; ನಾವು ಚಕ್ರೇಶ್ವರನು ಸುಖವಾಗಿರುವಂತೆ ನೋಡಿಕೊಳ್ಳುವೆವು. ನಾಡೆಲ್ಲವೂ ಸುಖವಾಗಲೆಂಬುದೇ ನಮ್ಮ ಸ್ವಾಮಿಯ ಬಿರುದು'' ಎಂದು ಸುಖನಾದ ನಾಗರನು ಒತ್ತಿಹೇಳಿದನು.

''ನಾಗರೋತ್ತಮ, ಆ ಕಾರ್ಯ ಚಂದವಾಯಿತು. ನೀನು ಇಂದೇ ಪಯಣ ಮಾಡಬೇಕೆ? ನೀನು ನಮ್ಮ ಮಂದಿರದಲ್ಲಿ ಎಂಟು ದಿವಸ ವಿಶ್ರಾಂತಿ ಪಡೆಯಬೇಕು. ಸ್ವಾಮಿಯ ಸಖನು ನೀನು. ನೀನು ಬರುವುದೇ ದುರ್ಲಭ. ನಮ್ಮ ಪ್ರೇಮವನ್ನು ಸ್ವೀಕರಿಸಿ ಹೋಗು'' ಎಂದು ಕಾಶಿರಾಜನು ಒಸಗೆ ನೀಡಿದನು.

''ಅದು ರಮಣೀಯವಾಗಿದೆ. ಹಾಗೇ ಆಗಬೇಕು'' ಎಂದು ಆ ಮಾತನ್ನು ಮೇಘೇಶನೂ ಸಮರ್ಥಿಸಿದನು.

''ನಮ್ಮ ಚಿಕ್ಕ ಒಡೆಯರ ಮಾವನ ಮನೆಯಲ್ಲವೆ? ಇರುವೆನು; ಅದೂ ಸರಿಯೆ. ಆದರೆ ಈಗ ನಮ್ಮ ಚಕ್ರೇಶ್ವರರು ಚಿಂತೆಯಲ್ಲಿದ್ದಾರೆ. ಈ ವೇಳೆಯಲ್ಲಿ ತಡೆಯಬಹುದೆ? ಹೇಳಿ.''

''ಹಾಗಾದರೆ ಜೋಲಿ ಬೇಡ. ಸ್ನಾನ ಭೋಜನ ಗೈದು ನಾಳೆ ಹೋಗಬಹುದು'' ಎಂದು ಯುವರಾಜನು ನುಡಿದನು.

''ಒಡೆಯನಿಗೆ ಚಿಂತೆಯಾದಾಗ ಊಟ ಮೊಹದ ಸಡಗರವೆ ನನಗಿಲ್ಲ, ಸುಡು ಸುಡು, ಆ ಸುಖ. ಸಾಕು ಆ ಮಾತನ್ನು ಮರೆತು ಬಿಡಿ ಸ್ವಾಮಿ, ತಡಮಾಡಬಾರದು,''

''ನಮ್ಮ ಪಯಣವೂ ನಿಂತು ನಾಗರಾಂಕನೂ ನಿಂತರೆ ಪಿತಗೆ ಉಮ್ಮಳ ಹೆಚ್ಚುವುದು. ನಾಗರಾಂಕನು ಜುಮ್ಮನೆ ಹೋಗಲಿ. ತಡೆಯಬೇಡ'' ಎಂದು ಸಮ್ಮುಖದಲ್ಲಿದ್ದ ಆದಿರಾಜ ನುಡಿದನು.

''ಭಾಪು ನಮ್ಮ ಒಡೆಯನ ಅಯ್ಯನ ದಿವ್ಯನಾಮದ ಭೂಪರಲ್ಲವೆ ತಾವು? ಲೇಸನ್ನೇ ಹೇಳಿದಿರಿ. ಈ ರೀತಿಯಲ್ಲಿ ಎಲ್ಲರೂ ಒಪ್ಪಿಬಿಡಿರಿ'' ಎಂದು ನಾಗರಾಂಕನು ಸಂತೋಷಗೊಂಡನು.

''ಲೇಸಾಯಿತೀಗ. ಆಗಲಿ ಇಂದೇ ಹೋಗು. ಈಗ ನಮ್ಮ ನಿವಾಸದಲ್ಲಿ ನೀನು ಊಟಮಾಡು. ಪೋಸವನ್ನು ಅವರಲ್ಲಿ ಮಾಡು'' ಎಂದು ಯುವರಾಜನು ಉಲ್ಲಾಸದಿಂದ ನುಡಿದನು.

ಒಳ್ಳಿತಾಯಿತೆಂದು ಎಲ್ಲರೂ ಒಪ್ಪಿದರು. ಅರ್ಕಕೀರ್ತಿಯು ಅವರನ್ನೆಲ್ಲ ಕಳುಹಿಸಿಕೊಟ್ಟನು. ಪಡೆಯನ್ನು ಮನ್ನಿಸುವುದೆಂದು ಅಪ್ಪಚಂದ್ರರಿಗೆ ಹೇಳಿ ಅರ್ಕಕೀರ್ತಿಯು ಸಭೆಯಿಂದೆದ್ದನು. ತಮ್ಮನೂ ಅಣ್ಣಗೆ ಕೈಮುಗಿದು, ''ನಾಗರ, ನಮ್ಮನ್ನು ಕಂಡೆ; ಇನ್ನು ಹೋಗು'' ಎಂದು ಹೇಳಿ ಹೋದನು. ಸಮ್ಮಾನಿಸಿದ ಸಖನೊಡನೆ ಕೂಡಿಕೊಂಡು ಯುವರಾಜನು ಹೆಚ್ಚಿನ ಸುಮ್ಮಾನದಿಂದ ಮನೆಯೊಳಗೆ ಹೋದನು.

ಭಾನುರಾಜನನ್ನು ಕರೆಯಿಸಿಕೊಂಡು, ಸ್ನೇಹಿತನೊಡನೆ ಸಹಪಂಕ್ತಿಯಲ್ಲಿ ಆರೋಗಣೆ ಮಾಡಿ ಕೈತೊಳೆದನು. ಅನಂತರ ಅಪ್ಪಾಜಿಯ ಆಪ್ತನೆಂದು ಆನೆ, ಕುದುರೆ, ರತ್ನ, ಸುಪ್ಪಾಣಿ, ಚಿನ್ನ, ಬೆಳ್ಳಿ — ಎಂದು ಎಪ್ಪತ್ತು ಲಕ್ಷ ವಸ್ತುಗಳ ಉಡುಗೊರೆ ಕೊಟ್ಟು, ಆತ ಅಪ್ಪಿಕೊಂಡು ಆ ಸ್ನೇಹಿತನನ್ನು ಮನ್ನಿಸಿದನು. ಮನ್ನಣೆಯಿಂದ ತಣಿದ ಆ ಗೆಳೆಯನು ಕೈಮುಗಿದು ಮತ್ತೆ ಮಾತನಾಡಿದನು.

''ಇನ್ನೊಂದನ್ನು ಪಾಲಿಸಬೇಕು''

''ಅದೇನು ಬಿನ್ನವಿಸು — ಕೊಡುವೆನು''

''ಆ ಮಾತನ್ನು ನಿನ್ನ ಮಾವನು ಒಪ್ಪಬೇಕಾದುದು''

''ನಾನೇನು ಅಲ್ಲವೆನ್ನುವವನೆ?'' ಎಂದು ಭಾನುರಾಜನು ನಗುತ್ತ ನುಡಿದನು.

''ಈ ರಾಜರು ನಿನ್ನೊಡನೆ ಬಂದು ಚಕ್ರೇಶನನ್ನು ಸಾನುರಾಗದಿಂದ ಕಂಡು ಹೋಗಲಿ'' ಈ ಮಾತಿನ ಅಂದ ಭಾನುರಾಜನಿಗೆ ತೋರಲಿಲ್ಲ. ಯುವರಾಜನು ಅದರ ಭಾವವನ್ನು ಅರಿತುಕೊಂಡನು.

''ಅದಕ್ಕೇನಂತೆ ಕರೆದುಕೊಂಡು ಬರುವೆನು''

ಯುವರಾಜನ ಈ ಮಾತುಗಳನ್ನು ಕೇಳಿದೊಡನೆ ನಾಗರನು ಮತ್ತೆ ಕೈಮುಗಿದು ಎದ್ದನು. ಅವನು ಅಲ್ಲಿಂದ ಹೊರಟು, ಆದಿರಾಜನ ಮನೆಗೆ ಬಂದು, ವಿಮಲ ರಾಜನನ್ನು ಕಂಡನು. ಆದಿರಾಜನನ್ನು ಆ ಗೆಳೆಯನಿಗೆ ಕ್ರಮವಾಗಿ ಉತ್ತಮವಾದ ಮೂವತ್ತು ಲಕ್ಷದ ವಸ್ತುಗಳ ಒಡವೆಗಳನ್ನು ಉಡುಗೊರೆಯಿತ್ತನು. ನಾಗರಾಂಕನು ಅಲ್ಲಿಯೂ ಆದಿರಾಜನು ಮಾವನೊಂದಿಗೆ ರಾಜಧಾನಿಗೆ ಭರತೇಶನೆಡೆಗೆ ಬರುವಂತೆ ಮಾಡಿ, ಕಾಶಿರಾಜನ ಬಳಿಗೆ ಬಂದನು. ಅಲ್ಲಿ ಅವರಿಬ್ಬರೂ ಉತ್ತಮವಾದ ಗೋಷ್ಠಿಯಲ್ಲಿರುವಾಗಲೇ ಪೋಸದ

ಹೊತ್ತಾಯಿತು. ಕೂಡಲೇ ಊಟವಾಯಿತು. ಕಾಶಿರಾಜನು ಹತ್ತು ಲಕ್ಷ ವಿನಿಯೋಗದ ಉಡುಗೊರೆಗಳನ್ನಿತ್ತು ನಾಗರನನ್ನು ಅಪ್ಪಿಕೊಂಡು ಬೀಳ್ಕೊಟ್ಟನು.

ಮೇಘೇಶನಾಗ ಮಾವನ ಮನೆಯಿಂದ ನಾಗರಾಂಕನನ್ನು ತನ್ನ ಚಾವಡಿಗೆ ಕರೆದೊಯ್ದು ತುಂಬಿದ, ಇಪ್ಪತ್ತು ಲಕ್ಷ ವಸ್ತುಗಳನ್ನು ಸಂಭಾವನೆಯಿತ್ತು ಬೀಳುಕೊಟ್ಟನು. ಅಷ್ಟರಲ್ಲಿ ಐವತ್ತಾರು ದೇಶಗಳ ರಾಜರೂ ಅಷ್ಟಚಂದ್ರರೂ ಒಟ್ಟಾಗಿ ಕೋಟೆಯ ಮೇಲೆ ಅರುವತ್ತೈದು ಲಕ್ಷ ವಸ್ತುಗಳನ್ನು ನಾಗರನಿಗಿತ್ತು ಮನ್ನಿಸಿದರು.

ಆರು ಖಂಡಗಳನ್ನು ಆಳುವವನ ಆಪ್ತನಿಗೆ ಯೋಗಾರ್ಥವು ಮೂರು ಕೋಟಿಯಾದರೆ ದೊಡ್ಡದಲ್ಲ. ಧನ್ಯನಾದ ನಾಗರನು ಬೆಳದಿಂಗಳಲ್ಲಿ ವಿಮಾನವನ್ನೇರಿದನು. ತಿಂಗಳ ಬೆಳಕಿನಲ್ಲಿ ಅಖಿಳ ವಿಮಾನಗಳು ತರಂಗಗೊಂಡು ಎಡೆವಿಡಿದು ಹಾರುತ್ತಿರುವುದು ಹಾಲು ಗಡಲಿನಲ್ಲಿ ಹಾದು ಹೋಗುವ ಹಡಗುಗಳಂತೆ ತೋರುತ್ತಿತ್ತು. ಆಕಾಶ ಮಾರ್ಗದಲ್ಲಿ ಹೋಗುವವನಿಗೆ ತಡೆಯುಂಟೆ? ಅವನು ಹೊಡೆದ ಬಾಣ ಹಾರಿಹೋದಂತೆ ಬಂದನು. ಕೊಂಬು, ತಿತ್ತಿರಿ, ಕಾಳೆ, ತುಡುಮುಗಳ ಘೋಷದ ಆಡಂಬರದಲ್ಲಿ ನಾಗರಾಂಕನು ನಗರ ಪ್ರವೇಶ ಮಾಡಿದನು.

ಆಗ ಭರತೇಶನು ಚಿಂತೆಯಿಂದ ಅರಸುಗಳ ಓಲಗವಿಲ್ಲದೆ ಏಕಾಂತದಲ್ಲಿದ್ದನು. ಮಂತ್ರಿ ಮಿತ್ರರೂ ಮಕ್ಕಳೂ ಕೂಡಿ, ಶಾಂತಿರಸದ ಗೋಷ್ಠಿಯಲ್ಲಿದ್ದನು.

ಪುರಜನರ ಗಲಭೆ, ಆಕಾಶದಲ್ಲಿ ಮೊರೆಯುವ ವಾದ್ಯಗಳ ಧ್ವನಿಗೇಳಿ, ನಾಗರಾಂಕನು ತಿರುಗಿ ಬರುತ್ತಿರುವನೆಂದೂ ಅದು ಹರ್ಷದ ಬರುವಿಕೆಯೆಂದೂ ತಿಳಿಸಿದನು. ನಾಗರಾಂಕನು ವಿಮಾನದಿಂದ ಇಳಿದು ನೃಪಗೃಹದ ಒತ್ತಿನಲ್ಲೇ ಎಲ್ಲರನ್ನೂ ಕಳುಹಿಸಿ ತತ್ತರಗೊಳ್ಳುತ್ತ ಸಂಭ್ರಮದಿಂದ ಓಲಗವನ್ನು ಹೊಕ್ಕನು. ಹುಲ್ಲೆಯಂತೆ ಹೊಸ್ತಿಲು ದಾಟಿಬರುತ್ತಿರುವ ಅವನನ್ನು ಕಂಡು, ಭರತೇಶನು, 'ಮೆಲ್ಲಗೆ ಬಾ, ನೋಡಿ ಬಾ' ಎಂದು ನಗುತ್ತ ನುಡಿದನು.

ಕಟ್ಟಿಗೆಕಾರರು, 'ಸಮ್ಮುಖ, ಸಮ್ಮುಖ' ಎಂದು ಉಬ್ಬಿ ಹೇಳುತ್ತಿದ್ದರು. ಅದನ್ನು ಕೇಳಿ ಎರಡು ದೇಹಗಳಂತಿರುವ ಆ ಸ್ನೇಹಿತರ ಪ್ರೀತಿ ಹೆಚ್ಚಾಯಿತು. ನಾಗರಾಂಕನು ಘಮ್ಮನೆ ಬಂದು ನಿವಾಳಿ ಕಾಣಿಕೆಗಳನ್ನಿಟ್ಟು ಸುಮ್ಮಾನದಿಂದ ಅಡ್ಡಬಿದ್ದನು.

'ಸರ್ವರಾನಂದ, ಸದಾನಂದ, ಗೌರವ ಪರ್ವತ, ಪ್ರಥಮ ಚಕ್ರೇಶ' ಎಂದವನು ನುಡಿಯತೊಡಗಿದನು. ''ಮುನ್ನಾದ ಸುದ್ದಿಗಳೆಲ್ಲವು ದುರ್ವಾರ್ತೆಗಳು. ಚಿನ್ನ ಸ್ವಯಂವರಕ್ಕೆ ಅಧಿಕನಾದ ಅರ್ಕಕೀರ್ತಿಯು ಹೋಗುವುದುಂಟೆ? ನಾಡ ಮನ್ನೆಯನ ಮಗಳನ್ನು ಹುಡುಕಿಕೊಂಡು ನಿನ್ನ ಕುಮಾರನು ಹೋಗುವನೆ? ತಾವೇ ತಂದು ಒಬ್ಬ ಕನ್ನೆಯನ್ನಿತ್ತರು. ನಮ್ಮ ನಾಳಿನ ಸ್ವಾಮಿಯಾಗುವವ ತಪ್ಪಿ ನಡೆಯುವುದುಂಟೆ? ಬೇರೊಬ್ಬಗೆ ಮಾಲೆ ಹಾಕಿದವಳನ್ನು ಬಯಸುವನೆ? ಆ ಗಾಳಿ ಮಾತುಗಳನ್ನೆಲ್ಲ ಮರೆತುಬಿಡು.''

ಎಂದು ನಾಗರನು ತಾನು ಮೊದಲು ಕೇಳಿದಂತೆ ಎಲ್ಲವನ್ನೂ ಹೇಳಿದನು. ''ನಾಗಪಾಶದಿಂದ ಒಡೆಯನನ್ನು ಕಟ್ಟಿದರೆ ಉಳಿಯುವುದುಂಟೆ? ಮೇಘೇಶನಿಗೂ ಅಷ್ಟಚಂದ್ರರಿಗೂ ಒಂದಿಷ್ಟು ಕ್ಲೇಶವುಂಟಾಗಿ ಕೊನೆಗೆ ಯಾವುದೂ ಇಲ್ಲದಾಯಿತು.''

ಅದನ್ನು ಕೇಳಿದ ಭರತೇಶನ ಎದೆ ಹಗುರವಾಯಿತು. ಮುಂದಾದುದನ್ನು ಕುಳಿತು ಉಚ್ಚರಿಸೆಂದು ನಾಗರನಿಗೆ ಹೇಳಿದನು. ಅದರಂತೆ ನಾಗರನು ಕುಳಿತುಕೊಂಡು, ತನಗೆ ಅವರೆಲ್ಲರೂ ಕೊಟ್ಟ ಮೂರು ಕೋಟಿಯ ಉಡುಗೊರೆಗಳನ್ನು ತಿಳಿಸಿದನು. ಅದನ್ನು ಕೇಳಿ ಚಕ್ರಿಯು ಅದು ನಿನ್ನ ಹಾದಿ ವೆಚ್ಚಕ್ಕಾಯಿತು ಎಂದು ನಗುತ್ತ ನುಡಿದನು.

''ಅದು ಹೋಗಲಿ ಒಡೆಯ. ದುಷ್ಟ ಯುದ್ಧದ ವಾರ್ತೆ ಕೇಳಿ ನಾನು ಹೋಗುವ ಮೊದಲೇ ವಿಮಲರಾಜ ಭಾನುರಾಜರು ಬಂದು ಅಳಿಯಂದಿರನ್ನು ಕೂಡಿದ್ದರು. ತಂದೆಯ ಅರೈಕೆಯ ಮೊದಲೇ ಸೋದರ ಮಾವಂದಿರು ಬಂದು ಒದಗಿದ್ದರು ಎಂದಾಗ ನಂದನರಿಗೆ ತಾಯಿಗಿಂತಲೂ ತಾಯಸೋದರರೇ ಹೆಚ್ಚೆಂದು ಆಯಿತಲ್ಲವೆ?'' ಎಂದು ನಾಗರನು ತನ್ನ ಒಡೆಯನಿಗೆ ಅಲ್ಲಿ ತಾನು ಕಂಡುದನ್ನು ಹೇಳಿದನು.

ಅದನ್ನು ಕೇಳಿದೊಡನೆ ಚಕ್ರೇಶನ ಎದೆ ಕರಗಿತು. ಮೈದುನರ ಆಪ್ತತನಕ್ಕೆ ಮೆಚ್ಚಿದನು. ಇದಕ್ಕೆ ತಕ್ಕ ಅಕ್ಕರು ಮಾಡಬೇಕೆಂದು ಭಾವಿಸಿದನು. ಅನಂತರ ಅನುಕೂಲ, ಕುಟಿಲ, ದಕ್ಷಿಣ, ಶಠ, ಪೀಠಮರ್ದನರೇ ಮುಂತಾದ ಮಂತ್ರಿಗಳೊಡನೆ, ತಾನು ಮನದಲ್ಲಿ ಭಾವಿಸಿಟ್ಟುದನ್ನು ಮಾತಿನಲ್ಲಿ ತಿಳಿಸಿದನು.

''ಮಕ್ಕಳಿಗೆ ಮಾವಂದಿರು ಒದಗಿಬಂದುದು ದೊಡ್ಡ ವಿನಯವಲ್ಲವೆ? ನೀವೇನು ಹೇಳುವಿರಿ?''

ಕಾಶಿಯ ರಾಜನು ಮನೆಗೆ ಬಂದು ಕರೆದಾಗ ಅವರು ಹೋಗಲಿಲ್ಲ, ಯುದ್ಧವೆಂದಾಗ, ತಮ್ಮ ಘನತೆಯನ್ನೂ ಬಿಸುಟು, ಅಳಿಯಂದಿರ ಪ್ರೀತಿಗಾಗಿ ಅಲ್ಲಿಗೆ ಹೋದ ಅನುಭವವು ಹೆಚ್ಚಿನದು''

''ನಮಗೆ ಸೋದರ ಮಾವಂದಿರಲ್ಲಿ ಯಾವ ಪ್ರೀತಿಯಿತ್ತೋ, ಅದೇ ಪ್ರೀತಿಯು ಯುವರಾಜಗೂ ಆದಿರಾಜಗೂ ಅವರ ಸೋದರ ಮಾವಂದಿರಲ್ಲಿರುವುದು. ಅವರನ್ನು ನಾನು ಮನ್ನಿಸಲೇ ಬೇಕು. ರಾಜರೆಂದೇ ಅವರನ್ನು ಕರೆವೆನು. ಅರ್ಕಕೀರ್ತಿ ಆದಿರಾಜರಿಗೂ ಮುದವಾಗುವುದು.''

ಭರತೇಶನ ಈ ಮಾತಿಗೆ ರಾಜರೆಲ್ಲರೂ ಭಾಪೆಂದರು. ನಾಗರನು ಯೋಚಿಸಿದರ್ಥವು ಅದೇ ಆಗಿತ್ತು.

''ನಾಗರ ಬೇಗ ಬಂದಿರುವೆ, ಅದರಿಂದ ಬಳಲಿರುವೆ'' ಎಂದು ಚಕ್ರಿಯು ಸ್ನೇಹಿತನೇ ಮೊದಲಾಗಿ ಸರ್ವರಿಗೂ ಉಡುಗೊರೆಯಿತ್ತು ಬೀಳ್ಕೊಟ್ಟನು. ಅನಂತರ ತಾನೂ ಅರಮನೆಯನ್ನು ಹೊಕ್ಕನು.

೫

# ಜನಕ ಸಂದರ್ಶನ

ನಾಗರಾಂಕನು ಹೋದ ಮೇಲೆ ಯುವರಾಜನಾದ ಅರ್ಕಕೀರ್ತಿಯು ಮೇಘೇಶ, ವಿಜಯ, ಜಯಂತರನ್ನು ಕರೆಯಿಸಿ ಪರಿಣಯದಲ್ಲಿ ಆದ ನೋವು ಹರಿವಂತೆ, ವಿನಯವನ್ನು ನುಡಿದನು. ಇದು ದೊರೆತನದೊಂದು ಅಂಗವಷ್ಟೆ!

''ಪಾಪತಂತ್ರದಿಂದ ಒಂದು ನೋವು ಬಂತು; ಪುಣ್ಯತಂತ್ರದಿಂದ ಅದು ನಿಂತಿತು. ಮುಂದೆ ಅದನ್ನು ನಾವು ನೀವು ಎದೆಯಲ್ಲಿರಿಸಿಕೊಳ್ಳಬಾರದು. ಅಷ್ಟಚಂದ್ರರೂ ಮಂತ್ರಿ ಉದ್ದಂಡಮತಿಯೂ ನೆನೆದುದು ತಪ್ಪು. ಇದನ್ನು ಅಪ್ಪಾಜಿ ಕೇಳಿದರೆ ಕೇಡು ಆದೀತು. ಈಗ ಆದಿದೇವರು ಇದಕ್ಕೆ ಒಪ್ಪಹಾಕಿ ತಿದ್ದಿದಂತೆ, ಇದೊಮ್ಮೆ ತಪ್ಪಿಹೋಗಲಿ. ನಾವದನ್ನು ತಾಳುವೆವು. ನಾವಾದರೆ ಚಕ್ರವರ್ತಿಗೆ ನೋವಾಗಿ ಹುಟ್ಟಿದವರು. ನೀವಾದರೆ ನೋವಿಲ್ಲದೇ ಬಂದ ಮಕ್ಕಳು. ಒಂದೇ ಒಡಹುಟ್ಟಿನವರಲ್ಲಿ ಅಲ್ಪ ಸಂಕ್ಲೇಶ ಬಂದರೆ ಅದನ್ನು ಬೇಗ ಬಿಡಬೇಕು. ನೀವು ನಾವು ಅಷ್ಟಚಂದ್ರರೂ ರಾಜಸುತರಲ್ಲವೆ. ಕ್ಷತ್ರಿಯರು ಗಾವಿಲರಂತೆ ನೋವನ್ನು ಮನಸ್ಸಿಗೆ ಹಚ್ಚಿಕೊಳ್ಳುವುದು ಲೇಸೆ? ಏಕವರ್ಣದಲ್ಲಿದು ಒಳಿತೆ?'' ಎಂದು ಅವರ ಭಾವ ತಂಪಾಗುವಂತೆ ಅರ್ಕಕೀರ್ತಿಯು ನುಡಿದನು.

''ಆದಿದೇವನು ಮೊದಲು ತಂಪು ಮಾಡಿದನು. ದೇವರೀಗ ನಮ್ಮನ್ನು ಆದರಿಸಿದೆ. ಈಗ ನಮ್ಮ ನೋವೆಲ್ಲ ಹೋಯಿತು'' ಎಂದು ಅವರೆಲ್ಲರೂ ಅಷ್ಟಚಂದ್ರರೊಡನೆ ಪಾದಕ್ಕೆರಗಿ ನಿಂತರು. ರಾಜಕುಮಾರನು ಚೊಕ್ಕಮಾತಿನಲ್ಲಿ ಹೊಟ್ಟೆಯನ್ನು ತುಂಬಿಸಿ ಕಳುಹಿಸುವವನಲ್ಲ; ಲೆಕ್ಕಮಾಡಿ ಮೇಘರಾಜನಿಗೆ ಐವತ್ತು ಲಕ್ಷದ ಮನ್ನಣೆ ಮಾಡಿದನು. ವಿಜಯ ರಾಜನಿಗೆ ಮೂವತ್ತು ಲಕ್ಷವನ್ನೂ ಜಯಂತು ರಾಜನಿಗೆ ಇಪ್ಪತ್ತು ಲಕ್ಷವನ್ನೂ ಉಡುಗೊರೆಯಿತ್ತು, ಭುಜ ತುಂಬುವಂತೆ ಅಪ್ಪಿಕೊಂಡು ಬೀಳ್ಕೊಟ್ಟನು. ಆಗ ಆದಿರಾಜನೂ ಹಿರಿಯನಾದ ಮೇಘರಾಜನಿಗೆ ಇಪ್ಪತ್ತೈದು ಲಕ್ಷವನ್ನೂ ವಿಜಯರಾಜನಿಗೆ ಹದಿನೈದು ಲಕ್ಷವನ್ನೂ ಜಯಂತರಾಜನಿಗೆ ಹತ್ತು ಲಕ್ಷವನ್ನೂ ಕೊಟ್ಟು ಸಂತೋಷದಿಂದ ಕಳುಹಿಸಿದನು.

ಇದರಿಂದ ಅವರ ನೋವು ಓಡಿತು. ಬಲುಸಿರಿ ಬಂದು ಅವರನ್ನು ಕೂಡಿತು. ಅವರು ಸಂತೋಷದಿಂದ ನಲಿದಾಡಿಕೊಂಡು ಹೋದರು. ಚಕ್ರವರ್ತಿಯ ಕುಮಾರರು ನಾಡಾಡಿಗಳಲ್ಲ, ಅವರು ಒಲಿದು ನೋಡಿದಲ್ಲಿ ದಾರಿದ್ರ್ಯವಿರುವುದೆ?

ಅಖಿಲ ದೇಶಾಧ್ಯರನ್ನೂ ತರತರವರಿದು ಮನ್ನಿಸಿ ಸರಸದಿಂದ ಬೀಳ್ಕೊಟ್ಟರು. ಅಕಂಪಾಂಕನು ಅರಮನೆಗೆ ಕರೆದೊಯ್ದು, ಸಮ್ಮಾನ ಮಾಡಲು ಅರ್ಕಕೀರ್ತಿಯು ತನ್ನ ಅರಸಿಯೊಂದಿಗೆ ಭೋಜನ ಮಾಡಿದನು. ಹೇಮಾಂಗ ರಾಜ ಮುಂತಾಗಿ ನೂರೆಂಟು

ಮಂದಿ ಲಕ್ಷ್ಮೀಮತಿಗೆ ಒಡಹುಟ್ಟಿದವರು. ಆ ಮಕ್ಕಳೊಂದಿಗೆ ಅಕಂಪಾಂಕನು ನೀಡಿದ ಪ್ರೇಮದ ಉಚಿತಗಳನ್ನು ಕೈಕೊಂಡನು. ಸಾಕು ಸಾಕೆಂದು ಹೇಳುವಂತೆ ತಾನೂ ಅವರಿಗೆ ಅನೇಕ ವಸ್ತು ಒಡವೆಗಳ ಉಡುಗೊರೆಯಿತ್ತನು.

ಅನಂತರ ಚಕ್ರವರ್ತಿಯ ಮಗನು ತಾಕಿ, ಭೇರಿಗಳು ಮೊಳಗುತ್ತಿರಲು ಮುಂದಿನ ಪಯಣವನ್ನು ಕೈಕೊಂಡನು. ಚಕ್ರವರ್ತಿಯ ಸಿರಿಯೆಂದರೆ ಸಾಮಾನ್ಯವೆ? ಹದಿನೆಂಟು ಲಕ್ಷ ಅಕ್ಷೋಹಿಣಿ ಬಲದ ಸಂಪತ್ತನ್ನು ಕೂಡಿಕೊಂಡು ಯುವರಾಜನು ನಡೆದನು. ಮುಂದೆ ಅಷ್ಟಚಂದ್ರರೂ ತಮ್ಮ ಪಡೆಯೊಂದಿಗೆ ನಡೆದರು. ಅವರೊಂದಿಗೆ ಮಂತ್ರಿಗಳೂ ನಡೆದರು. ಜೊತೆಗೂಡಿ ತಮ್ಮ ಆದಿದೇವನೂ ಬರುತ್ತಿದ್ದನು. ಸೋದರ ಮಾವಂದಿರೂ ಇವರನ್ನು ಕೂಡಿಕೊಂಡು ಮುನ್ನಡೆದರು. ಯುವರಾಜನು ತನ್ನವರೊಂದಿಗೆ ಅಲ್ಲಲ್ಲಿ ತಡೆದು, ವಿಶ್ರಾಂತಿ ಪಡೆಯುತ್ತ, ರಾಜರಿಂದ ಪೂಜೆಯನ್ನು ಪಡೆಯುತ್ತ ತಂದೆಯ ಕೋಮಲ ಚರಣಗಳನ್ನು ಕಾಣುವೆವೆಂಬ ತವಕದಿಂದ ಬರುತ್ತಿದ್ದರು. ತೆಂಕಣಿಂದ ಉತ್ತರ ಮುಖವಾಗಿ, ಹಲವು ನಾಡುಗಳನ್ನು ಕಳೆದು, ಅಯೋಧ್ಯೆಗಿನ್ನು ಇನ್ನೂರು ಗಾವುದವಿರುವಲ್ಲಿಗೆ ಬಂದನು.

ಅಲ್ಲಿಗೊಬ್ಬನು ಬಂದು, ಅಂದು ನಾಗರನು ಬಂದು ಚಕ್ರವರ್ತಿಯೊಡನೆ ನುಡಿದುದೆಲ್ಲವನ್ನು ತಿಳಿಸಿದನು. ಏಕಾಂತದಲ್ಲಿ ಆ ಸೊಲ್ಲನ್ನು ಕೇಳಿದೊಡನೆ ಕುಮಾರರಿಗೆಲ್ಲ ಸಂತೋಷವಾಯಿತು.

''ಜಾಣರಿಗೆ ಏನನ್ನು ಕೊಟ್ಟರೂ ಕೇಡಲ್ಲ, ಪ್ರವೀಣನಾದ ನಾಗರನು ಹಿತನೊಂದಿಗೆ ನುಡಿದುದರಿಂದ ಮಾವಂದಿರಿಗೆ ರಾಜ ಬಿರುದು ದೊರೆಯಿತು'' ಎಂದವರು ನಲಿದರು. ಮಾವಂದಿರೂ ಅದನ್ನು ಕೇಳಿ ಮನಸ್ಸಿನಲ್ಲೇ ನಲಿದಾಡಿದರು. ಹೊರಗೆ ಆ ಭಾವವನ್ನು ತೋರಿಸಲಿಲ್ಲ, ಚಕ್ರವರ್ತಿಯು ನಮ್ಮನ್ನೆಂತು ಕರೆಯುತ್ತಾನೋ ಅದೇ ನಮಗೆ ಮುದವೆಂದವರು ಹೇಳಿದರು.

ಅವರೆಲ್ಲ ಪುರದ ಸಮೀಪವನ್ನು ಸೇರಿದರು. ಆ ವಾರ್ತೆಯನ್ನು ಭರತೇಶನು ಕೇಳಿ ಸಂತೋಷದಿಂದ ವೃಷಭ ರಾಜನೊಡನೆ ಮಂತ್ರಿಗಳನ್ನು ಇದಿರುಗೊಳ್ಳಲು ಕಳುಹಿಸಿದನು. ಒಬ್ಬ ಮಗನಿಗಿಷ್ಟು ಸೂಚಿಸಿದ್ದನ್ನು ಕೇಳಿ ಎಲ್ಲ ಮಕ್ಕಳೂ ಇದಿರುಗೊಳ್ಳಲು ಹೋದರು. ಹಿರಿಯಣ್ಣರೆಂಬ ಪ್ರೀತಿಯಿಂದ ಅವರನ್ನು ಇದಿರುಗೊಳ್ಳಲು ಮೂವತ್ತು ಸಾವಿರ ತಮ್ಮಂದಿರೂ ಲೀಲಾವೇಶದಿಂದ ಸಾಗಿದರು. ಆನೆ, ಕುದುರೆ, ತೇರು, ದಂಡಿಗೆ, ಪಲ್ಲಕ್ಕಿಗಳನ್ನೇರಿ ತರತರದ ವೈಭವದಿಂದ ಛತ್ರ ಚಾಮರಗಳನ್ನು ಹಿಡಿಸಿಕೊಂಡು ವಾದ್ಯ ಘೋಷದೊಡನೆ ನಡೆದರು.

ವೃಷಭರಾಜನನ್ನು ಮುಂದುಮಾಡಿಕೊಂಡು, ಅವರೆಲ್ಲರು ಬಂದು, ತಮ್ಮ ತಮ್ಮ ವಾಹನಗಳಿಂದ ಇಳಿದು, ತಮ್ಮ ಉಡಿಗೆ ತೊಡಿಗೆಗಳನ್ನು ಸರಿಪಡಿಸಿಕೊಂಡು ಸಾಗಿದರು. ವೃಷಭ ರಾಜನು ತಮ್ಮಂದಿರನ್ನು ಹಿಂದೆ ನಿಲ್ಲಿಸಿ, ಮುಂದೆ ಹೋಗಿ ಅನುರಾಗದಿಂದ ಅಣ್ಣಂದಿರಿಗೆ ಕಾಣಿಕೆಯಿತ್ತು ನಮಿಸಿದನು. ಎಲ್ಲರೂ ಅದನ್ನು ಅನುಸರಿಸಿ ಅಣ್ಣಂದಿರ ಅಡಿಗೆರಗಿದರು.

''ಏನು ವೃಷಭರಾಜು, ಕ್ಷೇಮವೇ? ನಿನಗೆ ಸೌಖ್ಯವೇ ಹಂಸರಾಜ? ನಿರಂಜನ ರಾಜು ಇತ್ತ ಬಾ, ಸಿದ್ಧರಾಜಾ, ಸುಖವೇ ನಿನಗಣ್ಣ, ಬಲಿಭದ್ರ ರಾಜ, ಭಾಸ್ಕರರಾಜು, ಶಿವರಾಜು, ಛಲದಂಕ ರಾಜು, ಶ್ರೀರಾಜು, ಲಲಿತಾಂಗರಾಜು, ಲಾವಣ್ಯರಾಜು — ನಿಮಗೆಲ್ಲ ಸುಖೋಜ್ವಲವೆ ಅಣ್ಣಾ? ಎಲ್ಲರಿಗೂ ಕ್ಷೇಮವೇ?'' ಎಂದು ಅರ್ಕಕೀರ್ತಿಯು ಮೂವತ್ತು ಸಾವಿರ ತಮ್ಮಂದಿರನ್ನೂ ವಿಚಾರಿಸಿದನು. ಅವರನ್ನು ಒತ್ತಿಗೆ ಎಳೆದುಕೊಂಡು ಅಪ್ಪಿಕೊಂಡನು; ಕೊರಳಿಗೊಂದೊಂದು ಹಾರವನ್ನು ಹಾಕಿದನು. ''ನಮಗೆ ಯಾವಾಗಲೂ ಕ್ಷೇಮವೇ. ಈಗ ದೇವರಿಬ್ಬರೂ ಬಂದುದರಿಂದ ಇಂದು ನಮ್ಮ ಸಂತೋಷ ವೆಗ್ಗಳಿಸಿತು'' ಎಂದು ಅವರೆಲ್ಲರೂ ಒಂದೆ ವಿನಯದಿಂದ ಎರಗಿದರು. ಕೂಡಲೇ ಹತ್ತಿರದಲ್ಲಿದ್ದ ಸೋದರ ಮಾವಂದಿರಿಗೂ ಕೈಮುಗಿದು ನಮಸ್ಕರಿಸಿದರು. ಆ ಮೇಲೆ ಅಷ್ಟಚಂದ್ರರೂ ಮಂತ್ರಿಗಳೂ ತಲೆಬಾಗಿಸಲು ಅವಧರಿಸಿದರು. ಅನಂತರ ಅರಸು ಮಕ್ಕಳೂ ಮಂತ್ರಿಸಖರೂ ಕಾಣಿಕೆಯಿಕ್ಕಿ ದೊರೆಗಳಿಬ್ಬರಿಗೂ ಎರಗಿದರು. ಪರಿವಾರ ಪ್ರಜೆಗಳೆಲ್ಲ ಕೈಮುಗಿದು ಸಾಗರ ಮೊಳಗುವಂತೆ ಮಾತನಾಡಿದರು.

ಯುವರಾಜನು ಬಂದವರಿಗೆಲ್ಲ ವಿನಯವನ್ನು ನುಡಿದು ಬಂದ ಅಂದಳದಿಂದ ಇಳಿದು, ಆನೆಯನ್ನೇರಿ ಸೋದರರೊಂದಿಗೆ ಅಯೋಧ್ಯೆಗೆ ಮುನ್ನಡೆದನು. ಅರ್ಕಕೀರ್ತಿಯು ಜಯಘೋಷವೆಂಬ ಆನೆಯನ್ನೇರಿದ್ದನು. ಆದಿರಾಜನು ದುಂದುಭಿ ಘೋಷವನ್ನೇರಿದ್ದನು. ಆ ರೀತಿಯಲ್ಲಿ ಭದ್ರವಾಗಿರುವ ಇಭಗಳನ್ನೇರಿ ಸೋದರರೆಲ್ಲ ಒಂದಾಗಿ ಬೆಡಗಿನಿಂದ ನಡೆದರು. ಎತ್ತಿ ಹಿಡಿದ ಧ್ವಜಗಳಿಂದಲೂ ಶ್ವೇತಛತ್ರಗಳಿಂದಲೂ ಬೀಸುತ್ತಿರುವ ಚಾಮರಗಳಿಂದಲೂ ಮೊಳಗುತ್ತಿರುವ ವಾದ್ಯಘೋಷಗಳಿಂದಲೂ ಕೂಡಿ, ಅವರು ಮಹಾವೈಭವದಿಂದ ಪುರವನ್ನು ಹೊಕ್ಕರು. ಅರಮನೆಗಾಗಿ ನಂಬುಗೆವಂತರು ತಮ್ಮ ಅರಸಿಯರನ್ನು ಕರೆದೊಯ್ಯಲು ಇತ್ತ ಯುವರಾಜನು ಅರುಹನಾಲಯಕ್ಕೆ ಹೋಗಿ, ಅಲ್ಲಿಂದ ತಂದೆಯ ಬಳಿಗೆ ಬರುತ್ತಿದ್ದನು.

ಅವರಿಂತು ಬರುತ್ತಿರುವುದನ್ನು ಮದಿಲ, ಮಾಡ, ಮಾಳಿಗೆ, ಗೋಪುರಗಳನ್ನೇರಿ ಪುರಸತಿಯರು ನೋಡುತ್ತಿದ್ದರು. ಅವರು ಮೋಡಗಳನ್ನೇರಿ ನೋಡುತ್ತಿರುವ ಖಚರಿಯರಂತೆ ಕಾಣುತ್ತಿದ್ದರು. ಒಬ್ಬನನ್ನು ನೋಡಿದ ಕಣ್ಣು ಮತ್ತೊಬ್ಬನಿಗೆ ಹಬ್ಬವಾಗುತ್ತಿತ್ತು, ಹಾಗೆ ಹಬ್ಬಿದ ಕಣ್ಣುಗಳು ಅಲ್ಲಿಯೇ ಹೆಬ್ಬೇರು ಬಿಡುತ್ತಿದ್ದುವು. ಅವುಗಳನ್ನು ತೆಗೆದರೂ ಬಾರವು. ಅಂಥವರ ಉಬ್ಬಸವನ್ನು ಬಣ್ಣಿಸುವುದೇ ಕಷ್ಟ.

ಕಂದರ್ಪನು ಹಲವು ರೂಪಗಳನ್ನು ಧರಿಸಿ ಲೋಕಕ್ಕೆ ದಾಳಿಯಿಟ್ಟನೋ ಎಂಬಂತೆ ಅವರಿದ್ದರೆಂದು ಹೇಳುತ್ತಿದ್ದರು. ತಂದೆಯ ಚೆಲುವನ್ನೂ ಪಡೆದರೊ ಎಂಬಂತೆ ಅವರಿದ್ದರೆಂದು ಹೇಳುತ್ತಿದ್ದರು. ತಂದೆಯ ಚೆಲುವನ್ನೂ ತಾಯಿಗಳ ಚೆಲುವನ್ನೂ ಕೇಳಬೇಕೆ? ಎಂದವರು ಎದೆಯಲ್ಲಿ ಮೆಚ್ಚುತ್ತಿದ್ದರು.

''ನಮ್ಮ ಸ್ವಾಮಿಯು ಇಂಥ ಲಾವಣ್ಯ ಸಂತಾನವನ್ನು ಏನು ಪುಣ್ಯ ಮಾಡಿ ಪಡೆದನೊ! ಅಮಮ! ಅದೊಂದು ವಿಚಿತ್ರವಾಗಿದೆ. ನಮ್ಮ ಅರಸು ಧರೆಯಲ್ಲಿರುವ

ಉತ್ತಮ ವಸ್ತುಗಳನ್ನಾಯ್ದು ತಂದಿರುವನು. ಸುರಕುಮಾರರನ್ನೇ ಸೂರೆಗೈಯ್ದು ತಂದಿರಬೇಕು. ಒಂದಾದರೂ ಕರಡು ಇಲ್ಲದೆ ಈ ಕಟ್ಟಾಣಿ ಮುತ್ತುಗಳನ್ನು ನಮ್ಮ ಅರಸನಿಗಾಗಿ ಯಾವ ಶರಧಿಯು ಪಡೆದುದೊ! ಇವನೆಂದರೆ ಹೊಳಪು ಹೋಗದ ಬಹು ಪುತ್ರರನ್ನು ಪಡೆದ ಸೌಂದರ್ಯ ಸಮುದ್ರವೇ ಆಗಿದ್ದಾನೆ. ಚಕ್ರಿಯ ಹೆಂಡತಿಯರಿಗೆ ಒಬ್ಬರಿಗೂ ಹಿಂಡು ಮಕ್ಕಳಿಲ್ಲ. ಚೆಲುವಿನ ಒಬ್ಬೊಬ್ಬರೇ ಶಿಶುಗಳು.''

ಎಂದು ಪುರಸತಿಯರು ಇಚ್ಛಿಸಿ ನೋಡುತ್ತಿದ್ದರು; ಮಾತನ್ನಾಡಿ ಉಬ್ಬಿಕೊಳ್ಳುತ್ತಿದ್ದರು.

ತಮ್ಮನ್ನು ಎಲ್ಲರೂ ನೋಡುತ್ತಿದ್ದರೂ ತಮ್ಮ ಕಣ್ಣು ಕೆಲಬಲವನ್ನು ಒಮ್ಮೆಯಾದರೂ ನೋಡದಂತೆ ಚಿಮ್ಮಿದಂತೆ, ಅವರು ಬಂದು, ರಾಜಗೃಹದ ಮುಂದೆ ಆನೆಯನ್ನು ನಿಲ್ಲಿಸಿದರು. ತಮಗೆ ಎರಗಿದ ತೇಜರನ್ನೂ ಇಷ್ಟರನ್ನೂ ಕಳುಹಿಸಿ, ಸೇನೆಗೆ ಕೈಬೀಸಿ ಸನ್ನೆಮಾಡಿ ಯುವರಾಜನು ತನ್ನ ತಮ್ಮಂದಿರೊಂದಿಗೆ ಆನೆಯಿಂದ ಭೂಮಿಗಿಳಿದನು.

ಹಿರಿಯಣ್ಣನು ಬಟ್ಟೆಯನ್ನುಟ್ಟುಕೊಂಡು ಮುಂದೆ ಹೋಗಲು ಆವನ ಬೆನ್ನ ಕಡೆಯಿಂದಲೇ ಸಹೋದರರೂ ನಡೆದರು. ಅವರು ಅಯ್ಯನನ್ನು ಕಾಣುವುದಕ್ಕಾಗಿ ಅರಮನೆಯೊಳಗಿನ ಮುತ್ತಿನ ಚಾವಡಿಗೆ ಬರುತ್ತಿದ್ದರು. ಮುತ್ತಿ ಬರುತ್ತಿರುವ ಪುತ್ರರ ಕಂಡು ಹೆತ್ತ ತಂದೆಯು ಎದೆಯಲ್ಲೇ ಹಿಗ್ಗುತ್ತಿದ್ದನು. ಅಯ್ಯನನ್ನು ಕಂಡೊಡನೆ ಅಣುಗರಲ್ಲಿ ರೋಮಾಂಚದ ಸುಗ್ಗಿಯುಂಟಾಯಿತು. ಅವರು ಉತ್ಸಾಹದಿಂದ ನಡೆದರು.

''ದೇವರಾಜ ಸನ್ನಿಭವೆ, ಯುವರಾಜನು ಬರುತ್ತಿದ್ದಾನೆ — ಸ್ವಾಮಿ ಅವಧಾನ. ವಿವೇಕ ನಿಧಿಯಾದ ಆದಿರಾಜನು ಬರುತ್ತಿದ್ದಾನೆ — ಸ್ವಾಮಿ ಪರಾಕು'' ಎಂದು ವೇತ್ರಧರರು ಸ್ವರವೆತ್ತಿ ಹೇಳಿದರು.

''ಕಾಮೋದ್ರೇಕದ ನುಡಿಗೆ, ಅನ್ಯಸತಿಗೆ, ಅನ್ಯಧನಕ್ಕೆ ಸುತ್ತುಗಟ್ಟಿದೆ ಸತ್ಯವೆಂಬ ಕಂಠಮಾಲೆಯನ್ನು ಧರಿಸಿದ ಶುಚಿಗಳು ಇವರು'' ಎಂದು ಸುಕಂಠರು ಹಾಡಿದರು.

''ಒಡೆಯನೇ, ನಿನ್ನ ಅಯ್ಯನನ್ನು (ಮಗನನ್ನು) ಕಾಣು ಕಾಣು. ನಮಗಿದು ಕಾಣುವ ಭಾಗ್ಯವಾಯಿತು'' ಎಂದವರು ಹೇಳುತ್ತಿರುವಾಗ ಯುವರಾಜನು ನಿವಾಳಿಯಿಟ್ಟು, ಕಾಣಿಕೆಗೊಟ್ಟು ಅಡ್ಡಬಿದ್ದನು. ಅವನೊಡನೆ ಆದಿರಾಜನೂ ಅಡ್ಡ ಬಿದ್ದನು. ಅದೇ ರೀತಿಯಲ್ಲಿ ಸಹೋದರರೆಲ್ಲರೂ ಪ್ರೀತಿಯಿಂದ ಎರಗಿದರು. ಅಡ್ಡಬಿದ್ದ ಇಬ್ಬರನ್ನೂ 'ಏಳಿರಿ, ಏಳಿರಿ' ಎಂದು ಭರತೇಶನು ಹೇಳಿ, ಅವರಿಗೆ ಆಸನಗಳನ್ನು ಕೊಡಿಸಿದನು. ಅವರೆದ್ದು ಅದರಲ್ಲಿ ಕುಳಿತುಕೊಂಡರು.

''ಸರ್ವರೂ ಏತಕ್ಕಾಗಿ ಅಡ್ಡಬಿದ್ದರೊ ತಿಳಿಯದು'' ಎಂದು ಚಕ್ರಿಯು ಎದೆ ಹಿಗ್ಗಿ ನಕ್ಕನು. ''ವೃಷರಾಜು ಏಳು. ಹಂಸರಾಜು ಏಳು. ಸರ್ವರೂ ಏಳಿ'' ಎಂದಾಗ ಅವರೆಲ್ಲರೂ ಎದ್ದುನಿಂತರು. ಆಗ ತಂದೆಯು, ''ನೀವೇಕೆ ಎರಗಿದಿರಿ — ಹೇಳಿರಿ'' ಎಂದು ವಿಚಾರಿಸಿದನು.

''ನಮ್ಮ ಅರಸುಗಳು (ಅಣ್ಣಂದಿರು) ದೇವರಿಗೆ ಅಡ್ಡಬಿದ್ದರು. ಅದನ್ನು ಕಂಡು ನಾವು ಹೆಮ್ಮೆಯಿಂದ ಇರಬಹುದೇ — ಎಂದು ಅಡ್ಡ ಬಿದ್ದೆವು'' ಎಂದು ಆ ಸೋದರರು ಹೇಳಿದರು. ನಿಜವಾಗಿಯೂ ಅವರು ಮಹಾ ವಿನಯಶಾಲಿಗಳು. ಸಂತೋಷಗೊಂಡ ತಂದೆಯು, ಕುಳ್ಳಿರೆಂದಾಗ, ಮಕ್ಕಳೆಲ್ಲರೂ ಜಂಬುಖಾನೆಯಲ್ಲಿ ಕುಳಿತುಕೊಂಡರು.

ಅನಂತರ ವಿಮಲರಾಜ, ಭಾನುರಾಜರು ಮಾನಿತವೆಂಬಂತೆ ಕಾಣಿಕೆಯಿಟ್ಟು ಭರತೇಶನನ್ನು ಕಂಡರು. ಕಾಣಿಕೆ ಕೊಟ್ಟು ಕೈಮುಗಿದ ಅವರನ್ನು ಚಕ್ರಿಯು ಅಪ್ಪಿಕೊಂಡು, ''ವಿಮಲರಾಜನು, ಭಾನುರಾಜನು ಬಂದುದು ಉತ್ತಮವಾಯಿತು'' ಎಂದಾಗ ಅವರಿಬ್ಬರೂ, ಷಟ್‌ಖಂಡದ ರಮಣನೆ ತಮ್ಮನ್ನು ರಾಜನೆಂದನೆಂದು ಉಬ್ಬಿಕೊಂಡರು. ''ಭಾನುನಾಮ ಬಾ, ವಿಮಲನಾಮ ಬಾ'' ಎಂದು ಕರೆಯುತ್ತಿದ್ದವನು ಈಗ ಶೋಭಿಸಿ, ರಾಜರೆಂದು ಕರೆದಾಗ ಮನಸ್ಸಿನಲ್ಲಿ ವೈಭವವಾಗದಿರುವುದೆ?

''ನಾವು ಬಂದುದರಿಂದ ಉತ್ತಮವೇನು? ದೇವರ ಸಮ್ಮುಖದಿಂದ ನಮಗೇ ಉತ್ತಮಾರ್ಥವಾಯಿತು. ಹೂವಿನೆಡೆಗೆ ಹೋದ ಗಾಳಿಗೆ ಪರಿಮಳ ದೊರೆತಂತೆ ನಮಗಾಯಿತು'' ಎಂದು ಆ ರಾಜರಿಬ್ಬರೂ ನುಡಿದರು.

''ನಿಮ್ಮ ನುಡಿಯೇನೊ ಒಳ್ಳಿತಾಗಿದೆ; ಆದರೆ ನಡೆಯು ಕಷ್ಟವಾಗಿದೆ'' ಭರತೇಶನು ಒಂದಿಷ್ಟು ಕಟಕಿಮಾಡಿದನು. ಆದಕ್ಕವರು, ''ಬಡವರ ನಡತೆ ಬಲ್ಲಿದವರಿಗೆ ಒಪ್ಪದು'' ಎಂದು ಭಾವನೊಡನೆ ಪ್ರತಿಮಾತನ್ನಾಡಿದರು.

''ನೀವೆಂದು ಬಡವರು? ಬಲ್ಲಿದರೆ.''

''ದೇವರಿಂದ ಅಧಿಕರೆಂದರೆ ತಪ್ಪದು; ಅಧಿಕರೇ?''

''ಎಲ್ಲಾ ರಂಜನೆ ಸಾಕು, ಸಾಕು. ನೀವು ನಮ್ಮಿಂದಲೂ ಬಲ್ಲವರು.''

''ಸೊಲ್ಲು ತಪ್ಪದು. ದೇವರಿಂದ ಬಲ್ಲವರು ನಾವಲ್ಲದೆ ಮತ್ತಾರಿರುವರು?''

''ಜಾಣ್ಮೆಯಿಂದ ಜಾರುತ್ತಿದ್ದೀರಿ. ನೀವು ನಮ್ಮನ್ನು ಮೀರಿದ ಉದ್ದಂಡರು.''

''ನಮ್ಮಲ್ಲಿರುವ ಉದ್ದಂಡತನವು ಯಾವುದು? ತೋರಿಸಿರಿ.''

''ನುಡಿಯಬೇಕೆ?''

''ಬೇಕು.''

''ಬೇಡ. ಕೇಳಿ ಒಪ್ಪಿಕೊಳ್ಳಿ; ಸುಮ್ಮನಿರಿ.''

''ಪೃಥ್ವಿಗೆ ಅಗ್ಗಳರಾದವರು ಒಂದನ್ನು ಸೂಚಿಸುತ್ತೇವೆಂದು ಒತ್ತಿತಡೆಯಬಹುದೆ?''

''ನಮ್ಮ ಪುತ್ರರನ್ನು ನಮ್ಮನ್ನು ಕೇಳದೆ ಕೊಂಡೊಯ್ದು ನಿಮ್ಮ ಪುತ್ರಿಯರನ್ನು ನೀವು ಅವರಿಗೆ ಸಂಬಂಧ ಮಾಡುವಾಗ ಬಡವರೇ? ನಮಗೂ ನೀವು ವೆಗ್ಗಳರಲ್ಲವೆ? ಈ ಭೂಮಿಯಲ್ಲಿ ಹೆತ್ತವರನ್ನು ಕೇಳದೆ ತಮ್ಮ ಹೆಣ್ಣುಗಳನ್ನು ಕೊಡುತ್ತಾರೆಯೆ? ಅದರಿಂದ ನಿಮ್ಮ ನಡೆ ಕಷ್ಟ; ನಮ್ಮನ್ನು ಮೀರಿದ ಉದ್ದಂಡರು; ಬಡವರೆಂದು ಹೇಳಬಾರದು. ನಿಮಗೆ ಸೊಕ್ಕಲ್ಲವೆ? ಷಟ್ಖಂಡದಲ್ಲಿ ನನ್ನನ್ನು ಮಿಕ್ಕಿ ಒಂದನ್ನಾದರೂ ಮಾಡುವವರುಂಟೆ? ನನ್ನನ್ನು ಲೆಕ್ಕಿಸದೆ ನೀವು ಒಂದನ್ನು ಮಾಡಿದಿರಿ; ದಕ್ಕಿಸಿಕೊಂಡಿರಿ.''

ಚಕ್ರಿಯು ನಗುನಗುತ್ತ ಆಡಿದ ಮಾತಿನ ಬಿರುಸನ್ನು ಅಲ್ಲಿದ್ದವರು ತಿಳಿದರು.

''ಪುತ್ರಿಯರನ್ನು ಕುವರರಿಗೆ ನಿವೇದಿಸುವಾಗ, ಒಡೆಯ, ನಿನ್ನನ್ನು ಕೇಳದೆ ಆಗಿಹೋಯಿತು. ಆದರೆ ಸೋದರ ಮಾವಂದಿರು ಕೊಂಡೊಯ್ದು ಕೊಡುವುದಿಲ್ಲವೆ?'' ಎಂದು ನಾಗರನು ವಿನೋದವನ್ನೇ ಮುಂದುವರಿಸಿದನು.

''ತಾಯ ಸೋದರರು ಅಳಿಯಂದಿರ ಕೊಂಡೊಯ್ಯುವ ನ್ಯಾಯದಲ್ಲಿ, ಇವರೂ ಕುವರರನ್ನು ಒಯ್ವ ರೀತಿಯನ್ನು ನೀವೇ ತಾಳಿದೆಯಲ್ಲವೆ ಒಡೆಯ'' ಎಂದು ಎದೆತಟ್ಟಿ ಸಹಾಯನು ಇಂಪಿನ ಮಾತುಗಳನ್ನು ನುಡಿದನು.

''ಇವರೊಮ್ಮೆ ಕರೆದು, ಹೆಣ್ಣುಗಳನ್ನು ಕೊಡುವೆವು ಎಂದರೆ ಆ ಕುವರರು ಅಯ್ಯನನ್ನು ಕೇಳದೆ, ಕೂಡಲೇ ಅವಧರಿಸುವಾಗ, ನೋಡು, ಇವರು ತಂಗಿಯರ ಆತ್ಮಭವರಾದರಲ್ಲವೇ? ಹೋ — ಅದು ಹುಸಿಯಾಗದು. ನಿನಗೆ ಅವರೊಡನೆ ಪಕ್ಷವೆ? ನೀವೂ ಅವರು ಒಂದೆ ಕುಲವಲ್ಲವೆ? ಲಕ್ಷಣವಾಯ್ತು ಆಯ್ತದು ಸಾಕು. ದಕ್ಷಿಣ ಕುಟಿಲ ವಿದೂಷಕ ಸಖರೆ, ನೀವಾದರೂ ಪರೀಕ್ಷಿಸಿ ಹೇಳಿರಿ. ನನ್ನನ್ನು ಕೇಳದೆ ಕೊಟ್ಟರೆ ಇವರದು ತಪ್ಪೊ, ಅಲ್ಲದೆ ತಪ್ಪು ನನ್ನದೊ, — ಹೇಳಿ.''

ಎಂದು ಅವರಿಬ್ಬರ ಮಾತುಗಳನ್ನು ಕೇಳಿದ ಭರತೇಶನು ಮರುಮಾತುಕೊಟ್ಟನು.

''ಚಿನ್ನ ಕಪ್ಪಾದಂದು ನಿನ್ನಲ್ಲಿ ತಪ್ಪು; ಕೇಳಿ'' ಎಂದು ವಿದೂಷಕನು ಮಾತನ್ನಾರಂಭಿಸಿದನು. ''ಅವರದೇ ತಪ್ಪು, ಅದಕ್ಕೆ ತಕ್ಕ ಅಪರಾಧವನ್ನು ನಾನೇ ಯೋಚಿಸಿ, ಅವರನ್ನು ತಿದ್ದುವೆನು. ಇದಕ್ಕೆ ಭರತೇಶ, ನೀನೂ ಒಪ್ಪಬೇಕು; ಈ ನೃಪರಿಬ್ಬರೂ ಒಪ್ಪಬೇಕು. ಮಿಕ್ಕವರೆಲ್ಲರೂ ಆಲಿಸಿರಿ. ಪಿತನನ್ನು ಕೇಳದೆ ಮೊದಲೇ ಹೆಣ್ಣನ್ನಿತ್ತ ತಪ್ಪಿಗಾಗಿ, ಅವರಲ್ಲಿನ್ನು ಮುಂದೆ ಹುಟ್ಟುವ ಸುತೆಯರೆಲ್ಲರೂ ನಿನ್ನ ಸುತರಿಗೇ ಸಲ್ಲುವರು. ನೀನೊಮ್ಮೆ ಈ ಸ್ಥಿತಿಗೆ ಒಪ್ಪು, ಇನ್ನೊಂದು ಮಾತಿದೆ — ಕೇಳು. ಈ ನೃಪರ ತಂಗಿಯರಲ್ಲಿ ಆಗಿಗ ನೆರೆವ ಕನ್ನೆಯರೆಲ್ಲರೂ ನಿನಗೆ ಸಲ್ಲುವರು. ನಿಮಗೆ ಈ ಕಾರ್ಯಗಳ ತಿದ್ದಿ ಕೊಟ್ಟು, ನಾನು ಬರಿದೆ ಹೋಗುವಂತಿಲ್ಲ, ಹೋದರೆ ಅದಕ್ಕೆ ಬ್ರಾಹ್ಮಣರು ಒಪ್ಪುವಂತಿಲ್ಲ, ಅವರ ಊರಿನ ವಿಪ್ರರಲ್ಲಿ ಇನ್ನಾಗುವ ಚೆಲುವೆಯರು ನನಗೆ.''

ಎನ್ನುತ್ತಿರುವಾಗಲೇ ವಿದೂಷಕನು ನಕ್ಕುಬಿಟ್ಟನು. ಅನುಕೂಲ ನಾಯಕನು ಅದಕ್ಕೆ ''ಅಹುದಹುದು'' ಎಂದು ನಕ್ಕನು. ಮಂತ್ರಿಯೂ ನಕ್ಕುಬಿಟ್ಟನು. ಭರತೇಶನು ಅವರ ಅನುವನ್ನು ನೋಡಿ, ''ಎಲೆಲೆ, ಮೂವರು ವಿಪ್ರರು ಒಂದಾದರೆ ಅನುಪಮವಾಯಿತು'' ಎಂದನು.

ಕುಟಿಲ, ವಿಟ, ನಾಗರರು ಕೂಡಲೇ ಅದಕ್ಕಿಷ್ಟು ಕಟಕಿಯಾಡಿದರು. ಕ್ಷತ್ರಿಯರು ನಟನೆ ಲೇಸೆಂದರು.

''ವಿದೂಷಕ ನೀನು ತಿದ್ದಿರುವುದೊಂದು ಭೂಷಣವಾಗಿದೆ'' ಎಂದು ಭರತೇಶನು ವಿದೂಷಕನೊಡನೆ ಪ್ರೀತಿಯಿಂದಾಡಿದನು.

''ಅಣ್ಣಾ ತಮ್ಮಂದಿರು ಬಳಲಿದಿರಿ; ರಾಜ್ಯದಲ್ಲಿ ಅಲೆದಾಡಿದಿರಿ.'' ಆಗ ಅವರು ಥಳಿಲ್ಲನೆ ಎದ್ದು ನಿಂತರು. ಯುವರಾಜನು ಕೈಮುಗಿದು, ''ಸಹಜವಾದ ಲೀಲಾರ್ಥವಾಗಿ ನಾವು ನಾಡಿನಲ್ಲಿರುವಾಗ ಬಹುವಾರ್ತೆ ಬಂದು, ದೇವರಿಗೆ ಕಪಿ ತೋರಿದುವು. ನಮ್ಮ ಕಾರ್ಯ ಚೇಷ್ಟಿತವೆಂದು ತೋರಿತು. ಜಗದಲ್ಲಿ ಅನ್ಯಾಯಕ್ಕೆ ಮನವಿಟ್ಟು, ದೇವರ ಮುಖಕ್ಕೆ ನಾನು ಚಿಂತೆ ತೋರಿಸಿದಾಗ, ಮಗನಾದ ಲೀಲೆ ತಂದೆಗೆ ಬಂದ ಶೂಲೆ ಎಂಬ ಕೀಳು ಮಾತಿಗೊಳಗಾದೆ. ನಾನು ಸುಖಗಳನ್ನು ಬಯಸಬೇಕೆ? ನಿನ್ನ ವಾರ್ತೆಯನ್ನು ಹೇಳಿದರೆ,

ಅವು ತಮ್ಮ ತಾವೇ ಬಯಸಿ ಬರುವುದಿಲ್ಲವೆ? ದೇವರ ಹೊಟ್ಟೆಯಲ್ಲಿ ಬಂದು, ದಾರಿತಪ್ಪಿ ನಡೆವೆನೇ?'' ಎಂದು ನಿವೇದಿಸಿದನು.

''ಮಗನೆ ಬಹುವಾರ್ತೆ ಬಂದರೇನು ಆ ಕ್ಷಣ ತೆಗೆದುಹೋದುವು. ರವಿಗೆ ಮುಗಿಲು ಮುಚ್ಚಿದರೆ ಎಷ್ಟು ಹೊತ್ತಿರುವುದು. ನನಗೆ ಚಿಂತೆಗಳಿವೆಯೆ? ಅವುಗಳು ಹೋದುವು. ನೀನು ನನ್ನನ್ನು ಮೀರುವವನಲ್ಲ. ಈ ಮೇಘೇಶನು ನನ್ನ ಮಗನಲ್ಲದೆ ಪರನಲ್ಲ. ಈ ನೋವು ಬಾರದು. ಮರೆತುಬಿಡಿ'' ಎಂದ ಚಕ್ರಿಯ ಹಿತವಚನಕ್ಕೆ ಇಬ್ಬರೂ ಆನಂದದಿಂದ ಎರಗಿದರು. ಕೆಂಪಾದ ಪಾದಗಳ ಮೇಲೆ ಹಣೆಯಿಟ್ಟು ನಮಸ್ಕರಿಸಿದವರನ್ನು ಅಪ್ಪಿಕೊಂಡು ಚೀನಾಂಬರ, ಆಭರಣಾದಿಗಳನ್ನು ಕೊಟ್ಟು, ತುಂಬಿದ ಸಭೆಯಲ್ಲಿರುವ ಎಲ್ಲರನ್ನೂ ಮನ್ನಿಸಿದನು.

ಅದನ್ನು ನೋಡಿ ಮಂತ್ರಿ ಬುದ್ಧಿ ಸಾಗರನು ಸೊಗಸಾಯಿತೆಂದು ತಲೆ ತೂಗಿದನು. ಅಷ್ಟರಲ್ಲಿ ಘಳಿಯಾರದಲ್ಲಿ ಶಂಖಧ್ವನಿಯು ಮೊಳಗಿತು. ಆ ಸನ್ನೆಯನ್ನು ಕೇಳಿದವರೆಲ್ಲರೂ ಚಕ್ರೇಶನಿಂದ ಕಳುಹಿಸಿಕೊಂಡರು. ಎಲ್ಲರನ್ನೂ ಕಳುಹಿಸಿದ ಮೇಲೆ ಸುಕವಿಜನಾಂಭೋಜನಾದ ಭರತೇಶನು ಮೈದುನರನ್ನೂ ಮಕ್ಕಳನ್ನೂ ಕೂಡಿಕೊಂಡು ಚಕಚಕಿಪ ಆಸ್ಥಾನದಿಂದೆದ್ದನು.

''ಪರಾಕು, ಅಕಳಂಕ ಚಂದ್ರ, ಜೀಯ' ಎಂಬ ಧ್ವನಿ ಅಂತಃಪುರ ತುಂಬಿತು. ''ಬಾ ಭಾನುರಾಜ, ಬಾ ಭಾನುರಾಜ, ಬಾ ವಿಮಲರಾಜ'' ಎಂದು ಗೌರವ ವಾಕ್ಯಗಳಿಂದ ಆ ರಾಜರಿಬ್ಬರನ್ನು ಉಬ್ಬಿಸುತ್ತ ರಾಜರಾಜನಾದ ಭರತೇಶನು ರಾಜಗೃಹವನ್ನು ಹೊಕ್ಕನು.

ಕುಸುಮಾಜಿ, ಕುಂತಲಾವತಿಯರ ಮನಸ್ಸಿನ ಸಂತೋಷ ಹೆಚ್ಚಿತು. ತಮ್ಮ ಸೋದರರನ್ನು ವಸುಧಾಧಿಪತಿಯು ರಾಜರಾಜರೆಂದು ಸನ್ಮಾನಿಸುವಾಗ ಅವರು ಅದಕ್ಕಾಗಿ ಹಿಗ್ಗಿದರು. ಅಣ್ಣನಿಗಾದ ಒಸಗೆಗೆ ಹೆಣ್ಣುಗಳು ನಲಿಯುತ್ತಾರೆ. ಆ ಹೆಣ್ಣುಗಳಿಗೆ ಬಂದ ಸಿರಿಗೆ ಅಣ್ಣಂದಿರು ಉಬ್ಬುವರಲ್ಲವೆ! ಆಗ, ಈ ಎರಡು ಪ್ರೀತಿ ಬಣ್ಣಕ್ಕೆ ಬಂದಿದ್ದುವು. ತಂಗಿಯರಲ್ಲೂ ಅಣ್ಣಂದಿರಲ್ಲೂ ಅನ್ಯೋನ್ಯ ವಿನಯವು ಸಂಗಡಿಸಿದುವು. ಸುತರು ಮಂಗಲಾಂಬಿಕೆಯರನ್ನು ಅನ್ಯೋನ್ಯ ವಿನಯಮಾಡಿದರು. ಆಗ ಅಲ್ಲಿ ಆನಂದದ ಒಸಗೆಯ ಗಂಗಾಪ್ರವಾಹವೇ ಹರಿಯಿತು!

ಮೂವತ್ತು ಸಾವಿರ ಅಣುಗರು, ಮೈದುನರು ಮನೆತುಂಬಿ ಕುಳ್ಳಿರಲು ಆ ವಿಭುವೊಂದೇ ಪಂಕ್ತಿಯಲ್ಲಿ ಕುಳಿತು ಅಮೃತಾನ್ನ ಸೇವಿಸಿದನು. ಇದರಿಂದ ಎಲ್ಲರೂ ತೃಪ್ತಿ ಪಡೆದರು. ಭರತೇಶನಾಗ ಸೊಸೆಯರನ್ನು ಕಂಡು ಉಡುಗೊರೆಯಿತ್ತನು. ಅಣುಗರನ್ನೂ ಮೈದುನರನ್ನೂ ನಸುನಗೆಯಿಂದಲೇ ಬೇರೆ ಮನೆಗಳಿಗೆ ಕಳುಹಿಸಿ, ತಾನು ವಿಲಾಸದಲ್ಲಿದ್ದನು. ಅಣುಗರೆಲ್ಲರು ತಮ್ಮ ವನಿತೆಯರೊಂದಿಗೆ ಅಜ್ಜಮ್ಮನ ಅರಮನೆಗೆ ಹೋಗಿ ಅವರನ್ನು ಕಂಡು ಆಶೀರ್ವಾದ ಪಡೆದು ಸುಖದಲ್ಲಿದ್ದರು.

## ೬

# ಜನನೀವಿಯೋಗ

ಯುವರಾಜನು ಬಂದ ಮೇಲೆ ಮೇಘರಾಜ ತನ್ನ ರಾಜ್ಯಕ್ಕೆ ಹೋದನು. ಹೋಗುವಾಗ ಹಾದಿಯಲ್ಲಿ ವಿವಿಧ ಸೇನೆಯನ್ನು ಬಿಟ್ಟು, ತವಕದಿಂದ ಬಂದು ಭರತಚಕ್ರಿಯನ್ನು ಕಂಡು ಆ ಕ್ಷಣದಲ್ಲೇ ಮರಳಿಹೋದನು. ಅಕ್ಕತಂಗಿಯರೂ ಭಾವಮೈದುನರೂ ತನುಜೆಯರೂ ಅವರ ಸಂತೋಷವನ್ನು ಅನುಗೊಳಿಸುವ ಅಳಿಯಂದಿರೂ ಅಲ್ಲಿ ಇಪ್ಪತ್ತು ದಿನವಿದ್ದರು. ಕೋವಿದರಾದ ವಿಮಲರಾಜನೂ ಭಾನುರಾಜನೂ ಭಾವನಿಗೆ ಕಾಣಿಕೆಯಿತ್ತು, ಚಕ್ರೇಶ್ವರನಿತ್ತ ಮಹಾವಸ್ತುವನ್ನು ಕೈಕೊಂಡು ತಮ್ಮ ಪುರಕ್ಕೆ ಹೋದರು. ಭೂನಾಥನು ಒಲಿದುದರಿಂದ ಚಾಪೆಯು ಹೋಗಿ ಜಂಬುಖಾನೆಯಾಯಿತು. ಶ್ರೇಷ್ಠವಾದ ರಾಜ ಹೆಸರೂ ಮಾನಿತವಾಯಿತು. ಆನೆ ಕುದುರೆ ರತ್ನ ಮೊದಲಾದ ಹೆಚ್ಚಿನ ಲಾಭದಿಂದವರು ಹೋದರು.

ಭರತೇಶನಿಗೆ ಒಂದು ತಪ್ಪಿದಾಗ ಇನ್ನೊಂದು ಸಂದಣಿಸುತ್ತದೆ; ಬಂದ ಭಾವ ಮೈದುನರು ಅತ್ತ ಹೋಗಲು ಇತ್ತ ಒಂದೆರಡು ದಿನಗಳ ಮೇಲೆ ಪುರದೊತ್ತಿಗೆ ಇನ್ನೊಂದು ಬಂತು.

ಅನಂತವೀರ್ಯ ಸ್ವಾಮಿಯ ಶ್ರೇಷ್ಠ ಗಂಧಕುಟಿಯು ತೆಲುಗು, ಕನ್ನಡ, ಹುರುಮುಂಜಿ, ಸೊರಟಿ, ಗುಜ್ಜರಾದಿ ನಾಡುಗಳನ್ನು ಸುತ್ತಿಕೊಂಡು ಅಯೋಧ್ಯೆಗೆ ಅಧಿಕವಾದ ಲೀಲೆಯಿಂದ ಬಂತು. ಸುರಭೇರಿ ಮೊಳಗಿತು. ಸರ್ವರೂ ಜಯಜಯವೆಂದರು. ಭೂಮಿಯಲ್ಲಿ ಪ್ರಭೆಯು ತುಂಬಿ ತುಳುಕಿ, ಸೂರ್ಯಮಂಡಲವೇ ನಿಲ್ಲುವಂತೆ ಊರಹೊರಗೆ ಆಕಾಶದಲ್ಲಿ ಆ ಗಂಧಕುಟಿಯು ನಿಂತಿತು.

ಈ ಒಸಗೆಯನ್ನು ತಂದವರಿಗೆ ಭರತೇಶ್ವರನು ಉಚಿತವಿತ್ತನು. ಅವನು ಪ್ರಯಾಣದ ಪ್ರೀತಿಯಿಂದ ಅರಮನೆಯೊಳಗೆ ಹೋಗಿ, ಅದನ್ನು ಹೇಳಿದಾಗ ಎಲ್ಲರೂ ಸಂತೋಷದಿಂದ ನಲಿದರು. ತಾಯಿಯು ಸಂತೋಷರಸದಲ್ಲಿ ಓಲಾಡಿ ತೇಲಿದಳು.

ರಾಣಿಯರೆಲ್ಲರೂ "ನಾನು ನೋಡುತ್ತೇನೆ, ನಾನು ನೋಡುತ್ತೇನೆ" ಎಂದು ತಮ್ಮ ಬಯಕೆಯನ್ನು ತಿಳಿಸಿದರು. ಚಕ್ರಿಯು ಅವರನ್ನೆಲ್ಲ ಕರೆದೊಯ್ಯುವುದುಂಟೆ? ಮೃದು ಮಾತುಗಳಿಂದಲೇ ಅವರಿಗೆಲ್ಲವನ್ನೂ ತಿಳಿಸಿ ನಿಲ್ಲಿಸಿದನು.

ಆಗ ತಾಯಿ ಹೀಗೆಂದಳು :

'ತಲೆಯಲ್ಲಿ ಒಂದೇ ಒಂದು ಕಪ್ಪು ಕೂದಲು ಇಲ್ಲದಂತೆ ನರೆತಿರುವ ಮುದುಕಿ ನಾನಲ್ಲವೆ? ಅರುಹನನ್ನು ಕಂಡರೆ ಏನು ಅಣ್ಣ?"

ಆಕೆಯ ಮಾತುಗಳನ್ನು ಕೇಳಿದ ಭರತೇಶನು ಅವಳ ಸಂತೋಷಕ್ಕಾಗಿ ಒಪ್ಪಿದನು.

ಆನಂದಭೇರಿಯು ಮೊಳಗಿತು. ತಾಯೊಡನೆ, ಮಕ್ಕಳೊಂದಿಗೆ, ಭರತೇಶ್ವರನು ಬಂದು ಗಂಧಕುಟಿಯನ್ನು ಹೊಕ್ಕನು. ಪುರಜನರೂ ಪರಿಜನರೂ ಪೂಜಾವಸ್ತುಗಳನ್ನೂ ಪರಿಕರಗಳನ್ನೂ ಹಿಡಿದುಕೊಂಡು ಅವರೊಂದಿಗೆ ಬಂದಿದ್ದರು.

ಆಗ ಅಲ್ಲಿದ್ದ ವೇತ್ರಧಾರಿಗಳಾದ ದೇವತೆಗಳು, ಅತ್ತ ಸಾರು; ಅಲ್ಲಿ ಕುಳಿತಿರು; ತೊಲಗು ಎಂದು ಮುಂತಾಗಿ ಹೇಳುತ್ತಿದ್ದರು. ''ಭರತರಾಜೇಂದ್ರ ಬಾ, ಯುವರಾಜ ಬಾ, ಚಕ್ರೇಶ್ವರನ ಪುತ್ರರೆಲ್ಲರೂ ಬನ್ನಿರಿ. ಪರಮನನ್ನು ಕಾಣಿರಿ. ಭಾಪು ಭಾಪು ನಿಮ್ಮೊಂದು ಸಿರಿಯೆ!''

ಅಷ್ಟರಲ್ಲಿ ಭರತೇಶನ ಮಾತೆಯು ಬಂದಳು. ಆಕೆಯನ್ನು ನೋಡಿದ ದೇವ ವೇತ್ರಧಾರಿಗಳು ಹೀಗೆಂದರು : ''ಜಿನ, ಜಿನ, ಜನನಿಯೆ ಬಂದಳು. ನಮ್ಮ ಕಣ್ಣುಗಳ ಪುಣ್ಯವೆನ್ನಬೇಕು. ಈ ಪುಣ್ಯ ಮಾತೆಯು ಅನಂತವೀರ್ಯ ಸ್ವಾಮಿಯು ರೂಪುಗೊಂಡ ಜನ್ಮಭೂಮಿ. ತಾಪಸರೆಲ್ಲರ ತಾಯಿಯಿವಳು.'' ಎಂದವರೇ ಆ ದೇವತೆಗಳೆಲ್ಲರೂ ಈ ಪಾವನಾಂಗಿಯನ್ನು ನೋಡಿದರು.

ಅನಂತವೀರ್ಯಸ್ವಾಮಿಯಾದರೋ ಮೂರುಲೋಕಗಳಲ್ಲಿ ಬೆರಸದಿರುವವನು. ಇವರಾದರೋ ಆತನೆಡೆಗೆ ಸಂಬಂಧಪಟ್ಟವರೆಂದು ಪಿರುತ್ತಿದ್ದಾರೆ. ತೋರುತ್ತಿರುವ ದೇಹವನ್ನೇ ಪ್ರೀತಿಸಿ ತಾಯಿತಂದೆಯರೆಂದು ಹೇಳುವರು. ಕರ್ಮಬಂಧವನ್ನು ಮೀರುವರಾರು?

ಭರತೇಶನು ಮಾತೆಯನ್ನು ಮುಂದುಮಾಡಿ. ಸುತರೊಡಗೂಡಿ ವೀತರಾಗನಿಗೆ ಕಾಣಿಕೆಯಿಟ್ಟು ''ಘಾತಿಕರ್ಮೋದ್ಧೂತ ಜಯ'' ವೆಂದು ಸಾಷ್ಟಾಂಗ ರೀತಿಯಲ್ಲಿ ನಮಸ್ಕರಿಸಿ ನಿಂತನು. ತಾವರೆಯ ಮೇಲೆ ಸಿದ್ಧಾಸನ ಪಡೆದು ಸೂರ್ಯಚಂದ್ರರಂತೆ ನಗುತ್ತಿದ್ದ ಜಿನನನ್ನು ಜನನಿಯು ವಂದಿಸಿ, ಚೆನ್ನಾಗಿ ನೋಡಿ ಸಂತೋಷದಿಂದ ಉಬ್ಬಿದಳು. ಉಬ್ಬದಿರುವಳೆ ಆ ಮಾತೆ!

ಅಂದು ಜಿನಪೂಜೆಗೆಂದೇ ಅರಮನೆಯಿಂದ ಶುಚಿಯಾಗಿ ಬಂದಿದ್ದರು. ಅವರು ಅನುಪಮವಾದ ಪೂಜೆ ಮಾಡಿದರು. ವಾದ್ಯಕೋಟಿ ಭೋ ಎಂದಿತು. ದಶದಿಕ್ಕು ಥಿಮ್ಮೆಂದಿತು. ರಾಜನೂ ರಾಜನ ಮಕ್ಕಳೂ ಪೂಜೆಯ ಆಯವರಿತು ವಸ್ತುಗಳನ್ನು ನೀಡಿದರು. ತಾಯಿಯು ಸ್ವಾಮಿಯನ್ನು ಪೂಜಿಸಿದಳು; ಅವರ ಗುಣಾಯತ ಆಚರಣೆ ಯಾರಿಗಿದೆ? ಜನನಿಯು ಕ್ರಮವಾಗಿ ಪೂಜೆ ಮಾಡುತ್ತಿರಲು ಚಕ್ರಿಯು ಪರಿಚಾರಕನಾದನು. ಆ ಅಷ್ಟವಿಧಾರ್ಚನೆಯನ್ನು ಯಾರೂ ಬಣ್ಣಿಸುವಂತಿಲ್ಲ, ಅರುಹನ ಮುಂದೆ ಮೇರುವೇ ಆಯಿತು. ಜಲದಿಂದ. ಗಂಧಾಕ್ಷತೆಗಳಿಂದ, ಪುಷ್ಪ ನೈವೇದ್ಯದಿಂದ, ಆರತಿಯಿಂದ, ಧೂಪ, ಫಲಗಳಿಂದ ಆ ರಾಜಮಾತೆಯು ಪೂಜಿಸಿದಳು. ಅದನ್ನು ನೋಡಿದ ನರರೂ, ದಿವಿಜರೂ, ಉರಗರೂ 'ಪುರೆ'ಯಿಟ್ಟರು. ಕಡೆಗೆ ಅರ್ಘ್ಯಶಾಂತಿಧಾರೆಯನ್ನು ಮಾಡಿ, ಸುವರ್ಣ ಪುಷ್ಪಗಳನ್ನೂ, ರತ್ನಗಳನ್ನೂ ಸುರಿಸಿದರು. ಅದನ್ನು ನೋಡಿದ ದೇವತೆಗಳು ಹೂಮಳೆಯನ್ನು ಕರೆದರು. ಜಯ ಜಯ ಘೋಷವು ಉಗ್ಗಡವಾಯಿತು.

ಪೂಜೆಯು ಪೂರ್ಣವಾಗಲು ವಾದ್ಯಘೋಷ ನಿಂತಿತು. ರಾಜನು ತಾಯಿಯನ್ನು ಮುಂಬಟ್ಟುಕೊಂಡು ಅರುಹನ ಪ್ರದಕ್ಷಿಣೆಗೈದನು. ಮಕ್ಕಳೂ ಜೊತೆಗಿದ್ದರು. ದೇವನನ್ನು ಬಲಗೊಂಡು, ಮುನಿಗಳಿಗೆ ನಮಸ್ಕರಿಸಿ, ಆ ಮಹಾಚಕ್ರವರ್ತಿಯು ಇಂಬರಿತು ನಿಂತನು. ದೇವಗುರುಗಳನ್ನು ವಂದಿಸಿ, ತಾಯಿಯು ತುಂಬಿರುವ ಅಜ್ಜಿಕೆಯರ ಗೋಷ್ಠಿಯನ್ನು ಹೊಕ್ಕಳು. ಅವಳು ಅಜ್ಜಿಕೆಯರಿಗೆ ನಮಿಸಲು, ಅವರು ''ನೀನೂ ಅಜ್ಜಿಕೆಯಲ್ಲವೆ? ಬಾ'' ಎಂದು ಆಕೆಯ ಮೈದಡವಿ ಮನ್ನಿಸಿದರು. ಆಗ ಯಶಸ್ವತಿದೇವಿಗೆ ಒಂದು ಕಾರ್ಯವು ತೋರಿತು. ''ನಾನೂ ಇವರಂತೆ ಅಪವರ್ಗವನ್ನು ಗಳಿಸದೆ ಈ ಭೂಮಿಯಲ್ಲಿರುವುದು ಯಾವ ರೀತಿ'' ಎಂದಾಕೆ ಯೋಚಿಸಿದಳು. ಕಾರಣವಾಗಿ ಈ ಸಭೆಯನ್ನು ಕಂಡೆನು, ಇನ್ನು ಆತ್ಮಕಾರ್ಯವನ್ನೇ ಮಾಡುವೆನೆಂದು ಆಕೆಯು ಭಾವಿಸಿದಳು.

ಕೂಡಲೇ ಅವಳು ಮುನಿಗೋಷ್ಠಿಗೆ ಹೋಗಿ, ಮಗನೊಡನೆ ತನ್ನ ಮನಸ್ಸಿನಲ್ಲಿರುವುದನ್ನು ಹೇಳಿದಳು. ಆಗ ಭರತೇಶನು, 'ಜಿನಸಿದ್ಧ ದೇವರು ಈ ರೀತಿ ನಿರೂಪಿಸಲಾಗದು' ಎಂದು ತಾಯಿಯ ಕಾಲಿಗೆರಗಿದನು. ''ಅರಮನೆಯೊಳಗಿರುವ ಬಸದಿಯಲ್ಲಿ ದೇವರಿದ್ದು ಆತ್ಮ ಪದವನ್ನು ಸಿದ್ಧಿಸಿಕೊಳ್ಳಿರಿ; ಈ ಭರತನನ್ನು ಬಿಟ್ಟು ಹೋಗಬಾರದು'' ಎಂದು ಆಕೆಯ ಕಾಲು ಹಿಡಿದು ಬೇಡಿಕೊಂಡನು.

ದೇವಿಯು ''ನನ್ನ ಮಾತನ್ನು ಕೇಳು'' ಎಂದವನ ತಲೆಯನ್ನು ತಕ್ಕೈಸಿ, ಕಪೋಲವನ್ನು ಅಲ್ಲಾಡಿಸಿ ನುಡಿದಳು :

''ಎಂದಾದರೂ ಬೀಳುವ ಮೈಯ್ಯು ತಪಸ್ಸಿನಿಂದ ಹೋಗಲಿ; ನಿನ್ನ ಸಂಪತ್ತನ್ನು ಕಣ್ಣು ತುಂಬ ಕಂಡೆನು. ತುಂಡಾಗದ ಉತ್ಸಾಹದಲ್ಲಿದ್ದೆ. ಈ ತಲೆಗೂದಲು ಬಿಳುಪಾದ ಮೇಲಾದರೂ ತಪಸ್ಸು ಮಾಡುವೆನು; ನನ್ನನ್ನು ಕಳುಹಿಸು. ಸ್ತ್ರೀಜನ್ಮವು ಕಷ್ಟವಲ್ಲವೆ? ನಿನ್ನನ್ನು ಪಡೆದು, ನಾನಾ ಜನ್ಮಗಳಲ್ಲಿ ಬರಬೇಕೆ? ಆ ಜವಗಳನ್ನು ಕೆಡಿಸುವೆನಣ್ಣ'' ಎಂದು ಪುತ್ರನನ್ನು ಒಪ್ಪಿಸುವಂತೆ ಹೇಳಿದಳು.

''ಅರಮನೆಯ ಶೋಭಾಂಗದ ಜಿನಮಂದಿರದಲ್ಲಿ ಅಜ್ಜಿಕೆಯ ಸಂಗಡ ತಪಸ್ಸು ಮಾಡಬಾರದೆ? ಹಲವು ದೇಶಗಳಲ್ಲಿ ತೊಳಲುವುದು ಯಾಕೆ?''

''ಅಪ್ಪರವರೆಗೂ ತಡೆದು, ನೀನು ಹೇಳಿದ ಹಾಗೆ ಮನೆಯಲ್ಲೇ ತಪಸ್ಸು ಮಾಡಿದೆ. ಕಡೆಯ ಕಾಲದಲ್ಲಿ ಜಿನ ಸಭೆಯಲ್ಲಿ ದೇಹವನ್ನು ಬಿಡಬೇಕು. ಕಳುಹಿಸಿಕೊಡಪ್ಪ. ದೇಹವು ಕೆಡುವುದಲ್ಲದೆ ಆತ್ಮ ಕೆಡನು. ಈ ಸ್ತ್ರೀಜನ್ಮದ ರೂಪು ಕೆಡಿಸಿ, ಮುಂದೆ ನೀನು ಹೋಗಲಿರುವ ಮುಕ್ತಿಗೆ ನಾನೂ ಬರಬೇಕೆಂದು ನನ್ನನ್ನು ಕಳುಹಿಸು'' ಎಂದು ಸಾಹಸದ ಮಾತುಗಳನ್ನಾಡಿದಳು.

''ಈ ಮುಪ್ಪಿನಲ್ಲಿ ಎಷ್ಟು ದಿನ ನಿನ್ನ ಮನೆಯಲ್ಲಿರುವುದಪ್ಪ? ತಾಯಿ ದೀಕ್ಷೆಗೊಳ್ಳಲಿ, ಒಪ್ಪಿಗೆ ಕೊಡು'' ಎಂದು ಮುನಿಗಳೂ ಹೇಳಿದರು. ಅದನ್ನು ಕೇಳಿದ ಭರತೇಶನು ಒತ್ತಟ್ಟಿಗೆ ಮೌನವಾಗಿದ್ದನು.

''ನ್ಯಾಯವಾಗಿ ಆತ್ಮಕಾರ್ಯವನ್ನು ಮಾಡುವೆನೆಂದು ಹೇಳಲು ಅಂತ ರಾಯವನ್ನು ಮಾಡುವುದೇ ನೀನು, ತಾಯಿ ಯಾರು? ನೀನು ಯಾರು? ಸುಮ್ಮನಿರು'' ಎಂದು ಅಲ್ಲಿದ್ದ ತಪೋಧನರು ತಮ್ಮ ಸಹಾಯ ನೀಡಿದರು.

''ನೆನೆದಾಗ ವಿರಕ್ತಿಯು ಬರುವುದೆ? ನೀನು ಒಪ್ಪು'' ಎಂದು ಹೇಳಿದ ಮಾತೆಯನ್ನು ರಾಜನು ನೋಡುತ್ತಿದ್ದನಲ್ಲದೆ ನುಡಿಯಲಿಲ್ಲ. ಅವನ ಮನಸ್ಸಿನ ಭಾವನೆಯನ್ನು ತಿಳಿದು ಮುನಿಗಳು, ಆಕೆಯನ್ನು ಜಿನನ ಬಳಿಗೆ ಕರೆದೊಯ್ದರು.

''ಭರತೇಶನು ತನ್ನ ಅನುಮತಿಯನ್ನು ನುಡಿಯದಿದ್ದರೂ ಮುಖದ ಸನ್ನೆಯ ಮೂಲಕ ತಿಳಿಸಿದ್ದಾನೆ'' ಎಂದು ಜಿನದೇವನಿಗೆ ತಿಳಿಸಿ, ಆಕೆಗೆ ದೀಕ್ಷೆ ಕೊಡಿಸಿದರು. ಗುರುಗಳಿಂದಾಗದಿರುವುದೇನಿದೆ?

ದೇವದುಂದುಭಿ ಮೊಳಗಿತು. ದೇವಗಾಯಕಿಯರು ದೇವಗಾನವನ್ನು ಹಾಡಿದರು. ದೇವಾಂಗ ವಸ್ತ್ರವನ್ನು ತೆರೆ ಹಿಡಿದರು. ಜಿನದೇವನು ದೀಕ್ಷೆ ಕೊಟ್ಟನು.

''ತನು ಮೊದಲಾದುದೆಲ್ಲವೂ ಪರವಸ್ತು, ಹಂಸನೆ ನಿನ್ನ ವಸ್ತು ನಂಬು. ಉಳಿದ ನೆನಪನ್ನೆಲ್ಲ ನಾಶಮಾಡಿ ಆ ಒಂದು ವಸ್ತುವನ್ನೇ ನೋಡು'' ಎಂದು ಜಿನದೇವನು ಉಪದೇಶ ಮಾಡಿದನು.

''ಶ್ವೇತಪದಸ್ಥ, ಪಿಂಡಸ್ಥ, ರೂಪಸ್ಥ, ರೂಪಾತೀತ — ಎಂಬ ನಾಲ್ಕರಲ್ಲಿ ಪ್ರೀತಿಯಿಂದ ಸಾಧನೆ ಮಾಡಿದರೆ, ಪಿಂಡಸ್ಥದಲ್ಲಿ ಮನಸ್ಸು ಸೋತು ನಿಲ್ಲುವುದೇ ಮುಕ್ತಿ. ವಿಮಲನಾದ ಆತ್ಮನೇ ನನ್ನ ವಸ್ತು, ಮೈ ಮತ್ತು ಕರ್ಮಗಳೇ ಮೊದಲಾದುವು ಅನ್ಯವು. ಆರ್ಯೆ, ಹದಿನಾಲ್ಕು ಮತ್ತು ಹತ್ತು ಪರಿಗ್ರಹಗಳುಂಟು? ಇನ್ನು ಮಾತಿನ ಮಾಲೆ ಸಾಕು, ನಂಬು. ಏಕಭುಕ್ತಿಯಿಂದಿರಬೇಕು. ಶಕ್ತಿಯನ್ನರಿತು ಉಪವಾಸವಿರಬೇಕು. ಮಾನ್ಯಳೆ. ಇದಕ್ಕಾಗಿ ತಾಳ್ಮೆಯಿಂದಿರು'' ಎಂದು ಅನಂತವೀರ್ಯ ಸ್ವಾಮಿಗಳು ಉಪದೇಶ ಮಾಡಿದರು.

ಆಕೆ ಸಂತೋಷದಿಂದ 'ಇಚ್ಛಾಮಿ' ಎಂದಳು.

''ಸ್ತ್ರೀರೂಪ ಕೆಡುವುದು, ಸ್ವರ್ಗದಲ್ಲಿ ಸುರನಾಗಿ ಹುಟ್ಟುವೆ. ಮುಕ್ತಿಯನ್ನು ಹೊಂದುವೆ'' ಎಂದು ಘನವಾದ ಸೂತ್ರಾರ್ಥವನ್ನು ಸಂಗ್ರಹವಾಗಿ ಹೇಳಿ ಸ್ವಾಮಿಯು ದೀಕ್ಷಾರತ್ನವನ್ನು ಕೊಟ್ಟನು.

ಜೀವರಕ್ಷಣೆಗಾಗಿ ಮಲಮೂತ್ರವಲ್ಲದ ಮೈಗೆ ಕಮಂಡಲದ ಜಲವೇಕೆ ಬೇಕು? ಲಿಪಿಯುಳ್ಳ ಪೀಲಿಯನ್ನೂ ಆತ್ಮಸಾರ ಪುಸ್ತಕವನ್ನೂ ಅರುಹನ ಆಜ್ಞೆಯಂತೆ ಕಲಿಸಿದರು.

ತೆರೆ ತೊಲಗಿತು.

ಸೆರಗಿನಿಂದ ತಲೆಗೆ ಮುಸುಕು ಹಾಕಿದ, ಕೈಯಲ್ಲಿ ಪುಸ್ತಕ ಪಿಂಛ ಹಿಡಿದ, ಶಾಂತರಸದ ಅಧಿದೇವತೆಯೋ ಎನ್ನುವಂತೆ ಪರಮ ದೀಕ್ಷಾಂಗಿಯಾಗಿ ಯಶಸ್ವತೀ ದೇವಿಯು ಒಪ್ಪಿದಳು. ಆಕೆಯ ಮೈಗೊಂದು ಹೊಸ ಕಾಂತಿಯು ಆ ಕ್ಷಣವೇ ಹುಟ್ಟಿತು. ಆಕೆಯಾದರೋ, ಇದೊಂದು ಹೊಸ ದೀಕ್ಷೆಯೆಂದು ಭಾವಿಸಿರಲಿಲ್ಲ, ಹಿಂದೆಯೇ ದೀಕ್ಷೆಗೊಂಡವಳಂತೆ ಕಾಣುತ್ತಿದ್ದಳು.

ಜಿನಸಭೆಯಲ್ಲಿ ಯಾರಿಗೂ ಶೋಕವು ಹುಟ್ಟದ ಕಾರಣದಿಂದಾಗಿ ಭರತೇಶನು, ದುಃಖವನ್ನು ತಾಳಿಕೊಂಡಿದ್ದನು. ಆಕೆ ಬೇರೆ ಭೂಮಿಯಲ್ಲಿ ದೀಕ್ಷೆಗೊಂಡಿದ್ದರೆ ಅವನು ಕಣ್ಣೀರಿ ಸುರಿಸುತ್ತ ಮೂರ್ಛೆ ಹೊಂದುತ್ತಿದ್ದನು.

ಸುರರೂ, ಮರ್ತ್ಯರೂ, ಭುಜಗರೂ ಹೊಸದಾಗಿ ದೀಕ್ಷೆಗೊಂಡ ಆ ನವ್ಯ ದೀಕ್ಷಾಂಗಿಗೆ ವಿನಂತಿ ಮಾಡಿದರು. ಆಗ ಭರತೇಶನ ಮಕ್ಕಳು ಬಂದರು. ''ಇಂದಿಗೆ ತಾಯ ಆಸೆಯು ಸರಿಯಾಯಿತೇ'' ಎಂದು ಮಕ್ಕಳೊಂದಿಗೆ ಆವನು ಮಣಿದನು.

ಆ ತಾಯಿಯು ಅವನನ್ನು ನರನೆಂದು ನೋಡಿದಳಲ್ಲದೆ ತನ್ನ ಮಗನೆಂದು ಭಾವ ಬೆರಸಿ ನೋಡಲಿಲ್ಲ. ಅವಳು ಅವನನ್ನು ಹರಸುತ್ತ ಸ್ವಸ್ತಿಕದಿಂದ ಎದ್ದು ಸ್ವಾಮಿಯ ಪಾದಗಳಲ್ಲಿ ಹಣೆಯನ್ನಿಟ್ಟು ನಮಸ್ಕರಿಸಿದಳು.

''ಸಿದ್ಧತ್ವಮಿಹಿ'' ಎಂದು ಸ್ವಾಮಿಯು ಬೀಳ್ಕೊಟ್ಟಾಗ, ದೇವತೆಗಳೆಲ್ಲರೂ ಹೂಮಳೆಯನ್ನು ಸುರಿಸಿದರು. ಶುದ್ಧರು ಜಯಜಯವೆಂದರು. ಯಶಸ್ವತೀದೇವಿಯು ಕಾರ್ಯಸಿದ್ಧಿಗಾಗಿ ತಾನು ಅಜ್ಜಿಕೆಯರ ಕಡೆಗೆ ನಡೆದಳು.

''ಯಶಸ್ವತೀದೇವಿ, ಇತ್ತ ಬಾ, ತಾಯಿ. ಈ ಕಂತಿಯಿಂದ ಉತ್ತಮವಾಯಿತು ಅವ್ವ'' ಎಂದು ಅಜ್ಜಿಕೆಗಳು ಅತ್ತ ಕರೆದುಕೊಂಡರು. ಆ ಮಾನ್ಯಳು ಶಾಂತಿಪಡೆದು ಇಂಬುಗೊಂಡಂತಾದಳು. ತನ್ನಮಗನ ಮೇಲಿನ ಮೋಹವೂ ಸೊಸೆಯರ ಮೇಲಿನ ಸ್ನೇಹವೂ ಎಲ್ಲಿಗೆ ಹೋಯಿತೋ! ಉನ್ನತವಾದ ಸಂಪತ್ತಿನ ಪ್ರೀತಿಯೂ ಇಲ್ಲದಾಯಿತು. ಜಗದಲ್ಲಿ ಮಹಾತ್ಮರ ವೃತ್ತಿಯು ವಿಸ್ಮಯಕಾರಿಯಾಗಿದೆ.

''ಅವಳು ಮೋಕ್ಷಗಾಮಿಗಳನ್ನೇ ಹೆತ್ತವಳು. ಅವರಲ್ಲಿ ಒಬ್ಬನು ದೀಕ್ಷಾಗುರುವಾದನು. ಈ ಲೋಕದಲ್ಲಿ ಇವಳಿಗೆ ಎಣೆಯಿಲ್ಲ'' ಎಂದು ಜನರು ಅಲ್ಲಲ್ಲಿ ಮಾತನಾಡುತ್ತಿದ್ದರು. ''ಷಟ್ಖಂಡಕ್ಕೆ ಪತಿಯಾದ ಮಗನನ್ನು ಪಡೆದಳು. ಆತನ ಸಿರಿಯನ್ನು ತೃಣವೆಂದು, ಆಸೆತೊರೆದು ದೀಕ್ಷೆಯನ್ನು ಪಡೆದಳು. ಇನ್ನು ಕೈವಲ್ಯ ಪಡೆಯುವುದೇನೂ ಅಸಾಧ್ಯವಲ್ಲ'' ಎಂದು ಎಲ್ಲರೂ ನುಡಿದರು.

ಆಕೆ ಬಿಸಾಡಿದ ಕೂದಲನ್ನೂ ವಸ್ತ್ರಾಭರಣಗಳನ್ನೂ ದೇವಸ್ತ್ರೀಯರು ಕೊಂಡುಹೋಗಿ ಸಮುದ್ರಕ್ಕೆಸೆದರು. ದೇವೇಂದ್ರನು ಜಿನಸ್ವಾಮಿಗೂ ಮುನಿಗೂ ವಂದಿಸಿ, ತನ್ನ ಪುರದತ್ತ ನಡೆದನು. ಆ ಕ್ಷಣದಲ್ಲಿ ಗಂಧಕುಟಿಯು ಅಂತರಿಕ್ಷದಲ್ಲಿ ಮತ್ತೊಂದು ದಿಕ್ಕಿಗೆ ತೆರಳಿತು. ಕುಮಾರರನ್ನೆಲ್ಲ ನೋಡಿ, ಕಳುಹಿಸಿಕೊಟ್ಟು ಭರತೇಶನು ತನ್ನ ಅರಮನೆಗೆ ನಡೆದನು.

ಅತ್ತೆ ದೀಕ್ಷೆ ಪಡೆದರೆಂದು ಕೇಳಿ, ಸೊಸೆಯರು ಮನಸ್ಸಿನಲ್ಲೇ ಚಿಂತಿಸಿ, ಮೂರ್ಛೆ ಹೋದರು. ಈ ಗಂಧಕುಟಿಯ ತಳ್ಳಿಯೆಲ್ಲಿಂದ ಬಂತೆಂದು ಆತ್ತುಗೋಳಾಡಿದರು.

''ಹಾ, ನಮ್ಮ ಕರ್ಮವೆ! ಕಷ್ಟ ಕಾಲವೆ! ಮಾತುಳಾನಿಯನ್ನು ಒಯ್ದೆಯಾ ವಿಧಿಯೆ! ಈ ನಮ್ಮ ಮನೆ ಭಿನ್ನಗಾಯಿತು. ಹಾ ಹಾ'' ಎಂದು ಮಾನಿನಿಯರು ಹಲುಬಿದರು. ''ತಮ್ಮಂದಿರ ಅಣುಗೆಯರು ಎಂದು ನುಡಿವೆಯಲ್ಲದೆ ನಮ್ಮನ್ನು ಬೇರೆಯಾಗಿ ಕರೆದಿಲ್ಲ. ಈಗ ಈ ದುಃಖಕ್ಕೆ ದೂಡಿ ನೀವು ಹೋಗುವುದೇ ಅಮ್ಮಾಜಿ? ನಾವು ಪರ್ವೋಪವಾಸ ಮಾಡಿದಾಗ, ನಮಗಾಗಿ ಸಾರ್ವಭೌಮನೊಂದಿಗೆ ಕೋಪಿಸುತ್ತಿದ್ದ ತಾವು ಹೀಗೆ ಮಾಡುವುದೆ? ಆ ವಿಚಾರವನ್ನು ನೋಡುವವರಾರು? ಅದನ್ನೆಲ್ಲ ಬಟ್ಟ ಬಯಲಾಗಿ ಮಾಡಿ ಹೋಗಿಬಿಡುವುದೆ? ಹೆತ್ತವರನ್ನೂ ಮರೆಯುವಂತೆ ನಮ್ಮ ಸೌಖ್ಯ ಸಂಪತ್ತುಗಳನ್ನು

ಕೈಯಿಕ್ಕಿ ನೋಡಿಕೊಳ್ಳುತ್ತಿದ್ದವರು ತಾವು. ಹೆತ್ತು ಬಿಸಾಡುವಂತೆ ಹೋಗುವ ಮನಸ್ಸು ನಿಮಗೆ ಹೇಗಾಯಿತು! ನೀವು ಸಾರ್ವಭೌಮನೊಂದಿಗೂ, ಸಾರ್ವಭೌಮನು ನಿಮ್ಮೊಂದಿಗೂ ಮಾತನಾಡುತ್ತಿದ್ದುದನ್ನು ಕೇಳಿ ಸಂತೋಷಪಡುತ್ತಿದ್ದೆವು. ಜಗನ್ಮಾತೆ, ನಮ್ಮನ್ನು ಈ ರೀತಿ ನೋಯಿಸುವುದು ನಿಮಗೆ ಗುಣವೇ?''

ಹೀಗೆ ಎಲ್ಲರೂ ಗೋಳಾಡುತ್ತ ಬಂದು ಭರತ ಚಕ್ರೇಶ್ವರನ ಮೇಲೆ ಬಿದ್ದರು.

''ದೇವ ಮೊದಲು ಪೊರೆವ ನೀನು ಇಂದು ತೊತ್ತಳ ತುಳಿದೆಯಲ್ಲವೆ ಹೋಗು. ಅವರನ್ನು ನೀನೇಕೆ ತಡೆಯಲಿಲ್ಲ, ನೀನು ಒಪ್ಪೆನು ಎಂದಿದ್ದರೆ ದೀಕ್ಷೆ ಕೊಡುವವರು ಬರುತ್ತಿದ್ದರೆ? ನೀನೂ ಕಡುಕಷ್ಟ ಗುಣವನ್ನು ಕಲಿತೆಯಲ್ಲ'' ಎಂದು ನುಡಿಯುತ್ತಿದ್ದ ಮಡದಿಯನ್ನು ರಾಯನು ನುಡಿಯದೇ ನೋಡುತ್ತಿದ್ದನು.

ಹೆಣ್ಣುಗಳ ಗಡಬಡೆಯನ್ನು ಕಡಮೆ ಮಾಡಿಸಿ, ತನ್ನನ್ನು ಸುಡುತ್ತಿದ್ದ ದುಃಖವನ್ನು ನುಂಗಿಕೊಳ್ಳುತ್ತ ಪಟ್ಟದರಾಣಿ ಸುಭದ್ರಾದೇವಿಯು ನಲ್ಲನೆಡೆಗೆ ಸಾಗಿ ಬಂದಳು.

''ನೀನಿದ್ದೂ ಏನಾಯಿತು ದೇವ? ಬೇಡವೆನ್ನುತ್ತಿದ್ದರೆ ಮಾತುಳಾನಿ ಹೋಗುತ್ತಿದ್ದರೆ?''

''ನಾನು ಅವರ ಕಾಲು ಹಿಡಿದು ತಡೆದೆನು. ಆಗ ಜೈನಾರ್ಯರೇ ನನ್ನನ್ನು ಒತ್ತಿದರು. 'ತಪಸ್ಸಿಗೆ ಅಂತರಾಯವ ಮಾಡುವುದೇ' ಎಂದವರು ಕೇಳಿದರು. ಅದಕ್ಕೆ ಹೆದರಿ ನಿಂತೆನು. ಅಪರವಯಸ್ಸಿನಲ್ಲಿ ತಪಸ್ಸು ಮಾಡಬೇಕೆಂದಿದೆ. ಆದ್ದರಿಂದ ನಮ್ಮ ಕಡೆ ಕೃಪೆ ತೋರದೆ ಜನನಿ ಹೋದಳು. ಹೋಗಲಿ, ಮುಪ್ಪಿನ ಕಾಲವಲ್ಲವೆ. ನಮ್ಮ ಯೋಗವನ್ನು ಅವರು ಸಾಧಿಸಲಿ. ನಾವು ಆಗಾಗ ನಮ್ಮ ಆತ್ಮಗತಿಗೆ ಸರಿಯಾಗಿ ಯೋಚನೆ ಮಾಡುತ್ತಿರುವ. ಇನ್ನು ಬೇಗೆ ಬೇಡ'' ಎಂದು ಭರತೇಶನು ಅರಸಿಯರನ್ನು ಸಮಾಧಾನ ಪಡಿಸಿದನು.

ಒಡವೆಗಳನ್ನು ಕಳೆದುಕೊಂಡವರಂತೆ ಅಳುತ್ತಿರುವ ರಾಣಿಯರನ್ನು ನೋಡಿದ ರಾಣಿ ಅನಂತಸೇನಾದೇವಿಯು, ಮುಂದೆ ಬಂದು ರಾಜನೊಡನೆ ತನ್ನ ಮನಸ್ಸನ್ನು ತಿಳಿಸಿದಳು. ''ಅತ್ತ್ಯಾಜಿಯಂತೆ, ನಾನೂ ದೀಕ್ಷೆಯನ್ನು ತಳೆದು ಆತ್ಮಕೃತ್ಯಗಳನ್ನು ಮಾಡುವೆನು.'' ಎಂದು ಸತ್ಯವನ್ನೇ ನುಡಿದಳು. ''ಬಿಸಿಲಿನ ಅರಸಿನದಂತೆ ಜವ್ವನ ಹೋಯಿತು. ನೆರೆಯ ತೆರೆಯು ಕಾಣಿಸಿತು. ಇನ್ನು ಭೋಗವು ಹಸನಲ್ಲ, ನನ್ನನ್ನು ಯೋಗಕ್ಕೆ ಕಳುಹು'' ಎಂದು ರಾಜನ ಅಡಿಗಳಲ್ಲಿ ಹಣೆಯನ್ನಿಟ್ಟು ಬೇಡಿಕೊಂಡಲು. ಭರತೇಶನು ಅದನ್ನೂ ಕೇಳಿದನು.

''ಲೇಸಾಯಿತು. ಇನ್ನು ಭೋಗಕ್ಕೆ ಕಾಲವಲ್ಲ, ಇನ್ನು ಸಂಯಮಕ್ಕೆ ತಕ್ಕ ಕಾಲ. ಅದಕ್ಕಾಗಿ ದೂರ ಹೋಗಬೇಡ. ನಮ್ಮ ಜಿನಾಲಯದಲ್ಲಿದ್ದು ತಪವನ್ನಾಚರಿಸು.''

''ನನಗೆ ಮಾತುಳಾನಿಯೊನಡೆ ತಪಸ್ಸು ಮಾಡಬೇಕೆಂಬ ಪ್ರೀತಿಯಿದೆ.''

''ಆ ತಳ್ಳಿಗೆ ನಾನು ಒಪ್ಪಲಾರೆ. ಇಲ್ಲಿ ಅಜ್ಜಿಕೆಗಳು ಇದ್ದಾರೆ. ಅವರ ಸಂಗಾತದಲ್ಲಿ ಇಲ್ಲಿಯೇ ತಪಸ್ಸು ಮಾಡು.''

ಆದರೆ ಅದಕ್ಕವಳು ಒಪ್ಪಲಿಲ್ಲ, ಆಗ ನೃಪತಿಯು ಇತರ ಸತಿಯರಿಗೆ ಕಣ್ಣೊತ್ತಿದನು. ಆಗ ಅವರೆಲ್ಲರೂ ತಾವೂ ತಪಸ್ಸು ಮಾಡುವೆವೆಂದು, ಅವಳನ್ನು ಹದಮಾಡಿ ನಿಲ್ಲಿಸಿದರು. ಆಕೆಯ ಪ್ರಾಯದ ಇನ್ನೂ ಕೆಲವರು, ತಮಗೂ ಭೋಗ ಸಾಕೆಂದು ತಾವೇ ಬಸದಿಯಲ್ಲಿದ್ದು ತಪಸ್ಸು ಮಾಡುವೆವೆಂದು ಸೂಚಿಸಿದರು. ಚಕ್ರೇಶ್ವರನು

ಅದಕೊಪ್ಪಿದನು. ಯತಿಗಳ ಕೈಯಿಂದ ಅವರಿಗೆಲ್ಲ ಏಕಭುಕ್ತಿಯುಕ್ತದ ಬ್ರಹ್ಮಚರ್ಯದ ದೀಕ್ಷೆ ಕೊಡಿಸಿ, ಹಿತದ ಅಜ್ಜಿಕೆಗಳೊಂದಿಗೆ ತರುಬಿನ ಅಜ್ಜಿಕೆಗಳೆಂಬ ಸ್ಥಿತಿಯಲ್ಲಿ ಅವರನ್ನು ನಿಲ್ಲಿಸಿದನು.

ಮಕ್ಕಳುಳ್ಳವರು ತಮ್ಮ ತಮ್ಮ ಪುತ್ರರ ಬೀಡುಗಳಲ್ಲಿ ಏಕಭುಕ್ತ ಗೈದರು. ಅನಂತಸೇನಾದೇವಿ, ಅಜ್ಜಿಕೆಯರೊಂದಿಗೆ ಸವತಿಯರು ಇಕ್ಕಲು ಉಂಡಳು. ಆಕೆ ಮರೀಚಿಯೆಂಬ ಹಿರಿಯ ಮಗನನ್ನು ಪಡೆದಿದ್ದಳು. ಅವನು ಪುರುನಾಥನಿಂದಲೇ ದೀಕ್ಷೆ ಪಡೆದು ಮುನಿಯಾಗಿ ಮುಂದೆ ಮರುಳಣ್ಣನಾದನು.

ಹೊತ್ತ ಚಿಂತೆಯನ್ನೊತ್ತಿಕೊಂಡು, ಮೂರು ದಿನಗಳಾದ ಮೇಲೆ ಭರತೇಶನು ಕರುಮಾಡದಲ್ಲಿರುವಾಗ, ಅರಳಿನ ಬಾಣವೋ, ನಕ್ಷತ್ರವೋ, ಪಕ್ಷಿಯೋ ಎಂಬುದೊಂದು ಆಕಾಶದಲ್ಲಿ ಬರುತ್ತಿದ್ದುದು. ಹತ್ತಿರ ಬಂದಾಗ ಅದೊಂದು ಪಾರಿವಾಳವೆಂದು ತಿಳಿಯಿತು. ಅದು ವಾಯುಮಾರ್ಗದಿಂದಿಳಿದು ಭರತೇಶನ ಬಳಿಗೆ ಬಂದಾಗ ಅದರ ಕಂಠದಲ್ಲಿರುವ ಕಾಗದವನ್ನು ತೆಗೆದುಕೊಂಡು ಬಿಡಿಸಿ ಓದಿದನು.

''ಶ್ರೀ ಸುನಂದಾಂಬಿಕೆಯು ಮಗಗೆ, ಅರಸಣ್ಣನಿಗೆ ಸೇಸೆಯಿಟ್ಟು ತಿಳಿಸುವ ಕಾರ್ಯ. ಭುಜಬಲೀಶನ ಪ್ರಕಾಶಮಾನವಾದ ಗಂಧಕುಟಿಯು ನಮ್ಮ ಪುರಕ್ಕೆ ಬಂದಿರುತ್ತದೆ. ಹೇಳಲಾರದಂಥ ದೊಡ್ಡ ಕಾರ್ಯವಿದೆ. ಅತಿಜೋಲಿ ಮಾಡದೆ ನೀನು ಇಂದೇ ಬರಬೇಕು. ನಾಳೆ ನಾಡಿದೆಂದು ಕುಳಿತರೆ ನನಗೆ ನಿನ್ನನ್ನು ಕಾಣಲು ಆಗುವಂತಿಲ್ಲ. ಇತಿ ಸ್ವಾಹಾ'' ಎಂದು ಓದಿದವನೇ ಆ ಲಿಪಿಗೆ ಕೈಮುಗಿದನು. ದೀಕ್ಷೆ ತಾಳುವೆನುಯೆಂಬ ಪರಿವಿದೆಂದು ತಿಳಿದು, ಬಂದಿರುವ ಪಕ್ಷಿಗೆ ತಂಪುಮಾಡಿ, ಕೂಡಲೇ ವಿಮಾನಗಳ ಸಂದಣಿಯೊಂದಿಗೆ ಎದ್ದುಬಿಟ್ಟನು.

ಸ್ಮರಪುರಕ್ಕೆ ಹೋದಾಗ ನಂದನರು ಇದಿರ್ಗೊಂಡರು. ಆಮೇಲೆ ಮಾತೆಯ ಅರಮನೆಯ ಒಳಗೆ ಹೋಗಿ, ಮಾತೆಗೆ ಎರಗಿ ಹರಕೆಯನ್ನು ಪಡೆದು, ಸ್ವಚ್ಛವಾಗಿ ಕುಳಿತು, ಭರತೇಶನು ತಾಯಿಗೆ ಸಂತೋಷವನ್ನುಂಟು ಮಾಡಿದನು.

''ಅಮ್ಮಾಜಿ, ನಿಮ್ಮ ಅರ್ಥವೇನು? ನಿಮ್ಮ ಅಕ್ಕನಂತೆ ನಮ್ಮನ್ನು ಬಿಸಾಡುವ ಬಗೆಯೆ? ಅಮ್ಮಾ, ನಾನೇನು ಕಷ್ಟನೋ ನಿಮಗೆ?'' ಎಂದು ಚಕ್ರಧರನು ಚಿಕ್ಕಮ್ಮನೊಡನೆ ಕೇಳಿದನು.

''ಮುಪ್ಪಲ್ಲವೆ ಮಗನೆ. ನಾನಿನ್ನು ತಪಸ್ಸು ಮಾಡುವೆನು, ಅದೇ ಒಪ್ಪವಾಗಿದೆ; ಆಗಿದೆ'' ಎಂದು ಚಿಕ್ಕಮ್ಮನುಡಿದಳು. ಆಗವಳು ತಪಸ್ಸಿಗೆ ಹೋಗದೆ ಇರುವವಳಲ್ಲವೆಂದು ಭರತೇಶನು ಬಲ್ಲನು. ಆದರೂ ಪುಷ್ಪಶರನ ಪುತ್ರರು ಒಪ್ಪಿದರೆ ತಪಸ್ಸಿಗೆ ಸಾಗಬಹುದೆಂದು ತಿಳಿಸಿದನು.

''ಅವರಿಗಾಗಿ ಇಷ್ಟು ದಿನವಿದ್ದೆ; ಸಾಲದೆ? ನೆವನ ತೋರಬೇಡ; ಸಾಕು. ಈ ನಿನ್ನ ಮಕ್ಕಳಿಗೆ ನೀನಿರುವೆ; ನನ್ನನ್ನು ಕಳುಹಿಸು'' ಎಂದವಳು ಮಗನ ಗಲ್ಲವನ್ನು ಹಿಡಿದು ಅಲುಗಿಸಿದಳು. ''ಪುರದ ಒತ್ತಿಗೆ ಗಂಧಕುಟಿ ಬಂದಿದೆ. ನಾನು ಅತಿ ಬರಶಿಯಲ್ಲವೆ? ಹಾಗಾಗಿ ನಿನ್ನನ್ನು ಕೇಳದೆ ಹೋಗಲು ಅಂಜಿದೆನು; ಭರತಣ್ಣ ಇನ್ನು ದೀಕ್ಷೆಗೆ ಕಳುಹಿಸು.

ಅಕ್ಕನಿಗೆ ದೀಕ್ಷೆ ಕೊಡಿಸಿದೆ. ನನಗೇಕೆ ಈ ಸಿಕ್ಕನ್ನು ತೋರಿಸುವೆ? ಮುಕ್ತಿಗಾಗಿ ನಾನು, ಅಕ್ಕನೊಡನೆ ಬಂದು ನಿನ್ನನ್ನು ಸಂಧಿಸಬೇಕೆಂದಿದ್ದೇನೆ. ಬೇಗನೆ ಒಪ್ಪು; ಒಪ್ಪು'' ಎಂದು ಒತ್ತಿಯೊತ್ತಿ ನುಡಿದಳು.

''ದೇವರು ಒಪ್ಪಿದುದು ಆಗಲಿ'' ಎಂದೇ ಭರತೇಶನು ಅದಕ್ಕೊಪ್ಪಿದನು. ಹರುಷಾವೇಶವೆದ್ದು ಅಪ್ಪಿಕೊಂಡನು. ಆ ವೇಳೆಯಲ್ಲೇ ಗಂಧಕುಟಿಗೆ ಹೋಗುವೆವೆಂದು ಆಕೆ ನುಡಿದಳು. ಎಲ್ಲರೂ ಒಟ್ಟಿಗೇ ಎದ್ದು ಬಿಟ್ಟರು.

ಭೂಮಿ ಭೋ ಭೋ ಎಂದು ಧ್ವನಿ ಮಾಡುತ್ತಿರುವಾಗ ಅವರೆಲ್ಲರೂ ಗಂಧಕುಟಿಯಿರುವಲ್ಲಿಗೆ ಸಾರಿ, ಚಕ್ರಿಯು ಅಂಬಿಕೆಯೊಡನೆ ಭುಜಬಲಿಸ್ವಾಮಿಗೆ ನಮಿಸಿದನು. ಅಂದು ಆ ಮಾತೆಯನ್ನು ಜಿನಪೂಜೆಗೆ ಪ್ರೇರೇಪಿಸಿದಂತೆ ಇಂದು ಈ ಮಾತೆಯನ್ನೂ ಪ್ರೇರಿಸಿದನು. ಅಲ್ಲಿ ಜಿನನಿಗೂ, ಮುನಿಗಳಿಗೂ ಹೇಗೆ ಪೂಜಾದಿ ವೈಭವಗಳು ಸಂದುವೋ ಅಂಥ ವೈಭವಗಳು ಇಲ್ಲಿಯೂ ಸಂದುವು. ಅಲ್ಲಿದ್ದ ಸ್ವಾಮಿಯಂತೆ ಇಲ್ಲಿದ್ದ ಸ್ವಾಮಿಯು ಮಂತ್ರೋಚ್ಚಾರದಿಂದ ದೀಕ್ಷೆ ಇತ್ತನು. ಅರ್ಚನೆ, ಗೀತವಾದ್ಯಗಳು, ದೀಕ್ಷಾಕ್ರಮವೆಲ್ಲ ಕೊರತೆಯಿಲ್ಲದೆ ಪೂರ್ಣವಾಯಿತು. ಅಕ್ಕನಂತೆ ತಂಗಿಯೂ ಆ ಸಮಯದಲ್ಲಿ ಶಾಂತಭಾವದ ಕಾಂತಿಯು ಮಿಕ್ಕುವಂತಿದ್ದಳು. ಮಕ್ಕಳೆ ಗುರುಗಳಾಗಿ ತಾಯಿಗಳನ್ನು ಮೋಕ್ಷಮಾರ್ಗಕ್ಕೆತ್ತಿದರಲ್ಲವೆ? ಇದು ವಿಚಿತ್ರವಾಗಿದೆ.

ಮಗನು ವಂದಿಸಿದಾಗ, ಹರಸುತ್ತ ಸುನಂದಾದೇವಿಯು ಅಜ್ಜಿಗಳೆಡೆಯನ್ನು ಸೇರಿದಳು. ಭರತೇಶನು ಜಿನನಿಗೂ, ತಾಪಸರಿಗೂ ನಮಸ್ಕರಿಸಿ, ವ್ಯಾಕುಲದಿಂದಲೇ ಹಿಂದಿರುಗಿದನು.

ಆ ಕ್ಷಣದಲ್ಲಿ ಗಂಧಕುಟಿಯು ಮತ್ತೊಂದು ಭೂಮಿಗೆ ಹೋಯಿತು. ಭರತಚಕ್ರೇಶ್ವರನು ಸುತರನ್ನು ಅದರಿಸುತ್ತ ಪೌದನಪುರಿಯನ್ನು ಸೇರಿದನು. ಆಗ ಹಿಂದೆ ಉಳಿದಿದ್ದ ಅರ್ಕಕೀರ್ತಿ ಆದಿರಾಜರು ಬಂದು ಭರತೇಶ್ವರನನ್ನು ಸಂಧಿಸಿದರು. ಬಾಹುಬಲಿಯ ಅಣುಗರು ಮೂವರೂ ಚಿಂತೆಯಲ್ಲಿರುವುದನ್ನು ನೋಡಿ, ಚಕ್ರೇಶ್ವರನು ಅವರನ್ನು ಮಾತನಾಡಿಸಿದನು.

''ನಿಮ್ಮ ಮತ್ತು ನಮ್ಮ ಮೇಲಿನ ಅಕ್ಕರೆಯಿಂದ ಚಿಕ್ಕಮ್ಮ ಇಷ್ಟು ಕಾಲ ಇದ್ದದ್ದು ಸಾಲದಾಯಿತೆ? ಅವರು ಇನ್ನು ತಮ್ಮ ಆತ್ಮಗತಿಯನ್ನು ಮಾಡಲಿ. ನೀವು ನೋಯದಿರಿ. ಏನು ಹೇಳುತ್ತೀ ಮಹಾಬಲಿರಾಜ? ಜರೆಪಟ್ಟು ಮೂರ್ಛೆ ಕಟ್ಟುವವರೆಗೆ ಇರದೆ, ನಮ್ಮ ತಾಯಂದಿರು, ದೇವತೆಗಳು ಜೀಯೆಂದು ಇದಿರುಗೊಂಡ ಸೌಭಾಗ್ಯಕ್ಕಾಗಿ ನಾವೆಲ್ಲ ಪ್ರೀತಿಯಿಂದಿರಬೇಕಲ್ಲದೆ ನೋಯಿಸಿಂದಿರುವುದೇ?''

'ನಮಗೇಕೆ ನೋವು? ದೇವರ ಕೃಪೆಯೊಂದಿದ್ದರೆ ಸಾಕು. ಮಿಕ್ಕವರ ಹಂಗೇನು? ನಮ್ಮನ್ನು ಹೆತ್ತವರು, ಅಂದೆ ಇಲ್ಲಿ ಹಾಕಿಹೋದರು. ಅಂದು ನಾವು ಬಾಲರು, ನಮ್ಮಯ್ಯನ ತಡೆದೆನೇ? ತಾಯ್ಗಳೂ ನಮಗೊಂದು ಮಾತು ಹೇಳಿ ಹೋದರೆ? ಧೂಳಿನಲ್ಲಿ ನಮ್ಮನ್ನು ಬಿಸಾಡಿ ಹೋದರು. ಚಕ್ರೇಶ್ವರನೊಬ್ಬನು ನಮ್ಮನ್ನು ಪಾಲಿಸಿದನು. ನಾವದನ್ನು ಬಲ್ಲೆವು. ದೇವರು ಉದ್ಯೋಗಿಸಿದ ಭಕ್ತಿಯಿಂದಾಗಿ ಅಜ್ಜಿಯು ತಾನು ಅಂದೇ ಹೋಗುವೆನೆಂದಳು.

ಆಜ್ಞರ ನಡತೆಯನ್ನು ನಂಬಿ, ನಾವು ಪ್ರೀತಿಯಿಂದ ಇದ್ದುದರಿಂದ ಒಳ್ಳೆಯ ಕೆಲಸಕ್ಕೆ ಹೋದಳು. ಅದೂ ಒಂದಾಯಿತು. ಎಲ್ಲರಿಗೂ ತಂದೆ ತಾಯಂದಿರು ಇಬ್ಬರಿದ್ದಾರೆ. ನಮಗೆ ಈ ಇಬ್ಬರ ತಳ್ಳಿಬಳ್ಳಿಯೇ ಇಲ್ಲ. ಆದರೆ ತಾಯಾಗಿಯೂ ತಂದೆಯಾಗಿಯೂ ದೇವರಲ್ಲವೆ ನಮಗೊಬ್ಬರೆಂದು ಬಲ್ಲೆವು. ಎಳೆಯರಾಗಿದ್ದಾಗ ನಮ್ಮನ್ನು ಹಾರೈಸದೆ ಹೋದವರನ್ನು, ನಾವೀಗ ಬೆಳೆದಾಗ ಹಾರೈಸಿದರೆ ಆದೀತೆ? ಮೊಳಕೆಯಿಂದಲೇ ಸಾಕಿದವನೊಬ್ಬನಿರಲು ಸಾಕು; ಅದರಿಂದಲೇ ನಾವು ಬಲು ಭಾಗ್ಯವಂತರು''

ಎಂದು ಮಹಾಬಲರಾಜನು ನುಡಿದನು. ಅದನ್ನು ಕೇಳಿದ ಯುವರಾಜ ಅರ್ಕಕೀರ್ತಿಯು ಹೀಗೆಂದನು.

''ಅಪ್ಪಾಜಿಯವರು ಸಲಹುತ್ತಾರೆಂಬುದನ್ನು ತಿಳಿದೇ ಚಿಕ್ಕಪ್ಪಾಜಿಯರೂ ತಾಯಿಗಳೂ ಅಂದು ತೆಪ್ಪಗೆ ಹೋದರು. ಅದಕ್ಕಾಗಿ ಅಣ್ಣ ನೀವೆಲ್ಲ ನೊಂದುಕೊಳ್ಳುವುದು ಬೇಡ. ಪುರುನಾಥ ವಂಶದಲ್ಲಿ ಯಾರಾದರೊಬ್ಬರಿದ್ದರೆ ಸಾಕು, ನಮ್ಮ ವಂಶವನ್ನು ಕಾಪಾಡುತ್ತಾರೆ. ಅದು ನಮ್ಮ ಕುಲದ ಬಿರುದಾಗಿದೆ. ಅದ್ದರಿಂದಲೇ ನಮ್ಮವರು ನಿಮ್ಮನ್ನು ನೋಡದೆ ಹೋದರು. ಅವರೇನನ್ನು ಪೊರೆಯಬೇಕು? ಅವರ ಹೆಸರನ್ನೇ ಹೇಳಿದರೆ ಸಾಕು, ಭೂಮಿಯೆಲ್ಲ ನಮ್ಮ ವಶವಾಗುವುದು. ಯುವರಾಜ ನೀನು ತಿಳಿಯದ್ದು ಉಂಟೆ?'' ಎಂದು ಯುವರಾಜನು ಮನಸ್ಸು ತಣ್ಣಗಾಗುವಂತೆ ನುಡಿದನು.

ಮಗನು ಆಡಿದ ಮಾತಿಗೆ ಭರತೇಶನು ಮೆಚ್ಚಿ ಆಲಿಸುತ್ತಿದ್ದನು. ಅದನ್ನು ನೋಡಿದ ರತ್ನಬಲರಾಜನು ಹಿರಿಯಯ್ಯನ ಬಳಿಗೆ ಬಂದು ಕೈಮುಗಿದು ಹೀಗೆಂದನು.

''ಪಡೆದವರಂದು ನಮ್ಮನ್ನು ಬಿಟ್ಟುಹೋದುದಕ್ಕಾಗಿ ಅಣ್ಣಾಜಿ ನುಡಿದುದು. ಅವನು ಆಡಿದ್ದು ಸಣ್ಣದು. ದೊಡ್ಡ ಯುಕ್ತಿಯನ್ನು ನಾನು ಹೇಳುವೆನು. ಅದನ್ನು ಚಿತ್ತೈಸಿರಿ. ಅವರು ಮೋಹವನ್ನು ಗೆದ್ದರು. ನಾವು ಅವರೊಡನೆ ಸೇರಲೊಪ್ಪದೆ, ಅವರ ಸಂಬಂಧವೆ ಇಲ್ಲವೆಂಬಂತೆ ಮೋಹದಲ್ಲೇ ಇದ್ದೆವು. ಯೋಗಿಗಳಾದರು ಆ ಜನಕಜನನಿಯರೆಂದು ಹೇಳಲಾಗದೆಂದು ಅವರನ್ನು ಬೇರ್ಪಡಿಸಿ, ಭೋಗದಲ್ಲಿರುವ ದೇವರೆ ತಂದೆತಾಯಿ ಯೆಂದನು. ಈ ಗುಣವು ಯಾರಿಗಿದೆ?''

''ಭಾಪುರೆ ರತ್ನಬಲರಾಜು, ಲೇಸನ್ನೇ ಹೇಳಿದೆ; ಮಹಾಬಲರಾಜು ಲೇಸನ್ನೇ ನುಡಿದೆ'' ಎಂದು ಭರತೇಶ್ವರನು ಇಬ್ಬರನ್ನೂ ತಕ್ಕೈಸಿದನು. ಅದನ್ನು ನೋಡಿ ಆಪ್ತರೆಲ್ಲರೂ ಸಂತೋಷಪಟ್ಟರು. ''ಸುಬಲರಾಜು, ನಿನ್ನ ಅಣ್ಣಂದಿರು ಅಂದುದು ಸೊಬಗಾಯಿತಲ್ಲವೆ?'' ಎಂದು ಭರತೇಶನು ಸುಬಲರಾಜನನ್ನೂ ಕೇಳಿದನು. ''ವಿಭುದೇಂದ್ರ, ನಿನ್ನ ಪುತ್ರರ ಮಾತು ಸೊಗಸಾಗಿದೆ. ಇದನ್ನು ನನ್ನೊಡನೆ ಕೇಳುವುದೇನು? ಒಳ್ಳೆಯವರ ಹೊಟ್ಟೆಯಲ್ಲಿ ಹುಟ್ಟಿದವರ ನಡೆನುಡಿ ಒಳ್ಳಿತೆಂದು ಬಲ್ಲೆ. ಅಲ್ಲಿಂದ ಮೇಲೆ ದೇವರೆ ಬಲ್ಲಿರಿ'' ಎಂದ ಸುಬಲರಾಜನನ್ನು ಚಕ್ರೇಶ್ವರನು ಲಲ್ಲೆಯಿಂದ ಅಪ್ಪಿಕೊಂಡನು.

''ಆದಿದೇವರು, ಭೇದವಿಲ್ಲದ ಇವರ ಸ್ನೇಹವನ್ನು ಕಂಡಿರಲ್ಲ. ಸೋಮಾರಿಗಳಾದ ಸೋದರರಲ್ಲಿ ಭೇದವಿರುತ್ತದೆ. ಪ್ರಮೋದಿಗಳಲ್ಲಿ ಇರುವುದಿಲ್ಲ. ನಿಮ್ಮ ಸುವಿವೇಕವನ್ನು

ಕಂಡು ನನ್ನ ಚಿತ್ತಕ್ಕೆ ತಂಪಾಯಿತು. ಹೆತ್ತವರನ್ನು ಆಗಲಿದ ನೋವು ಹೋಯಿತು. ಇವರನ್ನು ಸಂತವಿಸಬೇಕೆಂದು ನಾನೇ ಮಾತನಾಡುವವನಿದ್ದೆ. ಇವರೆ ಮಾತನಾಡಿ ನನ್ನನ್ನು ಸಮಾಧಾನಪಡಿಸಿದರು. ಇದೇ ಒಂದು ಅಚ್ಚರಿ'' ಎಂದು ಭರತೇಶನೇ ಮಾತನ್ನು ಕೊನೆಗೊಳಿಸಿದನು.

ಒಂದೊಂದು ದಿನ, ಒಂದೊಂದು ಮನೆಯಲ್ಲಿ ಆ ತಂದೆಯು ಆರೋಗಣೆ ಮಾಡಿದನು. ಮಂತ್ರಿ, ಮಂದಿ, ಸೇನಾಧ್ಯರು, ಪ್ರಜೆಗಳು – ಎಂದು ಎಲ್ಲರೂ ಪ್ರೀತಿಸುವಂತೆ ಚಕ್ರಿಯು ಚಂದದಿಂದಲೇ ಮೂರು ದಿನವಿದ್ದನು. ಸೊಸೆಯರಿಗೆ ಮನ್ನಣೆಯಿತ್ತನು. ಸುತರಿಗೆ ಹೊಸ ರಾಜ್ಯವನ್ನೂ ಆನೆ ಕುದುರೆಗಳನ್ನೂ ಕೊಟ್ಟನು. ಪ್ರಣಯ ಚಂದ್ರನಿಗೂ ಸೇನಾಧ್ಯರಿಗೂ ಹಿರಿದಾಗಿ ಮರ್ಯಾದೆ ಮಾಡಿದನು. ಮಗನ ಕಾಲುದಳವನ್ನೂ ತಣಿಸಿ, ತನ್ನೂರತ್ತ ಪಯಣಿಸಿದನು. ಅದನ್ನು ನೋಡಿ ಎಲ್ಲರ ಮನಸ್ಸಿಗೂ ತೃಪ್ತಿಯಾಯಿತು. ತನ್ನ ಪುತ್ರರೊಡನೆ ಭರತೇಶನು ಹೊರಟುಬಿಟ್ಟನು. ಗಣ ಬದ್ಧರಾಗ ಜಯಘೋಷಗೈದರು. ಗುಡುಗುಡಿಸುವ ವಾದ್ಯ ಘೋಷ ಶೋಭಿಸುತ್ತಿರಲು ಸಾರ್ವಭೌಮನು ಪುಷ್ಪಕವನ್ನೇರಿದನು. ಆಕಾಶಮಾರ್ಗದಲ್ಲಿ ಚಳಚಳನೆ ಸಾಗಿ ಬಂದು, ಪುರವನ್ನು ಪ್ರವೇಶಿಸಿದನು.

೭

# ಬ್ರಾಹ್ಮಣ ನಾಮ

ಜನನಿಯರು ತಪಸ್ಸನ್ನು ತಾಳಿದ ಮೇಲೆ ಮತ್ತೊಂದು ದಿನ ಭರತ ರಾಜೇಂದ್ರನು, ಓಲಗದಲ್ಲಿ ತನ್ನ ಅನುಭವದ ಅಧ್ಯಾತ್ಮರಸವನ್ನು ಇಂಪಾದ ರೀತಿಯಲ್ಲಿ ತಿಳಿಸಿದನು. ತಾವರೆಯನ್ನು ಸುತ್ತಿದ್ದ ತುಂಬಿಗಳಂತೆ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಭರತ ಚಕ್ರಿಯ ಸುತ್ತಲೂ ನೆರೆದಿದ್ದರು. ಅವನು ಅಲ್ಲಲ್ಲಿ ಅವರಿವರೊಡನೆ ಒಂದೊಂದು ವಿಚಾರವನ್ನು ಹೇಳುತ್ತಿದ್ದನು. ಅದನ್ನು ತಿಳಿದ ಬುದ್ಧಿಸಾಗರ ಮಂತ್ರಿಯು—

''ಶ್ರೀಹಂಸಕಲೆಯನ್ನು ಎಲ್ಲರೂ ಅರಿಯುವಂತೆ ಉದಾಹರಿಸು ಸ್ವಾಮಿ. ದಿವ್ಯವಾಕ್ಪತಿಯ ಕುಮಾರನಾದ ನೀನು ನಮಗೆ ಆತ್ಮದ್ರವ್ಯವನ್ನು ವ್ಯಕ್ತಪಡಿಸು'' ಎಂದು ಭಕ್ತಿಯಿಂದ ಬೆಸಗೊಂಡನು. ಆಗ ಆಸನ್ನ ಭವ್ಯರ ದೇವನಾದ ಚಕ್ರಿಯು ಇಂತೆಂದು ವಿವರಿಸಿದನು.

'ಬುದ್ಧಿ ಸಾಗರ ಕೇಳು. ಸರ್ವ ಕಲೆಗಳಿಂದ ಯಾವ ಸಿದ್ಧಿಯಿದೆ? ಅಮಲವಾದ ಆತ್ಮಕಲೆಯನ್ನು ಶುದ್ಧ ಚಿತ್ತದಲ್ಲಿ ಎಡೆಬಿಡದೆ ಸಾಧಿಸಿದರೆ ಸರ್ವಸಿದ್ಧಿಯನ್ನೂ ಪಡೆವರು. ಇಲ್ಲಿ ಹಂಸನನ್ನು ಧ್ಯಾನಿಸುವವರು ಸ್ವರ್ಗದಲ್ಲಿ ಸುಖದಲ್ಲಿ ಓಲಾಡಿ, ಕರ್ಮವನ್ನು ಸುಟ್ಟು ಮುಕ್ತಿಯನ್ನು ಪಡೆವರು. ಹಂಸನು ಎಲ್ಲಿರುವನೆಂಬುದನ್ನು ಇನ್ನು ಕೇಳು. ಹಂಸನಿರುವುದು ದೂರವಲ್ಲ, ಹಂಸನು ಎಲ್ಲರ ಮೈಯ್ಯ ಬಿಡಾರದಲ್ಲಿರುವನು. ಅವನನ್ನು ಸೇರಿ ಮುಕ್ತಿಯನ್ನು ಪಡೆಯಲು ತಿಳಿಯದೆ ಈ ಜಗವು ಬಾರದ ಭವವನ್ನು ಹೊಂದುತ್ತಿದೆ. ಹಂಸನು ತಾನು ಧರಿಸಿದ ದೇಹವನ್ನು ತುಂಬಿರುವನು. ಸುಜ್ಞಾನ ಸದ್ದರುಶನ ಸುಖಶಕ್ತಿಗಳಿಂದ ತನಗೆ ಎರವಿಲ್ಲದೆ ಬಿಡಲಾದರೂ ಈ ಎರವಿನ ಮೈಯನ್ನು ಹೊಕ್ಕಿರುವನು. ಆತ್ಮನು ಬ್ರಾಹ್ಮಣನಲ್ಲ, ಕ್ಷತ್ರಿಯನೂ ಅಲ್ಲ, ಆತ್ಮ ವೈಶ್ಯನೂ ಅಲ್ಲ, ಪ್ರಮುಖನಾದ ಶೂದ್ರನೂ ಅಲ್ಲ.

''ಬ್ರಾಹ್ಮಣ ಮುಂತಾದ ಸಂಕಲ್ಪವನ್ನು ದೇಹಕ್ಕೆ ಸಂಬಂಧಿಸಿ ಈ ಹಂಸನಿಗೆ ಹೇಳುತ್ತಾರೆ. ಆತ್ಮನು ಯೋಗಿಯಲ್ಲ ಆತ್ಮ ಗೃಹಸ್ಥನೂ ಅಲ್ಲ, ಶ್ರೇಷ್ಠನಾದ ಯೋಗಿ, ಜೋಗಿ, ಸವಣ, ಸನ್ಯಾಸಿ, ಕಳಾಮುಖಿ, ಪಾಶುಪತಿಗಳ ಸೊಮ್ಮಾಗಿಯೂ ಇಲ್ಲ, ಅದೆಲ್ಲವೂ ಕರ್ಮಚರಿತೆ. ಆತ್ಮನು ಸ್ತ್ರೀಯಲ್ಲ, ಸ್ತ್ರೀಯನ್ನು ಆಸೆ ಮಾಡುವ ಗಂಡಸೂ ಅಲ್ಲ, ಷಂಡಾಯತ, ಸಾಂಖ್ಯ, ಮೀಮಾಂಸ, ನೈಯಾಯಿಕ, ಅರ್ಹತ, ಮುಂತಾದವರಲ್ಲಿ ಇವು ಮಾಯೆಯಿಂದಾದ ಮಾಟಗಳು. ಆತ್ಮನು ಶುದ್ಧನಾಗಿದ್ದಾನೆ; ಬುದ್ಧನಾಗಿದ್ದಾನೆ. ಅವನು ನಿತ್ಯನು; ಸತ್ಯನು. ಶುದ್ಧಭಾವಕ್ಕೆ ತೋರುತ್ತಿರುವ ಸುಲಭನು. ಅವನು ಸಿದ್ಧನೂ ಜಿನನೂ ಶಂಕರನೂ ನಿರಂಜನ ಸಿದ್ಧನೂ ಅಲ್ಲದೆ ಬೇರೆಯಲ್ಲ; ಅವನು ಜ್ಯೋತಿ

ಸ್ವರೂಪನು, ಜ್ಞಾನ ಸ್ವರೂಪನು, ವೀತರಾಗನು ಮತ್ತು ನಿರಾಮಯನು. ಜಾತಿ, ಜರೆ, ಮರಣಗಳು ಇಲ್ಲದವನು, ಕರ್ಮ ಸಂಘಾತದಲ್ಲಿದ್ದರೂ ನಿರ್ಮಲನು. ಆತ್ಮನು ಮಾತಿಗೂ ಮನಸ್ಸಿಗೂ ಗೋಚರನಲ್ಲ, ತನು ಸೋಂಕದೆ ಈ ತನುವಿನಲ್ಲಿರುವನು. ಆದರೆ ಘಾತದ ಸಂವೇದನಾನುಭವಕ್ಕೆ ಗಮ್ಯನಾಗಿರುವನು. ಅವನ ಮಹಿಮೆ ವಿಚಿತ್ರ! ತಮ್ಮಿಂದಲೇ ತಮ್ಮನ್ನು ಅರಿಯುವುದು, ಕಾಣುವುದು ಸ್ವಸಂವೇದನೆ. ಅದು ಮೋಕ್ಷ ಮುಟ್ಟುವಂತಾ ಯಿತು ಎಂದಾಗ ಮಾತ್ರ ತನ್ನ ಎದೆಯಲ್ಲೇ ಹೊಳೆಯುವುದು. ಅದನ್ನು ತಾನು ಅನುಭವಿಸಬಹುದು. ಮಾತಿನ ಮೂಲಕ ಅನ್ಯರಿಗೆ ಹೇಳಲು ಕಷ್ಟವಾಗಿದೆ. ಅದು ಕೇಳುವವರಿಗೆ ಸಟೆಯಾಗಿಯೂ ಧ್ಯಾನಿಸುವವರಿಗೆ ನಿಜವಾಗಿಯೂ ತೋರುವುದು.

''ಕಾಡುತ್ತಿರುವ ಇಂದ್ರಿಯಗಳನ್ನು ಕಟ್ಟಿ, ತೆಳ್ಳಗಾದ ಉಸಿರು ಕಡಿಮೆಯಾಗುತ್ತಿರುವಾಗ, ಚಿತ್ತವನ್ನು ಒತ್ತಿ ತುಂಬಿಸಿ, ಕಣ್ಣುಗಳನ್ನು ಮುಚ್ಚಿ, ಸುಜ್ಞಾನದಿಂದ ನೋಡಲು ಒಳಗೆ ಆತ್ಮನು ತೋರುವನು. ದೇಹವೆಂಬ ಕೊಡದಲ್ಲಿ ತುಂಬಿಸಿದ ಹಾಲೋ, ಅಲ್ಲ ಮೈಯೆಂಬ ಮನೆತುಂಬ ಬೆಳಗುತ್ತಿರುವ ದೀಪವೋ, ಎನ್ನುವಂತೆ ಆತ್ಮನು ತೋರುವನು. ಹಾಲು–ದೀಪಗಳು ಪಂಚೇಂದ್ರಿಯಗಳಿಗೆ ಗೋಚರವಾಗುತ್ತವೆ. ಪ್ರಶಾಂತನಾದ ಆತ್ಮನು ಇಂದ್ರಿಯಗಮ್ಯನಲ್ಲ, ಈ ಹೋಲಿಕೆ ಸರಿಯಲ್ಲ, ರೂಪವಿಲ್ಲದ ದೀಪದಂತೆಯೂ ಹಾಲಿನಂತೆಯೂ ಇರುವ ಆತ್ಮನಿರುವು ದೊಂದು ವಿಚಿತ್ರವಾಗಿದೆ! ನುಡಿಗೆ ಒಳಗಾಗದ ವಸ್ತುವನ್ನು ಹೀಗೆಂದು ನುಡಿದು ತೋರಿಸುವೆನೆಂದರೆ ಆದೀತೆ? ಜಗತ್ತಿನಲ್ಲಿ ಪ್ರತಿಯಿಲ್ಲದ ಚಿದ್ರೂಪವನ್ನು ಒಂದಕ್ಕೆ ಪ್ರತಿಯಾಗಿ ತೋರಿಸುವುದು ಹೇಗೆ? ಸ್ವಾನುಭವಕ್ಕೆ ಗಮ್ಯವಾಗುವ ವಸ್ತುವನ್ನು ತನ್ನಿಂದ ತಾನೇ ತಿಳಿದು ನೋಡುವುದೇ ಓಜೆ! ಎದುರಿಟ್ಟುಕೊಂಡು ಇದು ಹೀಗೆ, ಅದು ಹಾಗೆ ಎನ್ನುವ ಉಪಮಾನವೆಲ್ಲ ಬರೀ ಉಪಚಾರ. ಆತ್ಮನು ಕ್ರಮವಾಗಿ ತೋರುವನು; ಒಂದೇ ದಿನದಲ್ಲಿ ತೋರನು. ಸೂರ್ಯಚಂದ್ರರು ಪ್ರಜೆಗಳಿಗೆ ಸಮಮಿಗಿಲು ಎನ್ನುವಂತೆ ತೋರುತ್ತ ಇದ್ದು, ಮಾಸಿ ತಮವಾಗುವುದು; ಕೂಡಲೆ ಹೊಳೆಯುವುದು. ಮೈಯೆಲ್ಲಾ ತುಂಬಿ ತೋರುವನೊಮ್ಮೆ; ಒಮ್ಮೆ ಎದೆಯಲ್ಲಿ ಮುಖದಲ್ಲಿ ಗರ್ಭದಲ್ಲಿ ಬೆಳಗುವನು; ಝಲ್ಲನೆ ತಾಗುವುದು; ಕೂಡಲೆ ಬಾಡುವುದು; ಮತ್ತೆ ಹೊಳೆವುದು; ಇದೆಲ್ಲ ಸಾಧ್ಯವಾಗಿದೆ.

''ಈ ದೇಹದೊಳಗೆ ಪರಮಾತ್ಮ ಕಳೆಯು ಪುರುಷಾಕಾರವಾಗಿ ಒಮ್ಮೆ ತೋರುವುದು. ಒಮ್ಮೆ ಆಕಾರ ಅಳಿದುಹೋಗಿ ಪ್ರಭೆಯೇ ಮೈತುಂಬಿ ನಿರಾಕುಲನಾದ ಆತ್ಮನು ತೋರುವನು. ಧ್ಯಾನದಲ್ಲಿರುವವನಿಗೆ ತೋರುತ್ತಿರುವ ಪ್ರಭೆಯೇ ಸುಜ್ಞಾನ ದರ್ಶನ. ಅದೇ ರತ್ನತ್ರಯದ ಮಾತು. ಆಗ ಕರ್ಮ ಜರಿವುದು. ನಿಜವಾದ ಸುಖವೇರುವುದು. ಆಗ ಕಣ್ಣುಗಳ ಕಿರು ಗೊಂಬೆಯಲ್ಲಿ ಕಾಣುವುದೇನು – ಸರ್ವಾಂಗದಲ್ಲೂ ಕಾಣುವನು.

''ಸಂಗವಾದ ವಿದ್ಯೆಯನ್ನು ಅಲ್ಪ ಮನಸ್ಸಿನಿಂದ ಅರಿವುದೇನು? ಹಿಂಜರಿಯದೆ ಎಲ್ಲೆಡೆಯಲ್ಲೂ ಅರಿಯುವನು. ಮೂಗು ನಾಲಗೆ ಮುಂತಾದ ಸ್ವಲ್ಪೇಂದ್ರಿಯಗಳ ವಾಸನಾರ್ಥದ ಸುಖಮಾತ್ರವಲ್ಲ, ಹೊರಸೂಸುವ ಆನಂದವು ದೇಹದಲ್ಲಿ ತುಂಬಲು

ಸುಖಿಸುವನು. ಆ ಸಿರಿಯು ಯಾರಿಗಿದೆ? ಆಗ ನುಡಿಯಿಲ್ಲ, ನಡೆಯಿಲ್ಲ; ಶ್ವಾಸ ನಿಶ್ವಾಸವಿಲ್ಲ, ಈ ಒಡಲೂ ಇಲ್ಲ; ಕಲ್ಮಷವೂ ಇಲ್ಲ, ಆತ್ಮನು ಮಿಡುಕಾಟವಿಲ್ಲದೆ ಕಾಂತಿ ಮುದುಗಟ್ಟಿ, ಪುರುಷ ರೂಪಾಗಿ ತೋರುವನು.

"ಹಡಗು ನೀರಿಂದ ಅಲುಗಿದರೆ ಅದರೊಳಿದ್ದವರು ಅಲುಗುವಂತೆ, ಶ್ವಾಸದಿಂದ ಒಡಲು ಚಲಿಸುವಂತೆ, ಆತ್ಮನು ಜೊತೆಯಲ್ಲಿ ಚಲಿಸುತ್ತಾನೆ. ಅಭ್ಯಾಸಕಾಲದಲ್ಲಿ ಚಲಿಸುತ್ತಾನೆ. ಉಚಿತವಾದ ಅಭ್ಯಾಸವಾದಾಗ ವಾಯು, ಸಭ್ಯರಂತೆ ನಿಲ್ಲುವುದು. ಆತ್ಮನು ತಾನು ಯಾವೊಂದು ವಾಸನೆಯೂ ತಟ್ಟದೆ ಸುಮ್ಮನಿರುವನು. ಕಾಂತಿಪುರುಷನು ಬೆಳಕಿನ ಪುತ್ತಳಿಯಂತೆ, ಪ್ರಭೆಯ ದೇಹಾರದಂತೆ, ಚಿತ್ಕಳೆಯ ಪ್ರತಿಮೆಯಂತೆ ಹೊಳಪಿನ ಬೊಂಬೆಯಂತೆ ಪ್ರಕಾಶದ ಚಿತ್ರದಂತೆ ಒಳಗಡೆಯಲ್ಲಿ ಆತ್ಮ ತೋರುವನು. ಅದು ಚಂದ್ರನ ಜ್ಯೋತ್ಸ್ನೆಯೇ ಪುರುಷನಾದುದೋ, ಎನ್ನುವಂತಿದೆ. ಕೈಗೆ ಸಿಕ್ಕಿದ ಕನ್ನಡಿ ಪುರುಷನಾಗಿದೆ. ಮೊದಲು ಎಲ್ಲಿಯೂ ಕಂಡ ರೀತಿಯಲ್ಲ, ಆಶ್ಚರ್ಯವೆನ್ನುವಂತೆ, ತನಗೆ ತನ್ನ ಆತ್ಮನು ತೋರುವನು. ಈ ಮಿಂಚಿನ ಬೊಂಬೆಯು ಎಲ್ಲಿಯದು? ಕೈಗೆ ಅಳವಡುವುದಿಲ್ಲ, ಈ ನಿರ್ಮಲವಾದ ಸ್ಫಟಿಕದ ಬೊಂಬೆ ಎಂಬಂತೆ – ಧ್ಯಾನಿಗೆ ತಳತಳಿಸುತ್ತ ಆತ್ಮನು ತೋರುವನು. ಬಾಹ್ಯ ವಸ್ತುಗಳು ತಿಳಿಯಾದ ಮಡುವಿನಲ್ಲಿಯೂ ಬೆಳಗಿದ ಕನ್ನಡಿಯಲ್ಲಿಯೂ ಹೊಳೆಯುವಂತೆ ಹಲವನ್ನು ಹಂಬಲಿಸದೆ ಆತ್ಮನಲ್ಲಿಯೇ ನಿಂತಾಗ ತನ್ನಲ್ಲಿಯೇ ಅಖಿಳ ಪ್ರಪಂಚವು ತೋರುವುದು.

"ಜಗವನ್ನು ತುಂಬುವ ಈ ಪ್ರಭೆಯನ್ನು ಮೈಯೆಂಬ ಹಡಗದಲ್ಲಿ ತುಂಬಿದವರಾರು? ಆಕಾಶವನ್ನೇ ಒಳಗೊಂಡಿರುವ ಈ ತಿಳಿವಿಗೆ ಇಲ್ಲಿ ತಂಗುವಂತಾದುದು ಹೇಗೆ?

"ಆಗ ದಿಗಿದಿಗಿಯಾಗಿ ಕರ್ಮವು ಇಳಿದು ಹೋಗುವುದು. ಒಳಗೆ ಚಿತ್ಕಳೆಯು ಧಗಧಗನೆ ಏಳುವುದು. ಅಗಣಿತವಾದ ಸುಖವು ಜುಮ್ಮ ಜುಮ್ಮನೇರುವುದು. ಧ್ಯಾನಿಗಿದು ಗಮ್ಯವಾಗಿದೆ; ಪರರಿಗೆ ಕಾಣಿಸದು" ಎಂದು ಭರತೇಂದ್ರನು ತಿಳಿಸಿದನು. ಸಭೆ ತನ್ಮಯವಾಗಿ ಕೇಳಿತು.

"ನಿರ್ಮಲವಾದ ಆತ್ಮನ ಪ್ರಕಾಶದಲ್ಲಿ ಉರಿಬಿಸಿಲಿಗೆ ಹಿರಿಮಂಜು ಕರಗಿ ಹೋಗುವಂತೆ, ಕಾರ್ಮಣ ತೈಜಸ ಶರೀರವು ಸೋರಿ ಹೋಗುವುದು. ಆತ್ಮನು ತಾನೆ ನೋಡಿಸಿಕೊಳ್ಳುವನು; ತಾನೇ ನೋಡುವನು; ನೋಡುವ ದೃಷ್ಟಿಯು ಅವನೆ. ಅದನ್ನು ಹೇಳುವುದೆಂದರೆ ಅದೊಂದು ಆಶ್ಚರ್ಯವೇ ಸರಿ. ಮುಂದೆ ಧ್ಯಾನದ ಫಲದಿಂದ ಸೇರುವ ಮುಕ್ತಿಯೂ ಅವನೇ" ಎಂದು ಭರತೇಶನು ತನ್ನ ಅನುಭವದ ಮಾತುಗಳನ್ನು ಮುಂದುವರಿಸಿದನು.

"ಆತ್ಮನು ಮೂರು ದೇಹದಲ್ಲಿರುವಾಗ ಆತನು ಸಂಸಾರಿ. ಆ ಮೂರು ದೇಹವು ಧ್ಯಾನದಿಂದ ಕಳಗೆ ಬೀಳಲು ತನಗೆ ತಾನೇ ಲೋಕದ ಮೇಲಿನ ಹಂತಕ್ಕೆ ಏರಿ ನಿಲ್ಲುವನು. ಅದನ್ನೆ ಮುಕ್ತಿಯೆಂದು ಹೇಳುವರು. ತನ್ನನ್ನು ತಾನು ನೋಡಿದರೆ ಮಾತ್ರ ತನ್ನ ಆ ಶರೀರವು ಸೋರಿ ಹೋಗುವುದಲ್ಲದೆ ಅನ್ಯರಿಗೆ ಅದನ್ನು ಕೆಡಿಸಲು ಸಾಧ್ಯವಿಲ್ಲ. ಭಿನ್ನವಾಗಿರುವ ಕರ್ಮಗಳನ್ನು ಸುಟ್ಟು ತಾವೇ ಮುಕ್ತಿಗೆ ಹೋಗುವರಲ್ಲದೆ ಅನ್ಯರು

ಎತ್ತುವಂತೆಯೂ ಇಲ್ಲ ; ತಡೆಯುವಂತೆಯೂ ಇಲ್ಲ. ಗುರುದೇವರು ಮುಕ್ತಿಯನ್ನು ತೋರಿಸಬಹುದಷ್ಟೆ. ಅಂಟಿರುವ ದುರಿತಗಳನ್ನು ಅವರವರೇ ಕೆಳಕ್ಕೊತ್ತಿ ದೂಡಬೇಕು. ಗರಡಿಯ ಗುರು ರಣರಂಗಕ್ಕೆ ಬರುತ್ತಾನೆಯೆ? ವೈರಿಯನ್ನು ತಾನೇ ಗೆಲ್ಲಬೇಕು. ಇದನ್ನು ಪ್ರತಿಯೊಬ್ಬರೂ ತಿಳಿಯಬೇಕು. ಮೊದಲು ಸಾಧನೆ ಮಾಡಿಸಿದ ಆಚಾರ್ಯನು, ನನ್ನ ಹಾರೈಸದೆ ಯುದ್ಧ ಮಾಡಿದನಲ್ಲಾ — ಎಂದು ಅಳುವಂತಿಲ್ಲ. ತನ್ನನ್ನು ತಾನೇ ನೋಡಿ, ಮುಕ್ತಿಗೆ ಸಂದರೆ ಅದು ಉನ್ನತೋನ್ನತವಾದ ಜಿನಭಕ್ತಿ.

''ಬೇರೆಯಾಗಿರುವನೆಂದು ದೇವನನ್ನು ನೋಡಿದರೆ ಅದು ಚಿತ್ತವು ಬೇರೆಯಾದ ಭಕ್ತಿ. ಮೂರು ದೇಹದಲ್ಲಿರುವನೆಂದು ನೋಡಿದರೆ ಮುಕ್ತಿಗೇರುವ ಭಕ್ತಿ. ಮೊದಲಿನದು ಸ್ವರ್ಗೋಕ್ತಿಯಾದರೆ ಮುಂದಿನದು ಸುಯುಕ್ತಿ. ಚೇತನವಲ್ಲದ ಶಿಲೆ ಕಂಚುಗಳನ್ನು ಜಿನನೆಂದು ಪೂಜೆಮಾಡುವುದು ಪುಣ್ಯ ಭಕ್ತಿಯಾದರೆ, ಚೈತನ್ಯ ರೂಪವಾದ ಆತ್ಮನೇ ದೇವನೆಂದು ನೋಡುವುದು ನೂತನ ಭಕ್ತಿ, ಅದೇ ಸುಮುಕ್ತಿ. ನಾವು ತಿಳಿಯದಾಗ ಅರುಹಂತನು ಹೊರಗಿರುವನು; ಮತ್ತೆ ತಿಳಿದ ಮೇಲೆ ಅವನು ಒಳಗಿರುವನು. ನಿಜವಾಗಿ ಹೇಳುವುದಾದರೆ, ತನ್ನ ಆತ್ಮನನ್ನೇ ದೇವನೆಂದು ನಮಸ್ಕರಿಸಿ ನೋಡುವವನೆ ಉತ್ತಮ ದೃಷ್ಟಿಯವನು.

''ಜಿನ ಸಿದ್ಧರೆಲ್ಲರೂ ಮೊದಲು ತಮ್ಮ ಆತ್ಮಭಾವನೆಯಿಂದ ಕರ್ಮವನ್ನು ಕೆಡಿಸಿ ಮನುಷ್ಯರೆಲ್ಲರೂ ಹಾಗೆ ಮಾಡಬಹುದೆಂದು, ನಮಗೆ ಶಾಸನವನ್ನು ತೋರಿಸಿ ಹೋಗಿರುವರು. ಭವ್ಯರಾದವರು ಇದನ್ನೊಪ್ಪುತ್ತಾರೆ. ಭವ್ಯರಲ್ಲದ, ನಿರ್ಭವ್ಯರು ಇದರೊಳಹೊಕ್ಕು ಹೋರಾಡುತ್ತಾರೆ. ಸುವ್ಯಕ್ತ ಮತಿಗೆ ಮಾತ್ರ ಆತ್ಮಾನುಭವವೆಂಬುದು; ಅಲ್ಲದೆ ಅವ್ಯಕ್ತಮತಿಗಳಿಗೆ ಆತ್ಮಾನುಭವವಾಗುವುದೇ ಮಂತ್ರಿ? ಅಭವ್ಯರು, ನಾನಾರ್ಥ ಬೇಕೆನ್ನುವರು; ಆತ್ಮನೊಂದೇ ಏಕೆಂದು ಕೇಳುವರು; ನಾನೊಪ್ಪಲಾರೆನು; ತಾನೊಪ್ಪಲಾರೆನು — ಎಂದು ಜೇನುನೊಣ ಕಡಿದಂತೆ ಮಂಡೆಯನ್ನು ಕೊಡಹುತ್ತಾರೆ. ಅಂಥವರಿಗೆ ಏನೆನ್ನಬಹುದು? ಅವರು ಧ್ಯಾನಕ್ಕೆ ಒಪ್ಪುವುದಿಲ್ಲ; ಒಂದು ವೇಳೆ ಒಪ್ಪಿದರೂ ಪರಾಧೀನಮಾಡಿ ತೋರಿಸುವರು. ಶ್ರೀ ನಿರಂಜನ ಸಿದ್ಧನಲ್ಲಿಯೇ ನಿಲ್ಲಬೇಕೆಂದರೆ, ಏನಾದರೊಂದು ನೆಪವನ್ನು ಒಡ್ಡುವರು. ಆತ್ಮಯೋಗಕ್ಕೆ ತಪಸ್ಸು ಬೇಕು, ಶಾಸ್ತ್ರ ಬೇಕು – ಎಂದೆಲ್ಲ ಧ್ಯಾನಿಗಳು ಅಪಲಾಪ ಮಾಡುತ್ತಾರೆ; ತಪಸ್ಸು ಮಾಡುತ್ತ ಶಾಸ್ತ್ರವನ್ನೋದುತ್ತ ತಾವು ಮಾತ್ರ ಧ್ಯಾನದಿಂದ ಹೊರಗಾಗಿರುವರೆಂದು ಹೇಳುತ್ತಾರೆ. ತಾವು ಆತ್ಮನನ್ನು ನೋಡಲು ಅರಿಯರು; ಆತ್ಮನನ್ನು ನೋಡುವವರನ್ನು ನೋಡಿ ಇವರು ಸಂತೋಷ ಪಡಲಾರರು. ಇವರು ಪೀಡಿಸುವುದನ್ನು ಒಂದನ್ನೇ ಬಲ್ಲರು. ಇಂಥವರ ಒಡನಾಟವನ್ನು ಧ್ಯಾನರತರಾದವರು ಮಾಡಬಾರದು. ಹಂಸಧ್ಯಾನವೆಂಬುದು ಗೃಹಿಗೂ, ತಾಪಸನಿಗೂ ದೊಡ್ಡ ಶಾಸ್ತ್ರಿಗೂ, ಬಡಶಾಸ್ತ್ರಿಗೂ ಗೃಹಿಣಿಗೂ ಉಂಟು; ಎಲ್ಲರೂ ಆಸನ್ನಭವ್ಯರಾದರೆ ಸಾಕು. ಹೆಚ್ಚು ಮಾತೇನು? ಇದನ್ನು ಮಾತ್ರ ನಂಬಿರಿ. ಪರಮ ಶುಕ್ಲಧ್ಯಾನವು ಯೋಗಿಗಲ್ಲದೆ ಗೃಹಸ್ಥರಿಗಿಲ್ಲವೆಂದರೆ ಒಪ್ಪಬಹುದು. ನಿರುತವಾದ ಧರ್ಮ ಧ್ಯಾನವು ಸರ್ವರಿಗೂ ಉಂಟು. ಅದನ್ನು ಇಲ್ಲವೆಂದರೆ ಒಪ್ಪಬಹುದೆ?

"ಆಜ್ಞೆ, ವಿಪಾಕ–ಮುಂತಾಗಿ ನಾಲ್ಕು ರೀತಿಯ ವಿಜ್ಞಾನ ವ್ಯವಹಾರ ಧರ್ಮವಿದೆ. ಸುಜ್ಞಾನಿ ತಾನೆಂದು ತನ್ನನ್ನು ನೋಡಿಕೊಳ್ಳುವುದೆ ಸರ್ವಜ್ಞರ ಮಾತು. ಅದೇ ನಿಶ್ಚಯವಾದ ಧರ್ಮ. ಬಲ್ಲಿದರೆಲ್ಲರೂ ಅಂತರ್ಮುಖವಾಗಿ ತಮ್ಮ ಒಳಗನ್ನು ತಿಳಿದು ಆತ್ಮನನ್ನು ನೋಡಿ ಕರ್ಮವನ್ನು ತುಳಿದು ನೂಕಬೇಕು. ಭವ್ಯಮಾಲೆಯಲ್ಲಿ ಸಿಲುಕಿ ಕಷ್ಟಪಡದೆ, ಮುಕ್ತಿಯನ್ನು ಸೇರಿ ನಿರ್ಮಲವಾಗಿ ಬಾಳಬೇಕು. ಭೋಗದಲ್ಲಿದ್ದು ಧರ್ಮಯೋಗವನ್ನು ನೆರವೇರಿಸಿ, ಆ ಭೋಗಾಂತ್ಯದಲ್ಲಿ ಯೋಗಿಯಾಗಿ, ಶುಕ್ಲಧ್ಯಾನದಿಂದ ಅಷ್ಟ ಕರ್ಮಗಳನ್ನು ನೀಗಿಕೊಂಡು, ಮುಕ್ತಿಗೆ ಸಲ್ಲುವುದು. ಈ ಶ್ರೇಣಿಗೆ ಮುಟ್ಟಬೇಕಾದರೆ ಹೆಚ್ಚು ಕಾಲ ಬೇಕಾಗಿಲ್ಲ. ಇದಕ್ಕೆ ಕಿರಿದಾದ ನ್ಯೂನತೆಯೆಂದರೆ ಎರಡು ಗಳಿಗೆ ಮಾತ್ರ. ಜಾಣರಾದವರು ಅಷ್ಟರಲ್ಲಿ ದೀಕ್ಷೆ ಪಡೆಯುವರು. ಕೆಲವರು ಅಂದಿನಿಂದಲೇ ನಿರ್ವಾಣವನ್ನು ಹೊಂದುವರು. ಒಬ್ಬನು ಸಮುದ್ರದಲ್ಲಿ ಸ್ನಾನ ಮಾಡಬೇಕೆಂದು ಇಲ್ಲಿಯೇ ಅಂಗಿ ಬಟ್ಟೆಗಳನ್ನು ತೆಗೆದಿಟ್ಟು ಹೋಗುವನು. ಇನ್ನೊಬ್ಬನು ಸಮುದ್ರದ ದಂಡೆಯನ್ನು ಮುಟ್ಟಿದ ಮೇಲೆ ಅಂಗಿ ವಸ್ತ್ರಗಳನ್ನು ತೆಗೆದಿಟ್ಟು ಮುಳುಗುತ್ತಾನೆ. ಹಾಗೆ ಮುಳುಗಿದ ಇಬ್ಬರ ಶರೀರಗಳೂ ಒಂದೇ ರೀತಿಯಲ್ಲಿ ಒದ್ದೆಯಾಗಿರುವುದಲ್ಲವೆ? ಅದರಂತೆ. ಕೆಲವರು ಈ ಹೊತ್ತೇ ದೀಕ್ಷೆ ಪಡೆಯುತ್ತಾರೆ. ಕೆಲವರು ಮನೆಯಲ್ಲಿದ್ದುಕೊಂಡು, ಧ್ಯಾನವನ್ನು ಹದಗೊಳಿಸಿ, ಮೆಲ್ಲನೆ ದೀಕ್ಷೆ ಪಡೆಯುವರು. ಕೊನೆಯಲ್ಲಿ ಅವರೆಲ್ಲರೂ ಒಂದೇ ಶ್ರೇಣಿಯನ್ನು ಹೊಂದಿರುತ್ತಾರೆ.

"ಅತಿ ಕಠಿಣರಾದ ಕರ್ಮಿಗಳು ಬಾಹ್ಯ ಸಂಗವನ್ನು ನಾಶಮಾಡಿ, ಆತ್ಮವನ್ನು ನೋಡುತ್ತಾರೆ. ಹಿತವಾದ ಮೃದುಕರ್ಮರು ಬಾಹ್ಯವಿದ್ದರೂ ಭೇದಮತಿಯಿಂದ ಆತ್ಮನನ್ನು ನೋಡುವರು. ಒಬ್ಬನು ಪ್ರಯಾಸಪಟ್ಟು ನಿಧಿಯನ್ನು ಕಾಣುವನು. ಇನ್ನೊಬ್ಬನು ನಿರಾಯಾಸದಿಂದ ನಿಧಿಯನ್ನು ಕಾಣುತ್ತಾನೆ. ಕೆಲವರು ನೋಯದೆಯೂ, ಕೆಲವರು ಚೆನ್ನಾಗಿ ನೊಂದೂ ಆತ್ಮನನ್ನು ನೋಡುತ್ತಾರೆ. ಈ ರೀತಿಯಲ್ಲಿ ಯೋಗಾಯತರು ಎರಡು ವಿಧದಲ್ಲಿರುವರು. ಪರಬ್ರಹ್ಮವೇ ಇದು. ಇದೇ ಪರಮಾಗಮಸಾರದ ತಿರುಳು. ದಿವ್ಯವಾದ ತೀರ್ಥವೂ ಇದೇ. ಅತ್ತಿತ್ತ ತಿರುಗಾಡದಿರುವ ಚಿದ್ರೂಪನಲ್ಲಿ ನಿಂತು ನೀವೆಲ್ಲ ಪರಿಣಾಮ ಪಡೆಯಿರಿ" ಎಂದು ಭರತೇಶನು ತನ್ನ ಮಂತ್ರಿಯೇ ಮೊದಲಾದವರಿಗೆ ತಿಳಿಸಿದನು. "ತನ್ನ ದೇಹದಲ್ಲಿರುವ ಶುದ್ಧಾತ್ಮನನ್ನು ನೋಡುವವನಿಗೆ ಕೈವಲ್ಯವು ಕೈಯೊಳಗಿರುವುದು. ಸಂಯಮಿಯು ಸಾಹಸಿಯಾಗಿದ್ದಾನೆ. ಅವನು ಧ್ಯಾನದಿಂದ ಕರ್ಮದ ಬೇರನ್ನು ಕೊಯ್ಯಲಾರನೆ? ನೀವೆಲ್ಲ ಹಂಸವನ್ನು ನೋಡಿರಿ; ಧ್ಯಾನವೆಂಬ ಅಗ್ನಿಯಿಂದ ಕಾಲಕರ್ಮವನ್ನು ನಾಶಮಾಡಿರಿ. ಆ ಮೂಲಕ ಈ ಮೂರು ದೇಹದ ಭಾರವನ್ನು ಬಿಸಾಡಿ ಬಿಟ್ಟು ಮುಕ್ತಿಯನ್ನು ಸೇರಿರಿ. ಇದನ್ನು ನಂಬುವುದೇ ಶುದ್ಧವಾದ ಸಮ್ಯಕ್ತ್ವ; ಅದನ್ನು ತಿಳಿಯುವುದೇ ಸದಮಲಜ್ಞಾನ; ಮತ್ತು ಅದರಲ್ಲಿ ಮನಸ್ಸು ನೆಲೆಯಾಗಿ ನಿಲ್ಲುವುದೇ ಚಾರಿತ್ರ್ಯ. ಈ ರೀತಿಯಲ್ಲಿ ಮೋಕ್ಷದ ಮಾರ್ಗವಿರುವುದು. ಇದನ್ನು ನೀವು ಚೆನ್ನಾಗಿ ನಂಬಿರಿ" ಎಂದು ಭರತೇಶನು ತಿಳಿಸಿದನು.

ಅಲ್ಲಿದ್ದ ಮಂತ್ರಿಗಳೂ ಮಿತ್ರರೂ ಸಂತುಷ್ಟರಾದರು. ಈ ಸಿದ್ಧಾಂತವನ್ನು ಕೇಳಿ ಪ್ರೀತಿಯಿಂದ ಅವರು ಭರತೇಶನ ಪಾದಗಳಲ್ಲಿ ನಿವಾಳಿಯನ್ನಿಟ್ಟು ನಮಸ್ಕರಿಸಿದರು. ಚಿದ್ರೂಪರಸಿಕನಾದ ಭರತೇಶ್ವರನಿಗೆ ಶೂದ್ರ ಕ್ಷತ್ರಿಯ ವೈಶ್ಯರು ಉತ್ತಮವಾದ ನಿವಾಳಿಯನ್ನಿಟ್ಟು ಎರಗಿದರು. ಆಗ ವಿಪ್ರರು ಉದ್ರೇಕಗೊಂಡು ಸಂತೋಷದಿಂದ ಸೇಸೆ ಹಿಡಿದು ಎದ್ದರು. ಅವರೆಲ್ಲರ ಕಣ್ಣಲ್ಲಿ ಆನಂದಬಾಷ್ಪ ಉದುರುತ್ತಿತ್ತು, ಮೈಯಲ್ಲಿ ರೋಮಾಂಚದ ರೇಷೆಯು ನಸು ನಡುಗುತ್ತಿತ್ತು, ಮುಖದಲ್ಲಿ ಹೊಸ ಕಾಂತಿ ತುಳುಕುತ್ತಿತ್ತು. ಹೀಗಿರುವ ಅವರು ಭರತಚಕ್ರಿಯ ಒತ್ತಿಗೆ ಉಬ್ಬಿನಿಂದಲೇ ಬಂದರು.

''ವಿಭುವೆ, ನಿನ್ನಿಂದ ಮನಸ್ಸಿನ ಅಂಧಕಾರವು ಹರಿಯಿತು. ಸುಜ್ಞಾನದ ಕಿರಣ ಕಂಡಿತು. ಸ್ಥಿರವಾಗಿ ಬಾಳು, ಸುಖವಾಗಿ ಬಾಳು'' ಎಂದು ವಿಪ್ರರು ನೃಪತಿಗೆ ಅಕ್ಷತೆಯಿಟ್ಟರು.

ಎಲ್ಲರ ಹರ್ಷವನ್ನು ನೋಡುವಾಗ ವಿಪ್ರರಲ್ಲಿದ್ದ ಹರ್ಷವೂ ಹೆಚ್ಚಾಯಿತು. ಅದರಿಂದ ಚಕ್ರೇಶ್ವರನೂ ಉಲ್ಲಾಸಗೊಂಡನು. ಅವನ ಮುಕುಟವೂ ಅಲ್ಲಾಡಿತು. ''ಅಧಿಕ ಜಾತಿಯವರಲ್ಲವೆ?'' ತನ್ನ ಸಂತಸ ವ್ಯಕ್ತ ಪಡಿಸಿದನು. ಅವರು ವಿಶಿಷ್ಟ ಜಾತಿಯವರಲ್ಲದೆ ಹಂಸನಾಥನ ಖ್ಯಾತಿಗೆ ಪ್ರೀತಿಪಟ್ಟವರಲ್ಲ, ಅದು ಹೇಗೆಂದರೆ, ಚಂದ್ರನ ಕಿರಣಗಳಿಗೆ ಚಕೋರಗಳು ಪ್ರೀತಿಸುವವಲ್ಲದೆ, ಕಾಗೆಗಳು ಕಾತರಿಸುವವೆ?

''ಅಂದು ಆದಿಬ್ರಹ್ಮನು ನಾಲ್ಕು ವರ್ಣಗಳಿಗೆ ಗುರುವೆಂದು ಸೃಷ್ಟಿಸಿದ ಜಾತಿಯಷ್ಟೆ. ಇಂದು ಇವರಂಗವೂ ಪ್ರತ್ಯಕ್ಷವಾಯಿತು. ಲೇಸು, ಲೇಸು'' ಎಂದು ಮನಸ್ಸಿನೊಳಗೆ ಸಂತೋಷಗೊಂಡ ಚಕ್ರಿಯು ವಿನೋದಕ್ಕಾಗಿ ಹೀಗೆಂದನು :

''ವಿಪ್ರರೇ, ಅಷ್ಟರ ಮೇಲೆ ಚಿದ್ರೂಪನ ಅನುಭವವು ಹೇಗಿರುವುದು?''

''ಜಿನನ ಜೇಷ್ಠ ಪುತ್ರನಾದ ನಿನ್ನ ನಡೆಯಂತೆ, ನುಡಿಯಂತೆ, ನೆನಪಿನಂತೆ ಇರುವುದು. ಆದಿಚಕ್ರೇಶ್ವರನೊಬ್ಬನೇ ಆ ಹಂಸ ಲೀಲೋದಯದ ಅರ್ಥವನ್ನು ಬಲ್ಲ. ನಾವೊಂದು ಓದನ್ನು ಮಾತ್ರ ಬಲ್ಲೆವು. ಆ ಧ್ಯಾನವು ಹೇಗಿರುವುದೋ. ಇನ್ನಾದರೂ ಆಗಲಿ.''

''ಪರಮಾತ್ಮ ಯೋಗಾನುಭವ ತಮಗುಂಟು. ಅದನ್ನು ತೋರಿಸುವುದಿಲ್ಲ. ಹಾಗೆ ಹೀಗೆಂದು ಅರೆಗೊಡವು ತುಳುಕುವುದಲ್ಲದೆ, ತುಂಬಿದ ಸಿರಿಗೊಡವು ತುಳುಕುವುದೇ? ಆಸನ್ನಭವ್ಯರೆ ನೀವು, ನಿಮ್ಮ ಆತ್ಮವಿಕಾಸಕ್ಕೆ ಆನಂದವಾಯಿತು ನನಗೆ. ಭೂಸುರರೆ ಕೇಳಿ, ನಾನು ನಿಮಗೆ ಇನ್ನೊಂದು ಲೇಸಿನ ಹೆಸರನ್ನಿಡುವೆನು. ಬ್ರಹ್ಮವೆಂದರೆ ಹಂಸ. ಹಂಸಾನುಭವಿ ತಾನೆ ಬ್ರಾಹ್ಮಣನು. ಇದು ಶಬ್ದಸಿದ್ಧವು. ಬ್ರಹ್ಮವೇತ್ತ್ಯನುಭವತೀತಿ ಬ್ರಾಹ್ಮಣ'' ಎಂದು ಚಕ್ರಿಯು ಅವರಿಗೆ ಬ್ರಾಹ್ಮಣರೆಂಬ ಹೆಸರಿತ್ತನು.

''ನಾವು ಧರಿಸಬಹುದು, ಆದರೆ ಆತ್ಮಾಭಿರಾಮ ಧರಿಸಲಾರಿರಿ. ಅದು ಕಷ್ಟ. ನೀವು ಸಾಮರ್ಥ್ಯವುಳ್ಳವರಾಗಿದ್ದೀರಿ. ನೀವು ಬ್ರಾಹ್ಮಣರು. ಪೂಜಿಸಲ್ಪಡುವ ಹೆಸರು ಇನ್ನೊಂದು ಉಳಿದಿದೆ. ನಾನಾ ಜನಗಳಲ್ಲಿ ನೀವು ಮಹಾ ಜನಗಳು. ನಮ್ಮ ಅಯ್ಯನು ನಿಮಗೆ ದ್ವಿಜರು, ಭೂಸುರರು. ವಿಪ್ರರು, ಬುಧರು ಎಂದು ನಿಮ್ಮನ್ನು ಸೃಷ್ಟಿಸಿದಂದು ಹೆಸರಿತ್ತನು. ಬ್ರಾಹ್ಮಣ ಮಹಾಜನಗಳೆಂದು ನಾನಿಂದು ನಿಜಗೊಳಿಸಿದೆನು. ಇರಲಿ. ಅಂದು ಅಯ್ಯನು ನಿಮ್ಮನ್ನು

ದಾನಕ್ಕೆ ಪಾತ್ರರು, ದೀಕ್ಷೆಗೆ ಯೋಗ್ಯರು, ಎಂದು ವಿಧಾನ ತೋರಿಸಿದನು. ಜ್ಞಾನಕ್ಕೆ, ಧ್ಯಾನಕ್ಕೆ ದಕ್ಷರೆಂದು ನಾನು ಅಭಿಧಾನ ತೋರಿಸಿದ್ದೇನೆ ಒಪ್ಪಿಕೊಳ್ಳಿ.''

''ಇವರು ಉತ್ತಮರು, ಅದನ್ನು ತಿಳಿದು ಉತ್ತಮವಾದ ಹೆಸರನ್ನಿತ್ತುದು ಉತ್ತಮೋತ್ತಮವಾದುದು'' ಎಂದು ಬಳಿಯಲ್ಲಿದ್ದ ಸಭರೂ, ಮಂತ್ರಿಗಳೂ ಕೈಯೆತ್ತಿ ನೃಪನನ್ನು ಕೀರ್ತಿಸಿದರು.

ಹೆಸರನ್ನು ಮಾತ್ರ ಕೊಟ್ಟು ಬರಿದೆ ಬೀಳ್ಕೊಟ್ಟರೆ ಚಕ್ರೇಶ್ವರನು ಗ್ರಾಮೀಣ ರಾಜನೆನಿಸುವನು. ಆದ್ದರಿಂದ ಸುವರ್ಣ ವಸ್ತ್ರಾಭರಣಗಳನ್ನೂ ಗ್ರಾಮ, ಗಜ, ಗೋವುಗಳನ್ನೂ ದಾನವಿತ್ತನು. ಅವರು ತಣಿದು ಹೋದರು. ಅನ್ನ ಮೊದಲಾದ ನಾಲ್ಕು ದಾನಗಳು ತಾಪಸಿಗೆ ಸಲ್ಲುವುವು. ಹೊನ್ನು ಮೊದಲಾದ ಹತ್ತು ಹದಿನಾಲ್ಕು ದಾನಗಳು ವ್ಯುತ್ಪನ್ನ ವಿಪ್ರರಿಗೆ ಸಲ್ಲುವುದು'' ಎಂದು ಹೇಳಿದನು. ಈ ರೀತಿಯಲ್ಲಿ ಸತ್ಕಾರ ಮಾಡಿದ ಮೇಲೆ, ಆತ್ಮಾನುಭವಿಗಳು ಎಂಬ ಉತ್ಕಂಠತೆಯಿಂದ ರಾಜೇಂದ್ರನು ಆ ಸತ್ಕುಲಾಢ್ಯರನ್ನು ಅಪ್ಪಿಕೊಂಡು, ತನ್ನ ಚಿತ್ಕಳಾರ್ಥವನ್ನು ಹತ್ತಿಸುವಂತೆ ಮನ್ನಿಸಿದನು. ಹಮ್ಮಿನ ವ್ಯಂತರರನ್ನೂ, ನಮಸ್ಕಾರ ಮಾಡುವ ಬ್ರಹ್ಮರಸಿಕರನ್ನೂ ಅಪ್ಪಿದಾಗ ಅವರೆಲ್ಲರೂ ತಮ್ಮ ಜನ್ಮವೇ ಜನ್ಮವೆಂದು, ಬೆರಳ ದರ್ಭೆಯು ಬಿಮ್ಮನೆ ಬಿಗಿಯುವಂತೆ ಉಬ್ಬಿದರು. ಕೂಡಲೇ ತುಷ್ಟಿಗೊಂಡ ಅವರು ಹೀಗೆ ಹೇಳಿದರು :

''ಎಲೆ ದೇವ, ನೀನಿಂದು ನಮ್ಮನ್ನು ಸೃಷ್ಟಿಸಿದೆ. ಅಂದು ಜಿನನು ಸೃಷ್ಟಿಸಿರುವುದು ಮೂರು ವರ್ಣಕ್ಕಿರಲಿ, ನಾವು ನಿನ್ನ ಸೃಷ್ಟಿ.''

''ಆ ಮಾತು ಬೇಡ. ಸ್ವಾಮಿಯೆ ಸೃಷ್ಟಿಕರ್ತಾರ. ಹೆಸರು ಮಾತ್ರ ನನ್ನದು.''

''ಸ್ವಾಮಿಯ ಮುಂದೆ ನಾವಿದನ್ನು ಸಲ್ಲಿಸುವೆವು'' ಎಂದು ಬ್ರಾಹ್ಮಣರು ಆಮೋದಪಟ್ಟರು.

ಪ್ರೇಮದ ವಾಕ್ಯಗಳಲ್ಲಿ ಇದ್ದ ಎಲ್ಲರನ್ನೂ ಬೀಳ್ಕೊಟ್ಟು ಭೂಮೀಶನು ಅರಮನೆಗೆ ಹೋದನು.

ಎಲ್ಲರೂ ಕ್ಷೇಮದಲ್ಲಿದ್ದರು.

೮

# ಷೋಡಶ ಸ್ವಪ್ನ

ದ್ವಿಜರಿಗೆ ಬ್ರಾಹ್ಮಣ ಹೆಸರಿತ್ತ ದಿನ ರಾತ್ರಿಯ ಕಡೆಯಲ್ಲಿ ಭರತೇಶ್ವರನು ನಿಜವನ್ನು ಕೆಟ್ಟು, ಷೋಡಶ ಸ್ವಪ್ನವನ್ನು ಕಂಡನು. ಅಷ್ಟರಲ್ಲಿ ಸೂರ್ಯನು ಮೂಡಲಲ್ಲಿ ಮೂಡಿದನು. ಚಕ್ರಿಯು ವಿನಯದಿಂದ ಬ್ರಾಹ್ಮಣರನ್ನು ಬರಿಸಿ, ತಾನು ಕಂಡ ಕನಸನ್ನು ತಿಳಿಸಿ, ಅದರ ಫಲವನ್ನು ಜಿನನಲ್ಲಿ ಕೇಳುವೆನೆಂದು ಕೈಲಾಸಗಿರಿಗೆ ಪಯಣ ಮಾಡುವೆನೆಂದನು.

''ನಾವು ಅರುಹನನ್ನು ಕಂಡು ಬಹಳ ದಿನಗಳಾದುವು. ದೇವರ ಕೂಡೆ ನಾವೂ ಬರುವೆವು'' ಎಂದು ಬ್ರಾಹ್ಮಣರು ಹೇಳಿದಾಗ, ಭರತಚಕ್ರವರ್ತಿಯು ಸುರರನ್ನು ಕೂಡಿಕೊಂಡು, ದೇವೇಂದ್ರನು ಹೋಗುವಂತೆ ಭೂಸುರರಾದ ಬ್ರಾಹ್ಮಣರನ್ನು ಕೂಡಿಕೊಂಡು, ಕೈಲಾಸಗಿರಿಗೆ ಸಾಗಿದನು. ಆಕಾಶಮಾರ್ಗದಲ್ಲಿ ಅವರು ಸಾಗಿ ಬಂದು, ಜಿನಸಭೆಯೆಂಬೊಂದು ತಾವರೆಯ ಕೊಳವನ್ನು ತುಂಬಿಗಳು ಹೊಗುವಂತೆ ಹೊಕ್ಕು, ಬ್ರಾಹ್ಮಣರ ಸಮೂಹದೊಂದಿಗೆ ಜಿನನನ್ನು ಕಂಡನು. ಆಗ ಅವರ ಕಣ್ಣುಗಳಿಂದ ಭಕ್ತಿಯ ಬಾಷ್ಪವಿಳಿಯಿತು. ದೇಹವೊಂದಿಷ್ಟು ಕಂಪಿಸಿತು. ಪುಳಕಿತವಾಯಿತು. ಚಕ್ರವರ್ತಿಯೂ, ದ್ವಿಜರೂ ಪುಷ್ಪ ಮಾಲೆಗಳನ್ನು ಜಿನನಿಗರ್ಪಿಸಿದರು. ಅವರೊಂದಿಗೆ ಅಮಲವಾದ ವಾಕ್ ಪುಷ್ಪ ಮಾಲೆಯನ್ನೂ ಅರ್ಪಿಸಿದರು.

''ಜಯ ಜಯ, ಸರ್ವಜ್ಞ, ಶಾಂತ, ಸರ್ವೇಶ, ಚಿನ್ಮಯ, ಸದಾನಂದ ತೀರ್ಥೇಶ, ಭಯಹರ, ಶರಣಾಗು, ಸಲಹು'' ಎಂದು ಬ್ರಾಹ್ಮಣ ಸಮೂಹದೊಂದಿಗೆ ಚಕ್ರಿಯು ಸಾಷ್ಟಾಂಗವೆರಗಿದನು. ವಿಪ್ರರೊಡಗೂಡಿ ಅರುಹನ ಪೂಜೆಯನ್ನು ಮಾಡಿದನು. ಅದರಿಂದ ದಿಕ್ಕೆಲ್ಲ ಜಯ ಜಯ ಘೋಷದಿಂದ ತುಂಬಿಹೋಯಿತು. ಅನಂತರ ಸಾರ್ವಭೌಮನು ಮುನಿಗಳಿಗೆರಗಿ, ಬ್ರಾಹ್ಮಣರನ್ನೂ ಕೂಡಿಕೊಂಡು ಕುಳಿತನು.

''ಜಿನ, ನಿನ್ನ ಸೃಷ್ಟಿಯ ದ್ವಿಜರಿಗೆ ಬ್ರಾಹ್ಮಣ ಹೆಸರಿತ್ತೆನು. ಒಪ್ಪು'' ಎಂದು ಚಕ್ರಿಯು ಕೈ ಮುಗಿದನು.

''ಇಂದು ನಾವು ಒಪ್ಪುವುದೇನಾಶ್ಚರ್ಯ. ಅವರಿಗೆ ಆ ಹೆಸರು ನಿನ್ನಿಂದ ಬರುವುದೆಂದು ಅಂದೇ ನಾವು ಕಂಡಿದ್ದೆವು. ಆ ಹೆಸರು ಅವರಿಗೆ ಇರಲಿ'' ಎಂದು ದಿವ್ಯ ವಾಣೀಶನು ಹೇಳಿದನು.

''ಆತ್ಮಾನುಭವಿಯಿಂದ ನಿಜವಾದ ಆತ್ಮಾನುಚರಿತರಾದವರಿಗೆ ಬ್ರಾಹ್ಮಣನಾಮವು ಆಗುವುದು. ಹಾಗೆ ಆಗುವುದು ಆತ್ಮನ ಶುಭನಾಮದ ಉದಯ'' ಎಂದು ಪರಮಾತ್ಮನು ತನ್ನ ನಿರೂಪವನ್ನು ಸಾರಿದನು.

''ಪರಮ, ನೀನಿಂದು ನಮ್ಮನ್ನು ಸೃಷ್ಟಿಸಿದೆ, ನಿನ್ನ ಮಗನು ನಮಗೆ ಹೊಳೆಯುವ ಹೆಸರನ್ನಿತ್ತು ಮನ್ನಿಸಲು ನಮ್ಮ ವಿದ್ಯೆಯು ಸೋತು ಹೋಯಿತು. ನಾವು ಚಕ್ರಿಯ ಸೃಷ್ಟಿಯಾದೆವು'' ಎಂದು ಬ್ರಾಹ್ಮಣರು ನುಡಿದರು. ಆದರೆ ಚಕ್ರಿಯು ಆ ಮಾತನ್ನು ಬೇಡವೇ ಬೇಡವೆಂದನು.

''ಇಲ್ಲವೆನ್ನುವುದೇಕೆ? ಒಪ್ಪು, ಭವ್ಯ, ನಿನ್ನಲ್ಲಿ ವಿಪ್ರರಿಗೆ ಮಹಾ ಪ್ರೀತಿಯಿದೆ. ಇವರ ಸೊಲ್ಲಿಂದು ವಿನೋದವಾಗಿದೆ. ಕಾಲಾಂತರದಲ್ಲಿ ಅದು ಮೆರೆಯುವುದು.'' ಎಂದು ಅರುಹನು ಚಕ್ರಿಯನ್ನು ಸಂತೈಸಿದನು.

''ಜೈನಧರ್ಮವು ಜೈನಗೋಷ್ಠಿಯಲ್ಲಿ ಕ್ಷೀಣವಾಗಿ ಕಡೆಗಾಲದಲ್ಲಿ ಅದು ಸರ್ವರಲ್ಲೂ ಮೆರೆಯದು. ಇದರಿಂದ ದ್ವಿಜರು ಚಕ್ರಿಯ ಸೃಷ್ಟಿಯೆಂದು ಸಂಗಡಿಸುವುದರಿಂದ ಕದನವೇ ನಡೆಯುವದು. ಇಂದಿನವರಿಗೆ ಇದು ವಿನೋದವಾಗಿರುವುದು. ಆದರೆ ಮುಂದಿನವರು ಮಾತ್ರ ಸತ್ಯವೆನ್ನುವರು. ಮುಂದಾದ ವರ್ಣವನ್ನು ಹಿಂದಾದುದೆಂದರೆ ಕರ್ಮಿಗಳು ಕೈಕೊಂಡು ನಿಂದಿಸಿಕೊಳ್ಳದಿರುವರೆ? ಶೂದ್ರ, ಕ್ಷತ್ರಿಯ, ವೈಶ್ಯರಾದ ಬಳಿಕ ವಿಪ್ರಮುದ್ರೆಯಾಯಿತೆಂದರೆ ಅದನ್ನು ಕೇಳಿದರೆ, ರೌದ್ರ ಹುಟ್ಟಲಾರದೆ? ಆಗ ವಿಪ್ರರು ಜಿನ ಧರ್ಮವು ಶೂದ್ರೀಯವೆನ್ನುವರು. ವಿಪ್ರರು ಈ ಧರ್ಮವನ್ನು ಬಿಡುವರು, ಯಜ್ಞವನ್ನು ನಡೆಸುವರು. ಅದರಲ್ಲಿ ನಡುವೆ ಹಿಂಸೆಯುಂಟಾಗುವುದು. ಅದನ್ನವರು ಸ್ವೀಕರಿಸಿದಾಗ ಜೈನರು ದೂರುವರು. ಜೈನರ ದಶದಾನಗಳನ್ನು ಚತುರ್ದಶದಾನ ಧರರಾದ ಬ್ರಾಹ್ಮಣರು ಸಲ್ಲದೆಂದು ಸಾರುವರು. ಅವರಲ್ಲಿ ಕುಶಲವೇ ಕೆಟ್ಟುಹೋಗಿ, ಆನೆಯು ಅಟ್ಟಿದರೂ ಜಿನಾಲಯವನ್ನು ರಕ್ಷಣೆಗಾಗಿ ಪ್ರವೇಶಿಸಬಾರದೆಂದು ಹೇಳಬಹುದು. ದ್ವಿಜರನ್ನು ಜೈನರು ನಿಂದಿಸುವರು. ಅವರು ಪರಸ್ಪರರು ನೋಯಿಸಿ ಕೊಳ್ಳುವರು. ಅಂತ್ಯದಲ್ಲಿ ಗಜಬಜೆಯಾಗಿ ಜಿನಮತವು ನಷ್ಟವಾಗುವುದು. ದ್ವಿಜ ಧರ್ಮಕ್ಕೆ ನಷ್ಟವಿಲ್ಲ'' ಎಂದು ಅರುಹನು ಭವಿಷ್ಯದತ್ತದೃಷ್ಟಿಬೀರಿ ನುಡಿದನು.

''ಸೃಷ್ಟಿಗೆ ದೇವರಲ್ಲದೆ ನಾನು ಕರ್ತನೆ? ಇದನ್ನೂ ನೋಡಲಾರರೆ?'' ಎಂದು ಚಕ್ರಿಯು ಕೇಳಿದನು.

''ಅಷ್ಟು ವಿವೇಕ ಮುಂದೆಲ್ಲರಿಗೆ ಇಲ್ಲ, ಇನ್ನು ದಿನದಿಂದ ದಿನಕ್ಕೆ ನಷ್ಟವಾಗುವುದು. ನಾಟಕಶಾಲೆ ಮಹಾನವಮಿಗಳ ಉದ್ಘಾಟನೆ ಮಾಡಿದಾಗ ನನ್ನನ್ನು ಮನುವೆಂದು ಕರೆಯುವರು. ಬೇರೆ ವರ್ಣಸಂಕೂಟವನ್ನು ಕಲ್ಪಿಸುವಾಗ ಉತ್ತಮ ಬ್ರಹ್ಮನೆನ್ನುವರೆ?''

''ಸ್ವಾಮಿಯಿದ್ದಂತೆ ನಾನೊಂದನ್ನು ಸೃಷ್ಟಿಸುವಾಗ ಸ್ವಾಮಿಯನ್ನು ಮೀರಿದೆನಷ್ಟೆ! ಆದರೆ ಆ ಮರ್ತ್ಯರೇ ಹಾಗೇಕೆ ನೆನೆಯಬೇಕು?''

''ಅವರು ನ್ಯಾಯಸೀಮೆಯನ್ನೇ ಅರಿಯರು. ಕಡೆಯಲ್ಲಿ ದ್ವಿಜರಾದರು ಎಂದರೆ; ನೀನು ಮೊದಲು ಪಡೆದ ಕ್ಷತ್ರಿಯವಂಶದ ಜನರಿಗೆ ಷೋಡಶ ಕರ್ಮವನ್ನು ನಡೆಸಿದವರಾರೆಂಬ ಪ್ರಶ್ನೆ ಬರುವುದಿಲ್ಲವೇ? ಆಹಾ! ಕಡುಹೆಡ್ಡರಷ್ಟೆ! ಜಾತಕರ್ಮವನ್ನೂ, ನಾಮಕರ್ಮವನ್ನೂ, ಯಜ್ಞೋಪವೀತಾದಿಗಳನ್ನೂ ವಿಪ್ರರು ಮಾಡದಿದ್ದರೆ ಜಾತಿಕ್ಷತ್ರಿ

ಯರೂ, ವೈಶ್ಯರೂ ಎಂತಾದಿರಿ? ಹಾ! ಈ ರೀತಿಯಾದರೂ ಕಾಣಿಸುವುದಿಲ್ಲವೆ? ಆಗಲಿ. ಒಬ್ಬೊಬ್ಬರ ಮನೆಗೆ ಒಬ್ಬೊಬ್ಬರು ತಾವೇ ಹೋಗಿ, ಕರ್ಮವನ್ನು ಮಾಡುವ ನೆನಪೋ? ಆ ಗುಣವು ನಮ್ಮಲ್ಲಿ ಮೊದಲೇ ನಿಂತಿರುವಾಗ, ಈಗ ದ್ವಿಜರನ್ನು ನಾನೇಕೆ ನಿರ್ಮಿಸಬೇಕು? ಬೆರಳಿಗೆ ದರ್ಭೆಯನ್ನು ಸುತ್ತಿ, ಹೋಮವನ್ನು ಮಾಡಿ, ಪರರ ದಕ್ಷಿಣೆಗೆ ಕೈಯೊಡ್ಡಿದ ಮೇಲೆ ಕ್ಷತ್ರಿಯರು ಕರವಾಳ ಹಿಡಿವರೇ? ವೈಶ್ಯರು ಹರದುಗೈವರೇ? ಇದು ಹಾಸ್ಯವಾಗಿದೆ. ಕ್ಷತ್ರಿಯರೂ, ವೈಶ್ಯರೂ ದಾತೃಗಳಲ್ಲದೆ, ಪಾತ್ರಗಳಲ್ಲ. ಈ ದ್ವಿಜರು ದಾತೃಗಳೂ ಅಹುದು, ಪಾತ್ರಗಳೂ ಅಹುದು. ಅದರ ಸೂತ್ರ ಕಾಣಿಸುವುದಿಲ್ಲವೆ?'' ಎಂದರು ಒಂದಿಷ್ಟು ಕಾಲ ಮೌನವಿದ್ದ ಸ್ವಾಮಿ.

''ಸಾಕು ಆ ಮಾತು ನಿಲ್ಲಲಿ. ಹದಿನಾರು ಕನಸಿನ ಫಲವನ್ನು ನಿರೂಪಿಸಿ'' ಎಂದು ಭರತೇಶನು ತಲೆಯನ್ನು ತಗ್ಗಿಸಿ ನುಡಿದನು. ಸ್ವಾಮಿಯು ಅದನ್ನು ತಿಳಿಸಿದರು. ಅವರ ಪ್ರಶ್ನೋತ್ತರಗಳು ಹೀಗೆ ಸಾಗಿದುವು :

''ಒಂದೊಂದು ಸಿಂಹದ ಕೂಡೆ, ಹಲವು ಸಿಂಹಗಳು ಸಂದಣಿಸಿ ಹೋಗುತ್ತಿದ್ದುವು. ಹೀಗೆ ಚೆಂದದಿಂದ ಇಪ್ಪತ್ತಮೂರು ಅಧಿಕ ಸಿಂಹಗಳನ್ನು ಕಂಡೆನು. ಅದರಿಂದ ಮುಂದಾಗುವ ಫಲವೇನು?''

''ನಾವು ಮುಂತಾಗಿ ಇಪ್ಪತ್ತಮೂರು ತೀರ್ಥಂಕರರ ಕಾಲದಲ್ಲಿ ಕುಮತವು ಜೀವರಲ್ಲಿ ಹುಟ್ಟಿದರೂ ಬೆಳೆಯಲಾರದು. ಜಿನಧರ್ಮದ ಧಾವಲ್ಯವಿರುವುದು.''

''ಕಡೆಗೊಂದು ಸಿಂಹದೊಡನೆ ಬಹಳ ಮೃಗಗಳು ನಡೆಯದೆ ಸಿಡಿದು ಹೋಗುವುದನ್ನು ಕಂಡೆನು.''

''ಕಡೆಯ ತೀರ್ಥೇಶನ ಕಾಲದಲ್ಲಿ ಕುಮತದ ಪಡೆಯು ಏಳುವುದೆಂದು ಅದರ ಫಲ.''

''ನಟ್ಟನಡುವೆ ಒಣಗಿಹೋಗಿ, ಕಡೆಯಲ್ಲಿ ನೀರು ನಿಂತಿರುವ ಸರೋವರವನ್ನು ಕಂಡೆನು.''

''ಕಲಿಕಾಲದಲ್ಲಿ ಜಿನಧರ್ಮವು ನಡುನಾಡಿನಲ್ಲಿರದೆ. ಅಂತ್ಯದಲ್ಲಿ ನಿಲ್ಲುವುದು.''

''ಮಂಗವು ಆನೆಯನ್ನೇರಿ ಬರುತ್ತಿರುವ ಒಂದು ಕಷ್ಟಾನುಗತಿಯನ್ನು ಕಂಡೆನು.''

''ಮಾನಿತರಾದ ಕ್ಷತ್ರಿಯರು ಕುಲಗೆಟ್ಟು, ಕಡೆಯಲ್ಲಿ ಹೀನರಾದವರೆ ರಾಜರಾಗುವುದು ಅದರ ಫಲ.''

''ಗೋವು ಎಳೆಮೇವನ್ನು ಬಿಟ್ಟು, ಪ್ರೀತಿಯಿಂದ ಒಣಗಿದ ತರಗೆಲೆಯನ್ನು ಬಾಯಿ ಹಾಕಿ ಮೇವುದನ್ನು ಕಂಡೆನು.''

''ಜಾತಿವರ್ತನೆಯ ಸ್ತ್ರೀಪುರುಷರು ಪರಸ್ಪರರನ್ನು ಒಲ್ಲದೆ ವಿಪರೀತ ವೃತ್ತಿಗೆ ಸಲ್ಲುವರು.''

''ಎಲೆಯುದುರಿದ ತರುಗಳನ್ನು ಕಂಡೆನು.''

''ಕಲಿಕಾಲದಲ್ಲಿ ಮೈಸಿರಿಯನ್ನೂ, ನಾಚಿಕೆಯನ್ನೂ ಕೆಟ್ಟು ಮನುಷ್ಯರು ಸುಳಿಯುವರು.''

''ಭೂಮಿಯಲ್ಲಿ ಎಲ್ಲಿ ನೋಡಿದರೂ ತರಗೆಲೆಯೇ ಹಬ್ಬಿರುವುದನ್ನು ಕಂಡೆನು.''

''ಉಪಭೋಗಕ್ಕೂ ಪರಿಭೋಗಕ್ಕೂ ರಸಹೀನ ವಸ್ತುಗಳ ಸಮೂಹವೇ ಅಂದಿಗೆ ಸಲ್ಲುವುದು.

''ಮರಳು ಸಿಂಗರಿಸಿಕೊಂಡು ಬರುವುದನ್ನು ಕಂಡೆನು.''

''ಸುಂದರ ನಾಮಗಳನ್ನು ಬಿಟ್ಟು, ನರರು ಅರ್ಥವಿಲ್ಲದ ಎತ್ತರತತ್ತರ ಹೆಸರುಗಳನ್ನು ಧರಿಸುವರು.''

''ಶ್ವಾನವು ಬಂಗಾರದ ಹರಿವಾಣದಲ್ಲಿ ಪಾಯಸ ತಿನ್ನುವುದನ್ನು ನಾನು ಕಂಡೆನು.''

''ಕಡೆಯ ಕಾಲದಲ್ಲಿ ಡಂಬಿಕರೂ, ಬಿನಗರೂ ಪೂಜೆಗೊಂಡು ಒಳ್ಳೆಯದನ್ನೇ ಉಣ್ಣುವರು.''

''ಕಾಗೆ ಗೂಗೆಗಳ ಹಿಂಡು ರಾಜಹಂಸವನ್ನು ಹಿರಿದಾಗಿ ಬಾಧಿಸುತ್ತಿರುವುದನ್ನು ನೋಡಿದೆನು.''

''ಹಂಸಯೋಗವನ್ನೂ ಹಂಸಯೋಗಿಯನ್ನೂ ರಾಗರೋಷಿಗಳು ಮುಂದೆ ನಿಂದಿಸುವರು.''

''ಆನೆ ಹೊರುವ ಅಂಬಾರಿಯನ್ನು ವಿಧಿವಶದಿಂದ ಹತ್ತಿರದ ಕುದುರೆಯು ಹೊತ್ತುಕೊಂಡು ಹೋಯಿತು.

''ಉತ್ತಮರಾದವರು ಧರಿಸುವಂಥ ಜೈನಧರ್ಮವನ್ನು ಕಡೆಗೆ ಅಧಮರಾದವರೇ ಧರಿಸುವರು.''

''ಚಿಕ್ಕದಾದೊಂದು ಬಸವ ಹಿಂಡನ್ನು ಬಿಟ್ಟು ಗುಟರಿಕ್ಕುತ್ತ ಹೋಗುವುದನ್ನು ಕಂಡೆನು.''

''ಚಿಕ್ಕಂದಿನಲ್ಲೆ ದೀಕ್ಷೆ ಪಡೆಯುವವರು ಹೆಚ್ಚಾಗುವರು. ಪ್ರಾಯಮೀರಿದ ಮೇಲೆ ದೀಕ್ಷೆಗೊಳ್ಳುವವರು ಕಡಿಮೆಯಾಗುವರು.''

''ಭೂಮಿಯಲ್ಲಿ ಎರಡೆತ್ತುಗಳು ಒಂದಾಗಿ ಚಲಿಸುತ್ತಿರುವುದನ್ನು ಕಂಡೆನು.''

''ತಾಪಸರಾದವರು ಗಿರಿ, ವನ, ಗುಹೆಗಳಲ್ಲಿ ಒಬ್ಬೊಬ್ಬರಾಗಿರದೆ ಗೋಷ್ಠಿಯಲ್ಲಿ ಬೆರೆತುಕೊಂಡಿರುವರು.''

''ಹೊರಸೂಸಿ ಹಬ್ಬುತ್ತಿರುವ ಪ್ರಭೆಯಿದ್ದ ರತ್ನರಾಶಿಗೆ ಧೂಳು ಮುಸುಕಿಕೊಂಡಿರುವುದನ್ನು ಕಂಡೆನು, ಸ್ವಾಮಿ.''

''ರಸ, ಬುದ್ಧಿಬಲ ಮೊದಲಾದ ಋದ್ಧಿಗಳು ಅಂದು ಹೆಚ್ಚಾಗುವಂತೆ ಉಂಟಾಗಲಾರವು.''

''ಧವಳ ಪ್ರಕಾಶದ ಚಂದ್ರನಿಗೆ ಪರಿವೇಶ ಕವಿದಿರುವುದನ್ನು ಕಂಡೆನು.''

''ಮುಂದಿನ ಮುನಿಗಳಿಗೆ ಅವಧಿ ವಿಜ್ಞಾನವೂ ಚೇತೋಜ್ಞಾನವೂ ಸಂಭವಿಸಲಾರವು.''

''ದೇವರ ದೇವನೆ ಚಿತ್ತೈಸು, ಸೂರ್ಯನಿಗೆ ಮುಗಿಲು ಆವರಿಸಿರುವುದನ್ನು ಕಂಡೆನು.''

''ಕಲಿಕಾಲದಲ್ಲಿ ಕೈವಲ್ಯ ಬೋಧವು ಸಿದ್ಧಿಸಲಾರದು. ಭವ್ಯನೇ ಇದನ್ನು ಭಾವಿಸಿಕೊಂಡಿರು. ಆ ಉಗ್ರವಾದ ಕಲಿಯುಗವು ಇಪ್ಪತ್ತೊಂದು ಸಾವಿರ ವರ್ಷ. ಮುಂದೆ ಯಾವ ಧರ್ಮದ ಸೋಂಕೂ ಸುಳಿಯದೆ ಇಪ್ಪತ್ತೊಂದು ಸಾವಿರ ವರ್ಷ ಸಾಗುವುದು. ಮತ್ತೆ ಪ್ರಳಯವಾಗುವುದು. ಪ್ರಳಯಾ ನಂತರ ಧರ್ಮಕರ್ಮಗಳೆಲ್ಲ ಮೊಳೆಯುತ್ತವೆ. ಅವು ಬೆಳೆದು ಮತ್ತೆ ಅಂತ್ಯದಲ್ಲಿ ಕೆಡುತ್ತ, ಕೂಗಾಡುತ್ತ ಸುಳಿಯುತ್ತಿರುವುದು.''

''ಮುಂದಿನ ಜನಗಳಿಗಿವು ದುಃಸ್ವಪ್ನಗಳಾಗಿವೆ. ನಿಮ್ಮನ್ನು ಕಂಡುದರಿಂದ ನನಗಿವು ಸುಸ್ವಪ್ನಗಳೇ'' ಎಂದು ಭರತೇಶನು ಭಕ್ತಿಯಿಂದ ಭವಾಂತಕನಾದ ಅರುಹನನ್ನು ''ಅಸ್ವಪ್ನವತಿವಂದ್ಯ, ಜಯ ಜಯ ಪುರ'' ಎಂದು ಸುಸ್ವರದಿಂದ ಕೊಂಡಾಡಿದನು.

''ಸ್ವಾಮಿ, ಇನ್ನೊಂದು ಬಯಕೆಯುಂಟು. ನೀನಿರುವ ಈ ಪರ್ವತದಲ್ಲಿ ಮೊದಲಿದ್ದ ಜಿನಾಲಯಗಳನ್ನು ರಚಿಸುತ್ತೇನೆ. ಇದನ್ನು ನೀನು ಒಪ್ಪಿ ಒಪ್ಪಿಕೊಳ್ಳಬೇಕು'' ಎಂದು ಭರತೇಶ್ವರನು ಬೇಡಿಕೊಂಡನು. ''ನರ, ಉರಗ ಆಮರವಂದ್ಯ, ಜಯ ಜಯ'' ಎಂದು ಹೇಳುತ್ತಿರುವ ಬ್ರಾಹ್ಮಣರೊಡನೆ ಭರತೇಶನು ಜಿನದೇವನಿಗೆರಗಿ, ಮತ್ತೆ ಅಲ್ಲಿದ್ದ ತಾಪಸರಿಗೆ ಮಣಿದು, ಜಿನಸಭೆಯಿಂದ ಸಂತೋಷದಲ್ಲಿ ಎದ್ದನು.

ಪುರುದೇವನು ಮೇಲಿದ್ದ ಜಿನಸಭೆಯಿಂದ ಇಳಿದು ಕೆಳಗಿರುವ ಪರ್ವತದಲ್ಲಿ ನಿಂತು, ''ರಾಜೇಂದ್ರಾ, ಲಲಿತವಾದ ಜಿನ ಗೃಹಗಳನ್ನು ಇಲ್ಲಿ ರಚಿಸು'' ಎಂದು ಸಾಲುಸಾಲಾಗಿ ಸ್ಥಳವನ್ನು ಭರತೇಶನಿಗೆ ತೋರಿಸಿದನು. ''ಅದಕ್ಕಾಗಿ ತತ್ತರಿಸಬೇಡ, ಒಪ್ಪಾಗಿ ಒಯ್ಯನೇ ಎಪ್ಪತ್ತೆರಡು ಜಿನಾಲಯಗಳನ್ನು ನಿರ್ಮಿಸು. ಆಮೇಲೆ ನಾನು ಬಂದು ಪ್ರತಿಷ್ಠೆಯ ಕಾರ್ಯವೆಸಗುವೆನು'' ಎಂದು ನೇಮಿಸಿದನು.

ಆ ವೇಳೆಗೆ ಸರಿಯಾಗಿ, ತೇಜೋರಾಶಿಯೆಂಬ ಆತ್ಮಭಾವಕ ಮುನಿಯು ಭಿಕ್ಷೆಗೆಂದು ಭೂಮಿಗೆ ಹೋದವನು, ಬರುತ್ತಿದ್ದು ಆ ಪರ್ವತದಲ್ಲೇ ಭರತೇಶನನ್ನು ಸಂಧಿಸಿದನು. ಅವನೊಬ್ಬ ಗಣಧರನಾಗಿದ್ದನು. ಚೇತೋಜ್ಞಾನ ಸಂಪನ್ನನೂ, ಅಣಿಮಾದಿ ಸಿದ್ಧಿಯಿಂದ ಕಾಂತಿಮಯನೂ ಆಗಿದ್ದನು. ನೃಪ ವಿಪ್ರಸಮೂಹದೊಂದಿಗೆ ಆ ಮುನಿಗೆ ನಮಸ್ಕರಿಸಿದನು. ಕಾರಣಯೋಗಿಯು ಅವರನ್ನು ಒಲಿದು ಹರಸಿದನು.

''ಅರಸನೆ, ನೀನಿಲ್ಲಿ ನೂತನವಾದ ವಸತಿಗಳನ್ನು ಸಿಂಗರಿಸುವುದು ಉತ್ತಮವಾಗಿದೆ. ಇನ್ನೊಂದು ಪರಹಿತವನ್ನೂ ನೀನು ಮಾಡಬೇಕು.''

''ಅದು ಯಾವುದೆಂದು ಸೂಚಿಸಿ ಗುರುಗಳೆ, ನಾನದನ್ನು ಮಾಡುತ್ತೇನೆ.''

''ಜಿನನನ್ನು ಕಾಣುವ ಆಸೆಯು ನಿನ್ನ ಅರಸಿಯರಿಗುಂಟು. ಅನ್ಯ ಜನರಿರುವುದರಿಂದ ಕಾಣುವುದಕ್ಕೆ ಅನುವಾಗಿಲ್ಲ ಎಂದವರು ತಿಳಿದು, ಒಂದೊಂದು ವ್ರತಗಳನ್ನು ಮನಸ್ಸಿನಲ್ಲೇ ಧರಿಸಿರುವರು. ಎಂದಾದರೂ ಅರುಹನ ಕಂಡ ಮೇಲೆ, ಇನ್ನು ಮುಂದೆ ಇದು ಈ ಜನ್ಮಕ್ಕೆ ಬೇಡವೆಂದು, ಒಂದೊಂದು ರಸವಸ್ತುವನ್ನೂ, ಒಂದೊಂದು ಪರಿಮಳ ವಸ್ತುವನ್ನೂ ಸೌಂದರಿಯರು ತೊರೆದಿರುವರು. ನೀನೂ ಅರಿಯದಂತೆ, ಪರರೂ ಅರಿಯದಂತೆ ಸ್ವಬುದ್ಧಿಯಿಂದಲೇ ಈ ಗೂಢ ವ್ರತವನ್ನು ಮಾನಿನಿಯರು ಮಾಡಿದರೆ ಆ ವ್ರತವು ತನ್ನಿಂದ ತಾನೇ ಸಿದ್ಧಿಸುವುದು. ಈ ಪ್ರತಿಷ್ಠೆಯ ದಿನಕ್ಕೊಂದು ಕೈವಲ್ಯ ಕಲ್ಯಾಣವಾಗಲಿ. ದೇವನ

ಸಭೆಯವರನ್ನು ಅನ್ಯ ಭೂಮಿಗೆ ಹೋದವರನ್ನು ಅವರಿಗೆ ತೋರಿಸು, ಆಗ ಎಲ್ಲರೂ ಹೋಗಿದ್ದುದರಿಂದ ಪುರುದೇವನು ವೃದ್ಧರಾದ ಆರ್ಯರೊಡನೆ ಮಾತ್ರ ಇರುವನು. ಆಗ ಹೆಣ್ಣುಗಳಿಗೆ ಅರುಹನನ್ನು ಕಾಣಿಸು'' ಎಂದವನೇ ಆ ತೇಜೋರಾಶಿಯು ಜಿನಸಭೆಗೆ ನಡೆದನು.

ಭರತೇಶನು ಹೆಣ್ಣುಗಳ ನಡತೆಗೆ ಆನಂದಪಟ್ಟನು. ಮುಂದೆ ಸಂಗಡಿಸುವ ಪ್ರತಿಷ್ಠೆಯಲ್ಲಿ ತಂಗಿಯರನ್ನೂ, ತನುಜೆಯರನ್ನೂ, ಅರಸಿಯರನ್ನೂ ಪರಮನಿಗೆ ಎರಗಿಸುವೆನೆಂದು ಮನಸ್ಸಿನಲ್ಲಿ ನೆನೆದನು. ಅಲ್ಲಿಯೇ ಸುತೆಯರಿಗೂ, ತಂಗಿಯರಿಗೂ ಓಲೆಯನ್ನು ಆ ಕ್ಷಣದಲ್ಲೇ ಕಳುಹಿಸಿದನು. ಅದರಿಂದ ಉಲ್ಲಾಸವುಕ್ಕಲು ಬ್ರಾಹ್ಮಣರೊಂದಿಗೆ ಪುರಕ್ಕೆ ನಡೆದನು.

''ದೇವ ನಿನ್ನ ಅರಸಿಯರೂ, ನೀನೂ, ನಿನ್ನ ಅಣುಗರೂ ಲೋಕದಲ್ಲಿ ಜೀವರನ್ನು ಪಾವನ ಮಾಡಲು ಹುಟ್ಟಿದಿರಿ'' ಎಂದು ಬ್ರಾಹ್ಮಣರೆಲ್ಲರೂ ಭರತೇಶನನ್ನು ಹೊಗಳಿದರು. ''ನಿಮಗೆ ಭೋಗದಲ್ಲಿ ಆಸಕ್ತಿಯಿಲ್ಲ; ಧರ್ಮಯೋಗದಲ್ಲೇ ಆಸಕ್ತಿಯಿರುವುದು. ನಿಮ್ಮನ್ನು ಸಾಗರರೆಂದು ಹೇಳಬಹುದೆ? ನೀವು ಗೃಹತಪೋಭಾಗಿಗಳು. ಪರಮಾತ್ಮ ಜಿನಸಿದ್ಧ, ಭರತ ರಾಜೇಂದ್ರನು ಭೂಮಿಗೆ ಗೃಹಸ್ಥನಲ್ಲ, ವರ ಮೋಕ್ಷ ಮಾರ್ಗಸ್ಥನು'' ಎಂದು ಹೇಳುತ್ತ ಅವರು ಹೋದರು.

ಭರತೇಶನು ಪುರಪ್ರವೇಶ ಮಾಡಿದ ಮೇಲೆ ಆ ಬ್ರಾಹ್ಮಣರನ್ನು ಬೀಳ್ಕೊಟ್ಟನು. ಬಳಿಕ ತನ್ನ ಅರಮನೆ ಸೇರಿದನು. ಹೀಗಿರಲು ರಾಜೇಂದ್ರನು ದುಃಸ್ವಪ್ನ ಕಂಡ ವಾರ್ತೆಯನ್ನು ಕೇಳಿ ಭೂಭುಜರೆಲ್ಲರೂ ಬರುತ್ತಿದ್ದರು. ಇಲ್ಲದವನಿಗೆ ಒಂದು ನೋವಾದರೆ, ಎಡಗಿದ ಕಲ್ಲೆಂದು ಲೋಕದ ಜನ ನೋಡುವುದಿಲ್ಲ, ಬಲ್ಲಿದನು ಒಂದು ಕನಸು ಕಂಡ ಮಾತ್ರಕ್ಕೆ ನಾಡೆಲ್ಲವೂ ಒಂದು ಉಪಚರಿಸಿತು. ಮಾಗಧ, ವರತನು, ಹಿಮವಂತ, ದೇವ ಮುಂತಾಗಿ ವ್ಯಂತರರು; ಖೇಚರರು, ಭೂಚರರು — ಹೀಗೆ ಎಲ್ಲರೂ ಬೇಗಬೇಗನೆ ಪುರಕ್ಕೆ ಬಂದರು. ಕಾಣಿಕೆಗೊಡುವ, ನಿವಾಳಿಯಿಡುವ, ಹೊಸ ಮಾಣಿಕ್ಯಗಳನ್ನು ನಿವಾಳಿಸುವ, ಕೈಮುಗಿದು ಉಪಚಾರ ಮಾಡುವ ಸಾಲು ದಿನದಿನಕ್ಕೆ ಹೆಚ್ಚಾಯಿತು. ಬ್ರಾಹ್ಮಣರಿಗೆ ದಾನ ಕೊಡುವ, ಜಿನಪೂಜೆಯನ್ನು ಧ್ವಜವೆತ್ತಿ ಮಾಡುವ, ಯೋಗಿಗಳನ್ನು ಭಜಿಸುವ ರಾಜೇಂದ್ರನಿಗೆ ಇರಲೆಂದು ರಾಜರು ಉಪಚಾರ ಮಾಡಿದರು. ಕನಸಿನ ದೋಷ ಹೋಗಲಿ ಎಂದು ರಾಜರೆಲ್ಲರೂ ಶಾಂತಿಕವನ್ನು ಅಲ್ಲಲ್ಲಿ ಮಾಡಿದರು. ರಾಜೇಂದ್ರನು ಅವುಗಳನ್ನೆಲ್ಲ ಅಲ್ಲೆನ್ನದೆ, ಆಹುದೆನದೆ, ಒಂದು ಕನಸಿನಂತೆ ಕಾಣುತ್ತಿದ್ದನು. ಸುಕ್ಷೇಮಿಯಾದ ತನಗೆ ಆತ್ಮಯೋಗವೆ ಸರ್ವರಕ್ಷೆಯೆಂದು ಎದೆಯಲ್ಲೇ ಧರಿಸಿರುವನು. ಆ ರಾಜರು ಮಾಡುವ ವಿನಯಕ್ಕೆ ಅಲ್ಲೆನ್ನದೆ ಸಾಕ್ಷಿಮಾತ್ರವಾಗಿ ನೋಡುತ್ತಿದ್ದನು. ತಾವು ತಾವಾಗಿ ಬಂದು, ಎಲ್ಲರೂ ಮಾಡಿದುದನ್ನು ಒಪ್ಪಿಕೊಂಡು, ಅವರೆಲ್ಲ ಒಮ್ಮಡಿ, ಇಮ್ಮಡಿ ಮನ್ನಣೆ ಮಾಡಿ ತೇಜಸ್ಸು ಹೆಚ್ಚುವಂತೆ ಅವರನ್ನೆಲ್ಲ ಕಳುಹಿಸಿದನು.

ಮತ್ತೊಂದು ದಿನ ಮಂತ್ರಿಯು ತನ್ನ ಸೋದರನೊಡನೆ ಬಂದು, ಮೊದಲ ಹಣ್ಣನ್ನು ಕಾಣಿಕೆಯಿತ್ತು ರಾಜೇಂದ್ರನಿಗೆ ಬಿನ್ನವಿಸಿದನು.

''ದೇವಲೋಕದಲ್ಲೂ, ನಾಗಲೋಕದಲ್ಲೂ, ಮರ್ತ್ಯಲೋಕದಲ್ಲೂ ನಿನ್ನಂತಹ ದೊರೆಗಳಿಲ್ಲ. ಅದು ಲೋಕಕ್ಕೆ ತಿಳಿದಿದೆ. ಎರಡು ಗಳಿಗೆಗೆ ಕರ್ಮವನ್ನು ಸುಡುವೆನೆಂದು ಅರುಹಂತನು ಹೇಳಿದುದು ಎಲ್ಲರ ಪ್ರಾರ್ಥನೆಯೇ ಆಗಿದೆ. ರಾಜರಲ್ಲಿ ರಾಜ, ಯೋಗಿಗಳಲ್ಲಿ ಯೋಗಿ, ಸ್ತ್ರೀಜನರಿಗೆ ಇಮ್ಮಡಿ ಮದನ; ಸೂಜಿಯ ಮೊನೆಯಷ್ಟು ಕೊರತೆ ಹೊಂದದಿರುವ ಪ್ರೌಢರಾಜನು ನೀನಲ್ಲದೆ ಬೇರೆ ಇಲ್ಲ, ಕೊಂಡಾಡುತ್ತಿರುವವರಲ್ಲಿ ಒಳಿತನ್ನೇ ಕಂಡು ಸೋಲದಿರುವ ಸುಖಿಗಳು ಯಾರಿದ್ದಾರೆ? ಹಿಂದು ಮಾತಿನ ಜೋಲಿಯೇಕೆ? ನೀನೊಬ್ಬನೆ ಮೂರು ಲೋಕದ ಮಂಡೆಯನ್ನು ತೂಗಿಸಿದೆ. ಸುವಿವೇಕಿಯಾದ ರಾಜನ ಓಲಗವು ಮೊದಲು ವ್ರತಮಾಡಿದವರಿಗೆ ಫಲಿಸುವುದೆಂಬ ಮಾತು ಸುಳ್ಳಾಗುವುದೆ? ನಿನ್ನನ್ನು ಓಲೈಸಿ ಪ್ರತ್ಯಕ್ಷವಾಗಿ ಬ್ರಾಹ್ಮಣ ಸುಖವನ್ನು ಉಂಡೆನು. ನಿನ್ನನ್ನು ನೆನೆದ ಮಾತ್ರಕ್ಕೆ ಕಂಡ ಮಾತ್ರಕ್ಕೆ ಸರ್ವ ಜನರಿಗೂ ಸುಜ್ಞಾನ ಹೆಚ್ಚುವುದು. ಪ್ರಭುವೆ, ನಿನಗೊಬ್ಬ ಮಂತ್ರಿ ಬೇಕಾಗಿದೆಯೆ? ಉಪಚಾರಕ್ಕಾಗಿ ನನ್ನನ್ನು ಮುಖ್ಯ ಮಂತ್ರಿಯನ್ನಾಗಿ ಮಾಡಿ, ನಡೆಸಿಕೊಂಡು ಬಂದಿರುವೆ. ದೇವ ಅಣುಮಾತ್ರದಷ್ಟು ತೇಜಸ್ಸು ಕೂಡ ಕುಂದದಂತೆ, ಸರ್ವಲೋಕ ಮೆಚ್ಚುವಂತೆ ನನ್ನನ್ನು ನಡೆಸಿಕೊಂಡಿರುವೆ. ನಾನು ತೃಪ್ತಿಗೊಂಡಿರುವೆನು ಸ್ವಾಮಿ. ಒಂದನ್ನು ಮಾತ್ರ ಎಣಿಸಿ ಬಂದಿರುವೆನು. ಅದನ್ನು ಮಾತ್ರ ಪರಾಂಬರಿಸು. ಚಿರಕಾಲದಿಂದ ನಾನೀ ಸಂಸಾರಚಕ್ರದಲ್ಲಿ ತಿರುಗಿದೆನು. ಈಗ ಅದು ಹೋಗಲಿ. ನನ್ನ ಹರೆಯವು ಜಾರಿತು, ಮುಪ್ಪು ಮೀರಿತು, ದೇಹವು ಇನ್ನು ಬಹುಕಾಲವಿರಲು ಸಾಧ್ಯವಿಲ್ಲ, ಅದಕ್ಕಾಗಿ ಈ ಕೆಡುವ ದೇಹವನ್ನು ತಪಸ್ಸಿನಲ್ಲಿ ವೆಚ್ಚ ಮಾಡಿ ಕೆಡದಿರುವ ಸಿದ್ಧಿಯನ್ನು ಮಾಡುವೆನು. ನನಗೆ ಬಿಡುಗಡೆ ಕೊಡು'' ಎಂದು ಸಾಷ್ಟಾಂಗ ನಮಸ್ಕಾರ ಮಾಡಿದನು. ಭರತೇಶನ ಎದೆಯು ದಿಗಿಲೆಂದಿತು.

''ಎದ್ದು ಕೇಳು''

''ದೀಕ್ಷೆಗೆ ಹೋಗೆಂದರೆ ಏಳುತ್ತೇನೆ.''

''ಬಿದ್ದ ವೇಳೆಯಲ್ಲಿ ಯಾರಾದರೂ ಹೋಗೆಂದು ಹೇಳುತ್ತಾರೇನು?'' ಎಂದಾಗ ಮಂತ್ರಿಯು ಆ ಕ್ಷಣದಲ್ಲಿ ಎದ್ದನು.

''ಕೊನೆಯಲ್ಲಿ ತಪಸ್ಸು ಮಾಡುವುದು ಜಾಣತನ. ಈಗ ಬೇಡ; ಒಂದಿಷ್ಟು ತಡೆದು ಹೋಗು.''

''ನಡೆ, ನುಡಿ ತಕ್ಕಷ್ಟು ಶಕ್ತಿಯಿದ್ದಲ್ಲಿ ಕರ್ಮವನ್ನು ಕಂಗೆಡಿಸುವೆನು.''

''ನೂತನ ಜಿನಗೃಹಗಳ ಪೂಜೆಯನ್ನು ನೋಡಿ, ದೀಕ್ಷಾತುರನಾಗು; ಈಗ ಸ್ವಲ್ಪ ತಾಳು.''

''ಇನ್ನೂ ಆಶೆ ಯಾಕೆ? ಕಳುಹಿಸಿಬಿಡು'' ಎಂದು ಮಂತ್ರಿಯು ರಾಜೇಂದ್ರನ ಪಾದಗಳಲ್ಲಿ ತಲೆಯಿಟ್ಟನು.

''ನಿನ್ನ ತಂತ್ರವನ್ನು ತಿಳಿದೆನು. ಇಷ್ಟು ದಿನ ನಮಗೆ ನಮಸ್ಕಾರ ಮಾಡಿದೆ. ಇನ್ನು ನೀನೇ ನಮ್ಮನ್ನು ನಮಸ್ಕರಿಸಿಕೊಳ್ಳುತ್ತಿ'' ಎಂದು ಭರತೇಶನು ಕರುಣೆಯಿಂದ ತನ್ನ ಮಂತ್ರಿಯನ್ನೆತ್ತಿ ತಕ್ಕೈಸಿದನು.

''ಕರುಣೆಯಿಂದ ರಕ್ಷಿಸು'' ಎಂದು ತಮ್ಮನನ್ನು ಭರತೇಶನ ಕಾಲಿಗೆರಗಿಸಿ, ತಮ್ಮನನ್ನು ದೊರೆಯ ಕೈಲಿ ಎಡೆಗೊಟ್ಟು, ಕೂಡಲೇ ತನ್ನ ಬೆರಳ ಮುದ್ರಿಕೆಯನ್ನು ಒಪ್ಪಿಸಿದನು. ಅದು ಅನುರಾಗದ ಅಂಕುರವನ್ನೊಪ್ಪಿಸಿದಂತೆ ಭರತೇಶನಿಗೆ ಕಂಬನಿ ಉಕ್ಕಿ ಬಂತು. ಮಿತ್ರರೂ, ತನ್ನ ತಮ್ಮನೂ ಮರುಗುವುದನ್ನು ನೋಡಲಾಗದೆ, ಸುಮ್ಮನೆ ಕೈ ಮುಗಿದು, ಆ ಮಂತ್ರಿಯು ಸಭೆಯಿಂದ ಸುಮ್ಮಾನದಲ್ಲಿ ಹೊರಟುಹೋದನು.

ಭರತ ಚಕ್ರಿಯು ತನ್ನ ದುಃಖವನ್ನು ತಾನೇ ಸಂತೈಸಿಕೊಂಡನು. ''ನಿನ್ನ ಅಣ್ಣನು ಮುಪ್ಪಿನಲ್ಲಿ ತನ್ನ ಆತ್ಮಸಿದ್ಧಿಯನ್ನು ಮಾಡಲಿ'' ಎಂದು ಆ ಬ್ರಾಹ್ಮಣನನ್ನು ಮನ್ನಿಸಿದನು. ''ನಿನ್ನ ಅಣ್ಣನು ಯೋಗಕ್ಕೆ ಹೋದ ಮೇಲೆ ನೀನೇ ನಮಗೆ ಬುದ್ಧಿಸಾಗರನು'' ಎಂದು ಹೋಗುವಾಗ ಇತ್ತ ಮುದ್ರಿಕೆಯನ್ನು ಅವನಿಗೆ ಅನುರಾಗದಿಂದಿತ್ತನು. ಅನಂತರ ಹಿರಿದಾಗಿ ಉಡುಗೊರೆಯಿತ್ತು, ತನ್ನ ಧರೆಯ ಭಾರವಿನ್ನು ಅವನದೆಂದು ತಿಳಿಸಿ, ಮಿತ್ರರನ್ನು ಕರೆದು ಅವರಿಗೆಲ್ಲ ಮನ್ನಣೆಯಿತ್ತು ಕಳುಹಿಸಿಕೊಟ್ಟನು.

ಆ ಮಿತ್ರರು ಹೊಸ ಮಂತ್ರಿಯನ್ನು ವಾದ್ಯಘೋಷದೊಂದಿಗೆ ಬಸದಿಗೊಯ್ದು ಮಾರವಿಜಯನನ್ನು ತೋರಿಸಿ, ಬಳಿಕ ರಾಜನಿದ್ದಲ್ಲಿಗೆ ಕರೆ ತಂದರು.

ನವ ಬುದ್ಧಿಸಾಗರನು ಚಕ್ರವರ್ತಿಗೂ, ಯುವರಾಜನಿಗೂ ಕಾಣಿಕೆಯಿತ್ತನು. ಆಗ ಸಭಾಜನರು ಜಯಕಾರ ಮಾಡಿದರು. ಬುದ್ಧಿಸಾಗರ ಮಂತ್ರಿಯು ತೇಜಸ್ಸಿನಿಂದ ಮಹಾಜನರೊಡನೆ ತನ್ನ ಅರಮನೆಗೆ ತೆರಳಿದನು.

ಭರತೇಶನು ತನ್ನ ಅರಮನೆಯನ್ನು ಸೇರಿ, ಬೋಡಿಯಿಲ್ಲದ ವಿಲಾಸದಲ್ಲಿದ್ದನು.

## ೯

# ಜಿನವಾಸ ನಿರ್ಮಿತ

ಶಿಖರಿಯಲ್ಲಿ ಜಿನಾಲಯಗಳ ನಿರ್ಮಾಣವಾದೊಡನೆ, ಭದ್ರಮುಖನು ಬಂದು ಭರತೇಶನಿಗೆ ಕೈ ಮುಗಿದು, ''ಸುಖದಲ್ಲಿ ಆ ಕೆಲಸವು ಸಂಪೂರ್ಣವಾಯಿತು'' ಎಂದು ಹೇಳಿದಾಗ ಚಕ್ರಿಯು ಅವನಿಗೆ ಎಲ್ಲರೂ ಮೆಚ್ಚುವಂತೆ ಮನ್ನಣೆಯಿತ್ತನು. 'ಸುರಶಿಲ್ಪಿ ತೆಗೆದುಕೊ' ಎಂದು ಯುವರಾಜನು ಕೊಟ್ಟನು. 'ಮಯನೆ ಸ್ವೀಕರಿಸು' ಎಂದು ಸಹೋದರರೆಲ್ಲರೂ ಕೊಟ್ಟರು. 'ವಿಶ್ವಕರ್ಮ, ಬಾ' ಎಂದು ಮಿತ್ರರೂ, ಮಂತ್ರಿಗಳೂ ಮನ್ನಣೆ ಮಾಡಿದರು. ದೊರೆಗಳು, ಅರಸು ಮಕ್ಕಳು ಮೊದಲಾಗಿ ಸರ್ವರೂ ಅವನಿಗೆ ಉಚಿತವನ್ನು ಕೊಟ್ಟರು. ತನಗೆ ಸಿರಿ ಕಡಮೆಯಿಲ್ಲವೆಂದು ಹೇಳಿದರೂ ಸುರಶಿಲ್ಪಿ ಭದ್ರಮುಖನು ತನಗಿತ್ತ ಹೊನ್ನು, ಪಟ್ಟೆ, ಮಾಣಿಕದ ರಾಶಿಯನ್ನು ತೆಗೆದುಕೊಂಡು ಹೋದನು.

ಭರತೇಶ್ವರನು ಪ್ರಗುಣವಾದ ಲಗ್ನವನ್ನು ನಿರ್ಣಯಿಸಿದನು.

''ಮುಖವಸ್ತ್ರವನ್ನು ತೆಗೆಯುವ ದಿನಕ್ಕೆ ಬರುವೆನು. ನೀವೀಗ ಪೂಜೆಯನ್ನು ಮಾಡಿ'' ಎಂದು ಮಂತ್ರಿಗಳಿಗೂ, ಮಿತ್ರರಿಗೂ, ಹಿರಿಯ ಮಗನಿಗೂ ಹೇಳಿ ಅವರನ್ನು ಕಳುಹಿಸಿದನು.

ತನ್ನ ತಂಗಿಯರೂ, ಹೆಮ್ಮಕ್ಕಳೂ ಯಾಕೆ ಬರಲಿಲ್ಲವೆಂದು ಚಕ್ರಿಯು ಯೋಚಿಸುತ್ತಿರುವಾಗಲೇ, ತಂತಮ್ಮ ಪತಿಗಳೊಂದಿಗೆ ಭರತೇಶನ ಕುಮಾರಿಯರೆಲ್ಲರೂ ಬಂದರು. ಅದೊಂದು ಸೊಗಸಿನ ವೈಭವವೇ ಆಯಿತು. ಕನಕಾವಳಿ, ರತ್ನಾವಳಿ, ಮುಕ್ತಾವಳಿ, ಮನುದೇವಿ ಮೊದಲಾದ ತನ್ನ ಮಕ್ಕಳು ಬಂದಿರುವರೆಂದು ಕೇಳಿ, ಚಕ್ರಿಯು ಅರಮನೆಗೆ ಹೋಗಿ ಅವರಿಗೆ ಕಾಣಿಸಿಕೊಂಡನು. ಪುತ್ರಿಯರು ತಮ್ಮ ತಾಯಂದಿರೊಡನೆ ಬಂದು ಕಾಣಿಕೆಯಿಕ್ಕಿ ಕಾಲಿಗೆರಗಿದರು. ಆ ಕ್ಷಣದಲ್ಲಿ ಭರತೇಶನು ಬಹುರೂಪವಾಗಿ, ತನ್ನ ನಂದನೆಯರನ್ನೆಲ್ಲ ಅಪ್ಪಿಕೊಂಡನು. ತೊಡೆಯ ಮೇಲಿಟ್ಟುಕೊಂಡು ಎಲ್ಲರ ತಲೆಯನ್ನೂ ಸವರಿ, ತಡವರಿಸಿ, ನಗುತ್ತ ನೋಡಿದನು.

''ಅಕ್ಕ, ನೀವು ಬಂದುದು ಬೆಡಗಾಯಿತು'' ಎಂದು ಆ ಹೆತ್ತ ತಂದೆಯು ಆರ್ಶಿಪಡುತ್ತಿದ್ದನು.

''ಹೊಕ್ಕ ಮನೆಯವರೊಡನೆ ಓಜೆಯಿಂದ ಬಾಳುವುದು ಮಕ್ಕಳಾಟಿಕೆಯಿಲ್ಲದೆ ಗಂಭೀರವಾಗಿರುವುದು'' ಎಂದು ಹತ್ತಿರದಲ್ಲಿದ್ದ ದಾದಿಯರು ಹೇಳಿದರು. ಅದನ್ನು ಕೇಳಿ

ಸೊಬಗನಾದ ಭರತೇಶನಲ್ಲಿ ಮತ್ತಷ್ಟು ಪ್ರೀತಿ ಹೆಚ್ಚಿತು. ''ಮಕ್ಕಳ ರೀತಿಯನ್ನು ಕೇಳಿರಿ'' ಎಂದು ಅವನು ತನ್ನ ಸತಿಯರಿಗೆ ತಿಳಿಸಿದನು,

''ಅದನ್ನೆಲ್ಲ ಕೇಳಲು ನಾವೆಷ್ಟರವರು? ದೇವರೆ, ಅದನ್ನೆಲ್ಲ ಕೇಳಿ ಲಾಲಿಸಬೇಕು'' ಎಂದು ಅವರು ಹೇಳಿದರು.

''ಅಕ್ಕ, ಬಳಲಿದಿರಿ. ಹೋಗಿ ವಿಶ್ರಮಿಸಿಕೊಳ್ಳಿ'' ಎಂದು ಎಲ್ಲ ಮಕ್ಕಳನ್ನೂ ಅವರವರ ತಾಯಂದಿರೊಡನೆ ಕಳುಹಿಸಿ, ತಾನು ಅಲ್ಲಿಂದ ಎದ್ದು ನಡುವಣ ಚಾವಡಿಗೆ ನಡೆದನು.

ಅಣ್ಣನ ದೀರ್ಘರಾಜ್ಯವನ್ನು ನೋಡುತ್ತ ಎದೆಯಲ್ಲಿ ತಣ್ಣನೆ ಸಂತೋಷಪಡುತ್ತ ಒಡಹುಟ್ಟಿದ ತಂಗಿಯರಿಬ್ಬರೂ ಬಂದು, ಬಣ್ಣದ ಚಾವಡಿಯಲ್ಲಿರುವ ಅಣ್ಣನನ್ನು ಕಂಡರು. ಸೇಸೆಯಿಕ್ಕಿ ನಿಂತಿರುವ ತಂಗಿಯರಿಗೆ ರಾಜೇಂದ್ರನು ಮಂಗಲಾಸನವನ್ನು ತೋರಿಸಿ ಕುಳ್ಳಿರಿಸಿದನು. 'ಬಾ ಗಂಗಾದೇವಿ, ಬಾ, ಸಿಂಧುದೇವಿ, ಕುಳಿತಿರಿ' ಎಂದು ಹೇಳಿದಾಗ ಆ ಸುದತಿಯರಲ್ಲಿ ಕುಳಿತರು.

''ನಿಮ್ಮ ನಾಡು ದೂರವಕ್ಕಾ, ನೀವು ಬಂದುದು ಲೇಸಾಯ್ತು''

''ಅಣ್ಣಾಜಿ, ಇದೇತರ ದೂರ? ವಾರಿನಷ್ಟೇ.''

ಎಂದು ಮಾತು ಮುಂದುವರಿಯುವಾಗಲೇ ದೇವಲೋಕದವರು ಬಂದರೆಂಬ ಮಾತು ಕೇಳಿಸಿತು. ಕೂಡಲೇ ಒಳಗಿನ ಅಂಗನೆಯರು ಬಂದವರನ್ನು ಇದಿರುಗೊಳ್ಳಲು ಹೋದರು. ಪಟ್ಟದ ರಾಣಿ ಸುಭದ್ರಾದೇವಿಯನ್ನು ಮುಂದೆ ಮಾಡಿಕೊಂಡು, ಅಬಲೆಯರು ಒಟ್ಟುಗೂಡಿ ಇದಿರು ಬಂದರು. ಅತ್ತಿಗೆಯರನ್ನು ಇದಿರಲ್ಲಿ ನೋಡಿದಾಗಲೇ ಇವರಿಷ್ಟು ಸಲಿಗೆಯ ಸಟ್ಟಾಟ ಆಡಿದರು.

''ಇವರು ಯಾವ ದೇಶದ ಹೆಣ್ಣುಗಳು? ನಮ್ಮ ಮನೆಗೆ ನುಗ್ಗಿ ತಾವೇಕೆ ಬರುತ್ತಿರುವರು? ನಾವು ಹುಟ್ಟಿದ ಮನೆಯಲ್ಲಿ ತುಂಬಿರುವ ಈ ಭಾಮೆಯರು ಯಾರು?''

ಈ ರೀತಿಯಲ್ಲಿ ಸರಸ ಸಾಗಿತು. ತೋಳು ತುಂಬ ತೊಟ್ಟುಕೊಂಡಿರುವ ಪಟ್ಟದರಸಿಯೊಡನೆ ಕುಳಿತು ಅವರೆಲ್ಲ ಮಾತಿನ ಸಾಗರದಲ್ಲಿ, ನಗೆಯ ಕಡಲಲ್ಲಿ ತೇಲಿ ಮುಳುಗಿ ಸಂತೋಷಗೊಂಡರು. ಅಲ್ಲಿಗೆ ಇತರ ಸತಿಯರೂ ಬಂದು ಸೇರಿಕೊಂಡರು.

ಇತ್ತ ಕಾಂತೆಯರು ಈ ರೀತಿಯಲ್ಲಿರುವಾಗ, ಅತ್ತ ಕನಕರಾಜ, ಕಾಂತರಾಜ, ಶಾಂತರಾಜ ಮುಂತಾದ ಅಳಿಯಂದಿರು ಮಾವನನ್ನು ಕಂಡು, ಕಾಣಿಕೆ ಅರ್ಪಿಸಿ, ಕೈಮುಗಿದು ನಿಂತುಕೊಂಡರು. ಸಿಂಧುದೇವ, ಗಂಗಾದೇವ ಮುಂತಾದ ಜಾಮಾತೃಗಳೂ ಸಂತೋಷದಿಂದ ಕಾಣಿಕೆ ಕೊಟ್ಟು ನಿಂತು ಕೊಂಡರು. ಭರತೇಶನು ಅವರನ್ನೆಲ್ಲ ಅಪ್ಪಿಕೊಂಡು ಮೃದುವಾಕ್ಯಗಳಿಂದ ಮನ್ನಿಸಿದನು. ಅಳಿಯಂದಿರಿಗೂ, ಮೈದುನರಿಗೂ ಯೋಗ್ಯವಾದ ಜಂಬುಖಾನೆಯ ಗದ್ದುಗೆಗಳನ್ನು ಕೊಡಿಸಿದನು. ಅವರು ಅದರಲ್ಲಿ ಇಂಬಾಗಿದ್ದು ಚಕ್ರಿಯ ಸಿರಿಯನ್ನು ಕೊಂಡಾಡಿದರು. ಕೆಲವು ದಿವಸಗಳವರೆಗೆ ಅವರಿವರನ್ನು ವಿನಯದಿಂದ ಉಪಚರಿಸಿದ ಮೇಲೆ ಒಂದು ದಿನ ಗಿರಿಗೆ ಹೊರಟುಬಿಟ್ಟನು. ಏನು ಮೋಹವೋ! ಚಕ್ರಿಯು ಪೌದನಪುರದಲ್ಲಿರುವ ಮಕ್ಕಳನ್ನೂ, ಸೊಸೆಯರನ್ನೂ ಕರೆಯಿಸಿಕೊಂಡನು. ಅನಂತರ ಎಲ್ಲ ಮಕ್ಕಳ ತಾಯಿತಂದೆಯರನ್ನು

ಮರೆಸುವಂತೆ ಅವರನ್ನೆಲ್ಲ ಕೂಡಿಕೊಂಡು ಹೊರಟನು. ಎಲ್ಲ ಕುಟುಂಬಗಳನ್ನೂ ಕೂಡಿಕೊಂಡು ಭರತೇಶನು, ವಾದ್ಯಘೋಷವು ದಶದಿಕ್ಕುಗಳನ್ನು ತುಂಬುತ್ತಿರಲು ಮುಖವಸ್ತ್ರ ತೆಗೆಯುವ ದಿನಕ್ಕೆ ಸರಿಯಾಗಿ ಒಂದು ಶಿಖರವನ್ನೇರಿದನು.

ಚಕ್ರಿಯ ಕಡೆಯವರು ಸರ್ವ ವಿಧಾನವನ್ನೂ ಅಲ್ಲಿ ನಿರ್ವಹಿಸಿದ್ದರು. ಭೂಮಂಡಲವೇ ಜಯಜಯವೆನ್ನುತ್ತಿರುವಾಗ ಸಾರ್ವಭೌಮನು ಮುಖವಸ್ತ್ರವನ್ನು ತೆಗೆಸಿದನು. ಅಮರವಾಸದಲ್ಲಿ ಹೊಳೆಯುತ್ತಿರುವ ಎಪ್ಪತ್ತೆರಡು ಜಿನಬಿಂಬಗಳಿಗೆ ವಂದಿಸಿದನು. ಪುತ್ರರೂ, ಮಿತ್ರರೂ ದರ್ಶನ ಪಡೆದು ವಂದಿಸಿದರು. ಚಕ್ರಿಯ ರಾಣಿಯರೂ, ಸೋದರಿಯರೂ, ಕುಮಾರಿಯರೂ ಸೊಸೆಯರೂ ಕೂಡಿ ಮಾಣಿಕ್ಯ ಬಿಂಬಗಳನ್ನು ಕಾಣಿಕೆಮಾಡಿ, ನಮಸ್ಕರಿಸಿದರು.

ಅಲ್ಲಿನ ಬಸದಿಗಳು ನವರತ್ನಮಯ, ಹೇಮಮಯ, ಶೋಭಿಸುವ ದೇಹಾರಗಳು ಚಿನ್ನ ರನ್ನದವುಗಳಾಗಿದ್ದುವು. ಪೂಜಾಕ್ರಮ ತೀರಿದ ಮೇಲೆ ನಿತ್ಯನೈಮಿತ್ತಿಕ ಪೂಜೆಗೆ ಶಾಸನ ಮಾಡಿದರು. ಅನಂತರ ತೇಜೋರಾಶಿ ಯೋಗೀಂದ್ರನು ಸೂಚಿಸಿದುದನ್ನು ಭರತೇಶ್ವರನು ಮನನ ಮಾಡುತ್ತಿದ್ದನು.

ಋಷಿವಾಕ್ಯ ಹುಸಿಯಾವುದೇ? ಋಷಿಗಳೂ, ನರರೂ, ಸುರರೂ ಉರಗರೂ ವೃಷಭೇಶನ ಆಸ್ಥಾನದಿಂದ ಗಂಗಾತೀರಕ್ಕೆ ಇಳಿಯುತ್ತಿದ್ದರು. ಪರಮ ಕಲ್ಯಾಣವನ್ನು ಕಾಣುವೆವೆಂದು ಉತ್ಸಾಹದಿಂದ ತರತರವಾಗಿ ಗಿರಿಯಿಂದ ಹೊನಲು ಸುರಿದಂತೆ ಇಳಿಯುತ್ತಿದ್ದರು. ವೃದ್ಧರಾದ ತಪಸ್ವಿಗಳ ಮೇಳದಲ್ಲಿ ಪುರುನಾಥನಿದ್ದನು, ಇದೇ ವೇಳೆಯೆಂದು ಭರತ ಚಕ್ರಿಯು ತನ್ನ ಹೆಂಗಸರೊಂದಿಗೆ ಬೇಗಬೇಗನೆ ಜಿನಸಬೆಯನ್ನು ಸೇರಿದನು, ದ್ವಾರಪಾಲಕರು ಅನುಮತಿ ಕೊಟ್ಟು ದೂರ ಸರಿದು ನಿಂತರು. ಅದಕ್ಕೆ ನಾರಿಯರ ಉಗ್ರವ್ರತವೇ ಕಾರಣವಾಗಿತ್ತು, ನವವಿಧ ಕೋಟೆ, ಮಾನಸ್ತಂಭ, ಖಾತಿಕೆ, ವಿವಿಧ ವನಗಳು—ಇವನ್ನೆಲ್ಲ ನಾರಿಯರು ಕಣ್ಣಾರೆ ಕಾಣುತ್ತ ನಡೆದರು. ಈ ಮೊದಲು ಅವರು ಅವುಗಳ ಕುರಿತು ಕಿವಿಯಾರೆ ಕೇಳಿದ್ದರು. ಅಂದು ಕೇಳದುದನ್ನು ಇಂದು ಕಣ್ಣಾರೆ ಕಂಡು ಅವರೆಲ್ಲರೂ ಉತ್ಸಾಹಗೊಂಡರು. ತುಂಬಿದ್ದವರೆಲ್ಲರೂ ತೊಲಗಿ ಹೋದಾಗ ಜಿನನ ಆಸ್ಥಾನವು ಬರಿದಾಗಲಿಲ್ಲ, ಭರತೇಶನ ಕಡೆಯ ಹೆಣ್ಣುಗಂಡುಗಳಿಂದ ಆ ಸಭೆಯು ತುಂಬಿ ಹೋಯಿತು. ಅವನ ಕುಟುಂಬವು ಕಿರಿದೆ? ಸ್ವರ್ಗದಿಂದ ಹೆಣ್ಣು ಗಂಡು ಕೂಡಿಕೊಂಡು, ದೇವೇಂದ್ರನು ಬರುವಂತೆ ಭರತಚಕ್ರಿಯು ಬಂದಿದ್ದನು. ಅಳಿಯಂದಿರು, ಅಣುಗರು, ಮೈದುನರು ಇವರೆಲ್ಲರನ್ನೂ ಹೊರಗೆ ನಿಲ್ಲಿಸಿ, ಮೊದಲು ಭರತೇಶನು ತನ್ನ ಸರ್ವ ಸತಿಯರೊಡನೆ ಒಳಗೆ ಹೋದನು.

ಭರತೇಶನು ಜಯಜಯವೆನುತ ಕಾಣಿಕೆಯಿಕ್ಕಿ ಸಾಷ್ಟಾಂಗವಾಗಿ ನಮಸ್ಕಾರ ಮಾಡಿದನು. ''ವಾಣೀಶ, ವೃಷಭೇಶ, ಪರಮಾತ್ಮ'' ಎಂದು ಧ್ಯಾನಿಸುತ್ತ ಎದ್ದು ನಿಂತನು. ಅದರಂತೆ ಚಕ್ರಿಯ ಸೊಸೆಯರೂ, ಪುತ್ರಿಯರೂ, ತಂಗಿಯರೂ, ಅರಸಿಯರೂ, ಕಾಣಿಕೆಯಿಕ್ಕಿ ಜಿನಸ್ವಾಮಿಗಳಿಗೆರಗಿದರು. ಅದು ಭೂಮಿಯಲ್ಲಿ ಹೊಸ ಲತೆಗಳು ಹಬ್ಬಿದಂತೆ ಇತ್ತು, ಕೂಡಲೇ ಅವರೆಲ್ಲರೂ ಎದ್ದು ಕೈಗಳನ್ನು ಮುಗಿದು, ಆ ದೇವನ

ಸೊಬಗನ್ನು ನೋಡಿ, ಭಾಷ್ಪಗಳಲ್ಲಿ ರೋಮಾಂಚನವೇಳುವಂತೆ ಸಂತೋಷದಲ್ಲಿ ತೇಲಾಡಿದರು. ತಾವರೆಯನ್ನು ಸೋಂಕದೆ ದೇವನು ಕುಳಿತಿರುವುದನ್ನು ಆಶ್ಚರ್ಯದಿಂದ ನೋಡುತ್ತಿದ್ದರು.

ಪುರುದೇವನಿಗೆ ಪ್ರದಕ್ಷಿಣೆ ಬರುವಾಗ, ಅವರು ಅವನ ನಾಲ್ಕು ದಿಕ್ಕಿನ ಮುಖಗಳನ್ನೂ ನೋಡಿ, ತಲೆದೂಗುತ್ತಾ ಆರ್ತಿಮಾಡಿದರು. ನೀಳವಾದ ಜಡೆಗಳ ಚೆಲುವನ್ನೂ, ಸೂರ್ಯಚಂದ್ರರ ಪಡೆಗೂ ಹೆಚ್ಚಾಗಿರುವ ದೇಹಕಾಂತಿಯನ್ನೂ ನೋಡಿ ನೋಡಿ, ಆ ನಾರಿಯರೆಲ್ಲರೂ ಆನಂದಪಟ್ಟರು. ಪುರುದೇವನು ಭದ್ರಾಕಾರವನ್ನೊಮ್ಮೆ ಪದ್ಮಾಸನಮುದ್ರೆಯಲ್ಲಿರುವುದನ್ನೊಮ್ಮೆ ಉತ್ತಮವಾದ ರುಚಿಯಿಂದಲೇ ನೋಡಿ ನೋಡಿ, ಸಂತೋಷ ಸಮುದ್ರದಲ್ಲೇ ಮುಳುಗಿ ಮೂಡುತ್ತಿದ್ದರು.

ಸುರರು ಹೋಗುವಾಗ. ಪ್ರೇರೇಪಿಸಿ ಹೋದ, ವಿದ್ಯೆಗಳ ಸಮೂಹವೇ ರಕ್ಷಿಸಬೇಕೆಂದು ಚಾಮರಗಳನ್ನು ಬೀಸುತ್ತಿತ್ತು. ಹೂವಿನ ಮಳೆಯನ್ನೂ ಬಿಳಿ ಕೊಡೆಯ ಪ್ರಭೆಯನ್ನೂ ಕಂಡು ಅವರು ಭಕ್ತಿ ತೋರಿದರು. ಅವರು ಈ ಮೊದಲು ಪರಮನ ಪ್ರತಿಮೆಯನ್ನು ರಚಿಸಿ, ಕಂಡಿದ್ದರಲ್ಲದೆ, ಪ್ರತ್ಯಕ್ಷವಾಗಿ ಕಂಡಿರಲಿಲ್ಲ. ನರನೊಬ್ಬನು ಇದ್ದಂತೆ ಇದ್ದು ಸ್ವರ್ಗವನ್ನು ಕಂಡ ರೀತಿಯಲ್ಲಿ ಅವರು ಬೆರಗಾಗಿದ್ದರು.

ದೇವನಿಗೆ ಅವರಲ್ಲಿ ಮಮಕಾರವಿರಲಿಲ್ಲ. ಅವರು ಮಾತ್ರ, ಮಾವ, ಅಜ್ಜ ತಂದೆಯೆಂದು ಆಶೆ ಮಾಡುತ್ತಿದ್ದರು — ಮಕ್ಕಳು ಚಂದ್ರನನ್ನು ಮಾವ ಎಂದು ಪ್ರೀತಿಸುವಂತೆ. ತಾವು ಭರತಚಕ್ರಿಯ ತಂಗಿಯರಾದುದು ತಮಗಿಂದು ಮಹಾ ಸಂಪತ್ತಾಯಿತೆಂದು, ಗಂಗಾದೇವಿಯೂ, ಸಿಂಧು ದೇವಿಯೂ ತಂದೆಗೆ ಅಂತರಂಗದಲ್ಲೇ ಸಂತೋಷಗೊಂಡು ಅಡ್ಡ ಬಿದ್ದರು. ಜಿನಪತಿಯ ಸುತ್ತಲೂ ಇಪ್ಪತ್ತು ಸಾವಿರ ಜನರಿದ್ದರು. ಅವರೆಲ್ಲರಿಗೂ ನಾರಿಯರು ವಂದನೆ ಮಾಡಿದರು. ಹಾಗೆ ನಮಿಸುತ್ತಿರುವಾಗ, ಕಚ್ಛಜಿನನನ್ನೂ ಮಹಾಕಚ್ಛಜಿನನನ್ನೂ ಪಟ್ಟದರಸಿಯು ಕಂಡಳು. ಅವಳು ಉಕ್ಕಿಬಂದ ಮನಸ್ಸಿನಿಂದ ಅವರಿಬ್ಬರನ್ನೂ ವಂದಿಸಿದಳು ಅದನ್ನು ನೋಡಿ, ನಮಿರಾಜನೂ ವಿನಮಿರಾಜನೂ ಕುಮಾರಿಯರೂ ನಮಸ್ಕಾರ ಮಾಡಿ ತಮ್ಮ ತಮ್ಮ ಭಕ್ತಿಯನ್ನು ತೋರಿಸಿದರು. ತಂದೆಯೆಂದೂ, ಅಜ್ಜನೆಂದೂ ಒಂದೊಂದು ನೆನಪಿನಿಂದ ಕಂಡರು.

ಅವರು ಭುಜಬಲೀಶ್ವರನನ್ನೂ, ಅನಂತವೀರ್ಯೇಶ್ವರನನ್ನೂ ಹುಡುಕಿದರು. ಅವರಿಬ್ಬರೂ ಆಗ ರಜತಾದ್ರಿಯಲ್ಲಿರಲಿಲ್ಲ. ಅವರು ಭೂಲೋಕದ ವಿಹಾರದಲ್ಲಿದ್ದರು. ಅನಂತನ ರತಿಕಾಂತಿ, ಬ್ರಾಹ್ಮಿಲಾಕಾಂತಿ, ಇಚ್ಛಾಕಾಂತಿ, ಸೌಂದರಾಕಾಂತಿ – ಮೊದಲಾದವರನ್ನು ಹುಡುಕಿದರು. ಅವರೂ ಅಲ್ಲಿರಲಿಲ್ಲ. ಬೇರೆ ಲೋಕಗಳಿಗೆ ಹೋಗಿದ್ದರು. ಮತ್ತೆ ಅಲ್ಲಿ ಉಳಿದಿದ್ದ ಎಲ್ಲ ತಾಪಸರಿಗೂ ನಮಸ್ಕಾರ ಮಾಡಿ ಮಾನಿನಿಯರೆಲ್ಲರೂ ಆದಿ ಜಿನನಲ್ಲಿಗೆ ಬಂದರು.

''ನಾವು ಮಾಡಿದ ಗೂಢ ವ್ರತಗಳು ಇಂದು ನಮಗೆ ಸಂಪೂರ್ಣ ಫಲವಿತ್ತವು'' ಎಂದು ಬಿನ್ನಹ ಮಾಡಿದರು. ದೇವಸ್ತೋತ್ರವು ಬರುವ ವೇಳೆಯಾದುದರಿಂದ ವಿಸ್ತಾರವಾದ ಪೂಜೆಗೀಗ ಇಂಬಿಲ್ಲವೆಂದು ಭರತೇಶನು ಸಮಸ್ತ ನಾರಿಯರಿಂದಲೂ

ಪ್ರಸ್ತುತವಾದ ಅರ್ಚನೆಯ ಸಂಕಲ್ಪ ಮಾಡಿಸಿದನು. ಆಮೇಲೆ ಆದಿ ಜಿನನೊಂದಿಗೆ ತನ್ನ ಸಂದೇಹಗಳನ್ನು ಕೇಳಿದನು.

''ಸ್ವಾಮಿ, ನಾರಿಯರಲ್ಲಿ ನಿರ್ಭವ್ಯದ ಕುಲವೆಷ್ಟು? ಭವ್ಯದ ಸಮೂಹವೆಷ್ಟು?''

''ಭವ್ಯ ಕೇಳು, ಅವರು ಒಬ್ಬರೂ ನಿರ್ಭವ್ಯರಲ್ಲ. ಎಲ್ಲರೂ ಸುಭವ್ಯ ಜೀವಿಗಳೇ. ರಾಣಿಯರು ಅವ್ಯಯ ಸಿದ್ಧಿಯ ಕ್ರಮದಲ್ಲಿ ಹೋಗುವವರು. ಅವರು ಚಿತ್‌ದ್ರವ್ಯಾನುಮತಿಗಳು. ಈ ಜನ್ಮವೊಂದಲ್ಲದೆ ಅವರಿಗೆ ಮುಂದೆ ಸ್ತ್ರೀಜನ್ಮವಿಲ್ಲ. ಗಂಡಾಗಿ ರಾಜಿಸುತ್ತ ಕೈವಲ್ಯ ಪಡೆಯುವರು. ನಿನ್ನ ತಂಗಿಯ ಪುತ್ರರೂ, ಪುತ್ರಿಯರೂ. ನಿನ್ನ ಸೊಸೆಯರೂ, ನಿನ್ನನ್ನು ಕೂಡಿರುವುದರಿಂದ ವಿನುತಾತ್ಮರುಚಿಗಳಾಗಿದ್ದಾರೆ. ಭವ್ಯರೂ ಆಗಿದ್ದಾರೆ'' ಎಂದು ಮಹಾದೇವನು ನುಡಿದನು. ಅದನ್ನು ಕೇಳಿ ಭರತೇಶ್ವರನು ಆನಂದಪಟ್ಟನು.

''ಮಹಾದೇವನನ್ನು ಅರ್ಚಿಸಿದರು. ಇನ್ನು ಈ ನೆಲದಲ್ಲಿ ಜೋಲಿಸಾಕು. ಜೈನೇಂದ್ರರಿಗೆಲ್ಲ ನಮಸ್ಕಾರ ಮಾಡಿ'' ಎಂದು ಭರತೇಶನು ತಿಳಿಸಲು ಎಲ್ಲರೂ ಹಾಗೇ ಮಾಡಿದರು. ಅವರನ್ನೆಲ್ಲ ಒಂದು ಕಡೆಗೆ ಸಾಗಿಸಿ ಹಿಂದೆ ನಿಲ್ಲಿಸಿದವರನ್ನು ಬರಿಸಿದನು. ಅಳಿಯಂದಿರೂ, ಆಣುಗರೂ, ಮೈದುನರೂ ಬಂದು ಜಿನೇಶನಿಗೆ ಕಾಣಿಕೆಯಿಟ್ಟು ಅಡ್ಡಬಿದ್ದರು. ಅವರೆಲ್ಲರೂ ಸ್ತುತಿಮಾಡಿದರು. ಪ್ರದಕ್ಷಿಣೆ ಬಂದರು.

''ನಾವು ಕೃತಕೃತ್ಯರಾದೆವು'' ಎಂದವರು ಹೇಳಿದರು.

''ಇನ್ನೊಮ್ಮೆ ಬಂದು ಅತಿ ವಿಶಾಲ ಪೂಜೆಯನ್ನು ಮಾಡಿರಿ. ಇಂದಿಗಿಷ್ಟೇ ಸಾಕು'' ಎಂದು ಭರತೇಶನು ಅವರಿಗೆ ತಿಳಿಸಿದನು. ಅವರೂ ಜಿನದೇವನಿಗೆ ನಮಸ್ಕರಿಸಿ ಹೊರಟರು. ಭರತೇಶ್ವರನು, ತನ್ನ ಮೈದುನರು. ಅಳಿಯಂದಿರು, ಸುತರು, ವನಿತೆಯರು, — ಇವರೆಲ್ಲರ ಫೌಜನ್ನು ಸಾಗಿಸಿಕೊಂಡು ಪುರಕ್ಕೆ ಸಾಗಿರಿ'' ಎಂದನು. ಭೂರಿ ವಿಮಾನದಲ್ಲಿ ಕುಳಿತು ಅವರೆಲ್ಲರೂ ಹೋದರು. ಭರತೇಶ್ವರನು ಮಾತ್ರ, ಮಹಾಗಣ ಬರುವುದನ್ನು ನೋಡಬೇಕೆಂದು ಅಲ್ಲೇ ನಿಂತಿದ್ದನು.

ಅಷ್ಟರಲ್ಲಿ ಹೋದ ಮಹಾಗಣವು ಹಿಂದಿರುಗಿತು. ಬರುತ್ತಿದ್ದ ದೇವಗಣವು; ''ಆ ಕಲ್ಯಾಣವಾದುದು, ಲೇಸು ಲೇಸಾಯಿತು'' ಎಂದು ಹೇಳುತ್ತಿರುವುದನ್ನು ಕೇಳಿದ ಚಕ್ರಿಯು ಅದೇನೆಂದು ವಿಚಾರಿಸಿದನು. ಗಂಗೆಯ ದಂಡೆಯಲ್ಲಿ ಅನಂತವೀರ್ಯ ಸ್ವಾಮಿಯು ತನ್ನ ಮೂರು ದೇಹವನ್ನೂ ಹಿಂಗಿಸಿ, ಮಂಗಲವಾದ ಮುಕ್ತಿಗೆ ಸಂದನೆಂದು ಆ ಗಣದವರು ತಿಳಿಸಿದರು. ಜಿನಸಭೆಯಲ್ಲಿದ್ದುದರಿಂದ, ಶೋಕ ಹುಟ್ಟಿದ್ದರಿಂದ ಭರತೇಶನು ಸೈರಿಸಿಕೊಂಡಿದ್ದನು. ಬೇರೆ ನೆಲದಲ್ಲಿರುತ್ತಿದ್ದರೆ ತಮ್ಮನು ಮುಕ್ತಿಗೆ ಸಂದ ವಾರ್ತೆಯನ್ನು ಕೇಳಿ, ಮೂರ್ಛೆ ಹೋಗದೆ ಇರುತ್ತಿರಲಿಲ್ಲ.

''ಈಗ ಅಲ್ಲಿದ್ದ ಯಶಸ್ವತೀಕಂತಿಯರು ಈಗ ಎಲ್ಲಿರುವರು?'' ಭರತೇಶನು ವಿಚಾರಿಸಿದನು.

''ಭುಜಬಲೇಶನ ಗಂಧಕಟಿಗೆ ಸಾಗಿದಳು'' ಯೋಗಿಗಳು ತಿಳಿಸಿದರು.

ಅನಂತವೀರ್ಯನು ಅಷ್ಟು ಬೇಗನೆ ಮುಕ್ತಿಗೆ ಸಂದುದೇಕೆಂದು ಆದಿಜಿನನೊಂದಿಗೆ ಭರತೇಶನು ವಿಚಾರಿಸಿದನು. ಆ ಕಾಲಕ್ಕೆ ಅವನು ಅಲ್ಪಾಯುವಾಗಿದ್ದುದೇ ಹಾಗಾಗಲು ಕಾರಣವೆಂದು ಆದಿ ಜಿನಸ್ವಾಮಿಯು ತಿಳಿಸಿದನು. ಚಕ್ರೇಶ್ವರನು ಜಿನೇಶನಿಗೊಂದಿಸಿ, ಸಮವಸರಣದಿಂದ ಬೀಳ್ಕೊಂಡನು. ಮಿತ್ರರನ್ನೂ ಮಂತ್ರಿಗಳನ್ನೂ ಕೂಡಿಬಂದು ಭರತಚಕ್ರಿಯು ಬರುತ್ತಿರುವಾಗ ಮಹಾ ವಿಕ್ರಮಿಯಾದ ಮೇಘೇಶನು ಬಂದು, ಅಡ್ಡಬಿದ್ದನು.

''ದೇವ ಬಿನ್ನಹ'' ಎಂದು ದೇವತೆಗಳು ಉಪಸರ್ಗವಿಟ್ಟುದನ್ನೂ ಅದು ತೊಲಗಬೇಕಾಗಿ, ತಾನು ದೀಕ್ಷೆಗೊಳ್ಳುವೆನೆಂದೂ ಹರಕೆ ಹೊತ್ತುದನ್ನೂ, ಉಪಸರ್ಗವಳಿದುದನ್ನೂ ತಿಳಿಸಿದನು. ಕೊನೆಯಲ್ಲಿ ತನಗೆ ದೀಕ್ಷೆಗೆ ಅನುಮತಿ ಬೇಡಿದನು. ಅಡ್ಡಬಿದ್ದ ಮೇಘೇಶನನ್ನು ಎತ್ತಿ ಪ್ರತ್ಯೈದ ಮೇಲೆ ತಡೆಯುವ ಮಾತಿಲ್ಲವೆಂದು ಹೇಳಿ, ಅವನ ಸ್ಥಾನದಲ್ಲಿ ವಿಜಯ ಜಯಂತರು ಇದ್ದರೆ ಸಾಕೆಂದು ತಿಳಿಸಿದನು. ಒಂದು ವೇಳೆ ವಿಜಯ ಜಯಂತರೂ ಹೋದರೆ, ಐದಾರು ವರ್ಷದ ತನ್ನ ಮಗನಿರುವನೆಂದೂ ಅವನನ್ನೇ ಅಧಿಕಾರದಲ್ಲಿರಿಸಿ, ಪಾಲಿಸಬೇಕೆಂದೂ ಮೇಘೇಶನು ಭರತೇಶನನ್ನು ಕೇಳಿಕೊಂಡನು.

''ಬಾಲಕನಾದರೇನು? ನಿನ್ನ ಪಾಲನೆಯಲ್ಲಿದ್ದವನು ನಮಗೆ ಸಾಕು. ಅವನನ್ನು ಪಾಲಿಸುವೆನು. ಅವನನ್ನು ಇಲ್ಲಿ ಬಿಟ್ಟು ನಿಶ್ಚಿಂತನಾಗಿ ನೀನು ಹೋಗು'' ಚಕ್ರೇಶ್ವರನು ಹೇಳಿದ ಮಾತಿನಿಂದ ಮೇಘರಾಜನು ಸಂತೋಷಗೊಂಡನು. ಅರುಹನನ್ನು ಕಂಡು ಊರಿಗೆ ಹೋಗಿ ಮತ್ತೆ ಈ ದೇವಗಿರಿಯನ್ನು ಹತ್ತಿ ಮುನಿಯಾಗುವೆನೆಂದು ಭರತೇಶನಿಗೆ ವಂದಿಸಿದವನೇ ಅತ್ತ ನಡೆದನು. ಚಕ್ರಧರನು ಓಜೆಯಿಂದ ಅಯೋಧ್ಯೆಯತ್ತ ಸಾಗಿದನು.

ರಾಜೇಂದ್ರನು ಬಂದು, ಪುರಪ್ರವೇಶ ಮಾಡಿದ ಮೇಲೆ ನೋಟದಿಂದಲೇ ಮಂತ್ರಿಗಳನ್ನೂ ಮಿತ್ರರನ್ನೂ ಅವರವರ ಮನೆಗೆ ಕಳುಹಿಸಿದನು. ಆಮೇಲೆ ಮಂದಿರವನ್ನು ಸೇರಿ ತನ್ನ ಅನೇಕ ರೀತಿಯ ಚಟುವಟಿಕೆಗಳಲ್ಲಿ ನಿರತನಾದನು. ಬಸದಿಯ ಉತ್ಸಾಹವನ್ನೂ ಸ್ವಾಮಿಯನ್ನು ಕಂಡ ಆಶ್ಚರ್ಯವನ್ನೂ, ರಾಣಿಯರು ಕೊಸರಿ ಕೊಸರಿ ಮಾತನಾಡುತ್ತಿದ್ದರು. ಅವರ ಸಂತೋಷವನ್ನು ಕಂಡು ಭರತೇಶನೂ ಸಂತೋಷಪಡುತ್ತಿದ್ದನು. ತಮಗೆ ಏಕಾಂತ ದೊರೆತುದನ್ನು, ಜಿನನ ದಿವ್ಯಾಕಾರವನ್ನು, ಅವನ ಕಾಂತಿ ಶಾಂತಿಗಳನ್ನು ಕೆಂದಾವರೆಯನ್ನು ಸೇರದಿದ್ದುದನ್ನು — ಎಲ್ಲವನ್ನೂ ನುಡಿದು ನುಡಿದು ಆ ಕಾಂತೆಯರು ಹಿಗ್ಗಿದರು.

''ಅಕ್ಕ, ನಿಮ್ಮ ಅಯ್ಯನನ್ನು ಓಜೆಯಿಂದ ನೋಡಿದಿರಲ್ಲ'' ತಂಗಿಯರನ್ನು ಪ್ರೀತಿಯಿಂದ ವಿಚಾರಿಸಿದನು, ಭರತೇಶನು.

''ಅಣ್ಣಾಜಿ ಕಂಡೆವು; ನಿನ್ನಿಂದ ಇಂದೇ ಮುಕ್ತಿಯನ್ನೂ ಕಂಡೆವು. ಇನ್ನೇನು? ಇದು ಪರಿಪಕ್ವವಾದ ನಮ್ಮ ಪುಣ್ಯ. ಜಿನಸಿದ್ಧ! ನಿನ್ನ ಒಡಹುಟ್ಟಿದವರೆಂದು ನೀನೊಂದು ಮಾತನಾಡಿದರೆ ನಮಗಿಷ್ಟಾಯಿತು ಸಿರಿ'' ಸಂತೋಷವನ್ನೂ ಕೌತುಕವನ್ನೂ ಅವರು ವ್ಯಕ್ತಪಡಿಸಿದರು.

''ಪ್ರಯಾಸಪಟ್ಟು ಒಂದು ಬಸುರಿಂದ ಬರಬೇಕೆ? ತಾಯಿಯೆಂದು, ತಂಗಿಯರೆಂದು ಬಾಯಾರೆ ನುಡಿದರೆ ಸಾಲದೆ?'' ಭರತೇಶನು ನಿಜವನ್ನು ತಿಳಿಸಿದನು. ಬೇರೆ ಅರಮನೆಯಿತ್ತು ತಂಗಿಯರನ್ನೂ ಮೈದುನರನ್ನೂ ನಲ್ಮೆಯಿಂದ ಮೂರು ಹೊತ್ತು ವಿಚಾರಿಸುತ್ತ ಮೂರು ತಿಂಗಳು ಸನ್ಮಾನಿಸಿದನು; ಮತ್ತೂ ಕೆಲವು ದಿನವಿರಬೇಕೆಂದು ಹೇಳಿದನು. ಆದರೆ ಬಿತ್ತೆಗರು ಹೋಗುವೆವೆಂದು, ವಿಸ್ತಾರವಾಗಿ ಭಾವನಿಗೆ ಉಡುಗೊರೆಯಿತ್ತರು.

''ಗಂಗಾದೇವ, ಸಿಂಧುದೇವ, ಬನ್ನಿ — ನೀವು ಉತ್ತಮ ಸಂಗರಾಗಿದ್ದೀರಿ'' ಭರತೇಶನು ನಗುತ್ತ ಕಣ್ಣುಗಳು ದಣಿಯುವಷ್ಟು ಮನ್ನಣೆಯಿತ್ತು ಆಲಂಗಿಸಿಕೊಂಡು, ಬೀಳ್ಕೊಟ್ಟನು. ತಂಗಿಯರಿಗೂ ಸಾಕು, ಸಾಕೆಂದು ಹೇಳುವಷ್ಟು ಕೊಟ್ಟನು. ಅವರು ಅಣ್ಣನಿಗೆ ಸೇಸೆ ತಳಿದು ಸಂತೋಷಗೊಂಡರು. ಈ ರೀತಿಯಲ್ಲಿ ಆ ಹೆಣ್ಣುಗಳೆಲ್ಲ ಅಣ್ಣನಿಂದ ಅತ್ತಿಗೆಯರಿಂದ ಬೀಳ್ಕೊಂಡು ತಮ್ಮ ಊರಿಗೆ ಹೋದರು.

ತನುಜೆಯರಿಗೂ ಅಳಿಯಂದಿರಿಗೂ ಘನತರದ ಉಡುಗೊರೆಗೊಟ್ಟು, ಭರತಚಕ್ರಿಯು ಅನುರಾಗದಿಂದ ಬೀಳ್ಕೊಟ್ಟನು; ಅವನ ಮನಸ್ಸಿನ ವಿಲಾಸ ಯಾರಿಗಿದೆ? ಪೌದನಪುರದ ಕುಮಾರರಿಗೂ ಸೊಸೆಯರಿಗೂ ಆದರದಿಂದ ಬುದ್ಧಿ ಹೇಳಿ, ಹಿರಿದಾಗಿ ಮನ್ನಣೆ ಮಾಡಿ ಕಳುಹಿಸಿದನು. ಉಳಿದ ತಮ್ಮಂದಿರ ಪುತ್ರರಿಗೂ ಸೊಸೆಯರಿಗೂ ಅಕ್ಕರೆಯಿಂದ ಬುದ್ಧಿವಾದ ಹೇಳಿ, ಚೆಲುವಾದ ಮನ್ನಣೆಯಿತ್ತು ಕಳುಹಿಸಿದನು. ಅವನ ಭವಕ್ಕೆ ಭಾಗ್ಯಕ್ಕೆ ಸರಿಯುಂಟೆ? ಭರತೇಶನು ದೂರದವರನ್ನೆಲ್ಲ ಕಳುಹಿಸಿಕೊಟ್ಟು ಸತಿಯರಿಗೂ, ಕುಮಾರರಿಗೂ ಸೊಸೆಯರಿಗೂ ನಿತ್ಯವೂ ಸಾರತರವಾದ ಸುಖವನ್ನುಂಟು ಮಾಡುತ್ತ ತಾನು ಪರಮಸಂಸಾರ ಸುಖಾಂಗದಲ್ಲಿದ್ದನು. ಪ್ರಜೆಗಳಿಗೂ ಪರಿವಾರದವರಿಗೂ ಲೋಕದ ರಾಜರಿಗೂ ಅರ್ತಿಯಾಗುವಂತೆ ಭರತೇಶನು ನಿಜವಾದ ಭೋಗದಲ್ಲೂ ಯೋಗದಲ್ಲೂ ಮೆರೆಯುತ್ತಿದ್ದನು.

# ೧೦

# ಸಾಧನೆ

ಜಿನವಾಸ ರಚನೆ, ಜಿನೇಂದ್ರ ಪೂಜಾರ್ಚನೆಗಳನ್ನು ಘನವಾಗಿ ಮಾಡಿದ ಭರತೇಶನು ಮಕ್ಕಳ ನೋಟದಲ್ಲಿ ಹೆಂಡತಿಯರ ಕೂಟದಲ್ಲಿ ಭೂಮಿಯನ್ನು ಆಳುತ್ತ ಸುಖವಾಗಿದ್ದನು.

ಹಲವು ಮಂದಿ ಸುಕುಮಾರರು ತಮ್ಮ ತಮ್ಮಲ್ಲಿ ಕೆಲವರೊಂದಾಗಿ, ಪಣ್ಣೆಯಲ್ಲಿ ಗುಂಪು ಗುಂಪಾಗಿ, ಆಟಪಾಟಗಳಲ್ಲಿ ನಲಿದಾಡುತ್ತಿದ್ದರು. ಎಷ್ಟಾದರೂ ಅವರು ಭೂರಿ ಭೂಮಿಯ ಒಡೆಯನಾದ ಭರತೇಶ್ವರನ ಮಕ್ಕಳಲ್ಲವೇ? ಒಂದು ದಿನ ಆದಿ ಚಕ್ರವರ್ತಿಯಾದ ಭರತೇಶನ ನೂರು ಮಂದಿ ಕುಮಾರರು ಒಂದಾಗಿ ಬಂದು ಬಂದು ತೊರೆಯ ತಡಿಯ ಮರಳಿನಲ್ಲಿ ಆನಂದಿಸುತ್ತಿದ್ದರು. ಮದುವೆಯಾಗದ ಹದಿನಾಲ್ಕು, ಹದಿನೈದು, ಹದಿನಾರು, ಹದಿನೇಳು, ಹದಿನೆಂಟು ಪ್ರಾಯದವರಾದ ಆ ಕುಮಾರರು ಗರಡಿ—ಮಠಗಳ ಆಟಗಳನ್ನು ಆಡುತ್ತಿದ್ದರು. ರವಿಕೀರ್ತಿ ರಾಜ, ರತಿವೀರ್ಯ ರಾಜ, ಶತ್ರುವೀರ್ಯ ರಾಜ, ದಿವಿಚಂದ್ರ ರಾಜ, ಮಹಾಜಯ ರಾಜ, ಮಾಧವರಾಜ, ಸುಜಯರಾಜ, ಅರಿಂಜಯರಾಜ, ವಿಜಯರಾಜ, ಕಾಂತಾರಾಜ, ಅಜಿತಂಜಯ ರಾಜ, ವೀರಂಜಯ ರಾಜ, ಗಜಸಿಂಹ ರಾಜ, ಎಂದು ಮುಂತಾಗಿ ನೂರ್ವರು ಕುಮಾರರು, ವಿವಿಧ ಶಾಸ್ತ್ರಗಳ ಸಾಧನೆಗಳಲ್ಲಿ, ಗೀತಗಳಲ್ಲಿ ಅನುಭವಿಗಳ ಆಟಕ್ಕೆ ಅಂದು ಬಂದರು. ಆ ಕುಮಾರರೆಂದರೆ ದೇವತೆಗಳನ್ನು ನಗೆಗೀಡು ಮಾಡುವ ಚೆನ್ನಿಗರಾಗಿದ್ದರು. ಗಿಂಡಿ, ಹಡಪ, ಕುಂಚ, ಸಂಪುಟ, ಪುಸ್ತಕ, ಖಂಡೆಯ, ಕಿರಿಸೆ, ಕಠಾರಿ, ದಂಡಿಗೆ, ವೀಣೆಗಳನ್ನೆಲ್ಲ ಹಿಡಿದುಕೊಂಡ, ಅರಸುಗಳೆಲ್ಲ ಇವರಿಗೆ ಊಳಿಗದವರಾಗಿದ್ದರು.

''ಸ್ವಾಮಿ, ತೊರೆಯ ತಡಿಯ ಮರಳು ಇಲ್ಲಿ ಒಳ್ಳೆಯದಾಗಿದೆ. ನೆಲವಿಲ್ಲಿ ತೆರವು ಆಗಿದೆ. ನಮ್ಮ ಸಾಧನೆಗಳೆಲ್ಲ ಇಲ್ಲಿ ಮೆರೆಯಬಹುದು'' ಕಿರಿಯರು ಹಿರಿಯರೊಡನೆ ಬಿನ್ನವಿಸಿದರು.

''ಅಹುದೇ ಸಾಹಸಿಗಳೇ? ನಿಮ್ಮ ಮನಸ್ಸಿನ ಉತ್ಸಾಹಕ್ಕೆ ನಾವು ಅಲ್ಲವೆನ್ನುವುದೇಕೆ? ಬರುವೆವು. ಸಾಧನೆಗಳಾಗಲಿ'' ತಮ್ಮಂದಿರ ಮಹಿಮೆಗೆ ಅಣ್ಣಂದಿರು ಒಪ್ಪಿದರು.

ಆಗ ಸಾಧನೆಗಾಗಿ ಅತಿ ಮಲ್ಲರು ಎದ್ದರು. ಅವರು ಚಲ್ಲಣ, ಹೊನ್ನಿನ ಒಡ್ಡಿಯಾಣ, ಬಿಗುಹಿನ ಕುಲ್ಲಾಯಿ, ಕುಂಕುಮ ತಿಲಕ, ಗೆಲ್ಲುವೆವು ಎಂಬ ಠೀವಿಯಿಂದ ಹಿಡಿದ ತಾವಡ ಕೋಲುಗಳು — ಇತ್ಯಾದಿ ಉಡಿಗೆ, ತೊಡಿಗೆ, ಆಯುಧಗಳಿಂದ ಸಜ್ಜಾಗಿದ್ದರು. ಮುಂದುಟ್ಟ ಕಾಸೆ, ಚಿಮ್ಮುರಿ ಬಿಟ್ಟ ಜಡೆ, ಸಾದಿನ ಬೊಟ್ಟು, ಕೈಗಳಲ್ಲಿ ಸಾಣ, ಖಂಡೆಯ ಇತ್ಯಾದಿಗಳಿಂದ ಸಿಂಗರಿಸಿ ಕೊಂಡು ಕೆಲವರು ಸಾಧನೆಗೆ ಎದ್ದರು.

ಕಿರುನಡು, ಬಡಬಟ್ಟೆ, ಪೆಂಚಕ, ನಯವಾದ ತೊಡೆ, ಪಾದಗಳಲ್ಲಿ ಹೊಳೆವ ಹಾವುಗೆ, ತೆರವಾದ ಎದೆ, ದೀರ್ಘವಾದ ಬಾಹುಗಳು, ಮುದ್ದಾದ ಮುಖ, — ಈ ರೀತಿಯ ಆಯಕಟ್ಟಿನಿಂದ ಕರೆದು ಎರಕ ಹೊಯ್ದು ಮಾಡಿದಂತೆ ಶೋಭಿಸುತ್ತಿದ್ದರು. ಕೊರಳು, ಕಂಕುಳು, ಬೆನ್ನು, ತೊಡೆ, ತೋಳ ಸಂದು, ತೊಡೆ ಸಂದು, ಹೊಕ್ಕಳು – ಮುಂತಾದ ಅವಯುವಗಳಿಗೆ ಹಚ್ಚಿದ ಪರಿಮಳದ ಎಣ್ಣೆಗಾಗಿ ತುಂಬಿಗಳು ಬಂದು ಎರಗುತ್ತಿದ್ದುವು. ಅವುಗಳ ಝೇಂಕಾರವು ನೃಪರನ್ನು ಹಾಡಿ ಹೊಗಳಿದಂತೆ ಇತ್ತು. ಅವರ ಜೊತೆಗೆ ಹೋಗುತ್ತಿರುವ ಶುಚಿಯಾಗಿರುವ ಹಡಪದವರು ಆಗಾಗ, ಕೊಡುತ್ತಿರುವ ಎಲೆಯ ಘಳಿಗೆಗಳನ್ನು ಕೊಟ್ಟಂತೆ ಕಚ್ಚಿಕೊಂಡು, ಅವರೆಲ್ಲರೂ ಬಂದುಗೆಯ ಕೋಲನ್ನು ತಿರುಗಿಸುತ್ತ ಮುಂದುವರಿದರು.

''ಸಿದ್ಧರೆ ಗತಿ! ಜಿನ ಶರಣು! ನಿರಂಜನ ಸಿದ್ಧ ನಮೊ!'' ಎಂದು ನಮಸ್ಕಾರ ಮಾಡಿ, ಉದ್ದಟ ತಿಟ್ಟಿನಿಂದ ತೋಡಿದ ಮರಳ ರಾಶಿಯ ಮೇಲೆ ಹಾರಿದರು. ಗರುಡನಂತೆ ಆಕಾಶಕ್ಕೆ ಹಾರಿ ಹೊಯಿಗೆ ರಾಶಿಗೆ ಒಯ್ಯಾರದಿಂದ ಕುಪ್ಪುವಾಗ, ಸುರಲೋಕದ ಅಮರ ಕುಮಾರರು ಹಾರಿ, ಧರೆಗೆ ಬರುವಂತೆ ತೋರಿದರು. ಆ ಅಣ್ಣ ತಮ್ಮಂದಿರು, ತಮ್ಮಲ್ಲೇ ಎರಡು ಒಡ್ಡಾಗಿ ನಿಂತು, ಸಾಧನೆಗೆ ಸಮ್ಮುಖರಾದರು. ಅದು ಕಾಮನೇ ಹಲವು ರೂಪವನ್ನು ಕೈಕೊಂಡು ನಿಂತಂತೆ ಕಾಣುತ್ತಿತ್ತು. ಮರಳಿನಲ್ಲಿ ಮಿಂಚಿನಂತೆ ಅತ್ತಿತ್ತ ಹೊಳೆದಾಡಿ, ಹಂಚಿಕೊಂಡು, ಎರಡು ಪಕ್ಕದಲ್ಲಿ ಹೊಂಚಿಕೊಂಡು ನಿಂತು, ಇಬ್ಬರಿಬ್ಬರಾಗಿ ಸಾಧನೆಗೆ ಪ್ರಾರಂಭಮಾಡಿದರು. ಆಯುಧಗಳನ್ನು ಉದ್ದಕ್ಕಿಟ್ಟು, ಆದನ್ನು ಆಧರಿಸಿ, ಖಡ್ಗಗಳನ್ನು ಸುತ್ತಾಳಿಸುತ್ತ ಏಳಡಿ ಹಿಂದಕ್ಕೂ ಮುಂದಕ್ಕೂ ನಡೆದರು. ಅದೇ ರೀತಿಯಲ್ಲಿ ಕೋಲು ಹಿಡಿದು ನಮಸ್ಕಾರ ಮಾಡಿದರು. ಅನಂತರ ಅವರು ನಿಂತ ಭಂಗಿ ಹೀಗಿತ್ತು: ಹೋಳಾದಂತೆ ನಿಂತ ಮೈ, ಮುಂದಕ್ಕೊತ್ತಿದ ಬಲಗಾಲು, ಹಿಂದೆ ತೆಗೆದ ಎಡಗಾಲು, ಕೋಲು ಹಿಡಿದು ನೀಡಿರುವ ಬಲತೋಳು, ಹೀಗೆ ಸಾಲಾಗಿ ನಿಂತು ಸಾಧನೆಗೆ ಆಯತರಾದರು.

''ಸ್ವಾಮಿ, ಮನಸ್ಸು ಕೊಡು'' ತಮ್ಮನೊಬ್ಬನು ಅಣ್ಣನ ತಲೆಗೆ ನೇರಾಗಿ ಕೋಲನ್ನು ಹಿಡಿದು ಪಾದಕ್ಕೆ ಬೀಸಿದನು. ''ವೀರ! ಅದು ಸುಳ್ಳಾಯಿತು ನೋಡು'' ಅಣ್ಣನು ಪಾದವನ್ನು ಹಿಂದಕ್ಕೆ ತೆಗೆದು ತನ್ನ ಕೋಲಿನಿಂದ ಆಧರಿಸಿ ನಿಂತುಕೊಂಡನು. ''ಸ್ವಾಮಿ ಈಗಿನ ಘಾಯ ಹುಸಿಯಾಗುವಂತಿಲ್ಲ'' ತಮ್ಮನು ಮೂರು ಸಲ ಮಸ್ತಕಕ್ಕೆ ಬೀಸಿದನು. ''ನೋಡು, ನಿನ್ನ ಮಾತು ಹುಸಿಯಾಗಲಿಲ್ಲ, ಸಟೆಯಾಯಿತು.'' ಅಣ್ಣನು ಮೂರು ಬಾರಿಯೂ ತಲೆಯೊಡ್ಡಿ ತಪ್ಪಿಸಿಕೊಂಡನು. ''ಪ್ರಭುವೆ ಈ ಘಾಯ ನಿಶ್ಚಯವು.'' ಎನ್ನುತ್ತ ತಮ್ಮನು ಕಾಲಿಗೆ ಎದೆಗೆ ಹೊಡೆದನು. ''ಅತ್ತ ಇರಲಿ, ಇತ್ತ ಬರಲಿ; ಏನೂ ಆಗುವಂತಿಲ್ಲ'' ಅಣ್ಣನು ಕಾಲಿನಿಂದಲೇ ದೂಡಿ ತಪ್ಪಿಸಿಕೊಂಡನು. ತಮ್ಮನು ತಳಸಂಚು, ಮೇಲಿನ ಸಂಚು, ಹಿಂಕೋರೆ, ಮುಂಕೋರೆ, ಬಲಸನ್ನೆ, ಎಡಸನ್ನೆ — ಎಂದು ಮುಂತಾಗಿ ಖಡ್ಗವನ್ನು ನೀಡಿದರೆ, ಅಣ್ಣನು ಖಡ್ಗವನ್ನೇ ಆಧರಿಸಿ ಹಾರಿ, ಮೈಹೊಳೆದು ಎಲ್ಲವನ್ನೂ ತಪ್ಪಿಸಿಕೊಂಡನು. ''ದೇವ ನಿನ್ನ ಊಳಿಗದವನ ಕೈಚಳಕ ಹೇಗಿದೆಯೆಂದು ನೋಡು''

ಎಂದು ಹೇಳಿದವನೇ ಹಾವಿನ ನಾಲಿಗೆಯಂತೆ ಚಳಚಳನೆ ಕೈನೀಡಿ ನೂರಾರು ರೀತಿಗಳನ್ನು ಚಿಮ್ಮಿಸಿದನು. "ಧೀರ, ಆಯಿತಲ್ಲ; ಬೀಸಿದ ಘಾಯಗಳೆಲ್ಲ ಹೊರಹೊರಗೇ ಹೋದುವಲ್ಲ" ಪಾದರಸದಂತೆ ಮೈಯ್ಯನ್ನು ಒಲೆದು ಬಾಗಿಸಿ, ತಪ್ಪಿಸಿ ಕೊಂಡನು ಅಣ್ಣ.

ತಮ್ಮನಾಗ, ಮೆಚ್ಚುಗೆಯಿಂದ ಕೈಯ ಕೈದುವನ್ನು ಎಸೆದುಬಿಟ್ಟು, ಕೊರಳಿನ ಉಳಿಯನ್ನು ತೆಗೆದು, ನಿವಾಳಿಯನ್ನಿಟ್ಟು, ಎಲ್ಲರಿಗೂ ಆಶ್ಚರ್ಯವಾಗುವಂತೆ, ಅಣ್ಣನ ಕಾಲಿಗೆರಗಿದನು. ಅಣ್ಣನಾಗ, ಹೆಚ್ಚಿನ ಪ್ರೇಮದಿಂದ ತಮ್ಮನನ್ನು ತಕ್ಕೈಸಿದನು. ಕೆಲಬಲದಲ್ಲಿ ನಿಂತಿದ್ದ ಅಣ್ಣ ತಮ್ಮಂದಿರೆಲ್ಲರೂ ಇದನ್ನು ಮೆಚ್ಚಿದರು. ಕೆಲವರು ಅವರನ್ನು ಅಪ್ಪಿಕೊಂಡರು. ಕೆಲವರು ಕಾಲಿಗೆರಗಿದರು "ನಿಮಗಿಬ್ಬರಿಗೂ ಈ ಕೈಚಳಕವೂ ಮೈಚಳಕವೂ ಸಲ್ಲುವುದು" ಎಂದು ಅವರಿಬ್ಬರನ್ನೂ ಚೆನ್ನಾಗಿ ಹೊಗಳಿದರು.

ಮತ್ತೊಬ್ಬ ಅಣ್ಣನು, ತಮ್ಮನ ಮೇಲೆ ಕೋಲನ್ನೆತ್ತಿ ಹೊಡೆದನು. ಹೊಡೆದೊಡನೆ ತಮ್ಮನು ಆ ಕೋಲನ್ನು ಹಿಡಿದುಕೊಂಡು ತಲೆಯಲ್ಲಾಧರಿಸಿ ಕೊಂಡನು. "ಅಣ್ಣಾಜಿ, ನೋಡು ನಿನ್ನ ಕೋಲನ್ನು ನೆತ್ತಿಯಲ್ಲೇ ಹಿಡಿದುಕೊಂಡಿರುವೆನು" "ವಿಕ್ರಮ! ಹಾಗೆ ಆಗಲಿ. ನಿನಗೆ ನನ್ನಲ್ಲಿ ಭಕ್ತಿಯೋಗವಿದೆಯೆಂದು ನಾನು ಬಲ್ಲೆ. ಈಗ ಆ ಭಕ್ತಿಯನ್ನು ಬಿಟ್ಟು ಶಕ್ತಿಯನ್ನು ತೋರಿಸು. ತಾಗು, ಹೊಡೆ, ಒಡ್ಡು" ಅಣ್ಣನು ನುಡಿದನು. "ನೃಪತಿ, ನಿನ್ನ ಆಜ್ಞೆಯನ್ನೇಕೆ ಮೀರುವುದು. ಈ ಕಡೆಗೆ ಚಿತ್ತವಿಡು" ಒಂದನ್ನು ಹೊಡೆದಾಗ, ಅದನ್ನು ಒಡ್ಡಿ ತಡೆದುಕೊಂಡು, ಅಣ್ಣನಿಗೆ ಎರಡೇಟು ಹೊಡೆದು ತನ್ನ ಬಲವನ್ನು ತೋರಿಸಿದನು. "ಭಳಿರೆ, ಸಾಹಸಿ ನೀನು!" ಎಂದ ಅಣ್ಣನು ಆ ಎರಡು ಘಾಯಗಳನ್ನೂ ತಪ್ಪಿಸಿಕೊಂಡು ನಾಲ್ಕು ಬಾರಿ ಹೊಡೆದನು. ತನ್ನ ಕೋಲಿನಿಂದ ಆ ನಾಲ್ಕನ್ನೂ ತಪ್ಪಿಸಿಕೊಂಡು ತಮ್ಮನು ಅಣ್ಣನ ಮೇಲೆ ಎಂಟು ಪೆಟ್ಟುಗಳನ್ನು ಬೀಸಿ ಹೊಡೆದನು. "ಜೀವುರೆ ಮಲ್ಲ!" ಅಣ್ಣನು ತಮ್ಮನನ್ನು ಹುರಿದುಂಬಿಸಿ, ಎಂಟು ಘಾಯಗಳನ್ನೂ ತಪ್ಪಿಸಿಕೊಂಡು ಮತ್ತೆ ಹದಿನಾರು ಹೊಡೆದನು. ಆ ವೀರನಾದ ತಮ್ಮ ಅವುಗಳನ್ನು ತಪ್ಪಿಸಿಕೊಂಡು, ಅಣ್ಣನ ಮೇಲೆ ಮೂವತ್ತೆರಡು ಬೀಸಿದನು. ಹೀಗೆ ಮೊದಲು ಇಮ್ಮಡಿಯಾಗಿ ಹೆಚ್ಚುತ್ತಿದ್ದ ಪೆಟ್ಟುಗಳು, ಮತ್ತೆ ಮುಮ್ಮಡಿ, ನಾಲ್ಮಡಿಯಾಗಿ ಹೊಡೆದಾಡಿದರು. ತಲೆಗೆ, ಕಾಲಿಗೆ, ಕೊರಳಿಗೆ, ಎಡಬಲ ಬದಿಗಳಿಗೆ, ತೋಳು ತೊಡೆಗಳಿಗೆ, ಒಂದೇ ಖಡ್ಗವು ಹಲವು ರೂಪಾದಂತೆ ತಮ್ಮನು ಚಳಚಳನೆ ಹೊಡೆದನು. ಸುಳಿಗಾಳಿಯಂತೆ ಮೈಯನ್ನು ಹೊಳೆಯಿಸಿ ಖಡ್ಗದ ಹೊಡೆತಗಳನ್ನು ಖಡ್ಗಗಳಲ್ಲೇ ತಡೆದು ಅಣ್ಣನು ತಮ್ಮನನ್ನೂ ಹೊಡೆದನು. ತಮ್ಮನು 'ಎಲೆ ವೀರ ಒಡ್ಡು' ಎಂದು ಅಣ್ಣನನ್ನು ಹೊಡೆದನು. "ಅಣ್ಣಾಜಿ, ನೀನೆಂತು ಕಲಿಸಿದೆಯೋ ಅಂತೇ ಒಡ್ಡಿಕೊಂಡುದನ್ನು ನೋಡು" ಎಂದು ತಮ್ಮನೂ ತನ್ನ ಕೈಚಳಕ ತೋರಿದನು. ಮೋಸದಲ್ಲಿ ಒಂದನ್ನಾದರೂ ತಾಗಿಸಬೇಕೆಂದು ಅಣ್ಣನು ಆಯುಧವನ್ನು ಝಳಪಿಸಿ ಮುಂದಾದನು. ತನ್ನ ಬೀಸುಗಳನ್ನು ಸಾವಿರ ಮುಖಗಳಲ್ಲಿ ತಡೆದ ತಮ್ಮನನ್ನು ಕಂಡು, "ಲೇಸು, ಲೇಸು, ಅಭ್ಯಾಸಿ" ಎಂದೊಡನೆ ನುಡಿದನು. ಅಣ್ಣನು ಕಾಲಿಗೆ ಬೀಸಿದರೆ, ತಮ್ಮನು ಕಾಲನ್ನೊಡ್ಡದೆ ಮೇಲಕ್ಕೆ ನೆಗೆದು ತಪ್ಪಿಸಿದನು. ಮೇಲ್ಗಡೆಯಿಂದ ಇಳಿವಾಗ ಹೊಡೆದರೆ, ಅದನ್ನು ಕಾಲಿನ ಕೊನೆಯನ್ನೊಡ್ಡಿ ತಪ್ಪಿಸಿಕೊಂಡನು. ಆಗ ಅಣ್ಣನು,

ತಮ್ಮನನ್ನು ತಕ್ಕೈಸಿಕೊಂಡು ತನ್ನ ಕೊರಳ ಪದಕವನ್ನೇ ಅವನ ಕೊರಳಿಗೆ ಹಾಕಿದನು. ತಮ್ಮನಾಗ ಆ ಅಣ್ಣನ ಅಡಿಗಳಿಗೆರಗಿದನು.

ನಾಲ್ವರ ಮಹಾ ಸಾಧನೆ ನಡೆಯಿತು.

ಒಡಹುಟ್ಟಿದವರೆಲ್ಲ ನೋಡುತ್ತಿದ್ದರು. ನೋಡಿದ ಮೇಲೆ ಇಬ್ಬರನ್ನೂ ಕೊಂಡಾಡಿ ಸತ್ಕರಿಸಿದರು. ''ನೀವು ನಮ್ಮ ಸಾಧನೆಯನ್ನು ನೋಡಿ, ನೀವಿನ್ನು ಕೈಮಾಡಿಕೊಳ್ಳಬೇಡಿ'' ಎಂದು ಹೇಳಿದರು. ವಿನಯವನ್ನು ತಪ್ಪದ ನುಡಿ, ಜೋಕೆಯು ತಪ್ಪದ ನಡತೆ, ಕೋಪವುಂಟಾಗದ ಒಡ್ಡು — ಪೆಟ್ಟು, ದೇಹಕ್ಕೆ ತಾಗದ ಘಾಯ, ಭಯವಾಗದ ಹೃದಯಗಳಿಂದ ಅವರು ತಮ್ಮೊಳಗೆ ವಿನೋದ ಮಾಡಿಕೊಂಡರು. ''ವೀರ, ವಿಕ್ರಮ, ಸಾಹಸಿ, ಅಭ್ಯಾಸಿ, ಶೂರ, ಲೇಸು ಲೇಸು'' ''ಆರೈಕೆ, ಸ್ವಾಮಿ ದೇವ, ಅಣ್ಣಾಜಿ, ಪ್ರಭುವೆ'' ಇಂಥ ಮಾತುಗಳು ಅಲ್ಲಿ ಶೋಭಿಸುತ್ತಿದ್ದುವು. ''ಆರೆ, ಭಾಪುರೆ, ಪುರುನಾಥು, ಗುರುನಾಥು, ಶ್ರೀ ಹಂಸನಾಥು, ಹೋ'' ಎಂದು ಗುಲ್ಲು ಎದ್ದಿತು. ಕಟಿಪಣಿ ಕಟಿಪಟಿ ಢಣಢಣ, ಝುಣಝುಣ, ಎಲ್ಲೆಲ್ಲೂ ಇಂಥ ನಾದಗಳೇ ಹಬ್ಬಿದುವು.

ಗಗನಕ್ಕೆ ಹಾರುವರು. ಒಡನೆ ಭೂಮಿಗೆ ಬಂದು ಬೊಗರಿಯಂತೆ ಒಲೆದಾಡುವರು. ತೆಗೆದು ಎಂಟು ದಿಕ್ಕಿಗೆ ಸಿಡಿದರು. ಆಗಲೆ ಒಬ್ಬರಿಗೊಬ್ಬರು ತಾಗಿ ನಗುತ ಸಾಧನೆ ಮಾಡಿದರು. ಅಟ್ಟಿದಾಗ ಅಂಜಿದಂತೆ ಓಡಿದರು. ಅಣ್ಣಂದಿರಿಗೆ ಅಟ್ಟಹಾಸ ಮಾಡುವೆನೆಂದು, ಹೊಳೆಯ ಈ ತಡಿಯಿಂದ ಆಚೆವರೆಗೂ ನೆನೆದು ನಗುವರು. ಒಬ್ಬರನ್ನೊಬ್ಬರು ಬೆನ್ನಟ್ಟಿದರು. ನೀರನ್ನು ದಾಟಿದರು.

''ಅರಸುಗಳ ಅಂಗಗಳೇ ಬನ್ನಿ''

''ಯುದ್ಧವೆ? ಬಂದೆವು''

ಮರಿ ಸಿಂಹಗಳಂತೆ ಈಚೆಗೆ ಬಂದರು. ಖಡ್ಗ ಧರಿಸಿ, ಬಳಸಿ ಎದುರಿಗೆ ಬಂದು, ಸುಂಟರ ಗಾಳಿಯಂತೆ ಒದಗಿ ನಿಂತರು. ಸುತ್ತಾಡಿದರು. ಜಿಂಕೆಗಳಂತೆ ಏಳೆಂಟು, ಹದಿನಾರು ಸಾಲಾಗಿ ಹಾರಿದರು. ತೊಡೆ, ತೋಳು, ಕಾಲು, ಕೊರಳು, ಬೆನ್ನು, ತಲೆ, ನಡುಗಳು — ಎಂದು ಎಲ್ಲ ಅಂಗಗಳ ಅತ್ತಿತ್ತ ಮುಗಿದು, ಅಡಗಿಸಿದರು. ಮೇಣದ ರೂಪೋ ಮೈಯೋ ಎಂಬಂತೆ ನಿಮಿರಿಸಿದರು. ಅಡ್ಡವಾಗಿ ದಟ್ಟಿಯನ್ನು ಮಡಚುವಂತೆ ಮೈಮುಡಿದು ಹಾರಿದರು. ಹೊಂತಕಾರಿಗಳಾದ ಅವರು ಒಮ್ಮೊಮ್ಮೆ ಹಿಂದಕ್ಕೆ ಮುಂದಕ್ಕೆ ಮೈ ಹೊಳೆಯುವಂತೆ ಉರುಳಿದರು.

ಹಿಂಡನ್ನು ಕಲಕಿ, ಹೆಣ್ಣಾನೆಯನ್ನು ಓಡಿಸಿ, ಹಿಡಿಯುವ ಗಂಡಾನೆಯಂತೆ ಗಾಳಿಯನ್ನು ಸೀಳಿಕೊಂಡು ಸಾಗಿದರು. ಅವರು ಗರ್ವದಿಂದ ಗಗನಕ್ಕೆ ಭೂಮಿಗೆ ಹೊಡೆದ ಚೆಂಡಿನಂತೆ ಏರಿ ಇಳಿಯುತ್ತಿದ್ದರು. ಒಬ್ಬನು ಆಕಾಶಕ್ಕೆ ನೆಗೆದಾಗ, ಇನ್ನೊಬ್ಬನು ಆವನನ್ನು ಆಧರಿಸಬೇಕೆಂದು ಕೈಯೆತ್ತಿದನು. ಅಷ್ಟರಲ್ಲಿ ಅಲ್ಲಿ ಡೊಂಬಿ ಎದ್ದಂತೆ ಆಯಿತು. ''ಹಿಡಿ ಹಿಡಿ ಸಿಕ್ಕನು ಸಿಕ್ಕನು'' ಅವರು ಆಕಾಶಕ್ಕೆ ಹಾರಿದರು. ಆಕಾಶದಿಂದ ಬೀಳುತ್ತ ಕೂಡಲೇ ಮಿಂಚುಳ್ಳಿ ಹಕ್ಕಿಯಂತೆ ಹಿಂತಿರುಗಿದರು. ಪೊಟ್ಟನೆ ಆಕಾಶಕ್ಕೆ ಹಾರಿದವನನ್ನು ಹಿಂಬಾಲಿಸಿ ಪುನಃ ಹಿಂದಕ್ಕೆ ಇಳಿಯುವಂತೆ ಮಾಡಿ, ತಾವು ಆಕಾಶಕ್ಕೆ ಏರುವರು. ಥಕ್ಕನೆ

ನೆಲಕ್ಕೆ ಇಳಿಯುವವನನ್ನು ಹಿಂಬಾಲಿಸಿ, ಅವನ ದಟ್ಟಿಯನ್ನು ಹಿಡಿದೆಳೆದು ಎತ್ತುವರು. ಇವರು ಭೂಮಿಯಲ್ಲಿ ಹೊಳೆದಾಡಿ ಮೇಲಕ್ಕೆ ಹಾರಿ, ಸುಳಿಯುವಾಗ ಭೂಚರರೋ ಖೇಚರರೋ ಎಂಬ ಯೋಚನೆಯು ನೋಡುವವರಿಗೆ ಆಯಿತು. ಆ ಲಂಘನ, ಆ ಚಮತ್ಕಾರ, ಆ ಎಚ್ಚರ; ಆ ಅಂಗ ಲಘುತೆ; ಇವನ್ನೆಲ್ಲ ನೋಡಿದರೆ, ಅವರು ದೇವ ಕುಮಾರರೋ ರಾಜಕುಮಾರರೋ ಎಂಬಂತಿದ್ದರು. ತಮತಮಗೆ ಒದಗಿ ಬಂದಿರುವ ಲಂಘನಕ್ಕೆ, ಬಿನ್ನಾಣಕ್ಕೆ, ತಮ್ಮಲ್ಲೇ ತಾವು ಉಬ್ಬಿ ನಗುತ್ತ ಮೆಚ್ಚುತ್ತ ಮೆರೆದರು.

ಹಿರಿಯರ ಏಳಿಗೆಗೆ, ಕಿರಿಯರು ನಿವಾಳಿಯನ್ನಿಟ್ಟು ಅಡಿಗೆರಗಿ ಮನ್ನಿಸಿದರು. ಹಿರಿಯರು ಕಿರಿಯರಿಗೆ ಮೆಚ್ಚಿ ತಮ್ಮ ಆಭರಣಗಳನ್ನು ಅವರಿಗಿತ್ತು ಮನ್ನಣೆ ಮಾಡಿದರು. ಸವತಿ ತಾಯಿಗಳ ಮಕ್ಕಳೆಂಬ ಭೇದ ಅವರಿಗೆ ಎಳ್ಳಷ್ಟಾದರೂ ಇಲ್ಲ. ವಿನಯಂ ರಾಜಪುತ್ರೇಭ್ಯಂ – ಎಂಬುದು ಅವರ ನೀತಿ. ಮೈಯ್ಯ ಸಾಧನೆ, ಮಲ್ಲಸಾಧನೆ, ಸಿಂಗಾಡಿ ಬಿಲ್ಲ ಸಾಧನೆಗಳನ್ನು ಕೆಲವರು; ಬಲ್ಲೆಹ, ಲೌಡಿ, ಕಠಾರಿ, ಮುಪ್ಪಿಡಿ, ಗದೆ – ಮುಂತಾದ ಆಯುಧಗಳ ಸಾಧನೆಯನ್ನೂ ಕೆಲವರು ಮಾಡಿ ಮೆರೆದರು. ಚಂದ್ರಾಯುಧ, ವಜ್ರಾಯುಧ, ರವಿಹಾಸಾಯುಧ, ಚಂದ್ರಹಾಸಾಯುಧಗಳಲ್ಲಿ ಇಬ್ಬರಿಬ್ಬರು ಚಂದ್ರಾದಿತ್ಯರಂತೆ ಸಾಧನ ಮಾಡಿ ತೋರಿಸಿದರು.

ಇವರ ಸೇವಕರು ಹರಿಗೆ, ಕೊರಡು, ಸಬಳಗಳಲ್ಲಿ ತಮ್ಮ ಸಾಹಸವನ್ನೂ ಸಾಧನೆಯನ್ನೂ ತೋರಿಸಿದಾಗ ರಾಜಕುಮಾರರೆಲ್ಲರೂ ನೋಡಿದರು. ಭರತಚಕ್ರವರ್ತಿಯ ಮಕ್ಕಳು ತಾವೆಂಬ ಘನತೆಗೆ ತಕ್ಕಂತೆ ನಡೆದು ಕೊಂಡರು. ಪೂರ್ಣ ಚಕ್ರಿಯ ಮಕ್ಕಳಾದ ಈ ಕುಮಾರರು ಅರ್ಧ ಚಕ್ರಿಗಳು ಎನ್ನುವಂತೆ ಗಿರಿಗಳನ್ನು ಎತ್ತಿದರು. ವಜ್ರಮಯ ದೇಹಿಗಳಾದ ಅವರಿಗೆ ಮೊರಡಿ—ಮರಗಳನ್ನು ಎತ್ತುವುದೊಂದು ದೊಡ್ಡಿತೆ?

ಹೊತ್ತು ಮೀರಿದರೂ ಸಾಧನೆಯನ್ನು ಮಾಡುತ್ತಿರುವ ದೊರೆಗಳ ಹತ್ತಿರವಿದ್ದ ಊಳಿಗದವರು, ಅವರಿಗಂಜಿ ರವಿಯು ಗಗನಕ್ಕೇರಿದನೆಂದು ತೋರಿಸಿದರು. ಸಾಕು ಹೊತ್ತಾಯಿತೆಂದು ಎಡಬಲಕ್ಕೆ ಜಾರಿ, ಆ ಕುಮಾರರು ಮೈಯ್ಯನ್ನು ಮುರಿದು, ಆಕಾಶಕ್ಕೆ ಹಾರಿ, ತಮ್ಮ ಬಾಣಕ್ಕೆ ಬಾಣವನ್ನು ಜೋಡಿಸಿ, ಜಿನನಿಗೆ ಏಕಚಿತ್ತದಿಂದ ಮಣಿಸಿದರು. ಸಾಧನೆ ಮಾಡಿದ ಅವರ ತಿಲಕ ಕಲಕಿಯೇ ಹೋಯಿತು. ಮೈ ಬೆವರಿತು. ಮೈಗೆ ಒಂದಿಷ್ಟು ಮರಳೂ ಅಂಟಿಕೊಂಡಿತು. ಅದನ್ನು ನೋಡಿದ ಅವರು, ಒಬ್ಬರಿಗೊಬ್ಬರು ಬಳಲಿದೆವು ಎಂದುಕೊಂಡರು. ಊಳಿಗದವರು ಆಯುಧಗಳನ್ನೆಲ್ಲ ತೆಗೆದುಕೊಂಡು ಅಣಿ ಮಾಡಿ ಇಟ್ಟರು. ಆಮೇಲೆ ಅವರೆಲ್ಲರೂ ಮರಿಯಾನೆಗಳು ನೀರಾಟಕ್ಕೆ ಹೋಗುವಂತೆ ಹೊಳೆಗೆ ಇಳಿದು ತಿಳಿನೀರಿನಲ್ಲಿ ಜಲಕೇಳಿ ಆಡಿದರು. ಮತ್ತೆ ಸಿಂಗರಿಸಿಕೊಂಡು ಜಿನಸ್ತುತಿ ಮಾಡಿ ಆತ್ಮನ ಉತ್ತಮ ಧ್ಯಾನವನ್ನೂ ಮಾಡಿದರು. ಆನಂತರ ಬುತ್ತಿಯ ಅನ್ನವನ್ನು ಆರೋಗಿಸಿ ಆ ಹೊಳೆಯ ಬದಿಯ ಬನಕ್ಕೆ ನಡೆದರು.

# ೧೧

## ವಿದ್ಯಾಗೋಷ್ಠಿ

ಬನದ ತಂಪು ನೆರಳಿನಿಂದಲೂ ತಂಗಾಳಿಯಿಂದಲೂ ರಾಜಕುಮಾರರೆಲ್ಲರೂ ಒಂದೆಡೆಯಲ್ಲಿ ನಿದ್ರೆಗೈದರು. ಜೋಕೆಯಲ್ಲಿ ''ಜಿನಸಿದ್ಧ ಗುರುವೆ ನಿರಂಜನಸಿದ್ಧ'' ಎಂದು ಎದ್ದರು. ಆಗ ಸೇವಕರು ಗಿಂಡಿಯ ನೀರನ್ನಿತ್ತರು. ಗಿಂಡಿಯ ನೀರಿನಿಂದ ಮೋರೆ ತೊಳೆದ ಅವರು ಪನ್ನೀರ ಚಿಮ್ಮಿಸಿಕೊಂಡು, ಪಚ್ಚೆ ಕರ್ಪೂರವನ್ನು ಕಣ್ಣಿಗೆ ಹಚ್ಚಿಕೊಂಡರು. ಅನಂತರ ಸೇವಕರು ವೀಳೆಯದ ಕರಂಡಗೆ ತೆಗೆದುಕೊಟ್ಟರು. ಅವರು ಸೇವಕರಿತ್ತ ವೀಳೆಯವನ್ನು ಸ್ವೀಕರಿಸಿ, ಕನ್ನಡಿಯಲ್ಲಿ ನೋಡಿ, ತಂಗಾಳಿಗೆ ಮೈಯನ್ನು ಒಪ್ಪಿಸುತ್ತಿದ್ದರು. ಆಗಲೇ ಅವರು ಮೆಲ್ಲನೆ ಸಂಗೀತ ಕೇಳಿಗೆ ತೊಡಗಿದರು. ಅವರು ಕಾಲವರಿತು, ಕಟ್ಟಳೆಗಳನ್ನು ಅರಿತು. ಗೌಳಶ್ರೀ ರಾಗಗಳಿಂದಲೂ ಮಾಳವಶ್ರೀಯೆಂಬ ರಾಗದಿಂದಲೂ ಆಲಾಪಗಳನ್ನು ಮಾಡಿದರು. ಅವರು ತೊಟ್ಟ ಹೂವಿಗೂ ತೊಡೆದುಕೊಂಡ ಜವಾದಿಗೂ. ಬಳಿದುಕೊಂಡ ಗಂಧಲೇಪನಗಳ ಪರಿಮಳಕ್ಕೂ, ಕೆಂಪಾದ ಬಾಯಿಯ ಪರಿಮಳಕ್ಕೂ, ತುಂಬಿಗಳು ಮುತ್ತಿ ಅವರ ಆಲಾಪನೆಗೆ ಶ್ರುತಿ ನೀಡಿದುವು.

ಏಳು ಸ್ವರಗಳಲ್ಲಿ ಮೂರು ಗ್ರಾಮಗಳಲ್ಲಿ ಅರವತ್ತು ನಾಲ್ಕು ಮತ್ತು ನೂರೆಂಟು ರಾಗಗಳಲ್ಲಿ ಭರತ ಶಾಸ್ತ್ರದ ನೆಲೆಯನ್ನು ತಿಳಿಯುವುದು ಭರತ ಚಕ್ರಿಯ ಮಕ್ಕಳಿಗೆ ಗಹನವಲ್ಲ. ಮೇಘರಂಜಿ ರಾಗವನ್ನು ಒಬ್ಬನು ಆಲಾಪಿಸಿದಾಗ ಆ ಬೇಸಗೆಯಲ್ಲಿ ಕೂಡಲೇ ಮೋಡ ಕವಿದು, ಮಳೆ ಸುರಿಯಲು ಅದನ್ನು ಕಂಡು, ಅವನು ಮೇಘರಂಜಿಯನ್ನು ನಿಲ್ಲಿಸಿದನು. ಕಲ್ಲಿನ ಮೇಲೆ ಕುಳಿತಿದ್ದ ಒಬ್ಬನು ಗುಂಡಾಕ್ರಿಯವನ್ನು ಮೆಲ್ಲನೆ ಆಲಾಪಿಸುತ್ತಿರುವಾಗ. ಕಲ್ಲುಕರಗಿ ನೀರಾಗಿ ಹರಿಯಿತು. ಅಂದ ಮೇಲೆ ಮೃದುವಾದ ಹೃದಯವು ಕರಗದಿರುವುದೆ? ಒಬ್ಬನು ಹಿಂದುವರಾಳಿಯನ್ನು ಆಲಾಪಿಸಿದಾಗ ಆ ವನವು ಹಿಂದುಳಿಯದೆ ಒಂದು ಘಳಿಗೆಯಲ್ಲೇ ಎಲೆ ಚಿಗುರಿ, ಹೂಮಿಡಿಹಣ್ಣುಗಳಿಂದ ಕೂಡಿಕೊಂಡಿತು. ಇನ್ನೊಬ್ಬನು ನಾಗವರಾಳಿಯನ್ನು ಆಲಾಪಿಸಲು ಆಗಲೇ ಸರ್ಪಗಳು ನೆರೆದುಬಂದು ಆ ಸಕಲಾಗಮಜ್ಞರ ಸಮ್ಮುಖದಲ್ಲಿ ಹೆಡೆಯೆತ್ತಿ ಕೇಳುತ್ತಿದ್ದವು. ಕೂಡಲೇ ಮತ್ತೊಬ್ಬ ಗರುಡಗಾಂಧಾರಿಯನ್ನು ಹಾಡಿದರೆ ಸರ್ಪಗಳೆಲ್ಲ ಕಂಡಕಡೆಗೆ ಹರಿದು ಓಡಿದುವು. ಆಕಾಶದಲ್ಲಿ ಹಾರಾಡುತ್ತಿದ್ದ ಹದ್ದುಗಳೆಲ್ಲ ಮೈ ನೀಡಿ ಇಳಿದು ಬಂದು ಕೇಳಿದುವು. ಆ ವನದಲ್ಲಿದ್ದ ಕೋಗಿಲೆ, ಗಿಳಿ, ನವಿಲು ಮುಂತಾದ ಸೊಕ್ಕಿನ ಜೀವಿಗಳೆಲ್ಲ ದೇಹವನ್ನು ಮಿಸುಕಿಸಕದೆ ಕಿವಿಯೊಡ್ಡಿ ಕೇಳಿದುವು. ಅವರು ಸ್ವರಮಂಡಲದಲ್ಲಿ, ದಂಡಿಗೆಯಲ್ಲಿ ಕಿನ್ನರಿಯಲ್ಲಿ ತ್ರಿವಿಧ ವೀಣೆಯಲ್ಲಿ ತಮ್ಮ ಕೊರಳೂ ಬೆರಳೂ ಕೊಂಕದ ಹಾಗೆ ಒಂದಾಗಿ ಮುತ್ತಿನ ಸರವನ್ನು ಎತ್ತಿದಂತೆ ಹಾಡಿದರು. ಅವರ

ದನಿಯ ಇಂಪು, ರಾಗಗಳ ಸೊಂಪು ತಾನಗಳ ನುಣುಪು – ಇವುಗಳೆಲ್ಲ ಕೂಡಿರುವ ಪದಗಳ ಅಭಿವ್ಯಕ್ತಿಯನ್ನು ಇನ್ನೊಬ್ಬರು ನೆನೆಯಲಾರರು; ಹಾಡಲಾರರು ಎಂಬಂತೆ ಭರತೇಶ ಕುಮಾರರು ಸೊಬಗಿನಿಂದ ಹಾಡಿದರು.

ಕೇತಾರಗೌಳದ ಉತ್ತರಗೌಳ ಸಂಗೀತದಲ್ಲಿ, ಆದಿಜಿನನು, ಘಾತಿಕರ್ಮವನ್ನು ಗೆದ್ದ ಕಥೆಯನ್ನು ಅತ್ಯಂತ ಚಾತುರ್ಯದಿಂದ ಹಾಡಿದರು. ಬೋಧ ನಿಧಾನನಾದ ಪುರುದೇವನ ಉತ್ತಮ ಬೋಧನೆಗಳನ್ನು ಕಾಂಬೋಧಿ ರಾಗದಲ್ಲಿ ಪ್ರೀತಿಯಿಂದ ಹಾಡಿದರು. ಮಾಧುರ್ಯ ಪಡೆದ ಜಿನದೇವನ ದಿವ್ಯ ಧ್ವನಿಯನ್ನು ಮಾಧವಿರಾಗದಲ್ಲಿ ಹಾಡಿದರು. ಜನಸಿದ್ಧರನ್ನು ಶುದ್ಧವಾದ ರಾಗಗಳಲ್ಲಿ ಸಂಕೀರ್ಣವಾಗಿ ಹಾಡಿದರು. ಆ ಶುದ್ಧ ಸಂಕೀರ್ಣಕೋವಿದರು ವೃದ್ಧ ಸಂಪತ್ತುಳ್ಳ ಯೋಗಿಗಳನ್ನು ಹಾಡಿದರು. ಆರು ದ್ರವ್ಯಗಳನ್ನು, ಏಳು ಅಂಗತ್ವಗಳನ್ನು, ಒಂಬತ್ತು ನವ್ಯ ಪದಾರ್ಥಗಳನ್ನು ಹಾಡಿ, ಇವುಗಳಲ್ಲಿ ತಮಗೆ, ಆತ್ಮನು ಸೇವ್ಯನೆಂದುಕೊಂಡು, ಚಿತ್‌ದ್ರವ್ಯವನ್ನು ಮತ್ತೆ ಹಾಡಿದರು.

"ಕಲ್ಲಿನಲ್ಲಿ ಚಿನ್ನ, ಕಟ್ಟಿಗೆಯಲ್ಲಿ ಬೆಂಕಿ, ಹಾಲಿನಲ್ಲಿ ತುಪ್ಪವಿರುವಂತೆ. ದೇಹದಲ್ಲಿ ಆತ್ಮನಿರುವನೆಂದು ಆತ್ಮ ತತ್ವವನ್ನು ಜನರು ತಿಳಿಯುವಂತೆ ಹಾಡಿದರು. ಮೇಣದ ಕರುವನ್ನು ಜೋಕೆಯಿಂದ ಶೋಧಿಸಿದಾಗ ಮೂಷೆಯ ಆಕಾರವನ್ನು ಹೊಂದುವಂತೆ ಆಕಾಶದಂಥ ಆತ್ಮನು ಪುರುಷಾಕಾರದಲ್ಲಿ ಮೈಯೊಳಗಿರುವನೆಂದು ಹಾಡಿದರು. ಆತ್ಮನು ನೀರಿನಿಂದ ನೆನೆಯನು, ಕಿಚ್ಚಿನಿಂದ ಬೇಯನು, ಖಡ್ಗಧಾರೆಗೆ ಸಿಗಲಾರನು. ನೀರು, ಕಿಚ್ಚು, ಆಯುಧಗಳ ರುಜಿರೋಗಗಳ ಬಾಧೆ ಶರೀರಕ್ಕಲ್ಲದೆ ಆತ್ಮನಿಗಲ್ಲವೆಂದು ಎತ್ತಿ ಹಾಡಿದರು. ಒಡಲು ಕೆಡುವುದು, ಆತ್ಮನು ಕೆಡಲಾರನು; ಶರೀರವೆ ಜಡರೂಪು, ಆತ್ಮನು ಚಿತ್‌ರೂಪನು. ಈ ಒಡಲು ಭೂಮಿಯಂತೆ, ಆತ್ಮನು ಆಕಾಶದಂತೆ. ಹೇಳಲು ಅನ್ಯೋನ್ಯ ವಿರೋಧವಾಗಿದೆ; ಆಕಾಶ ಬಯಲಾದರೆ ಆತ್ಮನು ಮತ್ತಷ್ಟು ಬಯಲಾಗಿರುವನು. ಅದು ಪುರುಷಾಕಾರವಲ್ಲ, ಅದರ ಅರಿವೂ ಇಲ್ಲ. ಆಕಾಶಕ್ಕೂ ಆತ್ಮನಿಗೂ ಭೇದ ಅಷ್ಟಲ್ಲದೆ ಲೋಕದಲ್ಲಿ ಇನ್ನಾವ ಭೇದವೂ ಇಲ್ಲ. ಅಂಬರದಂತೆ ಮೈಯಿಲ್ಲ, ಚಿದ್ರೂಪು ಮತ್ತೆ ಇಂಬಾದ ಪುರುಷಾಕಾರವೆಂಬ ಚಿಹ್ನೆಗಳು ಮೂರುಂಟು. ಆದರಿಂದಲೇ ಚಿದಂಬರ ಪುರುಷನೆಂಬ ಹೆಸರಾಯಿತು. ಶರೀರವು ಸೆರೆಮನೆ. ಮುಪ್ಪು ಜನನ ಮರಣಗಳ ಸಂಕೋಲೆ. ಇವುಗಳ ಘನವಾದ ಬಾಧೆಯಲ್ಲಿ ಆತ್ಮನು ತನ್ನ ಘನತೆಯನ್ನು ತಿಳಿಯದೆ ನೋಯುತ್ತಿರುವನು. ಅಯ್ಯೋ!"

'ಆತ್ಮನು ಮೂರು ಜಗದಷ್ಟು, ಎಡೆಯಲ್ಲಿ ಮೂರು ಜಗವನ್ನೂ ಕಾರಣವಿಲ್ಲದೇ ಎತ್ತುವಂಥ ಶಕ್ತಿಯಾಗಿದ್ದರೂ, ಬೀಜದಲ್ಲಿ ವೃಕ್ಷವಿರುವಂತೆ, ಈ ಜಡ ದೇಹದಲ್ಲಿ ಅಡಗಿರುವನು. ಮೂರು ಜಗದ ಒಳಗೂ ಹೊರಗೂ ಕಾಣುವನು, ತಿಳಿಯುವನು. ಆದರೆ ಅವನು ಕೋಟಿ ಸೂರ್ಯಪ್ರಕಾಶಕ್ಕೂ ಮಿಗಿಲಾಗಿರುವನು. ಆತ್ಮನು ಮೈಯೊಳಗಿದ್ದೂ ಮೈಯಿಲ್ಲದ ಸುಜ್ಞಾನವೇ ಮೈಯಾಗಿರುವನು. ಅವನು ಮೈಯನ್ನು ಸೋಂಕಿಯೂ, ಸೋಂಕದಂತೆ ಮೈಯಲ್ಲಿ ತುಂಬಿರುವನು, ಅಯ್ಯೋ ನೋಡಿ' ಎಂದು ಅವರು ಹಾಡಿದರು.

'ತಾವರೆಯ ನಾಳಕ್ಕೆ ಮೊದಲಿನಿಂದ ತುದಿಮುಟ್ಟ, ತುಂಬಿಕೊಂಡು ನೂಲು ಇರುವ ರೀತಿಯಿಂದ ಅಡಿಯಿಂದ ಮುಡಿಮುಟ್ಟ, ಜೀವನು ಮೈಯಲ್ಲಿ ತುಂಬಿರುವನು. ದಂಟಿನ ಮೊದಲಿನಿಂದ ತುದಿವರೆಗೆ ತುಂಬಿಕೊಂಡು ನೂಲು ಉಂಟು. ಬೇರೆ ಎಲೆಗಳಲ್ಲಿ ಇಲ್ಲ. ಅಂತೆ ಮಸ್ತಕದಿಂದ ಪಾದದವರೆಗೆ ಆತ್ಮನು ತುಂಬಿರುವನು. ಉಗುರು ಕೂದಲುಗಳಲ್ಲಿ ಮಾತ್ರ ಇಲ್ಲ, ಎಲ್ಲಿ ಚಿವುಟಿದರೆ, ಅಲ್ಲೆಲ್ಲ ನೋವನ್ನು ಅರಿತುಕೊಳ್ಳುವಂತೆ, ಆತ್ಮನು ತುಂಬಿರುವನು. ಉಗುರುಗಳನ್ನು ಚಿವುಟಿದರೆ ನೋವಿಲ್ಲ, ಅಲ್ಲಿ ಆತ್ಮನೂ ಇಲ್ಲ. ಬೆಳೆಯುವಾಗ ದಂಟು ಎಷ್ಟು ಹೆಚ್ಚಾಗುವುದೋ ಒಳಗಿದ್ದ ನೂಲು ಅಷ್ಟಕ್ಕೆ ಹೆಚ್ಚಾಗುವುದು. ಹೊಂದಿಕೊಂಡು, ಬಾಲತ್ವದಿಂದ ಯೌವ್ವನಕ್ಕೆ ಮೈ ಬೆಳೆದಷ್ಟು ಆತ್ಮನೂ ಹೆಚ್ಚಾಗುವನು. ಈ ನಾಳ, ಕಲ್ಮಷ, ಮುಳ್ಳು ಮುಂತಾದುವು ಬಿರುಸಾಗಿರುವುವು; ನೂಲು ಮಾತ್ರ ನಿರ್ಮಲವಾಗಿಯೂ ಮೃದುವಾಗಿಯೂ ಇರುವುದು. ಅಂತೆ, ಮೇಲೆ ತೊಗಲು ಎಲುಬು ನೆತ್ತರುಗಳ ದೇಹದೊಳಗೆ ಆತ್ಮನು ಉತ್ತಮನಾಗಿರುವನು' ಎಂದು ಅವರು ಹಾಡಿದರು.

'ಹೊರಗಿರುವುದು ಸಪ್ತಧಾತುವಿನ ಅಂಗ. ಈ ಮೈಯ್ಯ ಮರೆಯಲ್ಲಿ ಇನ್ನೆರಡು ಮೈ ಉಂಟು. ಹೊಳೆಯುವ ತೈಜಸ ತನುವೊಂದು, ಕಾರ್ಮಣ ತನುವೊಂದು —— ಹೀಗೆ ಆತ್ಮನಿಗೆ ಸೆರೆಮನೆಗಳು ಮೂರಾಗಿರುವುವು. ಏಳು ಧಾತುವಿನ ಅಂಗವನ್ನು ಔದಾರಿಕ ದೇಹವೆಂದು ಹೇಳುವರು. ಇದರ ಒಳಗಿರುವ ಕಾಳಕೂಟದಂಥ ಎರಡು ಅಂಗಗಳು ಎಂಟು ಕರ್ಮಾಳಿಗಳ ಸ್ವರೂಪವಾಗಿರುವುವು. ನರ, ಪಕ್ಷಿ, ಪಶು – ಎಂದು ಮುಂತಾಗಿ ಹಲವು ರೀತಿಯಲ್ಲಿ ಹೋಗುತ್ತಾ ಬರುತ್ತ ಇರುವುದೆ – ಔದಾರಿಕ ದೇಹ. ಮರಣವಾದರೂ ತೈಜಸ ಕಾರ್ಮಣ ದೇಹಗಳು ನಾಶವಾಗದೆ, ಆತ್ಮನ ಜೊತೆಯಲ್ಲೇ ಬರುವುವು. ಈ ದೇಹವು ನಾಶವಾಗಿ ಮತ್ತೊಂದು ಗರ್ಭಕ್ಕೆ ಹೋಗುವ ಹಾದಿಯಲ್ಲೂ ಎರಡು ಮೈ ಉಂಟು. ಹೋಗಿ ಸೇರಿದ ಗರ್ಭದಲ್ಲೂ ಮತ್ತೊಂದು ದೇಹವುಂಟು. ಹೀಗೆ ಮೂರು ಮೈಗಳು ಆತ್ಮನಿಗೆ ತಪ್ಪದು. ತೊಟ್ಟ ಮೈ ಜೋಹದಲ್ಲಿದ್ದರೆ ಬದುಕೆಂದು ಹೇಳುವರು. ಮೈಯನ್ನು ಬಿಟ್ಟರೆ ಮರಣವಾಯಿತೆಂದು ಹೇಳುವರು. ಒಂದು ದೇಹವನ್ನು ಬಿಟ್ಟು ಮತ್ತೊಂದು ಮೈ ಜೋಹವನ್ನು ತೊಟ್ಟುಕೊಂಡರೆ ಹುಟ್ಟಿದನೆಂದು ಮಾತಾಡಿಕೊಳ್ಳುವರು. ಮನೆಯಿಂದ ಮನೆಗೆ ಹೋಗುವಂತೆ ಆತ್ಮನು ತನುವಿನಿಂದ ತನುವಿಗೆ ತಾನು ಹೋಗುವನು. ಈ ಮೂರು ದೇಹಗಳನ್ನು ಹಿಡಿದಿರುವುದೇ ಸಂಸಾರ. ಈ ಮೂರು ದೇಹಗಳು ನಾಶವಾದರೆ ಮುಕ್ತಿ

''ತಿದಿಯಲ್ಲಿರುವ ಗಾಳಿಯನ್ನು ಒತ್ತಬಹುದಷ್ಟೆ. ತಿದಿಯು ಹರಿದು ಹೋದ ಮೇಲೆ ಒತ್ತಲಿಕ್ಕೆ ಆಗುವುದೆ? ಹತ್ತಿ ದೇಹದಲ್ಲಿರುವ ಆತ್ಮನಿಗೆ ಬಾಧೆಗಳಿವೆ. ಮೈಯನ್ನು ಒತ್ತಿ ಬಿಟ್ಟುಬಿಟ್ಟಾಗ ಬಾಧೆಯುಂಟೆ? ಇಲ್ಲ. ಕಡುಕಿಚ್ಚು, ಕೈದು, ಕಲ್ಲು ಮೊದಲಾದುವುಗಳ ಪೆಟ್ಟಿನಿಂದ ಔದಾರಿಕ ದೇಹವು ಕೆಡುವುದು; ಇವುಗಳಿಂದ ತೈಜಸ ಕಾರ್ಮಣ ದೇಹಗಳು ಕೆಡಲಾರವು. ಅವುಗಳು ಕೆಡುವುದು ಧ್ಯಾನಾಗ್ನಿಯಿಂದ ಮಾತ್ರ. ತೈಜಸ ಕಾರ್ಮಣ ದೇಹಗಳೆರಡು ಕೆಟ್ಟಾಗಲೇ ಆತ್ಮನಿಗೆ ಮುಕ್ತಿ. ತೈಜಸ ಕಾರ್ಮಣಕಾಯಗಳನ್ನು

ಕೆಡಿಸುವುದಕ್ಕೆ ಶ್ರೀ ಜಿನಭಕ್ತಿಯೇ ಯುಕ್ತಿ'' ಎಂದು ಭರತೇಶ ಕುಮಾರರು ಆ ವಿದ್ಯಾಗೋಷ್ಠಿಯಲ್ಲಿ ಹಾಡಿದರು. ಆ ಭಕ್ತಿಯಲ್ಲಿ ಭೇಧಭಕ್ತಿಯೆಂದೂ ಅಭೇಧಭಕ್ತಿಯೆಂದೂ ಉಂಟೆಂದು ಹೇಳಿ, ಆ ಭೇದಾಭೇದ ಭಕ್ತಿಗಳ ಲಕ್ಷಣವನ್ನು ಆದರದಿಂದ ಹಾಡಿದರು.

'ಜಿನದೇವನು ಸಮವಸರಣದಲ್ಲಿರುವನು, ಆ ಸಿದ್ಧರು ಅಮೃತ ಲೋಕದಲ್ಲಿರುವರು' ಎಂದು ಕ್ರಮವಾಗಿ ಬೇರೆ ಬೇರೆಯಾಗಿ ನೆಲೆಗೊಳಿಸಿ ಧ್ಯಾನಿಸಿದರೆ, ಅದನ್ನು ಜೈನಧರ್ಮದಲ್ಲಿ ಭೇದಭಕ್ತಿಯೆಂದು ಹೇಳುತ್ತಾರೆ. ಅದೇ ಆ ಜಿನಸಿದ್ಧರನ್ನು ಸಮವಸರಣದಿಂದಲೂ ಅಮೃತ ಲೋಕದಿಂದಲೂ ತೆಗೆದು ತನ್ನಲ್ಲಿರುವ ಆತ್ಮನಲ್ಲಿ ನೆಲೆಗೊಳಿಸಿ, ಓಜೆಯಿಂದ ಧ್ಯಾನಿಸುವುದೇ ಅಭೇದ ಭಕ್ತಿಯೆನಿಸುವುದು. ಇದು ಮುಕ್ತಿಗೆ ಬೀಜವಾಗಿದೆ. ಜಿನನನ್ನು ಬೇರೆಯಾಗಿಟ್ಟು ಕಂಡರೆ, ಅದು ಭೇದಭಕ್ತಿಯಾಯಿತು. ಆ ಜಿನನನ್ನು ಬೇರೆಯಾಗಿ ಇಡದೆ, ತನ್ನ ಆತ್ಮನಲ್ಲಿ ಅನುಗೂಡಿಸಿ ಕಂಡರೆ, ಅದು ಅಭೇದ ಭಕ್ತಿಯಾಯಿತು ಇದು ಆದಿಜಿನನ ವಾಕ್ಯವೇ ಆಗಿದೆ' ಎಂದು ಅವರು ಹಾಡಿದರು. ಧ್ಯಾನದ ಅಭ್ಯಾಸ ಕಾಲದಲ್ಲಿ ಮೊದಲು ಭೇದಭಕ್ತಿಯನ್ನು ಆದರಿಸುವುದು ಉತ್ತಮ. ಮತ್ತೆ ಭೇದವಿಲ್ಲದ ಭಕ್ತಿಯಲ್ಲಿ ನಿಂತರೆ, ಅದು ಅಮೃತಕ್ಕೆ ಹಾದಿಯಾಗುವುದು. ಜಿನನಂತೆ, ಸಿದ್ಧರಂತೆ ತನ್ನ ಆತ್ಮನೂ ಪರಿಶುದ್ಧನೆಂದು ಯಾವಾಗಲೂ ಧ್ಯಾನಿಸುವುದು – ಜಿನಸಿದ್ಧ ಭಕ್ತಿ ಇದು ನಿಶ್ಚಯದ ರತ್ನತ್ರಯವಾಗಿದೆ. ಶಿಲೆ ಮೊದಲಾದುವನ್ನು ಜಿನಮುದ್ರೆಗಳಾಗಿ ಮಾಡಿ, ತಾನು ಅದನ್ನು ಭಕ್ತಿಯಿಂದ ಅರ್ಚಿಸುವುದು ಭೇದಭಕ್ತಿಯಾದರೆ ದೃಢಚಿತ್ತದಿಂದ ತನ್ನಾತ್ಮನನ್ನೇ ಜಿನನೆಂದು ಕಾಣುವುದು ಅಭೇದ ಭಕ್ತಿ

''ರಕ್ತ ಮಾಂಸ ಚರ್ಮಮಯವಾಗಿರುವ ಕೆಚ್ಚಲಲ್ಲಿರುವ ನಿರ್ಮಲವಾದ ಹಾಲಿನಂತೆ, ಕರ್ಮ ಕಷಾಯದಿಂದ ದೊರೆತಿರುವ ಕಷ್ಟದ ದೇಹದಲ್ಲಿರುವ ಆತ್ಮನು ನಿರ್ಮಲನಾಗಿರುವ''ನೆಂದು ಅವರು ಹಾಡಿದರು. ''ಕಟ್ಟಿಗೆಯಲ್ಲಿರುವ ಬೆಂಕಿಯನ್ನು ಹೊಸೆದರೆ, ಅದು ಕಟ್ಟಿಗೆಯನ್ನೇ ಸುಡುವುದು. ಅದರಂತೆ ನಿಷ್ಠುರವಾದ ಕರ್ಮದಲ್ಲಿರುವ ಆತ್ಮನನ್ನು ಧ್ಯಾನಿಸಿದರೆ ಆ ನಿಷ್ಠೆಯ ಆತ್ಮನೇ ಕರ್ಮಗಳನ್ನು ಸುಡುತ್ತಾನೆ. ದಶವಾಯುಗಳನ್ನು ಗೆದ್ದು, ಪ್ರಾಭೃತ ಶಾಸ್ತ್ರದ ಕುಶಲತೆಯನ್ನು ತಿಳಿದು, ಧ್ಯಾನದಲ್ಲಿ ಕಣ್ಣು ಮುಚ್ಚಿ, ಮೂರು ದೇಹಗಳೂ ಬೇರೆಯೆಂದು ನೋಡಿದರೆ, ಕರ್ಕಶವಿಲ್ಲದೆ ಆತ್ಮನು ತೋರುವನು. ನೇರವಾಗಿ ಹೇಳುವುದಾದರೆ, ಪ್ರಾಣವಾಯುವನ್ನು ನಡುನೆತ್ತಿಗೆ ಏರಿಸಿ ನಿಲ್ಲಿಸಿದಾಗ, ಕತ್ತಲೆಯು ಮಾಯವಾಗಿ, ತಿಂಗಳ ಬೆಳಕಿನ ಪುತ್ಥಳಿಯಂತೆ ಆತ್ಮನು ಕಾಣುವನು. ಕೆಲವರಿಗೆ ಈ ವಾಯುವಿನ ಅಭ್ಯಾಸವಿಲ್ಲದಿದ್ದರೆ, ಅವರ ಧ್ಯಾನವು ನಿಂತುಹೋಗುವುದು. ಆದ್ದರಿಂದ ದಶವಾಯುಗಳ ವಿಚಾರವನ್ನು ಚೆನ್ನಾಗಿ ತಿಳಿದು, ಗಾಳಿಯನ್ನು ಗೆದ್ದು, ಕಣ್ಣು ಮುಚ್ಚಿ ಧ್ಯಾನಿಸಿದರೆ ತಳತಳಿಸುವ ಆತ್ಮನು ಮೈಯೊಳಗೇ ಕಾಣುವನು. ಆಗ ಕಾರ್ಮಣ ತೈಜಸ ದೇಹಗಳು ನಾಶವಾಗುತ್ತವೆ; ಚರ್ಮದ ದೇಹವೂ ಮಾಯವಾಗುವುದು. ನಿರ್ಮಲವಾದ ಆತ್ಮನು ಮುಕ್ತಿಗೆ ಹೋಗುವನು'' ಎಂದು ಭರತೇಶನ ಕುಮಾರರು ಆತ್ಮಧರ್ಮವನ್ನು ಭಕ್ತಿಯಿಂದ ಹಾಡಿದರು.

ಅದನ್ನು ಕೇಳಿದ ಗುಣಗ್ರಾಹಿಗಳಾದ ರಸಿಕರು, ಲೇಸು–ಲೇಸೆಂದು ಹೊಗಳಿದರು. ''ಹೋ–ಹೋ ಗಾಯನವು ಸಾಕು. ಇನ್ನು ಸಾಹಿತ್ಯದ ಕಳೆಯನ್ನು ನೋಡುವ'' ಎಂದರು.

ಕುಶಲರಾಗಿರುವ ಆ ಕುಮಾರರು ಒಮ್ಮೆ ವ್ಯಾಕರಣವನ್ನು, ಒಮ್ಮೆ ತರ್ಕಶಾಸ್ತ್ರವನ್ನು, ಇನ್ನೊಮ್ಮೆ ನಾಡಭಾಷೆಗಳನ್ನು ಓದಿದರು. ಅವರು ಒಮ್ಮೆ ಪ್ರಾಕೃತ ಭಾಷೆಯನ್ನೂ ಒಮ್ಮೆ ಸಂಸ್ಕೃತ ಭಾಷೆಯನ್ನೂ ಓದಿದರು. ಅವರು ರಸವತ್ತಾದ ಕಾವ್ಯಗಳನ್ನೂ ನಾಟಕಗಳನ್ನೂ ಚರ್ಚಿಸಿದರು. ಛಂದಸ್ಸು ಅಲಂಕಾರ, ರಸಗಳು, ಕನ್ಯಾವಾದ, ಕಾಮಶಾಸ್ತ್ರ ಮುಂತಾದ ಶಾಸ್ತ್ರಗಳಲ್ಲೂ ಚರ್ಚೆ ನಡೆಸಿದರು. ಒಂದು ಶಬ್ದಕ್ಕೆ ಹಲವು ಅರ್ಥಗಳನ್ನು ಸೂಚಿಸಿ, ಹಲವು ಅರ್ಥಗಳಿಗೆ ಒಂದೇ ಶಬ್ದವನ್ನು ಸೂಚಿಸಿ, ಒಮ್ಮೆ ಹೇಳಿದ್ದನ್ನು ಇನ್ನೊಮ್ಮೆ ಹೇಳದೆ ಹೊಸ ಹೊಸ ಮತಗಳಿಂದ ಗೋಷ್ಠಿಯನ್ನು ಮುಂದುವರೆಸಿದರು. ಕಾವ್ಯಗಳಲ್ಲಿ ವರ್ಣಕ ಕಾವ್ಯಗಳೆವು, ವಸ್ತುಕ ಕಾವ್ಯಗಳೆವು — ಎಂದು ಕವಿತ್ವದ ನಿಯಮಗಳ ನಿರ್ಣಯದಲ್ಲಿ ವಿಚಾರಮಾಡಿದರು. ಗಣ, ಪದ, ಸಂಧಿ, ಸಮಾಸ – ಮುಂತಾದುವುಗಳ ಲಕ್ಷಣಗಳನ್ನು ತಪ್ಪದೆ ಹೇಳಿದರು. ಕ್ಷಣದಲ್ಲಿ ನೂರು ಶಬ್ದಗಳನ್ನೂ ಉದಾಹರಣೆ ಕೊಟ್ಟರು. ಮಣಿಮಾಲೆ ರಚಿಸುವಂತೆ ಗಳಿಗೆಗೆ ಒಂದರಂತೆ ಕಾವ್ಯಗಳನ್ನೂ ರಚಿಸಿದರು. ಎರಡೇ ಎರಡು ಗಳಿಗೆಯ ಅವಧಿಯಲ್ಲಿ, ಹನ್ನೆರಡು ಅಂಗಶಾಸ್ತ್ರಗಳನ್ನು ನೆನೆದು, ಬರೆದು, ಓದಿ – ಮುಗಿಸುವ ಯೋಗಿಗಳ ಶಿಷ್ಯರಿಗೂ ಈ ಕವಿತೆಯ ಚಮತ್ಕಾರ ಅಸಾಧ್ಯವಾಗಿದೆ. ನಲವತ್ತೆಂಟು ಗಾವುದ ಬಿಟ್ಟಿರುವಂತಹ ಪಡೆಯಿರುವ, ಪ್ರಪಂಚದ ಒಡೆಯನಾದ ಭರತೇಶ್ವರನ ಮಕ್ಕಳಿಗೆ ಇಂತಹ ಕೌಶಲ್ಯವುಂಟಾಗುವುದು ಸೋಜಿಗವಲ್ಲ! ಅವರು ಹೊಸತಾಗಿ ಕೃತಿಗಳನ್ನು ಬರೆದು, ತಮ್ಮ ಕಲಕಂಠದಿಂದ ಹಾಡಿದರು.

ಒಬ್ಬ ಕುಮಾರನು ವಿನೋದಕ್ಕಾಗಿ ವಿಷವಾಣಿಯಿಂದ ಒಂದು ಮರವನ್ನು ವರ್ಣಿಸಿದನು. ಕೂಡಲೇ ಮರವು ಒಣಗಿತು. ತಿರುಗಿ ಅದನ್ನೇ ಅಮೃತವಾಣಿಯಿಂದ ವರ್ಣಿಸಿದನು. ಆಗ ಅದು ಅಂಕುರಿಸಿ ಪಲ್ಲವಿಸಿತು. ಒಬ್ಬನು ಅರಗಿಳಿಗಳನ್ನು ಉಗ್ರವಾಣಿಯಿಂದ ವರ್ಣಿಸಿದನು. ಕೂಡಲೇ ಅವುಗಳು ಕೋಳಿಗಳಂತೆ ಕಾದಾಡಿದುವು. ಭಾಪುರೆ ಎಂದು ಶಾಂತವಾಣಿಯಿಂದ ವರ್ಣಿಸಿದಾಗ, ಕೋಪ ಹರಿದು ಶಾಂತವಾಗಿದ್ದುವು. ಅವರು ತಮ್ಮ ಕವಿತೆಯಿಂದ, ಎರಡು ಮರದಲ್ಲಿ ಫಲವಾಗುವಂತೆ, ಫಲವುಳ್ಳ ಮರಗಳು ಬರಡು ಆಗುವಂತೆ ಮಾಡಿದರು. ಅದನ್ನು ನೋಡಿದರೆ ಅವರು ಅರಸುತನದ ಶಿಕ್ಷೆ–ರಕ್ಷೆಯನ್ನು ಕವಿತೆಯಲ್ಲಿ ಕಾಣಿಸಿದಂತೆ ತೋರಿತು. ಕವಿತೆಯೆಂಬುದು ಕಲ್ಪತರು. ಅದನ್ನು ಪಡೆದಿರುವ ಮಾನವರಿಗೆ ಅಸಾಧ್ಯವೆಂಬುದೇ ಇಲ್ಲ. ಅಂತಹ ಕವಿತೆಯನ್ನು ಭರತೇಶನ ಕುಮಾರರು ಪಡೆದಿರುವರು. ಆದ್ದರಿಂದ ಅವರಿಗೆ ಈ ಪ್ರಪಂಚದಲ್ಲಿ ಅಸಾಧ್ಯವೆಂಬುದೇ ಇಲ್ಲ. ಒಬ್ಬ ಕುಮಾರನು, ನೆವನಕ್ಕೊಂದು ಪುಸ್ತಕವನ್ನು ಹಿಡಿದುಕೊಂಡು, ನೋಡುತ್ತ ತನ್ನ ಕವಿತೆಯ ಒಂದು ವಾಕ್ಯವನ್ನು ವಿವರಿಸಿದನು. ಅದನ್ನು ಯಾರೂ ಆ ಮೊದಲು ಕೇಳಿರಲಿಲ್ಲ.

'ತಮ್ಮ ಚೆನ್ನಾಗಿದೆ. ಇದನ್ನು ಯಾರು ರಚಿಸಿದರು?' ಎಂಬ ಅಣ್ಣನ ಪ್ರಶ್ನೆಗೆ, ತಮ್ಮನು ತನಗೆ ತಿಳಿಯದೆಂದೇ ನಗುತ್ತ ಹೇಳಿದನು. ಅವನು ಕೂಡಲೇ ಪುಸ್ತಕವನ್ನೇ

ಸೆಳೆದುಕೊಂಡು, ಶೋಧಿಸಿ ನೋಡಿದನು. ಕಿರಿಯ ತಮ್ಮನ ಕೃತಿ ಅದೆಂದು ತಿಳಿದು ಮೆಚ್ಚಿ ತಕ್ಕೈಸಿದನು. ಈ ರೀತಿಯಲ್ಲಿ ಭರತೇಶನ ಪುತ್ರರು ನುಡಿದುದು ಎಲ್ಲ ಆಗಮವಾಯಿತು. ಮಾತನಾಡಿದುದು ಎಲ್ಲ ಪುರಾಣದ ಹಾಲಿನ ಕಡಲಾಯಿತು.

ಅನಂತರ ಭರತೇಶನ ಪುತ್ರರು, ಮುಕ್ತಕ ಕುಳಕ ಮುಂತಾದ ಕವಿತ್ವದ ಯುಕ್ತಿಯಲ್ಲಿ ಅರಹಂತನನ್ನು ಹೊಗಳಿ, ಆ ಮುಕ್ತಿಗಾಮಿಗಳಾದ ಅವರು ಆತ್ಮಕಲೆಯ ಭೇದಾಭೇದವನ್ನು ಭಕ್ತಿಯಿಂದ ಹಾಡಿದರು.

'ಹೊರಗಿರುವುದನ್ನು ತಿಳಿಯುವುದೇ ವ್ಯವಹಾರ ಜ್ಞಾನ; ತನ್ನ ಒಳಗಿರುವುದನ್ನು ತಿಳಿಯುವುದೇ ನಿಶ್ಚಯಜ್ಞಾನ' ಅವರು ಈ ರೀತಿಯಲ್ಲಿ ಹೊರಗಿನ ಚಿಂತೆಯನ್ನು ಮರೆತು, ತಮ್ಮ ಆತ್ಮನ ರೀತಿಯನ್ನು ತಿಳಿದು ನುಡಿದರು. ''ಭೂಮಿಯಲ್ಲಿ ಆಕಾಶವನ್ನು ತಂದು ಹೂಳಿಟ್ಟಂತೆ ಈ ಮೈಯೊಳಗೆ ಆತ್ಮ ತುಂಬಿರುವುದು. ಇದು ಭೂಮಿಗೆ ಆಶ್ಚರ್ಯವಲ್ಲವೆ'' ಆ ಮೋಕ್ಷಗಾಮಿಗಳು ಅಧ್ಯಾತ್ಮವನ್ನು ಅರಿತುಕೊಂಡು ಹೇಳಿದರು.

''ಎದ್ದ ಕಿಚ್ಚಿನಿಂದ ಮನೆಯು ಸುಟ್ಟುಹೋಗುವುದು. ಮನೆಯೊಳಗಿದ್ದರೂ ಆಕಾಶವು ಸುಟ್ಟುಹೋಗುವುದೇ? ಹೊಂದಿರುವ ಬಾಧೆಯೆಲ್ಲವೂ ಆ ಮೈಗೆ ಅಲ್ಲದೆ, ಮೈಯೊಳಗಿರುವ ಆತ್ಮನಿಗೆ ಆ ಬಾಧೆಯಿಲ್ಲ. ಹಲವು ಬಣ್ಣದ ಮುಗಿಲುಗಳಿದ್ದರೂ ಆಕಾಶವು ಅವುಗಳಲ್ಲಿ ಕಲಸಿಹೋಗುವುದಿಲ್ಲ. ಒಲುಮೆ, ಕೋಪ, ಕಾಮ, ಲೋಭ ಮುಂತಾದ ದುರ್ಮಲಗಳಿದ್ದರೂ ಆತ್ಮನು ಮಾತ್ರ ನಿರ್ಮಲನಾಗಿರುತ್ತಾನೆ. ಆತ್ಮನಿಗೆ ಪಂಚೇಂದ್ರಿಯಗಳೇ ಇಲ್ಲ, ಸುಖವೇ ಪಳಂಚಿ ಸರ್ವಾಂಗಗಳನ್ನು ತುಂಬಿರುವುದು; ಆತ್ಮನಿಗೆ ಪಂಚವರ್ಣಗಳಿಲ್ಲ; ಎಲ್ಲವೂ ಪ್ರಭೆಯೊಂದನ್ನೇ ಕೂಡಿರುವುದು. ಇದು ವಿಚಿತ್ರವಾಗಿದೆ. ನೋಡಿದರೆ, ಆತ್ಮನಿಗೆ ರಸವಿಲ್ಲ, ಗಂಧವಿಲ್ಲ, ಶರೀರದೊಳಗಿದ್ದರೂ ಅದರ ಬೆಸುಗೆಯು ಆತ್ಮನಿಗೆ ಇಲ್ಲ, ಆಕಾಶವೇ ಪುರುಷನಾಗಿರುವಂತೆ ಸುಸುಖ, ಸುಜ್ಞಾನ, ಸುಪ್ರಭೆಗಳನ್ನು ಕೂಡಿಕೊಂಡು ತೋರುವನು. ಆತ್ಮನಿಗೆ ದೇಹ ಮನಸ್ಸುಗಳು ಇಲ್ಲ, ಮಾತೂ ಇಲ್ಲ, ಮುನಿಸು, ಮೋಹ, ಸ್ನೇಹಗಳೂ ಆತ್ಮನಿಗೆ ಇಲ್ಲ, ಆದರೆ ಜನನ, ಮರಣ, ರೋಗಜರೆಗಳು ಮಾತ್ರ ಮೂರು ರೀತಿಯ ದೇಹವನ್ನು ತಟ್ಟಿರುತ್ತವೆ. ಬೋಧಾವರಣ ಮುಂತಾದ ಎಂಟು ಕರ್ಮವಿರೋಧಿಗಳು ಎರಡು ಮೈಗಳಾಗಿ, ಬೋಧ ಮುಂತಾದ ಎಂಟು ಗುಣಗಳಿಂದ ಕೂಡಿರುವ ಆತ್ಮನಿಗೆ ಬಾಧೆಗಳನ್ನಿತ್ತು ಕಾಡುತ್ತಿರುವುವು. ಪ್ರೀತಿ, ಮೋಹ, ಕೋಪಗಳು ಭಾವಕರ್ಮಗಳು. ಅಂತಹ ಕರ್ಮಗಳು ಎಂಟು. ಅವುಗಳನ್ನು ದ್ರವ್ಯ ಕರ್ಮವೆನ್ನುತ್ತಾರೆ. ಈ ಚರ್ಮದ ದೇಹವೇನೋ ಕರ್ಮವೆನಿಸುವುದು. ಹೀಗೆ ಕರ್ಮಕಾಂಡಗಳಿವು ಮೂರು. ಹೀಗೆ ಜೀವನು ಭಾವ ಕರ್ಮಗಳಿಂದ ದ್ರವ್ಯಕರ್ಮಗಳನ್ನು ಕಟ್ಟಿ, ನೋಡಿ ಕರ್ಮವನ್ನು ಧರಿಸಿಕೊಂಡು, ಸಾಯುತ್ತ ಹುಟ್ಟುತ್ತ ಮತ್ತೆ ಹೆಚ್ಚುತ್ತ ಕುಂದುತ್ತ ಧಾವತಿ ಪಡುತ್ತಿರುವನು.

''ಬಹುರೂಪಕಾರನು ಒಂದೊಂದು ಜೋಹವನ್ನು ತೊಟ್ಟು ಕೊಂಡು ಬಹಳ ರೀತಿಯಲ್ಲಿ ಆಡುವಂತೆ, ಆತ್ಮನೂ ಬಹಳ ರೀತಿಯ ದೇಹಗಳೆಂಬ ಜೋಹವನ್ನು ತೊಟ್ಟುಕೊಂಡು ಆ ಲೋಕದಲ್ಲಿ ವಿಹರಿಸುತ್ತಾನೆ. ಈ ರೀತಿಯಲ್ಲಿ ಒಮ್ಮೆ ಹಿಡಿದ ಮೈ

ಚೋಹವನ್ನು ಬಿಟ್ಟುಬಿಡುವನು; ಆಮೇಲೆ ಮತ್ತೊಂದನ್ನು ತೊಟ್ಟು ಕೊಳ್ಳುವನು; ಕೂಡಲೇ ಅದನ್ನೂ ಬಿಡುವನು. ಈ ರೀತಿಯಲ್ಲಿ ಆತ್ಮನು ಸಂಸಾರ ನಾಟಕವನ್ನು ನಡೆಯಿಸುತ್ತಿರುವನು. ಆತ್ಮನು ಒಮ್ಮೆ ಅರಸನಾಗುವನು; ಇನ್ನೊಮ್ಮೆ ಆಳಾಗುವನು. ಒಮ್ಮೆ ಧನಿಕನಾದರೆ ಇನ್ನೊಮ್ಮೆ ತಿರುಕನಾಗುವನು. ಪುರುಷನಾಗುವನು ಒಮ್ಮೆ; ಇನ್ನೊಮ್ಮೆ ಸ್ತ್ರೀಯಾಗುವನು; ಪರಮಾತ್ಮ ಕಲೆಯನ್ನು ಅರಿಯದ ಆತ್ಮನು ಈ ಭವಮಾಲೆಯಲ್ಲಿ ನರನಾಗಿ, ಸುರನಾಗಿ, ಪಕ್ಷಿಯಾಗಿ, ಮೃಗವಾಗಿ, ಮರವಾಗಿ, ನಾರಕಿಯಾಗಿ ತಿರುಗುತ್ತಿರುವನು. ಬಹಿರಾತ್ಮನು ತಾನೇ ಅಂಗವೆನ್ನುವುದು. ಆತ್ಮ ಬೇರೆ ಅಂಗ ಬೇರೆನಲು ಅಂತರಾತ್ಮವೆನಿಸುವುದು. ಮೂರು ದೇಹಗಳೂ ಅಳಿದಾಗ ಪರಮಾತ್ಮನು. ಯೋಗಾಂಗಿಯು ಪರಮಾತ್ಮನಾಗುವನು. ಆತ್ಮ ತತ್ತ್ವವನ್ನು ತಿಳಿಯುವಾಗ ಆತ್ಮನೇ ಅಂತರಾತ್ಮನು. ಆತ್ಮನನ್ನು ಧ್ಯಾನಿಸುವಾಗ ಆತ್ಮನೇ ಪರಮಾತ್ಮನು — ಎಂಬುದು ಪರಮಾತ್ಮಜಿನನ ದಿವ್ಯ ವಾಕ್ಯವು.''

''ಸೂರ್ಯನು ಹಿರಿದಾದ ಮೋಡದೊಳಗಿರುವಂತೆ ಕರ್ಮದೊಳಗಿದ್ದರೂ ಆತ್ಮನು ನಿರ್ಮಲವಾಗಿರುವನು. ಆತ್ಮನು ನಿರ್ಮಲನೆಂದು ಯಾವಾಗಲೂ ಧ್ಯಾನಿಸಿದರೆ, ಕರ್ಮವು ತಾನಾಗಿ ಹರಿದು ಹೋಗುವುದು. ಮುಕ್ತಿ ದೊರೆಯುವುದು. ಆತ್ಮನು ಕರ್ಮಬದ್ಧನುಯೆಂಬುದು ವ್ಯವಹಾರ ಜ್ಞಾನವಾದರೆ, ಪರಿಶುದ್ಧನೆಂಬುದು ನಿಶ್ಚಯ ಜ್ಞಾನ; ಕೇಳುವಾಗ, ಹೇಳುವಾಗ ಮಾತ್ರ ಬದ್ಧನೆಂದು ಒಪ್ಪಿಕೊಳ್ಳುವುದು. ಆದರೆ ಧ್ಯಾನಿಸುವಾಗ ಅವನು ಯಾವಾಗಲೂ ಪರಿಶುದ್ಧನಾಗಲಾರನೇ? ಸಿದ್ಧನೆಂದು ಆತ್ಮನನ್ನು ನೋಡುವವರೆಲ್ಲರೂ ಸಿದ್ಧರಾಗುವುದು ಯಾವ ಗಹನ? ಸಿದ್ಧ ಬಿಂಬವನ್ನೂ ಜಿನ ಬಿಂಬವನ್ನೂ ಶಿಲೆಯೊಳಗೆ ಉದ್ಧರಿಸುವುದು ಭೇದ ಭಕ್ತಿ, ಶುದ್ಧಾತ್ಮನಲ್ಲಿ ಭಕ್ತಿಯಿಟ್ಟರೆ ಭೇದವಿಲ್ಲದ ಭಕ್ತಿಯಾಗುವುದು. ಅದೇ ಸಿದ್ಧಪದವಿಗೆ ತಕ್ಕುದಾದ ಯುಕ್ತಿ, ಭೇದಾಭೇದ ಭಕ್ತಿಗಳೇ ಭೇದಾಭೇದ ರತ್ನತ್ರಯಗಳು. ಭೇದಾಭೇದ ಭಕ್ತಿಗಳಿಂದ ಕರ್ಮವನ್ನು ಭೇದಿಸಿದರೆ ಮುಕ್ತಿಯು ಸುಲಭವಾಗುವುದು. ಯುಕ್ತಿಯನ್ನು ತಿಳಿದು ಧ್ಯಾನದ ಅಭ್ಯಾಸದಲ್ಲಿ ಭೇದಭಕ್ತಿಯನ್ನು ಮಾಡಬೇಕು, ಧ್ಯಾನದಲ್ಲಿ ಶಕ್ತರಾದವರು. ಅದನ್ನು ಬಿಟ್ಟು ಅಭೇದ ಭಕ್ತಿಯಲ್ಲಿದ್ದರೆ, ಮುಕ್ತಿಯು ಅಸಾಧ್ಯವೆ? ಸ್ಫಟಿಕದ ಪ್ರತಿಮೆಯ ನೋಡಿ, ನಾನೂ ಹೀಗೆಯೇ ಎಂದು ಕಣ್ಣುಮುಚ್ಚಿ ಒಳಗೆ ನೋಡಿದರೆ, ಪುಟವಿಟ್ಟ ತಿಂಗಳ ಬೆಳಕಿನ ಬೊಂಬೆಯಂತೆ ಈ ದೇಹ ಘಟದಲ್ಲಿ ತುಂಬಿಕೊಂಡು ಆತ್ಮನು ತೋರುವನು.

''ಅಚ್ಚ ಬೆಳದಿಂಗಳ ಒಳಗೆ ಅಡಗಿದಂತೆ, ಹೃತ್ಪೂರ್ವಕವಾಗಿ ಮೆಚ್ಚಿ ಹಾಲಿನ ಸಮುದ್ರವನ್ನು ಸೇರಿದಂತೆ, ಎಚ್ಚರಗೊಂಡು ಸಿದ್ಧರಾಶಿಯಲ್ಲಿ ಐಕ್ಯವಾದಂತೆ, ನಿತ್ಯವೂ ಆತ್ಮಯೋಗವು ಒಪ್ಪಿರುವುದು. ತನ್ನ ಆತ್ಮವನ್ನು ತಾನು ನೋಡುತ್ತಿದ್ದರೆ ನಿತ್ಯವೂ ಕರ್ಮ ಜಾರುತ್ತಿರುವುದು. ಪ್ರಭೆಯು ನೆರೆಯುತ್ತಿರುವುದು. ಶ್ರೇಷ್ಠವಾದ ಸುಖವೂ ಸುಜ್ಞಾನವೂ ಹೆಚ್ಚಾಗುತ್ತಿರುವುದು. ಧ್ಯಾನಾಗ್ನಿಯಿಂದ ತೈಜಸ ಕಾರ್ಮಣ ಶರೀರಗಳನ್ನು ಏನೇನೂ ಉಳಿಯದಂತೆ ಭಸ್ಮಮಾಡಿ, ತಾನು, ಆತ್ಮಸಿದ್ಧಿಯನ್ನು ಪಡೆಯಬೇಕು. ಆದ್ದರಿಂದ ಭವ್ಯರಿಗೆ ಧ್ಯಾನವೇ ಮುಖ್ಯವಾದುದು'' ಎಂದು ಅವರು ಹಾಡಿದರು. ಮತ್ತೆ 'ಗೃಹಸ್ಥರು,

ಯೋಗಿಗಳು ಧರ್ಮಧ್ಯಾನದ ಮಹಿಮೆಯಿಂದ ಆತ್ಮನನ್ನು ನೋಡಿ, ಉಗ್ರಕರ್ಮವನ್ನು ದಹಿಸುತ್ತಾರಂತೆ, ಇದು ಸಮ್ಮತವೋ, ಅಲ್ಲವೋ' ಎಂದು ಕೆಲವರು ಕೇಳಿದರು.

'ಮಹಿತಯೋಗೀಂದ್ರರಿಗೆ ಮಾತ್ರ ಶುಕ್ಲಧ್ಯಾನವಿರುವುದು. ಗೃಹಸ್ಥರಿಗೆ ಅದು ಇಲ್ಲ' ಎಂದು ಅಣ್ಣಂದಿರು ಹೇಳಿದರು. 'ಆತ್ಮನು ಧರ್ಮಕ್ಕೆ ಸಾಮಾನ್ಯ ಗಡಿಗೆಯ ಹಾಲಿನಂತೆ ಕಂಡರೆ, ಶುಕ್ಲಕ್ಕೆ ಸ್ಫಟಿಕದ ಗಡಿಗೆಯ ಹಾಲಿನಂತೆ ಕಾಣುವನು. ಈ ಎರಡು ಧ್ಯಾನಗಳಲ್ಲಿ ಇಷ್ಟೆ ಭೇದವಿರುವುದು. ಧರ್ಮವು ಯುವರಾಜನಂತಿದ್ದರೆ, ಶುಕ್ಲವು ತಾನು ಈ ಭೂಲೋಕದ ಅಧಿರಾಜನಂತೆ ಇರುವುದು. ಯುವರಾಜನು ಅಧಿರಾಜನಾಗುವ ಹಾಗೆ, ಧರ್ಮವು ಒಪ್ಪುತ್ತಿರುವ ಶುಕ್ಲವಾದಾಗ ಮುಕ್ತಿ ದೊರೆಯುವುದು. ಇದು ಆಧ್ಯರ ಮತವಾಗಿದೆ.'

ಹೀಗೆ ಅವರು ಮಾತನಾಡುತ್ತಿರುವಾಗಲೇ ಒಂದು ಚೋದ್ಯದ ವಾರ್ತೆ ಬಂತು. ಅಲ್ಲಿಗೆ ವಿದ್ಯಾಗೋಷ್ಠಿಯು ನಿಂತಿತು.

# ೧೨

## ವಿರಕ್ತಿ

ಹಸ್ತಿನಪುರಪತಿಯಾದ ಮೇಘೇಶ್ವರನು ದೀಕ್ಷೆಯನ್ನು ವಹಿಸಿದನೆಂಬ ಪ್ರಸ್ತುತವಾರ್ತೆಯು ಸಾಹಿತ್ಯಗೋಷ್ಠಿಯು ನಡೆಯುತ್ತಿರುವಾಗಲೇ ಬಂತು. ಅವರು, ನುಡಿಯುತ್ತಿದ್ದ ಪ್ರಸಂಗಗಳನ್ನೇ ಬಿಟ್ಟು, ಆ ವಾರ್ತೆಯ ಕುರಿತು, 'ಅದು ಹಾಗೆ, ಇದು ಹೀಗೆ' ಎಂದು ಮುಂತಾದ ಪ್ರಶ್ನೆಗಳನ್ನು ಕೇಳ ತೊಡಗಿದರು.

'ರಾಜ್ಯವನ್ನು ಯಾರಿಗೆ ಕೊಟ್ಟನು? ಮಗನಿಗೆ ಕೊಟ್ಟನೋ? ಒಡಹುಟ್ಟಿದವರಿಗೆ ಏನನ್ನು ಕೊಟ್ಟನು?'

ಮೇಘೇಶ್ವರನು ತನ್ನಿಂದ ಕಿರಿಯನಾದ ವಿಜಯರಾಜನನ್ನು ಕರೆದು ''ನೀನು ಇಳೆಯನ್ನು ಆಳು'' ಎಂದು ಹೇಳಿದನಂತೆ. 'ನಿನ್ನನ್ನು ಅಗಲಿ ಬಾಳುವ ಸಿರಿಯನ್ನು ಸುಡು ಅಣ್ಣಾಜಿ; ನಿನ್ನೊಡನೆ ನಾನೂ ತಪಸ್ಸಿಗೆ ಬರುವೆನು' ಎಂದು ತಮ್ಮನು ಹೇಳಿದನಂತೆ. ಆಗ ಅವನಿಗಿಂತಲೂ ಕಿರಿಯನಾಗಿರುವ ಜಯಂತ ರಾಜನನ್ನು ಕರೆದು, 'ಭೂಮಿಯನ್ನು ಆಳು ತಮ್ಮ' ಎಂದು ಕೇಳಿದನಂತೆ. 'ನಿಮಗೆ ಅಲ್ಲದಿರುವ ಭೂಮಿಯು ನನಗೆ ಒಳ್ಳೆಯದಾಗುವುದೇ, ನಿಮ್ಮ ಮಾರ್ಗವೇ ನನ್ನ ಮಾರ್ಗವು' ಎಂದು ತಮ್ಮನು ಅಣ್ಣನಿಗೆ ಹೇಳಿದನಂತೆ. ಅನಂತರ ಮೇಘೇಶ್ವರನು, ತನ್ನ ತಮ್ಮಂದಿರನ್ನು ಒಪ್ಪಿಸಲಾರದೆ, ತನ್ನ ಮಗನಾದ ಅನಂತ ವೀರ್ಯನಿಗೆ ಪಟ್ಟವನ್ನು ಕಟ್ಟಿ, ತಮ್ಮಂದಿರೊಡನೆ ಜಿನದೀಕ್ಷೆಯನ್ನು ಪಡೆದನು. ಆಗ ಅವನು, ಅನಂತವೀರ್ಯನು ಬಾಲಕನೆಂದು, ತನ್ನ ರಾಜ್ಯವನ್ನು ಪ್ರಧಾನರ ವಶಕ್ಕೆ ಕೊಟ್ಟು ದೀಕ್ಷೆಗೆ ಹೋದನು. ಅನಂತವೀರ್ಯನಾದರೂ, ಬಾಲಕನಾಗದಿರುತ್ತಿದ್ದರೆ ತಾನೂ ದೀಕ್ಷೆಗೆ ಹೋಗುತ್ತಿದ್ದನು. ಈ ಅಶುಚಿಯಾದ ರಾಜ್ಯದಲ್ಲಿ ಅವನು ಇರುತ್ತಿದ್ದನೇ?''

ಈ ಸುದ್ದಿಯನ್ನು ಕೇಳಿ, ಭರತೇಶ್ವರನ ಕುಮಾರರೆಲ್ಲರೂ ವಿಸ್ಮಯ ಚಿತ್ತರಾದರು. ಮೂಗಿನ ಮೇಲೆ ಬೆರಳಿಟ್ಟು, ಆಶ್ಚರ್ಯದಿಂದ ತಲೆದೂಗಿದರು. ಎಲ್ಲರಿಗೂ ಹಿರಿಯನಾದ ಅರ್ಕಕೀರ್ತಿ ರಾಜನು ಆಗ ಸರಿಯಾಗಿ ಮಾತನಾಡಿದನು.

''ಮೋಕ್ಷಕ್ಕೆ ಹೋಗುವುದೇ ಉತ್ತಮ ಫಲವು. ಪರಮಾತ್ಮತತ್ತ್ವವನ್ನು ತಿಳಿಯುವುದೇ ಕಷ್ಟ; ಒಮ್ಮೆ ತಿಳಿದರೂ ಅದನ್ನೇ ನಂಬುವುದು ಕಷ್ಟ; ತಿಳಿದು ನಂಬಿದರೂ ಸಂಯಮಕ್ಕಾಗಿ ಸರ್ವವನ್ನೂ ತೊರೆಯುವವರೇ ಧನ್ಯರು. ಮೇಘೇಶ್ವರನು ರಾಜ್ಯವನ್ನಾಳಿ, ಸುಖಬಾಳಿ, ಆಮೇಲೆ ಅದನ್ನು ಕೀಳೆಂದುದು ದೊಡ್ಡದಲ್ಲ; ವಿಜಯರಾಜ ಜಯಂತರಾಜರು, ನೃಪಲಕ್ಷ್ಮಿಯನ್ನು ಕಡೆಗಣಿಸಿದುದು ದೊಡ್ಡದು. ಪ್ರಾಯಶಕ್ತಿಯನ್ನು ಒಯ್ಯಾರದಿಂದ ದೇಹಸುಖಕ್ಕಾಗಿ ಕೆಡಿಸದೆ ಆತ್ಮಸುಖಕ್ಕಾಗಿ ಕಾರ್ಯವನ್ನು ತಪಸ್ಸಿಗೆ ಒಡ್ಡಿದರೆ, ಅವರೇ

ಮಹಾರಾಯರು. ಚಕ್ರವರ್ತಿಯ ಮಕ್ಕಳಾದ ನಾವೆಲ್ಲರೂ ಚಕ್ರವರ್ತಿಗಳೇ. ರಾಜರಾದ ಅವರು ಚಕ್ರಿಯಿಂದಲೂ ನಮಸ್ಕರಿಸಿಕೊಂಡರು. ನಿಜವಾಗಿಯೂ ಅವರೆಂದರೆ ಸುಜ್ಞಾನ ಚಕ್ರವರ್ತಿಗಳು. ಅವರು, ಇಂದಿನವರೆಗೆ ನಮ್ಮ ಅಪ್ಪಾಜಿಯವರಿಗೆ ನಮಸ್ಕಾರ ಮಾಡಿ, ಭೂಮಿಯನ್ನು ಪಡೆದಿದ್ದರು. ಈಗ ಅವರೆ, ನಮ್ಮ ಜನಕನನ್ನು ತಮಗೆ ಎರಗಿಸಿಕೊಂಡರು. ಹೋ, ಜಿನದೀಕ್ಷೆ ಎಂದರೆ ಸುಲಭವೇ? ನಮ್ಮಯ್ಯನು ಎರಗುವುದೇನೂ ದೊಡ್ಡದಲ್ಲ, ದುಂಬಿಗಳು ಪರಿಮಳದ ಹೂವುಗಳಿಗೆ ಎರಗುವಂತೆ 'ಪರಬೊಮ್ಮ ವಿಡಿದ' ಯೋಗಿಗಳಿಗೆ ಮೂರು ಲೋಕವೇ ಎರಗುವುದು. ಸುಜಯಾತ್ಮ ಸುಕಾಂತಾತ್ಮ ವಿಜಯಾತ್ಮ ಮುಂತಾದವರೆಲ್ಲರೂ ಕೇಳಿರಣ್ಣಾ ದೀಕ್ಷೆಗೆ ಎಣೆಯಾದ ಲಾಭ ಮೂರು ಲೋಕಗಳಲ್ಲೂ ಇಲ್ಲ. ದೀಕ್ಷೆಯು ಶುಕ್ಲ ಧ್ಯಾನಕ್ಕೆ ಸಹಕಾರಿ; ಶುಕ್ಲ ಧ್ಯಾನವು ಮುಕ್ತಿಗೆ ಸಹಕಾರಿ; ಶುಕ್ಲಧ್ಯಾನದಿಂದ ಕರ್ಮವಳಿದು ಮುಕ್ತಿಗೆ ಸಲ್ಲುವುದು.''

ಈ ವಚನವನ್ನು ಕೇಳಿದ ಅವರೆಲ್ಲರೂ ಮತ್ತೆಮತ್ತೆ ಅದನ್ನೇ ಮೆಚ್ಚಿಕೊಂಡರು; ತಾವು ದೀಕ್ಷೆಯನ್ನು ಕೈಕೊಳ್ಳುವೆವು ಎಂದು ತಮ್ಮಲ್ಲಿ ತಾವೇ ಯೋಚನೆ ಮಾಡಿದರು. ಪ್ರಾಯವು ತಗ್ಗುವ ಮೊದಲು, ಕಾಯವು ಜಗ್ಗುವ ಮೊದಲು, ಸ್ತ್ರೀಯರು–ಮಕ್ಕಳು ಎಂಬ ಮಾಯೆ ಮುತ್ತುವ ಮೊದಲು, ಎಚ್ಚರಗೊಳ್ಳಬೇಕೆಂದು ಉಪಾಯವನ್ನು ಅವರು ಯೋಚಿಸಿದರು. 'ಅಪ್ಪಾಜಿ, ನಮ್ಮ ಕಣ್ಣನ್ನು ನೋಡಿ; ನಮಗೆ ಇನ್ನು ಒಂದೊಂದು ಹೆಣ್ಣು ಸಂಬಂಧ ಮಾಡುವರು. ಹೆಣ್ಣಿಗೆ ಸಿಕ್ಕಿ ಬದುಕುವ ಬಾಳು ಹಾರಿ ಎಣ್ಣೆಯೊಳಗೆ ಬಿದ್ದ ನೊಣದ ರೀತಿ. ಹೆಣ್ಣಿನ ಕೈಹಿಡಿದ ಮೇಲೆ ಸಹಜವಾಗಿ, ಹೊನ್ನನ್ನು ಹಿಡಿಯಬೇಕು; ಮಣ್ಣನ್ನು ಹಿಡಿಯಬೇಕು. ಹೆಣ್ಣು ಹೊನ್ನು, ಮಣ್ಣುಗಳನ್ನು ಹಿಡಿದ ಆತ್ಮರೆಲ್ಲರೂ ಮಣ್ಣು ಹಿಡಿದ ಲೋಹದಂತೆ. ಐಶ್ವರ್ಯವಿದ್ದು ಅದನ್ನು ತೊರೆಯುವುದೇ ಹೆಚ್ಚು; ಯೌವ್ವನವಿರುವಾಗಲೇ ಶ್ರೇಷ್ಠವಾದ ದೀಕ್ಷೆಯನ್ನು ಪಡೆಯುವುದು ಹೆಚ್ಚು; ಪರಮಾತ್ಮ ತತ್ತ್ವವನ್ನು ತಿಳಿಯುವುದು ಹೆಚ್ಚು, ಇವುಗಳು ದೊರೆತರೆ, ನಮಗೆ ಅಸಾಧ್ಯವೆಂಬುದುಂಟೆ?' ಎಂದು ಮುಂತಾಗಿ ಮಾತನಾಡಿದರು.

'ಕಾಲ, ಬಲ, ಸಿರಿ, ಸೌಂದರ್ಯಗಳಿದ್ದವರು ಅವುಗಳನ್ನೆಲ್ಲ ಬಿಟ್ಟು, ಗೆಲವಿನಿಂದ ತಪಸ್ಸು ಮಾಡಿದರೆ ಚೆಲುವೆಯಾದವಳು ಪತಿವ್ರತೆಯಾದಂತೆ ಹೆಚ್ಚಿನ ಫಲ ಬರುವುದೆಂದು ಅವರು ಎಣಿಸಿದರು. ಹೆಣ್ಣು ಸೋಂಕದ ಮನ ಪುಟವೇರುವುದು. ಅದು ಹೆಣ್ಣಿನ ತೋಳ ಬಲೆಗೆ ಬಿದ್ದಾಗ ಓಡುತ್ತಿರುವ ಜಿಂಕೆ, ಮೋಸದಿಂದ ಇಟ್ಟ ಕಾಲು ಕಣ್ಣಿಗೆ ಬಿದ್ದಂತೆ ಆಗುವುದು. ಹೆಣ್ಣಾನೆಗೆ ಬಯಸಿ ಗಂಡಾನೆ ಕಣ್ಣು ಕಾಣದ ಕುಳಿಯಲ್ಲಿ ಬೀಳುವ ಹಾಗೆ, ಕಣ್ಣಿಗೆ ಮೋಹಿಸಿದವರೆಲ್ಲರೂ ಭವಕ್ಕೆ ಬೀಳುವವರಲ್ಲವೇ? ಗಾಳದ ತುದಿಯ ಮಾಂಸಕ್ಕೆ ತುಡುಕಿದ ಮೀನು ತನ್ನ ಪ್ರಾಣಕ್ಕೆ ಸಂಚಕಾರ ತಂದುಕೊಳ್ಳುವಂತೆ ಜಾಣೆಯರಿಗೆ ಸೋತವರು ಯಮನಿಗೆ ಒಳಗಾಗುವರು' ಎಂದವರು ಜಾಣತನದ ಮಾತುಗಳನ್ನಾಡಿದರು.

'ಮೊದಲು ಹೆಣ್ಣುಗಳ ಸಂಗವೆಂಬುದೇ ಭಾರ. ಮತ್ತೆ ಅದರಲ್ಲೂ ಸುತರು ಹುಟ್ಟಿದರೆ, ಅದು ಬಲು ಭಾರ — ಎಂದು ಭರತೇಶನ ಕಂದರು ಸಂಸಾರಕ್ಕೆ ಹೆದರಿದರು.

ಕಾಮಿನಿ ಕಾಲಿಗೆ ಸಂಕೋಲೆಯಾದರೆ, ಮಕ್ಕಳಾದಾಗ ಕೊರಳಿಗೆ ಸಂಕೋಲೆಯಾಗುವುದು. ಇಂತಹ ಸಂಕೋಲೆಗೊಳಗಾಗಿ ಯಾರು ಬದುಕುವರು — ಎಂದವರು ಕಷ್ಟಕ್ಕೆ ಹೆದರಿದರು. ಸಚ್ಚರಿತರಾದ ತಾವು ಸಂಸಾರ ಕೋಟಲೆಗೆ ಸಿಲುಕಬಾರದೆಂದು ಅವರು ಬೇಗನೆ ಎಚ್ಚರಗೊಂಡರು. ಬೆರಳಿನಷ್ಟು ಸುಖಕ್ಕಾಗಿ, ಬೆಟ್ಟದಷ್ಟು ದುಃಖವನ್ನು ಉಣ್ಣುವರು. ವಿಷಯ ಸುಖವನ್ನು ಬಿಟ್ಟುಬಿಟ್ಟರೆ, ಬೆಟ್ಟದಷ್ಟಾಗಿರುವ ಭವವು ಬೆರಳಿನಷ್ಟಾಗುವುದು' ಎಂದವರು ಭಾವಿಸಿದರು.

''ನಮ್ಮ ಆತ್ಮ ಸ್ವರ್ಗದ ದಿವ್ಯದೇಹದ ವನಿತೆಯರ ಸಂಸರ್ಗದಿಂದ ತಣಿದುದಿಲ್ಲ; ಇನ್ನು ಮನುಜಕಾಂತೆಯರ ದುರ್ಗಂಧ ದೇಹದ ಉಪಸರ್ಗದಲ್ಲಿ ತಣಿಯುವುದುಂಟೆ? ಸುರಲೋಕ, ನರಲೋಕ, ನಾಗಲೋಕದ ಹೆಣ್ಣುಗಳಲ್ಲಿ ತಿರಿಯಂಚ ಗತಿಯ ಹೆಣ್ಣುಗಳಲ್ಲಿ ಹಲವು ಬಾರಿ ನೆರೆದು ತಣಿದನೇ ನಮ್ಮ ಆತ್ಮ? ಬಾಯಾರಿದವರು ಉಪ್ಪು ನೀರು ಕುಡಿದರೆ ಮತ್ತೂ ಬಾಯಾರಿಕೆ ಆಗುವಂತೆ, ಸ್ತ್ರೀಯರ ನೆರೆದರೆ ತೃಪ್ತಿಯಾಗದೆ ಮತ್ತೂ ಸ್ತ್ರೀಯಾಸೆ ಹೆಚ್ಚುವುದು. ಕಿಚ್ಚು ನೀರಿನಿಂದ ನಂದುವುದು; ಅದು ತುಪ್ಪದಿಂದ ಹೆಚ್ಚುವುದು. ಹಾಗೆ ಕಾಮಾಗ್ನಿಯು ಸಚ್ಚಿದಾನಂದವಾದ ಆತ್ಮರಸದಿಂದ ನಂದುವುದು; ಅಬಲೆಯರಿಂದ ಹೆಚ್ಚಾಗುವುದು. ಕಾಮಾಗ್ನಿಯು ಒಂದಲ್ಲ; ಪಂಚೇಂದ್ರಿಯವೆಂಬ ಹೆಸರಿನ ಪಂಚಾಗ್ನಿಗಳು. ಪ್ರೇಮದ ವಸ್ತುಗಳನ್ನು ಕೊಟ್ಟರೆ ಉಬ್ಬುವುವು; ಆತ್ಮಾರಾಮನಾದಾಗ ಅವು ತಗ್ಗುವುವು. ಸ್ನಾನ, ಭೋಜನ, ಗಂಧಲೇಪನ, ಪುಷ್ಪವಿಭೂಷಣ, ವಸ್ತ್ರ ತಾಂಬೂಲಗಳು, ಗಾನ ಮುಂತಾದುವು ಆತ್ಮನನ್ನು ತಣಿಸಲಾರವು. ಧ್ಯಾನವೊಂದೇ ಆತ್ಮವನ್ನು ತಣಿಸುವುದು. ಮುಂದಿನ ಮುಕ್ತಿ ಸುಖಕ್ಕಾಗಿ, ಇಂದು ಅಲ್ಪಸುಖಕ್ಕಾಗಿ ಅತಿಮಾಡಲು ಧ್ಯಾನವು ಬಿಡದು. ನಾವು ಕಷ್ಟಗಳನ್ನು ಕಳೆದು ದೀಕ್ಷೆಯನ್ನು ಕೊಳ್ಳಬೇಕು'' ಎಂದು ಅವರೆಲ್ಲರೂ ಒಪ್ಪಿದರು. ''ಕೈಲಾಸಗಿರಿಗೆ ಹೋಗುವ. ಅಲ್ಲಿ ಮಂದರಗಿರಿಯಂತೆ ಮೆರೆಯುತ್ತಿರುವ ಆದಿಜಿನನ ಕೈಲೇಸಿನಿಂದ ದೀಕ್ಷೆಯನ್ನು ಪಡೆಯುವ'' ಎಂದು ಅವರೆಲ್ಲರೂ ಎದ್ದರು.

''ಅಪ್ಪಾಜಿಗೆ ತಿಳಿಸಿ ದೀಕ್ಷೆಗೆ ಕಳುಹಿಸಿಕೊಂಡು ಬರುವೆವು'' ಎಂದು ಕೆಲವರು ಹೇಳಿದರು. ''ಅಪ್ಪಾಜಿಗೆ ತಿಳಿಸಿದರೆ, ನಮ್ಮ ದೀಕ್ಷೆಯ ಕೆಲಸ ಕೆಡುವುದು'' — ಎಂದು ಕೆಲವರು ನುಡಿದರು. ''ಅಪ್ಪಾಜಿಯನ್ನು ಒಪ್ಪಿಸಿ, ಬೀಳ್ಕೊಳ್ಳಬಹುದು; ತಮ್ಮ ತಾಯಿಯರನ್ನು ಒಪ್ಪಿಸಿ ಬೀಳ್ಕೊಳ್ಳುವುದು ಕಷ್ಟ; ಅವರು ಇದನ್ನು ತಿಳಿದರೆ ನಮ್ಮ ಕೆಲಸ ಕೆಡುವುದು'' — ಎಂದು ಕೆಲವರು ಮಾತನಾಡಿದರು. ತಾಯಿಗಳೊಡನೆ ಹೇಳಿದರೆ — 'ಮಕ್ಕಳಿರಾ ಲೇಸಾಯಿತು ಹೋಗಿ' — ಎನ್ನುವರೇ? 'ಬೋ' ಎಂದು ಬಂದು ನಮ್ಮ ಕೊರಳನ್ನು ತಕ್ಕೈಸಿಕೊಂಡು ಬಾಯಿಬಿಟ್ಟು ಹಂಬಲಿಸುವರು.'' ''ಅವರ ಹಂಗು ನಮಗಿಲ್ಲ; ನಮ್ಮ ಹಂಗು ಅವರಿಗಿಲ್ಲ; ಅವರಿಗೆ ಅವರು, ನಮಗೆ ನಾವು; ನೋಡಿದರೆ ಭವಮಾಲೆಯಲ್ಲಿ ಯಾರಿಗೆ ಯಾರುಂಟು? ಒಂದು ಜನ್ಮದಲ್ಲಿ ಮಗನು ಅಯ್ಯನಾಗುವನು; ಅಯ್ಯನೇ ಇನ್ನೊಂದು ಜನ್ಮದಲ್ಲಿ ಆ ಮಗನಿಗೆ ಮಗನಾಗುವನು. ಜನ್ಮ ಜನ್ಮಗಳಲ್ಲಿ ಮಗಳು ತಾಯಾಗುವಳು, ಆ ತಾಯಿ ಮಗಳಿಗೆ ಮಗಳಾಗುವಳು. ಒಂದು ಜನ್ಮಕ್ಕೆ ಅಣ್ಣನೇ

ತಮ್ಮನಾಗುವನು. ತಮ್ಮನೇ ಅಣ್ಣನಾಗುವನು. ಮತ್ತೊಂದು ಜನ್ಮಕ್ಕೆ ಹೆಣ್ಣು ಗಂಡಾಗುವುದು, ಗಂಡು ಹೆಣ್ಣಾಗುವುದು. ಹಗೆಯು ಒಮ್ಮೆ ಗೆಳೆಯನಾಗುವನು; ಇನ್ನೊಮ್ಮೆ ಗೆಳೆಯನೇ ಹಗೆಯಾಗುವನು. ಆದ್ದರಿಂದ ಹಗರಣದಂತಿರುವ ಈ ಭವದಲ್ಲಿ ಇನ್ನು ಯಾರು ಯಾರೆಂದು ಎಣಿಸುವೆವೇ? ಇನ್ನು ತಾಯಿತಂದೆಗಳ ಮಾತೇನು? ಇದೇ ನ್ಯಾಯವು, ದೀಕ್ಷೆಗೆ ಏಳಿ. ನಮೋ ಹಂಸನಾಥಾಯ'' ಎಂದವರು ತಟ್ಟನೆ ಎದ್ದರು.

ಊಳಿಗದವರು ತಿಳಿದರೆ ತಂದೆಗೆ ಹೋಗಿ ಹೇಳುವರು, ಎಂದು ತಮ್ಮೊಳಗೇ ಆಲೋಚಿಸಿಕೊಂಡು ಹಲವು ತಂತ್ರಗಳಿಂದ ಬೇರೆ ಬೇರೆಯಾದರು. ಕಲಿಗಳು ಕದನಕ್ಕಾಗಿ ಅಪ್ಪಣೆ ಬೇಡಲು ಒಡೆಯನಲ್ಲಿಗೆ ಹೋಗುವಂತೆ ಅವರು, 'ಸ್ವಾಮಿ ದೀಕ್ಷೆಯನ್ನು ಕೊಡು; ಯಮನನ್ನು ಅಟ್ಟುವೆವು' ಎಂದು ನುಡಿಯಲು ಅಜ್ಜನಿದ್ದಲ್ಲಿಗೆ ಹೋದರು. 'ಕರ್ಮಗಳನ್ನು ಸುಡುವೆವು; ಮೋಕ್ಷ ದುರ್ಗಕ್ಕೆ ದಾಳಿ ಇಡುವೆವು; ಇದುವೇ ನಮ್ಮ ಭಾಷೆ. ಅರುಹ, ನಿನ್ನ ಅರಿಕೆ' ಎಂದು ಆ ಪಂಥವನ್ನು ಬರೆಯಲು ಹೋದರು.

ಇದನ್ನು ನೋಡಿದ ಪ್ರಜೆಗಳು ಕೈಮುಗಿದೆತ್ತಿ, ಮನೆಗೆ ಹೋಗುವಿರೆಂದು ಕೇಳಿದರು. ''ರಜತಾದ್ರಿಗೆ ಅರುಹನನ್ನು ಕಾಣಲು ಹೋಗುವೆವು'' ಎಂದವರು ವಿಜಯಿಗಳಂತೆ ನಡೆದರು. ಇಂದು ತಮ್ಮ ಸ್ವಾಮಿಯ ಸುಕುಮಾರರು, ತೀರ್ಥವಂದನೆಗೆ ನಡೆಯುತ್ತಿದ್ದಾರೆಂದು ಪ್ರಜೆಗಳು ಮುಂದೆ ಹೋಗಿ ಪುರುಪುರ ತಪ್ಪದ ಹಾಗೆ ಒಸಗೆ ಮಾಡಿಸಿದರು. ಅಲ್ಲಲ್ಲಿ ಗುಡಿ ತೋರಣಗಳನ್ನು ಕಟ್ಟಿ, ಇದಿರುಗೊಳ್ಳುವ ಸಂಭ್ರಮವಾಯಿತು. ಅಲ್ಲಲ್ಲಿ ನಿಂತು, ವಿಶ್ರಾಂತಿ ಪಡೆದು ಎಲ್ಲರ ಪ್ರೀತಿಯನ್ನೂ ಕೊಳ್ಳುತ್ತ ಅವರು ರಜತಾದ್ರಿಗೆ ಮುಟ್ಟ ಮುಟ್ಟ ಬಂದರು.

# ೧೩

# ಸಮವಸರಣ

ಭರತೇಶನ ನಂದನರು, ಮುಂದುವರಿದು ಸಾಗುತ್ತಿರುವಾಗ, ಅವರ ಮುಂದೆ ರಜತಾದ್ರಿಯು ಹೊಳೆದು ಕಂಗೊಳಿಸಿತು. ಬಿಳಿಮುಗಿಲ ಸಮೂಹವೇ ಭೂಮಿಯಲ್ಲಿ ಬೇರೂರಿ, ಉಬ್ಬಿ ಬೆಳೆದು ಬಿಳಿ ಬೆಟ್ಟವಾದಂತೆ, ತಳತಳಿಸುತ್ತಿರುವ ಬಿಳಿ ಬೆಳಕಿನಿಂದ ರಜತಾದ್ರಿಯು ಶೋಭಿಸಿತು. ಹಲವು ಚಂದ್ರಮಂಡಲಗಳು ಒಟ್ಟುಗೂಡಿ ಗಿರೀಂದ್ರನಾಗಿ ಒಪ್ಪುತ್ತಿರುವ ಅದನ್ನು ಚಂದ್ರಗಿರಿಯೋ, ರಜತಗಿರಿಯೋ, ಎಂದು ಇಂದ್ರವೈಭವದ ಆ ಕುಮಾರರು ದಿಟ್ಟಿಸಿ ನೋಡಿದರು. ಹಾಲಿನ ಸಮುದ್ರವೇ ಬಲಿತು ಬೆಟ್ಟವಾದಂತೆ ಅದು ಅವರ ಚಿತ್ತವನ್ನು ಸೋಲಿಸುತ್ತಿತ್ತು 'ಇದು ಹಾಲಿನ ಬೆಟ್ಟವೋ, ಇದು ಬೆಳ್ಳಿಯ ಬೆಟ್ಟವೋ' ಎಂದು ಅವರು ಯೋಚಿಸುತ್ತ ತಮ್ಮಲ್ಲೇ ''ಲೇಸು ಲೇಸು'', ಎಂದುಕೊಳ್ಳುತ್ತಿದ್ದರು. ಅವರ ಭಾವನೆ ಅಲ್ಲಿಗೇ ನಿಲ್ಲಲಿಲ್ಲ, ಅದು ಮುಂದುವರೆಯಿತು.

''ಆದಿಜಿನನ ಕೀರ್ತಿಯೇ ಮೂರ್ತಿಯಾಗಿ ಈ ಗಿರಿಯಾಯಿತೋ, ಭವ್ಯರ ಪುಣ್ಯವೇ ಈ ದಿವ್ಯವಾದ ಗಿರಿಯಾಯಿತೋ; ಜಿನ! ಜಿನ!'' ಎಂದು ಹೇಳುತ್ತ ಅವರು ಆ ದೇವಗಿರಿಯ ಬಳಿಗೆ ಸಾರಿದರು. ಚಿನ್ನದ ಬೆಟ್ಟಗಳು ಐದು ಇವೆ. ರಜತಾದ್ರಿಗಳು ಇನ್ನೂ ನೂರ ಎಪ್ಪತ್ತೆಂಟು ಇವೆ. ಆದರೆ ಅವು ಗಿರಿಯಂತೆ ಸಮವಸರಣವನ್ನು ಧರಿಸಲಿಲ್ಲ, ಈ ಗಿರಿಯೇ ಸಿದ್ಧಶಿಲೆಯಂತೆ ಇದೆ. 'ಸಿದ್ಧಂ ನಮೋ'ಯೆಂದು ಹೇಳುತ್ತ ಅವರು ಆ ಗಿರಿಯನ್ನು ಏರಿದರು. ಹಂಸಗಳು ಕ್ಷೀರಸಾಗರದಲ್ಲಿ ಹರಿಯುವಂತೆ, ಬಿಳಿಮುಗಿಲನ್ನು ಮಿಂಚುಗಳು ಹತ್ತುವಂತೆ ಅವರು ಹಿಂದುಮುಂದಾಗದೆ, ತಮ್ಮಲ್ಲಿ ಒಬ್ಬರೂ ಹರಿಪಂಟಾಗದಂತೆ ಅವರು ಗಿರಿಯನ್ನೇರಿದರು. ಬೀಸುತ್ತಿರುವ ಗಾಳಿಗೆ ಮೈಯೊಡ್ಡಿ ಅವರು ಕೈಲಾಸ ಪರ್ವತವನ್ನು ಹತ್ತಿದರು.

ಅವರು ತಾರಾದ್ರಿಯ ಶಿಖರಕ್ಕೆ ಹತ್ತಿ ಬಂದಾಗ, ವೀರಂಜಯರಾಜನು ತಾನೊಂದನ್ನು ನೆನಪು ಮಾಡಿ ರವಿಕೀರ್ತಿರಾಜನ ಬಳಿಗೆ ಬಂದು ಮಾತನಾಡಿದನು.

''ದೇವರು, ಅಂದೊಮ್ಮೆ ಅಪ್ಪಾಜಿಯೊಡನೆ ಹೋಗಿ ದೇವರನ್ನು ಕಂಡಿದ್ದರಲ್ಲವೆ? ದೇವನ ಓಲಗದ ಚೆಂದವು ಹೇಗಿದೆ? ಎಂಬುದನ್ನು ನೀವು ನಮಗೆ ಹೇಳಬೇಕು!''

''ಊರನ್ನು ನೋಡಬೇಕೆಂದು ಊರಿನ ಹೊರಗಿರುವ ಕೇರಿಗೆ ಬಂದು, ಊರು ಹೇಗಿರುವುದೋ ಎಂದು ಹೇಳುವವನ ಹಾಗೆ, ನೀವು ಇನ್ನೇನೂ ದೂರವಿಲ್ಲ, ಇಂದೇ ನೀವು ಕಾಣುವಿರಿ. ಬನ್ನಿ ಇನ್ನು ದಾರಿಯ ಮಾತೇಕೆ?''

''ಆಗಲಿ. ಅದಕ್ಕೇನು? ಹಾದಿಯಲ್ಲಿ ನಮಗೆ ಒಂದಿಷ್ಟು ಹೊತ್ತು ಹೋಗಲಿ. ಶ್ರೀ ಗುರುವಿನ ಪುಣ್ಯ ಕಥೆಯನ್ನು ಮಾತನಾಡಿದರೆ ಆಗದೆ?'' ''ವೀರಂಜಯಾ. ಈ ಮೊದಲು

ನಾನು ಆದಿನಾಥನನ್ನು ಕಂಡಿರುವುದು ನಿಜ. ಆ ದೇವನ ಇರುವಿಕೆಯೂ ಆ ಸಭೆಯೂ ಲೋಕಕ್ಕೊಂದು ಆಶ್ಚರ್ಯದ ಸಂಗತಿ. ಜಿನಸಭೆ, ಜಿನವಾಸ, ಸಮವಸರಣ, ಜಿನಪುರ — ಎಂದರೆ ಒಂದೇ ಅರ್ಥ. ಅದು ಜಿನನಿರುವ ಸುಕ್ಷೇತ್ರದ ಹೆಸರು. ತಮ್ಮ! ಗಿರಿಯನ್ನು ಮುಟ್ಟದೆ, ಗಿರಿಯಿಂದ ಐದು ಸಾವಿರ ಮಾರು ಮೇಲೆ ಗಿರಿಯನ್ನು ಬಿಟ್ಟು, ಆತನ ಸಭೆ ಇದೆಯೆಂದರೆ ಇದನ್ನು ಏನೆಂದು ಹೇಳುವುದು? ತನಗೆ ಒಂದಿಷ್ಟೂ ಆಧಾರವಿಲ್ಲದೆ, ಮೂರು ಲೋಕಕ್ಕೂ ಆಧಾರವಾಗಿರುವ ಆವನ ಅರಮನೆ ಅದು. ಇದೊಂದು ಆಶ್ಚರ್ಯವಲ್ಲದೇ ಸಾಮಾನ್ಯವೇ? ಯಾವ ಹಂಗನ್ನೂ ಹೊಂದದವನೆಂದರೆ ಆ ದೇವನೊಬ್ಬನೆ. ವಾಸಿಸಲು ಅವನಿಗೆ ಗಿರಿಭೂಮಿಗಳ ಹಂಗಿಲ್ಲ, ಆವನು ಆವಾಸವನ್ನೇ ಹೊಂದದಿರುವನು. ಇಂದ್ರನ ಆಜ್ಞೆಯಂತೆ ಕುಬೇರನು ಅದನ್ನು ಜೋಡಿಸಿದನು. ಅದಕ್ಕೆ ಇಂದ್ರನೀಲದ ನೆಲಗಟ್ಟು. ಚಂದ್ರ ಮಂಡಲದಂತೆ ಅದು ವೃತ್ತಾಕಾರವಾಗಿದೆ. ನೋಟಕ್ಕೆ ಹನ್ನೆರಡು ಗಾವುದ ವಿಸ್ತೀರ್ಣವಾಗಿದೆ, ಆ ಪವಿತ್ರಸ್ಥಳ. ಆದರೆ ಬಂದಷ್ಟು ಜನಕ್ಕೂ ಸ್ಥಳವಾಗಿ, ಶತಕೋಟಿ ಯೋಜನಕ್ಕೂ ಹೆಚ್ಚಾದ ಸ್ಥಳವೆನಿಸುವುದು. ಬಂದಷ್ಟು ಮಳೆ ಹೊಳೆಗಳ ನೀರನ್ನೊಳಗೊಂಡು ಮುಂದೆ ಒತ್ತಿಭಾರದಿರುವ ಸಮುದ್ರದ ಹಾಗೆ, ಬಂದಷ್ಟು ಜನರಿಗೂ ಸ್ಥಳವಿತ್ತು ತಾನು ಎಂದಿನಂತೇ ಅಳತೆಗೆ ಒಳಗಾಗಿರುವುದು. ಅದರ ತಳವು ಹರಿನೀಲದಿಂದಾದುದು. ಆದರ ಮೇಲಿನ ಕೋಟೆ, ಕರುಮಾಡ ಬಸದಿ ಮುಂತಾದ ರಚನೆಗಳೆಲ್ಲ ಬಂಗಾರ ಮತ್ತು ನವರತ್ನಮಯವಾಗಿ ಬೆರಕೆ ಬಣ್ಣದಿಂದ ಶೋಭಿಸುತ್ತಿದೆ. ಕೆಂಪಾದ ಪಟ್ಟಿಯಿಂದಾದ ಕ್ಷೇತ್ರವೋ, ಕಾಮನ ಬಿಲ್ಲಿನಂತೆ ಆಗಿರುವ ಭೂಮಿಯೋ, ಎಂಬಂತೆ ಕೋಟಿ ಸೂರ್ಯ ಚಂದ್ರರ ಪ್ರಕಾಶದಿಂದ ಪ್ರಥಮ ಜಿನನ ನಗರವು ಕಂಗೊಳಿಸುವುದು. ಆಕಾಶವೆಂಬ ಸಮುದ್ರದಲ್ಲಿ ಕದಂಬ ವರ್ಣದ ಮಹಾ ಮಹಾ ಕಮಲವೊಂದು ಇಂಬಾಗಿ ಅರಳಿರುವುದು ಅಚ್ಚರಿಯಾಗಿ ಕಾಣುವುದು, ತಮ್ಮ. ತನ್ನ ಬೆಳಕನ್ನು ಹತ್ತು ದಿಕ್ಕುಗಳಿಗೂ ಹಬ್ಬಿಸಿ, ಮಧ್ಯದಲ್ಲಿ ಒಂದು ಸೂರ್ಯ ಮಂಡಲದ ಕಾಂತಿಯಂತೆ ಮೆರೆಯುತ್ತಿದೆ. ಉರಿಯಿಲ್ಲದ ಸೂರ್ಯಬಿಂಬದಂತೆ, ಕುಂದು ಕೊರತೆಯ ಮಾತಿಲ್ಲದ ಚಂದ್ರಬಿಂಬದಂತೆ, ಗಿರಿರಾಜನು ನೋಡುವ ಕನ್ನಡಿಯಂತೆ ಆದಿ ಪುರುಷನ ಈ ಪುರವು ಇದೆ. ಭೂಮಿ ಆಕಾಶಗಳನ್ನು ತುಂಬಿರುವ ನಿರ್ಮಲಕಾಂತಿಯ ಸಮುದ್ರದಲ್ಲಿರುವ ನವರತ್ನ ರಚನೆಯ ಹಡಗಿನಂತೆ ಸಮವಸರಣವಿರುವುದು. ಅದು ಚಲಿಸುವುದೂ ಸ್ವಾಮಿಯ ಇಚ್ಛೆಯಂತೆ. ಸುಕೃತಿಗಳು ಇರುವಲ್ಲಿಗೆ ಅರುಹನು ಚಲಿಸಿದರೆ ಅದು ಸುಕೃತದಂತೆ ಜೊತೆಯಲ್ಲೇ ಹೋಗುವುದು. ಪ್ರಕೃತಿಯಿಂದ ತಾರಾದ್ರಿಗೆ ಹೋದರೂ ವಿಕೃತಿಯಾದಂತೆ ಅದು ಕೂಡಲೇ ಬರುವುದು. ತಮ್ಮ! ಈ ವಿಚಿತ್ರವನ್ನು ನೋಡು. ವಾಹನಗಳು ಚಲಿಸುವಂತೆ ಅರುಹಂತನು ಒಂದು ಪುರವನ್ನೇ ಚಲಿಸುವಂತೆ ಮಾಡುತ್ತಾನೆ. ಅವನ ಗಾಡಿಯು ಸಾಮಾನ್ಯವೇ? ನಾಲ್ಕು ದಿಕ್ಕುಗಳಿಂದ ಕಟ್ಟಿದ ರತ್ನಸೋಪಾನಗಳಿಂದ ಬೆಟ್ಟದ ಮೇಲೊಂದು ನವರತ್ನಮಯವಾದ ಬೆಟ್ಟವೇ ನಿಂತಂತೆ ಒಪ್ಪಿರುವುದು.

''ಆದಿದೇವನ ಈ ನಗರದಲ್ಲಿ ಒಂಬತ್ತು ಕೋಟೆಗಳಿವೆ. ನವರತ್ನಗಳಿಂದಾದ ಕೋಟೆ ಒಂದು; ಮಾಣಿಕದ ಕೋಟೆ ಒಂದು; ಬಂಗಾರದ ಕೋಟೆಗಳು ಐದು. ಸ್ಫಟಿಕದ ಕೋಟೆಗಳು ಎರಡು. ಮೊದಲು ಒಂದು ನವರತ್ನ, ಮುಂದಿನದು ಎರಡು ಅಪರಂಜಿ, ಅನಂತರವಿರುವುದು ಪದ್ಮರಾಗ. ಆಮೇಲೆ ಮೂರು ಬಂಗಾರದವು. ಎರಡು ಹೊಳೆಯುವ ಸ್ಫಟಿಕದ ಕೋಟೆಗಳು, ನಾಲ್ಕು ಸಾಲೆಗಳಿವೆಯೆಂದು ಹೇಳಿದರು. ಅಲ್ಲಿ ಐದು ವೇದಿಕೆಗಳಿವೆ. ಈ ನಾಲ್ಕು ಸಾಲೆಗಳೂ ಐದು ವೇದಿಕೆಗಳೂ ಕೂಡಿ ಒಂಬತ್ತು ಕೋಟೆಗಳು. ನಾಲ್ಕು ದಿಕ್ಕಿಗೂ ನಾಲ್ಕು ಬಾಗಿಲುಗಳಿವೆ. ನಾಲ್ಕು ದಿಕ್ಕಿನಲ್ಲೂ ರಾಜಬೀದಿಗಳಿವೆ. ನಾಲ್ಕು ದಿಕ್ಕುಗಳಲ್ಲೂ ಮಾನಸ್ತಂಭಗಳು ನಿಂತು ಮೇಲುಲೋಕವನ್ನು ಮುಟ್ಟುತ್ತಿವೆ. ಎಂಟು ಕೋಟೆಗಳಲ್ಲೂ ದ್ವಾರಪಾಲಕರಿದ್ದಾರೆ. ಮುಂದಿನ ಒಂದು ಕೋಟೆಗೆ ಇಲ್ಲ. ಮೊದಲಿನ ಎಂಟು, ಭೂಮಿಗಳಾಗಿವೆ. ಮೊದಲಿನ ಸುತ್ತಿನಲ್ಲಿ ಬಂಗಾರದ ಉಪ್ಪರಿಗೆಗಳೂ ರತ್ನದ ಬಸದಿಗಳೂ ತುಂಬಿವೆ. ಅದರ ಮುಂದೆ ಉತ್ತಮವಾದ ತೀರ್ಥವು ಗಂಧೋದಕದ ನದಿಯಾಗಿ ಹರಿದು ಸುತ್ತಿದೆ. ಮೂರನೆಯ ಸುತ್ತಿನಲ್ಲಿ ಹೃದ್ಯವಾದ ಪರಿಮಳವುಳ್ಳ ಹೂವಿನ ತೋಟವಿದೆ. ನಾಲ್ಕನೆಯ ಸುತ್ತಿನಲ್ಲಿ ಉದ್ಯಾನಗಳೂ ಚೈತ್ಯಾಲಯಗಳೂ ಮರಗಳೂ ಇರುವುವು. ಆನೆ, ಸಿಂಹ, ಬಸವ, ಮುಂತಾದ ಧ್ವಜಗಳು ಐದನೆಯ ಭೂಮಿಯಲ್ಲಿವೆ. ಕಲ್ಪವೃಕ್ಷ, ಸಿದ್ಧ ವೃಕ್ಷಗಳಿಂದ ಸಿಂಗಾರವಾಗಿ ಆರನೆಯ ಭೂಮಿ. ಏಳನೆಯ ಭೂಮಿಯು ಜಿನಗೀತದಿಂದಲೂ ವಾದ್ಯನೃತ್ಯಗಳಿಂದಲೂ ಕೂಡಿ ಮೆರೆವುದು. ಮುಂದೆ ಮುನಿಗಳೂ ನರರೂ ಸುರರೂ ಇರುವ ಭವ್ಯರ ಎಂಟನೆಯ ಭೂಮಿಯಿದೆ.

''ದ್ವಾರಪಾಲಕರು ಇಲ್ಲದಿರುವ ಒಂಬತ್ತನೆಯ ಪ್ರಾಕಾರದೊಳಗೆ ಮೂರು ಪೀಠಗಳು ರಾರಾಜಿಸುತ್ತಿವೆ. ವೀರಂಜಯ, ಅದರ ಶೋಭೆಯನ್ನು ಮನವಿಟ್ಟು ಕೇಳು. ಒಂದು ವೈಢೂರ್ಯ, ಮತ್ತೊಂದು ಅಪರಂಜಿ. ಇನ್ನೊಂದು ನಾನಾ ರತ್ನಗಳ ರಚನೆಯಿಂದಾಗಿದೆ. ಒಂದರ ಮೇಲೊಂದು ನಿಂತಿರುವ ಈ ಮೂರು ಪೀಠಗಳು ರತ್ನತ್ರಯಗಳಂತೆ ಇರುವುವು. ಮೇಲಿನ ಪೀಠದ ಮೇಲೆ ನಾನಾ ರತ್ನಗಳಿಂದ ಕೀಲಿತವಾದ ನಾಲ್ಕು ಸಿಂಹಗಳಿವೆ. ಅವು ಕಣ್ಣು ತೆರೆದು, ಬಾಲವೆತ್ತಿ ಕೇಸರವನ್ನು ಕೆದರಿನಿಂತಿವೆ. ಮೂಡು, ಪಡು, ತೆಂಕು ಮತ್ತು ಬಡಗು ದಿಕ್ಕುಗಳನ್ನು ಅವು ಮೋರೆಯೆತ್ತಿ ನೋಡುತ್ತಿರುವುದನ್ನು ನೋಡಿದರೆ, ಇವು ಮಾಡಿದ ಮಾಟದ ಸಿಂಹಗಳಲ್ಲ, ಸಜೀವ ಸಿಂಹಗಳಂತೆ ತೋರುತ್ತಿವೆ. ಆ ಸಿಂಹಗಳ ಮೇಲೆ ಚಿನ್ನದ ತಾವರೆಯು ಸಾವಿರ ಎಸಳುಗಳನ್ನು ಸುತ್ತಲೂ ಕೆದರಿ, ಕೇಸರ ಕರ್ಣಿಕೆಯಿಂದ ಶೋಭಿಸುತ್ತ ಹತ್ತು ದಿಕ್ಕುಗಳಿಗೂ ಸುಗಂಧವನ್ನು ಸೂಸುತ್ತಿದೆ. ಪದ್ಮಕರ್ಣಿಕೆಯಿಂದ ಮೇಲೆ ನಾಲ್ಕು ಬೆರಳಷ್ಟು ಪದ್ಮವನ್ನು ಬಿಟ್ಟು ಆಕಾಶದಲ್ಲಿ ಪದ್ಮರಾಗ ಅಂಘ್ರಿ ಪಲ್ಲವನಾದ ಆದಿದೇವನು ಪದ್ಮಾಸನದಲ್ಲಿ ಒಪ್ಪಿರುವನು. ಎರಡು ಕೋಟಿ ಬಾಲ ಸೂರ್ಯರು ಒಂದು ಕೂಡಿದಂತೆ ಉಂಟಾಗಿರುವ ದೇಹಕಾಂತಿಯಿಂದ, ಆದಿಜಿನನು ಆ ತಳತಳಿಸುತ್ತಿರುವ ಶಾಂತಿಸಾಗರದಲ್ಲಿರುವನು. ಮೂರು ಲೋಕಗಳಿಗೂ ಇವನೊಬ್ಬನೇ ದೇವನೆಂದು ಲೋಕಕ್ಕೆ ತಿಳಿಸುವಂತೆ, ಉತ್ತಮವಾದ ಮುತ್ತಿನ ಮೂರು ಸುತ್ತಿಗೆಗಳ ನೆರಳಲ್ಲಿ ಓಲಗವಾಗಿ ಒಪ್ಪಿರುವನು. ಬೀಸುತ್ತಿರುವ ಅರವತ್ತನಾಲ್ಕು ಚಾಮರಗಳಿಂದಾಗಿ

ಹಾಲು ಕಡಲಿನ ತೆರೆಗಳ ಮಾಲೆಯಲ್ಲಿ ಓಲಗವಾಗಿರುವಂತೆ ತೋರುವನು. ಅಂತಿರುವ ಜಿನೇಂದ್ರನನ್ನು ನೋಡಿದೆನು. ಅವನ ಸುತ್ತಲೂ ಅಖಂಡವಾದ ಬಿಲ್ಲಿನಂತೆ ಪ್ರಭಾಮಂಡಲವು ಶೋಭಿಸುತ್ತಿರುವುದು. ಅದು ಆದಿ ಜಿನನಿಗೊಂದು ಪರಿಮಂಡಲವಾದಂತೆ ಕಾಣುವುದು. ಅರುಹನನ್ನು ಕಂಡರೆ ಶೋಕವಿಲ್ಲವೆಂಬುದನ್ನು ತನ್ನ ಆಕಾರದಿಂದಲೇ ಹೇಳುವಂತೆ ಬೇಕಾದ ನವರತ್ನಗಳಿಂದ ಕೂಡಿದ ಅಶೋಕೆಯ ಮರವು ಕಂಗೊಳಿಸುವುದು. ದೇವತೆಗಳು ಆಕಾಶದಲ್ಲಿ ನಿಂತು, 'ವೃಷಭನಾಥನೆ ಜಯ ಜಯ'ವೆನ್ನುತ್ತ ಅವನ ಮಸ್ತಕದ ಮೇಲೆ ಸ್ವರ್ಗಲೋಕದ ಹೂಗಳ ಮಳೆಯನ್ನು ಕರೆಯುತ್ತಿರುವರು. ಸಮವಸರಣದಲ್ಲಿ ಶಂಖ, ಕಹಳೆ ಮುಂತಾದ ಅಮರ ವಾದ್ಯಗಳು ಮೊಳಗುತ್ತಿವೆ. ನವ್ಯವಾಗಿ, ಮಧುವಾಗಿ, ಮೃದುವಾಗಿ ಗಂಭೀರವಾಗಿ, ದಿವ್ಯವಾಣೀಶನ ಮುಖಪದ್ಮದಲ್ಲಿ ನಿತ್ಯವೂ ದಿವ್ಯನಾದವು ಹುಟ್ಟುವುದು. ಅದು ಭವ್ಯಲೋಕಕ್ಕೆ ಹಿತವಾಗಿದೆ. ಹೂಮಳೆ, ಕಲ್ಪವೃಕ್ಷ, ಮೂರು ಸುತ್ತಿಗೆ, ಚಾಮರ, ದಿವ್ಯನಾದ, ಪ್ರಭಾಮಂಡಲ, ಭೇರಿ, ಸಿಂಹಾಸನ..... ಇವು ಸ್ವಾಮಿಗೆ ಅಧಿಕವಾಗಿ ಎಂಟು ಚಿಹ್ನೆಗಳು.

ಅರ್ಕಕೀರ್ತಿರಾಜನು ಭಕ್ತಿಯಿಂದ ಬಿತ್ತರಿಸುತ್ತಿರುವ ಸಮವಸರಣದ ವರ್ಣನೆಯುನ್ನೇ ಮೇರಂಜಯ ರಾಜನೇ ಮೊದಲಾದವರು ದೇಶಭಕ್ತಿಯಿಂದ ಕೇಳಿ ಪುಳಕಿತರಾಗುತ್ತಿದ್ದರು.

"ಇನ್ನೊಂದು ವಿಚಿತ್ರವುಂಟು ಕೇಳು" — ಎಂದು ಅರ್ಕಕೀರ್ತಿ ರಾಜನು ಸಮವಸರಣ ವರ್ಣನೆಯನ್ನು ಮುಂದುವರಿಸಿದನು. "ಜಿನನು ಏಕಮುಖನಾಗಿರುವನು. ಆದರೆ ಎಲ್ಲರೂ ನಾಲ್ಕು ದಿಕ್ಕುಗಳಲ್ಲೂ ನಿಂತು ನೋಡುತ್ತಿರುವುದರಿಂದ ಚತುರ್ಮುಖನಾಗಿ ಒಪ್ಪುತ್ತಿರುವನು. ಅರುಹಂತನಿಗೆ ಹತ್ತು ಸಹಜಗಳು ಘಾತಿ ವಿಜಯದಿಂದ ಹತ್ತು ಅತಿಶಯಗಳಾಗಿರುವುವು. ಸುರರು ವಿಸ್ತರಿಸುವುದರಿಂದ ಅವು ಹದಿನಾಲ್ಕು ಆಗಿವೆ. ಹೀಗೆ ಅತಿಶಯಗಳು ಮೂವತ್ತನಾಲ್ಕು ಇವೆ."

'ಎಂಟನೆಯ ಭೂಮಿ, ಒಂಭತ್ತನೆಯ ಭೂಮಿ — ಎಂದು ಭೂಮಿಗಳು ಎರಡಿವೆ. ಇವೆರಡನ್ನೂ ಕೆಲವರು ಒಂದುಗೂಡಿಸಿ, ಲಕ್ಷ್ಮೀ ಮಂಟಪವೆಂದು ಕರೆಯುವರು. ಎಂಟನೆಯ ಭೂಮಿಯ ಹೊರಗೆ ಲಕ್ಷ್ಮಿಯ ಮಂಟಪವೆಂದು ಕೆಲವರೂ, ಒಂಭತ್ತನೆಯ ಭೂಮಿಯ ಹೊರಗೆ ಲಕ್ಷ್ಮಿಯ ಮಂಟಪವೆಂದು ಕೆಲವರೂ ಹೇಳುತ್ತಾರೆ. ಶ್ರೀ ಮುನಿಗಳೇ ಮೊದಲಾದ ಹನ್ನೆರಡು ಅಂಗಗಳ ಮಹಾಗಣದ ಸಂಪತ್ತೂ ಶ್ರೀ ಸ್ವಾಮಿಯೂ ಕೂಡಿ ಅಲ್ಲಿರುವುದರಿಂದ ಅದನ್ನು ಶ್ರೀ ಮಂಟಪವೆನ್ನಬಹುದು. ಆ ಮಂಟಪಕ್ಕೆ ಶುದ್ಧವಾದ ಅಪರಂಜಿಯ ಕಂಬಗಳೂ ಅವುಗಳ ಮೇಲೆ ನವರತ್ನಗಳ ಶಿಖರಗಳೂ, ಮಾಣಿಕ್ಯದ ಕಲಶಗಳೂ ಇದ್ದುದರಿಂದ ಗಂಧಕುಟಿ ಎಂದೂ ಹೇಳುವರು. ಸಿಂಹಗಳ ಮೇಲೆ ಶೋಭಿಸುವ ತಾವರೆಯ ಸುಗಂಧ, ಹೂಮಳೆಯ ಸುಗಂಧ, ಬಂಧುರವಾದ ಜಿನದೇಹದ ಗಂಧಗಳು ತುಂಬಿರುವುದರಿಂದ ಗಂಧಕುಟಿಯೆನ್ನಬಹುದು. ಎಂಟನೆಯ ಭೂಮಿಯನ್ನೇ ಗಣಭೂಮಿಯೆನ್ನುವುದು. ಸುತ್ತುವ ಅಂಕಣಗಳು ಹನ್ನೆರಡು ಇವೆ. ಗಣಧರರೇ ಮೊದಲಾದ ಹನ್ನೆರಡು ವಿಧದ ಭವ್ಯ ಗಣರು ಅದರೊಳಗೆ ಇರುವರು. ಯತಿಗಳು, ಅಮರಿಯರು, ಅಜ್ಜಿಕೆಯರು, ನಕ್ಷತ್ರ ಸತಿಯರು, ಭೂತನಾಗ ಕನ್ನಿಕೆಯರು,

ನರರು ಮೊದಲಾದದವರು ಅಲ್ಲಿರುವರು. ಸಿಂಹಗಳೂ ಇವೆ. ಆದಿದೇವನು ಪೂರ್ವಾಭಿಮುಖನಾಗಿರುವನು. ಅಲ್ಲಿ ತುಂಬಿರುವ ಗಣಧರರೆಲ್ಲರೂ ಪ್ರದಕ್ಷಿಣವಾಗಿ, ಋಷಿಗಳಿಂದ ತೊಡಗಿ ಸಿಂಹಗಳವರೆಗೆ ಎಲ್ಲರೂ ಜಿನನನ್ನು ಓಲೈಸುತ್ತಿದ್ದಾರೆ.

"ಗಣಭೇದದಿಂದ ಹನ್ನೆರಡು ಅಂಗಗಳು, ಗುಣಭೇದದಿಂದ ಹದಿಮೂರು ಆಗಿವೆ. ಆದಿನಾಥನ ಓಲಗದ ಕಟ್ಟಣೆಯನ್ನು ಎಣಿಸಿ ಹೇಳುವೆನು. ಆಸನ್ನ ಭವ್ಯನೇ ಕೇಳು!" ಎಂದು ಅರ್ಕಕೀರ್ತಿ ರಾಜನು ತನ್ನ ವಿವರಣೆಯನ್ನು ಮುಂದುವರಿಸಿದನು.

'ದೊರೆಗೆ ಮಂತ್ರಿಗಳು ಇರುವಂತೆ, ಮೂರು ಲೋಕದ ಪತಿಯ ಸನ್ನಿಧಿಯಲ್ಲಿ ಗಣಧರರೆಂಬ ಎಂಭತ್ತನಾಲ್ಕು ಮಂದಿ ಪರಮ ಮುನಿಗಳಿದ್ದಾರೆ. ಹದಿನಾಲ್ಕು ಪೂರ್ವೆಯನ್ನು ತಾಳಿದ ಹದಿನಾಲ್ಕು ಸಾವಿರದ ಏಳುನೂರೈವತ್ತು ಮಂದಿ ಸಿದ್ಧಾಂತ ಸಾಗರರಿದ್ದಾರೆ. ನಾಲ್ಕು ತತ್ತ್ವಗಳನ್ನು ಹಿಡಿ, ಮೂರು ತತ್ತ್ವಗಳಲ್ಲಿ ಸಿಕ್ಕದಿರು — ಎಂಬ ಶಿಕ್ಷಕರು ನಾಲ್ಕು ಸಾವಿರದ ನೂರೈವತ್ತು ಮಂದಿ ಇದ್ದಾರೆ. ಉತ್ತಮವಾದ ಆತ್ಮಧ್ಯಾನವು ಅಲ್ಲವೆಂದೂ ಸಲ್ಲದೆಂದೂ ಹೇಳುವವರನ್ನು ಎತ್ತಿ ಆಚೆ ಈಚೆ ಮಾಡುವಂಥ ವಾದಿಗಳು ಹನ್ನೆರಡು ಸಾವಿರದ ಏಳುನೂರೈವತ್ತು ಮಂದಿ ಇದ್ದಾರೆ. ಅಣುಮೆ ಮಹಿಮೆ ಮೊದಲಾದ ಕ್ರಿಯೆಗಳನ್ನು ಕ್ಷಣಕ್ಕೊಂದರಂತೆ ಮಾಡಿ ತೋರಿಸುವ, ಸಮರ್ಥರು ಇಪ್ಪತ್ತಾರು ಸಾವಿರ ಇದ್ದಾರೆ. ಹಿಂದಿನ ಮತ್ತು ಮುಂದಿನ ಜನ್ಮಗಳನ್ನು ನೋಡಿದಂತೆ ಹೇಳುವ ಅವಧಿ ಜ್ಞಾನಿಗಳು ಒಂಬತ್ತು ಸಾವಿರ ಮಂದಿ ಪ್ರಮಾಣವೆಂಬಂತೆ ಸಾಲುಸಾಲಾಗಿ ಇರುವರು. ಯಾರು ಏನನ್ನು ನೆನೆದರೂ, ಅದನ್ನು ಹೇಳುವ ಬುದ್ಧಿವಂತರು ಹನ್ನೆರಡು ಸಾವಿರದ ಏಳುನೂರೈವತ್ತು ಮಂದಿ ಸೇರಿರುವರು. ದೇವನಂತಹ ಸುಖವನ್ನೂ ದೇವನಂತಹ ಶಕ್ತಿಯನ್ನೂ ದೇವನಂತೆ ಅರಿವನ್ನೂ ಪಡೆದಿರುವ ಕೈವಲ್ಯಬೋಧರು ದೇವನ ಸುತ್ತ ಮುತ್ತಲೂ ಇಪ್ಪತ್ತುಸಾವಿರ ಇರುವರು. ಪಾವನ ಚರಿತೆಯುಳ್ಳ ಅಜ್ಜಿಕೆಯರು ಪುರುದೇವನ ಆಸ್ಥಾನದ ಕೋಣೆಯಲ್ಲಿ ಮೂರು ಲಕ್ಷದ ಐವತ್ತು ಸಾವಿರ ಇದ್ದಾರೆ. ಮೋಕ್ಷಗಾಮಿಗಳೂ ಭೇದ ಮತ್ತು ಅಭೇದ ಭಕ್ತಿಯ ಲಕ್ಷಣವರಿತಿರುವ ಭಾವುಕರೂ, ಆ ಕ್ಷೇತ್ರದಲ್ಲಿ ಉತ್ತಮ ವ್ರತಗಳನ್ನಾಚರಿಸುತ್ತ, ಮೂರು ಲಕ್ಷ ಇದ್ದಾರೆ. ಆದಿದೇವನ ಚೊಕ್ಕದಾದ ಚಾವಡಿ ಕೋಣೆಯಲ್ಲಿ ಸುವ್ರತ ಮೊದಲಾದ ಹದಿನೈದು ಲಕ್ಷ ಹೆಮ್ಮಕ್ಕಳು ಒಪ್ಪಿರುವರು. ಸುರರೂ, ನಾಗರರೂ, ನಕ್ಷತ್ರರೂ, ಯಕ್ಷರೂ, ಕಿಂಪುರುಷರೂ, ಗಂಡರೂ, ಗಂಧರ್ವರೂ ಅವರವರ ತರುಣಿಯರನ್ನು ಕೂಡಿಕೊಂಡು ಅಲ್ಲಿ ನೆರೆದಿದ್ದಾರೆ. ಅವರ ಸಂಖ್ಯೆಯನ್ನು ಹೇಳುವುದೇ ಅಸಾಧ್ಯ, ಜಗತ್ತಿನ ಜನರು ಓಲಗಿಸುವುದೇನೂ ಆಶ್ಚರ್ಯವಲ್ಲ, ಪಕ್ಷಿಗಳು, ಮೃಗಗಳು, ಸಿಂಹಗಳು ಮೊದಲಾದುವು ದೇವನ ಕೊನೆಯ ಓಲಗಶಾಲೆಯಲ್ಲಿ ಅಸಂಖ್ಯಾತವಾಗಿವೆ. ಅವರೆಲ್ಲರೂ ಶಾಂತರಾಗಿದ್ದಾರೆ. ಗಣಧರರು, ಶ್ರುತಧರರು, ವಾದಿಗಳು, ಶಿಕ್ಷಕರು, ಜಿನರು, ಅಣಿಮಾದಿಗಳನ್ನು ಸಾಧಿಸಿದವರು, ಗಣನಿರ್ವೃತಿಕ ಸತಿಗಳು, ಸುರರು, ಮೃಗರಾಜರು ಮುಂತಾಗಿ ಹದಿಮೂರು ಗಣದವರು ಅಲ್ಲಿರುವರು. ಅಲ್ಲಿರುವ ಅಮರ ಗಣಕ್ಕೂ ಸಿಂಹಗಣಕ್ಕೂ ಲೆಕ್ಕವೇ ಇಲ್ಲ, ಮೊದಲು ಹನ್ನೆರಡು

ಭೇದವಿದ್ದ ಗಣವು ಹದಿಮೂರು ಆಗಿದೆ. ಆಮೇಲೆ ನೂರು ಮಂದಿ ಇಂದ್ರರ ಒಂದು ಆಚಾರ್ಯ ಗಣವೆಂದು ಕೊನೆಯಲ್ಲಿ ನೂರೊಂದು ಗಣವಿರುವುದು.

'ಈವರೆಗೆ ನಾನು ಸೂಚಿಸಿದ ಅತಿಶಯವೆಲ್ಲ ಬಾಹ್ಯ ಸಂಪತ್ತಾಗಿರುವುದು. ತಿಳಿದ ಹಾಗೆ ಜಿನನ ಅಂತರಂಗ ಸಂಪತ್ತನ್ನು ಹೇಳುತ್ತೇನೆ. ಕೇಳು' ಎಂದು ಅರ್ಕಕೀರ್ತಿ ರಾಜನು ಮುಂದೆ ಶ್ರೀ ಜಿನನನ್ನು ಬಣ್ಣಿಸತೊಡಗಿದನು.

''ಶ್ರೀಪಾದದಿಂದ ಮಸ್ತಕದವರೆಗೆ ಸರ್ವಾಂಗವ್ಯಾಪಿಯಾಗಿರುವನು ಅವನ ಆತ್ಮನು. ಸುಪ್ರಭೆಯು ಅಡಿಯಿಂದ ಮುಡಿ ತುಂಬಿ ಮಣಿದೀಪದ ಬೆಳಕಿನಂತಿರುವುದು. ಪ್ರಭೆ ಬೇರೆ, ರತ್ನ ಬೇರೆ ಅಲ್ಲವೆಂಬಂತೆ ಆತ್ಮ ಪ್ರಭೆಯೇ ರೂಪವಾಗಿರುವನು ಆದಿದೇವ. ಪ್ರಭೆ ಮತ್ತು ಸುಜ್ಞಾನಗಳು ನುಡಿದಾಗ ಎರಡಾದರೂ ಅರ್ಥದಲ್ಲಿ ನೋಡುವಾಗ ಒಂದೇ ರೂಪು. ಅಗ್ನಿಯನ್ನು ಬೆಳಕು ಎಂದೂ ಉರಿಯೆಂದೂ ಹೇಳುವರು. ವಿಚಾರಿಸಿ ನೋಡಿದರೆ ಅಗ್ನಿಯಲ್ಲಿ ಎರಡೂ ಒಂದೆ. ಭಗ್ನನಾದ ದುರಾತ್ಮನಿಗೆ ಸುಪ್ರಭೆ ಸುಜ್ಞಾನಗಳು ಒದಗಿದರೂ ಒಂದೇ ರೂಪು. ಅಗ್ನಿ, ಅಗ್ನಿಯ ಬೆಳಕು, ಉರಿ — ಹೀಗೆ ಮೂರೆಂದರೂ ಅಗ್ನಿಯಲ್ಲಿ ಒಂದೇ ರೂಪವಾಗಿರುವುದು. ಅದರಂತೆ ಜೀವನ ತಿಳಿವಳಿಕೆ, ಬೆಳಕುಗಳು ಮೂರಾದರೂ ನಗ್ನಾತ್ಮನೆಂಬಾಗ ಒಂದೇ ಪುರುಷಾಕಾರದ ರತ್ನದ ಮೂಷೆಯಲ್ಲಿಟ್ಟ ಒಂದು ಶುದ್ಧವಾದ ಸ್ಫಟಿಕವೆಂಬಂತೆ ಪುರುಷನ ದಿವ್ಯದೇಹದಲ್ಲಿ ಪರಮಾತ್ಮನಿರುವನು. ಸ್ಫಟಿಕದ ಪುರುಷನಾದರೆ ಹಿಡಿಯುವುದಕ್ಕೂ ಕಣ್ಣಿಗೆ ನೋಡಲಿಕ್ಕೂ ಸಿಗುತ್ತಾನೆ. ಆದರೆ ಜಿನನು ಹಾಗಲ್ಲ. ತೀರ್ಥಂಕರನ ಆತ್ಮಬಯಲರೂಪಿನ ಸ್ಫಟಿಕದ ಪುರುಷನಂತಿರುವನು. ಗಾಜಿನ ಕುಪ್ಪಿಗೆಯೊಳಗೆ ದೀಪವನ್ನಿಟ್ಟರೆ, ಅದರ ಜ್ಯೋತಿಯ ಹೊರಗೂ ಶೋಭಿಸುವಂತೆ, ಶ್ರೀ ಜಿನನ ಉಜ್ವಲವಾದ ದೇಹವನ್ನು ಸೇರಿದ ಆತ್ಮದ ಕಾಂತಿಯು ಹೊರಗೆ ಹೊಳೆಯುವುದು. ಗುರುವು ಮೊದಲು ಹೇಳಿದ ಧ್ಯಾನದಿಂದ ಬೋಧ ದರ್ಶನಾವರಣವು ಸುಟ್ಟು ಹೋಗಿ, ಕಿರಣವು ತಾಗಿ ಹೊರಹೊಮ್ಮಿ ಹೊಳೆಯುವಂತೆ ಸುಜ್ಞಾನ, ಸುದರ್ಶನಗಳು ಎರಡೂ ರಾರಾಜಿಸುವುವು. ಶ್ರೀ ಜಿನನು ಅಂಗುಷ್ಠದಿಂದ ಮಸ್ತಕದವರೆಗೆ ಸುಜ್ಞಾನದಿಂದ ಶೃಂಗಾರವಾಗಿರುವನು. ಅಂಗುಷ್ಠದ ಅಣುವಿನಲ್ಲಿ ಲೋಕವೇ ಇರುವುದು. ಆದ್ದರಿಂದ ಸರ್ವಾಂಗದಲ್ಲೂ ಸುಜ್ಞಾನಿಯಾಗಿರುವನು. ತಿಳಿಯುವ ಸುಜ್ಞಾನವು ಯಾವ ರೀತಿಯಲ್ಲಿ ದೇಹವನ್ನು ತುಂಬಿರುವುದೋ ಅದೇ ರೀತಿಯಲ್ಲಿ ನೋಡುವ ಗುಣವೂ ಶೋಭಿಸುತ್ತಿದೆ. ಆದ್ದರಿಂದ ಸರ್ವಕಾಲಗಳಲ್ಲೂ ಮೂರು ಲೋಕಗಳ ಹೊರಗನ್ನೂ ಒಳಗನ್ನೂ ತಿಳಿಯುತ್ತಿರುವನು; ಅಂತೆ ಕಾಣುತ್ತಲೂ ಇರುವನು. ಕನ್ನಡಿಯ ಇದಿರಲ್ಲಿರುವ ವಸ್ತುಗಳು, ಕನ್ನಡಿಯ ಮೈಯನ್ನು ತುಂಬಿ ಹೊರಗೆ ಹೊಳೆಯುವಂತೆ, ಪಾದದಿಂದ ಮಸ್ತಕದವರೆಗೆ ಇರುವ ಆತ್ಮನಲ್ಲಿ ವಿಶ್ವದ ಆಟಗಳು ಪ್ರತಿಬಿಂಬಿಸುವುವು. ಕಂಚಿನ ಕನ್ನಡಿಯಾದರೆ ಒಮ್ಮೆ ಕಾಣುವುದು, ಮತ್ತೊಮ್ಮೆ ಕಾಣುವುದಿಲ್ಲ. ರತ್ನದ ಕನ್ನಡಿಯಂತೆ, ಎಲ್ಲವೂ ಯಾವಾಗಲೂ ಕಾಣುವಂತೆ, ಜಿನನಿಗೆ ಸುತ್ತಲಿನ ತಿಳಿವು ಕಾಣ್ಕೆಯಾಗಿರುವುದು. ಅವನ ಸರ್ವಾಂಗದಲ್ಲಿ ತುಂಬಿ ಸುತ್ತಲೂ ಕಾಣುವುದು. ಸರ್ವಜ್ಞನಾದ ಅವನಿಗೆ ಅದು ತಿಳಿಯುವುದು ಸಹಜವೇ ಆಗಿದೆ. ಅವನನ್ನು

ಸರ್ವತೋಮುಖನು, ಸರ್ವತೋಲೋಚನನು ಎಂದು ಸರ್ವರೂ ಹೇಳುವುದು ಸತ್ಯವಾಗಿದೆ.'' ಎಂದು ಅರ್ಕಕೀರ್ತಿ ರಾಜನು ಬಣ್ಣಿಸುತ್ತಿದ್ದನು. ಅದನ್ನು ಕೇಳುತ್ತ ವೀರಂಜಯ ರಾಜನೇ ಮೊದಲಾದವರು ಮುಂದುವರಿಯುತ್ತಿದ್ದರು.

''ಹಿಂದಿನ ಅನಾದಿಕಾಲವು ಸಂದುದನ್ನೂ ಮುಂದಿನ ಅನಂತಕಾಲವು ಸಲುವುದನ್ನೂ ಇಂದು ಸಲುತ್ತಿರುವ ಕಾಲವನ್ನೂ ಜಿನದೇವನು ಒಮ್ಮೆಗೇ ಕಾಣುವನು. ಇದನ್ನು ತಿಳಿಮಕೋ'' ಎಂದು ಅರ್ಕಕೀರ್ತಿರಾಜನು ತನ್ನ ವಿವರವನ್ನು ಮುಂದುವರಿಸಿದನು. ಕಿರಿಯರಾದ ವೀರಂಜಯ ರಾಜರೇ ಮೊದಲಾದವರು ಕೇಳುತ್ತ ಮುನ್ನಡೆಯುತ್ತಿದ್ದರು. ''ಜಿನನು ಮೂರು ಲೋಕಗಳನ್ನೂ ಕಾಣುವನು. ಅವುಗಳನ್ನು ತಿಳಿದುಕೊಳ್ಳುವನು. ಆದರೆ ಅದರ ಹೊರಗೇ ದೀರ್ಘವಾಗಿ ಶೋಭಿಸುತ್ತಿರುವನು. ಅವನು ಒಂದೇ ಸಮಯದಲ್ಲಿ ಆಕಾಶದ ಕೊನೆ ಮುಟ್ಟುವುದನ್ನೂ ಬಲ್ಲನು. ಹಲವು ದ್ರವ್ಯಗಳನ್ನು, ಹಲವು ಪರ್ಯಾಯಗಳನ್ನು, ಹಲವು ಗುಣಗಳನ್ನು ಒಂದೇ ದಾರಿ ಕಂಡು ತಿಳಿಯುವನು. ಅವುಗಳಲ್ಲಿ ಯಾವುದರಲ್ಲೂ ಮೋಹವಿಲ್ಲದೆ, ಹಾರೈಸದೆ ಇರುವನು. ಒಂದನ್ನು ನೋಡಿ, ತಿಳಿದು ಬಿಟ್ಟು ಬಿಡುವನು. ಮತ್ತೊಂದನ್ನು ತಿಳಿಯುವೆನೆಂಬ ಹಂಬಲವು ಅವನಿಗಿಲ್ಲ. ಒಂದೇ ಸಮಯದಲ್ಲಿ ಎಲ್ಲವನ್ನೂ ಸಮಾನಭಾವದಿಂದ ಕಾಣುತ್ತಿರುವನು, ತಿಳಿಯುತ್ತಿರುವನು. ಕರ್ಮಿಗಳ ತಿಳಿವಳಿಕೆ, ಅವರ ನೋಟಗಳು ಅಲ್ಪವಾಗಿವೆ, ಆದ್ದರಿಂದ ಒಮ್ಮೊಮ್ಮೆ ಕ್ರಮದಿಂದ ಇರುತ್ತಾರೆ. ಆದರೆ ಕರ್ಮೋದ್ಧೂತನಿಗೆ ಕ್ರಮದ ಬಾಧೆಯಿಲ್ಲ. ಆದ್ದರಿಂದ ಅವನು ಮೊಟ್ಟ ಮೊದಲೇ ಎಲ್ಲವನ್ನೂ ತಿಳಿದು ಕೊಂಡೇ ನೋಡುವನು. ಒಂದು ಸೊಡರನ್ನು ನೋಡು, ಮನೆಮನೆಗೂ ಕೊಂಡೊಯ್ದರೆ ಆ ಮನೆಗಳನ್ನು ಬೆಳಗಿಸುವುದು. ಮೂಡುದಿಕ್ಕಿನ ಪರ್ವತಗಳ ಮೇಲೇರಿ ಬರುವ ಸೂರ್ಯನು ಒಂದೇ ಕ್ಷಣದಲ್ಲಿ ಲೋಕಕ್ಕೆಲ್ಲ ಬೆಳಕು ಕೊಡುವುದಿಲ್ಲವೆ? ಅದರಂತೆ ಇದು ಎಂದು ತಿಳಿದುಕೊ. ಭೂಮಿಯಲ್ಲಿ ಎಲ್ಲರೂ ಕಣ್ಣುಗಳಿಂದ ನೋಡಿ, ಚಿತ್ತದಿಂದ ತಿಳಿಯುವರು. ಅವರ ಹಾಗೆ ಜಿನದೇವನಲ್ಲ; ಕಣ್ಣುಗಳೂ ಚಿತ್ತವೂ ಚಲಿಸದೇ ಇರುವುವು. ಆದರೂ ಅವನು ಎಲ್ಲವನ್ನೂ ತಿಳಿದುಕೊಳ್ಳುವನು. ಆತ್ಮನಿಗೆ ತಾನಾಗಿಯೇ ಅರಿವೂ ಕಾಣ್ಕೆಗಳೂ ಇವೆ. ಕರ್ಮಾಂಗಿಗಳು ಕಣ್ಣುಗಳ ಹಂಗಿನಿಂದ ನೋಡುವರು; ಮನಸ್ಸಿನ ಹಂಗಿನಿಂದ ತಿಳಿದುಕೊಳ್ಳುವರು. ಕರ್ಮಗಳು ಹಿಂಗಿಹೋಗಿರುವ ದಿವ್ಯಾಂಗಿಗೆ ಅವುಗಳ ಹಂಗಿಲ್ಲ. ಸೊಡರಿನ ಹಂಗಿನಿಂದಲೇ ಎಲ್ಲರೂ ನಡೆಯುತ್ತಾರೆ; ಸೂರ್ಯನಿಗೆ ಸೊಡರಿನ ಹಂಗುಂಟೆ? ಅದೇ ರೀತಿಯಲ್ಲಿದೆ, ಕರ್ಮಬದ್ಧರ ಮತ್ತು ಕರ್ಮಶುದ್ಧರ ನಡತೆಗಳು. ಅದನ್ನು ಭವ್ಯರು ತಿಳಿದುಕೊಳ್ಳಬೇಕು. ರವಿಯ ಪ್ರಕಾಶವು ಹೊರಗೆ ಹರಿಯುತ್ತದೆ; ಗವಿ ಮೊದಲಾದುವುಗಳ ಒಳಗೆ ಪ್ರಕಾಶ ಹೋಗಲಾರದು. ಆದರೆ ಜಿನರವಿಯ ಬೋಧನೆಯ ಪ್ರಕಾಶವು ಭೂಮಿಯ ಒಳಗೂ ಹೊರಗೂ ತುಂಬಿರುವುದು. ಒಂದಿಷ್ಟೂ ಮರೆಯಿಲ್ಲದೆ ಲೋಕಾಲೋಕವನ್ನೆಲ್ಲ ನೋಡಿ ತಿಳಿದಿರುವನು. ಆದರೆ ಸೂರ್ಯನ ರೀತಿಯಲ್ಲಿ ಬೋಧೆಯ ಪ್ರಕಾಶವು ಜಗತ್ತನ್ನೇ ತುಂಬಿರುವುದೆಂದು ಬರೆಯುವುದು ಉಪಚಾರದ ಮಾತು. ಗುರುಶಿಷ್ಯ ಬೋಧೆಯಲ್ಲಿ ಉಪಚಾರದ ದೃಷ್ಟಾಂತವುಂಟು. ಅದು ಬಂದು

ಹೋಗುತ್ತದೆ. ಲೋಹವನ್ನು ಶೋಧಿಸಿ ಎರಕದಲ್ಲಿ ಹೊಯ್ದು ಮತ್ತೆ ಪರಿಶುದ್ಧ ಮಾಡಿ, ಅರುಹಂತನ ಪ್ರತಿಮೆಯನ್ನು ಮಾಡುವಂತೆ, ಇದರ ವಿಚಾರವಿದೆ. ಉಪಚಾರ ದೃಷ್ಟಾಂತವೂ ಹೋಗುವುದು, ನಿಶ್ಚಯದ ದೃಷ್ಟಾಂತವೊಂದೇ ಇರುವುದು. ಇದು ಉಪದೇಶದ ಅಂಗವಾದುದರಿಂದ ನಿಶ್ಚಯದ ಮಾತಿನ ದೃಷ್ಟಾಂತವನ್ನು ಕೇಳು'' ಎಂದು ಅರ್ಕಕೀರ್ತಿರಾಜನು ವಿವರಿಸಿದನು.

'ಕನ್ನಡಿಯಲ್ಲಿ ಎದುರಿಗಿರುವ ವಸ್ತುಗಳು ಕಾಣುತ್ತವೆಯಲ್ಲವೆ? ಕನ್ನಡಿಯು ಆ ವಸ್ತುಗಳನ್ನು ಮುಟ್ಟಿರುವುದೇ? ಜಿನನ ಬೋಧನೆಯ ಒಳಗೆ ಎಲ್ಲವೂ ಹೊಳೆಯುತ್ತಿರುವುದು. ಆತನು ಮಾತ್ರ ಎಲ್ಲವನ್ನೂ ಸೋಂಕದೆ ಶೋಭಿಸುತ್ತಿರುವನು. ಅವನು ದಿವ್ಯ ದೇಹದಲ್ಲಿದ್ದರೂ ಆ ದೇಹವನ್ನು ಸೋಂಕುವುದಿಲ್ಲ, ಅವನಿಗೆ ದಿವ್ಯಬೋಧನೆಯೇ ದೇಹವಾಗಿದೆ. ಭವ್ಯರ ಇಷ್ಟಾರ್ಥಕ್ಕಾಗಿ ಇಲ್ಲಿದ್ದಾನೆ. ನಾಳೆ ಅವ್ಯಯಲೋಕಕ್ಕೆ ಹೋಗುತ್ತಾನೆ. ಪರವಸ್ತುಗಳ ಹಂಗು ಕೂಡ ಅವನಿಗೆ ತಟ್ಟುವುದಿಲ್ಲವಾದರೂ ಸುಜ್ಞಾನ ಮತ್ತು ದರ್ಶನಗಳೆರಡು ಶೋಭಿಸುವಂತೆ, ಪರವಸ್ತುವೊಂದನ್ನೂ ಹಾರೈಸದೆ, ಅರುಹಂತನಿಗೆ ನಿಜವಾದ ಸುಖವಿರುವುದು. ಎಂಟು ಕರ್ಮದಲ್ಲಿ ಅಡಗಿರುವವರಿಗೆ ಹದಿನೆಂಟು ದೋಷಗಳು ಉಂಟಾಗುತ್ತವೆ. ಅದರಿಂದ ದುಃಖವುಂಟಾಗುತ್ತದೆ. ದುಃಖವುಂಟಾದವರಿಗೆ ಸುಖವುಂಟೆ?

'ಮೊದಲು ಎಂಟು ಕರ್ಮದಲ್ಲಿದ್ದವನು, ಆ ಕರ್ಮಗಳು ಸುಟ್ಟುಹೋಗಿ ಹದಿನೆಂಟು ದೋಷಗಳನ್ನೂ ಕಳೆದುಕೊಳ್ಳುವನು. ಅದರಿಂದ ಸುಖವಾಗುವುದು. ಜಿನನಿಗೆ ಇಲ್ಲದಿರುವ ಹದಿನೆಂಟು ದೋಷಗಳನ್ನು ಕೇಳು' ಎಂದು ಅರ್ಕಕೀರ್ತಿ ರಾಜನು ದೋಷಗಳನ್ನು ವಿವರಿಸಿದನು. ''ನಿದ್ರೆ, ಹಸಿವು, ಬಾಯಾರಿಕೆ, ಭಯು, ಬೆವರು, ಕಾಮೋದ್ರೇಕ, ರೋಗ, ಮುಪ್ಪು, ಕೋಪ, ಮಮತೆ, ಮದ, ಜನನ ಮರಣಗಳು, ಭ್ರಾಂತಿ, ಆಶ್ಚರ್ಯ, ಶೋಕ, ಚಿಂತೆ, ಆಕಾಂಕ್ಷೆ — ಇವುಗಳ ಉಪದ್ರವವಿಲ್ಲ. ಈ ಚಿಂತೆಯು ಇಲ್ಲದ್ದರಿಂದ ಅರುಹಂತನಿಗೆ ಯಾವಾಗಲೂ ಸುಖವೆ. ಅವನು ನಿರಂತರವೂ ನಿಜದಲ್ಲೇ ಶೋಭಿಸುತ್ತಿರುವನು. ಹಸಿವು ಇಲ್ಲದವನಿಗೆ ಊಟವೇಕೆ? ಬಾಯಾರಿ ಗಸಣೆಯಿಲ್ಲದವನಿಗೆ ಪಾನವೇಕೆ? ಹಸಿವು ತೃಷೆಗಳೆಂಬ ರೋಗಕ್ಕೆ ಮದ್ದಿನಂತೆ, ಅನ್ನಪಾನಗಳು ಶೋಭಿಸುತ್ತವೆಯಲ್ಲವೆ? ಆ ಅನ್ನಪಾನಗಳಿಂದ ಸ್ವಲ್ಪಹೊತ್ತು ಅಡಗಿದ್ದು ಮೊದಲಿನಂತೆ ಶೋಭಿಸುವನು. ತನ್ನ ಆತ್ಮಭಾವನೆಯಿಂದಲೇ ಆ ರೋಗವು ಚೆನ್ನಾಗಿ ಕೆಡುವುದು. ಕೊಲ್ಲುವುದಕ್ಕೆ ಬಂದ ಹಗೆಗೆ, ಕಪ್ಪಕಾಣಿಕೆಗಳನ್ನು ಕೊಟ್ಟು, ತಡೆಯುವಂತೆ, ಅನ್ನಪಾನಗಳನ್ನು ಕೊಟ್ಟು ಹಸಿವು ತೃಷೆಗಳನ್ನು ತಡೆದು, ತಲೆಬಿಟ್ಟು, ಬಾಳುವುದು ಸುಖವೆ? ಇದು ಹಸಿವು ತೃಷೆಗಳಿಗೆ ಮಾತ್ರ ಹೇಳುವ ಮಾತಲ್ಲ, ಕಾಮಾಗ್ನಿ ಮುಂತಾದ ವ್ಯಸನಗಳು ಇರಿಯುವಾಗ, ಲಂಚಕೊಟ್ಟು ಜೀವಿಸುವ ರೀತಿಯಲ್ಲವೆ ಇದು? ಊಟ, ಸ್ನಾನ, ಅನುಲೇಪನ, ವೀಳ್ಯ, ವನಿತೆಯರ ಆಟ, ಮೊದಲಾದ ಕೋಟಲೆ ಇರುವುದು ದೇಹದ ಸುಖದಲ್ಲಿ, ನಿಜವಾದ ಸುಖದ ಆಟಕ್ಕೆ ಯಾವ ಕೋಟಲೆಯೂ ಇಲ್ಲ. ದೇಹಸುಖ, ಸಂಸಾರಭೋಗ, ಇಂದ್ರಿಯಸುಖ ಎಂದರೆ ಇವೆಲ್ಲ ಒಂದೇ ಅರ್ಥವು. ಆ

ಸುಖಗಳು ದುಃಖದಲ್ಲಿ ಬಂಧಿಸಲ್ಪಟ್ಟಿವೆ. ಇದು ಪರಸಂಗದ ಅನುಭವದಲ್ಲಿದೆ. ನಿರ್ವಾಣ ಸುಖ, ನಿಜಸುಖ, ಆತ್ಮಸುಖ ಎಂದರೆ ಒಂದೇ ಅರ್ಥ. ಅದು ಆತ್ಮನಲ್ಲಿ ತುಂಬಿರುವುದು. ಅದು ಲೋಕಕ್ಕೆ ಅಪೂರ್ವವಾಗಿದೆ. ಅದಕ್ಕೆ ಲೋಕದ ಜನರ ಸಂಗವಿರುವುದಿಲ್ಲ. ತನಗೆ ತನ್ನ ಆತ್ಮನೇ ವಸ್ತುವು; ತಾನು ಧರಿಸಿದ ದೇಹ, ಮನಸ್ಸು; ಇಂದ್ರಿಯಗಳು, ಮಾತು, ವನಿತೆಯರೇ ಮೊದಲಾದುವೆಲ್ಲವು ಪರವಸ್ತು. ಅವುಗಳ ಹಂಗು ಅಂಗಸುಖವು. ಅನ್ಯವಸ್ತುಗಳ ಹಂಗು ಇಲ್ಲದೆ, ಸುಖವು ಆತ್ಮ ಜನ್ಯವಾಗಿರುವುದು. ಅದನ್ನು ಅನ್ಯರು ತಿಳಿಯಲಾರರು. ಅದನ್ನು ಆವನು ಅನುಭವಿಸಿಯೇ ಬಲ್ಲನು. ಕರ್ಮಶೂನ್ಯವಾಗಿರುವ ಜಿನೇಂದ್ರನೇ ಅದನ್ನು ಬಲ್ಲನು. ಅಗ್ನಿದೀಪಕ್ಕೆ ಹಣತೆ, ಎಣ್ಣೆ, ಬತ್ತಿಗಳ ಹಂಗು; ಆದರೆ ಮಣಿ ದೀಪಕ್ಕೆ ಯಾವುದರ ಹಂಗು ಇದೆ? ಇದೇ ರೀತಿಯಲ್ಲಿ ಕರ್ಮಿಗಳ ಮತ್ತು ವಿಕರ್ಮಿಗಳ ಸುಖದ ಎಣಿಕೆಯಿರುವುದು. ಇದನ್ನು ಭಾವಿತಾತ್ಮನು ತಿಳಿಯಬೇಕು. ಹಣತೆಯನ್ನು ಹಿಡಿದು ಬತ್ತಿಯಿಂದ ಎಣ್ಣೆಯನ್ನುಂಡು ಬೆಳಕು ಹೆಚ್ಚಾಗುವಂತೆ ಅಗ್ನಿದೀಪವಿರುವುದು. ದೇಹವನ್ನು ಹಿಡಿದಿರುವ ಇಂದ್ರಿಯಗಳಿಂದ ಕಣ್ಕಾನ್ನ ಮೊದಲಾದುವುಗಳನ್ನು ಕಂಡು ಉಬ್ಬುತ್ತಾರೆ. ಎಣ್ಣೆಯಿದ್ದರೆ ಉಬ್ಬಿ, ಇಲ್ಲದಿದ್ದರೆ ತಗ್ಗಿ ಬಣ್ಣ ಮಾಸುವ ಸೊಡರಿನಂತೆ ಉಣ್ಣದಿದ್ದರೆ ತಗ್ಗಿ ಉಂಡರೆ ಉಬ್ಬುವ ಲೋಕದ ಅಣ್ಣಗಳ ಆಟವನ್ನು ತಿಳಿಯಬೇಕು. ಆದರೆ ರತ್ನದೀಪಿಗೆಯು ಎಣ್ಣೆ ಮೊದಲಾದುವು ಇಲ್ಲದೆ, ನೂತನವಾದ ಸುಪ್ರಭೆಯಿಂದ ಒಪ್ಪುವುದು. ಆದರಂತೆ ರತ್ನಾಕರ ಸಿದ್ಧನ ತಂದೆಗೆ ಪರವಸ್ತುಗಳ ಪ್ರಯತ್ನವಿಲ್ಲದ ಸುಖವಿರುವುದು. ವ್ಯಂತರರ, ಸುರರ, ನಾಗರ, ನಕ್ಷತ್ರರ, ಅಖಿಲ ಜನ್ಮಾಂತರಗಳ ಸುಖಗಳನ್ನೆಲ್ಲ ಒಟ್ಟುಗೂಡಿಸಿ ಮುಂದಿಟ್ಟರೆ ಅರುಹಂತನ ಸುಖಸಮುದ್ರದ ಮುಂದೆ ತುಂತುರು ಹನಿಯಂತೆ ಕಾಣುವುದು. ಜಿನನಿಗೆ ತ್ರಿಭುವನವನ್ನು ಹಿಡಿದೆತ್ತುವ ಶಕ್ತಿಯುಂಟು; ಆದರೆ ಅವನು ಹಾಗೆ ಮಾಡುವವನಲ್ಲ. ಪ್ರಭುವು, ಎದ್ದು ಹಗುರವಾದಂತೆ ಸಭೆಯಲ್ಲಿ ಓಜೆಯಿಂದ ಒಪ್ಪುತ್ತಿರುವನು. ಸುಜ್ಞಾನ, ದರ್ಶನ, ಸುಖ, ಶಕ್ತಿಗಳು ನಾಲ್ಕೂ ಸರ್ವಜ್ಞನಾದ ಜಿನನಲ್ಲಿರುವುವು. ಅವುಗಳನ್ನು ಪ್ರಾಜ್ಞರು ಅನಂತ ಚತುಷ್ಟಯವೆಂದು ಹೇಳುವರು. ತಮ್ಮ, ವೀರಂಜಯ ನೀನಿದನ್ನು ತಿಳಿಯಬೇಕು' ಎಂದು ತಮ್ಮನಿಗೆ ಅಣ್ಣನು ತಿಳಿಸಿದನು.

"ಜಿನನ ಅಂತರಂಗ ಸಂಪತ್ತು ನಾಲ್ಕು. ಅನುಮಾನದಿಂದ ಅದನ್ನು ನೆನೆದು, ಮುನಿಗಳು ನವಕೈವಲ್ಯಗಳನ್ನು ಸಾಗರದಷ್ಟೆಂದು ಹೇಳುವರು. ನಿಜವನ್ನು ತಿಳಿಯದಿರುವ ಎಲ್ಲರಿಗೂ ಪರಬ್ರಹ್ಮನು ದಿವ್ಯನಾದದಲ್ಲಿ ತಿಳಿಸುವನು. ಅದು ದಾನವು. ಪ್ರಭುವಿನ ವಾಕ್ಯಗಳಿಂದ ಆತ್ಮಾಮೃತವನ್ನು ಉಂಡು, ಭವಗಳನ್ನು ಕಳೆದುಕೊಂಡು ಈಶ್ವರರಾಗುವರು. ಆದರಿಂದ ಅಭಯ, ಅನ್ನ, ವೈದ್ಯ, ಸಿದ್ಧಾಂತ ದಾನಗಳು ಅಲ್ಲಿ ಶೋಭಿಸಿರುವುವು. ದೇಹವಿದ್ದು ಮುಕ್ತನೆನಿಸುವುದನ್ನು ಪಡೆಯುವುದನ್ನು ತಿಳಿದರೆ ಅಮೃತವು ಪುದ್ಗಲವಾಗುವುದು. ಅದು ತನ್ನನ್ನು ತುಂಬಿ ಸುಖ ತೋರಿ ಹೋಗುವುದನ್ನು ಜಿನನಾಥನು ಪಡೆದಿರುವನು. ಅವನಿಗೆ ಅದು ದಿವ್ಯಲಾಭವು. ಪರಿಮಳದ ಗಾಳಿ, ಮಳೆಗಳೆಲ್ಲವೂ ಭೋಗವನ್ನು ಹೊರಸೂಸುವ ಚಾಮರ ಛತ್ರಗಳು. ವಾದ್ಯ ಸಿಂಹಾಸನ

ಮೊದಲಾದುವು ಉಪಭೋಗವು. ಜಗತ್ತಿನಲ್ಲಿರುವ ಒಂದು ವಸ್ತುವನ್ನು ಒಂದು ಬಾರಿ ಭೋಗಿಸಿ ಬಿಡುವುದೇ ಭೋಗವು. ಅದನ್ನು ಮತ್ತೂ ಮತ್ತೂ ಭೋಗಿಸುವುದು ಉಪಭೋಗ. ಇದು ಎರಡು ರೀತಿಯ ಭೋಗಗಳ ಲಕ್ಷಣವು. ನ್ಯಾಯವು ಜಾರದಿರುವ ವಿಶ್ವತತ್ವದ ನಿಶ್ಚಯವು. ಅದೇ ಕ್ಷಾಯಿಕವೆಂಬ ಸಮ್ಯಕ್ತವು. ದೇಹವನ್ನು ಹೊಂದದೆ ಆತ್ಮನಲ್ಲಿ ಅಡಗಿರುವ ಬುದ್ಧಿಯು ಕ್ಷಾಯಿಕವೆಂಬ ಚಾರಿತ್ರ. ಭೋಗೋಪಭೋಗ ಸುಲಾಭಗಳೂ ಸುದಾನವೂ ವಿರಾಗ ಸಮ್ಯಕ್ತ್ವ ಚಾರಿತ್ರ. ಮೊದಲು ಹೇಳಿದ, ಸುಜ್ಞಾನ ದರ್ಶನ ಶಕ್ತಿಗಳು ಒಂದಾಗಲು ಒಂಬತ್ತು ಲಬ್ಧಿಗಳು. ದಾನಸುಜ್ಞಾನ ಸುಖವೊಂದೇ ಭೋಗ, ಉಪಭೋಗ, ಲಾಭಗಳಿಂದ ಮೂರು ಮುಖಗಳಾದುವು. ಸುಜ್ಞಾನವೊಂದೇ ವಿಖಿತಿ, ಸಮ್ಯಕ್ತ್ವ ಚಾರಿತ್ರ, ಭೇದಗಳಿಂದ ನಾಲ್ಕು ಮುಖಗಳಾದುವು. ಇದನ್ನು ಒಂದು ಸಲ ನಾಲ್ಕು ಎಂದು ಹೇಳುವರು. ಕೂಡಲೇ ಇನ್ನೊಮ್ಮೆ ಒಂಭತ್ತು ಎಂದೂ ಹೇಳುವರು. ಇದು ಹೇಳುವ ರೀತಿ. ಈ ಎರಡೂ ಮೈಗಳ ಸೌಂದರ್ಯದಿಂದ ಜಿನನು ಒಪ್ಪುತ್ತಿರುವುದನ್ನು ನಾನೊಂದು ಸಲ ನನ್ನ ಕಣ್ಣುಗಳಿಂದಲೇ ಕಂಡೆನು'' ಎಂದು ಅರ್ಕಕೀರ್ತಿರಾಜನು ವಿವರಿಸುತ್ತಿರುವುದನ್ನು ವೀರಂಜಯರಾಜನು ಭಕ್ತಿಯಿಂದ ಕೇಳುತ್ತಿದ್ದನು.

''ಹೊರಗೆ ಅಂಗವು ಧಗಧಗಿಸುತ್ತ ತೋರಿದರೆ, ಆತ್ಮನು ಚೆನ್ನಾಗಿ ತಳತಳಿಸುತ್ತ ಒಪ್ಪಿರುವನು. ಹೊರಗೆ ಒಳಗೆ ಎಲ್ಲಿ ನೋಡಿದರೂ ಸುಜ್ಞಾನವನ್ನೇ ಕರೆಯುತ್ತ ಆದಿಜಿನನು ಒಪ್ಪಿರುತ್ತಾನೆ. ದೇಹವು ದಿವ್ಯ; ಆತ್ಮನೂ ದಿವ್ಯ; ಆದರಿಂದ ದೇಹಾತ್ಮರ ಇರವು ಮಾಣಿಕದಂತೆ. ಕಹಳೆಯ ಒಳಗಿರುವ ಜ್ಯೋತಿಯ ರೂಪಿನಂತೆ ಎಂದು ಊಹಿಸಬಹುದು ತಮ್ಮಾ'' ಅರ್ಕಕೀರ್ತಿ ರಾಜನು ತನ್ನ ವಿವರಣೆಯನ್ನು ಮುಂದುವರಿಸಿದನು.

''ಕೊರಳಿಂದ ಮೇಲೆ ಉತ್ತಮಾಂಗವೆನ್ನುವರು; ಕೊರಳಿನ ಕೆಳಗೆ ನಡುವರೆಗಿನ ಅಂಗವು ಮಧ್ಯಮ. ಚರಣಗಳನ್ನು ಕನಿಷ್ಠಾಂಗವೆನ್ನುವರು. ಇದು ಎಲ್ಲರ ದೇಹದ ತಿಳಿವಳಿಕೆಯ ರೀತಿ. ಆದರೆ ಜಿನನಿಗೆ ಶಿರದಿಂದ ಪಾದಗಳವರೆಗೆ ಸರ್ವಾಂಗವೂ ಪರಮೋತ್ತಮವೆನಿಸಿದೆ, ಹೂವಿನಲ್ಲಿ ಅಡಿ ನಡು ತುದಿಯೆಂದಿರಬಹುದು; ಪರಿಮಳದಲ್ಲಿ ಹಾಗೆ ಉಂಟೆ? ಆ ದೇಹದಲ್ಲಿ ಶೋಭಿಸುವ ಆತ್ಮನು ತಲೆಯಿಂದ ಕಾಲಿನವರೆಗೆ ನೋಡಿದಾಗ, ಆದಿ ಮಧ್ಯಾಂತಗಳಲ್ಲಿ ಎಲ್ಲೆಲ್ಲಿಯೂ ಸುಪವಿತ್ರವಾದ ರೂಪಿನಲ್ಲಿ ಒಪ್ಪುತ್ತಿರುವನು. ಮಾಣಿಕದ ಕನ್ನಡಿಗೆ ಅಡಿ, ಕಡೆ, ನಡುವೆಂಬ ಕ್ಷೀಣವಿಕಲ್ಪಗಳು ಇಲ್ಲ, ಅದರಂತೆ ತಿಳಿಯುತ್ತ ಶೋಭಿಸುವ ಆತ್ಮನು ಉತ್ತಮನಲ್ಲದೆ ಅವನ ರೂಪಿನಲ್ಲಿ ಯಾವ ಊನವೂ ಇಲ್ಲ, ಅವನನ್ನು ಅಂತರಂಗದ ಐಶ್ವರ್ಯವೂ ಬಹಿರಂಗದ ಸಂಪತ್ತೂ ಕೂಡಿಕೊಂಡಿದೆ. ಅದನ್ನು ಅಂತು–ಇಂತು ಎನಲು ನಾನು ತಿಳಿಯೆನು ತಮ್ಮ, ಎರಡೂ ಮೈಯ್ಯು ಸಿರಿವಂತನೆಂದು ಮಾತ್ರ ಹೇಳಬಲ್ಲೆನು.

'ಜಿನನು ಕಾಂತಿಯ ಖಣಿ, ತಿಳಿವಿನ ತೀರ್ಥ, ಮೂರು ಲೋಕಗಳ ಕಾಂತಿಯ ಸಾಗರವಾಗಿರುವನು. ಕಾಮನನ್ನು ಜಯಿಸಿದ ಅವನು ನಿಂತ ನಿಡುಗಡೆಯೇ ನೋಡಿದವರ ಭ್ರಾಂತಿಯನ್ನು ನಿವಾರಿಸುವುದು. ನಿದ್ರೆಯೆಂಬುದು ಮೂರ್ಛೆಯಾಗಿದೆ. ಸಾವಿಗೂ

ಸರಿಯಾಗಿದೆ. ಈ ನಿದ್ರಾರೋಗವು ಇಲ್ಲದೇ ಇರುವುದರಿಂದ ಅವನು ಚಿದ್ರೂಪನಾಗಿ ಒಮ್ಮೆಯಾದರೂ ಮಲಗುವುದಿಲ್ಲ. ಭದ್ರಾಸನದಲ್ಲೇ ಶೋಭಿಸುತ್ತಿರುವನು. ವೈರಿಗಳು ಇರುವವರು ಪರರನ್ನು ಕೊಲ್ಲುವುದಕ್ಕಾಗಿ, ತಮ್ಮನ್ನು ಕಾಪಾಡಿಕೊಳ್ಳುವುದಕ್ಕಾಗಿ, ಆಯುಧಗಳನ್ನು ಧರಿಸಿರುತ್ತಾರೆ. ಆದರೆ ಅರುಹಂತನಿಗೆ ವೈರಿಗಳೂ ಇಲ್ಲ; ಲೋಕದವರಿಂದ ಕೇಡೂ ಇಲ್ಲ; ಹೀಗಾಗಿ ಅವನು ಆಯುಧವನ್ನು ಧರಿಸಿರುವುದಿಲ್ಲ. ಈ ಲೋಕದಲ್ಲಿ ಇರುವವರು ತಾವು ಒಬ್ಬ ದೇವನನ್ನು ಜಪಿಸುತ್ತಾರೆ; ಆದ್ದರಿಂದ ಅವರಲ್ಲಿ ಜಪಸರವಿದೆ. ಅರುಹಂತನಿಗೆ ಜನ್ಮವಿಲ್ಲದ್ದರಿಂದಲೂ ಅವನಿಗೊಬ್ಬ ದೇವನು ಇಲ್ಲದಿರುವುದರಿಂದಲೂ ಅವನ ಕೈಯಲ್ಲಿ ಜಪಮಾಲೆ ಇಲ್ಲ. ನೂರೆಂಟು ಜಪವು ಶೋಭಿಸುವುದೆಂದು, ಸರಿಯಾಗಿ ಜಪಮಾಡಿ, ನೂರೆಂಟು ಮಣಿಯನ್ನು ಹಿಡಿದವರೂ ಮೂರು ಲೋಕಗಳ ಒಳಗನ್ನೂ ಹೊರಗನ್ನೂ ತಿಳಿಯಲಾರರು. ಪರಮಾತ್ಮನ ಸುಖವಿಲ್ಲದವರು ಕಾಮನಿಗೆ ಸೋತು ತರುಣಿಯರ ಬಲೆಗೆ ಬಿದ್ದಿರುವರು. ಪರಮಾತ್ಮ ಸುಖವಿರುವುದರಿಂದ ಜಿನನಾಥನಿಗೆ ಅರಸಿಯರೇ ಇಲ್ಲ. ಜಿನನ ದಿವ್ಯಾಂಗವು ಲೋಕಕ್ಕೆ ಸಿಂಗಾರವಾಗಿದೆ. ಆದ್ದರಿಂದ ಅವನಿಗೆ ವಸ್ತ್ರಾಭರಣಗಳ ಹಂಗಿಲ್ಲ. ಕಾಂತಿಗೆಟ್ಟಿರುವ ದೇಹವುಳ್ಳವರಿಗೆ ಮಾತ್ರ ವಸ್ತ್ರ ಆಭರಣಗಳ ಹಂಗು ಇರುತ್ತದೆ. ಕೋಟಿ ಸೂರ್ಯಚಂದ್ರರ ಕಿರಣಗಳ ಕಾಂತಿಯಿರುವ ಅಂಗಾಂಗಗಳಿಗೆ ವಸ್ತ್ರವು ಮರೆಯಾದರೆ ಶೋಭಿಸುವುದೇ ತಮ್ಮ? ಅದು ದಿವ್ಯ ರತ್ನಾಭರಣಗಳನ್ನು ಬಟ್ಟೆಯಲ್ಲಿ ಕಟ್ಟಿದಂತೆ ಆಗುವದು. ಜಿನ ದೇವನ ದೇಹಕಾಂತಿಯ ಮುಂದೆ, ಯಾವ ರತ್ನಗಳ ಕಾಂತಿಯೂ ಮೆರೆಯುವುದಿಲ್ಲ. ಆದ್ದರಿಂದ ಅವನಿಗೆ ರತ್ನ ಮಣಿಗಳ ಆಭರಣಗಳು ಇಲ್ಲ.

'ನಮ್ಮ ಪರಮನಿಗೆ ಕಾಂತಿಯೇ ದೇಹ; ಕಾಂತಿಯೇ ವಸ್ತ್ರ; ಮತ್ತೆ ಕಾಂತಿಯೇ ಭೂಷಣ, ತಮ್ಮ ನೀನಿದನ್ನು ತಿಳಿದುಕೋ. ಆದ್ದರಿಂದಲೇ ಕಾಂತಿನಾಥ, ದಿವ್ಯ ಮಾಣಿಕ್ಯನಾಥ ಮುಂತಾದ ಹೆಸರುಗಳಿವೆ. ದೇವತೆಗಳು ಒಮ್ಮೆ ಜಿನೇಶನನ್ನು ನೋಡಿದಾಗ ಅವರ ಮುಖಗಳು ಜಿನೇಶನ ಪಾದಗಳ ಉಗುರುಗಳಲ್ಲಿ ಸಾಲುಸಾಲಾಗಿ ಕಾಣಿಸಿದುವು. ಆದರಿಂದ ಅವನನ್ನು ರುಂಡಮಾಲಾಧರನೆಂದು ದೇವತೆಗಳು ವಿನೋದಕ್ಕಾಗಿ ಕೊಂಡಾಡಿದರು. ಸರ್ವರ ಪಾಪವೆಂಬ ಅಂಧಕಾರದ ಸಂಧಿಯನ್ನು ಬಿಡಿಸಿ, ಅಂಧಕಾರವನ್ನು ಹೋಗಲಾಡಿಸಿದ್ದರಿಂದ ಅಂಧಕಾಸುರನನ್ನು ಮರ್ದಿಸಿದನೆಂದು ಪುಣ್ಯಕ್ಕಾಗಿ ಬೇಡುತ್ತಿರುವರು; ಭಕ್ತಿಯಿಂದ ಹೇಳುತ್ತಿರುವರು. ಅಷ್ಟ ಮದಗಳೆಂಬ ಮದದಾನೆಗಳನ್ನು ನಾಶ ಮಾಡಿದ ಶ್ರೇಷ್ಠನನ್ನು ನೋಡಿದ ಶಿಷ್ಟರು, ಗಜಾಸುರಮರ್ದನ, ಇಷ್ಟವನ್ನು ಸಲಿಸು'' ಎಂದು ಪ್ರಾರ್ಥಿಸುತ್ತಿರುವರು. ಶೀಘ್ರಕೋಪವೆಂಬ ವಿಷಮದ ಹುಲಿಯನ್ನೇ ಕೆಡಿಸಿ, ಉಜ್ವಲನಾಗಿರುವುದರಿಂದ, 'ವ್ಯಾಘ್ರಾಸುರ ವೈರಿ ಜಯ ಜಯ' ಎಂದು ಸೇಸೆಯನ್ನು ಆಘ್ರಾಣಿಸುತ್ತಿದ್ದಾರೆ. ಜಿನನ ಶಿರದ ಮೇಲ್ಭಾಗದಲ್ಲಿ ಚಂದ್ರಬಿಂಬಗಳಂತೆ ಮೂರು ಸತ್ತಿಗೆಗಳು ವಿಸ್ತಾರವಾಗಿ ವೈಭವದಿಂದ ಮೇಲಕ್ಕೆದ್ದಿರುವುದರಿಂದ, 'ಚಂದ್ರಶೇಖರ, ಚಂದ್ರಮೌಳಿ' ಎಂದು ಭಕ್ತಿಯಿಂದ ಜಿನೇಂದ್ರನನ್ನು ಕೊಂಡಾಡುತ್ತಿರುವರು. ಮೊದಲು ಎಡಬಲದಲ್ಲಿ ಎರಡು ಕಣ್ಣುಗಳಿದ್ದು

ಬಳಿಕ ನಡುವೆ ಒಂದು ಸುಜ್ಞಾನ ದೃಷ್ಟಿಯು ಮೂಡಿದುದರಿಂದ ಅವನನ್ನು ಮುಕ್ಕಣ್ಣನೆಂದು ದೇವತೆಗಳು ಆಗಾಗ ಹೇಳುತ್ತಿರುವರು. ಹಣೆಯಲ್ಲಿ ಮನಸ್ಸನ್ನು ಇಟ್ಟು, ಆತ್ಮನನ್ನು ನೋಡುತ್ತ ಕ್ಷಣಕ್ಷಣಕ್ಕೆ ಕರ್ಮವನ್ನು ಸುಟ್ಟು ಹಾಕುತ್ತಿರುವುದರಿಂದ ಜಿನನನ್ನು ಹಣೆಗಣ್ಣ, ಉರಿಗಣ್ಣ ಎಂದು ಹೇಳುತ್ತಾರೆ. ನೋಡಿದರೆ, ಇವು ಗುಣನಾಮಗಳಾಗಿವೆ. ಅವನು ಬಂಗಾರದ ಕಮಲದ ಮೇಲಿರುವುದರಿಂದ ಕಮಲಾಸನ ಎಂದೂ ನಾಲ್ಕು ಮುಖವಾಗಿ ಅನುಕರಿಸುತ್ತಿರುವುದರಿಂದ ಚತುರ್ಮುಖ ಎಂದೂ ದೇವತೆಗಳು ಹೊಗಳುತ್ತಾರೆ. ಸದ್ಗತಿಯ ದಾರಿಯನ್ನು ಕೆಡಿಸಿಕೊಂಡವರಿಗೆ ಕೈವಲ್ಯ ಮಾರ್ಗವನ್ನು ಸೃಷ್ಟಿಸಿ ತೋರಿಸುವುದರಿಂದ, ಅವರು ಸೃಷ್ಟಿಕರ್ತನೆಂದು ಭಕ್ತಿಯಿಂದ ಸಂತುಷ್ಟರಾಗಿ ಹೊಗಳುತ್ತಾರೆ. ಬ್ರಹ್ಮನಲ್ಲಿ ಕಮಂಡಲು ಇರುವುದರಿಂದ ಅವನ ದೇಹವು ಶುಚಿಯಾಗಿಲ್ಲವೆನ್ನುತ್ತಾರೆ. ಶುಚಿಯಾದ ದೇಹಿಯಾಗಿ ಬಾಯಾರಿಕೆ ಇಲ್ಲದವನಾಗಿರುವುದರಿಂದ ಇವನು ಆದಿಬ್ರಹ್ಮನೇ ಆಗಿದ್ದಾನೆ. ಪರಿಶುದ್ಧವಾದ ಬೋಧನೆಯ ಕೊನೆಯಲ್ಲಿ ಮೂರು ಲೋಕವೂ ಒಂದರೊಡನೊಂದಾಗಿ ಮುಂದುವರಿದು, ಪುನಃ ಹೊಳೆಯುವ ಹಾಗೆ ಮೂರು ಲೋಕಗಳನ್ನು ಹೊಟ್ಟೆಯಲ್ಲಿಟ್ಟು ಕೊಂಡಿರುವ ಆದಿಮಾಧವನನ್ನು ಪುರುಷೋತ್ತಮನೆಂದು ಹೇಳುತ್ತಾರೆ. ಜಯ ಶಬ್ದದಲ್ಲಿ ಜಿನನೆಂದಿರುವುದಾದರೂ ಜೀವ ಸಮೂಹವನ್ನು ಗೆಲ್ಲುವುದರಿಂದ ಜಿನನಾಗುವುದಿಲ್ಲ, ಭಯವೇ ಮುಂತಾದ ಹದಿನೆಂಟು ದೋಷಗಳನ್ನು ಜಯಿಸುವುದರಿಂದ ಜಿನನೆಂದು ಹೇಳುವುದು. ಅರುಹಂತನ ಒಳ್ತಿನಲ್ಲಿ ಇಪ್ಪತ್ತನಾಲ್ಕು ಸಾವಿರ ಜನರು; ಅವನಂತೆಯೇ ಕೂಡಿರುವರು. ಅವರೆಲ್ಲರಿಗೂ ಆದೀಶನು ಮುಖ್ಯವಾದುದರಿಂದ ಜಿನಪತಿ ಎಂದು ಹೇಳುತ್ತಾರೆ. ಪರಮಾತ್ಮ, ಜಿನ, ಶಿವ, ಪರಮಶಿವ, ಪರಬ್ರಹ್ಮ, ಪುರುಷೋತ್ತಮ, ಸದಾಶಿವ, ಅರುಹ, ದೇವೋತ್ತಮ, ವೃಷಭ ನಾಯಕ ಆದಿಪರಮೇಶ — ಎಂದು ದಿವಿಜರು ಒಮ್ಮೊಮ್ಮೆ ಹೇಳುತ್ತಾರೆ. ಆದಿಜಿನೇಶನು, ಆದಿಬ್ರಹ್ಮನು, ಆದೀಶನು, ಆದೀಶ್ವರನು, ಆದಿವಸ್ತು, ಆದಿಮಧ್ಯಾಂತವು ತಟ್ಟದಿರುವ ಮಹಾದೇವನು — ಎಂದೂ ಒಮ್ಮೊಮ್ಮೆ ಹೇಳುತ್ತಾರೆ. ಇವೇ ಮೊದಲಾದ ಹಲವು ದಿವ್ಯನಾಮಗಳನ್ನಿಟ್ಟು ದೇವತೆಗಳು ಜಿನಸ್ವಾಮಿಯನ್ನು ಓಲೈಸುತ್ತಿದ್ದಾರೆ. ತಮ್ಮ! ಅವರ ಭಕ್ತಿಯನ್ನು ಇಂದು ನೀವೇ ಕಾಣುವಿರಿ'' ಎಂದು ಅರ್ಕಕೀರ್ತಿ ರಾಜನು ಹೇಳಿದನು.

ಈ ವಿವರವನ್ನು ಅವರೆಲ್ಲರೂ ಉತ್ಸಾಹದಿಂದ, ಭಕ್ತಿಯಿಂದ ಕೇಳುತ್ತ ರಜತಾದ್ರಿಯನ್ನು ಏರುತ್ತಿದ್ದರು.

''ಅಣ್ಣಾಜಿ, ಚೆನ್ನಾಯಿತು, ದೇವನನ್ನು ಮೊದಲು ನೀವೊಮ್ಮೆ ಕಂಡಿರುವುದರಿಂದ ಇಷ್ಟು ಚೆನ್ನಾಗಿ ವಿವರಿಸಿದಿರಿ. ನಿಮ್ಮ ಕೌಶಲ ವಾಕ್ಯಗಳಿಂದ ನಮಗೂ ಕಂಡಂತೆ ಆಯಿತು, ಇನ್ನು ನಾವು ನಾಥನನ್ನು ಕಾಣುವುದೆಂದರೆ ಅದು ಪುನರ್ದರ್ಶನವೇ ಸರಿ, ವೀರಂಜಯ ರಾಜ ಕೇಳಿದ್ದು; ದೇವರು ವಿವರವಾಗಿ ಹೇಳಿದ್ದು, ಇದರಿಂದಾಗಿ ನಮಗೆ ದಾರಿಯೇ ಸದರವಾಯಿತು. ಅರುಹಂತನ ಸಭೆಯನ್ನು ಕಂಡಂತೆ ಆಯಿತು. ಇದರಿಂದ ಈಗಿನ ನೂತನ ದರ್ಶನರಾದ ನಮಗೆ ಪುರಾತನ ದರ್ಶನವೂ ಆಗುವುದು'' ಎಂದು ಅವರು

ಅರ್ಕಕೀರ್ತಿಯನ್ನು ಹೊಗಳುತ್ತ ಪರ್ವತವೇರಿದರು. ಈ ರೀತಿಯಲ್ಲಿ ಮೃದು ವಚನಗಳಿಂದ ಜಿನಸಭೆಯನ್ನು ವರ್ಣಿಸುವ ಶಕ್ತಿ ಅರ್ಕಕೀರ್ತಿಗೊಬ್ಬನಿಗೇ ಹೊರತು ಇನ್ನೊಬ್ಬರಿಗೆ ಸಾಧ್ಯವಿಲ್ಲವೆಂದು ಹೊಗಳಿದರು. ಈ ದೇವಚರಿತ್ರೆಯನ್ನು ಹೇಳುತ್ತಿರುವ ಅಣ್ಣನನ್ನು ಓದುವ ಶಿಷ್ಯರು, ಓದಿಸುವ ಗುರುಗಳನ್ನು ಆದರಿಸಿ ಸೇವಿಸುವಂತೆ ಇವರೂ ಅಣ್ಣನನ್ನು ಆದರದಿಂದ ನೋಡುತ್ತ ಮುನ್ನಡೆದರು. ಹೀಗೆ ಅವರು ಹೋಗುತ್ತಿದ್ದಾಗ, ಹೇಳುತ್ತಿದ್ದ ಕಥೆಯೂ ತಪ್ಪಲಿಲ್ಲ, ನಡೆಯುತ್ತಿದ್ದ ದಾರಿಯೂ ತಪ್ಪಲಿಲ್ಲ, ಶಿಥಿಲವಾದ ಕರ್ಮಿಗಳಾದ ಅವರು, ಕ್ರಮವಾಗಿ ಪರ್ವತವೇರಿದರು.

"ಈ ಕಥೆಗೆ ಇದು ತಕ್ಕ ಕ್ಷೇತ್ರವಾಗಿದೆ. ಈ ದಾರಿಯು ಕೂಡ ಮುಕ್ತಿಗೆ ಹೋಗುವ ದಾರಿಯಾಗಿದೆ. ಅಣ್ಣಾಜಿ, ಇನ್ನು ಸಾಕುಮಾಡಿ, ತಾವು ಬಹಳ ಆಯಾಸಗೊಂಡಿರುವಿರಿ" ಎಂದು ಮಾತನಾಡುತ್ತ ಅವರೆಲ್ಲರೂ ಕೈಲಾಸವೇರಿದರು. ಹೀಗೆ ಅವರು ಬರುತ್ತಿದ್ದಾಗ, ಗಿರಿಯ ತುದಿಯಲ್ಲಿರುವ ಜಿನಸಭೆಯಿಂದ ಸುರಭೇರಿಯ ಮೊಳಗು ಕೇಳುತ್ತಿತ್ತು, ಅದನ್ನಾಲಿಸಿ ಅವರು ಮುಂದೆ ಹೋದರು.

## ೧೪

# ದಿವ್ಯಧ್ವನಿ

ಮುಂಗಾರು ದನಿಯನ್ನು ಕೇಳಿ ನಲಿದ ನವಿಲಿನಂತೆ, ರಾಜಪುತ್ರರು, ಭೇರಿಯ ದನಿಯನ್ನು ಕೇಳಿ ನಲಿದರು. ತಮ್ಮ ಕಣ್ಣ ಇದಿರಲ್ಲೇ ಇರುವ ಜಿನಸಭೆಯನ್ನು ಕಣ್ಣಾರೆ ಕಂಡರು. ಕಂಡಾಗಲೇ ಕೈಯೆತ್ತಿ ಕೈಮುಗಿದು, ತಲೆಯ ಮೇಲಿಟ್ಟು, ಭಕ್ತಿಯಲ್ಲಿ 'ಮಾಣಿಕ್ಯ ತೀರ್ಥನಾಯಕ ಜಯ ಜಯ' ಎಂದು ಹೇಳಿ, ನೋಡುತ್ತ, ನಡೆದರು. ಅಲ್ಲಿನ ವಿಚಿತ್ರವನ್ನು ಕಾಣುತ್ತ, ಮಾತನಾಡುತ್ತ ಮುನ್ನಡೆಯುತ್ತಿದ್ದರು.

''ಬೆಳ್ಳಿಯ ಬೆಟ್ಟದ ಮೇಲೆ, ಕಾಮನ ಬಿಲ್ಲಿನ ಬೆಟ್ಟವೊಂದು ನಿಂತಿರುವುದು. ಅದು ಬೆಳ್ಳಿಬೆಟ್ಟವನ್ನು ಮುಟ್ಟಿಲ್ಲ. ಇದೊಂದು ವಿಚಿತ್ರ.''

'ರಜತಗಿರಿಯ ಮೇಲೆ ನವರತ್ನ ಗಿರಿಯನ್ನು ಸ್ಥಾಪಿಸಿದ್ದಾರೆ. ಇದೇನೂ ಗೋಪ್ಯವಲ್ಲ. ಇದು ಜಿನಮಹಿಮೆಯಾಗಿದೆ.''

''ಮೂರು ಲೋಕಗಳಲ್ಲಿರುವ ಕಾಂತಿಯೆಲ್ಲವೂ ಒಟ್ಟುಗೂಡಿ ಇಲ್ಲಿ ಪಾಳೆಯಬಿಟ್ಟಿವೆ. ಮೂರು ಲೋಕದೊಡೆಯನ ಈ ಪುರವು ಶೋಭಿಸುತ್ತಿದೆ.''

ಒಳಗೆ ಎಂಟು ಕೋಟೆಗಳಿದ್ದು, ಹೊರಗೆ ಶೋಭಿಸುವ ಧೂಳೀಸಾಲೆಯೆಂಬ ಕೋಟೆಯು ತೋರುತ್ತಿತ್ತು, ನವರತ್ನಗಳ ಹೊಳಪಿನಿಂದ ಅದು ಕಾಮನ ಬಿಲ್ಲಿನಂತೆ ಕಂಗೊಳಿಸುತ್ತಿತ್ತು. ಅಲ್ಲಲ್ಲಿ ಸುವರ್ಣ ಮಾನಸ್ತಂಭಗಳು ಗಗನವನ್ನು ಸೀಳಿಕೊಂಡು ಮೇಲಕ್ಕೇರಿವೆ. ನಾಲ್ಕು ದಿಕ್ಕಿನಲ್ಲಿರುವ ಇಂಥ ಕಂಭಗಳಲ್ಲಿ ಒಂದು ಕಂಭವನ್ನು ಅವರು ನೋಡಿದರು.

ಆ ಕೋಟೆಯು, ಕೆಳಗಣ ರಜತಾದ್ರಿಗೆ ಒಂದು ಕೈಯಷ್ಟು ಬಿಟ್ಟು, ಜಾಗ್ರತೆಯಾಗಿ ನಿಂತಿರುವುದು. ಐದು ಸಾವಿರ ಮಾರಿನ ಸ್ಥಳದಲ್ಲಿ ಅನೇಕ ಸೋಪಾನಗಳಿವೆ, ಗಿರಿಯಿಂದ ಮೇಲಿರುವ ಧೂಳೀಸಾಲೆಯನ್ನು ನೋಡಿದರೆ, ಅರ್ಧ ಗಾವುದ ದೂರವಿರುವುದು. ಕೂಗಳತೆಯ ಆ ದೂರದಲ್ಲಿ ಇಪ್ಪತ್ತು ಸಾವಿರ ಮೆಟ್ಟಿಲುಗಳಿವೆ. ಕೆಳಗಿನ ಮೆಟ್ಟಲಲ್ಲಿ ಪಾದಲೇಪನವನ್ನು ತೊಡೆದಿದೆ. ಅದನ್ನು ಮೆಟ್ಟಿದವರು. ಕ್ಷಣದಲ್ಲೇ ಮಡಿದಂತೆ ಮೇಲಕ್ಕೇರುವರು. ಅರುಹಂತನನ್ನು ತಡೆಯಿಲ್ಲದೆ ನೋಡುವರು. ದೂರದೂರದಲ್ಲಿದ್ದ ರತ್ನ ಸೋಪಾನಕ್ಕೆ ಬಂದು, ಅದನ್ನು ಮೆಟ್ಟಿ, 'ಜಿನ ಶರಣು' ಎಂದು ಧೂಳೀಸಾಲೆಯನ್ನು ತತ್ಕ್ಷಣವೇ ಹತ್ತಿದರು.

ಅಲ್ಲಿ ಎಡಬಲಗಳಲ್ಲಿ ರತ್ನ ದಂಡವನ್ನೂರಿ ಇಬ್ಬರು ದ್ವಾರಪಾಲಕರು ನಿಂತಿರುವುದನ್ನು ಅವರು ಕಂಡರು. ಅವರು ಮೈತುಂಬ ಆಭರಣಗಳನ್ನು ಧರಿಸಿ ಹೊಳೆಯುತ್ತಿದ್ದರು. ಭರತೇಶನ ಕುಮಾರರು ಅವರ ಅನುಮತಿಯಂತೆ ಒಳಗೆ ಹೋಗಿ,

ಬಂಗಾರದ ಕಂಭವನ್ನು ನೋಡಿದರು. ಅದರೊಂದಿಗೆ ಕಂಭದ ಬುಡದಲ್ಲಿರುವ ಕುಂಡದಲ್ಲಿ ಪಾದವನ್ನು ತೊಳೆದು ಮುಂದೆ ಹೋದರು. ಅಲ್ಲಲ್ಲಿರುವ ಕೋಟೆಯನ್ನೂ, ಕೋಟೆಯ ಎಡಬಲದಲ್ಲಿರುವ ಸಿರಿಯನ್ನೂ ನೋಡಿಕೊಂಡರು. ಅಲ್ಲಲ್ಲಿರುವ ದೇವತೆಗಳ ಸೂಚನೆಯಂತೆ ಮುಂದೆ ನಡೆದರು. ಅವರು ಹೋದುದೆಂದರೆ — ಬೆಳಕಿನ ಕಡಲಿನಲ್ಲಿ ನಡೆದಂತೆ! ತಂಪಿನ ಹೊಳೆಯಲ್ಲಿ ಮುಳುಗಿ ಬಂದಂತೆ! ಅವರು ತಳತಳಿಸುತ್ತಿರುವ, ಗಮಗಮಿಸುತ್ತಿರುವ ಭೂಮಿಯೊಳಗೆ ಹೊಕ್ಕು ಮುಂದೆ ನಡೆದರು. ಆ ಎಂಟು ಕೋಟೆಗಳ ನಡುವೆ, ಏಳು ಕೋಟೆಗಳನ್ನೂ ದಾಟಿ, ಸ್ಫಟಿಕದ ಕೋಟೆಯನ್ನು ಕಂಡರು. ಅದು ಎಂಟನೆಯ ಕೋಟೆ.

ಲಾವಣ್ಯರಸವೇ ತುಂಬಿ ತುಳುಕುತ್ತಿರುವ ಮತ್ತು ಅದಕ್ಕೆ ತಕ್ಕ ಠೀವಿಯ ಶೃಂಗಾರದಿಂದ ಕೂಡಿದ ಭರತಕುಮಾರರು, ದೇವನಲ್ಲಿಗೆ ಬರುತ್ತಿರುವುದನ್ನು ದೇವೇಂದ್ರನು ದೂರದಿಂದಲೇ ನೋಡಿದನು. ಆ ಕುಮಾರರೆಂದರೆ, ಕಡೆದು ಎರಕಹೊಯ್ದಂತಿರುವ ರೂಪಸೌಂದರ್ಯ ಉಳ್ಳವರು. ಹೊಸ ಚಿನ್ನವನ್ನು ಲೇಪಿಸಿದಂತೆ ಶೋಭಿಸುವ ಮೈ ಬಣ್ಣ ಉಳ್ಳವರು. ಏರುತ್ತಿರುವ ಯೌವನ ಉಳ್ಳವರು. ಇಂತಹ ಅರಸು ಮಕ್ಕಳು ಬರುತ್ತಿರುವ ಚೆಲುವು ಅವನ ಮನಸ್ಸನ್ನೇ ಸೋಲಿಸಿತು. ಅವರು ನಡೆಯುವಾಗ ಹೊರಹೊಮ್ಮುವ ಗಮಕ, ಮಾತನಾಡುವ ಓಜೆ, ನೋಡುವ ಠೀವಿ, ಜಡತ್ವವಿಲ್ಲದೆ ಶೋಭಿಸುವ ಪಟುತ್ವ, ಕೂಡಿರುವ ವಿನಯ — ಇವೆಲ್ಲವುಗಳಿಂದ ಗಂಭೀರವಾಗಿ ನಡೆದು ಬರುತ್ತಿರುವ ಆ ಕುಮಾರರ ಬೆಡಗಿಗೆ ದೇವೇಂದ್ರನು ಬೆರಗಾದನು. ಕಣ್ಣುಗಳ ಕಾಂತಿ ಇವುಗಳೆಲ್ಲ ದೇಹದ ಕಾಂತಿಯೊಡನೆ ಸೇರಿಕೊಂಡಿರುವ ಅವರು ಜ್ಯೋತಿರಂಗದ ಪುರುಷರೆಂಬಂತೆ ಬಂದರು.

''ಯಾರಿವರು? ನಮ್ಮ ರಾಜ್ಯದಲ್ಲಿ ಇಂಥವರನ್ನು ನೋಡಿಲ್ಲ. ಮರ್ತ್ಯರಿಗೆ ಈ ರೂಪು ಬರುವುದೇ? ಬರಲಾರದು. ಒಂದು ವೇಳೆ ಬಂದರೂ ಒಬ್ಬೊಬ್ಬರಿಗೆ ಬರುವುದು. ಇದು ಭೂಮಿಯಲ್ಲೊಂದು ಚೋದ್ಯವೇ ಸರಿ'' ಎಂದು ದೇವೇಂದ್ರನು ಅವರ ಚೆಲುವನ್ನು ಬೆರಗಾಗಿ ನೋಡಿದನು. ಇವನಿಂದ ಅವನು ಚೆಲುವ – ಎಂದು ನೋಡಿದರೆ, ಅವನಿಂದ ಇವನು ಚೆಲುವನೆಂದು ತೋರುವುದು. ಹೀಗೆ ನೋಡುತ್ತಿದ್ದಾಗ ಅವನಿವನೆಂಬ ತಾರತಮ್ಯವಿಲ್ಲದೆ ಅವರೆಲ್ಲರೂ ಚೆಲುವರೆಂದೇ ದೇವೇಂದ್ರನು ನಿರ್ಧರಿಸಿದನು. ಸರ್ವರೂ ಚೆಲುವಾಗಿ ತೋರುವ ಇವರಾರಾಗಿರಬಹುದೆಂದು ಅವನು, ಮತ್ತೆ ಯೋಚಿಸಿದನು. ಹಾಗೆ ಯೋಚಿಸಿದಾಗಲೇ, ಅವರು ಭರತೇಶನ ಕುಮಾರರೆಂದು ಹೊಳೆಯಿತು. ಆ ರಾಜರತ್ನನಿಗಲ್ಲದೆ ಬೇರೆಯವರಿಗೆ ಇಂತಹ ಕುಮಾರ ರತ್ನರು ಆಗಲಾರರೆಂದು ಖಚಿತಮಾಡಿ ಕೊಂಡನು. ಲೋಕನಾಥನ ಪುತ್ರನಾದ ಭರತೇಶನೆಂಬ ರತ್ನ ಶಲಾಕೆಯ ಗಣಿಯಲ್ಲಿ ಈ ಕುಮಾರರತ್ನರು ಜನಿಸಿದರೆಂದು. ದೇವಲೋಕದ ಅರಸನಾದ ದೇವೇಂದ್ರನು ತಲೆದೂಗಿದನು.

ದೇವೇಂದ್ರನು ಹಾಗೆ ಯೋಚಿಸುತ್ತಿರುವಾಗ, ಈ ಕುಮಾರರು ಎಂಟನೆಯ ಸುತ್ತಿನ ಕೋಟೆಯನ್ನು ದಾಟಿ, ಸ್ಫಟಿಕದ ಒಂಬತ್ತನೆಯ ಅಮಲ ಕೋಟೆಯನ್ನು ಹೊಕ್ಕರು. ಅಲ್ಲಿ

ಮೂರು ಪೀಠದ ಮೇಲೆ ಸಿಂಹದ ತಲೆಯ ಮೇಲಿರುವ ತಾವರೆಯ ಎಸಳುಗಳನ್ನು ಸೋಂಕದೆ ಶೋಭಿಸುವ, ಸುಜ್ಞಾನಗಳನ್ನು ತುಂಬಿಕೊಂಡಿರುವ ಕರಡಿಗೆಯಂತಿರುವ, ಪುರುಜಿನೇಶ್ವರನನ್ನು ಕಂಡರು. ಲೋಕಾಲೋಕವನ್ನು ಸುಜ್ಞಾನ ಕೋಣೆಯಲ್ಲಿ ಒಂದು ಅಣುವಿನಂತೆ ಇರಿಸಿಕೊಂಡು, ''ಏಕೋ ದೇವ ವಿಷೋದ್ವೈತ'' ಎಂಬ ಬ್ರಹ್ಮನಿಂದ ಅವ್ಯಕ್ತನಾದ ಆದಿಜಿನನನ್ನು ಅವರು ಕಂಡರು. ಅಜ್ಞಾನವೆಂಬ ಅಂಧಕಾರವನ್ನೋಡಿಸಿ, ವಿಜ್ಞಾನಸೂರ್ಯನನ್ನು ಧರಿಸಿ, ಸುಜ್ಞಾನವೂ ದರ್ಶನವೂ ಕೂಡಿ ಮೈಯಾಗಿರುವ ಸರ್ವಜ್ಞನೇ ಆದಿಜಿನನು. ತನ್ನ ಚಿತ್ತವನ್ನು ಭೋಗದಲ್ಲಿರಿಸಿ, ಧ್ಯಾನಾಗ್ನಿಯಿಂದ ತನ್ನ ಆತ್ಮನನ್ನು ನೋಡಿ ಹುಟ್ಟು ಮುಪ್ಪು, ಅಳಿಗಳೆಂಬ ಮೂರು ನಗರಗಳನ್ನೇ ಸುಟ್ಟಿರುವವನನ್ನು ಅವರು ನೋಡಿದರು. ವೇದ, ಸಿದ್ಧಾಂತ, ಪುರಾಣ, ತರ್ಕ, ಆಗಮಗಳನ್ನು ಓದಿದವರಿಗೆ ತೋರಿ ತೋರದಂತಿರುವ ಆದಿಗೂ–ಅನಾದಿಗೂ ಆಚೆಯಿರುವ ಆದಿವಸ್ತುವೆನಿಸಿದ ಆದಿಜಿನೇಶನನ್ನು ಆ ರಾಜಕುಮಾರರು ಕಂಡರು. ಆದಿಜಿನನು ಉಡದಿದ್ದರೂ ತೊಡದಿದ್ದರೂ ಚೆಲುವನಾಗಿದ್ದನು. ಅವನು ಮಿಾಯದಿದ್ದರೂ ಉಣದಿದ್ದರೂ ಸುಖಿಯಾಗಿದ್ದನು. ನುಡಿಗೂ ನೋಟಕ್ಕೂ ಭಾವನೆಗೂ ಬಂದು ಬಾರದಂತಿರುವ ಜಗದೊಡೆಯನ ದರ್ಶನವು ಅವರಿಗಾಯಿತು. ಆ ಜಗದೊಡೆಯ ನಾದರೋ ಕೋಟಿ ಸೂರ್ಯಚಂದ್ರರ ಕಿರಣಗಳನ್ನು ಒಟ್ಟು ಗೂಡಿಸಿ ಇಟ್ಟ ದೇಹಕಾಂತಿ ಉಳ್ಳವನಾಗಿದ್ದನು.

ಆ ದೇವನನ್ನು ಕಂಡು ಅವನಿಗೆ ನಮಸ್ಕರಿಸಿ, ಅವನ ಸ್ತೋತ್ರ ಮಾಡಬೇಕೆಂದು ಬಂದಿರುವ ಆ ರಾಜಕುಮಾರರು, ಆದಿಜಿನನನ್ನು ನೋಡಿ, ಅವನ ಮಿರುಗುವ ಆಕಾರವನ್ನು ನೋಡಿ ಬೆರಗಾಗಿ ನಿಂತುಕೊಂಡರು.

ಶ್ರೀಮುಖದಲ್ಲಿ, ಕೊರಳಲ್ಲಿ, ದೀರ್ಘಬಾಹುಗಳಲ್ಲಿ, ಉದರದಲ್ಲಿ, ನಾಭಿಯಲ್ಲಿ, ಚರಣಗಳಲ್ಲಿ, ಕೆಂಪು ಹೆಜ್ಜೆಗಳಲ್ಲಿ, ಹೊಕ್ಕ ಅವರ ದೃಷ್ಟಿಗಳು ಹೊರಗೆ ಬರಲಿಲ್ಲ. ಉಡಿಗೆ ತೊಡಿಗೆಯ ತೊಡಕುಗಳಿಲ್ಲದೆ, ರತ್ನ ಕನ್ನಡಿಯೇ ಜಿನೇಂದ್ರನಾದಂತೆ ಕಡುಸೊಗಸಾಗಿರುವ ಆ ರೂಪಿನೊಳಗೆ ಅವರ ಕಣ್ಣುಗಳು ಲೀಲೆಯಿಂದ ತಿರುಗಾಡಿದುವು. ಕೆಂಪು ಹೆಜ್ಜೆಯಿಂದ ತಲೆತನಕ, ತಲೆಯಿಂದ ಪಾದದತನಕ, ಅರುಹಂತನ ಕಾಯದ ಕಾಂತಿಯಲ್ಲಿ ಅವರ ನೋಟಗಳು ಮೇಲೇರುತ್ತ ಕೆಳಗಿಳಿಯುತ್ತಿದ್ದುವು. ಅವರು ನೋಡುತ್ತಿದ್ದರಲ್ಲದೆ ನುಡಿಯುತ್ತಿರಲಿಲ್ಲ, ಮೌನದ ಬೊಂಬೆಯಂತೆ ನಿಂತು ನೋಡುನೋಡುತ್ತಿರುವ ಈ ಕುಮಾರರನ್ನು ಕಂಡು ದೇವೇಂದ್ರನು ನುಡಿದನು.

''ಸುಖಿಗಳೇ, ಸ್ವಾಮಿಯನ್ನು ಕಂಡು, ಅವನ ಪಾದಗಳಿಗೆ ಅಡ್ಡಬಿದ್ದು ಅವನನ್ನು ಕೊಂಡಾಡದೆ ಮೌನವಾಗಿ ನಿಂತಿರುವಿರೇಕೆ?''

ಈ ಮಾತನ್ನು ಕೇಳಿ ಅವರು ಮಹದಾನಂದಗೊಂಡರು.

''ಅಯ್ಯೋ ಮೋಸವಾಯಿತು. ನಮಗಿನ್ನೂ ಮಕ್ಕಳಾಟಿಕೆ ಬಿಟ್ಟಿಲ್ಲ. ಮೂರು ಲೋಕದೊಡೆಯನೇ, ತಮ್ಮ ತಪ್ಪನ್ನು ನೋಡದೆ, ರಕ್ಷಿಸು —'' ಎಂದು ಅವರು ಅಡ್ಡಬಿದ್ದರು. ಅವರು ತಮ್ಮ ಕೈತುಂಬ ಇದ್ದ ಅಪರಂಜಿ ಹೂವುಗಳನ್ನು ನೇರವಾಗಿ

ಪುಷ್ಪಾಂಜಲಿಯಾಗಿ ಅರ್ಪಿಸಿದರು. ಮೈತುಂಬಿ ಸಾಷ್ಟಾಂಗವರೆಗಿ ನಿಂತುಕೊಂಡು, ಎಲ್ಲರೂ ಬಾಯಿತುಂಬ ಸ್ತುತಿಸಿದರು.

ನಿತ್ಯ ನಿರಾಶ ನಿರಂಜನ ನಿರುಪಮ ಸತ್ಯ ಸದಾನಂದ ಸಿಂಧೋ
ಅತ್ಯಂತ ಶಾಂತ ಸುಕಾರತ ವಿಮುಕ್ತಿಸಾಹಿತ್ಯಾಯ ತೇ ನಮಃ ಸ್ವಾಹಾ.
ಕಾಯಾಕಾರ ಕಾಯಾತೀತ ಸುಜ್ಞಾನ ಕಾಯ ಶುಧಾತ್ಮಸುದೃಷ್ಟಿ
ಶ್ರೇಯೋನಾಥಾಯ ಲೋಕನಾಥಾಯ ನಿರ್ವಾಣಯಾಯ ತೇ ನಮಃ ಸ್ವಾಹಾ.
ವೀತರಾಗಾಯ ವಿದ್ಯಾಸಂಯುಜೇ ಪರಂಜ್ಯೋತಿಷೇ ಶ್ರೀಮತೇ ಮಹತೇ
ಭೂತಹಿತಾಯ ನಿಷ್ಪ್ರೀತಾಯ ಭವಕುಲೋದ್ಧಾತಾಯ ತೇ ನಮಃ ಸ್ವಾಹಾ.

ಎಂದು ಕೀರ್ತಿಸಿ, ಪ್ರದಕ್ಷಿಣೆ ಬಂದು, ಸುತ್ತಲಿರುವ ಜಿನವೃಂದಕ್ಕೆರಗಿ ಅಲ್ಲಿರುವ ಗಣಧರರನ್ನು ನಮಸ್ಕರಿಸಿ, ಸಭೆಗಿಂಪಾಗಿ ನುಡಿದು, ಹನ್ನೊಂದನೆಯ ಅಮಲಕೋಷ್ಟದಲ್ಲಿ ಕುಳಿತರು. ಪುರುಜಿನನಿಗೆ ಅಭಿಮುಖರಾಗಿ ಕುಳಿತ ಅವರು, ಸಭೆಯ ಸಂಪತ್ತನ್ನು ನೋಡಿ, ದೇವನ ಅಂಗಗಳ ಪ್ರಭೆಯನ್ನು ನೋಡಿ ಮೂರು ಲೋಕಗಳ ತುತ್ತತುದಿಯನ್ನೇರಿದವರಂತೆ ಸಂತೋಷಗೊಂಡರು. ರವಿಕೀರ್ತಿರಾಜನಾಗ, ಕೈಮುಗಿದು, ಬಿನ್ನಹ ಮಾಡಿದನು. ''ಸ್ವಾಮಿ, ಭವದುರ್ಗ ನಿರ್ಧೂಮಧಾಮಾ, ನಮಗೆ ಆತ್ಮಸಿದ್ಧಿಯ ಉಪಾಯವನ್ನು ಚಿತ್ತವಿಸಬೇಕು.''

ಆಗಲೇ ಜಿನವದನದಿಂದ, ಮೃದುಮಾಧುರ್ಯ ಗಂಭೀರವಾಗಿ ಎಲ್ಲೂರ ಹದಿನೆಂಟು ಭಾಷೆಗಳು ಒಂದಾಗಿ ದಿವ್ಯಧ್ವನಿಯು ಉದಯಿಸಿತು. ಆ ದಿವ್ಯ ಮಹಾರವವು, ರಾಜನೆಂದೆಂಬ ರಾಜಬಿಂಬವನ್ನು ನೋಡಿ, ತಾರಾದ್ರಿಯ ಒಡೆಯನೆನಿಸುವ ಕ್ಷೀರ ಸಮುದ್ರದಲ್ಲಿ ಉಬ್ಬಿದ ಘೋಷವೆನಿಸಿತು. ಆ ಧ್ವನಿಯು ಬೇಸಿಗೆ ತಾಗಿದ ಸಸಿಗಳಿಗೆ ಮಳೆಯ ಕೈ ಬೀಸಿದಾಗ, ಅವು ಮೊಳೆಯುವಂತೆ ಸಂಸಾರದ ಸಂಕಷ್ಟದಲ್ಲಿರುವವರಿಗೆ ಶಾಂತಿಯ ವಾಸನೆ ತೋರಿತು. ಅದೊಂದು ಸೊಲ್ಲಾದರೂ ಎಲ್ಲರ ಸೊಲ್ಲಿನಂತಲ್ಲ. ಅರುಹನ ಆ ಸೊಲ್ಲು ಹೊರಹೊಮ್ಮಿದಾಗ ಗಲ್ಲ, ನಾಲಗೆ, ತುಟಿ ಮೊದಲಾದುವು ಅಲ್ಲಾಡದೆ ಚೆಲುವಾಗಿತ್ತು. ಮೋಡಗಳ ಸ್ವರಕ್ಕೆ, ಸಮುದ್ರ ಘೋಷಕ್ಕೆ ನಾಲಗೆ ತುಟಿ ಮೊದಲಾದುವುಗಳ ಹಂಗು ಉಂಟೆ? ಜಗದೊಡೆಯನ ದಿವ್ಯಧ್ವನಿಗೆ ಯಾವ ತೊಂದರೆ ಇದೆ? ಅದು ತಾನಾಗಿಯೇ ರಂಜಿಸುವುದು. ದೂರಕ್ಕೆ ಕೇಳುವಾಗ ಘೋಷದಂತಿರುವುದು. ಹತ್ತಿರಕ್ಕೆ ಸಾರಿ ಕೇಳುವಾಗ ಅದು ಸುವಾಕ್ಯ. ಯಾರು ಏನನ್ನು ಕೇಳಿದರೂ, ಅವರ ಅವರ ಅಭಿಮತವನ್ನೇ ಅದು ವಿಸ್ತರಿಸುವುದು.

ಆ ಧ್ವನಿಯು, ಮದುವೆಯ ಮನೆಯ ಹೊರಗೆ ಭೋರೆಂದು ಕೇಳಿದರೂ, ಒಳಗೆ ಮದುಮಗನನ್ನು ಹಾಡು, ಸೇಸೆಯನ್ನು ಹಾಕು, ಹೂಮಾಲೆಯನ್ನು ತೆಗೆದುಕೋ ಎಂದೇ ಕೇಳುವುದು. ಆ ಧ್ವನಿಯೊಂದನ್ನೇ ಹಲವರು ಕೇಳುವವರಾದರೂ ಅದನ್ನು ಒಂದೇ ನುಡಿಯೆನ್ನುವಂತಿಲ್ಲ. ಇದನ್ನು ಕೇಳುವ ಹಲವರ ಚಿತ್ತದಲ್ಲಿ ಪರಿಣಾಮ ಮಾಡುವುದರಿಂದ ಅದು ಹಲವು ರೂಪವಾಗಿರುವುದು. ಹೊಳೆಯೊಂದರ ನೀರನ್ನು ಕಾಡಿಗೆ ಹಾಯಿಸಿದರೆ, ಅಲ್ಲಿ ಮಾವು, ಅಂಬಟೆ, ಹಲಸು ಮುಂತಾದುವು ಹಲವು ರೀತಿಯಲ್ಲಿ ಪರಿಣಾಮ

ಗೊಂಡು ಬೆಳೆಯುವುವು. ಅದೇ ರೀತಿಯಲ್ಲಿದೆ ಜಿನೇಶ್ವರನ ದಿವ್ಯ ಧ್ವನಿ. ಪರಿಮಳವೂ ಸಿಹಿಯೂ ಕೂಡಿದ ರಸಾಯನದಂತೆ ನರರ, ಸುರರ, ನಾಗೇಂದ್ರರ ಭಾಷೆಯೆಂಬ ರೂಪವನ್ನು ಧರಿಸಿಕೊಂಡರೂ ಆ ದಿವ್ಯ ಧ್ವನಿಯು ಒಂದೇ ಆಗಿದೆ. ಒಬ್ಬ ಜಿನನೇ ಹೇಳುವವನಾದರೂ ಅದು, ಸರ್ವ ಜೀವಕ್ಕೆ ಹಿತವಾಗಿದೆ. ಅದು ಸರ್ವ ತತ್ವದ ಮೊತ್ತವಾಗಿದೆ. ಅದನ್ನು ಸರ್ವರೂ ಕೇಳುವರು. ಆದರೂ ಅಲ್ಲಿ ಗಲಭೆಯಿಲ್ಲ, ಒಬ್ಬನಿಗೆ ಒಬ್ಬನು ಹೇಳಿದಂತೆ ಇರುವುದು. ಆದಿದೇವನ ಅಮೃತ ನಿರೂಪವು ಹತ್ತಿರವಿದ್ದರೂ ದೂರವಿದ್ದರೂ ಒಂದೇ ರೀತಿಯಾಗಿ ಗಾವುದಕ್ಕೂ ಕೇಳಿಸುವುದು. ಅದು ಭವ್ಯರನ್ನು ಕಂಡಾಗ ಹೊರಹೊಮ್ಮಿದರೂ ನಷ್ಟಭವ್ಯರನ್ನು ಕಂಡರೆ ಹೊರಹೊಮ್ಮುವುದಿಲ್ಲ. ಭವ್ಯರತ್ನರಾದ ಭರತೇಶ ಪುತ್ರರ ಮೇಲೆ ಆ ದಿವ್ಯಧ್ವನಿಯು ಪಸರಿಸಿತು.

ಅರುಣೋದಯ ನಡುಹಗಲು. ಅಸ್ತಮಯ, ನಡುವಿರುಳೆಂಬ ನಾಲ್ಕು ಸಂಜೆಗಳಲ್ಲೂ ಆರಾರುಗಳಿಗೆಗೊಮ್ಮೆ ನಿತ್ಯವೂ ಜಿನದೇವನ ದಿವ್ಯ ಧ್ವನಿಯು ಕೇಳುವುದು. ಆತ್ಯಾಸನ್ನ ಭವ್ಯರು ಕೇಳಿದರೆ ಕೂಡಲೇ ಆ ದಿವ್ಯ ಧ್ವನಿಯು ಕೇಳುವುದು. ಕುಮಾರರ ಹಿರಿಮೆಯನ್ನು ಹೇಳಲು ಸಾಧ್ಯವಿಲ್ಲ, ಅವರು ಪುರುಜಿನನನ್ನು ನುಡಿಸಿದರು. ಆಗ ಸ್ವಾಮಿ ಹೇಳಿದರು.

''ಎಲೆ ರವಿಕೀರ್ತಿ ಕೇಳು. ಆತ್ಮ ಸಿದ್ಧಿಯು ಭವ್ಯರಿಗೆ ಸುಲಭವಾಗಿದೆ. ಹಲವು ವಿಚಾರಗಳನ್ನು ತಿಳಿದು ಮನಸ್ಸು ಆತ್ಮನಲ್ಲಿರಲು ಅದು ಫಲಿಸುವುದು. ಕಾಲವನ್ನು, ಆದಿಕರ್ಮವನ್ನು, ಆದಿಜೀವನು ಲಾಲಿಸನು. ಆದಿಯ ಜೀವನು ಕಾಲಕರ್ಮವನ್ನು ಕೊಡಹಿದರೆ ಆತ್ಮಸಿದ್ಧಿಯಾಗುವುದು.''

''ಸ್ವಾಮಿ, ಕಾಲವು ಹೇಗಿದೆ? ಕರ್ಮವು ಹೇಗಿದೆ? ವಿಶಾಲವಾದ ಆತ್ಮವು ಹೇಗೆ? ಆ ರೀತಿಯನ್ನು ಬಾಲಕರಾದ ನಾವೇನು ಬಲ್ಲೆವು? ಕರುಣಾಳುವಾದ ಸ್ವಾಮಿಯು ನಮಗೆ ಅದನ್ನು ಕರುಣಿಸಬೇಕು'' ರವಿಕೀರ್ತಿಯು ಬೇಡಿಕೊಂಡನು.

''ಭವ್ಯ ಕೇಳು, ಮೊದಲು ನೀನಾರು? ದ್ರವ್ಯದ ಭೇದ ಲಕ್ಷಣಗಳೇನು? ಎಂಬುದನ್ನು ತಿಳಿಯಬೇಕು. ಆತ್ಮಸಿದ್ಧಿಯನ್ನು ಕಡೆಯಲ್ಲಿ ಹೇಳುವೆನು'' ಎಂದು ದಿವ್ಯವಾಣೀಶನು ಹೇಳತೊಡಗಿದನು.

ದಿವ್ಯವಾಣೀಶನಾದ ಪುರುದೇವನು ಹೇಳಿದನು.

''ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲವೆಂಬ ಈ ಆರು ವಸ್ತುಗಳು ತ್ರೈವಾಯು ವಲಯದಲ್ಲಿ ತುಂಬಿರುವುವು. ಇದನ್ನು ಆಲೋಚಿಸು. ಉದ್ದಗಲದ ಆಕಾಶದ ನಟ್ಟನಡುವೆ ಮುಚ್ಚೋಡಿಯ ಉದ್ದವಾದ ಚೀಲದ ಹಾಗೆ ಮೂರು ಗಾಳಿಗಳು, ಕೂಡಿ ತುಂಬಿದ್ದು ಈಡಿನಂತೆ ಈ ಆರು ವಸ್ತುಗಳಿವೆ. ಮಂದವಾಗಿರುವ ಆ ಮೂರು ಗಾಳಿಗಳು ಒಂದು ಯೋಜನಕ್ಕೆ ಸ್ವಲ್ಪ ಕಿರಿದಾಗಿದ್ದು ಅದರೊಳಗೆ ಆರು ದ್ರವ್ಯಗಳು ಜಡಿದು ತುಂಬಿಸಿದಂತೆ ಇರುವುವು. ಆ ಮೂರು ಗಾಳಿಗಳು ಒಂದೊಂದು ತಳದಲ್ಲಿ ಇಪ್ಪತ್ತು ಸಾವಿರ ಗಾವುದದಲ್ಲಿ ದಟ್ಟವಾಗಿರುವುವು. ಗಾವುದಕ್ಕೆ ಒಂದಿಷ್ಟು ಕಡಿಮೆಯಾಗುವಂತೆ ತುದಿವರೆಗೂ, ಆರು ದ್ರವ್ಯಗಳು ತುಂಬಿರುವುವು. ಈ ಆರು ದ್ರವ್ಯಗಳ ಮೊತ್ತವೇ ಲೋಕವು. ಗಾಳಿಯನ್ನು ಮೀರಿ ಆಕಾಶವೊಂದಿರುವುದು. ಅದು

ಬೇರೊಂದು ಲೋಕವೆಂದೇ ನೀನು ತಿಳಿದಿರಬೇಕು. ಇನ್ನು ಕ್ರಮವಾಗಿ ಆತ್ಮಸಿದ್ಧಿಯನ್ನು ತೋರಿಸುವೆವು.

''ಒಂದೇ ಒಂದಾಗಿರುವ ಲೋಕವು ತಳಲೋಕ, ಮಧ್ಯಲೋಕ, ಊರ್ಧ್ವಲೋಕವೆಂದು ಮೂರಾಗಿರುವುದು. ಈ ಮೂರು ಲೋಕಗಳು ಆಕಾರದಲ್ಲಿ ಒಂದೇ ಆಗಿದ್ದು ಹೆಸರಿನಲ್ಲಿ ಮಾತ್ರ ಭೇದ. ಒಂದರೊಡನೊಂದು ಸೇರಿರುವ ಮೂರು ಚೀಲದೊಳಗಿರುವ ಮೂರು ನೆಲೆಯ ಕರಡಿಗೆಯಂತೆ ಕೂಡಿಕೊಂಡು, ಮೂರು ಗಾಳಿಗಳು ಹೊರಗೆ ಇರುವುವು. ಅವುಗಳ ಹೊರಗೆ ಮೂರು ಲೋಕಗಳು ಇರುವುವು. ಕೆಳಗೆ ಏಳು ನರಕ ಭೂಮಿಗಳಿವೆ. ಅವುಗಳು ಬಹಳ ದುಃಖದಿಂದ ಕೂಡಿರುವ ಭೂಮಿಗಳು. ಅವುಗಳ ಮೇಲೆ ಅಲ್ಪ ಸುಖದ ನಾಗಲೋಕವಿದೆ. ಅದರ ತಳದಲ್ಲಿರುವುದೇ ತಳಲೋಕ. ಮಧ್ಯಲೋಕದಲ್ಲಿ ಮೇರುಗಿರಿಯನ್ನು ಸುತ್ತಿಕೊಂಡು ದ್ವೀಪಗಳೂ ಸಮುದ್ರಗಳೂ ಇವೆ. ಭರತಕುಮಾರನೇ, ಇದನ್ನು ಸರಿಯಾಗಿ ನೋಡು. ಮೇರುಗಿರಿಯ ಮೇಲೆ ಹಲವು ಸ್ವರ್ಗಗಳಿವೆ, ಅವುಗಳ ಮೇಲೆ ಮುಕ್ತಿ

''ಮೇರುಗಿರಿಯ ತುದಿಯಿಂದ ಊರ್ಧ್ವಮಾರುತದವರೆಗೆ ಊರ್ಧ್ವ ಲೋಕವಿದೆ. ಇದು ವಿಚಾರಿಸಿದರೆ ಗೋಚರಿಸುವುದು. ತಳಲೋಕವು ಚಿಕ್ಕಳದಂತೆ ಇರುವುದು. ಮಧ್ಯಲೋಕವು ಕೂಡಿಕೊಂಡು ಝಲ್ಲರಿಯಂತೆ ಇದೆ. ಮದ್ದಳೆಯನ್ನು ನಿಲ್ಲಿಸಿದಂತೆ ಮೇಲಿನ ಲೋಕ. ರವಿಕೀರ್ತಿ, ಈ ಮೂರು ಲೋಕಗಳ ರೀತಿಯು ನಿನ್ನ ಹೃದಯಕ್ಕೆ ಮುಟ್ಟಿತೇ? ಇನ್ನು ಅದರ ಉದ್ದ ಅಗಲ ಎಷ್ಟೆಂದು ಕೇಳು. ಸುಲಭವಾಗಿ ತಿಳಿಯುವಂತೆ ರಜ್ಜುವೆಂಬ ಅಳತೆಯ ಮೂಲಕ ಅದನ್ನು ಸೂಚಿಸುವೆವು. ದೇವತೆಯ ವಿಮಾನ ನಿಶ್ಚಿತವಾದೊಂದು ಸಮಯದಲ್ಲಿ ಅಸಂಖ್ಯಾತ ಯೋಜನ ದೂರ ಸಾಗುತ್ತದೆ. ಹಾಗೆ ಅಸಂಖ್ಯಾತ ವರುಷ ಹಗಲೂ ಇರುಳೂ ಕೂಡಿ ಸಾಗುವುದೇ ಒಂದು ರಜ್ಜು. ಈ ಲೋಕವು ಅಡಿಯಿಂದ ತುದಿವರೆಗೆ ಹದಿನಾಲ್ಕು ರಜ್ಜು ಉದ್ದವಾಗಿದೆ. ಉತ್ತರದಿಂದ ದಕ್ಷಿಣಕ್ಕೆ ಏಳು ರಜ್ಜು ಅಗಲವಾಗಿದೆ. ಅಡಿಯಲ್ಲಿ ಏಳು ರಜ್ಜು, ಮಧ್ಯದಲ್ಲಿ ಒಂದು ರಜ್ಜು, ಮತ್ತಿನ ಬ್ರಹ್ಮಕಲ್ಪವು ಐದು ರಜ್ಜು, ಕೊನೆಯಲ್ಲಿ ಮೂಡು ಪಡುವಾಗಿ ಒಂದು ರಜ್ಜು. ಅಷ್ಟು ಉದ್ದವಾಗಿಯೂ ಅಗಲವಾಗಿಯೂ ಇರುವ ಲೋಕವನ್ನು ಆರು ದ್ರವ್ಯಗಳು ತುಂಬಿಕೊಂಡಿರುವುವು. ನಿನಗೆ ಅದರ ಅಂದವನ್ನು ತಿಳಿಸುವೆನು. ಭವ್ಯನೇ, ಅದನ್ನು ಮನಸ್ಸು ಕೊಟ್ಟು ಕೇಳು''

''ಮಹಾಸ್ವಾಮಿ, ಅಲ್ಲಿಗೆ ಒಂದು ಬಿನ್ನಹವಿದೆ. ಈಗ ಹೇಳಿದುದೆಲ್ಲವೂ ವೇದ್ಯವಾಯಿತು. ನಿಲ್ಲದೇ ಚಲಿಸುತ್ತಿರುವ ಗಾಳಿಯಲ್ಲಿರುವ ಲೋಕವು ಅಲ್ಲಾಡದೇ ಇರುವುದೇಕೆ?''

''ಚಲವಾಯುವೆಂದು, ನಿಶ್ಚಲವಾಯುವೆಂದು, ಎರಡು ವಿಧವಾಗಿ ವಾಯುಗಳಿರುವುದನ್ನು ತಿಳಿದಿರು, ರವಿಕೀರ್ತಿ. ಈ ಚಲವಾಯುಗಳು ಲೋಕದೊಳಗೆ ಸುಳಿಯುತ್ತ ಇರುವುವು. ನಿಶ್ಚಲವಾಗಿರುವ ಮೂರು ಗಾಳಿಗಳು ಚಲಿಸುವುದಿಲ್ಲ. ನಿಸ್ಸಂಗತೆ, ಸೂಕ್ಷ್ಮತೆ, ಮುಂತಾದ ಚರಿಮೆಯಲ್ಲಿ ಅವೆಲ್ಲವೂ ಸಮಾನವಾಗಿವೆ. ಈ

ಗಾಳಿಗಳಿಗೆ ಕಂಪನ ಚಲನಗಳಿವೆ. ನಿಶ್ಚಲತೆ, ನಿಷ್ಕಂಪನ ಇವಿಷ್ಟೇ ಮೂರು ಗಾಳಿಗಳಿರುವ ಭೇದ. ಸ್ವರ್ಗ ಲೋಕದಲ್ಲಿ ಅದೇ ರೀತಿಯಲ್ಲಿ ಸ್ಥಿರವಾಯು ಮತ್ತು ಚರವಾಯುಗಳಿಗೆ ಹೆಸರು ಒಂದೇ ಆಗಿದೆ. ಸ್ಥಿರ ತಾರೆಯೆಂದು ಇದೆ. ಚರತಾರೆಯೆಂದೂ ಇದೆ. ಶ್ರೇಷ್ಠವಾದ ತಾರೆಗಳ ಹೆಸರು ಸಮಾನವಾಗಿದೆ. ಸ್ಥಿರತಾರೆಯು ನಡೆಯುವುದಿಲ್ಲ, ಚರತಾರೆಯು ನಡೆಯುತ್ತದೆ. ಅದೇ ರೀತಿಯಲ್ಲಿ ವಾಯುಗಳು ಕೂಡ. ಎಂಬುದನ್ನು ನೆನಪಿನಲ್ಲಿಟ್ಟುಕೋ, ರವಿಕೀರ್ತಿ. ಮುಚ್ಚಿದ ದೋಣಿಯ ಗವಸಣಿಗೆಯ ಹಾಗೆ ಲೋಕಗಳನ್ನು ಮುಚ್ಚಿದ ಗಾಳಿಗಳು ಮೂರೆ. ಆದರೆ ಹುಚ್ಚರಂತೆ ಒಳಗೆ ಸುಳಿಯುತ್ತಿರುವ ಗಾಳಿಗಳು ಲೆಕ್ಕವಿಲ್ಲದಷ್ಟು ಇವೆ. ಇದು ಆಶ್ಚರ್ಯವಲ್ಲ; ಸಹಜವೇ ಆಗಿದೆ.''

''ಈಗ ಸಂದೇಹವು ಅಳಿಯಿತು. ಮುಂದೆ ಆರು ವಸ್ತುಗಳನ್ನು ನಿರೂಪಿಸು— ಸ್ವಾಮಿ'' ಎಂದು ರವಿಕೀರ್ತಿಯು ಮಂದಸ್ಮಿತನಾಗಿ ಕೈಮುಗಿದನು. ಅರುಹನು ಅವನೊಡನೆ ಹೀಗೆ ಹೇಳಿದನು :

''ಜೀವನೇ, ಕೇಳು, ಜೀವವಸ್ತುವು ಮೊದಲೊಮ್ಮೆ ಜೀವಿಸಿ ಬಂದಿರುತ್ತದೆ. ಈಗಲೂ ಅದು ಜೀವಿಸುತ್ತಿರುವುದು. ಪ್ರಾಣಗಳಿಂದಾಗಿ ಅದು ನಾಳೆಯೂ ಮುಂದೆಯೂ ಜೀವಿಸುವುದು. ಜೀವಿಯು ಹತ್ತು ಪ್ರಾಣಗಳಿಂದ ಕೂಡಿ ಜೀವಿಸುವುದು. ಆ ಹತ್ತು ಪ್ರಾಣಗಳು ಯಾವುವೆಂದರೆ — ಚಿತ್ತ ವಚನ, ಕಾಯ ಉಸಿರು, ಆಯುಷ್ಯ ಮತ್ತು ಐದು ಇಂದ್ರಿಯಗಳು. ಮುಟ್ಟದರೆ ತಿಳಿಯುವುದು, ಉಣ್ಣುವುದು, ಪರಿಮಳ ಹೀರುವುದು, ನೋಡುವುದು, ಕೇಳುವುದು — ಈ ಐದು ಇಂದ್ರಿಯಗಳೂ ಜೀವವನ್ನು ಮುಟ್ಟಿ ಕೊಂಡಿರುವುವು. ಆತ್ಮನು ಒಮ್ಮೊಮ್ಮೆ ಐದು ಇಂದ್ರಿಯಗಳನ್ನೂ ಕೂಡಿರುವನು. ಒಮ್ಮೊಮ್ಮೆ ಒಂದೆರಡು ಇಂದ್ರಿಯಗಳನ್ನೂ, ಒಮ್ಮೊಮ್ಮೆ ಮೂರು ನಾಲ್ಕು ಇಂದ್ರಿಯಗಳನ್ನೂ ಕೂಡಿರುವನು. ಒಮ್ಮೊಮ್ಮೆ ಆರೇಳು, ಎಂಟೊಂಬತ್ತು, ಹತ್ತು ಎಂದು ಪ್ರಾಣಗಳಲ್ಲಿ ಸಂಬಂಧಿಸಿಕೊಂಡಿರುವನು. ಒಂದೊಂದು ಇಂದ್ರಿಯದಿಂದ ಮೊದಲಾಗಿ ಇಂದ್ರಿಯಗಳು ಐದನ್ನೂ ಕೂಡಿಕೊಂಡು ಜೀವನು ಜೀವಿಸುವನು. ಆಗ ನಾಲ್ಕು, ಆರು, ಏಳು, ಎಂಟು, ಒಂಬತ್ತು ಪತ್ತು ಪ್ರಾಣಗಳೆಂದು ಕ್ರಮವಾಗಿ ಅಳತೆ ಮಾಡುವುದನ್ನು ಕೇಳು. ಮರ, ಬಳ್ಳಿ ಮೊದಲಾದುವುಗಳು ಏಕೇಂದ್ರಿಯಗಳು. ಅವುಗಳು ಸ್ಪರ್ಶವನ್ನು ಮಾತ್ರ ತಿಳಿಯುವುವು. ಸ್ಪರ್ಶೇಂದ್ರಿಯ, ಕಾಯ, ಉಸಿರು, ಆಯುಷ್ಯಗಳಿದ್ದರೆ ನಾಲ್ಕು ಪ್ರಾಣಗಳಾದುವು. ಜೀವರಾಶಿಯಲ್ಲಿ ಅನಿಲ, ಅಗ್ನಿ, ಜಲ, ಭೂಮಿ ಎಂಬ ನಾಲ್ಕೂ ದೇಹವಾಗಿವೆ. ಅವುಗಳಿಗೆ ಏಕೇಂದ್ರಿಯದ ವರ್ತನೆಗಳಿವೆ. ಆದರಿಂದಲೇ ಘನವಾದ ದುಃಖವನ್ನು ಅನುಭವಿಸುತ್ತವೆ. ಎರೆಹುಳು, ಗುಳ್ಳೆ ಮುಂತಾದ ಕೆಲವು ಜೀವಿಗಳಿಗೆ ಸ್ಪರ್ಶದ ನಾಲಗೆಗಳಿವೆ. ಸ್ವರವೇ ವಚನವಾಗಿರುತ್ತದೆ. ಇವುಗಳು ಆರು ಪ್ರಾಣಗಳಲ್ಲಿ ಇವೆ. ಇರುವೆ, ಜಗಳೆ ಮುಂತಾದವು ಮುಟ್ಟಿದರೆ ತಿಳಿದು ಕೊಳ್ಳುತ್ತವೆ; ಉಣ್ಣುತ್ತವೆ; ಮೂಸಿ ತಿಳಿಯುತ್ತವೆ. ಆದ್ದರಿಂದ ಮೂರು ಇಂದ್ರಿಯದ ಜೀವಿಗಳಲ್ಲಿ ಏಳು ಪ್ರಾಣಗಳಿವೆಯೆಂದು ತಿಳಿದಿರು. ತಿನ್ನುವುದು, ಮುಟ್ಟಿದರೆ ತಿಳಿಯುವುದು, ನೋಡುವುದು, ಪರಿಮಳ ಹೀರುವುದು, ಎಂಬ ನಾಲ್ಕು ಇಂದ್ರಿಯಗಳು ತುಂಬಿಗಳಲ್ಲೂ

ಜೇನುನೊಣಗಳಲ್ಲೂ ಇರುವುದರಿಂದ ಅವುಗಳಲ್ಲಿ ಎಂಟು ಪ್ರಾಣಗಳಿವೆ. ಉಡು, ಓತಿ ಮೊದಲಾದ ತಿರಿಯಂಚಗಳಲ್ಲಿ ಪಂಚೇಂದ್ರಿಯಗಳಿದ್ದರೂ ಮನಸ್ಸು ಇರುವುದಿಲ್ಲ, ಆದ್ದರಿಂದ ಅವುಗಳಲ್ಲಿ ಒಂಬತ್ತು ಪ್ರಾಣಗಳಿವೆ. ಮನಸ್ಸೆಂಬುದು ಎದೆಯಲ್ಲಿ ಅಷ್ಟದಳಾಕಾರದ ತಾವರೆಯಂತೆ ಇರುವುದು. ಅದರಿಂದ ನೆನಪಿನಿಂದ ತಿಳಿದು ತಿದ್ದಿದಂತೆ ಆಡುತ್ತವೆ. ಅಂತಹ ಮನಸ್ಸು ಉಡು, ಓತಿಗಳಿಗೆ ಇಲ್ಲ. ಕಾಡಾನೆ, ದನ, ಕುದುರೆ ಮೊದಲಾದ ಕೆಲವಕ್ಕೆ ಮನಸ್ಸು ಉಂಟು. ಮನಸ್ಸು ಇರುವುದರಿಂದಲೇ ಅವುಗಳು ಮನುಷ್ಯರು ತಿದ್ದಿದಂತೆ, ನಡೆದುಕೊಳ್ಳುತ್ತವೆ. ಅವುಗಳಲ್ಲಿ ದಶಪ್ರಾಣಗಳಿರುವುದನ್ನು ನೀನು ನೆನೆದುಕೊಳ್ಳು. ಈ ತಿರಿಯಂಚಗಳಲ್ಲಿ ಮನಸ್ಸುಳ್ಳವುಗಳು, ಮನಸ್ಸು ಇಲ್ಲದವುಗಳು ಎಂದು ಎರಡು ವಿಧವಾಗಿದೆ. ಅದು ಹಾಗಿರಲಿ, ನಾರಕಿಗಳು, ಸುರರು ನರರು, ಎಲ್ಲ ಪಂಚೇಂದ್ರಿಯರಾಗಿ ದಶಪ್ರಾಣಧಾರಿಗಳು. ಏಕೇಂದ್ರಿಯದಿಂದ ಪಂಚೇಂದ್ರಿಯದ ವರೆಗೆ ಅನೇಕ ಜೀವಿಗಳು ಬಾಳುವುದನ್ನು, ಇದೊಂದು ಕಲೆಯೆಂದು ತಿಳಿದಿರು. ಈ ದಶಪ್ರಾಣಗಳು ಮೂರು ಕಾಯಗಳಲ್ಲಿ ಅಡಗಿರುತ್ತವೆ. ಹೊರಗೆ ಔದಾರಿಕ ದೇಹ; ಒಳಗೆ ಉರಿಯುತ್ತಿರುವ ಎರಡು ತೈಜಸ ಕಾರ್ಮಣ ದೇಹಗಳು. ಸೆರೆಮನೆಯಂತೆ ಈ ಮೂರು ದೇಹಗಳಿವೆ. ಈ ಮೂರರ ಮರೆಯಲ್ಲಿ ಜೀವವಸ್ತು ಇರುವುದು.

''ಇಲ್ಲಿ ಇನ್ನೊಂದು ಬಿನ್ನಹವುಂಟು ಸ್ವಾಮಿ'' ಎಂದು ಅರ್ಕಕೀರ್ತಿಯ ಬಿನ್ನಹ ಮಾಡಿದನು.

''ಕರ್ಮಗಳು ಎಂಟು, ತೈಜಸ, ಕಾರ್ಮಣಗಳಲ್ಲಿ ನಾಟಿರುತ್ತವೆ ಎಂದರೆ ಅವುಗಳು ಹೊರಗಣ ಅಂಗಗಳಾಗಿ ಎಂಟು ಕರ್ಮಗಳಿಗೆ ಹೊರಗಾಗಿ ಇರುತ್ತವೆ ಅಲ್ಲವೆ?''

''ಹೊರಗಲ್ಲ, ಕರ್ಮಗಳು ಏಳು. ಹೊರಗೂ ಒಳಗೂ ಎರಡೂ ಅಂಗಗಳಲ್ಲಿ ಇರುತ್ತವೆ. ನಾಮಕರ್ಮವು ತಾನು ಹೊರಗಿನ ಅಂಗಗಳಲ್ಲಿಯೂ ಒಳಗಿನ ದೇಹದಲ್ಲಿಯೂ ಇರುತ್ತವೆ. ರಾಜಕುಮಾರನೆ ಇದನ್ನೂ ತಿಳಿದಿರು'' ಎಂದು ಪುರುದೇವರು ವಿವರ ನೀಡಿದರು.

''ಗಲನ ಪೂರಣ ಇರುವುದರಿಂದ ಪುದ್ಗಲವೆಂಬ ಹೆಸರಾಯಿತು. ಅದೊಂದು ಮೂರ್ತಿಮತ್ತಾದ ವಸ್ತು. ಆ ವಸ್ತು ಗಲಿಸುತ್ತ ಪೂರಿಸುತ್ತ ಮೂರು ಲೋಕದಲ್ಲೂ ಒತ್ತೊತ್ತಾಗಿ ತುಂಬಿರುವುದು. ಐದು ವರ್ಣಗಳು, ಎಂಟು ಸ್ಪರ್ಶಗಳು, ಎರಡು ಗಂಧಗಳು, ಐದು ರಸಗಳು — ಈ ರೀತಿಯಲ್ಲಿ ಅವುಗಳಿವೆ. ಹೀಗೆ ಪುದ್ಗಲದಲ್ಲಿ ಇಪ್ಪತ್ತು ಗುಣಗಳಿವೆ. ಐದು ಇಂದ್ರಿಯಗಳಿಗೆ ಗೋಚರಿಸುವ ವಸ್ತುಗಳು ಐದು. ಇಂದ್ರಿಯ ಕರ್ಮಗಳು ಎಂಟು. ಐದು ಶರೀರಗಳೂ, ಮನಸ್ಸೂ ಮೂರ್ತತೆಯೂ ಇವುಗಳೆಲ್ಲವೂ ಪುದ್ಗಲವೇ. ಇದರಲ್ಲಿ ತೋರ, ಸಣ್ಣ – ಎಂಬ ಹೆಸರಿನಿಂದ ಕೂಡಿ, ಆರು ಭೇದಗಳಿವೆ. ಈ ತೋರ ಸಣ್ಣಗಳೆಂಬ ನುಡಿಯೇ ಆರು ಆಗಿರುವುದನ್ನು ತಿಳಿದುಕೊಳ್ಳಬೇಕು. ತೋರ ತೋರ ಎಂಬುದು ಒಂದು. ತೋರಕ ಎಂಬುದು ಒಂದು. ತೋರ ಸಣ್ಣವೆಂಬುದು ಒಂದು ಸಣ್ಣ ತೋರವೆಂಬುದೊಂದು. ಸಣ್ಣದೆಂಬುದು ಒಂದು, ಸಣ್ಣ ಸಣ್ಣದೆಂಬುದೊಂದು — ಹೀಗೆ ಇವುಗಳು ಆರು. ಶಿಲೆ, ಮಣ್ಣು ಮೊದಲಾದುವುಗಳೆಲ್ಲ ತೋರತೋರದ

ಪುದ್ಗಲಗಳು. ನೀರು, ಎಣ್ಣೆಗಳು ತೋರ ಪುದ್ಗಲಗಳು. ನೆರಳು, ಬಿಸಿಲುಗಳು ತೋರಸಣ್ಣ ಪುದ್ಗಲಗಳು. ಕಣ್ಣುಗಳ ಹೊರತಾದ ನಾಲ್ಕು ಇಂದ್ರಿಯಗಳಿಗೆ ಆಗುವ ರುಚಿಗಳೇ ಸಣ್ಣ ತೋರ ಪುದ್ಗಲಗಳೇ. ಸಣ್ಣದೆಂಬುದು ಕರ್ಮವಾಗಿರುವ ಪುದ್ಗಲವು ಅದು ಸಣ್ಣ ಸಣ್ಣವೆನಿಸುವುದು ಒಂದು ರೀತಿಯ ಪುದ್ಗಲವಾಗಿ – ಎಂದು ತಿಳಿಯಬೇಕು. ಈ ಸಣ್ಣಸಣ್ಣ ಪುದ್ಗಲದ ಒಳಗೂ ಸಣ್ಣ ಸಣ್ಣ ಬೇರು ಇರುತ್ತದೆ. ಹೀಗೆ ವರ್ಣಿಸುವುದಕ್ಕೆ ಇವು ಆರು ಭೇದಗಳಾಗಿವೆ. ಸದರವಾಗಿ ತೆಗೆಯುವುದು. ಜೋಕೆಯಿಂದ ತೆಗೆಯುವುದು. ತೆಗೆದರೂ ಬಾರದಿರುವುದು – ಎಂಬ ಈ ರೀತಿಯ ಮೃದುವಾದ, ಚತುರಾದ, ಇಂದ್ರಿಯ ಗೋಚರವಾದ ಕರ್ಮಗಳಿಗೆ ಅವು ತಕ್ಕುದಾದರೂ ಈ ಆರು ಕುರುಹುಗಳು ಅವುಗಳಿಗೆ ಸಿಕ್ಕದೇ ಇರುತ್ತವೆ.

''ಪರೀಕ್ಷಿಸಿದರೆ ಪರಮಾಣು, ಅಣು, ಸ್ಕಂಧಗಳೆಂದು ಮೂರು ರೀತಿಯಾಗುತ್ತದೆ, ಪರಮಾಣುವು ಐದು ಇಂದ್ರಿಯಗಳಿಗೆ ತೋರದ ಅತ್ಯಂತ ಸಣ್ಣದು. ಧರೆಯಲ್ಲಿ ಅದಕ್ಕಿಂತಲೂ ಸಣ್ಣದು ಇಲ್ಲ, ಅನಂತ ಪರಮಾಣುಗಳು ಕೂಡಲು ಒಂದು ಅಣುವಾಗುತ್ತದೆ. ಹೀಗೆ ಒಂದು, ಎರಡು, ಮೂರು ಅಣುಗಳು ಹಲವು ಕೂಡಿದ ಪಿಂಡಗಳೇ ಸ್ಕಂಧಗಳು. ಹೀಗೆ ಪುದ್ಗಲಕ್ಕೆ ಪರಮಾಣು, ಅಣು ಸ್ಕಂಧಗಳೆಂಬ ರೀತಿಯ ಪರ್ಯಾಯಗಳಿವೆ. ಅಣುವಿಗೂ ಕೆಳಗಿನ ಪರಮಾಣುಗಳು ತಮ್ಮೊಳಗೆ ಹೆಣೆದುಕೊಂಡು. ಎರಡು, ಮೂರು ಮುಂತಾಗಿ ಅಣುವಾಗಿ ಕೊನೆಯಲ್ಲಿ ಸ್ಕಂಧಗಳಾಗುತ್ತವೆ. ಇವುಗಳು ಒಮ್ಮೆ ಕಾರಣ ಸ್ಕಂಧಗಳಾಗುತ್ತವೆ. ಅಣು, ಪರಮಾಣು, ಸ್ಕಂದಗಳು ಒಮ್ಮೆ ಮೂರು ಆಗಿದ್ದರೆ, ಅಣು, ಸ್ಕಂಧಗಳೆಂದು ಇನ್ನೊಮ್ಮೆ ಎರಡಾಗಿರುತ್ತವೆ. ಮತ್ತೊಮ್ಮೆ ಅಣುವೆಂಬ ನುಡಿಯನ್ನೇ ಬಿಟ್ಟು ಪರಮಾಣು, ಸ್ಕಂಧಗಳೆಂದು ಎರಡಾಗಿರುತ್ತವೆ. ಪರಮಾಣುವಿಗೆ ಸ್ಪರ್ಶ, ಗಂಧ, ರಸ, ವರ್ಣಗಳು ಇವೆ. ಅದಕ್ಕೆ ಶಬ್ದವಿಲ್ಲ ಪರಮಾಣು ಕೂಡಿ ಸ್ಕಂಧವಾದರೆ, ಅದಕ್ಕೆ ಶಬ್ದ ದೊರೆಯುವುದು. ಅದೊಂದು ಪರ್ಯಾಯ. ಪರ್ಯಾಯದಲ್ಲಿ ಸ್ಥಿರಪರ್ಯಾಯ ಅಸ್ಥಿರ ಪರ್ಯಾಯವೆಂದೂ ಉಂಟು. ಭೂಮಿ, ಮೇರುಗಳು ಸ್ಥಿರ ಪರ್ಯಾಯಗಳು. ಒಟ್ಟಾಗಿ ಹರಿಯುವುದು ಅಸ್ಥಿರ ಪರ್ಯಾಯ. ಈ ರೀತಿಯಲ್ಲಿ ಪುದ್ಗಲದ ರಚನೆಯಿರುತ್ತದೆ. ಇನ್ನು ಮುಂದಿನ ಉದ್ದೇಶಾರ್ಥವನ್ನು ಕೇಳು''

ಎಂದು ಪುರುದೇವರು ಹೇಳುತ್ತಿರುವಾಗ, ಅರ್ಕಕೀರ್ತಿಯು ತನಗಾದ ಸಂದೇಹಕ್ಕಾಗಿ ಒಂದು ಪ್ರಶ್ನೆ ಕೇಳಿದನು. 'ಸದ್ಗುರುವೆ, ಇಲ್ಲಿಗೆ ಒಂದು ಬಿನ್ನಹ ಉಂಟು. ಚಿತ್ತದ ಗುಣಗಳೇ ಆಭರಣವಾಗಿರುವ ಸ್ವಾಮಿ, ಇದನ್ನು ಚಿತ್ತೈಸಬೇಕು. ಐದು ಶರೀರವೆಂದು ಈ ಪುದ್ಗಲದ ವಿಚಾರ ಹೇಳಿದಿರಿ. ಶರೀರಗಳು ಮೂರೇ ಅಲ್ಲವೆ? ಐದು ಶರೀರವಾಗಲು ಇನ್ನೆರಡು ಯಾವುವು? ನಮಗೆ ಅದನ್ನು ಅರಿಸಿ ತಿಳಿಸಬೇಕು.'

''ನಾರಕರಿಗೆ, ಸುರರಿಗೆ ವೈಕ್ರಿಯಕ ಶರೀರವಿದೆ. ಅವರಿಗೆ ಔದಾರಿಕ ಶರೀರವಿಲ್ಲ'' ಎಂದು ಪುರುದೇವರು ಅರ್ಕಕೀರ್ತಿಯ ಸಂದೇಹ ನಿವಾರಿಸತೊಡಗಿದರು. ಅವರಿಗೆ ಕ್ರೂರವಾದ ತೈಜಸ, ಕಾರ್ಮಣ, ವೈಯಕ್ತಿಕ ಎಂದು ಮೂರು ರೀತಿಯ ಶರೀರವುಂಟು. ನರ, ತಿರಿಯಂಚ ಶರೀರವನ್ನು ತಾಳಿರುವುದೇ ಔದಾರಿಕ ಶರೀರವು. ಸುರರೂ ನಾರಕರೂ

ನಾವು ನೆನೆದ ರೂಪವನ್ನು ತಾಳುತ್ತಾರೆ. ಅದು ವೈಕ್ರಿಯಕ ದೇಹವು. ಒಮ್ಮೊಮ್ಮೆ ಶ್ರೇಷ್ಠರಾದ ಮುನಿಗಳಿಗೆ ತತ್ವ ಸಂಶಯವು ಉಂಟಾದರೆ, ಆಗ ಅವರ ತಲೆಯಲ್ಲಿ ಒಂದು ಮೊಳದಷ್ಟು ಉದ್ದವಾಗಿ ಒಂದು ಸುಂದರವಾದ ದೇಹವುಂಟಾಗುವುದು. ಅವರಾಗ ನಮ್ಮಲ್ಲಿಗೆ ಬಂದು, ತಮ್ಮ ಸಂದೇಹವನ್ನು ನೀಗಿಸಿಕೊಳ್ಳುವರು. ಅವರು ಮನಸ್ಸಿನ ಸಂದೇಹವು ಅಳಿಯುವಾಗ, ಆ ದೇಹವು ತಾನೂ ಎರಡು ಘಳಿಗೆಯಲ್ಲಿ ಅಳಿಯುವುದು. ಹೀಗಿರುವ ಆ ಮುನಿಗಳ ದೇಹಕ್ಕೆ ಆಹಾರಕ ದೇಹವೆಂದು ಹೆಸರು. ಔದಾರಿಕದೇಹ, ಆಹಾರಕದೇಹ, ತೈಜಸದೇಹ, ಕಾರ್ಮಣದೇಹ, ವೈಕ್ರಿಯಕದೇಹ – ಎಂಬ ಇವು ಪಂಚದೇಹಗಳು. ಇವುಗಳೆಲ್ಲವೂ ಪುದ್ಗಲವು.

''ಲೋಕದ ಬೇರುಮುಟ್ಟಿ ಧರ್ಮ ಮತ್ತು ಅಧರ್ಮಗಳೆಂದು ಎರಡು ವಸ್ತುಗಳಿವೆ. ಅವು ನಿರ್ಮಲವಾದ ಆಕಾಶದಂತೆ ಇವೆ. ಇವೆರಡೂ ಅಖಂಡಗಳಾಗಿವೆ. ಧರ್ಮ ವಸ್ತುವು ಚಲನೆಗೆ ಸಹಕಾರಿಯಾಗಿದೆ. ಅಧರ್ಮ ವಸ್ತುವು ನಿಲ್ಲುವುದಕ್ಕೆ ಸಹಾಯವಾಗಿದೆ. ಮೀನಿನ ಚಲನೆಗೆ ನೀರು ಸಹಕಾರಿಯಾಗಿರುವಂತೆ, ಪ್ರಯಾಣಿಕರ ನಿಲ್ಲುವಿಕೆಗೆ ಮರದ ನೆರಳು ಸಹಕಾರಿಯಾಗಿದೆ. ನಡೆಯದೆ ಇರುವುದನ್ನು ನೀರು ನಡೆಯಿಸುವುದಿಲ್ಲ, ನಡೆಯುವ ಮೀನನ್ನು ಅದು ತಡೆಯುವುದೂ ಇಲ್ಲ. ಮೀನು ನಡೆಯುವುದಕ್ಕೆ ನೀರು ಸಹಕಾರಿಯಾಗಿದೆ. ನೀರಿಲ್ಲದ ನೆಲದಲ್ಲಿ ಮೀನು ನಡೆಯುವುದೇ? ಜೀವ ಪುದ್ಗಲಗಳು ನಡೆಯುವ ವಸ್ತುಗಳು. ಅವು ಯಾವ ಕಡೆಗೆ ಹೋದರೂ ಹಾಗೆಯೇ ಇವೆ. ಧರ್ಮ, ವಸ್ತು, ಮರದ ನೆರಳು ಕೈಹಿಡಿದು ನಿಲ್ಲಿಸುವುದಿಲ್ಲ. ಆದರೆ ಕುಳಿತವರನ್ನು ಬೇಡವೆನ್ನುವುದಿಲ್ಲ. ನೆರಳು ಇರುವುದರಿಂದಲೇ ಪ್ರಯಾಣಿಕರು ನಿಲ್ಲುವರು. ನೆರಳಿಲ್ಲದ ಉರಿಬಿಸಿಲಿನಲ್ಲಿ ನಿಲ್ಲುವರೇ? ನಿಲ್ಲುವ ವರ್ತನೆಯುಳ್ಳ ಜೀವಪುದ್ಗಲಗಳ ನಿಲ್ಲುವಿಕೆಗೆ ಅಧರ್ಮ ವಸ್ತುವು ಹೊರಗಿನ ಸಹಕಾರಿಯಾಗಿದೆ. ಇದನ್ನು ಭವ್ಯರು ತಿಳಿದಿರಬೇಕು.

ಆಕಾಶವು ಅಖಂಡ ರೂಪಿನ ವಸ್ತುವಾಗಿ ಲೋಕದ ಒಳಗೂ ಹೊರಗೂ ಇರುವುದು. ಅದು ಬೇಕಾದಷ್ಟು ವಸ್ತುಗಳಿಗೆ ಇಂಬಾಗಿದ್ದು ಮಹಾಕೀರ್ತಿವಂತನಂತೆ ಇದೆ. ಕಾಲವೆಂಬ ವಸ್ತುವು ಪರಮಾಣು ರೂಪವಾಗಿ ಮೂರು ಲೋಕಗಳನ್ನೂ ತುಂಬಿರುವುದು. ಈ ಪರಮಾಣುಗಳು, ಒಂದರ ಮೇಲೊಂದಾಗಿದ್ದರೂ ಒಂದಕ್ಕೊಂದು ಅಂಟಿಕೊಂಡಿರುವುದಿಲ್ಲ. ರತ್ನ ರಾಶಿಯಲ್ಲಿರುವ ರತ್ನಗಳಂತೆ ಬಿಡಿಬಿಡಿಯಾಗಿರುತ್ತವೆ. ಅವುಗಳಿಗೆ ಪರಿಮಳ, ರಸ, ಬಣ್ಣ ಮೊದಲಾದುವುಗಳಿಲ್ಲ. ಆದರೆ ಬಯಲಿನ ರೂಪಗಳಲ್ಲಿ ಪರಿಮಾಣು ರೂಪದ ತುಂಡುತುಂಡುಗಳಾಗಿ, ಆಕಾಶವನ್ನು ಕತ್ತರಿಸಿ ಲೋಕವನ್ನು ತುಂಬಿದಂತೆ ಇವೆ. ಅದರಲ್ಲಿ ವ್ಯವಹಾರ ಕಾಲ, ನಿಶ್ಚಯ ಕಾಲ ಎಂದು ಎರಡು ವಿಧದ ಕಾಲಗಳಿವೆ, ಕ್ರಮವಾಗಿರುವ ದಿನ, ಮಾಸ, ವರುಷ, ಘಳಿಗೆ, ಜಾವ – ಎಂದು ಮುಂತಾದುವುಗಳೆಲ್ಲ ವ್ಯವಹಾರ ಕಾಲಗಳು. ಮಿತಿಗೆ ಒಳಪಡದೆ ಲೋಕವನ್ನು ತುಂಬಿರುವ ಕಾಲವೇ ನಿಶ್ಚಿತಕಾಲವು. ಇವುಗಳು ಕಾಲದ ಪರ್ಯಾಯಗಳಾಗಿವೆ. ಅತ್ಯಂತ ಹೊಸತಾಗಿರುವುದನ್ನು ಹಳತೆನಿಸುವಂತೆ ಮಾಡುವುದೇ ಕಾಲದ ಗುಣವು. ಅದು ಆದಿಯ ಪರಿಣತಿ. ಈ ಕಾಲವು

ಭಿನ್ನವಸ್ತುಗಳ ವರ್ತನೆಗಳಿಗೆ ಕಾರಣವಾಗಿರುವಂತೆ ತನ್ನ ವರ್ತನೆಗೂ ತಾನೇ ಕಾರಣವಾಗಿರುವುದು, ಇದು, ತನ್ನ ಮುಖವನ್ನು ಡೊಂಕು ಮಾಡಿ, ಅನ್ಯರನ್ನು ನಗಿಸಿ ತಾನೂ ನಗುವ ಹಾಸ್ಯಗಾರನಂತಿರುವುದು.

"ಜೀವ ಮುಂತಾದ ಆರು ವಸ್ತುಗಳ ಕಲಾ ವಿವರಣೆಯು ಇಲ್ಲಿಗೆ ಆಯಿತು. ಈ ವಸ್ತುಗಳ ಮೊತ್ತದಲ್ಲಿ ತಾರತಮ್ಯ ಭೇದಭಾವಗಳು ಇವೆ. ಆಕಾಶ, ಧರ್ಮ, ಅಧರ್ಮ, ಇವು ಮೂರು ವಸ್ತುಗಳು. ಒಂದೊಂದಾಗಿರುವಾಗ ಅವು ಅಖಂಡ ರೂಪಗಳು. ಪುದ್ಗಲ, ಜೀವ, ಕಾಲಗಳೆಂಬ ಮೂರು ವಸ್ತುಗಳೂ ಅಗಣಿತವೆನಿಸಿಕೊಳ್ಳುತ್ತವೆ. ಹಲವು ಜೀವಿಗಳ ಕುರಿತಾಗಿರುವ ಇವು ಖಂಡಗಳಾಗಿರುತ್ತವೆ. ತಮ್ಮ ತಮ್ಮ ನಿಲುವಿನಿಂದ ತಾವು ಅಖಂಡಗಳಾಗಿರುತ್ತವೆ. ಹಲವು ಅಣುಗಳನ್ನು ನೋಡಿದರೆ, ಅವು ಖಂಡಗಳಾಗಿರುತ್ತವೆ. ಆದರ ಕಾಲಾಣುಗಳು ಒಂದರೊಳಗೊಂದು ಸೇರಿರುವಾಗ ಅಖಂಡಗಳಾಗುತ್ತವೆ. ಸ್ಕಂಧಗಳನ್ನೂ ಎಲ್ಲ ಅಣುಗಳನ್ನೂ ನಿರ್ಬಂಧಿಸಿ ನೋಡಿದರೆ, ಅವು ಅಖಂಡವಾಗಿರುತ್ತವೆ. ಅದು ಜಾಡ್ಯಾಂಧ ಪುದ್ಗಲದ ಭೇದವಾಗಿದೆ. ಮೂರ್ತವೆನಿಸುವ ಆರರಲ್ಲೂ ಪುದ್ಗಲವು ಒಂದೇ; ಉಳಿದ ಐದು ಮೂರ್ತಗಳಲ್ಲಿ ಅವು ಐದು ವಸ್ತುಗಳು. ಪ್ರೀತಿಯಿಂದ ತಿಳಿಯುವ ವಸ್ತುವಾಗಿ ಜೀವ ಒಂದೇ ಇರುವುದು. ಉಳಿದವು ತಿಳಿಯಲಾರವು. ಅರ್ಕಕೀರ್ತಿ ನೀನಿದನ್ನು ಚೆನ್ನಾಗಿ ತಿಳಿದಿರು. ಉಳಿದವು ತಿಳಿಯಲಾರವು. ಗತಿಗೆ ಧರ್ಮವೊಂದೇ ಕಾರಣವಾಗಿದೆ. ಉಳಿದವುಗಳು ಕಾರಣವಾಗುವುದಿಲ್ಲ. ಅಧರ್ಮವೇ ಸ್ಥಿತಿಗೆ ಕಾರಣವಾಗಿದೆ. ಬೇರೆ ಯಾವುದೂ ಕಾರಣವಾಗಿಲ್ಲ.

"ಭೂಮಿಗೆ ದೇಹವೂ ಆಕಾಶವೂ ಒಂದೇ ಆಗಿದೆ. ವರ್ತನೆಗೂ ಪರಿಣತೆಗೂ ಕಾಲವು ಒಂದೇ ಆಗಿದೆ. ಈಗಾಗಲೇ ಹೇಳಿದ ಆರು ವಸ್ತುಗಳಲ್ಲಿ ಜೀವ ಪುದ್ಗಲಗಳು ಚರಿಸುತ್ತ ಇರುತ್ತವೆ. ಅವುಗಳಲ್ಲಿ ಜೀವ ಪುದ್ಗಲಗಳಿಗೆ ಮಾತ್ರ ಚೆನ್ನಾದ ಸಂಬಂಧವಿರುತ್ತದೆ. ಉಳಿದ ನಾಲ್ಕು ವಸ್ತುಗಳಿಗೆ ಬಂಧವಿರುವುದಿಲ್ಲ. ಜೀವನ ಚಲನೆಗೆ ಪುದ್ಗಲವೇ ಕಾರಣವಾಗಿದೆ. ಯೋಚಿಸಿ ನೋಡಿದರೆ, ಆದರ ಸಂಚಲನಕ್ಕೂ ತುಂಬಿದ ಕಾಲವೇ ಕಾರಣವಾಗಿದೆ. ಇದು ಕಾಲ, ಜೀವ, ಕರ್ಮಗಳ ತ್ರಿಕೂಟವಾಗಿದೆ. ಜೀವ ವಸ್ತುವು ಕರ್ಮಗಳೊಡನೆ ಕೂಡಿರುವಷ್ಟು ಕಾಲ ಚರಿಸುತ್ತ ಇರುವುದು. ಕೊನೆಗೆ ದುರಿತಗಳೆಲ್ಲ ಸುಟ್ಟು ಹೋದ ಮೇಲೆ, ಅದು ಮುಕ್ತಿಯಲ್ಲಿ ಚರಿಸದೆ ತೆಪ್ಪಗೆ ಒಪ್ಪಿಕೊಂಡಿರುವುದು. ಆರು ವಸ್ತುಗಳೂ ಒಂದೊಂದರೊಳಗೆ, ತಾವು ಒಂದೊಂದಾಗಿ ಕೂಡಿಕೊಂಡು ಲೋಕದಲ್ಲಿ ತುಂಬಿರುವುವು. ಅವುಗಳಲ್ಲಿ ಒಂದರ ಗುಣವು ಇನ್ನೊಂದಕ್ಕೆ ಆಗದಿರುವುದರಿಂದ ಅವು ತಮ್ಮಷ್ಟಕ್ಕೆ ಬೇರೆ ಬೇರೆಯಾಗಿವೆ. ಸಾಲಾಗಿ ನಿಂತಾಗ ಜೀವಸಮೂಹಕ್ಕೆ ಈ ಲೋಕವೇ ಸಾಲದು. ಪುದ್ಗಲವು ಅದಕ್ಕೂ ಅಧಿಕವಾಗಿದೆ. ಕಾಲದ ಸಂತತಿಯಾಗಿರುವ ಆಕಾಶ, ಧರ್ಮ, ಅಧರ್ಮಗಳ ಅಖಂಡವಾದ ಸಾಲುಗಳು ಅಲ್ಲಿ ತುಂಬಿಕೊಂಡಿವೆ. ಹಾಲಿನ ಕೊಡದಲ್ಲಿ ಜೇನುತುಪ್ಪವನ್ನು ಇಂಬಾಗಿ ಇಟ್ಟು, ಅವುಗಳು ಸರಿಯಾಗಿ ಅಡಗಿರುವ ಹಾಗೆ, ಕೊನೆಯವರೆಗೂ ಈ ಆರು ವಸ್ತುಗಳು, ಲೋಕದಲ್ಲಿ ಒಟ್ಟೊಟ್ಟಾಗಿ ತುಂಬಿಕೊಂಡಿವೆ. ಗೂಢವಾಗಿರುವ ನಾಗನಲ್ಲಿ ಅಡಗಿರುವ ನಿಧಿಯಂತೆ, ಈ

ಆರು ವಸ್ತುಗಳೂ ಗೂಢತೆಯಿಂದ ಅಗಾಧವಾದ ರೂಪಿನ ಗಾಳಿಗಳ ಗರ್ಭದಲ್ಲಿ ಗೂಢವಾಗಿ ತುಂಬಿಕೊಂಡಿವೆ.

''ಒಂದು ಪರಮಾಣು ನಿಲ್ಲುವಷ್ಟು ಸ್ಥಳಕ್ಕೆ ಪ್ರದೇಶವೆಂದು ಹೆಸರು. ಅದರಲ್ಲಿ ಹಬ್ಬಿರುವ ಪುದ್ಗಲವು ನಾಲ್ಕು ವಿಧದ ಪ್ರದೇಶವಾಗಿದೆ. ಆಕಾಶವು ಅನಂತವಾದ ಪ್ರದೇಶ. ಜೀವ, ಧರ್ಮ, ಅಧರ್ಮಗಳಿಗೆ ಯಾವಾಗಲೂ ಅಸಂಖ್ಯಾತ ಪ್ರದೇಶಗಳಿವೆ. ಆದರೆ ಕಾಲ ವಸ್ತುವು ಒಂದು ಪ್ರದೇಶವನ್ನೇ ಆವರಿಸಿರುತ್ತದೆ. ದೇಶವು ಕಿಂಚಿತ್ತಾಗಿದೆ. ಕಾಲವನ್ನು ಬಿಟ್ಟು ಉಳಿದವುಗಳಿಗೆ ಅನೇಕ ಪ್ರದೇಶಗಳಿರುವುದರಿಂದ ಅವುಗಳನ್ನು ಪಂಚಾಸ್ತಿಕಾಯವೆನ್ನುವರು. ಈ ಆರು ವಸ್ತುಗಳೂ ಗುಣಪರ್ಯಾಯ ವಸ್ತುತೆಯಿಂದ ವಸ್ತುವೆಂಬ ಲೆಕ್ಕಕ್ಕೆ ಬಂದಿವೆ. ವಸ್ತುಗಳು ಆರಾಗಿ, ಮತ್ತೆ ಅವುಗಳಲ್ಲಿ ಪಂಚಾಸ್ತಿ ಕಾಯಗಳಾಗುವುವು. ಹೀಗೆ ವಿಸ್ತರಿಸುವುದರಿಂದ, ಅಲ್ಲಿ ತತ್ವಗಳು ಏಳು, ದ್ರವ್ಯಗಳು ಆರು, ಅಸ್ತಿಕಾಯಗಳು ಐದು.''

ಎಂದು ದಿವ್ಯ ವಾಕ್ಕೃತಿಯಾದ ಪುರುದೇವನು ಸುಭವ್ಯನಾದ ಅರ್ಕಕೀರ್ತಿಗೆ ತಿಳಿಸಿದನು.

# ೧೫

# ತತ್ವಾರ್ಥ

ದೇವರ ದೇವನಾದ ಪುರುದೇವರು ರವಿಕೀರ್ತಿರಾಜನಿಗೆ ಜೀವಾದಿ ಸಪ್ತತತ್ವಗಳನ್ನು ಜೀವಿಗಳ ಹಿತಾರ್ಥವಾಗಿ ನಿರೂಪಿಸಿದ ಮೇಲೆ ಹೀಗೆಂದು ಹೇಳಿದರು.

''ರವಿಕೀರ್ತಿ ಕೇಳು, ಸಪ್ತತತ್ವಗಳ ಕಾಲುಕೀಲುಗಳನ್ನೆಲ್ಲ ಕೇಳಿದ ನಿನಗೀಗ, ಕರ್ಮವನ್ನು ಸುಟ್ಟು ಕೈವಲ್ಯ ಶಾಲೆಗೇರುವ ವಿಚಾರವನ್ನು ಹೇಳುವೆವು. ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ ಮತ್ತು ಮೋಕ್ಷವೆಂದು ತತ್ವಗಳು ಏಳು ಪ್ರಕಾರವಾಗಿವೆ. ಬದ್ಧಾತ್ಮರು, ಶುದ್ಧಾತ್ಮರು – ಎಂದು ಜೀವಪದ್ಧತಿಯಲ್ಲಿ ಎರಡು ತೆರವುಂಟು. ಬದ್ಧಾತ್ಮರು ಆರು ಅಂಗವುಳ್ಳವರು; ಶುದ್ಧಾತ್ಮರು ಆರು ಅಂಗವಲ್ಲದೆ ಮೂರು ಅಂಗವಿರುವವರು. ಸಿದ್ಧರು, ಮುಕ್ತರು, ನಿರ್ದೇಹಿಗಳು, ಶುದ್ಧರು — ಎಂದರೆ ಒಂದೇ ಅರ್ಥವು. ಬದ್ಧರು, ಸಂಸಾರಿಗಳು, ದೇಹಗಳು. ಕರ್ಮವಿರುದ್ಧರು — ಎಂದರೂ ಒಂದೇ ಅರ್ಥ; ಸ್ಪರ್ಶೇಂದ್ರಿಯದಿಂದ ಕರ್ಣೇಂದ್ರಿಯದವರೆಗೆ ಕ್ರಮವಾಗಿ ಇಂದ್ರಿಯಗಳು ಐದು. ದಶಪ್ರಾಣಗಳು ಕೂಡಿರುವ ದೇಹದೊಂದಿಗೆ ಕರ್ಮವನ್ನೂ ಹೊಂದಿರುವವರು ಸಂಸಾರಿಗಳು. ಇಂದ್ರಿಯ, ದೇಹ, ಕರ್ಮ. ಪ್ರಾಣಗಳು ಅಳಿದು, ಬೋಧೇಂದ್ರಿಯ ಗಳಿಂದ ಬೋಧಾಂಗರಾಗಿ ಸಾಂದ್ರಸುಖದಿಂದ ಮುಕ್ತಿಯಲ್ಲಿರುವ ಪರಮ ಬೋಧೇಂದ್ರರೇ ಮುಕ್ತ ಜೀವಿಗಳು. ಈಗ ಮುಕ್ತರಾದವರೆಲ್ಲರೂ ಮೊದಲು ಸಂಸಾರಯುಕ್ತರಾಗಿದ್ದು, ಯುಕ್ತಿಯಿಂದಲೂ ಜ್ಞಾನದಿಂದಲೂ ಕರ್ಮಗಳ ಶಕ್ತಿಯನ್ನು ಕೆಡಿಸಿ, ದೇಹವನ್ನು ಬಿಟ್ಟು ಮುಕ್ತಿಗೆ ಹೋದವರೇ ಆಗಿದ್ದಾರೆ. ಮುಕ್ತರು ಯಾವಾಗಲೂ ಮುಕ್ತಿಯಲ್ಲೇ ಇದ್ದವರಲ್ಲ, ಭವವಲ್ಲಿ ಇದ್ದವರೇ. ಅವರೊಮ್ಮೆ ಮುಕ್ತಿಗೆ ಏರಿದರೆ, ಮತ್ತೆ ಅವರು ಇತ್ತಕಡೆಗೆ ಬರುವಂತಿಲ್ಲ, ಅವರ ಮುಕ್ತಿಯೇ ನಿತ್ಯವಾಗಿರುತ್ತದೆ. ನೀವು ಅದರಂತೆ ಕರ್ಮವಳಿದಾಗ ಮುಕ್ತರಾಗುವಿರಿ. ಈ ಭವವೆಂಬುದು ನಿತ್ಯವಲ್ಲ, ಮುಕ್ತಿಯೇ ನಿತ್ಯವಾದುದು.

'ಭವ್ಯನಾಗಿರುವ ರವಿಕೀರ್ತಿ, ಭವದಲ್ಲಿ ಭವ್ಯರೆಂದೂ, ನಿರ್ಭವ್ಯರೆಂದೂ ಎರಡು ಭೇದಗಳಿವೆ, ಭವ್ಯರೆಂಬುವರು ಮುಕ್ತಿಯನ್ನು ಹೊಂದುವವರು. ನಿರ್ಭವ್ಯರಿಗೆ ಮುಕ್ತಿಯಿಲ್ಲ, ಮೊದಲಿನವರು ಮುಕ್ತಿಗೆ ಸಲ್ಲುವವರಾದರೆ ಎರಡನೆಯವರು ಮುಕ್ತಿಗೆ ಸಲ್ಲದವರು. ಆ ಭವ್ಯರಲ್ಲೂ ಸಾರಭವ್ಯರು, ದೂರಭವ್ಯರು ಎಂದು ಎರಡು ರೀತಿಯವರಿದ್ದಾರೆ. ಸಾರಭವ್ಯರಿಗೆ ಬೇಗನೆ ಮುಕ್ತಿ ದೊರಕುವುದು. ದೂರಭವ್ಯರು ನಿಧಾನವಾಗಿ ಮೆಲ್ಲಗೆ ಮುಕ್ತಿಯನ್ನು ಪಡೆಯುವರು. ಮೊದಲಿನವರಿಗೆ ಕೆಲವು ಜನ್ಮಗಳಲ್ಲಿ ಮುಕ್ತಿ ದೊರೆತರೆ, ದೂರಭವ್ಯರಿಗೆ ಮುಕ್ತಿ ದೊರೆಯಲು ಹಲವು ಜನ್ಮಗಳು ಬೇಕು.

ಇವರಲ್ಲಿ ಇಷ್ಟೇ ಭೇದವಿರುವುದು. ಸಾರಭವ್ಯರಾಗಲಿ, ದೂರಭವ್ಯರಾಗಲಿ, ಮೋಕ್ಷಕಲೆಗೆ ಬಂದವರೆಲ್ಲರೂ ಸುಖಿಗಳಾಗುವರು. ನಿರ್ಭವ್ಯರು ಯಾವಾಗಲೂ ಹುಟ್ಟುತ್ತ, ಸಾಯುತ್ತ, ದುಷ್ಟವಾದ ಭವದಲ್ಲಿ ಆಡುತ್ತಿರುವವರು. ಈ ನಿರ್ಭಾಗ್ಯ ಇದ್ದ ಹಾಗೇ ಇರಲಿ, ಅರ್ಭಟಿಸುತ್ತಿರುವ ಕರ್ಮಗಳನ್ನು ಸುಟ್ಟು ಮುಕ್ತಿಗೆ ಹೋಗುವವರೇ ಅಲ್ಲ. ದೇಹವನ್ನು ದಂಡಿಸುತ್ತ ಉಗ್ರ ತಪಸ್ಸನ್ನು ಮಾಡುವರು. ಥಕ್ಕನೆ ಶಾಸ್ತ್ರಗಳನ್ನು ಪಠಿಸುವರು, ಅದರಿಂದಾಗಿ ದೇವರಾಗಿ ಹುಟ್ಟಿದರೂ ಮತ್ತೆ ಯೋನಿಯಲ್ಲಿ ಬಿದ್ದು ಜನ್ಮ ಪಡೆಯುತ್ತಾರಲ್ಲದೆ. ಎಲ್ಲರೂ ಪೊಗಳುವಂತಹ ಆತ್ಮಸಿದ್ಧಿಯನ್ನು ಪಡೆಯಲಾರರು. ಸ್ವರ್ಗದಲ್ಲಿ ಗ್ರೈವೇಯಕದ ವರೆಗೆ ಸುಲಭವಾಗಿ ಹೋಗುವರು. ಆದರೆ ಅಲ್ಲಿಂದ ಜಡರಾದ ಅವರು ದುರ್ಗತಿಗೆ ಒಳಗಾಗಿ ಕೆಳಗೆ ಬೀಳುವರಲ್ಲದೆ, ಮೇಲಿನ ಅಪವರ್ಗವನ್ನು ಹತ್ತಲಾರರು. ಆ ಜಡರು ನರಕಭೂಮಿಯಲ್ಲಿ ತಿರಿಯಂಚ ಯೋನಿಗಳಲ್ಲೂ ಹುಟ್ಟಿ ಮತ್ತೆ ಅಲ್ಲಿಯೇ ನಿಲ್ಲದೆ ನಿಗೋಧ ರಾಶಿಗಳಲ್ಲೂ ಸೇರುವರು. ಈ ರೀತಿಯಲ್ಲಿ ಅವರು ನರಗತಿಯಲ್ಲೂ ಸುರಗತಿಯಲ್ಲೂ ತೊಳಲುವರಲ್ಲದೆ ಶ್ರೇಷ್ಠವಾದ ಮುಕ್ತಿಯನ್ನು ಪಡೆಯಲಾರರು. ಶಾಸ್ತ್ರಗಳನ್ನೋದಿದರೂ, ತಪಸ್ಸು ಮಾಡಿದರೂ ನಿರ್ಭವ್ಯರಾದವರು ಅಪರವರ್ಗವನ್ನು ಪಡೆಯದಿರಲು ಒಂದು ಕಾರಣವಿದೆ. ಅದೇನೆಂದರೆ–ತಪಸ್ಸು ಶಾಸ್ತ್ರಗಳು ಹೊರಗಿನ ರಚನೆಗಳಾಗಿವೆ; ಒಳಗಿನ ಆತ್ಮರಚನೆಗಳಾಗಿಲ್ಲ, ಅದರ ಗುಣಗಳನ್ನು ಮುಂದೆ ಹೇಳುವೆವು. ಭವಿಗಳಿಗೆ ಉಗ್ರ ಭವವೊಂದು ಇದ್ದೇ ಇರುವುದು. ಭವ್ಯರಿಗೆ ಅದಿಲ್ಲ, ಅವರಿಗೆ ಮುಕ್ತಿಯೇ ಸಿದ್ಧವಾಗಿರುವುದು.

"ಮುಕ್ತಾತ್ಮರೆಂದೂ, ಸಂಸಾರಾತ್ಮರೆಂದೂ ಎರಡು ಹೆಸರುಗಳು ಇವೆ. ಮುಕ್ತಾತ್ಮರಿಗೂ ಸಂಸಾರಾತ್ಮರಿಗೂ ಎರಡೆರಡು ರೀತಿಯಾಗಿರುವ ಆತ್ಮ ಶಕ್ತಿಯು ಒಂದೇ ತೆರನಾದುದು. ಆತ್ಮನನ್ನು ವ್ಯಕ್ತಿಗೆ ತಂದವರೆಲ್ಲರೂ ಮುಕ್ತರು. ಆತ್ಮನನ್ನು ವ್ಯಕ್ತಿಗೆ ತಾರದಿದ್ದವರು ಸಂಸಾರಾತ್ಮರಾಗಿರುವರು. ಆದರೂ ಆತ್ಮನೆಂಬ ಹೆಸರಿನ ಶಕ್ತಿಯು ಒಂದೇ ಆಗಿದೆ. ಸಿದ್ಧರ ನಿರ್ಮಲವಾದ ಆತ್ಮನ ಗುಣವು ಚಿದ್ಗುಣವಾಗಿದೆ. ಬದ್ಧರ ಆತ್ಮನ ಗುಣವು ಮಾತ್ರ ಮಣ್ಣು. ಸಿದ್ಧರ ಆತ್ಮನು ಶುದ್ಧ ಜ್ಞಾನಿಯಾಗಿರುವನು. ಬದ್ಧರ ಆತ್ಮನು ಬದ್ಧ ಜ್ಞಾನಿಯಾಗಿರುವನು. ಇವರೊಳಗೆ ಇಷ್ಟೇ ಭೇದ. ಮೇಲು ಚಿನ್ನ, ಕೀಳುಚಿನ್ನವೆಂದು ಹೇಳುವಾಗ, ಹೇಳಿರುವವನಿಗೆ ಎರಡು ರೀತಿಗಳಾದರೂ ಮೇಲು ಚಿನ್ನವೇ ಚಿನ್ನ; ಕೀಳು ಚಿನ್ನವು ಹಿತ್ತಾಳೆಯೆಂದು ಯಾರಾದರೂ ತಿಳಿಯುವರೇ? ಕಾಳಿಕೆ, ಕಿಟ್ಟು ಕೂಡಿರುವುದರಿಂದ ಅದು ಕೀಳು ಚಿನ್ನವಾಯಿತು, ಕಾಳಿಕೆಯೂ ಕಿಟ್ಟೂ ನಾಶವಾದಾಗ ಮೇಲು ಚಿನ್ನವಾಯಿತಲ್ಲದೆ ಬಂಗಾರವೆಂಬ ಭಾವನೆಯಲ್ಲಿ ಯಾವ ಭೇದವೂ ಇಲ್ಲ. ಆರೇಳು ಬಣ್ಣದ ಚಿನ್ನವು ಪುಟವಿಟ್ಟಾಗ ನಿರ್ಮಲವಾದ ಚಿನ್ನವಾಗುವುದು. ಅದರಂತೆ ಘಟಿತ ಕರ್ಮಗಳನ್ನೆಲ್ಲ ಸುಟ್ಟಾಗ ಎಲ್ಲರೂ ಮುಕ್ತರೇ ಆಗುವರು. ರವಿರಾಜ, ಇದನ್ನು ನಂಬಿರು. ಕೀಳು ಚಿನ್ನದಲ್ಲಿ ಅಡಗಿದ್ದ ಬಣ್ಣವು ಹೊರಬಂದು ಅದೇ ಶುದ್ಧವಾದ ಮೇಲು ಚಿನ್ನವಾಯಿತು. ಆತ್ಮನಲ್ಲಿ ಅಡಗಿರುವ ಗುಣಗಳು ಹೊರಹೊಮ್ಮಿದಾಗ ಅವನು ಮುಕ್ತಾತ್ಮನಾದನೆಂದು ಹೇಳುವರು. ಶಕ್ತಿಯ ದೃಷ್ಟಿಯಿಂದ ನೋಡಿದರೆ, ಎಲ್ಲರ

ಆತ್ಮದಲ್ಲೂ ಬೋಧದರ್ಶನ ಸುಖಗಳು ಅಡಗಿರುತ್ತವೆ. ಶಕ್ತರಾದವರು ಅದನ್ನು ಹೊರಹೊಮ್ಮಿಸಿದರೆ ಅದು ವ್ಯಕ್ತಿ ಮುಕ್ತಿಯೆನಿಸುವುದು. ಇದನ್ನು ನೀನು ನಂಬಿರಬೇಕು – ರವಿಕೀರ್ತಿ. ಬೀಜದೊಳಗಿರುವ ಮರವನ್ನು ಶಕ್ತಿಗತವೆಂದು ಯೋಚಿಸಿದರೆ ಅಂಕುರಿಸಿ, ಚಿಗುರಿ, ಎಲೆ ಬೆಳೆದು ಮರವಾದುದನ್ನು ಶಕ್ತಿಯೆಂದು ತಿಳಿಯಬೇಕು. ಇದೇ ಜೀವಾಳಿಗೆ ಇರುವ ಶಕ್ತಿವ್ಯಕ್ತಿಗಳ ಜಾಗೃತಿಯು. ಇದಿಷ್ಟು ಜೀವತತ್ವ ಕಲೆ. ಇದನ್ನು ನೀನು ತಿಳಿದಿರಬೇಕು. ಇನ್ನು ನಿರ್ಜೀವ ತತ್ವ ಕುರಿತು ಹೇಳುವೆನು.

''ಭವ್ಯ ಜೀವನಾದ ರವಿಕೀರ್ತಿ, ಕೇಳು. ಜೀವತತ್ವವನ್ನು ಕಳೆದ ಮೇಲೆ ಉಳಿಯುವುದೇ ನಿರ್ಜೀವ ತತ್ವವು; ಆಕಾಶ, ಧರ್ಮ, ಅಧರ್ಮ ಕಾಲ ಮತ್ತು ಪುದ್ಗಲಗಳಿಗೆ ಸುಕ್ಷೇಮವೆಂಬುದಾಗಲೀ ದುಃಖವೆಂಬುದಾಗಲೀ ಇಲ್ಲ. ಅವುಗಳಿಗೆ ಹೆಸರು ಮಾತ್ರವಿದೆ. ಅವುಗಳನ್ನು ನಾವು ಕಾಣಲಾರೆವು. ಆದ್ದರಿಂದಲೇ ಅವಕ್ಕೆ ನಿರ್ಜೀವವೆಂಬ ಹೆಸರಾದುದು. ಅವುಗಳಲ್ಲಿ ನಾಲ್ಕು ತೋರದವುಗಳು. ಮೂರ್ತಿಮತ್ತಾಗಿ, ತೋರುವುದೇ ಪುದ್ಗಲವೊಂದು. ಅದು ಗಾಳಿಯ ಗರ್ಭದಲ್ಲಿ ಒತ್ತಿಯೊತ್ತಿ ತುಂಬಿರುವುದು. ಅದು ಆರು ರೀತಿಯಲ್ಲಿರುವುದೆಂದು ಈ ಮೊದಲೇ ಹೇಳಿರುವೆವು. ತೋರ ತೋರ ಎಂದು, ತೋರ ಎಂದು, ತೋರ ಸಣ್ಣ ಎಂದು, ಮುಂತಾಗಿರುವ ಈ ಆರು ಯಾರ ಕಣ್ಣುಗಳಿಗೂ ಕಾಣುವುವು. ಇನ್ನು ಉಳಿದವುಗಳು ಯಾರ ಚರ್ಮಾಕ್ಷಿಗೂ ತೋರಲಾರವು. ಅಂಟಾಗಿ, ಬಿರುಬಾಗಿ ಕರ್ಮವರ್ಗಣೆಯ ಧೂಳು ಉಂಟು. ಅದೇ ಸಣ್ಣ ಪುದ್ಗಲವು. ಅಂಟಿನಂತಿರುವ ಸ್ನೇಹ ಬಿರುಬಿನಂತಿರುವ ಕೋಪ ಉಂಟಾದವರನ್ನು ಅದು ಹಿಡಿದುಕೊಳ್ಳುವುದು. ಉಣ್ಣುವುದು, ಮಿಾಯುವುದು, ಹೊದೆದುಕೊಳ್ಳುವುದು, ಕಣ್ಣಿಂದ ಕಾಣುವುದು ಮೊದಲಾದ ಎಲ್ಲವೂ ಜಾಣ್ಮೆ ಕೂಡಿದ ಒಂದು ಪುದ್ಗಲವಷ್ಟೆ. ಆ ವಸ್ತುಗಳನ್ನು ತಿಳಿದು ಕಣ್ಣಿನಿಂದ ಕಾಣುವರು. ಹೊಳೆ, ಮಳೆ, ಹೊಲ, ಮನೆ, ತಳಿಗೆ, ತಂಬಿಗೆ, ಗಾಳಿ, ಚಳಿ, ಉರಿ, ಗಿರಿ, ಮುಗಿಲು, ಒಡಲು, ಹುಳಿ ಸಿಹಿ, ಕಹಿ, ಖಾರ, ತಂಪು, ಕೆಂಪು, ಕಪ್ಪು ಬಿಳುಪು, ಎಲ್ಲವೂ ಪುದ್ಗಲಗಳೇ. ಮಣಿಮಾಲೆ, ಚೌಕುಳಿ, ಕಡಗ, ಮೂಗುತಿ, ಸರಪಣಿ, ತಾತಿ, ಉಳಿ, ಬಳೆ, ಪದಕ, ಹಣ, ಹೊನ್ನು, ತಾರ, ತವರ, ಚಿನ್ನ, ಬೆಳ್ಳಿ ಮುಂತಾದುವು ಪುದ್ಗಲವಲ್ಲದೆ ಬೇರೆಯಲ್ಲ.

''ದೊಡ್ಡ ಕೊಡದಲ್ಲಿ ತುಂಬಿದ ನೀರಿನಂತೆ ಪುದ್ಗಲ ವಸ್ತುವು ಲೋಕದಲ್ಲಿ ತುಂಬಿರುವುದು. ಸಮುದ್ರದಲ್ಲಿರುವ ಮಿಾನುಗಳಂತೆ ಲೋಕದಲ್ಲಿ ಜೀವಿಗಳು ಮುಳುಗಿ ಇರುತ್ತವೆ. ಕಣ್ಣಿಗೆ ತೋರುವ ಮೂರು ಪುದ್ಗಲಗಳನ್ನು ಮಿಾರಿದ ಮೂರು ಪುದ್ಗಲಗಳು ಕಣ್ಣಿಗೆ ತೋರುವುದಿಲ್ಲವಾದರೂ ಸರ್ವತ್ರ ತುಂಬಿರುತ್ತವೆ. ಅಲ್ಲಿ ಮಿಾರದೇ ಅಡಗಿ ಈ ಜೀವಿಗಳು ಇರುತ್ತವೆ. ಗಿರಿ, ತರು, ಗೋಡೆ ಮುಂತಾದುವುಗಳು ಕಂದದೆ ಇರುವುದರಿಂದ ನಡೆಗೆ ಅಡ್ಡವಾಗಿವೆ. ಪರಮಾಣು, ಅಣು. ಮುಂತಾದ ಕಂದದ ಪುದ್ಗಲಗಳಾಗಿ ಹೋಗುವವರನ್ನು ತಡೆಯಲಾರವು. ಬೇಡ ಬೇಕು ಎನ್ನದ ಧರ್ಮಾದಿ ಪುದ್ಗಲಗಳು ನಾಲ್ಕು. ಅವುಗಳು ನೋಡುವವರ ಹಾಗೆ ಇರುತ್ತವೆ. ಅಲ್ಲಿ ಜೀವ ಪುದ್ಗಲಗಳು ಹೊಯ್ದಾಡುವ ಜಟ್ಟಿಗಳಂತೆ ಇವೆ. ಇವುಗಳಲ್ಲಿ ಸಮಾನತೆ ಇಲ್ಲವೆನ್ನುವಂತಿಲ್ಲ.

ಕಾಲವೊಂದು ಅಚ್ಚಾಗಿ ಕರ್ಮಗಳನ್ನು ಆ ಕಡೆಗೆ ತರುವುದು. ಈ ಪುದ್ಗಲವು ಪರಿಣತಿಗೆ ಅಚ್ಚಾದ ಕಾರಣದಿಂದ ಚುಚ್ಚಿಕೊಂಡುವವರಂತೆ ಇದೆ. ಆದ್ದರಿಂದ ಜೀವ, ಪುದ್ಗಲ, ಕಾಲ – ಈ ಮೂರು ವ್ಯಾಪಿಸಿದ ಅನಾದಿಗಳೆಂದು ಹೇಳುವರು. ಕರ್ಮ, ಆತ್ಮ, ಕಾಲ – ಈ ಮೂರನ್ನು ಆದಿಗಳಾಗಿ ಧರ್ಮ, ಅಧರ್ಮ ಆಕಾಶಗಳು ನಿರ್ಮಿಸಿದಾಗ ಅವು ಅದಿಯಲ್ಲಿ ಆದುವು ಎಂದು, ಆತ್ಮ ಧರ್ಮಗಳ ವಿಚಾರದಲ್ಲಿ ಹೇಳುವರು. ಅದು ಸತ್ಯ, ಕೈವಲ್ಯದಲ್ಲಿರುವ ಸಿದ್ಧರು, ವಸ್ತು ಸ್ವಭಾವವೆಂದು ನೋಡುತ್ತಿರುವರು. ಮುಕ್ತಿಯು ಜೀವಕ್ಕಲ್ಲದೆ ಪುದ್ಗಲಕ್ಕಿಲ್ಲ. ಇದು ನಿರ್ಜೀವ ತತ್ವ. ಇದನ್ನು ನಿಶ್ಚಯಿಸಿಕೊಂಡಿರು.

ನಾಲಗೆ, ಮೈ, ಮನಸ್ಸುಗಳಿವು ಮೂರೂ ಮುಸುಕಿದ ವೇಳೆಯಲ್ಲಿ ಸಣ್ಣದೆಂಬ ಈ ಧೂಳು ಹೊರಗೆ ಇದ್ದುದು, ಒಳಗೆ ಹೋಗುವುದು. ಅದೇ ಆಗ ಜೀವಾಳಿಗೆ ಅಸ್ರವಬಂಧವೆನಿಸುವುದು. ತೂತಿನಿಂದ ಹಡಗಿನೊಳಗೆ ನೀರು ಹೋಗುವಂತೆ, ಮಾತು, ಮೈಯಾಟ, ಚಿಂತೆಗಳೆಂಬ ತೂತುಗಳಿಂದ ಕರ್ಮವಾಗುವ ಧೂಳು ಆತ್ಮನಲ್ಲಿಗೆ ತಾನೇ ಹೋಗುವುದು. ಆ ಧೂಳಿನಿಂದ ಹೋಗುವ ಆಸ್ರವಗಳು ಎಲ್ಲವೂ ಐದಾಗಿಯೂ ಐವತ್ತೇಳಾಗಿಯೂ ಇರುವುವು. ಐದು ಮೂರೆನ್ನುವಾಗ, ಅದಕ್ಕೆ ಯೋಗಗಳೆಂದು ಹೆಸರು. ಮೊದಲು ಧೂಳಾಗಿರುವುದು. ಅದು ಒಳಗೆ ಹೋಗುವಾಗಲೂ ಧೂಳಾಗಿರುವುದು; ಮತ್ತೆ ಭಾವಕರ್ಮದಲ್ಲಿ ಸೇರಿದಾಗ, ಕೂಡಲೇ ಕರ್ಮವಾಗುವುದು. ಇದೇ ಆಸ್ರವ ತತ್ವ. ಇನ್ನು ಮುಂದೆ ಬಂಧಗಳನ್ನು ತಿಳಿದುಕೊಳ್ಳಬೇಕು.

ಧೂಳು, ಮೂರು ಯೋಗಗಳ ಒಳಗೆ ಹೋಗಿ ಕೋಪ ರಾಗ ಮೋಹಗಳಲ್ಲಿ ಬೆರೆತುಕೊಂಡಾಗಲೇ ಅದು ಕರ್ಮರೂಪವಾಗುವುದು. ಅದೇ ಜೀವಗೆ ಲೇಪವಾಗುವುದು. ಆದುವೇ ಬಂಧವು. ಧೂಳು ಆತ್ಮನೊಳಗೆ ಹೋಗುವಾಗ ಆಸ್ರವವಾಗಿರುವುದು. ಅದು ಅಲ್ಲಿ ಪಲ್ಲಟಿಸಿ ಜೀವನಲ್ಲಿ ಮೇಳವಾಗುವುದು. ಅದೇ ಬಂಧವು. ಬಂಧ ಮತ್ತು ಆಸ್ರವಗಳಿಗೆ ಇಷ್ಟೇ ಭೇದವಿರುವುದು. ಸರಿಯೆಂಬ, ಬಿಸಿಯೆಂಬ ಈ ಎರಡು ಗುಣಗಳು ಆ ಸಣ್ಣ ಧೂಳಿಗೆ ಉಂಟಾದ ಧೂಳು, ಸರಿಯಂತೆ ಮಮಕಾರವೂ ಬಿಸಿಯಂತೆ ಕೋಪವೂ ಬೆರೆತು ಆತ್ಮನಲ್ಲಿ ಬಂಧವಾಗುವುದು. ಬೆಂಕಿಯಿಂದ ಕಾಸಿದ ಲೋಹವು ಯಾವ ರೀತಿಯಲ್ಲಿ ನೀರನ್ನು ಹೀರುವುದೋ, ಅದೇ ರೀತಿಯಲ್ಲಿ ಭಾವಕರ್ಮಾಗ್ನಿಯು, ತಾಗಿ ಜೀವದ ಸರ್ವಾಂಗವನ್ನೂ ತುಂಬಿ ಕರ್ಮವನ್ನು ಹೀರುವುದು. ತೃಪ್ತಿಗೆಂದು ಉಂಡ ಅನ್ನವು ಉದರಾಗ್ನಿಯಿಂದ ಸಪ್ತಧಾತುಗಳಾಗುವುದು. ಅದರಂತೆ ಉಜ್ವಲವಾದ ಪುದ್ಗಲವು ಒಳಗೆ ಹೋಗಿ ಭಾವಕರ್ಮವನ್ನು ತಾಗಿದಾಗ ಅದು ತಪ್ತವಾದ ಅಷ್ಟ ಕರ್ಮಗಳಾಗಿ ಪರಿಣಮಿಸುವುದು. ಚೀಲವನ್ನು ಕಟ್ಟಿರುವಾಗಲೇ ಈ ಕರ್ಮಗಳು, ಫಲಗಳನ್ನು ಕೊಡುತ್ತವೆ. ಕಾಲ ಕಳೆದು ಬಿಟ್ಟು ಹೋಗುವಾಗ ಜೀವನಿಗೆ ಸುಖದುಃಖಗಳನ್ನು ಅಂಟಿಸಿ, ತಾವು ಜಾರಿ ಹೋಗುತ್ತವೆ.

ಸಿಹಿಮೆಕ್ಕೆ ಜೋಳವಾಗಲೀ, ಕಹಿಮೆಕ್ಕೆ ಜೋಳವಾಗಲೀ ಬಿತ್ತಿದಾಗಲೇ ಫಲಕೊಡುವುದೆ? ಅದರಂತೆ ಪುಣ್ಯಪಾಪಗಳು ಸುಖದುಃಖಗಳನ್ನೂ ಮೆಲ್ಲನೆ ಸಂಗ್ರಹಿಸಿ ಕೊಡುತ್ತವೆ. ಸುಖಕ್ಕೆ ಉಬ್ಬಿಕೊಂಡು ದುಃಖಕ್ಕೆ ಮರುಗಿದರೆ, ಕೂಡಲೇ ಹೆಚ್ಚಿನ

ಕರ್ಮಗಳು ಕಟ್ಟಿಕೊಳ್ಳುತ್ತವೆ. ಈ ಸುಖದುಃಖಗಳಿಗೆ ಅತ್ತಿತ್ತ ಅಲುಗಾಡದೆ, ಧ್ಯಾನಾಭಿಮುಖದಲ್ಲಿದ್ದರೆ ಯಾವ ಬಂಧಗಳೂ ಅಂಟಿಕೊಳ್ಳುವುದಿಲ್ಲ. ಹಳೆಯ ಕರ್ಮವು ಸೋರಿಹೋಗುವಾಗ, ಹೊಸ ಕರ್ಮವು ಒಳಗೆ ಬರುವುದು. ಹೀಗೆ ಆತ್ಮನು ಹಳತಾದುದನ್ನು ಬಿಡುತ್ತ ಹೊಸತಾದುದನ್ನು ಹಿಡಿಯುತ್ತ ಕರ್ಮದಲ್ಲಿ ಮುಳುಗಿರುವನು.

ಒಂದು ಮಡುವಿಗೆ ಮೇಲಿನಿಂದ ನೀರು ಇಳಿದು ಬರುವುದು. ಇನ್ನೊಂದು ಕಡೆಯಿಂದ ಕೆಳಭಾಗಕ್ಕೆ ಹರಿದು ಹೋಗುವುದು. ಮಡುವಿನ ನೀರು ಮಾತ್ರ ಕುಂದದೇ ಇರುವುದು. ಇದೇ ರೀತಿಯಲ್ಲಿ ಜೀವನಿಗೆ ಕರ್ಮವು ಬಂದು ಹೋಗುತ್ತಿರುವುದು. ಹೊಸ ಕರ್ಮವು ಮೊದಲೇ ಇದ್ದ ಕರ್ಮದಲ್ಲಿ ಬಂಧಿಸಿರುವುದು. ಆ ದ್ರವ್ಯಕರ್ಮವು ಒಸರುತ್ತಿರುವ ಭಾವಕರ್ಮದಲ್ಲಿ ಗಂಟಾಗಿರುವುದು. ಈ ರೀತಿಯಲ್ಲಿ ಅದು ಜೀವನಕ್ಕೆ ಬೆಸಿಗೆ ಹಾಕಿದಂತೆ ಇರುತ್ತದೆ. ನವಕರ್ಮವು ಪೂರ್ವ (ಮೊದಲಿನ) ಕರ್ಮಕ್ಕೆ ಬಂಧವಾಗುವುದು. ಪೂರ್ವಕರ್ಮವು ಭಾವಕರ್ಮಕ್ಕೆ ಬಂಧವಾಗುವುದು. ತಿಳಿದ ಭಾವಕರ್ಮಗಳೇ ಜೀವಕ್ಕೆ ಬಂಧಗಳು. ಹೀಗೆ ಕರ್ಮಗಳು ಮೂರು ರೀತಿಯಲ್ಲಿರುತ್ತವೆ. ಸ್ಥಿತಿಯ ಅನುಭಾಗವೂ ಕೂಡಿ, ಕರ್ಮಗಳಲ್ಲಿ ನಾಲ್ಕು ರೀತಿಯಾಗುತ್ತದೆ. ಇನ್ನು ಇದಕ್ಕಿಂತ ಹೆಚ್ಚು ವಿವರವೇಕೆ? ಇಷ್ಟೇ ಸಾಕು. ಇಂದು ಬಂಧ ತತ್ವಗಳೆಂದು ತಿಳಿದಿರು. ಅತುಳ ಸಂವರೆಯ ವಿಚಾರವನ್ನು ಇನ್ನು ಮುಂದೆ ಹೇಳುವೆವು.

ಬರುತ್ತಿರುವ ಕರ್ಮದ ಮೂರು ದಾರಿಗಳನ್ನು ಮೂರು ರೀತಿಯ ಗುಪ್ತಿಗಳಿಂದ ಕಟ್ಟಿ, ತಿರುಗಿ ತನ್ನ ಆತ್ಮನನ್ನು ತಾನು ನೋಡುವುದಕ್ಕೆ ಸಂವರೆಯೆಂಬ ಹೆಸರು. ಮೌನದಿಂದ ನಾಲಗೆಯ ಆಟವನ್ನು ನಿಲ್ಲಿಸಿಬಿಟ್ಟು, ಮೈಯ್ಯ ಆಟವೂ ಏನಿಲ್ಲವೆನ್ನುವಂತೆ ಕಣ್ಣು ಮುಚ್ಚಿಕೊಂಡು, ತನ್ನ ಮನಸ್ಸನ್ನು ಹಂಸನಲ್ಲಿ ಅಡಗಿಸುವುದೇ ಸಂವರೆಯ ಮೂರು ಗುಪ್ತಿಗಳು. ತೂತುಗಳನ್ನು ಮುಚ್ಚಿದರೆ ಹಡಗಿನೊಳಗೆ ಸಮುದ್ರದ ನೀರು ಹೋಗದಿರುವಂತೆ, ಉದ್ರೇಕದ ಯೋಗಗಳನ್ನು ಈ ಗುಪ್ತಿಗಳಿಂದ್ದ ಮುದ್ರಿಸಿಬಿಟ್ಟರೆ, ಕರ್ಮವು ಬರುವುದೆ? ಇಲ್ಲ. ಎಲ್ಲರೊಳಗೂ ಇರುವ ಗುಪ್ತಿಯು ಚಿತ್ತಗುಪ್ತಿಯಾಗಿದೆ. ಆ ಚಿತ್ತಗುಪ್ತಿಯು ಎಲ್ಲ ವ್ಯಾಪ್ತಿಗಳನ್ನೂ ಬಿಟ್ಟು, ತನ್ನ ಆತ್ಮನಲ್ಲಿಯೇ ಮನಸ್ಸನ್ನು ಲುಪ್ತಗೊಳಿಸಿದವನಿಗೆ ಮಾತ್ರ ಸಾಧ್ಯವಾಗುವುದು. ಬಂಧ ಮತ್ತು ನಿರ್ಜರಗಳು ಜೀವರನ್ನು ಯಾವಾಗಲೂ ಬಂಧಿಸುತ್ತಲೇ ಇರುತ್ತದೆ. ಬಂಧಾರಿ ಸಂವರೆಯು ಮಾತ್ರ ದೂರುವುದಿಲ್ಲ. ಅದು ನಿಜವಾಗಿಯೂ ಆತ್ಮ ಸಂಪತ್ತಿಗೆ ಬಂಧುವಾಗಿದ. ಇನ್ನು ಬರುವ ಕರ್ಮಗಳನ್ನು ತಡೆದರೆ, ಮೊದಲು ಕಟ್ಟಿರುವ ಕರ್ಮ ಸೋರಿಹೋಗುವುದು. ತನ್ನ ಆತ್ಮಸಿದ್ಧಿ ತನಗೆ ಸಾಧ್ಯವಾಗುವುದು ಒಂದು ವಿಜ್ಞಾನವೆ! ಆದಾಯವನ್ನು ತಡೆದಾಗ, ಇದ್ದ ಸಂಪತ್ತಿನ ವೈಭವವೂ ಬರಿದಾಗುವಂತೆ ಬರುತ್ತಿರುವ ಕರ್ಮವನ್ನು ಆಯವರಿತು ತಡೆದರೆ ಪೂರ್ವಕರ್ಮವು ಮಾಯವಾಗುವುದು.

ಇದಿಷ್ಟು ಸಂವರೆಯ ವಿಚಾರ, ಎಂದೆಂದೂ ಬದ್ಧವಾಗಿರುವ ಕರ್ಮಗಳನ್ನು ಭೇದಮಾಡದೆ ತಾನಾಗಿ ಸುಡುವುದೇ ನಿರ್ಜರೆಯು. ಅದು ಯಾವ ರೀತಿಯಲ್ಲಿ ಆಗುತ್ತದೆಂಬುದನ್ನು ಹೇಳುತ್ತೇವೆ. ಸಾವಧಾನದಿಂದ ಕೇಳು. ಹೊಸದಾಗಿ ಬರುವ

ಕರ್ಮವನ್ನು ತಡೆಯುವುದೇ ಸಂವರೆಯು. ಕಿಸುರದಿರುವ ಹಳೆಯ ಕರ್ಮಗಳು ಕುಸಿದು ಬೀಳುವಂತೆ ಮಾಡುವುದೇ ನಿರ್ಜರೆಯು. ಈ ಎರಡು ತತ್ವಗಳಾದ ಸಂವರೆಗೂ ನಿರ್ಜರೆಗೂ ಇರುವ ಭೇದಗಳು ಇಷ್ಟೆ. ಸ್ನೇಹವು ಪರಮಾಣು ಮಾತ್ರವಾದರೂ ಕೋಪದೊಂದಿಗೆ ಬೆರೆಯದೆ ಏಕಾಕಿಯಾಗಿ ಪರಮ ಹಂಸವನ್ನು ನೋಡುತ್ತಿದ್ದರೆ ಕರ್ಮವು ನಿರ್ಜರಿಸಿ ಹೋಗುವುದು ಗಹನವಲ್ಲ. ದೇಹವನ್ನು ಉಪವಾಸ ಮೊದಲಾದ ದಂಡನೆಗೆ ಒಳಪಡಿಸಿ ಉಪಾಶಂತಿ ಧೈರ್ಯವನ್ನು ಧರಿಸಿ, ದೇಹದೊಳಗಿರುವ ಶುದ್ಧನಾದ ಆತ್ಮನನ್ನು ಕಂಡರೆ, ಕರ್ಮಗಳೆಲ್ಲವೂ ಕ್ಷಯಿಸಿ ಹೋಗುತ್ತವೆ. ಇದೇ ನಿರ್ಜರೆ. ನಿರ್ಜರೆಯಲ್ಲಿ ಪಾಕ ನಿರ್ಜರೆ ಮತ್ತು ಕೃತಪಾಕ ನಿರ್ಜರೆಯೆಂದು ಎರಡು ವಿಧಗಳಾಗಿವೆ. ಪಾಕ ನಿರ್ಜರೆಯು ಎಲ್ಲರಲ್ಲಿಯೂ ಇರುವುದು. ಕೃತಪಾಕ ನಿರ್ಜರೆಯು ಮುನಿಗಳಲ್ಲಿ ಮಾತ್ರ ಇರುವುದು. ತನ್ನಿಂದ ತಾನೇ ಉಂಟಾಗಿ, ನಿತ್ಯವೂ ಸೋರಿಹೋಗುವಂತೆ ಮಾಡುವ ವರ್ತನೆಯೇ ಪಾಕ ನಿರ್ಜರೆಯು. ದೇಹವನ್ನು ದಂಡಿಸುವುದರಿಂದ ಕರ್ಮವು ಹನಿಹನಿಯಾಗಿ ಹೋಗುವುದು. ಇದೇ ಕೃತಪಾಕ ನಿರ್ಜರೆಯು. ಒಂದು ತಾನೇ ಹಣ್ಣಾಗಿ ಸೋರಿಹೋಗುವುದಾದರೆ ಇನ್ನೊಂದು ಒತ್ತಿ ಹಣ್ಣು ಮಾಡಿ ಸೋರಿಹೋಗುವಂತೆ ಮಾಡುವುದು. ಇದರಿಂದಾಗಿ ಕರ್ಮದ ಬಣ್ಣವು ಎರಡು ರೀತಿಯಲ್ಲಿ ಕೆಟ್ಟು ಹೋಗಿ, ಕರ್ಮಗಳೆಂಬ ಮಣ್ಣು ಕರಗಿ ಸೋರುವುದು. ಎಡೆಬಿಡದೆ ಸಂವರೆಯೊಡನೆ ನಡೆದ ನಿರ್ಜರೆಯು ಮೋಕ್ಷದೆಡೆಗೆ ಕೊಂಡೊಯ್ಯುವುದು. ಸಂವರೆಯನ್ನು ಮುಟ್ಟದೆ ಮಾಡಿದ ನಿರ್ಜರೆಯು ಭವವೆಂಬ ಕಡಲಿನಲ್ಲಿ ಮುಳುಗಿಸಿ, ಕಷ್ಟ ಕೊಡುವುದು.

ಯೋಗಿಯಾದವನು ಯಾವಾಗಲೂ ಧ್ಯಾನದಲ್ಲಿದ್ದುಕೊಂಡು ಆತ್ಮನನ್ನು ನೋಡುತ್ತಿರಬೇಕು. ಧ್ಯಾನವು ಕೂಡದಿರುವ ಸಮಯದಲ್ಲಿ ಕೂಡ, ತಾನು ಮೊದಲು ಕಂಡುದನ್ನೇ ನೆನೆಯುತ್ತ ಮೌನವಾಗಿರಬೇಕು. ಧ್ಯಾನವಿರುವಷ್ಟು ಕಾಲ ಮಾತ್ರ ನಿರ್ಜರಿಸಿ. ಉಳಿದ ಕಾಲದಲ್ಲಿ ಧ್ಯಾನಶಾಸ್ತ್ರವನ್ನು ಬಿಟ್ಟು ಬೇರೊಂದನ್ನು ನೆನಪು ಮಾಡಿದರೆ ಅದು ಆನೆಯ ಸ್ನಾನದಂತೆ ಆಗುವುದು. ಒಂದು ವೇಳೆ ಕಾಯವಚನಗಳು ಚಂಚಲವಾದರೂ ನೆನಪು ಮಾತ್ರ ಆತ್ಮನಲ್ಲೇ ಇರಬೇಕು. ನೆನಪು ಆತ್ಮನಲ್ಲಿರುವವರೆಗೆ ಯಾವ ರಾಗದೋಷಗಳೂ ಬರುವುದಿಲ್ಲ. ಇದೇ ಅನಘ ಸಂವರೆಯು. ಆತ್ಮನಿಗೆ ಒಂದು ದಿಕ್ಕಿನಿಂದ ಕರ್ಮವು ಬಂದರೆ, ಇನ್ನೊಂದು ದಿಕ್ಕಿನಿಂದ ಅದು ಜಾರಿ ಹೋಗುವುದು. ಹೀಗೆ ಬಂದ ಕರ್ಮವನ್ನು ಕಟ್ಟಿಕೊಳ್ಳುತ್ತ ಇದ್ದ ಕರ್ಮವನ್ನು ಬಿಟ್ಟುಬಿಡುತ್ತ ಆತ್ಮನು ಯಾವಾಗಲೂ ಕರ್ಮದಲ್ಲೇ ಇರುವನು. ಆದರೆ, ಆತ್ಮನು ಬರುವ ಕರ್ಮಗಳನ್ನು ತಡೆದು ಇದ್ದ ಕರ್ಮವನ್ನು ಮೆಟ್ಟಿ ತುಳಿದು ಸೊಪ್ಪಾಗಿ ಮಾಡಿದರೆ, ಆಗ ಅವನು ಮುಕ್ತಿಯಲ್ಲಿರುವನು. ಆ ದಾರಿಯ ನೆನಪಾಗದಿರುವುದರಿಂದಲೇ ಆತ್ಮನು ಸುತ್ತುತ್ತಿರುವುದು. ಬಳಸಿಕೊಂಡು ಬರುವ ಹಳ್ಳದ ನೀರನ್ನು ತಡೆದರೆ, ಅಲ್ಲಿ ಬಿದ್ದಿರುವ ಹೊಳೆಯುವ ವಸ್ತು ಕೈಗೆ ಸಿಗುವಾಗ ಸಂವರೆ ನಿರ್ಜರೆಗಳು ಒಟ್ಟುಗೂಡಿದಾಗ ಆತ್ಮಸಿದ್ಧಿಯಾಗುವುದು. ಕಿಲುಬು ಇರುವ ಕನ್ನಡಿಯನ್ನು ಬೆಳಗಿದರೆ, ಇದರಲ್ಲಿ ಹೊಳಪು

ತೋರುವಂತೆ ಧ್ಯಾನದಿಂದ ತುಂಬಿರುವ ಲೇಪವನ್ನು ಒತ್ತಿ ತೊಲಗಿಸಿದರೆ ಶುದ್ಧರಾಗುವರು.

''ನಿರ್ಜರೆಯೆಂದೆಂಬ ತತ್ವವೇ ಇದು. ಆತ್ಮನು ಪಡೆದಿರುವ ಎಂಟು ಕರ್ಮಗಳನ್ನು ನಿರ್ಜರೆ ಮಾಡಿ, ತಾನು ತನ್ನಂತೆ ನಿಲ್ಲುವುದೇ ನಿರ್ಜಿತಮೋಕ್ಷ. ಕರ್ಮದ ಪಿಂಡವು ಕಿರಿಕಿರಿದಾಗಿ ಜರಿದು ಹೋಗುವುದಕ್ಕೆ ನಿರ್ಜರೆಯೆಂದು ಹೆಸರು. ಉಪಾಯದಿಂದ ಕರ್ಮವೆಲ್ಲ ಹಾದುಹೋದುದನ್ನು ನೆರೆಮೋಕ್ಷವೆಂದು ನಿರ್ಣಯಿಸಬೇಕು. ಕೆಲವರಿಗೆ ಘಾತಿಕರ್ಮಗಳು ಮೊದಲು ಹರಿದು ಹೋಗಿ, ಅಘಾತಿಕರ್ಮಗಳು ಆಮೇಲೆ ನಾಶವಾಗುತ್ತವೆ. ಕೆಲವರು ಘಾತಿಯನ್ನೂ ಅಘಾತಿಯನ್ನೂ ಒಮ್ಮೆಗೇ ನಾಶಗೊಳಿಸಿ ಮುಕ್ತಿಯನ್ನು ಹೊಂದುವರು. ಕೆಲವರುಗಳ ದಾರವಂದ, ಕಿಕ್ಕಿರಿ, ಪೂರ್ಣಗಳೆಂಬ ನಾಲ್ಕು ಕಳೆಗಳನ್ನು ಮಾಡುವರು, ಕೆಲವರು ಸಮುದ್ಘಾತಗಳಾದ ಈ ನಾಲ್ಕನ್ನೂ ಮಾಡದೆ ಥಕ್ಕನೆ ಮುಕ್ತಿಯನ್ನು ಪಡೆಯುವರು. ಮೂರು ಶರೀರಗಳೆಂಬ ಸೆರೆಮನೆಗಳನ್ನು ಸುಟ್ಟು ಗುಣಗಳನ್ನು ಪಡೆಯುವರು. ಅದರಿಂದಾಗಿ ವಶವಾಗದಿರುವ ಅಮೃತಲೋಕವನ್ನು ಒಂದೇ ಕಾಲದಲ್ಲಿ ಶರೀರವಿಲ್ಲದ ಆತ್ಮನು ಹೊಂದುವನು. ಭೂಲೋಕದ ಮೇಲೆ ಏಳು ರಜ್ಜುವಿನಷ್ಟು ಉದ್ದವಾಗಿ ಸಿದ್ಧಲೋಕವಿರುವುದು. ಆತ್ಮನು ಅದನ್ನು ಲೀಲಾ ಮಾತ್ರವಾಗಿ ಏಕಕಾಲದಲ್ಲೇ ಸೇರುವನು. ಈ ಮೂರು ದೇಹಗಳು ಅಳಿದಾಗ ಆತ್ಮನು ಜಗತ್ತಿನ ಅಗ್ರಭಾಗಕ್ಕೆ ಆಯಾಸವಿಲ್ಲದೆಯೆ ಹಾರುವನು. ಆತ್ಮರು ಸಿದ್ಧಲೋಕದ ಮೇಲಿರುವ ವಾಯುವಲಯದಿಂದ ಮೇಲಕ್ಕೆ ಹೋಗದೆ ಆ ವಾಯುವಲಯದಲ್ಲೇ ನಿಲ್ಲುವರು. ಯಾಕೆಂದರೆ ಗಾಳಿಯ ಹೊರಗೆ ಧರ್ಮಾಸ್ತಿಕಾಯವು ಇರುವುದಿಲ್ಲ; ಅದರಿಂದಾಗಿ ಆ ಗಾಳಿಯಲ್ಲೇ ಇರುವರು. ಇಂದು ನಾಶವಿಲ್ಲದ ಸಂಪತ್ತಾಗಿರುವುದು. ಅದರಿಂದಾಗುವ ಆನಂದದಲ್ಲಿ ಯಾವ ರೀತಿಯ ಕೇಡೂ ಇರುವುದಿಲ್ಲ. ಅದು ಕೊನೆಯಿಲ್ಲದ ಸೊಬಗಿನ ಬದುಕು. ಏಳು ತತ್ವಾರ್ಥಗಳಲ್ಲಿ ಇದು ಕೊನೆಯ ತತ್ವಾರ್ಥವಾಗಿದೆ.

''ಈ ರೀತಿಯಲ್ಲಿ ಸಪ್ತ ತತ್ವಗಳನ್ನು ತಿಳಿಯುವುದು. ಇವುಗಳಿಗೆ ಪಾಪಪುಣ್ಯಗಳೆರಡು ಕೂಡಲು ರೂಪದ ಒಂಬತ್ತು ಪದಾರ್ಥಗಳಾಗುತ್ತವೆ. ಅವುಗಳ ಸ್ವರೂಪವನ್ನೀಗ ಕೇಳು, ಆಸ್ರವ ಮತ್ತು ಬಂಧವೆಂಬ ಎರಡು ತತ್ವಗಳಲ್ಲಿ ಅವು ಮಿಶ್ರವಾಗಿರುತ್ತವೆ. ಆಸ್ರವದಲ್ಲಿ ಪುಣ್ಯ ಪಾಪಗಳಿದ್ದರೆ, ಬಂಧದಲ್ಲಿ ಪಾಪಪುಣ್ಯಗಳಿರುತ್ತವೆ. ಗುರುವಿಗಾಗಿ, ಶಾಸ್ತ್ರಗಳಿಗಾಗಿ ಮಾಡುವ ಚಿಂತನೆ, ಪೂಜೆಗಾಗಿ ಸಂಚರಿಸುವ ಯೋಗಗಳೆಲ್ಲ ಪುಣ್ಯಗಳು. ಸುರೆ, ಜೂಜು, ಬೇಟೆ ಮುಂತಾದುವುಗಳಿಗಾಗಿ ಸಂಚರಿಸುವ ಯೋಗಗಳು ಪಾಪಗಳು. ತೀರ್ಥವಂದನೆ, ನೋಂಪು, ಜಪ, ದೇವತಾವಂದನೆ ಮುಂತಾದುವುಗಳು ಪುಣ್ಯಯೋಗಗಳು. ವ್ಯರ್ಥವಾದ ಉದ್ಯೋಗಕ್ಕೆ, ಜಾರಚೋರರ ಕಥೆಗಳಿಗೆ ಆಸೆಪಟ್ಟರೆ ಪಾಪಯೋಗಗಳು. ಪುಣ್ಯವರ್ತನೆ ಮಾಡುವ ಯೋಗಗಳೆಲ್ಲ ಪುಣ್ಯದ ಆಸ್ರವಗಳು. ಪುಣ್ಯವಲ್ಲದ ಕಾರ್ಯಗಳಿಗಾದ ಯೋಗಗಳೆಲ್ಲ ನಿರ್ಗಣ್ಯ. ಪಾಪ ಆಸ್ರವ. ರಾಗ, ದ್ವೇಷ, ಮೋಹ ಎಂದು ಮುಂತಾದವುಗಳ ಸಂಯೋಗದಿಂದ ಎಲ್ಲ ಬಂಧಗಳೂ ಆಗುತ್ತವೆ. ರಾಗ, ಮೋಹಗಳಿಗೆ ಪುಣ್ಯ ಪಾಪಗಳೆರಡೂ ಇವೆ. ಆದರೆ ಕೋಪಕ್ಕೆ ಮಾತ್ರ ಪಾಪವೊಂದೇ

ಇರುವುದು. ದೇವತಪಸ್ಸು, ಶಾಸ್ತ್ರ, ಭಕ್ತಿ ಸದ್ಗುಣ, ವಿನಯ ಮುಂತಾದುವುಗಳೆಲ್ಲ ಪುಣ್ಯ ಬಂಧಗಳು. ಹೆಣ್ಣು ಧನಕನಕಗಳ ಮೇಲಿನ ಸ್ನೇಹಭಾವಗಳೆಲ್ಲ ಪಾಪ ಬಂಧಗಳು. ವ್ರತ, ದಾನ, ಜಪತಪಗಳು, ಸಂಘದಲ್ಲಿ ಮಾಡುವ ಅತಿ ಮಮತೆಗಳು ಪುಣ್ಯ ಬಂಧಗಳಾಗಿವೆ. ತನಗೆ ತಾನಲ್ಲದೆ ಬೇರೊಂದು ವಸ್ತುವನ್ನು ತನಗೆಂದು ಹಿಡಿಯುವುದೂ ಮೋಹ. ಮುನಿ, ದೇವ, ಶಾಸ್ತ್ರಗಳನ್ನು ನನ್ನವುಗಳೆಂದು ಹೇಳಿದರೆ ಪುಣ್ಯ. ದೇಹವು ನನ್ನದೆಂದರೆ ಪಾಪ. ಪ್ರತಿಮೆ, ಪುಸ್ತಕ ಮತ್ತು ಜಪಸರಗಳನ್ನು ನನ್ನದೆಂದು ಹೇಳಿದರೆ ಮತಮೋಹವೆಂಬ ಪುಣ್ಯಬಂಧವಾಗುವುದು. ಭೂಮಿ, ಬಂಗಾರ ಮತ್ತು ಹೆಣ್ಣುಗಳನ್ನು ನನ್ನದೆಂಬುದೇ ಅತಿಮೋಹವೆಂಬ ಪಾಪಬಂಧವಾಗುವುದು. ಮೋಹಕ್ಕೆ ಒಮ್ಮೊಮ್ಮೆ ಮಿಥ್ಯತ್ವವೆಂಬ ಅರ್ಥ ಉಂಟು. ಒಮ್ಮೊಮ್ಮೆ ಮೋಹವೇ ಅಜ್ಞಾನವೆಂದಾಗುವುದು. ಆ ರೀತಿಯು ಆಗಮ ಭಾಷೆಯ ಆಧ್ಯಾತ್ಮದಲ್ಲಿರುವ ರೀತಿಗಳನ್ನೆಲ್ಲ ತಿಳಿದಿರಬೇಕು. ಈ ರೀತಿಯಲ್ಲಿ ಸ್ನೇಹ ಮೋಹಗಳು ಪುಣ್ಯ ಪಾಪಗಳಿಗೆ ಜನ್ಮಕೊಡುವ ದೇಹಗಳಾಗಿವೆ. ಕೋಪವೆಂಬುದು ಕಾವೇರಿ ಸುಡುವುದು. ಅದರಲ್ಲಿ ಪಾಪವು ರಾಹುವಿನಂತೆ ಇರುವುದು. ಧರ್ಮಕ್ಕಾಗಲೀ ಭೋಗಕ್ಕಾಗಲೀ, ದುರ್ಮುಖರಾಗಿ ಕೋಪಿಸಿದರೆ, ಧರ್ಮ–ಭೋಗಗಳೇ ವಿಭೂತಿಗಳಾಗಿ ಪಾಪಕರ್ಮವೇ ಬಂದು ಕಟ್ಟಿಕೊಳ್ಳುವುದು; ಪಾಪವು, ದುರ್ಗತಿಯಾದ ತಿರಿಯಂಚಗತಿಗೆ ಎಳೆಯುವುದು. ಆದರೆ ಪುಣ್ಯವು ಸ್ವರ್ಗಕ್ಕೆ ಎತ್ತುವುದು. ಈ ಎರಡೂ ವರ್ಗಗಳು ಒಂದುಗೂಡಿ ಆತ್ಮನನ್ನು ಮಾನವನೆಂಬ ಮಾರ್ಗಕ್ಕೆ ತರುತ್ತವೆ.

''ಪರಿಶುದ್ಧನಾದ ಆತ್ಮನಿಗೆ ಪಾಪಪುಣ್ಯಗಳು, ಲೇಪವಲ್ಲದೆ ಅವನ ರೂಪವಾಗಿಲ್ಲ. ಆ ಪೂರ್ವಕರ್ಮಗಳು ಎಂಟು ರೀತಿಯಾಗಿ ಆತ್ಮನಿಗೆ ನಾನಾ ರೀತಿಯನ್ನುಂಟು ಮಾಡುತ್ತವೆ. ಒಂದು ಸಲ ಸೊಬಗನ್ನು ಉಂಟು ಮಾಡಿದರೆ ಮತ್ತೊಮ್ಮೆ ವಿಚಾರವನ್ನುಂಟು ಮಾಡುವುದು. ಒಮ್ಮೆ ಹೆಬಗನಾಗಿ ಮಾಡಿದರೆ ಇನ್ನೊಮ್ಮೆ ಜಾಣನಾಗಿ ಮಾಡುವುದು. ಇವುಗಳು ಪ್ರಬಲನಾದ ಆತ್ಮನನ್ನು ವಿಬುಧ, ನಾರಕ, ನರ, ತಿರಿಯಂಚನಾಗಿ ಮಾಡಿ ಕಾಡುತ್ತವೆ. ಅದಕ್ಕೆ ಅನುಸಾರವಾಗಿ ಆತ್ಮನು ಕ್ರೂರನಾಗಿ, ಶಾಂತನಾಗಿ, ವೀರನಾಗಿ, ಹೇಡಿಯಾಗಿ, ಹೆಣ್ಣಾಗಿ, ಗಂಡಾಗಿ ಕರ್ಮಗಳು ಉಂಟುಮಾಡುವ ಬಹುಚಾರಿಗಳಲ್ಲಿ ತನ್ಮಯನಾಗುವನು. ಆತ್ಮನು ಕ್ಷೀಣಕರ್ಮಗಳು ಮಾಡುವ ಮಾಟಕ್ಕೊಳಗಾಗಿ ನಿತ್ರಾಣಿಯಾಗುವನು. ಅಶುಭ ಕರ್ಮಕ್ಕೂ ಶುಭಕರ್ಮಕ್ಕೂ ವಶರಾಗಿ ಎಲ್ಲರೂ ಭವಗಳನ್ನು ಪಡೆಯುವರು. ಅಶುಭಕರ್ಮವನ್ನೂ ಸುಟ್ಟಾಗ ಮುಕ್ತಿಯಲ್ಲಿ ಕುಶಲರಾಗಿರುವರು. ಸುಕೃತ–ದುಷ್ಕೃತಗಳು ಎರಡು ಪದಾರ್ಥಗಳಾದ ಅಕೃತೋಪಕಾರಿಗಳು. ಅವುಗಳ ಪ್ರಕೃತಿಯನ್ನು ಸರಿಯಾಗಿ ತಿಳಿದುಕೊಂಡು ಯಾರು ಅವುಗಳನ್ನು ಬಿಟ್ಟು, ಬಿಡುವರೋ ಅವರಿಗೆ ವಿಕೃತಿಗಳೆಲ್ಲವೂ ನಾಶವಾಗಿ ಮುಕ್ತಿ ದೊರೆಯುವುದು. ಬಂಗಾರದ ಸಂಕಲೆಯಾಗಲೀ ಇತರ ಲೋಹದ ಸಂಕಲೆಯಾಗಲೀ ಕಾಲಿಗೊಂದು ತೊಡಕಾಗಿರುವಂತೆ, ಬೆನ್ನಟ್ಟಿಕೊಂಡಿರುವ ಪುಣ್ಯಪಾಪಗಳೆರಡೂ ಆತ್ಮನಿಗೆ ಕಷ್ಟ ಕೊಡುತ್ತವೆ. ಅವುಗಳು ಸುಖವಿಲ್ಲ

"ಜೀವ ಪುದ್ಗಲಗಳ ಸಂಸರ್ಗಭಾವದಲ್ಲಿ ಈ ಏಳು ತತ್ವಾರ್ಥಗಳು ಹುಟ್ಟಿದುವು. ಅವುಗಳೇ ಒಂಬತ್ತು ಪದಾರ್ಥಗಳಾಗಿ ಆವರಿಸಿಕೊಳ್ಳುವುದು. ಸಪ್ತತತ್ವಾರ್ಥದ ಒಂಬತ್ತು ಪದಾರ್ಥಗಳ ವ್ಯಾಪ್ತಿಯು ಇಲ್ಲಿಗೆ ಮುಗಿಯಿತು. ಇವುಗಳ ವ್ಯಾಪ್ತಿಯಲ್ಲಿ ಹೇಯವೆಂಬುದೂ ಉಪಾದೇಯ ತೃಪ್ತಿಯೆಂಬುದೂ ಉಂಟು. ಅಜೀವ, ಪುಣ್ಯ ಪಾಪಸ್ರವ ಬಂಧುಗಳನ್ನು ಹೇಯವೆಂದು ವರ್ಜಿಸಬೇಕು. ನಿರ್ಜರೆ, ಸಂವರೆ, ಜೀವ ಮೋಕ್ಷಗಳನ್ನು ಉಪಾದೇಯಗಳೆಂದು ಸಂಪಾದಿಸಬೇಕು. ಜೀವಾಸ್ತಿಕಾಯ, ಜೀವ, ಸುವಸ್ತು ಮತ್ತು ಜೀವತತ್ವದಲ್ಲಿರುವ ಎಲ್ಲ ಪದಾರ್ಥಗಳೂ ಜೀವನಿಗೆ ಉಪಾದೇಯಗಳಾಗಿವೆ. ಉಳಿದವುಗಳೆಲ್ಲ ಹೇಯಗಳಾಗಿವೆ. ಶಾಸ್ತ್ರಗಳಿಂದ ಇಷ್ಟೇ ಫಲಗಳು.

"ಆದ್ದರಿಂದ ನೆಲವನ್ನು ಅಗೆದು ರಾಶಿಮಾಡಿ, ಆ ಮಣ್ಣನ್ನು ಶೋಧಿಸಿ, ಚಿನ್ನವನ್ನು ಮಾತ್ರ ಹಿಡಿಯುವಂತೆ, ಛಲಗಾರನು ಆರು ವಸ್ತುಗಳನ್ನು ಸರಿಯಾಗಿ ತಿಳಿದುಕೊಂಡು ಆತ್ಮಕಲೆಯನ್ನು ಮಾತ್ರ ಹಿಡಿಯಬೇಕು. ಅದೇ ಈಗಿನ ಕಾರ್ಯ! ಆಸ್ರವ ಬಂಧಗಳಿಂದ ಆತ್ಮರಿಗೆ ಸಂಸಾರ ಪರಿಶ್ರಮವುಂಟಾಗುವುದು, ಆಸ್ರವ ಬಂಧಗಳನ್ನು ಬಿಟ್ಟು ಸಂವರೆ, ನಿರ್ಜರೆಗಳನ್ನು ಆಶ್ರಯಿಸಿದರೆ ಮುಕ್ತಿ ದೊರೆಯುವುದು. ಕ್ಷಮೆಯೇ ಕೋಪಕ್ಕೆ ವೈರಿ. ನಿಸ್ಸಂಗಭಾವನೆಯೇ ಭ್ರಮೆಯಿಂದ ಉಂಟಾದ ಮೋಹಕ್ಕೆ ವೈರಿ. ಹಾಗೆಯೇ ಪರಮ ವಿರಕ್ತಿಯು ಮಮಕಾರಕ್ಕೆ ವೈರಿಯಾಗಿದೆ. ಮೊದಲು, ಒಂದು ಸಲ ಪಾಪಕೃತ್ಯವನ್ನು ಬಿಟ್ಟು, ಪುಣ್ಯಕೃತ್ಯದಲ್ಲಿ ನಿಲ್ಲಬೇಕು. ಹಾಗೆ ನಿಂತ ಮೇಲೆ ಅದನ್ನು ಸುಧ್ಯಾನದಲ್ಲಿ ನಿಂತು – ಬಿಟ್ಟು ಮಾಡುತ್ತಿರಬೇಕು. ಹಾಗೆ ಮಾಡುವುದರಿಂದ ಮುಕ್ತಿ ದೊರೆಯುತ್ತದೆ. ಈ ಆರು ವಸ್ತುವೇ ಕಾಯು ತತ್ವಾರ್ಥ ಪದಾರ್ಥವು. ಇಲ್ಲಿಗೆ ಅವುಗಳ ಲಕ್ಷಣಗಳೆಲ್ಲ ಮುಗಿದುದು. ಇನ್ನು ಮುಂದೆ ಆತ್ಮಸಿದ್ಧಿಯನ್ನು ತೋರಿಸುವೆವು."

ಎಂದು ಆದಿಜಿನನು ಮೋಕ್ಷಗತಿಗೆ ತ್ವರಿತರಾಗಿರುವ ಅರ್ಕಕೀರ್ತಿ ರಾಜನೇ ಮೊದಲಾದವರಿಗೆ ತಿಳಿಸಿ, ತಾವು ತತ್ವದಲ್ಲಿ ಆತ್ಮಸಿದ್ಧಿಯಲ್ಲಿ ತೊಡಗಿದರು.

## ೧೬

# ಮೋಕ್ಷ ಮಾರ್ಗ

ಆದಿನಾಥನು, ಆ ಕುಮಾರರಿಗೆ ಮೊದಲು ವಿಶ್ವ, ವಸ್ತು ಪ್ರಪಂಚವನ್ನೂ ಬಳಿಕ ಆತ್ಮಸಿದ್ಧಿಯ ಸಾಧನವನ್ನೂ ತಿಳಿಸಿದನು. ತಿಳಿವು ಜಗಕ್ಕೆ ಸಾಮಾನ್ಯವಲ್ಲ!

“ಎಲೆ ಭವ್ಯವೇ, ಪರಮಾತ್ಮ ಸಿದ್ಧಿಯ ವಿಚಾರವನ್ನು ಕೇಳು. ನಾವು ಈಗಾಗಲೇ ಹೇಳಿದ ಏಳು ತತ್ವಗಳನ್ನು ನಂಬಿ, ಅವುಗಳನ್ನು ಸರಳವಾಗಿ ತಿಳಿದು ಉತ್ತಮ ವ್ರತಗಳನ್ನು ಮಾಡಿ ನಡೆಯುವ ಭವ್ಯರಿಗೆ ಕ್ರಮವಾಗಿ ಪರಮಾತ್ಮಸಿದ್ಧಿಯು ಆಗುವುದು. ನಂಬುಗೆಗೆ, ತಿಳುವಳಿಕೆಗೆ, ನಡೆಗೆ, ರತ್ನತ್ರಯವೆಂಬುದು ಒಂದು ಹೋಲಿಕೆಯ ಹೆಸರು. ಸಮ್ಯಕ್‌ದರ್ಶನ, ಸಮ್ಯಕ್ ಜ್ಞಾನ, ಮತ್ತು ಸಮ್ಯಕ್ ಚಾರಿತ್ರ್ಯವೆಂಬ ಈ ತತ್ವವನ್ನು ನಂಬಿಕೊಂಡು ವ್ರತದಲ್ಲಿ ಆಚರಿಸಿರಿ. ಆಗ ಆತ್ಮಸಿದ್ಧಿಯ ಹೊಲಬು ತೋರುವುದು. ಆ ರತ್ನಗಳಿಗೂ ಭೇದ, ಅಭೇದ ವಿಚಾರವೆಂದು ಎರಡು ರೀತಿಗಳುಂಟು. ಅವುಗಳಲ್ಲಿ ಕಾರಣವೊಂದು; ಕಾರ್ಯವೊಂದು. ಹೀಗೆ ಎರಡು ರೀತಿಯ ವ್ಯವಹಾರ ನಿಶ್ಚಯಗಳು ಇವೆ. ಒಂಬತ್ತು, ಏಳು, ಐದು, ಆರು ವಿಧಗಳಾಗಿ ಬೇರೆ ಬೇರೆ ವಸ್ತುಗಳನ್ನು ತಿಳಿದು, ಚೆನ್ನಾಗಿ ನಂಬಿ ವ್ರತವನ್ನು ಆಚರಿಸುತ್ತಿದ್ದರೆ ಅದನ್ನು ಭೇದ ರತ್ನತ್ರಯವೆಂದು ವ್ಯವಹಾರ ಮಾಡುತ್ತಾರೆ. ಬೇರೆ ವಸ್ತುಗಳ ಚಿಂತನೆಯನ್ನು ಬಿಟ್ಟು, ತನ್ನ ಆತ್ಮನ ರೀತಿಯನ್ನು ತಿಳಿದು, ನಂಬಿಕೆಯಿಂದ ಮನಸ್ಸನ್ನು ಆತ್ಮನಲ್ಲಿ ಬೆರೆಸಿದರೆ, ಆಗ ಅದನ್ನು ಅಭೇದ ರತ್ನತ್ರಯವೆನ್ನುವರು. ತನ್ನಿಂದ ಬೇರೆಯಾಗಿರುವ ವಸ್ತುವನ್ನು ತಟ್ಟಿದರೆ ಭೇದ ರತ್ನತ್ರಯವಾಯಿತು. ಭೇದವಿಲ್ಲದೆ ತನ್ನನ್ನು ತಾನು ತಟ್ಟುತ್ತಿದ್ದರೆ, ಅಭೇದ ರತ್ನತ್ರಯವಲ್ಲವೆ? ಮೊದಲು ಒಂದು ಸಲ ವ್ಯವಹಾರ ಮಾರ್ಗದಲ್ಲಿ ಆಚರಿಸುವುದು. ಆಚಾರದ ವ್ಯವಹಾರದಲ್ಲಿರುತ್ತ, ಒಂದೊಂದೇ ಹೆಜ್ಜೆ ಮುಂದೆ ಹೋಗುತ್ತ ತನ್ನ ಗುರಿಯಾದ ನಿಶ್ಚಯಾರ್ಥವನ್ನು ಸಾಧಿಸಿ, ನಿತ್ಯವೂ ಅದರಲ್ಲೇ ತಲ್ಲೀನವಾಗಿದ್ದರೆ ಅದು ಸಿದ್ಧಿಸುವುದು. ನಮ್ಮ ನಿತ್ಯ ವ್ಯವಹಾರದಿಂದ ಸಾಧಿಸಿದ ಮೇಲೆ ವಿಶುದ್ಧಿ–ನಿಶ್ಚಯದಿಂದ ಶ್ರೇಷ್ಠವಾದ ಆತ್ಮಸಿದ್ಧಿಯನ್ನು ಕ್ರಮವಾಗಿ ಸಾಧಿಸಬೇಕು.

“ಚಿತ್ತವೆಂಬುದು ಗಾಳಿಯಂತೆ ಚಂಚಲವಾಗಿದೆ. ಅದು ಕಂಡ ಕಂಡ ಕಡೆಗೆ ಚಲಿಸುತ್ತಿರುವುದು. ಅದನ್ನು ತಂದು, ತತ್ವಗಳಲ್ಲಿ ಒತ್ತಿ ತಿರುಗಿಸಿ ಮತ್ತೆ ತನ್ನೊಳಗೆ ಸ್ಥಿರವಾಗಿ ಇಟ್ಟುಕೊಳ್ಳಬೇಕು. ಅದನ್ನು ಹರಿಯಲು ಬಿಟ್ಟರೆ ಅದು ಹರಿದುಹೋಗುವುದು, ಬೇಡವೆಂದರೆ ಹರಿದುಹೋಗುವುದಿಲ್ಲ, ಅದು ಮನಸ್ಸಿಗೆ ಸಹಜವಾಗಿದೆ. ಹೀಗೆ ಹರಿಯುತ್ತಿರುವ ಚಿತ್ತವನ್ನು ತತ್ವಗಳಲ್ಲಿ ತಿರುಗಾಡಿಸಿ. ಆಮೇಲೆ ಅದನ್ನು ತನ್ನೊಳಗೇ ಸ್ಥಿರವಾಗಿಡಬೇಕು. ಚಪಲವಾಗಿದ್ದ ಚಿತ್ತವನ್ನು ಕಟ್ಟುವವರೆಗೆ ತಪಸ್ಸು ಮಾಡಿದರೂ

ಶಾಸ್ತ್ರಗಳನ್ನು ಓದಿದರೂ ಪ್ರಯೋಜನವಿಲ್ಲ. ಆದ್ದರಿಂದ ಯಾರು ಚಪಲವಾದ ಮನಸ್ಸನ್ನು ಕಟ್ಟಿ ತನ್ನೊಳಗಿಟ್ಟುಕೊಳ್ಳುತ್ತಾನೋ ಅವನೇ ತಪಸಿ, ಅವನೇ ಶಾಸ್ತ್ರಜ್ಞ. ಮನಸ್ಸಿನ ವಿಕಲ್ಪವು ಇಂದ್ರಿಯದ ಕಷಾಯದನ್ನುಂಟು ಮಾಡುವುದು; ಮತ್ತೆ ಮಾಯವಾಗುವಂತೆ ಮಾಡುವುದು. ಬಂಧಾಸ್ರವವುಂಟಾದಾಗ ದೇಹವೂ ಅಲುಗು ವುದು. ಆದ್ದರಿಂದ ಮನಸ್ಸೇ ಕರ್ಮಗಳಿಗೆ ಮನೆಯಾಗಿದೆ.

"ಮನಸ್ಸು ಆತ್ಮನಲ್ಲಿ ನಿಲ್ಲದೆ, ಒಂದೊಂದು ವಸ್ತುವನ್ನು ನೆನೆಯುವಾಗ ಹೊಸತಾಗಿ ಒಂದೊಂದು ಕರ್ಮವುಂಟಾಗುವುದು. ಆದರೆ ಮನಸ್ಸು ಆತ್ಮನಲ್ಲಿ ನೆಲೆಗೊಂಡು ನಿಂತರೆ, ಕೂಡಲೇ ಕರ್ಮವು ತನ್ನಷ್ಟಕ್ಕೆ ಜಾರಿಹೋಗುವುದು. ಕೆಟ್ಟ ಮನಸ್ಸು ಕಂಡ ಕಂಡ ಕಡೆಗೆ ಹರಿಯುವುದು. ಹರಿದು ಹೋದಾಗ ಕರ್ಮಗಳು ಉಂಟಾಗುತ್ತವೆ. ಸಂಸಾರದಲ್ಲಿ ಎಂಟು ಕರ್ಮಗಳು ಉಂಟಾಗುತ್ತವೆ. ಆದ್ದರಿಂದ ಕೆಟ್ಟ ಮನಸ್ಸನ್ನು ಗೆಲ್ಲಬೇಕು. ಅರಸನೇ ಕಟ್ಟಿದರೆ ಆಟವಿಲ್ಲವೆಂಬ ಮಾತಿನಂತೆ, ಸಂಚರಿಸುತ್ತಿರುವ ಮನಸ್ಸನ್ನು ಕಟ್ಟಿದರೆ ಎಂಟು ಕರ್ಮಗಳು ಬರುವುದೂ ಇಲ್ಲ; ಬಂದು ಬಾಧಿಸುವುದೂ ಇಲ್ಲ. ಆಗ ಎಂಟು ಕರ್ಮಗಳ ಸಂವರೆಯೂ ನಿರ್ಜರೆಯೂ ಆಗುವುದು.

"ಕೆಲವರು ಪ್ರಾಣಾಯಾಮಗಳಿಂದ ದಶವಾಯುಗಳ ಸಾಲನ್ನೇ ಜಯಿಸಿ, ಹುಲ್ಲೆಯಂತೆ ನೆಗೆಯುವ ಚಿತ್ತವನ್ನು ತಡೆದು, ತಮ್ಮ ಅಂತರಂಗದಲ್ಲೇ ಆತ್ಮನನ್ನು ಕಾಣುವರು. ಕೆಲವರು ಈ ದಶವಾಯುಗಳ ಅಭ್ಯಾಸವಿಲ್ಲದೇ ದೇಹದೊಳಗಿರುವ ಆತ್ಮನನ್ನು ತಮ್ಮ ಸ್ಥಿರವಾದ ಮನಸ್ಸಿನಿಂದ ಕಾಣುವರು. ಆದ್ದರಿಂದ ಮನಸ್ಸಿನ ಅನುಭವವು ಎರಡು ರೀತಿಯಾಗಿದೆ. ಮನಸ್ಸಿನಲ್ಲಿ ಮೃದು ಚಿತ್ತವೆಂದೂ, ಕಠಿಣ ಚಿತ್ತವೆಂದೂ ಎರಡು ರೀತಿಯಿದೆ. ಮೃದು ಚಿತ್ತಕ್ಕೆ ಪ್ರಾಣಾಯಾಮದ ಅಗತ್ಯವಿಲ್ಲ. ಆದರೆ ಕಠಿಣ ಚಿತ್ತವನ್ನು ಈ ವಾಯುಯೋಗದಿಂದ ಮೃದುಮಾಡಿ ಜಯಿಸಬೇಕು. ಬ್ರಹ್ಮಯೋಗದ ಮೂಲವೇ ಇದು. ನಾಭಿಯಲ್ಲಿರುವ ಸರ್ಪಸ್ಥಾನವನ್ನು ಮೆಟ್ಟಿ ವಾಯುವು ಬ್ರಹ್ಮರಂಧ್ರಕ್ಕೆ ಏರಿದರೆ, ಆಗ ತನ್ನಲ್ಲಿಯೇ ಪರಮ ಬ್ರಹ್ಮವು ತೋರುವುದು. ಆ ಬ್ರಹ್ಮಯೋಗದಲ್ಲಿ ನಾದಕಲೆ, ಬಿಂದುಕಲೆಗಳೆಂದು ಇವೆ. ಅವುಗಳನ್ನೆಲ್ಲ ಶಾಸ್ತ್ರದಲ್ಲಿ ನೋಡಿಕೊಳ್ಳಬಹುದು. ಅದು ಹಾಗಿರಲಿ. ಹೀಗೆ ಹಲವು ತಂತ್ರಗಳಿಂದ ಮನಸ್ಸನ್ನು ತಡೆದು ಆತ್ಮನನ್ನು ನಿಲ್ಲಿಸಿದರೆ ಆತ್ಮಸಿದ್ಧಿಯಾಗುವುದು.

"ಧ್ಯಾನದಿಂದಲೇ ಕರ್ಮವು ನಿರ್ಜರಿಸುವುದು. ನಾನಾ ಚಿಂತೆಗಳೆಲ್ಲವೂ ನಾಶವಾಗಿ ಮನಸ್ಸು ಆತ್ಮಸಂಧಾನದಲ್ಲಿರುವುದೇ ಧ್ಯಾನವು. ನಡೆ, ನುಡಿ ನೋಟಗಳನ್ನೂ ಶರೀರದ ಆಟಗಳನ್ನೂ ನಿಲ್ಲಿಸಿ ಬಿಟ್ಟು, ಎರಕದ ಗೊಂಬೆಯಂತೆ ಕುಳಿತುಕೊಂಡು, ಚಲಿಸುತ್ತಿರುವ ಮನಸ್ಸನ್ನು ಆತ್ಮನಲ್ಲೇ ಅಡಗುವಂತೆ ಮಾಡುವುದನ್ನೇ ಎಲ್ಲರೂ ಧ್ಯಾನವೆಂದು ಹೇಳುವರು. ಈ ಧ್ಯಾನದಲ್ಲಿ ಧರ್ಮಧ್ಯಾನ ಮತ್ತು ಶುಕ್ಲಧ್ಯಾನಗಳೆಂದು ಎರಡು ವಿಧವುಂಟು" ಎಂದು ಭಗವಾನ್ ಪುರುದೇವರು ಧರ್ಮಧ್ಯಾನವನ್ನೂ ಶುಕ್ಲಧ್ಯಾನವನ್ನೂ ಅರ್ಕಕೀರ್ತಿ ಮೊದಲಾದ ಅರಸರಿಗೆ ತಿಳಿಸಿದರು.

"ಧ್ಯಾನದಲ್ಲಿರುವಾಗ ಕಣ್ಣುಗಳನ್ನು ಮುಚ್ಚಿಕೊಂಡು ತನ್ನ ಒಳಗಿರುವ ಆತ್ಮನನ್ನು ನೋಡತೊಡಗಿದಾಗ, ನಸುಕಾಂತಿಯು ಕಂಡಂತೆ ಆಗುವುದು. ಮತ್ತೆ ಅದು ಮಾಯವಾಗುವುದು. ಒಂದು ರೀತಿಯ ಬುದ್ಧಿವಂತೆಯೋ ಎಂಬಂತೆ ಅದು ಒಂದಿಷ್ಟು ಸುಖವನ್ನುಂಟು ಮಾಡುವುದು. ಇದುವೇ ಧರ್ಮಧ್ಯಾನ. ಈ ಧರ್ಮಧ್ಯಾನದಲ್ಲಿರುವಾಗ, ಒಮ್ಮೆ ಮೈತುಂಬ ಪ್ರಕಾಶವಾಗಿ ಕಾಣುವುದು. ಮತ್ತೊಮ್ಮೆ ಮುಖದಲ್ಲಿ, ಎದೆಯಲ್ಲಿ ಪ್ರಭೆಯೊಂದು ತಾಗಿದಂತಾಗುವುದು. ಇವೇ ಪರಬ್ರಹ್ಮದ ಬೀಜದಂತಿರುವ ಧರ್ಮಧ್ಯಾನ. ದಿನದಿಂದ ದಿನಕ್ಕೆ ಆ ಪ್ರಭೆಯು ಹೆಚ್ಚುವುದು. ಅದು ಹೆಚ್ಚಾದಂತೆ, ಕರ್ಮರಜಸ್ಸು ಮೆಲ್ಲನೆ ಜಾರುವುದು. ಆಗ ಸುಜ್ಞಾನವು ಮನಸ್ಸಿನಲ್ಲಿ ಗುಡಿ ಕಟ್ಟುವುದರಿಂದ ಒಂದು ರೀತಿಯ ಸುಖವು ಎದೆಯನ್ನು ತಟ್ಟುವುದು. ಆ ಸುಖವನ್ನು ಹೇಳಲು ಬರುವುದಿಲ್ಲ, ಆದರೆ ಆ ಸುಖವನ್ನು ತಾನು ಅನುಭವಿಸಿ, ತೃಪ್ತಿ ಹೊಂದಬಹುದು. ಇಂತಹ ಧರ್ಮಧ್ಯಾನದಲ್ಲಿರುವವನಿಗೆ, ನಡೆಯುತ್ತಿರುವ ನುಡಿಯುತ್ತಿರುವ ಈ ಜಗತ್ತಿನ ಆಟಗಳೆಲ್ಲವೂ ಜಡವಾಗಿ ತೋರುವುದು. ಅವನಿಗೆ ಈ ಲೋಕವು ಹುಚ್ಚೆಂದು ತೋರುವುದು. ಅವನೂ ಲೋಕಕ್ಕೆ ಹುಚ್ಚನಂತೆ ತೋರುವನು. ಈ ಆತ್ಮಯೋಗಿಯು ಒಮ್ಮೊಮ್ಮೆ ಮಾತನಾಡುವುದೂ ಉಂಟು. ಮಾತನಾಡಿದ ಮೇಲೆ ಮೂಕನಾಗಿ ಮೌನ ತಾಳುವನು. ಅವನು ಏಕಾಂತವನ್ನು ಬಯಸುವನು. ಸಭೆ–ಗೋಷ್ಠಿಗಳು ಅವನಿಗೆ ಬೇಕಾಗಿರುವುದಿಲ್ಲ, ತಾನು ಏಕಾಂಗಿಯಾಗಿಯೇ ಇರುವನು. ಒಮ್ಮೆ ಅವನು ಲೋಕದ ತುದಿಗೆ ಹೋಗುವನು. ಮತ್ತೊಮ್ಮೆ ತನ್ನ ಆತ್ಮಲೋಕದಲ್ಲೇ ಇರುವನು. ಇವನು ತನ್ನನ್ನು ತಾನೇ ನೋಡಿಕೊಂಡು, ತನಗೆ ತಾನೇ ಸುಖಗೊಂಡು, ತನ್ನಲ್ಲಿ ತಾನೇ ಬಗ್ಗಿಕೊಂಡು ನಗುನಗುತ್ತ ಸುಖದಲ್ಲಿರುವನು. ಅದನ್ನು ಅವನು ಬೇರೆಯವರಿಗೆ ಹೇಳುವುದೇ ಇಲ್ಲ. ಇದೇ ಧರ್ಮಯೋಗವನ್ನು ಸಾಧಿಸುವವನ ಲಕ್ಷಣಗಳು.

"ಧರ್ಮಧ್ಯಾನವು ಅವನಿಗೆ ಯೋಗವಾಗಿ ಸಿದ್ಧಿಸಿದಾಗ, ಕೇಳುವ ಜನರಿಗೆ ಅದನ್ನು ಬೋಧಿಸುವನು. ಭವ್ಯರು ಆ ಬೋಧೆಯನ್ನು ಕೇಳಿ, ತಿಳಿದುಕೊಂಡರೆ ಅವನಿಗೆ ಆನಂದವಾಗುವುದೂ ಇಲ್ಲ; ಬೋಧಿಸಿದಾಗ ಕೇಳಲಿಲ್ಲವೆಂದು ತಿಳಿಯಲಿಲ್ಲವೆಂದು ಅವನಿಗೆ ನೋವಾಗುವುದೂ ಇಲ್ಲ. ಉಂಡವನು ತೇಗುವ ಹಾಗೆ ಧರ್ಮಯೋಗಿಯು ಆತ್ಮಯೋಗದಲ್ಲಿ ಉಂಡಿರುವ ಸವಿಯನ್ನು ಒಂದು ಕೆಲಸದ ಮೂಲಕ ತೋರಿಸುವನು. ಯಾರಾದರೂ ತಾನು ಕಂಡುದನ್ನು ತಂದು ತೋರಿಸುವ ಹಾಗೆ ಇವನು ಅಂತರ್ಯದಲ್ಲಿ ತನ್ನ ಆತ್ಮನನ್ನು ಕಂಡ ವಿಚಾರವನ್ನು ಹೇಳಿ ತೋರಿಸುವನು. ಕೆಲವರು ಈ ರೀತಿಯಲ್ಲಿ ಉಪಕಾರ ಮಾಡುತ್ತ ನಡೆಯುತ್ತಾರೆ. ಮತ್ತೆ ಕೆಲವರು ಆ ಗೋಜಿಗೆ ಹೋಗುವುದಿಲ್ಲ, ಬೆಳೆದಿರುವ ಸಂವರೆಯೊಡಗೂಡಿ ನಿರ್ಜರಿಸುತ್ತ ಹೋಗುವರು. ಕರ್ಮವನ್ನು ಸುಟ್ಟು ಆತ್ಮವನ್ನು ನೋಡುತ್ತ ಹೋಗುವರು. ಎಲೆ ಭವ್ಯನೆ, ಇದೇ ಧರ್ಮಯೋಗ. ಈ ಧರ್ಮಯೋಗವನ್ನು ಹತ್ತು ರೀತಿ, ನಾಲ್ಕು ರೀತಿಯೆಂದು ವ್ಯವಹಾರವು ವಿವರಿಸುವುದು.

ಒಟ್ಟಿನಲ್ಲಿ ಚಿತ್ತವನ್ನು ಆತ್ಮನಲ್ಲಿ ಅಡಗಿಸುವುದೇ ನಿಶ್ಚಯವಾದ ಉತ್ತಮವಾದ ಧರ್ಮಯೋಗವು.

'ಚರ್ಮ ದೃಷ್ಟಿಯನ್ನು ಮುಚ್ಚಿ ನೋಡಿದಾಗ ಆತ್ಮನು ಕಪ್ಪು ಮೋಡಗಳ ಎಡೆಯಲ್ಲಿರುವ ಸೂರ್ಯನಂತೆ ನಿರ್ಮಲವಾಗಿ ಕಾಣುತ್ತ ಸುಜ್ಞಾನ ಸುಖಗಳನ್ನು ಉಂಟುಮಾಡುವುದೇ ಶುಕ್ಲಯೋಗವು. ಧರ್ಮಯೋಗದಲ್ಲಿ ಅರಿವು, ಬೆಳಗು, ಸುಖಗಳೆಲ್ಲವೂ ಕಿರಿದಾಗಿ ಕಂಡು ಮರೆಯಾಗುವುದು. ಶುಕ್ಲ ಯೋಗದಲ್ಲಿ ಅರಿವು, ಬೆಳಗು, ಸುಖಗಳೆಲ್ಲವೂ ಹಿರಿದಾಗಿ ಕಂಡು ಮರೆಯಾಗದೇ ಇರುವುದು. ಅಂಗಾಂಗಗಳಲ್ಲಿ ಎಡೆಯೆಡೆಗಳಲ್ಲಿ ಬೆಳಗನ್ನು ಬಿಂಬಿಸುವ ಬೆಡಗು ಧರ್ಮಯೋಗವೆನಿಸುವುದು. ತಿಂಗಳ ಬೆಳಕಿನ ಮೂರ್ತಿಯಂತೆ ತನ್ನ ಆತ್ಮವು ಸರ್ವಾಂಗಗಳನ್ನೂ ತುಂಬಿಕೊಂಡು ಬೆಳಗುವುದೇ ಶುಕ್ಲ ಯೋಗವು. ಗಾಳಿಗೆದುರಾದ ದೀಪದಂತೆ ಅಲ್ಲಾಡುತ್ತ ಆತ್ಮವು ಒಳಗೊಳಗೆ ಹೊಳೆಯುತ್ತಿರುವುದೇ ಧರ್ಮ. ಗಾಳಿಗೆ ಎದುರಾಗದ ದೀಪದಂತೆ ಅಲ್ಲಾಡದೆ ಸ್ಥಿರವಾಗಿ ಹೊಳೆಯುತ್ತಿರುವುದೇ ಶುಕ್ಲ. ಧರ್ಮಯೋಗದಲ್ಲಿ ಪುರುಷಾಕಾರವಾಗುತ್ತ, ಹರಿಯುತ್ತ ಬೆಳಗುವುದು. ಬಾಲಚಂದ್ರನು ಬೆಳೆಯುವಂತೆ, ಮೆಲ್ಲಮೆಲ್ಲನೆ ಮನಸ್ಸಿನ ಪ್ರಭೆಯು ಬೆಳೆದು ಬರುವುದು. ಶುಕ್ಲಯೋಗದಲ್ಲಿ ಪುರುಷಾಕಾರವು ತಪ್ಪದೆ, ಕಾಂತಿಯು ದೇಹವನ್ನು ತುಂಬಿ ನೆರೆದಿರುವುದು. ಬಾಲಸೂರ್ಯನು ನಡುಹಗಲಿಗೆ ಏರುವಂತೆ ಮನಸ್ಸಿನ ಪ್ರಭೆಯು ಹೆಚ್ಚುತ್ತ ಹೊಳೆಯುವುದು.

''ಮಳೆಯ ನೀರು ಭೂಮಿಯನ್ನು ಕೊರೆಯುವ ಹಾಗೆ ಧರ್ಮಯೋಗವು ಕರ್ಮಗಳ ಸಮೂಹವನ್ನು ನಿರ್ಜರಿಸುವುದು. ಹೊಳೆಯ ನೀರು ಭೂಮಿಯನ್ನು ಕೊರೆಯುವ ಹಾಗೆ ಶುಕ್ಲಯೋಗವು ಕರ್ಮಗಳ ಸಮೂಹವನ್ನು ನಿರ್ಜರಿಸುವುದು. ಹರಿತವಿಲ್ಲದ ಕೊಡಲಿಯ ಏಟಿನಂತೆ, ಧರ್ಮವು ಕರ್ಮಗಳನ್ನು ಅಲ್ಪಸ್ವಲ್ಪ ಕೊಚ್ಚುವುದು. ಆದರೆ ಶುಕ್ಲವು ಮಸೆದ ಕೊಡಲಿಯ ಪೆಟ್ಟಿನಂತೆ ಕರ್ಮಗಳನ್ನು ಕೊಚ್ಚಿ ಕೊಚ್ಚಿ ನಾಶಮಾಡುವುದು. ಈ ಯೋಗದಲ್ಲಿ ಒಂದು ಅಲ್ಪ ಶಾಂತಿ; ಮತ್ತೊಂದರಲ್ಲಿ ಮಹಾಶಾಂತಿ. ಇಷ್ಟೇ ಭೇದ. ಇವು ಒಂದಲ್ಲದೆ ಎರಡು ಅಲ್ಲ, ಯಾಕೆಂದರೆ ಅವುಗಳಿಗೆ ಒಂದೇ ಆತ್ಮನಲ್ಲದೆ ಬೇರೆ ಆಧಾರವಿಲ್ಲ, ಮರಿಸಿಂಹನೆಂದೂ ನೆರೆದ ಸಿಂಹನೆಂದೂ ಹೇಳುತ್ತಾರಲ್ಲವೆ? ಮರಿಸಿಂಹವೇ ಬೆಳೆದು ದೊಡ್ಡ ಸಿಂಹವಾಯಿತು. ಅದರಂತೆ ಧ್ಯಾನವು ಬೆಳೆಯುತ್ತಿರುವ ಧರ್ಮಯೋಗ; ಬೆಳೆದ ಮೇಲೆ ಶುಕ್ಲಯೋಗ. ಇವುಗಳಿಂದ ಭವವೆಂಬ ಆನೆಯನ್ನು ಓಡಿಸಬೇಕು.

''ಅರ್ಥವನ್ನು ತಿಳಿಯಪಡಿಸುವುದಕ್ಕಾಗಿ ಇದನ್ನು ನಾಲ್ಕು ರೀತಿಯಾಗಿ ವಿಂಗಡಿಸಿದ್ದಾರೆ. ನಿಶ್ಚಯ ಶುಕ್ಲವು ವಿಕಲ್ಪವನ್ನು ಅಳಿಸಿ, ಹಂಸನಲ್ಲಿರುವಂತೆ ಮಾಡುವುದು. ಬಹುಶಾಸ್ತ್ರಿಗೆ, ಅಲ್ಪಶಾಸ್ತ್ರಿಗೆ, ಶ್ರಾವಕನಿಗೆ, ಮುನಿಗೆ ಮೊದಲು ಧರ್ಮಯೋಗವಾಗುವುದು. ಬಹುವಿದ್ಯಾವಂತನಿಗೆ, ಅಲ್ಪ ವಿದ್ಯಾವಂತನಿಗೆ ಮತ್ತು ಯೋಗಿಗೆ ಶುಕ್ಲಯೋಗವಿರುವುದು. ಗೃಹಸ್ಥರಿಗೆ ಶುಕ್ಲಯೋಗವಿಲ್ಲ, ಇಂದಿನಿಂದ ಕಲಿಕಾಲದ ಅಂತ್ಯದವರೆಗೂ ಧರ್ಮ ಯೋಗವು ನಡೆದು ಬರುವುದು. ಆದರೆ ಶುಕ್ಲಯೋಗವು ಕಲಿಕಾಲವು ಪ್ರಾರಂಭವಾಗುವವರೆಗಿರುವುದಲ್ಲದೆ, ಕಲಿಕಾಲದಲ್ಲಿ

ಇರುವುದಿಲ್ಲ. ಧರ್ಮ ಯೋಗದಿಂದ ವಿಕಲ ನಿರ್ಜರೆಯಾಗುವುದು. ಆದರೆ ಶುಕ್ಲಯೋಗದಿಂದ ಸಕಲವೂ ನಿರ್ಜರೆಯಾಗುವುದು. ವಿಕಲ ನಿರ್ಜರೆಯಾದಾಗ ಸುರಲೋಕ ಸಂಪದವು ದೊರೆಯುವುದು. ಸಕಲ ನಿರ್ಜರೆಯಾದಾಗ ಮಾತ್ರ ಮೋಕ್ಷವೇ ದೊರೆಯುವುದು. ಕೆಲವರು ಒಂದು ಜನ್ಮದಲ್ಲೇ ಧರ್ಮಯೋಗದಲ್ಲಿದ್ದು, ಶುಕ್ಲಯೋಗಕ್ಕೆ ಬಂದು, ಮೋಕ್ಷ ಪಡೆಯುವರು. ಹಲವರು ಧರ್ಮಯೋಗದಲ್ಲೇ ಇದ್ದು, ಮುಂದಕ್ಕೆ ಹೋಗದೆ ಸ್ವರ್ಗಸುಖವನ್ನು ಪಡೆದು ಬಾಳುವರು. ಯಾವ ಕಾಲದಲ್ಲಾದರೂ ನಿಶ್ಚಯದ ಒಂದೇ ಧರ್ಮಯೋಗವನ್ನು ಮಾಡಿದವರು ಲೌಕಿಕವು ಅಂತ್ಯವಾಗುವಾಗ ದಕ್ಷಿಣೇಂದ್ರರೆನಿಸಿ ಪುನಃ ಏಕಜನ್ಮವನ್ನು ಪಡೆದು, ಅನಂತರ ಮೋಕ್ಷ ಪಡೆಯುವರು. ಈ ವ್ಯವಹಾರ ಧರ್ಮವನ್ನು ಮಾಡಿದವರಿಗೆ ಒಮ್ಮೆ ಸ್ವರ್ಗ ಪದವಿಯು ತಪ್ಪದೆ ದೊರೆಯುವುದು. ಭವನಾಶವು ಇಷ್ಟೇ ಎಂಬ ನಿಯಮವೇನೂ ಇಲ್ಲ. ಅದಕ್ಕೆ ಹಂಸಾನುಭವವೊಂದೇ ನಿಯಮವಾಗಿದೆ. ನಿಶ್ಚಯದ ಧರ್ಮಯೋಗವು ಬಾರದಿರುವಾಗ, ತನ್ನ ಚೇತನದ ಶಿರದಲ್ಲಿ, ಅದನ್ನೇ ನಂಬಿಕೊಂಡು ದುಶ್ಚರಿತಗಳನ್ನು ಬಿಟ್ಟು ಶುಭಚರಿತರಾಗಿ ನಡೆದುಕೊಂಡರೆ, ನಾಳೆಯಾದರೂ ನಿಶ್ಚಯ ಧರ್ಮವನ್ನು ಪಡೆಯುವರು.'' ಎಂದು ಪುರುದೇವರು ಮೋಕ್ಷಮಾರ್ಗದಲ್ಲಿನ ಧರ್ಮಯೋಗವನ್ನೂ ಶುಕ್ಲಯೋಗವನ್ನೂ ವಿವರಿಸಿದರು. ಬಳಿಕ ನಿಶ್ಚಯ ಧರ್ಮವನ್ನು ಕುರಿತು ತಮ್ಮ ಮಾತನ್ನು ಮುಂದುವರಿಸಿದರು :

''ತನಗೆ ನಿಶ್ಚಯಧರ್ಮವು ಬಾರದಿರುವಾಗ, ನಿಶ್ಚಯಧರ್ಮವನ್ನು ಹಿಡಿದ ಅನ್ಯರನ್ನು ಅವನು ನಂಬಲಾರನು. ಬೇಳಿನಂತಾಗಿ ದೂಷಣ ಮಾಡುವ ದುಶ್ಚಿತ್ತನಿಗೆ ಆತ್ಮಸಿದ್ಧಿಯಿಲ್ಲ. ಸಾರಭವ್ಯರಾದವರು ಧ್ಯಾನದಲ್ಲಿ ಆತ್ಮನನ್ನು ಕಾಣುವರು. ಆದರೆ ದೂರಭವ್ಯರು ಆತ್ಮನನ್ನು ಕಾಣಲಾರರು. ಯಾರು ಸಾರಭವ್ಯರ ನಡೆಗೆ ಒಡಂಬಡುವರೋ ಅವರು ನಾಳೆಯಾದರೂ ಆತ್ಮಸಿದ್ಧಿಯನ್ನು ಸೇರುವರು. ಸಾರಭವ್ಯರು ಹಂಸವನ್ನು ನೋಡುವೆವು ಎಂದು ಹೇಳಿದರೆ ದೂರಭವ್ಯರು ಅದನ್ನು ಮೆಚ್ಚುವರು. ಆದರೆ ನಿರ್ಭವ್ಯರು ವೈರವನ್ನು ತಾಳಿ, ಸಾರಭವ್ಯರನ್ನು ನಿಂದಿಸಿ, ನಾರಕಗತಿಗೆ ಬೀಳುವರು. ಇಂಥವರು ವ್ಯವಹಾರ ಧರ್ಮದಲ್ಲಿ ಒಂದನ್ನು ನುಡಿದರೆ, ಒಂದನ್ನು ನಡೆದರೆ ಆಗ ಉತ್ಸಾಹದ ಲವಲವಿಕೆ ತೋರಿಸುವರು. ಆದರೆ ಸುವಿಶುದ್ಧಿಯ ನಿಶ್ಚಯಧರ್ಮದ ಕುರಿತು ನುಡಿದಾಗ, ನಡೆದಾಗ, ದೂರಸರಿದು ಅವಮಾನ ಮಾಡುವರು. ಆತ್ಮಯೋಗವಾಗದಿರುವವರು, ಹಂಸ ಯೋಗಾನುಭವಿಗಳ ಕಂಡರೆ, ನಿಂದಿಸುವರು. ಅವರನ್ನಿವರು ನಿಂದಿಸದಿದ್ದರೆ ಇವರಿಗೆ ಉಗ್ರಸಂಸಾರವು ಬರುವುದಾದರೂ ಹೇಗೆ?

''ಹನ್ನೆರಡು ಅಂಗಗಳಲ್ಲಿ ಒಂದನ್ನು ಬಿಟ್ಟು, ಹನ್ನೊಂದು ಅಂಗಗಳವರೆಗೆ ಓದಿ, ಸಂಗವನ್ನು ತೊರೆದು ನಿರ್ಗ್ರಂಥರಾದರೂ ಬಹಿರಂಗದ ಆಚರಣೆಯಲ್ಲೇ ಅವರು ಇರುತ್ತಾರೆ. ದೇಹವನ್ನು ನಿರ್ವಾಣಮಾಡುವುದೇ ದೇಹ ನಿರ್ವಾಣವು. ದೇಹದೊಳಗಿರುವ ಹಂಸವನ್ನು, ದೇಹದ ಹೊದಿಕೆಯಿಂದ ಬೇರೆ ಮಾಡಿ ನೋಡುವುದೇ ದೇಹವಿಲ್ಲದ ಆತ್ಮನಿರ್ವಾಣವು. ಮೂರ್ತಿ ನಿರ್ವಾಣವನ್ನು ಸಾಧನವಾಗಿಟ್ಟುಕೊಂಡು,

ಆತ್ಮನಿರ್ವಾಣವನ್ನು ಆದರಿಸಿದರೆ ಮೋಕ್ಷ ದೊರೆಯುವುದು. ಧೂರ್ತರಾದವರು ಮೂರ್ತಿನಿರ್ವಾಣಕ್ಕೆ ಒಪ್ಪಿದರೂ ಆತ್ಮನಿರ್ವಾಣಕ್ಕೆ ಒಪ್ಪುವುದಿಲ್ಲ. ಒಳಗೆ ಏನನ್ನೂ ಬಿಡದೆ, ಹೊರಗೆ ಎಲ್ಲವನ್ನೂ ಬಿಟ್ಟರೂ ಫಲವಿಲ್ಲ. ಹೆರೆಯನ್ನು ಕಳಚಿದರೆ ಸರ್ಪದ ವಿಷವು ಹೋಗುವುದೆ? ಮೋಹ ರಾಗದ್ವೇಷಗಳು ಎಳ್ಳಿನಷ್ಟೂ ಇಲ್ಲದ ಹಾಗೆ ತನ್ನಲ್ಲಿ ತಾನೇ ನಿಂತಿರಬೇಕೆಂಬ ಮಾತಿಗೆ ನಿರ್ಭವ್ಯರು ಒಪ್ಪಲಾರರು. ಧ್ಯಾನಕ್ಕೆ ಹಾಗೆ–ಹೀಗೆಂದು ಕೀಳುಮಾತುಗಳನ್ನು ಹೇಳುವರು. 'ಇವರು ಆತ್ಮನನ್ನು ಹೇಗೆ ಕಾಣುವರು? ಆತ್ಮನಾದರೂ ಹೇಗಿರುವನು?' ಎಂದು ಅವರು ಜಗಳಕ್ಕೆ ನಿಲ್ಲುವರು. ಧ್ಯಾನಯೋಗವು ತಮಗೆ ಲಭಿಸದವರು, ಈ ಧ್ಯಾನಯೋಗದ ಕುರಿತು, ಅಲ್ಲದ ಸಲ್ಲದ ಮಾತುಗಳನ್ನಾಡುವರು. ವ್ಯಕ್ತಿಗಳನ್ನೂ ಕಾಲವನ್ನೂ ನಿಂದಿಸುವರು. ಎಲ್ಲವೂ ಅಸಂಭಾವ್ಯವೆನ್ನುವರು. ಇದಕ್ಕೆಲ್ಲ ಅವರಲ್ಲಿರುವ ಮತ್ಸರವೇ ಕಾರಣವಾಗಿದೆ. ಈ ಮತ್ಸರಿಗಳು ಒಡಲನ್ನು ಖಂಡಿಸಿದರೂ ಓದಿಸಿದರೂ ಓದಿದರೂ ಸಂಚಿಯಲ್ಲಿ ಜೊತೆಗೂಡಿದ್ದರೂ ಒಂದಿಷ್ಟು ಸಂಸಾರ ಸುಖಪಡೆಯುವರಲ್ಲವೆ ಎಂದಿಗೂ ಮುಕ್ತಿಯನ್ನು ಪಡೆಯುವುದಿಲ್ಲ.''

''ದೇವ. ಬಿನ್ನಹವೊಂದು, ತನ್ನನ್ನು ತಾನು ನೋಡದಿದ್ದರೆ ಕೈವಲ್ಲವಿಲ್ಲವೆನ್ನುವುದೇಕೆ? ನಿನ್ನ ಭಕ್ತಿಯಲ್ಲಿ ಇರುವವರಿಗೆ ಜೀವಸಿದ್ಧಿಯು ಘನವೇ?'' ಎಂದು ಅರ್ಕಕೀರ್ತಿಯು ಸಂದೇಹ ನಿವಾರಣೆಗಾಗಿ ಪುರುದೇವರೊಡನೆ ಕೇಳಿದನು.

''ನಮ್ಮ ಮೇಲಿನ ಭಕ್ತಿಯು ಮುಕ್ತಿಗೆ ಕಾರಣವಾಗುವುದು. ಆದರೆ ನಮ್ಮ ಭಕ್ತಿಗೆ ಯುಕ್ತಿಬೇಕು. ನಮ್ಮ ಮಾತನ್ನು ಕೇಳಿ ಅದರಂತೆ ನಡೆದರೆ, ಅದು ನಮ್ಮ ಭಕ್ತಿಯಾಗುವುದು. ಆದರೆ ತಮ್ಮ ಇಚ್ಛೆಯಂತೆ ನಡೆದರೆ ಅದು ಮೂರ್ಖಭಕ್ತಿಯಾಗುವುದು.''

''ಸ್ವಾಮಿ, ನಮಗಾಗಿ ನಾವು ತಮ್ಮ ಆತ್ಮವೆಂದು ನಡೆದರೆ ಅಂದು ನಮ್ಮ ಇಚ್ಛೆಯಾಗುವುದಾದರೂ ಹೇಗೆ? ನಮ್ಮ ಮುಕ್ತಿಗಾಗಿ ಜಿನನೇ ಶರಣು ಎಂದು ನಾವು ನಡೆದುಕೊಂಡರೆ ಅದು ನಿಮ್ಮ ಮೇಲಿನ ಭಕ್ತಿಯಲ್ಲವೇ?''

''ಅಲ್ಲ; ನಿನ್ನ ಆತ್ಮಯೋಗವು ನಮಗೆ ಒಪ್ಪುವ ಭಕ್ತಿಯೆಂದು ನೀನು ಬಲ್ಲೆ. ಆದರೂ ನೀನು ಕೇಳುವುದರಿಂದ ಎಲ್ಲವನ್ನೂ ಹೇಳುವೆವು : ಯುಕ್ತಿಯನ್ನು ತಿಳಿದು ಭಕ್ತಿ ಮಾಡಿದರೆ, ಅಂಥವರಿಗೆ ನಿಯಮದಂತೆ ಮುಕ್ತಿ ದೊರೆಯುವುದು. ಯುಕ್ತಿ ಇಲ್ಲದ ಭಕ್ತಿಯು ಭವವನ್ನು ಉಂಟುಮಾಡುವುದು. ಆದ್ದರಿಂದ ಭಕ್ತಿಯ ನೆಲೆಯನ್ನು ತಿಳಿಯಬೇಕು.'

''ಹಾಗಾದರೆ ಆ ಯುಕ್ತಿಯಿಂದಾದ ಭಕ್ತಿ ಯಾವುದು? ಆ ಯುಕ್ತಿಯು ಇಲ್ಲದಿರುವ ಭಕ್ತಿಯು ಹೇಗಿರುವುದು? ಸರ್ವಜ್ಞನೇ, ಮಂದಮತಿಗಳಾದ ನಾವಿದನ್ನು ಹೇಗೆ ತಿಳಿಯುವೆವು? ನಮಗೆ ಅದರ ರೀತಿಯಲ್ಲಿ ಹೇಳಬೇಕು?'

'ಹಾಗಾದರೆ ಭವ್ಯವೇ ಕೇಳು? ಎಂದು ಪುರುದೇವರು ಅದನ್ನು ತಿಳಿಸಿದರು :

''ಭಕ್ತಿಯಲ್ಲಿ ಭೇದಾಭೇದವೆಂದು ಎರಡು ರೀತಿಯದು. ಅದನ್ನು ತಿಳಿದು ಆದರಿಸಿದರೆ ಮುಕ್ತಿಯಾಗುವುದು. ನಾವು ಇಲ್ಲಿರುವೆವು ಎಂಬುದನ್ನೂ, ಸಿದ್ಧರು ಅಲ್ಲಿ ಮುಕ್ತಿಯಲ್ಲಿ ಇರುವರೆಂಬುದನ್ನೂ ತಿಳಿದು, ಅವುಗಳನ್ನು ಬೇರೆ ಬೇರೆಯಾಗಿ ಭಾವಿಸುವುದೂ, ಅದರಂತೆ ಪೂಜಿಸುವುದೂ ಭೇದಭಕ್ತಿ, ನಮ್ಮನ್ನೂ ಸಿದ್ಧರನ್ನೂ, ಇಲ್ಲಿ

ಅಲ್ಲಿ ನಿಲಿಸದೆ, ತಮ್ಮ ಆತ್ಮನಲ್ಲೇ ನಿಲ್ಲಿಸಿಕೊಂಡು ಭಾವಪೂಜೆಯನ್ನು ಮಾಡುತ್ತಿದ್ದರೆ, ಅದು ಪರಬ್ರಹ್ಮರ ಅಭೇದ ಭಕ್ತಿಯಾಗುವುದು. ನಮ್ಮನ್ನು ಬೇರೆಯಾಗಿಟ್ಟುಕೊಂಡು, ಕಂಡರೆ ಅದೇ ಭೇದಭಕ್ತಿಯು. ಹಿರಿಮೆಯಿಂದ ತಮ್ಮ ಆತ್ಮನಲ್ಲಿ ನಮ್ಮನ್ನು ಕಂಡರೆ ಅದು ಕರ್ಮಗಳನ್ನು ಸುಟ್ಟು ಬಿಸಾಡುವ ನಿರ್ಭೇದ ಭಕ್ತಿ. ಎರಕದ ಕಂಚುಕಣಿಗಳಲ್ಲಿ ನಮ್ಮ ನೆನಪನ್ನು ನೋಡುವಂತೆ ಮಾಡುವುದು ಭೇದಭಕ್ತಿ ಅದರ ಬದಲು, ಒಪ್ಪವಿಟ್ಟ ಆತ್ಮನಲ್ಲಿ ನಮ್ಮನ್ನು ನೋಡಿದರೆ, ಅದುವೆ ನಮಗೆ ಒಪ್ಪಿಗೆಯಾಗಿರುವ ನಿರ್ಭೇದ ಭಕ್ತಿ

"ಸಿದ್ಧರಂತೆ, ಅರುಹಂತನಂತೆ, ನನ್ನ ಆತ್ಮನು ಅತ್ಯಂತ ಶುದ್ಧನು — ಎಂದು ಒಳಗೆ ನೋಡಿದರೆ, ಅದುವೆ ಸಿದ್ಧ ಭಕ್ತಿಯಾಗುವುದು. ಅದೇ ನಮ್ಮ ಭಕ್ತಿಯೂ ಆಗುವುದು. ಅಲ್ಲಿ ನಾವು ಸಿದ್ಧರಾಗಿಯೇ ಇರುವೆವು. ಭೇದ ಭಕ್ತಿಯನ್ನು ಹಲವರು ಮಾಡಬಹುದು. ಆದರೆ ನಿರ್ಭೇದ ಭಕ್ತಿಯನ್ನು ಮಾತ್ರ ಮಾಡಲಾರರು. ಭೇದಭಕ್ತಿಯನ್ನು ಮೊದಲು ಅಭ್ಯಾಸಮಾಡಿ, ಮತ್ತೆ ಅಭೇದ ಭಕ್ತಿಯನ್ನು ಮಾಡಬೇಕು. ನಿರ್ಭವ್ಯರೆಲ್ಲರೂ ಭೇದಭಕ್ತಿಯನ್ನು ಮಾಡುವರು. ಅವರಿಗೆ ನಿರ್ಭೇದ ಭಕ್ತಿಯನ್ನು ಮಾಡಲು ಸಾಧ್ಯವಿಲ್ಲ. ಮೋಕ್ಷ ಸಂದರ್ಭವನ್ನುಂಟು ಮಾಡುವ ಆ ಸುಭಕ್ತಿಯು ನಿರ್ಭಾಗ್ಯರಿಗೆ ಯಾಕೆ ಬರುವುದು? ಭಕ್ತಿ ಬಾರದಿದ್ದರೂ ಮನಸ್ಸು ಒಪ್ಪಿದರೆ, ನಾಳೆಯಾದರೂ ಭಕ್ತಿಯುಂಟಾದೀತು. ಆದರೆ ಭಕ್ತಿಬಾರದೆಂದು, ಇವರು ಭಕ್ತಿಯನ್ನು ಒಪ್ಪಿಕೊಳ್ಳದೆ ಮುಕ್ತಿಗೆ ದೂರವಾಗಿರುವರು. ಎರವಿನ ಭಕ್ತಿಯೆಂದರೂ ಭೇದಭಕ್ತಿಯೆಂದೂ ಒಂದೇ. ಅದು ಬೇರೆ ಮಾಡುವುದು. ಎರವನ್ನು ಕಾಣದ ಭಕ್ತಿಯೂ ನಿರ್ಭೇದ ಭಕ್ತಿಯೂ ಒಂದೇ ಆಗಿದೆ. ಅದು ಬೇರೆ ಮಾಡುವುದಿಲ್ಲ

ಇದಕ್ಕೆ ಒಂದು ದೃಷ್ಟಾಂತವನ್ನು ಕೇಳು. ಗುರುವಿದ್ದ ಮಂದಿರಕ್ಕೆ ಹೋಗಿ ಪೂಜಿಸಿದರೆ ಅದು ಭಕ್ತಿಯಾಗುವುದು. ಅವರನ್ನು ಮನೆಗೆ ಕರೆತಂದು ಪೂಜಿಸಿದರೆ ಅದು ಘನತರವಾದ ಭಕ್ತಿಯಲ್ಲವೆ? ಭಕ್ತಿಗಳಲ್ಲಿ ಭೇದವಿಲ್ಲದ ಭಕ್ತಿಯೇ ಶ್ರೇಷ್ಠ. ಅದರಿಂದ ಮುಕ್ತಿ ದೊರೆಯುವುದು. ಆ ಮುಕ್ತಿಯೇ ಎಲ್ಲ ಸಂಪತ್ತಿಗೂ ಹೆಚ್ಚಿನದಾಗಿದೆ. ಅದ್ದರಿಂದ ಮುಕ್ತಿಗೆ ತಕ್ಕ ಭಕ್ತಿಯನ್ನು ಮಾಡಬೇಕು. ಅದುವೆ ಯುಕ್ತಿ ಕೂಡಿದ ಭಕ್ತಿ, ಭಿನ್ನ ಭಕ್ತಿಗೆ ಸ್ವರ್ಗವು! ನಿರ್ಭಿನ್ನ ಭಕ್ತಿಗೆ ಅಪವರ್ಗವು. ಭಿನ್ನವಿಲ್ಲದ ಭಕ್ತಿಯೇ ಮೊದಲು ಸ್ವರ್ಗವನ್ನು ಇತ್ತು ಮತ್ತೆ ಮುಕ್ತಿಯನ್ನುಂಟು ಮಾಡುವುದು. ಇದು ನಮ್ಮ ಆಜ್ಞೆಯೆಂದು ನೀನು ಚೆನ್ನಾಗಿ ನಂಬಿಕೊಂಡಿರು.

"ಭೇದವಿರುವ ರತ್ನತ್ರಯ, ವ್ಯವಹಾರ ಶುಭಯೋಗ ಮತ್ತು ಭೇದ ಭಕ್ತಿಗಳೆಂದರೆ ಒಂದೇ. ಅದರಂತೆ ಭೇದ ಅಡಗಿದ ನಿಶ್ಚಯ, ಶುದ್ಧ ಯೋಗ ಮತ್ತು ನಿರ್ಭೇದ ಭಕ್ತಿಗಳು ಎಂದರೂ ಒಂದೇ. ಶುಭಯೋಗವನ್ನು ಧ್ಯಾನದ ಅಭ್ಯಾಸ ಕಾಲದಲ್ಲಿ ಒಪ್ಪಿಕೊಂಡು ಆಚರಿಸಿದರೆ ಚಿತ್ತದಲ್ಲಿ ಕ್ಷೋಭೆಯು ಅಳಿದುಹೋಗುವುದು. ಅದುವೇ ಅಭಯ ಶುದ್ಧೋಪಯೋಗ. ಚೇತನವಿಲ್ಲದ ಶಿಲೆಯಲ್ಲಿ ನಮ್ಮನ್ನೂ ದ್ಯೋತಿಸುವುದು ಸಾಮಾನ್ಯ ಭಕ್ತಿ! ಚೈತನ್ಯವಿರುವ ಆತ್ಮನಲ್ಲಿ ನಮ್ಮನ್ನು ಉದ್ಧರಿಸುವ ರೀತಿಯು ವಿಶೇಷ ಭಕ್ತಿಯಾಗಿದೆ."

'ಜಿನೇಶಾ, ಶಿಲೆಯಲ್ಲಿ ಚೇತನವಿಲ್ಲವೆಂಬುದೇನೋ ನಿಜ. ಆದರೆ ಅದರಲ್ಲಿ ಮಲದ

ದೂಷಣೆಯಿಲ್ಲ, ಆದರೆ ದೋಷವುಳ್ಳ ದೇಹದಲ್ಲಿ ನಿಮ್ಮನ್ನು ಸ್ಥಾಪಿಸಿದರೆ, ನಿಮಗೆ ಭೂಷಣವೆ?''

''ದೇಹವು ಕಲ್ಮಷವಾಗಿರುವುದು, ನಿಜ. ಆ ದೇಹದಲ್ಲಿ ನಮ್ಮ ರೂಪವನ್ನು ಕಲ್ಪಿಸಬೇಕೆಂದು ಹೇಳಿರುವುದಿಲ್ಲ, ದೇಹದೊಳಗಿರುವ ಶುದ್ಧನಾದ ಹಂಸನಲ್ಲಿ ನಮ್ಮ ರೂಪವನ್ನು ಉದ್ಧರಿಸೆಂದು ಹೇಳಿದೆವು. ಇದನ್ನು ಸರಿಯಾಗಿ ತಿಳಿದಿರು.''

''ಗುರುವೆ, ಹಂಸನು ಒಳಗೆ ಶುದ್ಧನಾಗಿರುವುದು — ಹೌದು. ಹೊರಗೆ ತೋರುವ ಎಲುಬು, ಮಾಂಸ, ಮಲಗಳಿಂದ ಕೂಡಿರುವ ದೇಹದ ಸಂಸರ್ಗ ದೋಷವಲ್ಲವೇ ಈ ಆತ್ಮನಿಗೆ? ನಿಮ್ಮನ್ನು ಅದರಲ್ಲಿ ಸಿದ್ಧಿಸುವುದಾದರೂ ಹೇಗೆ?''

''ಕೆಚ್ಚಲಿನಲ್ಲಿರುವ ಹಾಲಿನಂತೆ ಆತ್ಮನು ಹೆಚ್ಚು ಶುದ್ಧನೆಂದು ಹೇಳಿದುದನ್ನು ಮರೆತೆಯಾ? ಇನ್ನಾದರೂ ಇದನ್ನು ತಿಳಿದು ದೇಹ ಸೋಂಕಿದರೂ ಉತ್ತಮವಾದ ಆತ್ಮನು ಅದರೊಂದಿಗೆ ಸೋಂಕದೇ ಇರುವನೆಂದು ತಿಳಿದು, ಆತ್ಮನಲ್ಲಿ ನಮ್ಮ ರೂಪವನ್ನು ಇರಿಸು. ಗೋವಿನ ಗರ್ಭದಲ್ಲಿರುವ ಗೋರೋಚನವು ಪಾವನವಲ್ಲವೆ. ಈ ಲೋಕದಲ್ಲಿ ಜೀವನು ಶರೀರದಲ್ಲಿದ್ದರೇನು? ಅವನು ವಿಪುಲ ಸ್ವಭಾವನೆಂದು ಯಾವಾಗಲೂ ನೋಡುತ್ತಿರು. ಕಸ್ತೂರಿಯು ಮೃಗದ ನಾಭಿಯಲ್ಲಿದ್ದರೇನು? ಅದು ಲೋಕದಲ್ಲಿ ಸೇವಿಸುವ ಮಹಾ ವಸ್ತುವಷ್ಟೆ. ಓಕರಿಕೆ ಬರುವಂತಹ ಅಂಗದಲ್ಲಿದ್ದರೂ ಆತ್ಮನ ರೀತಿಯೆಂಬುದು ಸುಪವಿತ್ರವಾಗಿದೆ. ಮುತ್ತು ಚಿಪ್ಪಿನ ಒಳಗಿದ್ದರೂ ಯುಕ್ತಿಗೆ ಉತ್ತಮವೆನಿಸುವಂತೆ, ರಕ್ತ ಮಾಂಸದ ಮೈಯೊಳಗಿರುವ ಆತ್ಮನು ವಿರಕ್ತನಾಗಿ ಉತ್ತಮನಾಗಿರುವನು. ಇದನ್ನು ನಂಬಿಕೊಂಡಿರು. ಚಿತ್‌ಶಕ್ತಿಗಳು ಅಲ್ಲದಿರುವ ಗೋವು ಇತ್ತ ಹಾಲು, ಚಿಪ್ಪಿನಲ್ಲಾದ ಮುತ್ತು, ಮೃಗನಾಭಿಯಿಂದಾದ ಕಸ್ತೂರಿಗಳೆಲ್ಲವೂ ಪವಿತ್ರವೆಂದಾದರೆ, ಚಿತ್‌ಶಕ್ತಿಯೇ ಮೈಯಾಗಿರುವ ಆತ್ಮ ವಸ್ತು ಮೈಯ್ಯೊಳಗಿರುವಾಗ ಉತ್ತಮನೆಂದು ಹೇಳಿದರೆ, ಯೋಚನೆ ಮಾಡುವುದೇಕೆ?''

''ಅಜ್ಞಾನಿಯ ನೋಟಕ್ಕೆ ಆತ್ಮನು ಅಪವಿತ್ರನಾಗಿರುವನು. ಆದರೆ ಸುಜ್ಞಾನಿಗೆ ಪವಿತ್ರನಾಗಿರುವನು. ಅಜ್ಞಾನ ಭಾವನೆಯಿಂದ ಅಜ್ಞಾನವುಂಟಾಗುವುದು. ಸುಜ್ಞಾನ ಭಾವನೆಯಿಂದ ಸುಜ್ಞಾನವುಂಟಾಗುವುದು. ಎಂದಿನವರೆಗೆ ಆತ್ಮನನ್ನು ಬದ್ಧನೆಂದು ಕಂಡರೆ, ಅಂದಿನವರೆಗೆ ಆತ್ಮನು ಭವಕ್ಕೆ ಬದ್ಧನಾಗಿಯೇ ಇರುವನು. ಯಾವಾಗ ಆತ್ಮನನ್ನು ಶುದ್ಧನೆಂದು ತಿಳಿದು ನೋಡಿದನೋ ಅಂದಿನಿಂದ ಅವನು ಮೋಕ್ಷಮಾರ್ಗಿಯಾಗಲು ತೊಡಗುವನು. ದೇಹವನ್ನೇ ನಾನೆಂದರೆ, ಬಹಿರಾತ್ಮನಾಗುವನು. ಆತ್ಮನು ಬೇರೆ ದೇಹ ಬೇರೆಯೆಂದರೆ ಅಂತರಾತ್ಮನಾಗುವನು. ದೇಹವಿಲ್ಲದವನೇ ಪರಮಾತ್ಮನು. ಆತ್ಮನನ್ನು ನೋಡುವ ಸ್ಥಿತಿಯಲ್ಲಿ ಎಲ್ಲರೂ ಪರಮಾತ್ಮರೇ. ಸ್ವಹಿತಾಂತರನಾದ ಆತ್ಮನು ಬಹಿರಾತ್ಮನಾದರೆ ಬದ್ಧನಾಗುವನು! ಶುದ್ಧನಾದರೆ ಪರಮಾತ್ಮನಾಗುವನು. ಬಹಿರಂಗ ಚಿಂತೆಯಲ್ಲಿದ್ದಾಗ ಬದ್ಧನಾಗುವನು! ಅದೇ ಒಪ್ಪಿಕೊಂಡು ಧ್ಯಾನಿಸುವಾಗ ಶುದ್ಧನಾಗುವನು. ತನ್ನ ಆತ್ಮನನ್ನು ಅಲ್ಪನೆಂದು ಎಣಿಸುವವನು ಅಲ್ಪನಾಗುವನು. ತನ್ನ ಆತ್ಮನನ್ನು ಅಧಿಕನೆಂದು ತಿಳಿದು ಮನ್ನಿಸುವವನು ಅಲ್ಪನಲ್ಲ, ನಮ್ಮಂತಹನು. ಇದು ನಮ್ಮ

ಆಜ್ಞೆ. ಇದನ್ನು ಚೆನ್ನಾಗಿ ನಂಬಿಕೊಂಡಿರು. ದರ್ಶನ, ಸುಜ್ಞಾನ, ಚಾರಿತ್ರ, ತಪಸ್ಸುಗಳೆಂದು ಕೂಡಿಸಿ ನಾಲ್ಕು ಎಂದು ಹೇಳಿದರೆ, ಅದು ವ್ಯವಹಾರ ಧರ್ಮದ ಮಾರ್ಗವಾಗುವುದು. ಇದನ್ನು ಒಟ್ಟಾಗಿ ನಿರ್ಧರಿಸಿ, ಪರಮಾತ್ಮ ಯೋಗವೆನ್ನುವಾಗ ಅದು ನಿಶ್ಚಯ ಧರ್ಮದ ಮಾರ್ಗವಾಗುವುದು. ಮೂಲಗುಣಗಳೆಂದೂ ಉತ್ತರ ಗುಣಗಳೆಂದೂ ಸಾಲು ಮಾತುಗಳಾದರೆ ವ್ಯವಹಾರ ಧರ್ಮವಾಗುವುದು. ಮೂಲ ಗುಣಗಳು ಎಂಟೂ ನಾನೆಂದು ತಾನು ತನ್ನಲ್ಲಿಯೇ ಓಲಾಡುತ್ತಿದ್ದರೆ, ಆಗ ಅದು ನಿಶ್ಚಯಾರ್ಥದ ಧರ್ಮವಾಗುವುದು.

''ಬಲ್ಲವನಿಗೆ ದೇವತಾ ವಂದನೆಯು ತಾನೇ ತಾನಾಗುವುದು. ವ್ರತ ಭಾವನೆಯೂ ತಾನೇ ತಾನಾಗುವುದು. ಯಾವ ವಿಕಲ್ಪವೂ ಇಲ್ಲದೆ ಧ್ಯಾನದಲ್ಲಿರುವ ಭಾವಕನೇ ನಮ್ಮನ್ನು ಕಂಡವನು. ಗಾಳಿಯಂತೆ ಚಲಿಸುತ್ತಿರುವ ಚಿತ್ತವನ್ನು ಆತ್ಮನ ದಾರಿಯಲ್ಲಿ ನಿಲ್ಲಿಸಿದರೆ, ಅದೇ ಘೋರ ತಪಸ್ಸು; ಅದೇ ಉಗ್ರ ತಪಸ್ಸು. ಅದೇ ಸಾರತರವಾದ ತಪಸ್ಸು. ಇದನ್ನು ನೀನು ನಂಬು'' ಎಂದು ಪುರುದೇವರು ತಿಳಿಸಿದರು.

''ಅಧ್ಯಾತ್ಮವನ್ನು ಅರಿತು ಆತ್ಮನಲ್ಲಿ ಚಿತ್ತವನ್ನು ನೆಲೆಗೊಳಿಸಿದವನಿಗೆ ಸ್ವಾಧ್ಯಾಯ ಪಂಚಾಚಾರ, ಮಹಾಧ್ಯಾನ ಮತ್ತು ತಪಸ್ಸುಗಳು ಸಾಧ್ಯವಾಗುವುದು. ಪಾದರಸದಂತೆ ಹರಿಯುವ ಚಿತ್ತವನ್ನು ತಂದು ಆತ್ಮನಲ್ಲಿ ಜೋಡಿಸಿದರೆ ಅದೇ ದ್ವಾದಶಾಂಗದ ಶಾಸ್ತ್ರವಾಗುವುದು. ಅದೇ ಹದಿನಾಲ್ಕು ಭೇದಪೂರ್ವಗಳೂ ಆಗುವುದು. ಸಾಮ್ಯ ಭಾವನೆಯಿಂದ ಚಿತ್ತವನ್ನು ತಡೆದು ಆತ್ಮನಲ್ಲಿ ಸೇರುವಂತೆ ದುಡಿದವನಿಗೆ ಸಮ್ಯಗ್‌ದರ್ಶನವೂ ಸಮ್ಯಗ್‌ಜ್ಞಾನವೂ ಸಮ್ಯಕ್ ಚಾರಿತ್ರವೂ ಸಾಮ್ಯದ ತಪಸ್ಸುಗಳೆಲ್ಲವೂ ತಾನಾಗಿ ಕೂಡಿಬರುವುದು. ಬಿನ್ನ ಬಿನ್ನಗಳಲ್ಲಿ ಅತ್ತಿತ್ತ ಓಡುವ ಚಿತ್ತವು ತನ್ನ ಆತ್ಮನಲ್ಲಿ ನಿಂತವನಿಗೆ ನಮ್ಮ ಮುದ್ರೆ, ನಮ್ಮ ತೀರ್ಥವಂದನೆ, ನಮ್ಮ ಪೂಜೆ–ಎಲ್ಲವೂ ತಾನಾಗಿ ಆಗುವುದು. ಇದನ್ನು ನಂಬು. ಜಯಿಸಲು ಅಸಾಧ್ಯವಾದ ಚಿತ್ತವನ್ನು ಜಯಿಸಿ ವಿಕಲ್ಪಗಳನ್ನು ತ್ಯಜಿಸಿ, ತನ್ನನ್ನು ನೋಡುವವನಿಗೆ, ನಿರ್ಜರೆಯೂ ಸಂವರೆಯೂ ಆತ್ಮವೂ ಉತ್ತಮವಾದ ಮೋಕ್ಷವೂ ಉಂಟಾಗುವುದು. ಚಿತ್ತವನ್ನು ದಾಕ್ಷಿಣ್ಯವಿಲ್ಲದೆ ಒತ್ತಿ ಆತ್ಮಸಾಕ್ಷಿಯಿಂದ ಒಳಗೆ ನೋಡಿದರೆ ಅದೇ ಮೋಕ್ಷ ಪದ್ಧತಿಯೂ ಮೋಕ್ಷ ಸಂಪತ್ತೂ ಮೋಕ್ಷವೂ ಎಂದಾಗುವುದು. ಇದನ್ನು ನೀನು ನಂಬು. ಈ ಆತ್ಮಚಿಂತನೆಯೆಂಬುದು ಪರಮರಹಸ್ಯವಾದರೂ ಯಾರು ದುಷ್ಟಚಿತ್ತವನ್ನು ಗೆಲ್ಲುವರೋ ಅವರಿಗೆ.. ಅದು ಗೋಚರಿಸಿರುವುದು'' ಎಂದು ಚಿತ್ತದ ಚಿಂತನೆಯನ್ನು ರವಿಕೀರ್ತಿಗೆ ಪುರುದೇವರು ಹೇಳಿದರು.

'ಜಿನನಾಥ ಒಂದು ಬಿನ್ನಹ. ಇಷ್ಟು ಸಾಮರ್ಥ್ಯವಿರುವ ಎಣೆಯಿಲ್ಲದ ಆತ್ಮನು ದೇಹದೊಳಗೆ ಬಗ್ಗಿ ಕೊಂಡಿರುವುದೇಕೆ? ಅವನು ಹುಟ್ಟುವುದೇಕೆ? ಸಾಯುವುದೇಕೆ? ಪಾಪವಿಲ್ಲದ ಮೋಕ್ಷದಲ್ಲಿರಬೇಡವೇ' ಎಂದು ಅರ್ಕಕೀರ್ತಿಯು ಕೇಳಿದನು.

''ಅಹುದು, ಆತ್ಮನು ಸಾಮರ್ಥ್ಯವುಳ್ಳವನೆಂಬುದು ನಿಜ. ಆದರೆ ಅವನು ತನ್ನ ಸಾಮರ್ಥ್ಯವನ್ನು ತಿಳಿಯದೆ ಕೆಟ್ಟನು. ಅವನು ಪ್ರೇಮವನ್ನೂ ಕೋಪವನ್ನೂ ಬಿಟ್ಟು

ಬಿಟ್ಟು, ತನ್ನನ್ನೇ ನೋಡಿಕೊಂಡಿದ್ದರೆ, ಕ್ಷೇಮವಾಗಿರುವನು. ಅಗ್ನಿಗೆ ಮರವನ್ನು ಸುಡುವ ಸಾಮರ್ಥ್ಯವುಂಟು! ಆದರೂ ಅದು ಮರದೊಳಗೆ ಅಡಗಿರುವುದು. ಮರದಿಂದ ಮರವನ್ನು ತಿಕ್ಕಿದರೆ, ತಾನು ಯಾವ ಮರದಲ್ಲಿತ್ತೋ ಆ ಮರವನ್ನೇ ಸುಡುವುದು. ಆತ್ಮನಿಗೆ ಕರ್ಮವನ್ನು ಸುಡುವ ಸಾಮರ್ಥ್ಯವುಂಟು. ಆದರೂ ಕರ್ಮದಲ್ಲಿ ಅಡಗಿರುವನು. ಕರ್ಮವನ್ನು ತಿಳಿದು ತಾನೇ ತನ್ನನ್ನು ನೋಡಿದರೆ, ಎಂಟು ಕರ್ಮಗಳನ್ನೂ ಸುಟ್ಟು ಊದಿಬಿಡುವನು. ಶಕ್ತಿಯು ಶಕ್ತಿಯೊಳಗೇ ಇರುತ್ತದೆ. ಅದನ್ನು ವ್ಯಕ್ತಿಗಾಗಿ ತರಬೇಕು. ಶಕ್ತಿಯಿರುವ ಶಕ್ತಿಯನ್ನು ತಂದು ವ್ಯಕ್ತಿಯ ಒಳಗಿರಿಸುವುದಕ್ಕೆ ವಿರಕ್ತಿಯಿಂದ ಕೂಡಿರುವ ಧ್ಯಾನವೊಂದೇ ದಾರಿ. ಅಂಕುರವು ಬೀಜದಲ್ಲಿರುವುದು. ಬೀಜವು ಭೂಮಿಯನ್ನು ಸೋಂಕದಿದ್ದರೆ ಮರವಾಗುವುದೇ? ಕೆಸರಿರುವ ಭೂಮಿಯನ್ನು ಸೋಂಕಿದಾಗ ಬೀಜದಿಂದ ಅಂಕುರಿಸಿ, ಮರವಾಗುವುದು. ಜ್ಞಾನ ಸಾಮರ್ಥ್ಯವು ಶರೀರದಲ್ಲಿ ಅಡಗಿದಾಗ, ಅದು ಧ್ಯಾನವಿಲ್ಲದೆ ಹೊರಹೊಮ್ಮದು. ಅದನ್ನು ಆನಂದರಸದ ಧ್ಯಾನದಲ್ಲಿಟ್ಟರೆ, ಅದು ತನ್ನಷ್ಟಕ್ಕೆ ಮೂರು ಲೋಕಗಳಲ್ಲೂ ಹಬ್ಬುವುದು'' ಎಂದು ಆತ್ಮನ ಸಾಮರ್ಥ್ಯದ ವಿಚಾರವನ್ನು ಪುರುದೇವರು ತಿಳಿಸಿದರು.

''ಕೀಳು ಚಿನ್ನವನ್ನು ಕತ್ತರಿಸಿ ಪುಡಿಮಾಡಿ, ಕೋವೆಯಲ್ಲಿ ಹಾಕಿ, ಮದ್ದಿನ ಸಾರವನ್ನು ಎರೆದು, ಬೆಂಕಿಯಲ್ಲಿ ಕಾಯಿಸಿದರೆ, ಅದರ ಕಿಟ್ಟು ಕಾಳಿಕೆಗಳು ಕರಗಿಹೋಗಿ ಕೀಳು ಚಿನ್ನವು ಉತ್ತಮ ಚಿನ್ನವಾಗುವುದು. ದೇಹವೆಂಬ ಕೋವೆಯಲ್ಲಿ ಮದ್ದುಗಳೆಂಬ ಮೂರು ರತ್ನಗಳನ್ನು ಧ್ಯಾನದಿಂದ ಅನುಗೊಳಿಸಿದರೆ, ಕರ್ಮವು ಸುಟ್ಟು ಆತ್ಮರೆಲ್ಲರೂ ಜಿನರಾಗುತ್ತಾರೆ. ಅಪರಂಜಿಗಳಾಗುತ್ತಾರೆ. ಕೀಳು ಚಿನ್ನವನ್ನು ಮೇಲಾದ ಅಪರಂಜಿಯನ್ನಾಗಿ ಮಾಡುವಾಗ, ಅಲ್ಲಿ ಮದ್ದು ಬೇರೆಯಾಗಿದೆ; ಅಗ್ನಿ ಬೇರೆಯಾಗಿದೆ; ಕಾಳಿಕೆಕಿಟ್ಟಗಳು ಬೇರೆಯಾಗಿವೆ; ಅದನ್ನು ವಿರಕಗೊಳಿಸುವ ಸಿದ್ಧನೂ ಬೇರೆಯಾಗಿದ್ದಾನೆ. ಬಂಗಾರವನ್ನು ಪುಟಕ್ಕೆ ಇಡುವ ಹಾಗಲ್ಲ ಆತ್ಮವನ್ನು ಪುಟಕ್ಕಿಡುವುದು. ಆತ್ಮನೆಂಬ ಬಂಗಾರವು ವಿಚಿತ್ರವಾಗಿದೆ. ಯಾರು ನಿಶ್ಚಿತವಾಗಿ ಸಿದ್ಧನೋ ಅವನೇ ನಾನೆಂದು ತಿಳಿಯುವವರಿಗೆ ಅದನ್ನು ಉದಾಹರಿಸುವೆವು. 'ಇದನ್ನು ಕೇಳಿ, ಚೆನ್ನಾಗಿ ತಿಳಿದುಕೊಳ್ಳು' ಎಂದು ಪುರುದೇವರು ಹಂಸನನ್ನು ಪುಟಕ್ಕೆ ಇಡುವ ಕಲೆಯನ್ನು ವಿವರಿಸಿದರು.

''ಚಿನ್ನವನ್ನು ಪುಟಕ್ಕಿಡುವಲ್ಲಿ ಕೋವೆ, ಕಿಟ್ಟ, ಕಾಳಿಕೆಗಳು ಭಿನ್ನವಾಗಿವೆ. ಆದರೆ ಹಂಸವನ್ನು ಪುಟಕ್ಕಿಡುವಲ್ಲಿ ಚಿನ್ನ, ಔಷಧಿ, ಅಗ್ನಿಗಳೂ ಸನ್ನದ್ಧನಾಗಿರುವ ಸಿದ್ಧನೂ ತಾನೇ ತಾನಾಗಿರುವನು. ಇಲ್ಲಿ ಎಲ್ಲವೂ ಒಬ್ಬನೇ ಆಗಿರುವನು. ವಸ್ತುಸ್ವಭಾವವಿದು. ಇದನ್ನು ಎಣಿಸಬೇಡ. ಸಮಸ್ತ ತತ್ವಗಳಲ್ಲಿ ಆತ್ಮ ತತ್ವವು ಅಸಾಮಾನ್ಯ ಸಂಗವಾಗಿರುವುದು. ಅದು ಕಂಡಲ್ಲಿಯೇ ಇಲ್ಲದಿರುವುದು ಮತ್ತೊಂದು ವಿಕಲ್ಪವಾಗಿದೆ. ಆತ್ಮ ಪರೀಕ್ಷೆಯ ಕಾಲದಲ್ಲಿ ನಿಕ್ಷೇಪವೂ ನಯನವೂ ಒಳ್ಳೇ ಪ್ರಮಾಣವೂ ಉಂಟು. ಆದರೆ ಪಕ್ಷಗಳನ್ನೆಲ್ಲ ಬಿಟ್ಟು ಧ್ಯಾನದಲ್ಲಿ ಆತ್ಮನನ್ನು ನೋಡುವ ಕಾಲದಲ್ಲಿ ಅವೊಂದೂ ಇಲ್ಲ. ಮದದ ಆನೆಯು ತಪ್ಪಿಸಿಕೊಂಡಾಗ ಹೆಜ್ಜೆ ಹೆಜ್ಜೆ ತಪ್ಪದಂತೆ, ಅದರ ಹೆಜ್ಜೆಗಳನ್ನು ಅನುಸರಿಸಿ ಹುಡುಕುವರು. ಆ ಮದಗಜವು ಇದಿರಲ್ಲಿ ತೋರಿದಾಗ, ಹೆಜ್ಜೆಯನ್ನು ಅರಸುತ್ತಾರೆಯೇ? ಹಲವು

ಶಾಸ್ತ್ರಗಳ ಚಿಂತನೆಯೆಂಬುದು ಆತ್ಮನನ್ನು ಹುಡುಕುವ ರೀತಿ. ಇದನ್ನು ನೀನು ಚೆನ್ನಾಗಿ ತಿಳಿದುಕೋ. ಧ್ಯಾನದಲ್ಲಿ ಆತ್ಮನನ್ನು ನೋಡಿದ ಮೇಲೆ, ಹಲವು ವಿಕಲ್ಪಗಳೂ ವಿಭ್ರಾಂತಿಗಳೂ ಯಾಕೆ ಬೇಕು? ಆತ್ಮದ ಸಂಪರ್ಕ ಇರುವವರಿಗೆ ತರ್ಕಗಳು, ಪುರಾಣದ ಮಾತುಗಳೇ ಮೊದಲಾದುವು ಮೆಚ್ಚುವುದಿಲ್ಲ. ಸೂರ್ಯನ ಹತ್ತಿರವಿದ್ದರೆ ದೀಪವೇಕೆ? ಸಕ್ಕರೆಗಿಂತ ಹಿಂಡಿಯು ಅಧಿಕವಾಗಿದೆಯೇ? ಇದು ನಮ್ಮ ಮೆಚ್ಚು. ಸಿದ್ಧರಿಗೂ ಮೆಚ್ಚಾಗಿದೆ. ನಾವೆಂದು ತಿಳಿದುಕೊಂಡಮೇಲೆ, ಅದುಕೂಡ ನಾವೇ ಆಗಿರುತ್ತೇವೆ. ಆದ್ದರಿಂದ ನೀನು ಇದನ್ನು ಪ್ರಿತಿಸಿ, ಮೆಚ್ಚು. ಹಾಗೆ ಮೆಚ್ಚಿ ನೋಡು. ಅದೇ ನನ್ನ ಭಕ್ತಿ, ಅದೇ ನನ್ನ ಆಜ್ಞೆ. ಈ ಮೊದಲು ಆದ ಸಿದ್ಧರು. ಎಲ್ಲಿ ಮತ್ತು ಹೇಗೆ ಸಿದ್ಧರಾದರೋ, ಹಾಗೆಯೇ ನಾವು ಸಿದ್ಧರಾಗಿದ್ದೇವೆ. ಇನ್ನು ಮುಂದೆ ಸಿದ್ಧರಾಗುವವರಿಗೂ ಇದೇ ಪದ್ಧತಿಯಾಗಿದೆ. ಇದು ನಮ್ಮ ಆಜ್ಞೆ. ಭವ್ಯನೇ, ಇದು ದೃಢವಾಗಿದೆ ಎಂದು ಹಂಸಕಲೆಯನ್ನು ವಿವರಿಸಿದರು, ಪುರುದೇವರು.

''ಆದರೆ ಇನ್ನೊಂದು ಕಲೆಯನ್ನು ಕೇಳು. ಈ ಲೋಕವು ಕರ್ಮಗಳಾಗಿರುವ ಧೂಳಿನಿಂದ ತುಂಬಿರುವುದು. ಸರ್ವ ಜೀವಾಳಿಗಳೂ ನೀರಿನಲ್ಲಿ ಮೀನುಗಳು ಮುಳುಗಿರುವಂತೆ, ಈ ಧೂಳಿನಲ್ಲಿ ಮುಳುಗಿರುತ್ತವೆ. ಸ್ನೇಹ, ಕೋಪ ಮೋಹಗಳು ಜೀವಾಳಿಗೆ ಧೂಳಿನ ಗಂಟು, ಹಾಗೂ ಬಿರುಕು ಬೆರಕೆಗಳಾಗಿವೆ. ಸ್ನೇಹ ಕೋಪಗಳು ಗಂಟುಹಾಕಿಕೊಂಡ ಎಂಟು ಕರ್ಮಗಳಾಗುವಾಗ ಆ ಗಂಟನ್ನು ಬಿಡಿಸಿಕೊಳ್ಳುವುದು ಯಾರಿಗೆ ಸಾಧ್ಯ? ತನ್ನ ಕರ್ಮವನ್ನು ತನ್ನಲ್ಲಿ ತಾನು ನಿಂತು ಬಿಡಿಸಬೇಕಲ್ಲದೆ, ತನ್ನ ಕರ್ಮದ ಗಂಟನ್ನು ಬಿಡಿಸಲು ಪರರಿಂದ ಆಗದು. ಯಾರಾದರೂ ಬಿಡಿಸುವೆನೆಂದು ಹೊರಟರೆ, ಆ ಪ್ರೀತಿಯೇ ಕರ್ಮವಾಗುವುದು. ಅದು ತನ್ನನ್ನು ಹತ್ತಿದರೆ ಅದೇ ರಜಸ್ಸಾಗಿ ನೆಲೆಗೊಳ್ಳುವುದು. ತಾನು ಕರ್ಮವನ್ನು ಬಿಡಿಸುವುದೆಂದು ನೆನೆದರೆ, ಅವನಿಗೆ ಸ್ನೇಹದೊಡನೆ ಬಂಧನವು ಬಂದು ಅಂಟಿಕೊಳ್ಳುವುದರಿಂದ, ಬಿಡಿಸಲು ಹೋಗಿ ಮೂರು ಕರ್ಮಗಳ ಗಂಟಿನಲ್ಲಿ ಸಿಕ್ಕಿಕೊಳ್ಳುವನು. ಆದ್ದರಿಂದ ವಿವೇಕಿಗಳು ಮಿಡುಕದೇ ಇರುತ್ತಾರೆ. ಆದ್ದರಿಂದ ಹಲವನ್ನು ತಿಳಿದು, ತೊರೆದುಬಿಟ್ಟು ಆತ್ಮಯೋಗದಲ್ಲಿದ್ದರೆ ಸುಖವೆಂದು ತಿಳಿಯಬೇಕು. ಇದನ್ನು ಒಂದಿಷ್ಟಾದರೂ ಭಾವಕರ್ಮದಲ್ಲಿ ಸೇರಿಸದೆ, ಧ್ಯಾನಿಯಾಗು. ನಿನಗೂ ನಿನ್ನ ಒಡಹುಟ್ಟಿದವರಿಗೂ ನಿನ್ನ ತಂದೆಗೂ ಈ ಜನ್ಮದಲ್ಲಿ ಘನವಾದ ಮುಕ್ತಿಯೇ ದೊರೆಯುವುದು'' ಎಂದು ರವಿಕೀರ್ತಿಗೆ ಜಿನನಾಥರು ಅಮೃತವಾಕ್ಯಗಳನ್ನು ಹೇಳಿದರು.

ಆಗ ರವಿಕೀರ್ತಿಯ ಮುಖದಲ್ಲಿ ನಗೆಹುಟ್ಟಿತು. ದೇಹದಲ್ಲಿ ರೋಮಾಂಚನವಾಯಿತು. 'ನಮೋ ನಮೋ ನಮಃ' ಎಂದು ಕೈಮುಗಿದನು. ''ಬುದ್ಧಿಯನ್ನು ಒತ್ತಿಬರುವ ಸಂಶಯವು ಹೋಯಿತು. ಭಕ್ತಿಯ ರೀತಿಯನ್ನು ತಿಳಿದೆನು; ಗೆದ್ದೆನು'' ಎಂದು ಮಾತು ಮುಂದವರಿಸಿದನು :

''ಜಿನನು ಚಿತ್ ರೂಪನೆನ್ನುವುದು ಉತ್ತಮ ಭಕ್ತಿ; ಆ ಚಿತ್ತರೂಪನನ್ನು ನೋಡದೆಯೇ ನಮ್ಮ ಕ್ಷುದ್ರ ಶರೀರದ ಹೊದಿಕೆಯು ಕಳಚಿಹೋಯಿತು. ಶಿಲೆಯಿಂದ ಮಾಡಿದ ಬಿಂಬವನ್ನು ಒಮ್ಮೆ ಜಿನನೆಂದು ಪೂಜಿಸುವುದರಿಂದ ಜಿನ ಭಕ್ತಿಯಾದೀತು.

ಆದರೆ ಮಲದಿಂದ ಕೂಡಿದ ದೇಹದ ಮೇಲೆ ವಸ್ತ್ರವನ್ನು ಹೊದಿಸಿ, ಜಿನನೆಂದು ಮಾಡುವ ಭಕ್ತಿಯೇ ಮೂರ್ಖ ಭಕ್ತಿಯು. ಆತ್ಮನ ಮುದ್ರೆಯನ್ನು ಮೆಚ್ಚಿದರೆ, ಆಗ ದೇಹ ಮುದ್ರೆಯೇ ಅದನ್ನು ಸಾಧಿಸಲು ಸಹಕಾರಿಯಾಗುವುದು. ಆದರೆ ಆತ್ಮ ಮುದ್ರೆಯನ್ನೇ ಬಿಟ್ಟು, ತನ್ನನ್ನೇ ಹಿಡಿದು ಸಾಧಿಸಿದರೆ, ಆಗ ಸಂಸಾರವಲ್ಲದೆ ಬೇರೇನೂ ಇಲ್ಲ. ದೇವ, ನಮಗೆ ಯುಕ್ತಿ ಇಲ್ಲದ ಭಕ್ತಿಯು ಬೇಡ. ಉತ್ತಮ ಯುಕ್ತಿಕೂಡಿದ ಭಕ್ತಿಯು ಸಾಕು. ಈ ರೀತಿಯಲ್ಲಿ ಮುಕ್ತಿ ಮಾರ್ಗವು ನಮಗೆ ಸ್ಪಷ್ಟವಾಗಿ ತೋರಿತು. ಜಿನನಾಥ, ನಿಮ್ಮ ಭಕ್ತಿಗೆ ಎಣೆಯಿಲ್ಲ. ದೇವರು, ಅಂದೊಮ್ಮೆ ಚಕ್ರವರ್ತಿಗೆ ಕರುಣಿಸಿದ ಈ ಕ್ರಮವು ನನ್ನಲ್ಲೂ ಹೊಳೆಯಿತು. ಈಗ ಅದು ನನ್ನನ್ನು ಸರಿಯಾಗಿ ಆಕ್ರಮಿಸಿಕೊಂಡಿದೆ. ಈಗ ನಮ್ಮ ಬುದ್ಧಿಯು ಎರಡರಷ್ಟಾಗಿದೆ. ನಾವೀಗ ಶಕ್ತಿವಂತರಾಗಿದ್ದೇವೆ. ದೇವ, ಕರ್ಮ ಕರ್ದಮದಲ್ಲಿ ಮುಳುಗಿದ ನಮ್ಮನ್ನು ಎತ್ತಿ ಧರ್ಮಜಲದಿಂದ ಸ್ನಾನ ಮಾಡಿಸಲು ನಮ್ಮ ಮೇಲೆ ಅದನ್ನು ಸುರಿದು, ನಮ್ಮನ್ನು ನಿರ್ಮಲವಾಡುವ ಕರುಣಾಳು ಈ ಲೋಕದಲ್ಲಿ ನೀವಲ್ಲದೆ ಮತ್ತಾರೂ ಇಲ್ಲ. ವಿಷಯದ ಸೊಕ್ಕುಗಳೆಂಬ ವಿಷವೇರಿದವರಿಗೆ ಸರಿಯಾದ ಮಂತ್ರಗಳ ಬೋಧನೆಯಿಂದ, ಆ ವಿಷವನ್ನು ಇಳಿಸಿ, ಶಾಂತಿಯನ್ನುಂಟು ಮಾಡುವವರು ನೀವೇ. ಯಾಕೆಂದರೆ ನೀವು ವಿಷವಿಲ್ಲದೆ ಶ್ರೇಷ್ಠರಾಗಿರುವಿರಿ ದೇವ! ಎಂಟು ಕರ್ಮಗಳೆಂಬ ಸರ್ಪಗಳ ಗಂಟಲಲ್ಲಿರುವ ಜೀವರ, ಕಂಟಕಗಳನ್ನು ಪರಿಹರಿಸಿ, ಮುಕ್ತಿಯನ್ನು ನೀಡುವವರೇ ನೀವಲ್ಲದೆ ಬೇರೆ ಯಾರಿರುವರು ಸ್ವಾಮಿ? ಈ ಭವವೆಂಬ ಸಾಗರದ ಸುಳಿಯಲ್ಲಿ ಸಿಕ್ಕಿ, ಯಮನೆಂಬ ಮೊಸಳೆಯ ಬಾಯಿಗೆ ತುತ್ತಾಗಿರುವ ಆತ್ಮರನ್ನು ಹಿಡಿದೆತ್ತಿ ಅವರಿಗೆ ಮೋಕ್ಷವನ್ನು ತೋರುವ ದಕ್ಷರು ನೀವಲ್ಲದೆ ಬೇರೆ ಇಲ್ಲ, ಸ್ವಾಮಿ. ನಿಮ್ಮ ಪಾದವನ್ನು ಕಂಡು ಬದುಕಿದೆವು. ಅದು ಆತ್ಮಸಿದ್ಧಿಯನ್ನು ಸುಲಭವಾಗಿ ಮಾಡಿತು. ಇದಕ್ಕಿಂತ ಹೆಚ್ಚಿನ ಲಾಭವು ನಮಗೆ ಇಲ್ಲ. ನಮ್ಮ ರೀತಿಯನ್ನು ನಾವಿನ್ನು ಯೋಚಿಸುವೆವು.''

'ಶತ್ರುಂಜಯ, ರತಿವೀರ್ಯ, ನೀವು, ನಮ್ಮ ಒಡೆಯನ ದಿವ್ಯವಾಕ್ಯವನ್ನು ಕೇಳಿದಿರಲ್ಲವೇ?' ಎಂದು ಅನಂತರ ಅರ್ಕಕೀರ್ತಿಯು ತಮ್ಮಂದಿರೊಡನೆ ನುಡಿದನು.

'ಅಣ್ಣಾ ನೀನು ಕೇಳುವುದರಲ್ಲಿ ಕೃತಾರ್ಥನಾದವನು; ಆತ್ಮಸಿದ್ಧಿಯ ವಿಚಾರವನ್ನು ಹೇಳುವ ಸಮರ್ಥನು ಸ್ವಾಮಿ. ನಾವಾದರೆ, ಹೇಳುವುದನ್ನೇನು ಬಲ್ಲೆವು. ನೀನು ಹೇಳಿದಹಾಗೆ ಕೇಳುವುದೊಂದೇ ನಮಗೆ ಕಾರ್ಯ. ಪರಮೇಶನ ಈ ದಿವ್ಯವಾದ ನಿರೂಪವು ಕರ್ಮವೆನ್ನುವ ಭೂಮಿಯಲ್ಲಿ ಹೂತುಹೋಗಿರುವ ಪರಮಾತ್ಮ ನಿಧಿಯನ್ನು ತೋರಿಸುವ ದಿವ್ಯಾಂಜನವೆಂದು ನಮಗೆಲ್ಲ ಅರಿವಾಗುತ್ತಿದೆ. ಆ ಪರಮೇಶನ ವಾಕ್ಯವೆಂಬುದು ದೇಹಕೂಪದ ಪಾಪಾಂಧಕಾರದಲ್ಲಿ ಬಿದ್ದು, ತನ್ನ ರೂಪವನ್ನು ಕಳೆದುಕೊಂಡಿರುವ ಆತ್ಮನ ನಿಜಸ್ವರೂಪವನ್ನು ತೋರಿಸುವ ರತ್ನದೀಪದಂತೆ ನಮಗೆ ತೋರುತ್ತದೆ. ದೇವರ ವಾಕ್ಯವೆಂಬುದು ಈ ಭವವೆಂಬ ಬಲು ಬಿಸಿಲಿನಲ್ಲಿ ದಣಿದು ಬೆವರುತ್ತಿರುವವರಿಗೆ, ಹಾಗೂ ಬಳಲುತ್ತಿರುವವರಿಗೆ, ಮುಂದುಗಡೆಯಲ್ಲೇ ಕಂಡು ಬಂದ ಪನ್ನೀರಿನ ಹೊಳೆಯಂತೆ, ನಮ್ಮ ಮನಸ್ಸಿನಲ್ಲಿ ಹೊಳೆಯುತ್ತಿದೆ. ನಮ್ಮ ದೇಹದಲ್ಲೇ

ನಮಗೀಗ ಪರಬ್ರಹ್ಮವು ತೋರಿದೆ. ಈ ಜಿನವಾಕ್ಯವು ಕೆಟ್ಟುಹೋಗಿರುವ ವಿಶಾಲವಾದ ಭವಸಾಗರವನ್ನು ಕುಡಿಕೆಯಷ್ಟು ಸಣ್ಣದು ಮಾಡಿತು. ಇದನ್ನು ಕಂಡ ನಾವಿನ್ನು ನಮ್ಮ ಕೊರತೆಯನ್ನು ತಡೆದಿರಲು ಸಾಧ್ಯವೇ? ಹಿರಿಯಣ್ಣ ನಡೆದ ರೀತಿಯೇ ಮನೆಗೆಲ್ಲ – ಎಂದು ಪರಿಭಾಷೆಯುಂಟು. ಆದ್ದರಿಂದ ಹಿರಿಯನಾದ ನೀನು 'ಏನನ್ನು ಕಂಡಿರುವೆಯೋ ಅದೇ ನಾವು ಕಂಡ ಕಾಣ್ಕೆಯೂ ಆಗಿದೆ. ನೀನೇ ನಿರ್ಧಾರಮಾಡಿ ನಮ್ಮನ್ನು ಉದ್ಧರಿಸು' ಎಂದು ಅಣ್ಣನೊಡನೆ ತಮ್ಮಂದಿರು ಭಕ್ತಿಪ್ರೀತಿಗಳಿಂದ ನುಡಿದರು.

'ಲೇಸನ್ನೇ ಆಡಿದಿರಿ. ಇಷ್ಟು ಸಾಕು. ನಾವಿನ್ನು ಕೈಲಾಸನಾಥನ ಹಸ್ತದಿಂದ ಶ್ರೇಷ್ಠವಾದ ದೀಕ್ಷೆಯನ್ನು ಸ್ವೀಕರಿಸುವ' ಎಂದು ಅರ್ಕಕೀರ್ತಿಯು ಸೂಚಿಸಿದಾಗ, ಎಲ್ಲರೂ 'ಲೇಸು, ಲೇಸು' ಎಂದು ಒಪ್ಪಿಕೊಂಡರು. ದೇವರನ್ನು ಪೂಜಿಸಿ, ಮುನಿಗಣದ ಅನುಮತಿಯಿಂದ ತಾವು ದೀಕ್ಷೆವಹಿಸುವುದೆಂದು ತಮ್ಮೊಳಗೆ ಯೋಚಿಸಿ, ಒಪ್ಪಿಕೊಂಡರು. ಅನಂತರ ಆದಿದೇವನ ಅರ್ಚನೆಯನ್ನು ಮಾಡಿದರು.

# ೧೭

## ದೀಕ್ಷೆ

ಭರತಚಕ್ರಿಯ ಪುತ್ರರ ವಿನಯವೇದರೆ ಸಾಮಾನ್ಯವಲ್ಲ! ಅವರು ಜಿನನ ಬೋಧನೆಯನ್ನು ಕೇಳಿದರು. ಜಿನನನ್ನು ಪೂಜಿಸದೆ ಅವರ ಜಿನದೀಕ್ಷೆಯನ್ನು ಬೇಡಲಿಲ್ಲ. ಪೂಜೆಯಲ್ಲಿ ಜಿನನಿಗೆ ಆಶೆಯಿಲ್ಲವೆಂಬುದನ್ನು ಆ ಜಾಣರು ಬಲ್ಲರು. ಆದರೂ ಜಿನನನ್ನು ಪೂಜಿಸಿದರು. ಮಂಗಳಾರ್ಥಕ್ಕಾಗಿ ವ್ಯವಹಾರದ ಕ್ರಮವು ಒಮ್ಮೆಗಾದರೂ ಬೇಕು. ಹಾಗೆಂದೇ ಅವರು ನಿಮಿಷದಲ್ಲಿ ಸ್ನಾನಮಾಡಿ, ಉತ್ತಮವಾದ ವಸ್ತುಗಳನ್ನು ಸಂಗ್ರಹಿಸಿ, ಸಿಂಗರಿಸಿದರು. ಆಮೇಲೆ ಅಮರೇಂದ್ರನ ಅನುಮತಿಯಿಂದ ಪೂಜೆಗೆ ತೊಡಗಿದರು. ಕೆಲವರು ಜಿನನ ಬಳಿ ಸಾರಿ ಪೂಜಿಸಿದರೆ, ಕೆಲವರು ಪರಿಚಾರಕರಾಗಿ ಕೆಲಸವೆಗಿದರು. ಕೆಲವರು ಸಾರವತ್ತಾದ ವಸ್ತುಗಳನ್ನು ನೀಡುತ್ತಿದ್ದರು. ಈ ರೀತಿಯಲ್ಲಿ ಆದಿಜಿನನನ್ನು ಆರಾಧಿಸಿದರು. ಚಿಂತೆಗಳನ್ನೆಲ್ಲ ಬಿಟ್ಟು, ತ್ರಿಕರಣ ಶುದ್ಧಿಯನ್ನು ಪಡೆದು ಮನೋವಾಕ್ಕಾಯಗಳಿಂದ ಎಲ್ಲವನ್ನೂ ಹೊಂದಿಸಿಕೊಂಡು, ಇಷ್ಟದಾಯಕನನ್ನು ತಮ್ಮ ಇಚ್ಛೆಯಂತೆ ಪೂಜಿಸಿದರು.

ಓಂಕಾರಪೂರ್ವಕವಾಗಿ ಮಂತ್ರವನ್ನು ಹೇಳಿದರು. ಹ್ರೀಂಕಾರಹಂಕಾರ ಮತ್ತು ಹೂಂಕಾರಗಳ ಸೂಚನೆಯಿಂದ ತುಂಬಿಗಳ ಗುಂಪಿನ ಝೇಂಕಾರವೆನ್ನುವಂತೆ ಮಾಡಿದರು. ಅಪರಂಜಿಯ ಗಿಂಡಿಗಳನ್ನು ತಮ್ಮ ಕೈಗಳಿಂದ ಎತ್ತಿ ಮಂತ್ರಪೂರ್ವಕವಾಗಿ ಪರಿಮಳದ ಜಲದಿಂದ ಅರುಹನಿಗೆ ಅಭಿಷೇಕ ಮಾಡಿದರು. ಆಗ ದೇವತೆಗಳು ಜಯಜಯವೆಂದು ಉದ್ಘೋಷ ಮಾಡಿದರು. ದೇವದುಂದುಭಿ, ಶಂಖ ಮುಂತಾದ ಹನ್ನೆರಡೂವರೆ ಕೋಟಿ ವಾದ್ಯಗಳು ಸಮುದ್ರದಂತೆ ಮೊಳಗುತ್ತಿರಲು, ಸುಗಂಧದ ಸಿಂಹಗಳ ಮೇಲಿನ ಕಮಲದ ಸುಗಂಧದಿಂದ ಗಂಧವೇ ಆಗಿರುವ ಜಿನದೇವನಿಗೆ ಗಂಧರ್ವರೆಲ್ಲರೂ ಜಯಜಯವೆನ್ನುತ್ತಿರುವಾಗ ಅವರು ಗಂಧವನ್ನು ಅರ್ಚಿಸಿದರು. ಅವರು, ಅಕ್ಷರ ಮಹಿಮನಾದ ವಿಮಲಾಕ್ಷನಿಗೆ ಭಕ್ತಿಯಿಂದ, ಅಕ್ಷತೆಗಳನ್ನು ತೆಗೆದು ಅರ್ಪಿಸಿದರು. ಅಭಿನವ ಪುಷ್ಪ ಬಾಣದಂತಿರುವ ಅವರು ಪುಷ್ಪಗಳಿಂದ ಸುಪ್ರಭನಾದ ಜಿನನನ್ನು ಪೂಜಿಸಿದರು. ಆದರಿಂದ ಅವರ ದೇಹಗಳು ಪುಳಕಗೊಂಡವು. ಪರಸಂಗವಿಲ್ಲದೆ ತನ್ನಿಂದ ತಾನಾಗಿಯೇ ಸುಖವನ್ನು ಹೊರಸೂಸುತ್ತಿರುವ ಸುಖಭರಿತನಾದ ದೇವನಿಗೆ ಅವರು ಅನುರಾಗದಿಂದ ಹೊಸ ಹೊನ್ನಹರಿವಾಣದಲ್ಲಿ ಪರಮಾನ್ನವನ್ನು ಸಮರ್ಪಿಸಿದರು. ಸೂರ್ಯನಿಗೆ ಹಣತೆಯಿಂದಾರತಿ ಬೆಳಗುವಂತೆ ಅವರು ಮೂರು ಲೋಕಗಳ ಸೂರ್ಯನಾಗಿರುವ ದೇವನಿಗೆ, ಸಜ್ಜನರೆಲ್ಲರೂ ಜಯಜಯವೆನ್ನುತ್ತಿರುವಾಗ ಕರ್ಪೂರದಾರತಿಯನ್ನೆತ್ತಿ ಬೆಳಗಿದರು. ಅವರು ಸ್ವಾಮಿಗೆ ಧೂಪವನ್ನು ಹಾಕಿದರು.

ಧೂಪದ ಹೊಗೆಯು ತಪ್ಪಿಲ್ಲದ ಕಾಂತಿಯಿಂದ ಆಕಾಶಕ್ಕೇರಿತು. ಅದೊಂದು ಕಾಮನ ಬಿಲ್ಲಿನಂತೆ ಕಾಣಿಸಿತು!

''ವಿಫಲವಾಗುವ ಈ ನಮ್ಮ ಜನ್ಮವು ನಿನ್ನನ್ನು ಕಂಡಿರುವುದರಿಂದ ಸಫಲವಾಯಿತು; ಜಿನನಾಥ, ನಮ್ಮ ಕರ್ಮವೆಲ್ಲವೂ ಅಫಲವಾಗಿ, ನಮಗೆ ಮುಕ್ತಿ ಫಲಿಸಲಿ'' — ಎಂದು ಅವರು ಸುಫಲವಸ್ತುಗಳನ್ನು ಅರ್ಪಿಸಿದರು. ಶ್ರೇಷ್ಠವಾದ ರತ್ನದೀಪಗಳಿಂದಲೂ ಕನಕರತ್ನಗಳಿಂದ ರಚಿತವಾದ ಪುಷ್ಪಗಳಿಂದಲೂ ಸುರಗಿರಿಯಂತೆ ಸಿಂಗರಿಸಿದ ಅರ್ಘ್ಯಗಳನ್ನು ಆದಿಜಿನನಿಗೆ ಅವರು ಎತ್ತಿದರು. 'ಸಂತಾಪ ಪಡುತ್ತಿರುವ ಸರ್ವಜೀವಿಗಳ ದುಃಖಗಳು ಶಾಂತವಾಗಲಿ' ಎಂದು ಶಾಂತಿಧಾರೆಯಿಂದ ಅರ್ಚಿಸಿದರು. ಅದು ಮುಕ್ತಿಕಾಂತೆಯ ಕೈಧಾರೆಯಂತೆ ಕಾಣುತ್ತಿತ್ತು. ರಂಜಿಸುತ್ತಿರುವ ಸುವರ್ಣಪಾದಗಳ ಮೇಲೆ ಬೆಳ್ಳಿಯ ಹೂಗಳನ್ನೂ ಅಪರಂಜಿಯ ಹೂಗಳನ್ನೂ ಬೊಗಸೆ ತುಂಬಿ ಜಿನನಿಗೆ ಪುಷ್ಪಾಂಜಲಿಗೈದರು. ಮುತ್ತು, ಹವಳ, ಮಾಣಿಕ್ಯ, ಪಚ್ಚೆ, ನೀಲ ಗೋಮೇಧಕ, ವಜ್ರ, ವೈಢೂರ್ಯ, ಪುಷ್ಯರಾಗಗಳಿಂದ ನವರತ್ನಗಳನ್ನು ಆರಿಸಿ, ಜಿನನಾಥನ ಕೆಂಪಾದ ಪಾದಗಳ ಮೇಲೆ ಸುರಿದರು.

ವಾದ್ಯದ ಘೋಷವು ನಿಂತಿತು. ಅವರು ಆದಿಜಿನನ ಮುಂದೆ ನಿಂತು ಸ್ತುತಿ ಮಾಡಲು ಉದ್ಯುಕ್ತರಾದರು. 'ಆದ್ಯ ವಯಂ ಸುಖಿನೋಭೂಮದೇವ' ಎಂದರು. ''ಜಯ ಜಯ ಜಾತಿ ಜಿರಾಂತಕ, ಮೃತ್ಯು ಸಂಚಯ ದೂರ, ದುಃಖ ಸಂಹಾರ, ಜಯ ಜಯ ನಿಶ್ಚಿಂತ ಶಾಂತ ನಿರ್ಲೇಪ, ನಿನ್ನ ಪಾದಗಳೇ ನಮಗೆ ಶರಣು. ಪಾಪಾಂಧಕಾರ ವಿದ್ರಾವಣ, ಮದನ ದರ್ಪಾಪಹರಣ, ಭವಮಥನ, ಕೋಪಾಗ್ನಿ ಶೀತಲ ಜಲಧರ, ನಮ್ಮ ಸಂತಾಪಗಳನ್ನು ಕೆಡಿಸು ಆದಿನಾಥ. ಕರ್ಮ ಮಹಾರಣ್ಯ ದಾವಾಗ್ನಿ, ದಶವಿಧ ಧರ್ಮೋದ್ಧಾರ, ಧರ್ಮವನ್ನೂ, ಧರ್ಮಿಯನ್ನೂ ಒಂದಾಗಿ ತೋರಿಸಿ, ನಮ್ಮನ್ನು ನಿರ್ಮಲರನ್ನಾಗಿ ಮಾಡು ಸ್ವಾಮಿ. ಈ ಜಗವೇ ವಿಶಾಲವಾಗಿದೆ. ಈ ಜಗದಿಂದ ನೋಡಿದರೆ ಆಕಾಶವೇ ವಿಶಾಲವಾಗಿದೆ. ಅದನ್ನು ಮಿಗಿಸುವಷ್ಟು ವಿಶಾಲವಾಗಿದೆ ಸುಜ್ಞಾನವು. ಆ ವಿಶಾಲವಾದ ಸುಜ್ಞಾನವೇ ನೀನು. ನಿನ್ನನ್ನು ನಾವು ಹೊಗಳುವುದಕ್ಕೆ ಬಲ್ಲೆವೆ ಸ್ವಾಮಿ? ದೇವಲೋಕದ ಕಲ್ಪವೃಕ್ಷವು ಕೊಡುವ ದಿವ್ಯಾನ್ನಕ್ಕೆ ಲೇಸಾದ, ಎಣೆಯಿಲ್ಲದ ಸುಖವು ನಿನಗೆ ಇರುವಾಗ, ಸಾಮಾನ್ಯ ಮರಗಳ ಫಲವನ್ನು ಅರ್ಪಿಸುವುದು ಬಾಲಕರಾದ ನಮ್ಮ ಭಕ್ತಿಯಾಗಿದೆ. ಧ್ಯಾನದಲ್ಲಿದ್ದು ಆತ್ಮನಲ್ಲಿ ನಿಮ್ಮನ್ನು ತಂದು ಸಂಧಾನಮಾಡಿ, ಭಾವಶುದ್ಧಿಯಿಂದ ಪೂಜೆಯನ್ನು ಮಾಡಲು ಅಸಾಧ್ಯವಾಗಿ, ನಿಮ್ಮನ್ನು ಈ ಹೊಸ ಹೊಸ ಫಲಗಳಿಂದ ಪೂಜಿಸುತ್ತಿದ್ದೇವೆ'' ಎಂದು ಭರತಚಕ್ರಿಯ ಮಕ್ಕಳು ಬಿನ್ನಹ ಮಾಡಿದರು. ತಿರುಗಿ ತಿರುಗಿ ಸಾಷ್ಟಾಂಗವೆರಗಿ ನಿಂತುಕೊಂಡರು. ಕೈಗಳನ್ನು ಮುಗಿದು ಕೀರ್ತನೆ ಮಾಡುತ್ತ ಸಂತೋಷದಲ್ಲಿ ಓಕುಳಿಯಾಡುತ್ತ ಭಕ್ತಿಯಿಂದ ಪ್ರದಕ್ಷಿಣೆ ಗೈದರು. ಹೇಮಗಿರಿಯ ಸುತ್ತು ಬರುತ್ತಿದ್ದ ಅವರು ಸೂರ್ಯಚಂದ್ರರ ಸೈನ್ಯದಂತೆ ಕಂಗೊಳಿಸಿದರು. ಅದನ್ನು ನೋಡಿದವರೆಲ್ಲರೂ ಅವರ ಭಕ್ತಿಯನ್ನು ಲೇಸೆಂದು ಹೊಗಳಿದರು.

ಜಿನನ ದೇಹಕಾಂತಿಯು ಉಕ್ಕಿ ಹರಿದು ಸಭೆಯಲ್ಲೇ ತುಂಬಿತು. ಒಂದು ಕಾಂತಿಯ ತೀರ್ಥವನ್ನು ಹೊಕ್ಕು ಹರಿದು ಹೋಗುವಂತೆ ಅವರು ಅದರಲ್ಲಿ ಲೀಲೆಯಿಂದ ನಡೆದರು. ತಂಪಾದ ಬಿಸಿಲಿನ ನದಿಯಲ್ಲಿ ಹೋಗುವಂತೆ ಪರಿಮಳದಿಂದ ಕೂಡಿಯೂ ತಂಪಾಗಿಯೂ ಇರುವ ಸೊಡರುಗಳ ಗುಂಪಿನೊಳಗೆ ನಡೆಯುವಂತೆ ನಡೆದರು. ಅವರ, ಆ ಸಂಪತ್ತನ್ನು ವರ್ಣಿಸುವುದೇ ಕಷ್ಟ. ರತ್ನಸುವರ್ಣಗಳಿಂದ ನಿರ್ಮಿತವಾದ ಗಂಧಕುಟಿಯೊಳಗೆ ಜಿನರೆಂಬ ರತ್ನಗಳಿರುವಾಗ, ರತ್ನಗರ್ಭರಾದ ಇವರು, ಆ ಸುರತ್ನರಾದ ಜಿನದೇವರನ್ನು ಸುರತ್ನದ ದೀಪಗಳೆಂದು ಹೇಳುತ್ತ ನಡೆದರು. ಜಿನವಿಭುವಿನ ಸಿಂಹ ಪೀಠದ ಸುತ್ತು ಮುತ್ತಲೂ ಇರುವ ಜನರನ್ನು ವಿನಯಸಂಪನ್ನರಾದ ಭರತಸುತರು, ರವಿಕೀರ್ತಿರಾಜನನ್ನು ಮುಂದೆ ಮಾಡಿಕೊಂಡು ನಡೆದರು.

ಅರ್ಕಕೀರ್ತಿರಾಜನು ಅಲ್ಲಿರುವ ಜಿನರ ಸಮೂಹದಲ್ಲಿ ತನಗೆ ಪರಿಚಯವಿರುವ ಜಿನರನ್ನು ಕಂಡು, ಅವರ ಪೂರ್ವ ವಿಚಾರಗಳನ್ನು ತನ್ನ ತಮ್ಮಂದಿರು ತಿಳಿದುಕೊಳ್ಳಲೆಂದು ಅವರ ಹೆಸರು ಹೇಳಿ, ನಮಸ್ಕಾರಮಾಡಿ ತಿಳಿಸಿದನು. ಆ ಮಹಿಮರ ಗುಂಪಿನಲ್ಲಿ ಮೊದಲು ಅಕಂಪಜಿನಗೆ ನಮಿಸಿದನು. ವಾರಣಾಸಿಪುರದ ಅರಸನಾದ ಅಕಂಪದೊರೆಯು ರಾಜ್ಯ ತೊರೆದು ತಪಸ್ಸು ಮಾಡಿ ಜಿನನಾದುದನ್ನು ತಿಳಿಸಿದನು. ಅವರೆಲ್ಲರೂ ಭಕ್ತಿಯಿಂದ ನಮಸ್ಕರಿಸಿದರು. ಯುವರಾಜನೆನಿಸಿದ್ದ ತನಗೆ ಕುಮಾರಿಯನ್ನಿತ್ತು ಮದುವೆ ಮಾಡಿ, ರಾಜ್ಯವನ್ನು ಕುಮಾರನಿಗಿತ್ತು ತಪಸ್ಸಿನಿಂದ ಈ ರೀತಿಯಾದುದನ್ನೂ ತಿಳಿಸಿ, ಅದು ತಮಗೊಂದು ದೃಷ್ಟಾಂತವೆಂದನು.

ಮುಂದೆ ಹೋಗುವಾಗ, ಸೂರ್ಯಚಂದ್ರರಂತಿರುವ ಇಬ್ಬರು ಜಿನರನ್ನು ಕಂಡು ನಮಸ್ಕರಿಸುವಾಗ, 'ಸೋಮಪ್ರಭಜಿನ ಜಯಜಯ, ಶ್ರೇಯಾಂಸ ಸ್ವಾಮಿ ನಮೋ ನಮೋ' ಎಂದನು. ಆ ಮಾತಿನಿಂದ ಅವನ ತಮ್ಮಂದಿರು ಅವರಿಬ್ಬರ ಜನ್ಮಭೂಮಿ ಮುಂತಾದುದನ್ನೆಲ್ಲ ತಿಳಿದುಕೊಂಡರು. ಸೋಮಪ್ರಭರಾಜನೂ ಶ್ರೇಯಾಂಸರಾಜನೂ ಒಡಹುಟ್ಟಿದವರು. ತಮ್ಮ ಭೂಮಿ ಸಂಪತ್ತುಗಳನ್ನು ಮೇಘೇಶ್ವರನಿಗೆ ಕೊಟ್ಟು ಆ ಮಹಿಮೆಯನ್ನು ಪಡೆದರೆಂದು ಹೇಳಿದನು. ಜಿನದೀಕ್ಷೆಯು ಲೋಕಪಾವನವಾದುದೆಂದು ನೆನೆದು ಅನುರಾಗದಿಂದ ಅವರಿಬ್ಬರೂ ನಮಸ್ಕರಿಸಿ ಅದೇ ರೀತಿಯಲ್ಲಿ ಮತ್ತೆ ಮಹಾಕಾಂತಿಯಿಂದಿರುವ ಚಿನ್ಮಯರಾದ ಕಚ್ಛಜಿನರನ್ನೂ ಮಹಾಕಚ್ಛಜಿನರನ್ನೂ ಕಂಡು ಅವರಿಬ್ಬರಿಗೂ ನಮಿಸಿದನು. ಅವರು ಭರತ ಚಕ್ರೇಶ್ವರನ ಸೋದರಮಾವಂದಿರೆಂದೂ ಅವಧೂತ ಕಲ್ಮಷರಾಗಿ ಧ್ರುವಪದವನ್ನು ಪಡೆದರೆಂದೂ ತಿಳಿಸಿ, ತಮ್ಮಂದಿರೂ ಅವರ ಅಡಿಗೆರಗುವಂತೆ ಮಾಡಿದನು. ಆಮೇಲೆ ಅವರು ಕಂಡ ಜಿನನು ಅಲ್ಲಿದ್ದ ಎಲ್ಲರಿಗಿಂತಲೂ ಹೆಚ್ಚಾದ ಮೂರ್ತಿ. ಅಂದಿನ ಕಾಲದ ಕಾಮದೇವನಾದ ಅವನು ತಪಸ್ಸಿನಿಂದ ಜಿನನಾಗಿದ್ದನು. ಬೆಟ್ಟ ಗಿರಿಯು ತಾನೇ ಜಿನರೂಪ ತಾಳಿ ನಿಂತಿರುವಂತಿರುವ ಆ ಭುಜಬಲಿ ಜಿನನನ್ನು ಅವರೆಲ್ಲರೂ ಆಶ್ಚರ್ಯದಿಂದ ವಂದಿಸಿದರು. ಅಲ್ಲಿ ಭರತೇಶನ ಒಡಹುಟ್ಟಿದ ನೂರು ಮಂದಿ ಅರುಹರಾಗಿದ್ದುದನ್ನು ಅವರು ಕಂಡರು. ಅವರು ಒಡಹುಟ್ಟಿದವನಿಗೆ ಕೈಮುಗಿಯಲಾರೆವೆಂದು ಶ್ರೇಷ್ಠವಾದ ಜಿನದೀಕ್ಷೆಯನ್ನು ಪಡೆದಿದ್ದರು. ಜನಕರೆಲ್ಲರೂ

ಶುಭದೀಕ್ಷೆಯನ್ನು ಪಡೆದು, ಶುಭ ಧ್ಯಾನದ ಅನುಭಾವದಿಂದ ಕರ್ಮವನ್ನು ಕಳೆದುಕೊಂಡು ಜಿನರಾಗಿದ್ದರು. ತಾವು ಅಂತಾಗಬೇಕೆಂದು ನೆನೆದುಕೊಂಡು ಅವರೆಲ್ಲರೂ ನಮಸ್ಕರಿಸಿದರು.

ಒಳಗಿರುವ ಲಕ್ಷ್ಮೀ ಮಂಟಪವನ್ನು ಪ್ರವೇಶಿಸಿದ ಅವರು ಸಂತೋಷದಿಂದ ಮೂರು ಸರ್ತಿ ಪ್ರದಕ್ಷಿಣೆಗೈದು ಹೊರಗಿನ ಲಕ್ಷ್ಮೀ ಮಂಟಪಕ್ಕೆ ನಡೆದರು. ಅಲ್ಲಿ ಶೋಭಿಸುತ್ತಿರುವ ಹನ್ನೆರಡು ರೀತಿಯ ಸಭೆಗಳಲ್ಲಿ ಮೊದಲನೆಯ ಸಭೆಯಾದ ಸಲ್ಲಲಿತ ಆಚಾರ್ಯರ ಸಭೆಯನ್ನು ಆ ಕೋವಿದರು ಮನಸ್ಸಿನ ಉಲ್ಲಾಸದಿಂದ ಹೊಕ್ಕರು. ಅಲ್ಲಿ ನೆರೆದಿರುವ ಮುನಿಗಳಲ್ಲಿ ಎಂಭತ್ತನಾಲ್ಕು ಮಂದಿ ಮುಖ್ಯರು. ಆ ಮುಖ್ಯರಲ್ಲಿ ಹಿರಿಯರಾದವರು ವೃಷಭ ಸೇನಾಚಾರ್ಯರು. ಅವರಿಗೆ ಹಿರಿದಾದ ಭಕ್ತಿಯಿಂದ ಸಾಷ್ಟಾಂಗವೆರಗಿದರು. ಭರತೇಶನ ತಮ್ಮನಾಗಿ, ಉಳಿದ ಕುಮಾರರಲ್ಲಿ ಎಲ್ಲರಿಗೂ ಅಣ್ಣನಾಗಿದ್ದ ಸರ್ವಜ್ಞನಾದ ಭುಜಬಲಿಗೆ ಮುಖ್ಯಮಂತ್ರಿಯಾಗಿದ್ದ ಯೋಗಿಗೆ ಅಪೂರ್ವ ಭಕ್ತಿಯಿಂದ ನಮಸ್ಕರಿಸಿದರು. ಉಳಿದ ಗಣಧರರೆಲ್ಲರಿಗೂ ನಮಸ್ಕಾರ ಮಾಡುತ್ತ ಸುತ್ತಿ ಬರುತ್ತಿರುವಾಗ ಎಪ್ಪತ್ತೊಂದನೆಯ ಗಣಧರನನ್ನು ಅಲ್ಲಿಯೇ ಕಂಡರು. ಅವನನ್ನು ಕಂಡೊಡನೆ ಅವರ ಚಿತ್ತದಲ್ಲಿ ವಿರಕ್ತಿ ಕುಣಿದಾಡತೊಡಗಿತು. ಅದರಿಂದಲೇ ಅವರು ''ಜಯಜಯಮೇಘೇಶ್ವರ ಯೋಗಿ, ನೀನು ವಿಸ್ಮಯ ಪುರುಷನಾಗಿರುವೆ'' ಎಂದು ನಮಸ್ಕರಿಸಿದರು, ವಿಜಯ ಯೋಗಿಯನ್ನೂ ಜಯಂತ ಯೋಗಿಯನ್ನೂ ಭರತ ಚಕ್ರಿಯ ಮಕ್ಕಳೆಲ್ಲರೂ ವಂದಿಸಿದರು. 'ನಮಗೆ ದೀಕ್ಷೆಯ ಕಾರ್ಯವೀಗ ನಿಜವಾಯಿತು. ಇನ್ನು ದಿಗ್ವಿಜಯದ ಕಾಲವುಳಿದಿದೆ' ಎಂದು ಸಂತೋಷದಿಂದ ಉಬ್ಬಿಕೊಂಡರು.

ಭರತೇಶನ ಕುಮಾರರು ಅಲ್ಲಿದ್ದ ಮುನಿಸಮುದಾಯಕ್ಕೆ ವಿನಯವನ್ನು ಮಾಡಿ ದೇವೇಂದ್ರನನ್ನು ಕಂಡರು. ವಿನಯ ನಿಧಾನರಾದ ಅವರು ಇಂದ್ರನೊಡನೆ ತಮ್ಮ ಮನಸ್ಸಿನ ಅನುಭವವನ್ನು ಕೇಳಿದರು.

''ದೇವಲೋಕದ ಒಡೆಯನೇ, ನೀನು ನಿನ್ನ ಒಡೆಯನೊಡನೆ ಬಿನ್ನಹ ಮಾಡಿ ನಮಗೆ ಜಿನದೀಕ್ಷೆಯನ್ನು ಕೊಡಿಸು. ಅದೇ ನಿನಗೆ ಮುಂದೆ ಮುಕ್ತಿಯನ್ನು ಕೊಡುವುದು. ನಾವು ಸ್ವಾಮಿಯನ್ನು ನೋಡುವುದಕ್ಕೂ ಬಿನ್ನಹ ಮಾಡುವುದಕ್ಕೂ ತಿಳಿಯದವರು. ಇಂತಹ ನಮ್ಮನ್ನು ನೋಡಿಯೂ ನೀನು ಸುಮ್ಮನಿರುವುದೇ? ದೇವರಾಜನೆ, ನೀನಿದನ್ನು ಸ್ವಾಮಿಗೆ ತಿಳಿಸು.''

''ನಿಮ್ಮ ಅನುಭವವೇ ನಿಮ್ಮ ತಿಟ್ಟವೆಂಬುದು ಪರಬ್ರಹ್ಮವನ್ನೇ ಹುಡುಕಿ ತೂಗುತ್ತಿದೆ. ನಮ್ಮನ್ನು ಕೇಳುವುದೇಕೆ? ನೀವು ಮಾಡಿದುದಕ್ಕೆ ನಮ್ಮ ಸಮ್ಮತಿಯಿದೆ'' ಎಂದು ಇಂದ್ರನು ತಿಳಿಸಿದೊಡನೆ ಅವರೆಲ್ಲರೂ ಅಲ್ಲಿಂದ ವೃಷಭಸೇನ ಮುನಿಯಿರುವಲ್ಲಿಗೆ ನಡೆದರು. ಆ ಮುನಿಗೆ ಮತ್ತೊಮ್ಮೆ ಎರಗಿದರು.

''ಎಲೆ ಮುನಿನಾಥನೇ, ನಮಗೆ ಜಿನನಾಥನಿಂದ ದೀಕ್ಷೆಯನ್ನು ಕೊಡಿಸು'' ಎಂದು ಬೇಡಿಕೊಂಡರು,

''ನಿಮ್ಮ ಪುಣ್ಯವೇ ನಿಮ್ಮನ್ನು ಕರೆದೊಯ್ದು ದೀಕ್ಷೆಯನ್ನು ಕೊಡಿಸುವುದು. ಎಡಬಲವನ್ನು ನೋಡುವುದೇಕೆ? ನೀವೇ ಜಗದೊಡೆಯನನ್ನು ಬೇಡಿಕೊಳ್ಳಿರಿ. ಬೇಡಿದರೆ ನೀಡುವನು; ಇದು ನಮ್ಮ ಅನುಮತವಾಗಿದೆ. ಹೀಗಾಗುವುದು ದ್ವಾದಶಗಣಗಳಿಗೆಲ್ಲ ಸುಮ್ಮಾನವು. ಅದೇ ಲೋಕದ ಪುಣ್ಯವು. ನಿಮ್ಮ ಕಾರ್ಯವನ್ನು ನೀವೇ ಮಾಡಿರಿ'' ಎಂದು ಆ ಯೋಗಿಯು ಅವರನ್ನು ಬೀಳ್ಕೊಟ್ಟನು. ಅವರಾಗ ಮುನಿಗಣದ ಅನುಮತಿಯನ್ನು ಪಡೆದು, ಸ್ವಾಮಿಯೆಡೆಗೆ ನಡೆದರು. ಅಲ್ಲಿ ಕೈಗಳನ್ನು ಹಣೆಯಲ್ಲಿ ಹೊತ್ತು ಭಕ್ತಿಯಿಂದ ನಿಂತುಕೊಂಡು, ಸುರ ನರ ನಾಗಲೋಕಗಳ ಗತಿಯಾಗಿರುವ ವಿಶ್ವಜೀವರಕ್ಷಕನೊಡನೆ ಬಿನ್ನಹ ಮಾಡಿದರು.

''ನಾವು ಅನಾದಿಯಾಗಿ ಸಂದಿರುವ ಕಾಲದಲ್ಲಿ ಹಲವು ಭವಗಳಲ್ಲಿ ಹುಟ್ಟಿ ಬಂದಿರುವೆವು, ನಾವು ನೊಂದಿರುವೆವು. ನೊಂದಿರುವ ನಮ್ಮ ಹುಯ್ಯಲನ್ನು ಹೀಗೆ ಕೃಪಾಳುವಾದ ನಿನ್ನಲ್ಲಿಗೆ ತಂದಿರುವೆವು. ಆ ನೋವು ನಿನ್ನನ್ನು ಕಾಣುವ ಮೊದಲು ಉಂಟಾದುದು. ನಿನ್ನನ್ನು ಕಂಡ ಮೇಲಿನ್ನು ನೋವಿರುವುದೆ? ಇನ್ನು ನಮಗೆ ಯಾವ ನೋವೂ ಇಲ್ಲ, ನಾವದನ್ನು ಬಲ್ಲೆವು. ಆದುದರಿಂದ ನಮ್ಮ ಬಿನ್ನಹವೊಂದನ್ನು ನೀನು ಚಿತ್ತೈಸು, — ಅರುಹಾ, ನೀನು ನಮಗೆ ಜಿನದೀಕ್ಷೆಯನ್ನು ಪಾಲಿಸಬೇಕು. ಆಗ ನಾವು ಕಾಲನನ್ನು ಅಟ್ಟಿ, ಕಾಮನನ್ನು ಮೆಟ್ಟಿ, ದುಷ್ಕರ್ಮ ಜಾಲಗಳನ್ನೆಲ್ಲ ಹುಟ್ಟಿ ಹುಡಿ ಮಾಡಿ, ಮುಕ್ತಿಗೆ ದಾಳಿ ಮಾಡುವೆವು, ನಿನ್ನಿಂದ ದೀಕ್ಷೆಯನ್ನು ಪಡೆದ ಮೇಲೆ ಮನಸ್ಸನ್ನು ದಂಡಿಸಿ, ನಮ್ಮ ಧ್ಯಾನವನ್ನು ಆತ್ಮನಲ್ಲಿರಿಸಿ, ಧ್ಯಾನದ ಖಡ್ಗದಿಂದ ಕರ್ಮಗಳನ್ನು ತುಂಡು ತುಂಡಾಗಿ ಹೊಡೆದು ತೋರಿಸುವೆವು. ಇದನ್ನು ಸ್ವಾಮಿಯೇ ನೋಡುವಿಯಂತೆ. ಸ್ವಾಮಿ, ನಾವೀಗ ಬಡವರು. ಆದರೆ ನಿನ್ನ ದೀಕ್ಷೆಯ ಹಸ್ತವನ್ನು ನೀಡಿದ ಮೇಲೆ ನಮಗೆ ಇದಿರಾರು? ಇದನ್ನೆಲ್ಲ ಹೇಳಿ ತೋರಿಸುವುದೇಕೆ? ದೀಕ್ಷೆಯನ್ನು ಒಲಿದು ಕೊಟ್ಟ ಮೇಲೆ ನೀನೇ ನಮ್ಮನ್ನು ನೋಡಬಹುದು. ಮುಸುಕಿದ ಕರ್ಮವನ್ನು ಸುಟ್ಟು, ಕೋಟಿಸೂರ್ಯಚಂದ್ರರ ಕಾಂತಿಯನ್ನು ಪಡೆದು ನಿನ್ನಂತೆ ಮೆರೆಯದಿದ್ದರೆ, ನಾವು ಲೋಕದೊಡೆಯನ ಮಗನ ಮಕ್ಕಳೆ? ನಮ್ಮ ಅಯ್ಯನು ಆರು ಖಂಡಗಳನ್ನು ಗೆದ್ದಿರುವನು. ನಮ್ಮ ಅಜ್ಜನು ಮೂರು ಕರ್ಮಗಳನ್ನು ಗೆದ್ದಿರುವನು. ಈ ಮೂರು ಲೋಕದ ಕರ್ಮಗಳು ನಮಗೆ ಸಾಟಿಯೆ? ದೀಕ್ಷೆಯನ್ನು ನೀಡಿ, ಧ್ಯಾನವು ಮೋಕ್ಷಕ್ಕೆ ಕಾರಣ; ಅದಕ್ಕೆ ಜಿನದೀಕ್ಷೆಯು ಬಾಹ್ಯರಕ್ಷೆಯಲ್ಲವೆ?'' ಎಂದು ಮುದ್ದಾದ ಮಾತುಗಳಿಂದ ನುಡಿದರು. 'ದೀಕ್ಷಾಂ ದೇಹಿ' ಎಂದು ಎಲ್ಲರೂ ಸಾಷ್ಟಾಂಗ ಲಕ್ಷಿತವಾಗಿ ಎರಗಿದರು. ಅವರು ಕೈಗಳನ್ನು ಮುಗಿದು, ತೋಳುಗಳನ್ನು ನೀಡಿ, ಕಾಲುಗಳನ್ನು ನಿಮಿರಿ ಹಾಸಿದರು. ಹಣೆಯು ಭೂಮಿಯನ್ನು ಮುಟ್ಟಿತ್ತು. ಈ ರೀತಿಯಲ್ಲಿ ಅವರು ಜಗದೀಶನ ಎದುರಿನಲ್ಲಿ ಅಲ್ಲಾಡದೆ ಬಂಗಾರದ ಗೊಂಬೆಗಳಂತೆ ಎರಗಿದ್ದರು.

''ಅಸ್ತುಭವ್ಯಾಸ್ಸಮುತ್ತಿಷ್ಠತ'' ಎಂದು ಆದಿವಸ್ತುವಾದ ವೃಷಭ ದೇವರು ನಿರೂಪಿಸಿದಾಗ ಅವರೆಲ್ಲರೂ ಮಸ್ತಕಗಳನ್ನೆತ್ತಿ ನಿಂತುಕೊಂಡರು. ಕೆಲಬಲದಲ್ಲಿದ್ದ ಸುರಸ್ತೋಮವು ಜಯಜಯವೆಂದಿತು. ಅಮರದುಂದುಭಿ ಮೊಳಗಿತು. ಸುರಕಾಂತೆಯರು

ಅಮೃತ ಶೋಭನವನ್ನು ಹಾಡಿದರು. ಸಮಯಕ್ಕೆ ಸರಿಯಾಗಿ ದೇವೇಂದ್ರನೂ, ವೃಷಭಸೇನ ಮುನಿಗಳೂ ಅವರ ಬಳಿಗೆ ಬಂದರು. ಮುತ್ತಿನ ಅಕ್ಷತೆಗಳಿಂದ ನೀಲದ ನೆಲದಲ್ಲಿ ಸ್ವಸ್ತಿಕಗಳ ಸಮೂಹವನ್ನೇ ಬರೆದಿದ್ದರು. ಅವುಗಳ ಮೇಲೆ ಆ ನೂರು ಮಂದಿಯನ್ನೂ ಅವರು ಬಡಗ ಬದಿಯಿದ್ದು, ಮೂಡುಮುಖವಾಗಿ ಕೈ ಹಿಡಿದು ಕುಳ್ಳಿರಿಸಿದರು. ಕೈಗಳಲ್ಲಿ ರತ್ನತ್ರಯ ಯಂತ್ರವನ್ನು ಸ್ವಸ್ತಿಕವು ಶೋಭಿಸುವಂತೆ ಉದ್ಧರಿಸಿದರು. ಅನಂತರ ಅಲ್ಲಿಗೆ ಯೋಗ್ಯವಾದ ಪುಷ್ಪಫಲಾಕ್ಷತೆಗಳನ್ನೆಲ್ಲ ಅಲ್ಲಲ್ಲಿ ಇರಿಸಿದರು.

ಗಲಭೆಯೆಲ್ಲ ನಿಂತಿತು. ಕುಮಾರರು ಸ್ವಾಮಿಯನ್ನು ಗೆಲವಿನಿಂದ ನೋಡಿದರು. ಮೋಡಗಳಿಂದ ಸಿಡಿವ ಸಿಡಿಲಿನ ಮೊಳಗಿನಂತೆ ದಿವ್ಯ ಧ್ವನಿಯು ಉಚ್ಚಳಿಸಿತು.

ಭವದ ಮೂಲವನ್ನೂ ಭವನಾಶದ ಮೂಲವನ್ನೂ, ಧ್ರುವಸಿದ್ಧಿಯನ್ನು ಸಾಧಿಸುವ ಸಾಧನೆಯನ್ನೂ ಸ್ವಾಮಿಯು ವಿವರಿಸುತ್ತಿದ್ದನು. ಕುಮಾರರು ಅದನ್ನು ಕಿವಿಕೊಟ್ಟು ಕೇಳುತ್ತಿದ್ದರು.

''ಮೋಕ್ಷಮಾರ್ಗದ ಸಂಧಿಯಲ್ಲಿ ನಾವು ಹೇಳಿರುವುದೇ ಮೋಕ್ಷದ ಉಪಾಯ. ಈ ಕ್ಷಣದಲ್ಲಿ ನಿಮ್ಮಲ್ಲಿದ್ದ ಪರಿಗ್ರಹವು ಅಳಿದುದೇ ದೀಕ್ಷೆಯು. ಹೊರಗೆ ಪರಿಗ್ರಹಗಳು ಹತ್ತು ಇವೆ. ಒಳಗೆ ಆತ್ಮನನ್ನು ಸುತ್ತಿಕೊಂಡು ಹದಿನಾಲ್ಕು ಇವೆ. ಹೊರಗೂ ಒಳಗೂ ಇರುವ ಇಪ್ಪತ್ತನಾಲ್ಕು ಪರಿಗ್ರಹಗಳು ಹರಿದು ಹೋದರೆ ಅದುವೇ ಜಿನದೀಕ್ಷೆ. ಹೊಲ, ಮನೆ, ಧನ, ಧಾನ್ಯ, ಸೇವಕ, ಪಶುಗಳು, ಪಲ್ಲಕ್ಕಿ, ಹಾಸಿಗೆ, ವಸ್ತ್ರ, ಭಂಡಾರಗಳೆಂಬ ಹೊರಗಿನ ಈ ಹತ್ತು ಪರಿಗ್ರಹಗಳನ್ನು ತೊಲಗಿಸಬೇಕು. ಮೋಹ, ರಾಗ, ದ್ವೇಷ, ಹಾಸ್ಯ — ಮುಂತಾಗಿ ಆರು ಮೋಹಗಳನ್ನೂ ನಾಲ್ಕು ಕಷಾಯಗಳನ್ನೂ, ಹೆಣ್ಣಿನ ಆಸೆಯೇ ಮುಂತಾದ ಮೋಹಿಸಿದ ಒಳಗಿನ ಹದಿನಾಲ್ಕು ಗಂಟುಗಳನ್ನೂ ಬಿಡಬೇಕು. ದಟ್ಟದರಿದ್ರರೇ ಮೊದಲಾದವರು ಹೊರಗಿನ ಹತ್ತು ಪರಿಗ್ರಹಗಳನ್ನು ಬಿಟ್ಟವರು ಇದ್ದಾರೆ. ಆದರೆ ಒಳಗಿನ ಹದಿನಾಲ್ಕು ಪರಿಗ್ರಹಗಳನ್ನು ಬಿಟ್ಟಿರಲಾರರು. ಈ ಹದಿನಾಲ್ಕು ಪರಿಗ್ರಹಗಳನ್ನು ಬಿಟ್ಟರೆ ಕರ್ಮವು ಬಿಟ್ಟುಹೋಗುವುದು. ಅದ್ದರಿಂದ ಹೊರಗಿರುವುದನ್ನು ಬಿಟ್ಟರೆ ಎಲ್ಲವನ್ನೂ ಬಿಟ್ಟಂತೆ ಆಯಿತೆಂದು ನೀವು ತಿಳಿಯಬೇಡಿ. ಆದರ ಸಹಾಯದಿಂದ ಒಳಗಿನ ಗಂಟುಗಳನ್ನು ಬಿಟ್ಟು ಧ್ಯಾನದಲ್ಲಿದ್ದರೆ ಸುಖವು ಸಿದ್ಧಿಸುವುದು.

''ಈ ದೇಹವು ಎರವಿನ ದೇಹವೆಂಬುದನ್ನು ತಿಳಿಯುವುದಕ್ಕೂ, ತೊನೆಯುವ ಇಂದ್ರಿಯವನ್ನು ತಗ್ಗಿಸುವುದಕ್ಕೂ ಮುನಿಯು ಏಕಭುಕ್ತನಾಗಬೇಕು. ಯೋಗಿಗೆ ಶೌಚಕ್ಕಾಗಿ ಕಮಂಡಲು ಬೇಕು. ಜೀವ ರಕ್ಷಾಚರಣೆಗಾಗಿ ಕುಂಚವು ಬೇಕು. ಅದರಂತೆ ಆಚಾರ ಸೂತ್ರಗಳೂ ಬೇಕು. ಇವುಗಳೆಲ್ಲ ಯೋಗಿಯಾದವನಿಗೆ ಯಥೋಚಿತವಾದ ಉಪಕರಣಗಳು. ಮೂಲಗುಣಗಳು ಹಲವಿದ್ದು ಧ್ಯಾನಕ್ಕೆ ಸಹಕಾರಿಗಳಾಗಿವೆ. ನೀವಿದನ್ನು ಅರಿತಿರಬೇಕು. ಇನ್ನು ಉಪದೇಶ ಸಾಕು. ನೀವಿನ್ನು ರಾಜವೇಷವನ್ನು ಬಿಟ್ಟು ತಪಸಿ ವೇಷವನ್ನು ತಾಳಿರಿ'' ಎಂದು ಪುರುದೇವರು ಉಪದೇಶ ನಿಲ್ಲಿಸಿದರು.

''ಇಚ್ಛಾಮಿ ಇಚ್ಛಾಮಿ'' ಎಂದು ಕುಮಾರರು ತಮ್ಮ ಹಸ್ತಗಳಲ್ಲಿದ್ದ ಫಲಗಳನ್ನು ಪುರುಜಿನನ ಹೊಳೆಯುತ್ತಿರುವ ಪೀಠದಲ್ಲಿರಿಸುವಂತೆ ಅಮರರ ಕೈಗಿತ್ತರು. ತಾವು ಹೊದೆದುಕೊಂಡಿದ್ದ ವಸ್ತ್ರವನ್ನು ತೆಗೆದು ಬಿಸಾಡಿದರು. ಹಾರ–ಪದಕಗಳನ್ನೂ ಕರ್ಣಕುಂಡಲಗಳನ್ನೂ ಎಸೆದುಬಿಟ್ಟರು. ಉಂಗುರಗಳನ್ನು ಉದುರಿಸಿದರು. ಕಂಠಸರಗಳನ್ನು ಹರಿದು ಚೆಲ್ಲಿದರು. ಮುಂಗಯ್ಯ ಕಡಗಗಳನ್ನೂ ಹೊನ್ನಿನ ಉಡುದಾರಗಳನ್ನೂ ಪಾದಸರಗಳನ್ನೂ ಭೂಮಿಗೆ ಒಗೆದುಬಿಟ್ಟರು. ಪೆಂಡೆಯಗಳನ್ನೂ, ಹಾರ–ಹೀರಾವಳಿಯನ್ನೂ ಮಾಣಿಕದ ಗೊಂಡೆಗಳನ್ನೂ, ರತ್ನಮುದ್ರಿಕೆಗಳನ್ನೂ ಕಂಡ ಕಂಡ ಕಡೆಗೆ ಎಸೆದುಬಿಟ್ಟರು. ಅಲ್ಲಿ ಅವು ತಂಪಿನ ಕೆಂಡಗಳಂತೆ ಕಾಣುತ್ತಿದ್ದುವು. ಅವರು ತಿಲವನ್ನು ಒರೆಸಿ, ಯಜ್ಞೋಪವೀತಗಳನ್ನು ಹರಿದು ಹಾಕಿದರು. ತಮ್ಮ ತಮ್ಮ ಕೂದಲುಗಳನ್ನು ತಾವು ತಾವೇ ಕಿತ್ತು ಎಸೆದುದು ನೆಲದಲ್ಲಿ ಬಿದ್ದು ರಾಶಿಯಾಯಿತು.

ಆ ಸುಕುಮಾರರು, ಮೈ ಯಾರು? ತಾವು ಯಾರು? ಎಂದು ಬಗೆಯುತ್ತ ತಮ್ಮ ತಮ್ಮ ಸಂಕಷ್ಟಗಳನ್ನು ಹರಿದು ಬಿಸಾಡುವಂತೆ ತಮ್ಮ ಕೇಶವನ್ನು ತೂರೆದು ಬಿಟ್ಟರು. ಅವರು ದುರ್ಮೋಹ ಪಾಶವನ್ನೂ, ಪಾದವನ್ನೂ, ಮಾಯಾಪಾಶವನ್ನೂ ಹರಿದು ಎಸೆಯುವಂತೆ ಕೇಶವನ್ನು ಹರಿದು ಎಸೆದರು. ಹುಟ್ಟಿದಂತೆ ಅವರು ಜಾತರೂಪರಾದರು. ಅವರ ದೇಹವನ್ನು ಮರೆಸುವ ವಸ್ತ್ರವಿಲ್ಲದಾಯಿತು. ಆ ಕ್ಷಣದಲ್ಲೇ ಅವರ ದೇಹದಲ್ಲಿ ಹೊಸ ಕಾಂತಿ ಹುಟ್ಟಿತು. ಕಾಂತಿಯಲ್ಲೂ ಅವರು ಜಾತರೂಪರಾದರು; ಶಾಂತಿಯೇ ಅವರಲ್ಲಿ ಜಾತರೂಪವಾಯಿತು. ಅವರ ಕಾಂತಿಯು ಮೊದಲಿಗಿಂತಲೂ ಹೆಚ್ಚಿತು. ಅವರಂತೆ ನೊಂದವರು ಯಾರೂ ಇಲ್ಲ. ಪುರುಪರಮೇಶ್ವರರೇ ಅವರ ದೀಕ್ಷಾಗುರು, ರಜತಗಿರಿಯೇ ಅವರು ದೀಕ್ಷೆಗೊಂಡ ಸುಕ್ಷೇತ್ರ, ಸುರಪತಿಯೂ ಗಣಧರರೂ ಸಹಾಯಕರಾಗಿದ್ದ ಆ ಸಮಾರಂಭದ ಸಿರಿಗೆ ಸರಿಸಮಾನವಾದ ಸಿರಿಯುಂಟೆ?

ಎಲ್ಲರೂ ಸ್ವಸ್ತಿಕದಿಂದೆದ್ದು ಆದಿ ವಸ್ತು ಪುರುದೇವರ ಚರಣಗಳಿಗೆ ಮಸ್ತಕವಿಟ್ಟು ಎರಗಿದರು. ವೀತರಾಗ ಪುರುಜಿನರು 'ಆತ್ಮಸಿದ್ಧಿರೇವಾಸ್ತು' ಎಂದರು. ಆಗ ಆಕಾಶದಲ್ಲಿ ನಿಂತಿದ್ದ ದೇವತೆಗಳು ಹೂಮಳೆಯನ್ನು ಸುರಿಸಿದರು; ಎಲ್ಲ ರೀತಿಯ ವಾದ್ಯಘೋಷಗಳೂ ತುಂಬಿಹೋದುವು. ಸಂದರ್ಭವರಿತು ಮಂಗಲವನ್ನು ಹಾಡಿದರು. ಅಷ್ಟರಲ್ಲಿ ವೃಷಭಸೇನಾಚಾರ್ಯರು ಉಪಕರಣಗಳನ್ನು ತಂದು ವೃಷಭೇಶನ ಮುಂದಿಟ್ಟರು. 'ವೃಷಭನಾಥಾಯ ನಮೋಸ್ತು' ಎಂದು ನೂತನ ಋಷಿಗಳೆಲ್ಲರೂ ಅವುಗಳನ್ನು ತೆಗೆದು ಕೊಂಡರು. ಮುಕ್ತಿಯು ಒಲಿದು ಇತ್ತ ಲಂಚವನ್ನು ಹಿಡಿಯುವಂತೆ ಅವರೆಲ್ಲರೂ ಕುಂಚವನ್ನು ಹಿಡಿದುಕೊಂಡರು. ಅವರ ಹಸ್ತ ಸೋಂಕಿದ ಆ ಕುಂಚಗಳು ಮಿಂಚಿನ ಗೊಂಚಲುಗಳೋ ಎಂಬಂತೆ ಶೋಭಿಸಿದುವು. ಬೆಳಕನ್ನು ಕೈಯಲ್ಲಿ ಹಿಡಿಯುವಂತೆ ಅವರು ಸ್ಫಟಿಕದ ದುಂಡಗಾದ ಕಮಂಡಲುಗಳನ್ನು ಹಿಡಿದುಕೊಂಡರು. ಆಮೇಲೆ ಎಳೆಹರೆಯದ ಆ ನೂರು ಮಂದಿ ಮುನಿಗಳೂ ಅರುಹಂತರನ್ನು ಬೀಳ್ಕೊಂಡರು.

ಅವರು ವೃಷಭಸೇನಾಚಾರ್ಯರೊಡನೆ ಮುನೀಂದ್ರರ ಸಭೆಗೆ ನಡೆದರು. ಆಗ ಎಡಬಲಗಳಲ್ಲಿದ್ದ ಮುನೀಂದ್ರರು ಕಡಲು ಉಕ್ಕಿ ಘೋಷಣ ಮಾಡುವಂತೆ

ಜಯಜಯವೆಂದರು. 'ರವಿಕೀರ್ತಿಯೋಗಿ ಬಾ,' 'ಗಜಸಿಂಹಯೋಗಿ ಬಾ,' 'ದಿವಿಜೇಂದ್ರಯೋಗಿ ಬಾ' ಎಂದು ಆ ಮುನೀಂದ್ರರು ಅವರವರ ಹೆಸರಿನಿಂದ ಒಳಗೆ ಕರೆದುಕೊಂಡರು. ಅವರ ಹಿಂದೆಯೇ ಇಂದ್ರನು ಬಂದು. ತನ್ನ ಪತ್ನಿಯೊಂದಿಗೆ ಆ ನೂತನ ಯೋಗಿಗಳ ಕೆಂಪು ಹೆಜ್ಜೆಗಳಿಗೆ ಪ್ರೀತಿಯಿಂದ ನಮಸ್ಕರಿಸಿದನು. ಶುದ್ಧವಾದ ಚಿತ್ತದಲ್ಲಿ ನಮೋಸ್ತು ಮಾಡಿದಾಗ 'ಧರ್ಮವೃದ್ಧಿರಸ್ತು' ಎಂದು ಹರಸಿದರು. 'ನಿಮ್ಮ ಹರಕೆಯಿಂದ ವೃದ್ಧಿಯು ತಪ್ಪಲಾರದು' ಎಂದು ನಮಸ್ಕರಿಸಿ ಇಂದ್ರನು ಅವರಿಂದ ಬೀಳ್ಕೊಂಡನು. ಆ ಕ್ಷಣದಲ್ಲಿ ಯಕ್ಷರು, ಗರುಡರು, ಗಂಧರ್ವರು, ಸುರರು, ನಕ್ಷತ್ರರು, ಅಮರರು ಮತ್ತು ನರರು ಬಂದು, ದೀಕ್ಷಿತರಾದ ಯೋಗಿಗಳಿಗೆ ನಮಸ್ಕರಿಸಿ ಅವರಿಂದ ಬೀಳ್ಕೊಂಡರು.

ಮುನಿಕುಮಾರರು ಬಿಟ್ಟ ವಸ್ತ್ರಾಭರಣಗಳನ್ನೂ ಲೋಚಿನ ಕೂದಲುಗಳನ್ನೂ ದೇವತೆಗಳು ಕೊಂಡು ಹೋಗಿ ಮನಸ್ಸಿನಲ್ಲಿ ಅವರನ್ನು ಮೆಚ್ಚಿ ಹೊಗಳುತ್ತ, ಸಮುದ್ರದಲ್ಲಿ ಇಂಬಾಗಿಟ್ಟರು. 'ಈ ಚಿಕ್ಕ ಹರೆಯದಲ್ಲಿ, ಈ ಚೊಕ್ಕ ರೂಪಿನಲ್ಲಿ ಇವರಂತೆ ಸಂಸಾರ ತೊರೆದವರು ಯಾರಿದ್ದಾರೆ?' ಎಂದು ಅಲ್ಲಲ್ಲಿ ನಿಂತುಕೊಂಡು ನರರೂ, ಸುರರೂ ಹೆಚ್ಚಾಗಿ ಹೊಗಳಿದರು.

''ಸಾವಿರ ಹೊನ್ನು ಸಿಕ್ಕಿದರೆ ಸಾಕು; ಅದನ್ನು ತಿಂದು ಸಾಯುವರಲ್ಲದೆ ತೊರೆಯುವಂತಿಲ್ಲ. ಭೂಮಂಡಲವನ್ನು ಒಂದೇ ಕೊಡೆಯ ನೆರಳಿನಿಂದ ಆಳುವವನ ಮಕ್ಕಳ ಈ ವಿಧಾನವು ಗಹನವಾದುದು. ಮುಪ್ಪಾದ ಮೀಸೆಗೆ ಕಪ್ಪನ್ನು ಇಟ್ಟಾದರೂ ಚಪ್ಪರಿಸಿಕೊಂಡು ಆಡುವವರಿದ್ದಾರಲ್ಲದೆ, ಹೀಗೆ ಮೀಸೆ ಹುಟ್ಟುವಾಗಲೇ ಸಂಸಾರ ತೊರೆದು ದೀಕ್ಷೆಗೆ ಅತಿಥಿಗಳಾಗುವವರು ಯಾರಿದ್ದಾರೆ? ಮುಂದಿನ ಹಲ್ಲುಗಳು ಬಿದ್ದು, ವೀಳ್ಯವನ್ನು ಕಲ್ಲಿನಲ್ಲಿ ಜಜ್ಜಿ ತಿನ್ನುವರಲ್ಲದೆ ಬಿಟ್ಟವರು ಯಾರಿದ್ದಾರೆ? ಕೆಂಪು ಹಲ್ಲಿನ ಜವ್ವನಿಗರು ಈ ರೀತಿಯಲ್ಲಿ ಎಲ್ಲವನ್ನೂ ತೊರೆದು ದೀಕ್ಷೆಕೊಳ್ಳುವುದು ವಿಸ್ಮಯವೇ ಸರಿ! ಜಚ್ಚಿದ ಚುಚ್ಚಿದ ಅಂಗಗಳನ್ನು ಚೆಂದವಾಗಿ ಮಾಡಿ ಈ ದೇಹಕ್ಕೆ ಮೆಚ್ಚಿಕೊಂಡಿರುತ್ತಾರಲ್ಲದೆ, ಹೊಳೆಯುವಂಥ ಚೆಲುವಿನ ಅಂಗಾಂಗಗಳ ದೇಹವನ್ನು ಇವರಂತೆ ತಪಸ್ಸಿಗೆ ವೆಚ್ಚ ಮಾಡುವವರು ಯಾರಿದ್ದಾರೆ? ಬಂಡಿನ ಹುಂಡಿನ ಮೈಯ ಬಣ್ಣವನ್ನೇ ಬಿಳಿಮಾಡಿಕೊಂಡು ಅದನ್ನೇ ಹಿಡಿದುಕೊಂಡಿರುವವರಲ್ಲದೆ, ಗಂಡು ಗಂಡಿಗೆ ಮೋಹಿಸುವಂಥ ಈ ಚೆನ್ನಿಗರು ದೀಕ್ಷೆಗೊಂಡ ಹಾಗೇ ಮಾಡುವವರು ಯಾರಿದ್ದಾರೆ? ಭರತಚಕ್ರಿಯ ಒಂದು ಸೇನೆ ದೊರೆತರೆ, ಅದೇ ಒಂದು ಭಾಗ್ಯವೆಂದು ಆವನೊಂದಿಗೆ ಕೂಡಿರುತ್ತಾರೆ. ಆದರೆ ಭೂಮಿಯಲ್ಲಿ ಅವನ ಮಕ್ಕಳಾಗಿ ಸಂಪತ್ತಿನಲ್ಲಿ ವಿರಸಗೊಂಡಿರುವುದು ವಿಚಿತ್ರವಾಗಿದೆ. ಮೋಕ್ಷವು ಇವರಿಗೇನೂ ಗಹನವಲ್ಲ.''

ಎಂದು ಅಲ್ಲಲ್ಲಿ ಒಲಿದು ಹೇಳುತ್ತಿದ್ದರು. ದೀಕ್ಷಿತರಾದ ಯೋಗಿಗಳಾದರೋ ಆಗ ಯೋಗದಲ್ಲಿ ತನ್ಮಯರಾಗಿದ್ದರು.

# ೧೮

## ಕುಮಾರ ವಿಯೋಗ

ಭರತೇಶನ ಕುಮಾರರೆಲ್ಲರೂ ದೀಕ್ಷೆಗೊಂಡ ಮೇಲೆ ಅವರ ಕಡುಹಿತದ ಊಳಿಗದವರೆಲ್ಲರೂ ಹಡಗನ್ನು ಕಳೆದುಕೊಂಡ ವ್ಯಾಪಾರಿಗಳಂತೆ ಹಿಂದಿರುಗಿದರು. ರಜತಾದ್ರಿಯನ್ನು ಇಳಿದ ಮೇಲೆ ಅವರ ಹೊಟ್ಟೆಯಲ್ಲಿ ದುಃಖದ ದಳ್ಳುರಿಯೆದ್ದಿತು. ಅವರು ಹಳ್ಳಿಗಳ ಮೂಲಕವಾಗಿ ಸಾಗಿದರು. ಈ ವಾರ್ತೆಯನ್ನು ಕೇಳಿದವರ ಎದೆಗೂ ಬೆಂಕಿಯ ಕೊಳ್ಳಿಯನ್ನು ಇಟ್ಟಂತಾಗುತ್ತಿತ್ತು. ಅಲ್ಲಲ್ಲಿ ಕೇಳಿದಾಗ ಅವರು, ಅಳುತ್ತ ಅಳುತ್ತ ತಮ್ಮ ಒಡೆಯರ ಸುದ್ದಿಯನ್ನು ಹೇಳುತ್ತಿದ್ದರು. ಹೀಗೆ ಅವರು ಭೂಮಿಯನ್ನೇ ಸುಡುತ್ತ ರಾಜಧಾನಿಯನ್ನು ಸೇರಿದರು. ರವಿಕೀರ್ತಿರಾಜನ ಊಳಿಗದವಗಾದ ಆರವಿಂದ ನೆಂಬುವವನನ್ನು ಮುಂದೆ ಮಾಡಿ ಪತಿಯು ಮಡಿದ ಬ್ರಾಹ್ಮಣ ಸತಿಯಂತೆ ಬಹಳ ಉಬ್ಬೆಯಲ್ಲಿ ಅವರು ನಗರವನ್ನು ಹೊಕ್ಕರು. ಕಳೆಗಟ್ಟ ಮುಖ, ಪಟುತ್ವ ಕುಂದಿದ ನಡಿಗೆ, ಸುರಿಯುವ ಕಣ್ಣೀರು, ನೋವಿನ ಬಾಯಿಮುದ್ರೆ, ತಲೆಗಿಟ್ಟ ಮುಸುಕಿಂದ ಅವರು ಬೀದಿಯಲ್ಲಿ ಬರುತ್ತಿದ್ದಾಗ ಅದನ್ನು ನೋಡಿ ನಗರವೇ ತಳಮಳಗೊಂಡಿತು.

ಸೇವಕರು ತಮ್ಮ ಕಂಕುಳಲ್ಲಿ ಪುಸ್ತಕ ಖಂಡೆಯಗಳನ್ನು ಅವುಚಿಕೊಂಡು ಮಂಕು ಹೊಡೆದವರಂತೆ ಸಾಗುತ್ತಿರುವುದನ್ನು ಕಂಡು ಪುರದವರೆಲ್ಲರೂ ತಲ್ಲಣದಿಂದ ಅವರನ್ನು ವಿಚಾರಿಸಿದರು.

''ಅಯ್ಯೋ ಅರಸುಗಳು ಎಲ್ಲಿದ್ದಾರೆ? ನೀವು ಹೀಗೇಕೆ ಬರುತ್ತಿದ್ದೀರಿ?'' ಎಂದು ಕೇಳಿದರೆ, ತುಟಿಯನ್ನು ಅಲ್ಲಾಡಿಸದೆ ಸೇವಕರು ಅರಮನೆ ಕಡೆಗೆ ಸಾಗುತ್ತಿದ್ದರು. ಜಾಣರಾದವರು ಇದನ್ನು ಆಗಲೇ ತಿಳಿದು ಕೊಂಡರು. ಖಡ್ಗ ಕಠಾರಿಗಳನ್ನೂ ವೀಣೆಯನ್ನೂ ಹಿಂದಿರುಗಿಸಿರುವುದರಿಂದ, ಅವೆಲ್ಲ ದೀಕ್ಷೆಗೊಂಡುದಕ್ಕೆ ಸಾಕ್ಷಿಯೆಂದು ನೋಡಿದವರು ತಿಳಿದುಕೊಂಡರು.

''ಇವರು ತಮ್ಮ ಒಡೆಯರನ್ನು ಬಿಟ್ಟು, ಬರುವವರಲ್ಲ. ಕುಮಾರರಿಗೆ ಪರರ ಬಾಧೆಯೂ ಇಲ್ಲ. ಅವರು ದೀಕ್ಷೆಗೊಂಡರೆಂಬುದು ಇವರ ಭಾವವೇ ಹೇಳುತ್ತಿದೆ.'' ಎಂದು ಅವರು ನಿಶ್ಚಯಿಸಿಕೊಂಡರು. ಕೆಲವರು ಅದನ್ನು ಅಲ್ಲವೆಂದು ಹೇಳಿದರು, ಕೆಲವರು ಹೌದೆಂದು ಹೇಳಿದರು. ಹೀಗೆ ತಮ್ಮತಮ್ಮೊಳಗೆ ಮಾತನಾಡುತ್ತಿದ್ದರು. ''ಅರಮನೆಯಲ್ಲಿ ರಾಜನಿಗೆ ಹೇಳುವರಲ್ಲವೆ? ಆಗ ಕೇಳಬಹುದು'' ಎಂದು ಜನರು ಸೇವಕರ ಬೆನ್ನಲ್ಲೇ ನಡೆದರು.

ಆಗ ಭರತೇಶ ಚಕ್ರಿಯು ಕಡೆಯ ಚಾವಡಿಯಲ್ಲಿದ್ದನು. ಸೇವಕರು ಅಲ್ಲಿಗೆ ನಡೆದು ಬಂದು ಹಿಡಿದುಕೊಂಡಿದ್ದ ಕಠಾರಿ ಖಂಡೆಯಗಳನ್ನು ಅವನ ಮುಂದಿಟ್ಟು, ಅಡ್ಡಬಿದ್ದರು.

ಕೂಡಲೇ ಸಭೆಯ ಉತ್ಸಾಹ ಕಟ್ಟಿತು. ಭರತೇಶನು ಆ ಕಡೆಗೆ ಮುಖವೆತ್ತಿ ನೋಡಿದನು. ಸೇವಕರೆಲ್ಲರೂ ದಿಮ್ಮನೆ ಎದ್ದರು. ಅವರ ಕಣ್ಣುಗಳಿಂದ ನೀರು ಸುರಿಯುತ್ತಿತ್ತು, ನೆರೆದವರೆಲ್ಲರೂ ಸುಮ್ಮನಿದ್ದಾಗ, ಅರವಿಂದನು ಕೈಗಳನ್ನು ಮುಗಿದು ಬಿನ್ನಹಮಾಡಿದನು.

"ಸ್ವಾಮಿ, ನೂರ್ವರು ಕುಮಾರರೂ ದೀಕ್ಷೆಗೆ ತೆರಳಿದರು."

ಅದನ್ನು ಕೇಳಿದ ಭರತೇಶನ ಹಸ್ತದ ವೀಳ್ಯದೆಲೆಯು ಕೆಳಗೆ ಬಿತ್ತು, ಎದೆಯಲ್ಲಿ ಐಡ್ಗವನ್ನು ಬೀಸಿದಂತಾಯಿತು. ಆಸ್ಥಾನವೇ ಗೋಳಿಟ್ಟಿತು. ಕೈಸನ್ನೆಯಿಂದಲೇ ಅದನ್ನು ನಿಲ್ಲಿಸಿ ಭರತೇಶನು ವಿಚಾರಿಸಿದನು.

ಏನಾಯ್ತುಹೇಳೆಂದು ಕೇಳಿದ ಚಕ್ರಿಯು 'ಹಾ ಹೋದರೆ' ಎಂದು ವ್ಯಥೆಪಟ್ಟನು.

"ಸ್ವಾಮಿ ನಾವು ಕೈಲಾಸದಲ್ಲಿ ನೋಡಿ ಬಂದೆವು. ಅಲ್ಲಿಯೇ ದೀಕ್ಷೆಗೊಂಡು ಅಡ್ಡಬಿದ್ದಾಗ ಧರ್ಮ ವೃದ್ಧಿಯೆಂದು ಇಂದ್ರನು ಹರಸಿದನು."

ಆಗ ಭರತೇಶನ ಮೋರೆ ಕಂದಿತು; ಮಾತು ನಿಂತಿತು; ಎದೆಯು ಹವ್ವನೆ ಹಾರಿತು. ಮಕ್ಕಳು ಹಾರಿ ದೀಕ್ಷೆಯನ್ನು ಕೊಂಡರೆಂದು ಹೇಳಲು ಅವನಲ್ಲಿ ಮರುಕವುಂಟಾಯಿತು. ಮೂಗಿನ ಮೇಲೆ ಬೆರಳಿಟ್ಟು, ಮಕುಟವನ್ನು ತೂಗಿ, ಉಸ್ಸೆಂದು ಉಸಿರು ಬಿಟ್ಟನು. ಆಗಲೇ ಕಣ್ಣಲ್ಲಿ ನೀರು ಬಳಬಳನೆ ಉಕ್ಕಿಬಂತು. ಹೊಟ್ಟೆಯಲ್ಲಿ ಬೇಗೆಯೂ ಹೆಚ್ಚಿತು. ಉಕ್ಕುವುದು ದುಃಖ. ಕೂಡಲೇ ಅದನ್ನು ಆರಿಸಿಕೊಳ್ಳುವನು. ಬಿಕ್ಕಳು ಬಂದರೆ ಅಲ್ಲಿಗೇ ನಿಲ್ಲಿಸುವನು. ಥಕ್ಕನೆ ಮೂರ್ಛೆ ಬರುವುದು; ಅದನ್ನು ಕೂಡಲೇ ಒದೆದು ಓಡಿಸುವನು. ಹೀಗೆ ಶೋಕದಲ್ಲಿ ಸಿಕ್ಕಿದರೂ ಸಿಕ್ಕದಂತೆ ಇದ್ದನು.

"ಮಕ್ಕಳ ಮೋಹ ಹೆಚ್ಚು. ಅವರು ಕೈಬಿಟ್ಟ ಮೇಲೆ ಏನು ಮಾಡಬಹುದು. ಹೆಚ್ಚಾಗಿ ಶೋಕಿಸುವುದು ಮಕ್ಕಳಾಟಿಕೆ" ಎಂದು ಉಕ್ಕಿ ಬರುವ ಶೋಕವನ್ನು ನೂಕಿ ನಿಲ್ಲುವನು. ಭರತೇಶನಿಗೆ ಮೊದಲೊಮ್ಮೆ ಕಣ್ಣೀರು ಉಕ್ಕಿ ಬರುವುದು; ಹಸನಾದ ಚಿತ್ತವುಳ್ಳ ಅವನು ಅದನ್ನು ಕೂಡಲೇ ತಡೆದು ನಿಲ್ಲಿಸುವನು. ಎದೆಯಲ್ಲಿ ಶೋಕಾಗ್ನಿಯೇಳುವುದು; ಅದನ್ನು ಮೆಲ್ಲನೆ ಶಾಂತಿಯಿಂದ ನಂದಿಸುವನು. ಸಂಕಷ್ಟ ಬಂದಾಗ ಧೈರ್ಯವಿರಬೇಕು. ಕೋಪಾಗ್ನಿ ತಾಗಿದಾಗ ಆದರ ಜ್ಞಾನವಿರಬೇಕು. ಶ್ರೇಷ್ಠನಾದವಗೆ ಬಿಟ್ಟಿರುವುದರಲ್ಲಿ ಹೇಯವೂ ತಟ್ಟಿರುವುದರಲ್ಲಿ ದೃಢವೂ ಹುಟ್ಟಬೇಕು. ಭರತ ಚಕ್ರಿಯಲ್ಲಿ ಇದೇ ರೀತಿ. ದೇಹ ಬೇರೆಯೆಂದು ಆತ್ಮ ಬೇರೆಯೆಂದು ಮಾಡುವ ಭಾವಕರಿಗೆ ಕನಸಿನಲ್ಲೂ ಭ್ರಾಂತಿ ಬಾರದು. ಬಂದರೂ ಅಲ್ಲಿ ನಿಲ್ಲದೆ ಕೂಡಲೇ ಜಾರಿಬಿಡುವುದು. ಆತ್ಮವೇದಿಗೆ ದುಃಖ ತಾಗುವುದಿಲ್ಲ, ತಾಗಿದಾಗ ಆತ್ಮನನ್ನು ನೋಡಿದೊಡನೆ ಓಡಿಹೋಗುವುದು. ಆತ್ಮ ಭಾವನೆಯ ಮುಂದೆ ಅಜ್ಞಾನ ನಿಲ್ಲುವುದೇ? ಗರುಡನ ಎದುರು ಸರ್ಪ ನಿಲ್ಲುವುದೆ?

ತನ್ನನ್ನು ಕವಿದ ಮೋಹಾಂಧಕಾರವನ್ನು ಸುಜ್ಞಾನ ರವಿಯ ಶಕ್ತಿಯಿಂದ ಭರತೇಶನು ಒತ್ತಿ ಓಡಿಸಿ, ಬಂದು ಅರ್ಘ ಫಳಿಗೆಯ ಮೇಲೆ ನುಡಿದನು :

"ಜಿನ ಜಿನ, ಜಿನ ಸಿದ್ಧ, ಅವರ ಸಾಹಸವನ್ನು ಗುರು ಹಂಸನಾಥನೊಬ್ಬನೇ ಬಲ್ಲ, ಮಕ್ಕಳು ಪ್ರಾಯದವರು. ಇದೇನು ದೀಕ್ಷೆಯನ್ನು ಬಯಸುವ ದಿನವೆ? ಮಾ, ಮಾ. ಇದು ವಿಚಿತ್ರವಾಗಿದೆ. ಚಿಗುರು ಮೀಸೆಯಿನ್ನೂ ರೇಖೆಗೆ ಬಂದಿಲ್ಲ; ಅವರ ಪ್ರೌಢಪ್ಪವೂ

ಸಂಪೂರ್ಣವಾಗಿಲ್ಲ, ಅಷ್ಟರಲ್ಲಿ ಆ ನೆನಪಾಯಿತೆ? ಇವರು ಪ್ರಾಯಭರಿತರಾಗುವರು ಎಂದಿರುವಾಗಲೇ ಹೀಗಾಯಿತಲ್ಲ, ಇವರು ತಾಯಿ ಬಡಿಸಿದ್ದನ್ನು ಉಂಡವರಲ್ಲದೆ, ತಮ್ಮ ಸ್ತ್ರೀಯರು ಬಡಿಸಿದ್ದನ್ನು ಉಂಡವರಲ್ಲ. ಪ್ರಾಯ ಬರುತ್ತಿದೆ. ಮದುವೆ ಮಾಡಬೇಕೆಂದಿರುವಾಗಲೇ ಹೀಗಾಗಬಹುದೇ? ಅವರು ಅಣ್ಣ ತಮ್ಮಂದಿರ ಕೇಳಿಕೆಯಲ್ಲಿ ಇದ್ದರಲ್ಲದೆ ಹೆಣ್ಣುಗಳಲ್ಲಿ ಕೂಡಿರಲಿಲ್ಲ, ಇವರ ಮದುವೆಯಿಂದ ಕಣ್ಣಿನ ಹಬ್ಬವನ್ನು ಕಾಣಬೇಕೆಂಬ ಬಯಕೆಯಿಂದಿರುವಾಗಲೇ ಹೀಗಾಯಿತಲ್ಲ, ಸುಜಯನನ್ನು ಬಿಟ್ಟು ಸುಕಾಂತ ಇರುತ್ತಿರಲಿಲ್ಲ, ವಿಜಯನೊಂದಿಗೆ ಮಹಾಜಯನೂ, ಅಜಿತಂಜಯ ನೊಂದಿಗೆ ಅರಿಂಜಯನೂ ಇರುತ್ತಿದ್ದರು. ವೀರಂಜಯನೂ, ಶತ್ರು ವೀರ್ಯನೂ ರತಿವೀರ್ಯನೂ ರವಿಕೀರ್ತಿಯೂ ಒಂದೇ. ಅವರು ಯಾರಿಗೂ ಸರಿಯಾದವರಲ್ಲ'' ಎಂದು ಅವರನ್ನು ನೆನೆದನು, ಭರತಚಕ್ರಿ.

''ರಾಜಮಾರ್ತಾಂಡನು ಗಣವಿದ್ಯೆಯಲ್ಲೂ, ವಿಕ್ರಮಾಂಕನು ಹಯವಿದ್ಯೆಯಲ್ಲೂ ಸಮರ್ಥರು. ರಾಜಮಂದರನು ಆನೆ ಕುದುರೆಗಳ ವಿರಾಟದಲ್ಲಿ ಪೂಜಿತನಾಗಿದ್ದನು. ರಥದಲ್ಲಿ ರತ್ನರಥಗೆ ಯಾರೂ ಇದಿರಿಲ್ಲ, ಪದ್ಮ ರಥನಿಗೆ ಅತಿರಥ ಮಹಾರಥರೂ ಇದಿರಿಲ್ಲ. ಭೂಮಿಗೇ ಅಗ್ಗಳರಾಗಿದ್ದರು ನನ್ನ ಕುಮಾರರು ಎಂದು ತಿಳಿದಿದ್ದೆನು. ಅವರು ಲೋಕದಲ್ಲಿ ಈ ಕಥೆ ಮಾಡಿದರು'' ಎಂದು ತನ್ನ ಕುಮಾರರನ್ನು ಭರತೇಶನು ಆರ್ತಿಯಿಂದ ಸ್ಮರಿಸಿಕೊಂಡನು.

''ನೋಂಪಿಯನ್ನು ಮಾಡಿ, ಮಕ್ಕಳು ಬೇಕೆಂದು ಪಂಚನಮಸ್ಕಾರವನ್ನು ಜಪಿಸಿ, ಘನತೆಯಿಂದ ಹಡೆದ ತಮ್ಮ ತಾಯಂದಿರ ಉದರಕ್ಕೆ ತಂಪು ಮಾಡಿದರು. ಹಗಲಿರುಳು ಅರುಹಂತದೇವನನ್ನು ಜಪಿಸಿ, ಯೋಗಿಗಳ ಪಾದಪೂಜೆ ಮಾಡಿ ಮಗನಾಗಬೇಕೆಂದು ಹರಕೆ ಹೊತ್ತು ಹೆತ್ತವರಿಗೆ ತಣ್ಣಗೆ ಮಾಡಿದರಲ್ಲ! ಹಾ ಈ ಹೆಣ್ಣುಗಳು, ಮಹಾಪರಾಕ್ರಮವನ್ನು ಪಡೆಯುವುದಕ್ಕೆಂದು, ಭಾಪು ಭಾಪು ಎನ್ನುವಂತೆ ಉಪವಾಸ ನೋಂಪಿಗಳನ್ನು ಮಾಡಿ, ಪಡೆದ ಮಕ್ಕಳು ಹೋದಾಗ ಭಾಪು ಭಾಪು ಎನ್ನುವಂತೆ ಉಪವಾಸ ಮಾಡಿದರು. ಅವರು ಹಾಗೆ ನೋಂಪಿಯನ್ನು ಮಾಡಿದ್ದು ಚೆನ್ನಾಯಿತು. ನೋಂತಫಲಕ್ಕೆ ಪುತ್ರ ಸಂತತಿಯಾದುದೂ ಚೆನ್ನಾಯಿತು. ಈ ರೀತಿ ನೋಂತ ನೋಂಪಿಯ ಫಲ ಜನನಿಯರಿಗೆ ಆಗಲಿಲ್ಲ, ಸಂತಾನಕ್ಕೆ ಆಯಿತು. ಇದೇ ವಿಚಿತ್ರ. ಬಾಲೆಯರ ಒಡನಾಟ ಮಾಡಿ ಕೊನೆಯಲ್ಲಿ ತಪಸ್ಸಿಗೆ ಹೋಗುವ ಬದಲು ಬಾಲರಿರುವಾಗಲೇ ತಪಸ್ಸಿಗೆ ಹೋಗಿ ಎಂದು ಹೇಳಿ ತಾಯಂದಿರು ಹಾಲು ಉಣಿಸಿದರೆ? ಹಾ'' ಎಂದು ಭರತೇಶನು ಉದ್ಗಾರವೆತ್ತಿದನು.

''ನಂದನರಿಂದ ಒಂದೂ ಕೊರತೆಯಿಲ್ಲ, ಇದು ಹಿಂದೆ ನಾನು ಮಾಡಿದ ಕರ್ಮವು. ಅಯ್ಯೋ! ಈಗ ನೊಂದುಕೊಂಡರೆ ಫಲವೇನು?'' ಎಂದು ಕೊಂಡ ಭರತೇಶನು ಕೂಡಲೇ ಅರವಿಂದನೊಡನೆ ಹೀಗೆ ನುಡಿದನು :

''ಸ್ವಾಮಿ, ನಾವು ಹೇಗೆ ಬರುವುದು? ನಮ್ಮನ್ನು ಅವರು ಕರೆದುಕೊಂಡು ಹೋದ ರೀತಿಯನ್ನು ಚಿತ್ತೈಸು. ನಾವು ಹಿಂದೆ ನಿಂತರೆ, ಹೋಗಿ. ಅಪ್ಪಾಜಿಗೆ ಹೇಳುವರೆಂದು,

ನಮ್ಮನ್ನು ಎಲ್ಲರನ್ನೂ ಕರೆದು ಮುಂದೆ ನಡೆಸುತ್ತಿದ್ದರು. ತಾವು ಹಿಂದಿನಿಂದ ಬರುತ್ತಿದ್ದರು. ಎಡಬಲದಿಂದ ಜಾರಿ ಹೋದರೆ ತಂದೆಗೆ ಸೂಚಿಸುವರೆಂದು ನಮ್ಮನ್ನು ಮಧ್ಯದಲ್ಲೇ ನಡೆಸುತ್ತಿದ್ದರು; ತಾವೆಲ್ಲರೂ ನಮ್ಮನ್ನು ಬಳಸಿಕೊಂಡಿದ್ದರು. ಇವರಿನ್ನು ತಪಸ್ಸಿಗೆ ಹೋಗುವವರೊಡನೆ ನಮಗೇನು ಆಸೆಯೆಂದು ನಾವು ಹಿಂದುಳಿದರೆ ಹತ್ತೆಂಟು ಹೆಜ್ಜೆ ಹಿಂದುಳಿದಾಗ ಅವರೇ ಬಂದು ನಮ್ಮನ್ನು ಕೈಹಿಡಿದು ಎಳೆದೊಯ್ದರು. ನಮಗೆ ಇಷ್ಟವಾದ ಮಾತುಗಳನ್ನೇ ಆಡುತ್ತಿದ್ದರು. ಕೈಯ್ಯ ಕಡಗಗಳ ತೆಗೆದು, ನಮಗೆ ತೊಡಿಸುತ್ತಿದ್ದರು. ಅದು ನಿಮಗೇ ಇರಲಿ ಎಂದು ಹೇಳುತ್ತಿದ್ದರು. ಕೈಲಾಗು ಹಿಡಿವ ನೆವನದಲ್ಲಿ ನಮ್ಮ ಕೈಹಿಡಿದು ಎಳೆದುಕೊಂಡೇ ಹೋಗುತ್ತಿದ್ದರು. ಅವರು ಗದರಿಸಿ ನುಡಿಯುತ್ತಿರಲಿಲ್ಲ, ಕೋಪಿಸುತ್ತಿರಲಿಲ್ಲ, ನಮ್ಮ ತಳಮಳವನ್ನು ಕಂಡು ನಗುತ್ತಿದ್ದರು. ನಮ್ಮ ಮಾತಿಗೆ ಹೂಂಗುಡುತ್ತಿದ್ದರು. ನಮ್ಮ ಮಾತುಗಳನ್ನೇ ನುಡಿಯುತ್ತಿದ್ದರು. ಬಿಂಕದಿಂದ ನಡೆಯುತ್ತಿದ್ದರು. ಊಳಿಗದವರಾದ ನಮ್ಮೆಲ್ಲರ ಮೋರೆಯೂ ಕಾಳಾಗಿ ಕಂಡಿದ್ದರೆ, ಅವರ ಮುಖದಲ್ಲಿ ಕಾಂತಿ ಹೊಳೆಯುತ್ತಿತ್ತು, ಅದೊಂದು ವಿಚಿತ್ರವೆ! ಅದನ್ನು ಏನೆಂದು ಹೇಳಲಿ ಒಡೆಯ! 'ಸ್ವಾಮಿ ಚಿಕ್ಕಂದಿನಲ್ಲಿ ದೀಕ್ಷೆಯೇಕೆ ಸ್ವೀಕರಿಸಿರಿ' ಎಂದು ಕೈಮುಗಿದು ಬೇಡುತ್ತಿದ್ದರೆ, ಅವರು ಆ ಮಾತನ್ನೇ ಮರೆಯಿಸಿ, ಮತ್ತೊಂದು ಪ್ರಸಂಗವನ್ನೇ ಹೇಳುತ್ತಿದ್ದರು.

''ಸುರಸೇನ, ವರಸೇನ, ಪುಷ್ಪಕ, ಕರುವಿಂದ, ಅರವಿಂದ ಬಾ ಎಂದು ನಮ್ಮನ್ನು ಕರೆದು ಒಂದು ಕಥೆಯನ್ನು ಹೇಳುತ್ತ ಕರೆದುಕೊಂಡು ಹೋಗುತ್ತಿದ್ದರು. ಒಡೆಯ; ನೋಡಿದೆಯಾ ಅವರ ತಂತ್ರವನ್ನು? ರಾಮ, ರಂಜಕ, ರನ್ನ, ಸೋಮ, ಹೊನ್ನಲ, ಹೊನ್ನ, ಭೀಮ ಬಾ — ಎಂದು ನಮ್ಮ ಹೆಸರು ಹೇಳಿ ಕರೆದು ಒಂದೊಂದು ಪ್ರಸಂಗವನ್ನೇ ಅಭಿರಾಮವಾಗಿ ಹೇಳುತ್ತ ಸಾಗುತ್ತಿದ್ದರು. 'ಅಣ್ಣಾಜಿ, ನಿಮ್ಮ ಸೇವಕ ಸುಮುಖನು ನಿಮ್ಮ ಬಣ್ಣವುಳ್ಳವನು. ನಿನ್ನವನನ್ನೇ ಬಣ್ಣಿಸುವುದೇಕೆ, ಎಲ್ಲರೂ ಉತ್ತಮರು' ಎಂದು ನಮ್ಮನ್ನು ಬಣ್ಣಿಸುತ್ತಿದ್ದರು. ಅವರು ಈ ಮೊದಲು ಎಂದೆಂದೂ ಒಂದು, ಎರಡು, ಮೂರು ಮಾತಿಗಿಂತ ಹೆಚ್ಚು ಮಾತೇ ಆಡಿದವರಲ್ಲ, ಆದರೆ ಇಂದು ಮಾತ್ರ ಲೆಕ್ಕವಿಲ್ಲದಷ್ಟು ಮಾತುಗಳನ್ನಾಡಿದರು. ಒಡೆಯರ ಪುತ್ರರು ಅಂದಕಾರರು! ನಮಗೆ ಅವರ ಮಾಯಾತಂತ್ರದ ಆಟ ತಿಳಿಯಿತಾದರೂ, ಒಡೆಯರು ಕಂಡ ರೀತಿಗೆ ಇದಿರಾಗಬಾರದೆಂದು ಸುಮ್ಮನಿದ್ದೆವು. ಬರುತ್ತಿರುವ ಪ್ರಜೆಗಳಿಗೆ ಅಲ್ಲಲ್ಲಿ ಇದನ್ನು ತಿಳಿಸಿದರೆ ಅಪ್ಪಾಜಿ ಆಣೆಯೆಂದು ನಮ್ಮ ಬಾಯನ್ನು ಕಟ್ಟಿ ಸುಮ್ಮನೆ ನಡೆದರು. ಆದೀಶನು ದೀಕ್ಷೆಯನ್ನೇಕೆ ಕೊಡುವನು? ಬುದ್ಧಿಯನ್ನು ಹೇಳಿ ಕಳುಹಿಸುವರು — ಎಂದು ಆಸೆಯಿಂದ ಹೋದೆವು ಸ್ವಾಮಿ. ಆದರೆ ಕುಮಾರರಿಗೆ ಮೆಚ್ಚಾದುದನ್ನೇ ದೇವರು ಕೊಟ್ಟರು. ಪರಮ ಪಾಪಿಗಳು ನಾವು'' ಎಂದು ಅರವಿಂದನು ಅಳುತ್ತ ಹೇಳಿದನು. ನುಡಿ ನಡೆದಂತೆ ಕಣ್ಣೀರೂ ಹರಿಯುತ್ತಿತ್ತು. ಆಗಾಗ ಬಿಕ್ಕಳಿಸುತ್ತ ಕಣ್ಣೊರೆಸುತ್ತ ಒಡೆಯನಿಗೆ ಕುಮಾರರ ಕುರಿತು ಹೇಳಿದನು. ಅರವಿಂದ ರವಿಯನ್ನು ಅಗಲಿದಂತೆ, ಅರವಿಂದನು ರವಿಕೀರ್ತಿ ರಾಜನನ್ನು ಅಗಲಿದ್ದನು.

ಅರವಿಂದನು ತಿರುಗಿ ತನ್ನವರನ್ನು ನೋಡಿದರು. ಅವರೂ ಅವನಂತೆ ಶೋಕಿಸುತ್ತಿದ್ದರು. ಭರತೇಶ್ವರನು ಅವರನ್ನು ನೋಡಿ, ''ನಿಮಗಿಷ್ಟು ನೋವೇಕೆ? ಸಹಿಸಿಕೊಳ್ಳಿರಿ'' ಎಂದನು.

''ಹೆತ್ತವರನ್ನೂ ಮರೆಸುವ ಹಾಗೆ ನಮ್ಮ ಇಷ್ಟಾರ್ಥಗಳನ್ನು ಸಲ್ಲಿಸುತ್ತಿದ್ದರು. ಭೂಮಿಯಲ್ಲೇ ಶ್ರೇಷ್ಠರಾದ ಒಡೆಯರು ಹೋದರಲ್ಲ! ಇದನ್ನು ಹೇಗೆ ಸಹಿಸುವುದು ಒಡೆಯಾ?''

''ಅರವಿಂದ, ಅವರಿಗೆ ಯಾವುದರಿಂದ ವಿರಕ್ತಿಯು ಪ್ರಾಪ್ತವಾಯಿತೆಂದು ವಿಸ್ತರಿಸು.''

''ಹಸ್ತಿನಾಪುರದರಸರು ದೀಕ್ಷೆಗೊಂಡುದನ್ನು ಕೇಳಿ, ತಾವು ಸನ್ಯಾಸ ಕೈಕೊಂಡರು.''

''ತಡವಾಗಿ ದೀಕ್ಷೆಯನ್ನು ಸ್ವೀಕರಿಸುವ; ಈಗ ಬೇಡವೆಂದು ರವಿಕೀರ್ತಿಯು ನುಡಿಯಲಿಲ್ಲವೇ? ಹೇಳು.''

''ಒಡೆಯಾ, ಅವನೇ ನಮ್ಮೆಲ್ಲರನ್ನೂ ಕೆಡಿಸಿದವನು. ಧ್ಯಾನವನ್ನು ಕೊಂಡಾಡಿ, ದೀಕ್ಷೆಯನ್ನು ಕೊಂಡಾಡಿ, ಮನುಷ್ಯ ಜೀವನವನ್ನು ಜರೆದನು. ಆ ಮಾತಿಗೆ ಎಲ್ಲರೂ ಆನಂದಪಟ್ಟರು. ಅವನಿಂದಲೇ ನಮ್ಮ ನಾಡಿಗೆ ತೊಂದರೆಯಾಯಿತು.''

''ತಪಸ್ಸಿಗೆ ಅನುಕೂಲವಾಯಿತೆಂದು ಅವರು ಯೋಚನೆ ಮಾಡುವಾಗ, ಅವರಲ್ಲಿ ಒಬ್ಬರಾದರೂ ಜನಕಗೆ ಹೇಳುವ'' ಎಂದು ನಮ್ಮನ್ನು ನೆನೆಯಲಿಲ್ಲವೆ?''

''ಕೆಲವರು ಅಪ್ಪಾಜಿಗೆ ಹೇಳಿ ಬರುವೆವು — ಎಂದರು. ಕೆಲವರು ಅಪ್ಪಾಜಿಯನ್ನು ಕೇಳಿದರೆ ದೀಕ್ಷೆಯು ಫಲಿಸದು — ಎಂದರು. ಈ ಯೋಚನೆ ಅವರಲ್ಲಿ ಸುಳಿಯಿತು, ಸ್ವಾಮಿ! ಒಂದು ವೇಳೆ ತಾತನನ್ನು ಬೀಳ್ಕೊಳ್ಳಬಹುದು ಎಂದರು ಕೆಲವರು. ಆದರೆ, ಮಾತೆಯರು ಬಿಡಲಾರರು ಎಂದರು ಮತ್ತೆ ಕೆಲವರು. ಆ ತೊಡಕು ಯಾಕೆ? ನಾವು ಯಾರು? ಅವರು ಯಾರು? ಹೀಗೆ ಮಾತಾಡುತ್ತ ಅವರು ಮುಂದೆ ಸಾಗಿದರು.''

ಈ ಮಾತನ್ನು ಕೇಳಿ, ಭರತಚಕ್ರಿಯು ಮಕ್ಕಳು ತನ್ನ ಅಂತರ್ಯವನ್ನು ತಿಳಿದುಕೊಂಡರೆಂದು ಸಂತೋಷದಿಂದ ನಕ್ಕನು.

''ಅವರು ಏನೆಂದರು? ಏನೆಂದರು? ಆ ಮಾತನ್ನೆಲ್ಲ ಇನ್ನೊಮ್ಮೆ ಹೇಳು''

''ಕೊನೆಗಾದರೂ ದೀಕ್ಷೆಗೆ ನಡೆಯುವವರೆಂದು ಅಪ್ಪಾಜಿಯು ತಡೆಯಲಾರನು. ಕೂಡಲೇ ಕಳುಹಿಸುವನು. ಆದರೆ ಜನನಿಯರು ಬಿಡಲಾರರು ಮೋಕ್ಷಾಂತರಾಯದ ಗೊಡವೆಯನ್ನು ಅವರು ಎಣಿಸುವರೇ — ಎಂದು ಹೇಳಿದರು ಸ್ವಾಮಿ''

''ಇವರು ಪ್ರಾಯದಲ್ಲಿ ಕಿರಿಯರಲ್ಲದೆ ಆತ್ಮಾಭಿಪ್ರಾಯದಲ್ಲಿ ಕಿರಿಯರಲ್ಲ, ಅವರಲ್ಲಿ ಈ ಯುಕ್ತಿಯುಂಟೆಂದು ನಾನು ಮೊದಲೇ ತಿಳಿಯಲಿಲ್ಲವಲ್ಲ!'' ಎಂದು ಚಕ್ರೇಶ್ವರನು ತಲೆದೂಗಿದನು.

''ರತ್ನದ ಗನಿಯಲ್ಲಿ ಜನಿಸಿದ ಮಣಿಗಳಿಗೆ ಸುಪ್ರಭೆಯು ಭಿನ್ನವಾಗಿರುವುದೇ ರಾಜೇಂದ್ರ? ನಿನ್ನ ಪುತ್ರರಿಗೆ ವಿವೇಕ ಕಾಂತಿಯಿರುವುದು ಸಹಜವಾಗಿದೆ?'' ಎಂದು ಸಖರು ಬಿನ್ನಹ ಮಾಡಿದರು.

"ನಾಗರ, ದಕ್ಷಿಣ, ಇಲ್ಲಿ ನೋಡು, ಅವರು ಹೋಗಲಿ; ಅವರು ಹೋದರೇನು? ಅದಕ್ಕಲ್ಲ, ಹೋಗುವಾಗ ಅಖಿಲ ಪ್ರಪಂಚವನ್ನೂ ತಿಳಿದ ಅವರ ಕೆಲಸಕ್ಕೆ ಮೆಚ್ಚಿದೆನು. ಊಳಿಗದವನನ್ನು ಅಂಜಿಸದೆ ಕರೆದೊಯ್ದು ಬಗೆಗೆ, ನನ್ನನ್ನು ಕೇಳದೆ, ಮಾತೆಯರೊಡನೆ ಆಲೋಚಿಸದೆ ಹೊರಗೆ ಹೋದ ಬಗೆಗೆ ನನ್ನ ಚಿತ್ತವು ಸೂರೆಯಾಗುವುದಿಲ್ಲವೇ ಹೇಳು?"

"ಯುಕ್ತಿಯಲ್ಲಿ ಸಾಮಾನ್ಯರಾದವರು ಇಷ್ಟು ಪ್ರಾಯದಲ್ಲಿ ಮುಕ್ತಿಗೆ ಉದ್ಯೋಗಿಸುತ್ತಾರೆಯೇ ಸ್ವಾಮಿ? ದಿಗಂತಗಳನ್ನೂ ದಾಟುವಂತಹ ಕೀರ್ತಿಗಳಿಸಿ ಎಲ್ಲರೂ ಷಹಬಾಸ್ ಎನ್ನುವಂತಹ ಸೂಕ್ತಿಯನ್ನು ತೋರಿಸಿದರು."

"ಪೂಜ್ಯನಾಗಿ ರಾಜ್ಯವಾಳಲು ಅಯ್ಯನಿದ್ದಾನೆ. ನಾವು ಅಮೃತ ಸಾಮ್ರಾಜ್ಯವನ್ನು ಆಳುವ — ಎಂದು ಶ್ರೇಷ್ಠವಾದ ತಪಸ್ಸನ್ನು ತಾಳಿದರಲ್ಲವೆ! ಲೇಸು, ಲೇಸು!" ಎಂದು ಅಭಿಮಾನದಿಂದ ಮಂತ್ರಿಯು ನುಡಿದನು.

"ದೇವರ ತಮ್ಮಂದಿರು ನೂರು ಮಂದಿ ಅಂದು ತಪಸ್ಸಿಗೆ ಹೋದರು. ಇಂದು ಇವರು ನೂರು ಮಂದಿ ಹೋಗಿ ನನಗೆ ನೋವನ್ನುಂಟು ಮಾಡಿದರು." ಎಂದು ಅರ್ಕಕೀರ್ತಿ ರಾಜನು ವ್ಯಾಕುಲದ ಆವೇಶದಿಂದೆದ್ದು ಹೇಳಿದನು! "ಹಿರಿಯರಾದ ನಾವು ದೀಕ್ಷೆ ತಾಳಿದ ಬಳಿಕ ಅವರು ದೀಕ್ಷೆಯನ್ನು ತಾಳುವುದೇ ಕ್ರಮ. ಅವರು ದುರುಳರು! ಮೊದಲು ಹೋದರು — ಎಂದು ಹೇಳದೆ ಭಾಪು ಎಂದು ಹೊಗಳುತ್ತೀರಿ."

"ಸೈರಿಸು ಮಗನೇ! ನನ್ನ ತಮ್ಮಂದಿರ ಹಾಗೆ ಇವರು ಅಹಂಕಾರದಿಂದ ಹೋದರೇ? ಸಾರವಾದ ವಿರಕ್ತಿಯು ಇವರನ್ನು ಕರೆದೊಯ್ದಿತು. ಅದಕ್ಕಿನ್ನು ಕಣ್ಣೀರಿಡಬೇಡ. ನಾನೂ ನೀವಿಬ್ಬರೂ ಶೋಕಿಸಿದಾಗ ನಮ್ಮ ಸೇನೆಯೇ ಮುಂತಾದವರೂ ಮಾನಿನಿಯರೂ ಮರುಗುವರು. ಅಣ್ಣಾ ಸಹಿಸಿಕೋ"

ಎಂದು ನರನಾಥನು ನಂಬಿಸಿದನು. ಅರವಿಂದ ಮೊದಲಾದವರನ್ನು ಕರೆದು ಸಂತೈಸಿ, ಹಿರಿದಾಗಿ ಮನ್ನಣೆಯೆತ್ತು ಯುವರಾಜನ ಹತ್ತಿರದಲ್ಲೇ ಇರಿಯೆಂದು ನೇಮಿಸಿದನು. "ಮೊದಲು ಇವರ ಒಡೆಯರು ಇವರನ್ನು ಪೊರೆದುದೆಲ್ಲವೂ ಮರೆತು ಹೋಗುವಂತೆ ನೀನು ಇವರನ್ನು ಚೆನ್ನಾಗಿ ರಕ್ಷಿಸು" ಎಂದು ಮಗನಿಗೆ ಹೇಳಿ ಭರತೇಶನು, ತನಗೆ ಎರಗಿದವರೆಲ್ಲರನ್ನೂ ತನ್ನ ಮುಂದಿಟ್ಟುಕೊಂಡು ಅವರಿಗೆಲ್ಲ ಇಂಬನ್ನೇ ಮಾಡಿದನು.

ಆ ಸಾರ್ವಭೌಮನು ಅವರನ್ನೆಲ್ಲ ಕಳುಹಿಸಿ, ಕೂಡಲೇ ತನ್ನ ಮಂದಿರದ ಒಳಗೆ ಹೋದನು. ಬಿರುಗಾಳಿ ಬಾಧಿಸಿದ ಎಳೆ ಲತೆಯಂತೆ ಹೆಂಗಸರು ಅಧಿಕ ಶೋಕದಿಂದ ಬಂದರು. ಅವರ ದೇಹವು ಆಯಾಸದಿಂದ ಬಾಡಿತ್ತು, ಕಟ್ಟಿದ ತುರುಬು ಬಿಚ್ಚಿ ಹೋಗಿ ಕೆದರಿತ್ತು, ಕಂದಿದ ಮುಖದಿಂದ ಕಣ್ಣೀರು ಸುರಿಯುತ್ತಿತ್ತು. ಬಂದವರೇ ಚಕ್ರೇಶ್ವರನ ಕಾಲ ಮೇಲೆ ಬಿದ್ದು ಶೋಕಿಸಿದರು.

"ಅರಸ! ನಂದದರು ಆಗಲಿ ಹೋದರು. ನಮ್ಮ ಕಣ್ಣು ಮನಸ್ಸುಗಳ ಆನಂದರು ಹೋದರು. ಹಾ! ಹಾ! ಮುಂದೆ ನಮ್ಮ ಕಣ್ಣಿಗೆ ಅವರೇ ಪ್ರೀತಿಯೆಂದು ಭಾವಿಸಿದ್ದೆವು. ಅವರು ಇಂದೇ ನಮ್ಮನ್ನು ಕೊಂದರು. ಮನ್ಮಥ ರೂಪಿನ ಮಕ್ಕಳ ಮಾಣಿಕ್ಯಗಳನ್ನು ಕಾಣೆವು. ಏನು ಮಾಡುವಿ? ದೊರೆಯೇ ನಮಗಿನ್ನು ಗತಿ ಯಾವುದು?" ಎಂದು ಅವರು

ಬಾಣತಾಗಿದ ಹುಲ್ಲಿನಂತೆ ಎದೆಯನ್ನೊಡೆದುಕೊಂಡರು. ''ಈ ನಾಡನ್ನು ಆಳುವರೆಂದು ನಾವು ಕಂಡಿದ್ದೆವು; ಆದರೆ ಅವರು ಕಾಡನ್ನು ಆಳಲು ಹೋದರೆ? ಕೊನೆಯಲ್ಲಿ ದೀಕ್ಷೆಯನ್ನು ಬಯಸದೆ ಈಗಲೇ ದೀಕ್ಷೆಯನ್ನು ಬಯಸಿ ನಮ್ಮನ್ನು ಕೆಡಿಸಿದರು. ಲಲಿತವಾದ ವಿವಾಹದಲ್ಲಿ ನಮ್ಮ ಕಣ್ಣಿನ ಪ್ರೀತಿಯನ್ನು ಸಲಿಸಲಿಲ್ಲ, ಫಲ ಬರುವ ವೇಳೆಯಲ್ಲಿ ಸಲಹಿದವರನ್ನು ಬಿಟ್ಟು ಮರವು ಹೋಗುವಂತೆ, ನಿನಗೆ ಹೇಳದೆ, ನಮಗೂ ಹೇಳದೆ ತಪಸ್ಸಿಗೆ ಹೋದರು. ಹಾಗೆ ಹೋಗುವಂತೆ ಅವರ ಮನಸ್ಸಿಗೆ ನಾವು ಯಾವ ನೋವನ್ನುಂಟು ಮಾಡಿರುವೆವು? ನಮ್ಮ ವ್ರತಗಳೇನೂ ಅರ್ಥವಾಗಿರಲಿಲ್ಲ, ಮನಸ್ಸಿನ ಬಯಕೆಯು ಅರೆಯಾದ ಅಲ್ಪ ಫಲವಿದು. ಸಂಪತ್ತು ಕಂಡೂ ಕಾಣದಾಯಿತು.'' ಎಂದು ನೃಪನ ಎದೆಯು ನಡುಗುವಂತೆ ದುಃಖಿಸಿದರು.

''ಕಮಲಾಕ್ಷಿಯರೇ, ಸೈರಿಸಿ; ಅವರು ನಮ್ಮನ್ನು ನೋಯಿಸಿ ಹೋಗಲು ಬಂದವರು ಹಾಗೆ ಮಾಡಿದರು. ಇನ್ನು ಬಾಯಳಿದು ಶೋಕಿಸಿದರೆ ಏನಾದೀತು?'' ಎಂದು ಭರತೇಶನು ತನ್ನ ಸತಿಯರನ್ನು ಸಮಾಧಾನ ಪಡಿಸಿದನು. ''ಮಕ್ಕಳ ಸಂತೋಷವನ್ನು ನಾವು ಪ್ರೀತಿಸುತ್ತಿದ್ದೆವು. ಆದರೆ ಆ ಮಕ್ಕಳು ಬೇರೆಯೇ ಎಣಿಸಿದರು. ತಾನೊಂದು ನೆನೆದರೆ ವಿಧಿಯೊಂದು ನೆನೆವುದು ಎಂಬೀ ನುಡಿ ಈಗ ಪ್ರತ್ಯಕ್ಷವಾಯಿತು. ನಾನು ಇವರಿಗೆ ತಕ್ಕ ಹೆಣ್ಣುಗಳು ಎಲ್ಲಿರುವರೆಂದು ಧ್ಯಾನಿಸುತ್ತಿದ್ದೆನು. ಅಷ್ಟರಲ್ಲಿ 'ತಾನೊಲ್ಲೆ ಹೆಣ್ಣನ್ನು; ನಮ್ಮ ಅಯ್ಯನು ಯಾರಿಗೆ ಹೆಣ್ಣನ್ನು ನೋಡುವನು' ಎಂಬ ಮಾತನ್ನು ಮಾಡಿದರೀಗ. ಕರ್ಮವನ್ನು ಮೀರುವವರಾರು? ಏರುತ್ತಿರುವ ಈ ಪ್ರಾಯದಲ್ಲಿ ಅವರಿಗೆ ಈ ಪ್ರಾಪ್ತಿಯೇ? ಮೀರಿದ ಕಾರ್ಯಕ್ಕೆ ಇನ್ನು ಚಿಂತಿಸುವುದೇಕೆ.'' ಅಳುವುದು ಆರುವಂತೆ ಭರತೇಶನು ಹೇಳಿದನು.

''ಮರುಗಿದರೆ, ಅವರಿನ್ನು ಬರುವರೇ? ಬರಲಾರರು. ಆದ್ದರಿಂದ ಬರಿದೆ ಅತ್ತು ಬಾಯಾರಿಸಿಕೊಳ್ಳುವುದೇಕೆ? ಅವರ ಚಿಂತೆಯನ್ನು ಮರೆಯಬೇಕು. ಇಲ್ಲವಾದರೆ ನಿಮ್ಮ ತಿಳಿವಳಿಕೆ ಎಂಥಾದ್ದು? ಹೇಳಿ. ಮಾಣಿಗಳಾಗಿದ್ದಾಗ ಮಾಣಿಕಗಳಿಗೆ ಸರಿಯಾಗಿ ಕಾಣಬೇಕು. ಅಗಲಿ ಹೋದಾಗ, ಕೊಂಡಾಟವನ್ನು ಕಡೆಗಣಿಸಿ ಮರೆಯಬೇಕು. ಹಾಗೆ ಮಾಡದಿದ್ದರೆ ನಿಮ್ಮ ತಿಳಿವಳಿಕೆಗೆ ಊಣೆ ಬರುವುದು. ಅವರು ತಪಸ್ಸಿಗೆ ಹೋದರಷ್ಟೆ! ಲೇಸನ್ನೇ ಮಾಡಿದರು. ಬೇರೊಂದು ಕೆಟ್ಟ ದಾರಿ ಹಿಡಿಯಲಿಲ್ಲ, ಅಪಕೀರ್ತಿ ತಂದರೆ ಅಳಬೇಕಲ್ಲದೆ ಈ ಪರಮಾರ್ಥಕ್ಕೆ ಅಳುವುದೇಕೆ? ಇದು ನೋವಲ್ಲ! ಹಾ! ಇನ್ನೊಂದು ಮಾತು ಕೇಳಿ; ಮರೀಚಿಯಂತೆ ಅನ್ಯಮಾರ್ಗವನ್ನು ಆಚರಿಸಲಿಲ್ಲ, ಅಜ್ಜನನ್ನು ಸೇರಿದರು. ಅದಕ್ಕಾಗಿ ನಿಮಗೆ ಈ ಶೋಕಾಚರಣೆಯೇ? ಇನ್ನೊಂದು ಮಾತು ಕೇಳಿ; ರಾಜರಾಗುತ್ತಿದ್ದರೆ ಅವರಿಗೆ ನನ್ನ ರಾಜ್ಯ ಮಾತ್ರ ನಮಿಸುವುದು. ಈಗ ಅವರು ನರ ನಾಗ ಅಮರ ಲೋಕದವರೆಲ್ಲ ನಮಿಸುವ ಉನ್ನತಿಯನ್ನು ಪಡೆದರಲ್ಲವೆ? ಮಿಕ್ಕ ಹೆಂಗಸರ ಮಕ್ಕಳು ಈ ಭೂಮಿಯನ್ನು ಆಳಿದರೆ, ನಿಮ್ಮ ಮಕ್ಕಳು ಅಖಿಲ ಲೋಕವನ್ನೇ ಕಾಲಿಗೆ ಎರಗಿಸಿಕೊಂಡರು. ಈ ಅಧಿಕ ಸಂಪತ್ತೊಂದು ನಿಮಗೆ ಸಾಲದೆ? ಶೋಕದಿಂದ ದೇಹವು ಬಾಡುವುದು, ಆಯುಷ್ಯವು ಕೆಡುವುದು; ಭೀಕರ ಪಾಪವು ಕಟ್ಟುವುದು. ಪಾಕಿಗೆ ಚಿಂತಿಸಿ

ಪ್ರಣವನೀಗಿದರೆಂಬ ಮಾತಿಗೆ ಬಲಿಯಾಗುತ್ತೀರಾ? ಸಾಕು ಸುಮನಾಜಿ, ವೀಣಾಜಿ, ವಿದ್ರುಮಾವತಿ, ವೀಣಾದೇವಿ ಬನ್ನಿ, ಬನ್ನಿ'' ಎಂದು ಜ್ಞಾನರ ಅರಸನಾದ ಭರತೇಶನು ಅವರನ್ನು ಅಪ್ಪಿಕೊಂಡು ಕಣ್ಣೀರನ್ನು ಒರಸಿದನು. ''ನನ್ನಾಣೆ, ಶೋಕಿಸಬೇಡಿ'' ಎಂದನು.

''ಮಾಣಿಕ್ಯದೇವಿ, ಮಂದ್ರಾಣಿ, ಚಂದ್ರಾಣಿ, ಕಲ್ಯಾಣಿ, ಮಧು ಮಾದವಾಜಿ, ಜಾಣಾಜಿ, ಕಾಂಚನಮಾಲೆ, ಬನ್ನಿ, ಬನ್ನಿ. ಈ ಮರುಕವನ್ನು ಬಿಡಿ'' ಎಂದು ಅಪ್ಪಿಕೊಂಡು ಸಂತೈಸಿದನು ಭರತೇಶ.

''ಮಂಗಲವತಿ, ಮದನಾಜಿ, ರತ್ನಾವತಿ, ಶೃಂಗಾರವತಿ, ಪುಷ್ಪಮಾಲೆ, ಭೃಂಗಲೋಚನೆ, ನೀಲಲೋಚನೆ, ಮಕ್ಕಳ ಶೋಕವನ್ನು ಮರೆಯಿರಿ'' ಎಂದು ಶಾಖಾ ಶರೀರದ ಹಲವು ರೂಪವನ್ನು ಧರಿಸಿ ಅವರನ್ನು ಅಪ್ಪಿ ಕೊಂಡು ಮೈ ದಡವಿದನು. ಮುಡಿಯನ್ನು ಕಟ್ಟಿದನು. ಕಂಬನಿಯನ್ನು ಒರಸಿದನು. ಸವಿ ಮಾತುಗಳಿಂದ ಸಂತೈಸಿದನು.

''ಅಯ್ಯೊ! ಮಕ್ಕಳು ಅಗಲಿದರೇನಾಯಿತು? ಚಂದದಿಂದ ನೀವು ನನ್ನನ್ನು ಭಜಿಸಿರಿ. ನಿಮಗೆ ಮಕ್ಕಳನ್ನು ಕೊಡುವೆನು. ಮರುಗಬೇಡಿರಿ'' ಎಂದೊಡನೆ ಅವರೆಲ್ಲರೂ ಅದನ್ನು ಕೇಳಿ, ಓರೆ ಮುಖ ಮಾಡಿ ನಕ್ಕು ಬಿಟ್ಟರು.

''ಅಳುವವರನ್ನು ನಗಿಸಿದರು ಎಂಬುದನ್ನು ನಿನ್ನಲ್ಲೇ ಕಂಡೆವು ದೇವ ಅತ್ತ ಸಾರು'' ಎಂದು ತೋಳತೆಕ್ಕೆಯಿಂದ ಬಿಡಿಸಿಕೊಂಡು ನಗುಮೊಗದಲ್ಲೇ ದೂರ ಸರಿದು ನಿಂತರು.

''ಹೊರಗೆ ಹೋದ ಗತಿಯ ಗುಟ್ಟು ಒಳಗೆ ಹೋದರೆ, ದೇವರಿಗೆ ಎತ್ತರ ತತ್ತರದ ಆಟವಾಗುತ್ತದೆ. ಕಿರಿಯ ಮಕ್ಕಳು ಹೋದ ನೋವಿಲ್ಲವೆಂಬುದೀಗ ತಿಳಿಯುತ್ತಿದೆ'' ಎಂದು ಸತಿಯರು ಹೇಳಿದರು.

''ನೀವು ನೊಂದಿರುವುದನ್ನು ನೋಡಿ, ನಿಮ್ಮನ್ನು ನಗಿಸಬೇಕೆಂದು ಹಾಸ್ಯಾನು ವಾದದಿಂದ ನಗಿಸಿದೆನು. ನಾನೂ ಉದರದಲ್ಲಿ ನೋವಿಲ್ಲದೆಯೇ ತಾಳಿಕೊಂಡೆನು. ಇನ್ನು ಅತ್ತರೆ ಏನಾಗುವುದು? ನಿಮಗೆ ಒಬ್ಬೊಬ್ಬರಿಗೆ ಒಬ್ಬೊಬ್ಬರೇ ಕುಮಾರರು. ನಿಮಗಾದ ನೋವು ಹಬ್ಬುಗೆಯಿಂದಾದುದು. ನನಗಾದರೋ ನೂರುಮಂದಿಯೂ ಸರಿಯಲ್ಲವೇ? ಆದರೂ ನಾನು ಬಿಗಿಯಾಗಿ ಸಹಿಸಿದೆನು. ನೊಂದರೆ ಏನಾಗುವುದು? ನನ್ನ ಹೆಂಡತಿಯರಿಗೆ ಒಂದೊಂದು ಶಿಶುವಲ್ಲದೆ ಮತ್ತೊಂದು ಶಿಶುಗಳು ಆಗಲಾರವೆಂದು ಜನರೆಲ್ಲರೂ ಬಲ್ಲರು. ಆದರೂ ಉಪಚಾರಕ್ಕಾಗಿ ಹೇಳಿದೆನು. ಇನ್ನಾದರೂ ನೊಂದುಕೊಳ್ಳಬೇಡಿ.''

ಎಂದು ರಾಜೇಂದ್ರನು ಸತಿಯರನ್ನೆಲ್ಲ ಸಂತೈಸಿ, ಅವರವರ ಅಂತಃಪುರಗಳಿಗೆ ಕಳುಹಿಸಿ ತಾನು ಗೌರವ ಲೀಲೆಯಲ್ಲಿದ್ದನು.

## ೧೯

# ಪಂಚೈಶ್ವರ್ಯ

ಭರತೇಶ್ವರನು, ಮಡದಿಯರ ದುಃಖವನ್ನು ಆರಿಸಿ, ದೀಕ್ಷೆ ಪಡೆದಿರುವ ಮಕ್ಕಳನ್ನು ನೋಡುವೆನೆಂದು, ಮರುದಿನವೇ ರಜತಾದ್ರಿಗೆ ಎದ್ದು ಬಿಟ್ಟನು. ಹಡೆದ ಒಡಲು ಸಹಿಸುವುದೇ? ಯುವರಾಜನೇ ಮೊದಲಾದ ಹಲವು ಮಂದಿ ಮಕ್ಕಳೊಂದಿಗೆ ವಾಯು ಮಾರ್ಗದಿಂದ ಬೇಗನೇ ಬಂದು, ದ್ವಾರಪಾಲಕರಾದ ದೇವತೆಗಳ ಅನುಮತದಿಂದ ಚಕ್ರೇಶ್ವರನು ಅರುಹಂತನ ಓಲಗವನ್ನು ಹೊಕ್ಕನು. ಆದಿಜಿನನ ದರ್ಶನ ಮಾಡಿ ಸಾಷ್ಟಾಂಗವೆರಗಿದನು. ಪುತ್ರರೊಡಗೂಡಿ, ಕೈಮುಗಿದು, ''ದುರಿತಾರಿ! ದುಃಖ ಸಂಹಾರಿ! ಪುರುನಾಥ! ಜಯ ಜಯ!'' ಎಂದು ಕೀರ್ತಿಸಿದನು. ಅನಂತರ ಯತಿಗಳಿಗೆ ನಮಸ್ಕಾರ ಮಾಡಿದನು. ದೀಕ್ಷೆ ಪಡೆದಿರುವ ಯೋಗಿ ಶತಕಕ್ಕೂ, ಮಕ್ಕಳೊಡನೆ ನಮಸ್ಕರಿಸಿದನು. ನಮಸ್ಕರಿಸಿದವರನ್ನು ಶತಯೋಗಿಗಳೂ ಹರಸಿದರು. ಅವರಲ್ಲಿ ಮರುಕ ಹುಟ್ಟದಿರುವುದು ವಿಚಿತ್ರ! ಚಕ್ರಿಗೆ ಮನದಲ್ಲಿ ನೋವಾಯಿತು. ಆದರೆ ಜಿನ ಸಭೆಯಲ್ಲಿ ನೋವು ಜನಿಸಲಿಲ್ಲ. ಇದು ಜಿನ ಮಹಿಮೆ! ಘನ ಬುದ್ಧಿಸಾಗರ ಮುನಿಗೆ, ಮೇಘೇಶ್ವರಮುನಿಗೆ ಎಂದು ಮುಂತಾಗಿ ನೂರು ಮಂದಿ ಮುನಿಗಳಿಗೂ ಮಣಿದನು. ಗೆದ್ದಿರುವ ಅವರನ್ನೆಲ್ಲ ಹೊಗಳಿದನು. ಅವರೆಲ್ಲರೂ ಸುಮ್ಮನಿದ್ದು ಹರಸಿದರು. ನೋಡುತ್ತಿದ್ದ ಎಲ್ಲರೊಡನೆಯೂ ಮಧುರವಾಗಿ ಮಾತನಾಡಿ, ಕೊನೆಯಲ್ಲಿ ಮಕ್ಕಳೊಂದಿಗೆ ಆದಿದೇವನ ಹತ್ತಿರ ಹೋಗಿ ಕುಳಿತನು.

ಭರತೇಶನು ಕೈಮುಗಿದು, ಸ್ವಾಮಿಯೊಡನೆ ಮೋಕ್ಷ ಪ್ರಾಪ್ತಿಯು ಹೇಗೆಂದು ವಿವರಿಸಬೇಕೆಂದು ಬೇಡಿಕೊಂಡನು. ಆ ಪರಮ ರಹಸ್ಯವನ್ನು ದೇವರ ದೇವನಾದ ಆದಿದೇವನು ಚಕ್ರೇಶ್ವರನಿಗೆ ಹೇಳಿದನು.

''ಮೋಕ್ಷವೆಂದರೆ ಬಿಡುಗಡೆಗೆ ಹೆಸರು. ಕರ್ಮವು ಮೊಕ್ಷಪಟ್ಟು ಆತ್ಮನೇ ನಿಲ್ಲುವುದೋ ಮೋಕ್ಷವೆನ್ನುವರು. ಕರ್ಮವು ಕಡೆ ಸಾರಿ ಬೀಳುವ ಪರೀಕ್ಷೆಯನ್ನು ಕೇಳು ಭವ್ಯಾ! ದೇಹ ಮೂರರೊಳಗಿರುವ ಆತ್ಮ ಸಂಸಾರಿಯು. ಈ ಮೂರು ದೇಹಗಳೂ ಅಳಿದಾಗ ಮುಕ್ತನಾಗುವನು. ದೇಹ ಬೇರೆ ಎಂದು ಧ್ಯಾನಿಸಿದರೆ ದೇಹ ಹೋಗುವುದು. ಶುಭವಾಗುವುದು. ಕಟ್ಟಿಗೆಯಲ್ಲಿರುವ ಅಗ್ನಿಯನ್ನು ಹೊಸೆದರೆ ತಾನಿರುವ ಕಟ್ಟಿಗೆಯನ್ನೇ ತಾನೇ ಸುಡುವುದು? ನಿಷ್ಕನಾದ ಆತ್ಮನು ತನ್ನನ್ನು ತಾನೇ ನೋಡಲು, ಅವನು, ಮೂರು ಕನಿಷ್ಠಾಂಗಗಳನ್ನು ಸುಡುವನು. ಕರ್ಮವೆಂದರೂ ದೇಹ ಮೂರೆಂದರೂ ಒಂದೇ ಅರ್ಥ. ಧರ್ಮವೆಂದರೆ ಮಾತ್ರ ಆತ್ಮ! ನೀನು ಧರ್ಮವನ್ನು ಹಿಡಿದಾಗ ಕರ್ಮ ತನ್ನಷ್ಟಕ್ಕೆ ತಾನೇ ಜರಿದು ಹೋಗುವುದು. ಆಗ ನಿನಗೆ ನಿರ್ಮಲ ಪದವಿಯು ಬರುವುದು. ಹೊರಗಿನ

ಧರ್ಮವೆಲ್ಲ ಉಪಚಾರ ಧರ್ಮಗಳು. ಅದುದರಿಂದಲೇ ದೇಹ ಭೋಗಗಳು ಆಗುವುವು. ಒಳಗಿನ ಹಂಸ ಧರ್ಮವು ಉತ್ಕೃಷ್ಟವಾದುದು. ಇದರಿಂದ ದೇಹವು ಅಳಿದು ಮುಕ್ತಿಯಾಗುವುದು. ರತ್ನತ್ರಯಗಳು ಧ್ಯಾನಿಸಿದಾಗ ಭಿನ್ನವಿಲ್ಲದ ನನ್ನ ಭಕ್ತಿಗಳೇ ಆಗಿವೆ. ಈ ನನ್ನ ಸಂಪತ್ತು ನಿನಗಿರುವುದು. ಆದ್ದರಿಂದ ಭಕ್ತಿಯಿಂದ ಒಲಿದು ಧ್ಯಾನ ಮಾಡು. ನಿನ್ನಿಂದಲೇ ನೀನು ನಿನ್ನನ್ನು ನೋಡು. ಆಕಾಶದಂತೆ ಅಮಲಾತ್ಮನಿರುವನು. ಭೂಮಿಯಂತೆ ದೇಹವಿದೆ. ಆಕಾಶವು ಮಣ್ಣಿನಲ್ಲಿ ಮುದ್ದೆಯಾಗಿದೆ. ಇದೆಂತಹ ಒಂದು ಆಶ್ಚರ್ಯವೆಂದು ನೋಡಿದರೆ ಆತ್ಮಧ್ಯಾನಿಗೆ ಆತ್ಮನು ತೋರುವನು. ಹರಿಯುವ ಚಿತ್ತವನ್ನು ತಡೆದು ಎರಡು ಕಣ್ಣುಗಳನ್ನೂ ಮುಚ್ಚಿ ಶ್ರೇಷ್ಠವಾದ ಭಾವ ದೃಷ್ಟಿಯಲ್ಲಿ ತಿರುಗಿ ತಿರುಗಿ ನೋಡಿದರೆ ದೇಹದೊಳಗೆ ಅಚ್ಚ ಬೆಳಕಾಗಿ ಪರಮಾತ್ಮನು ಕಾಣುವನು. ಕುಳಿತು ಧ್ಯಾನಿಸುವಾಗ ಮೈಯಲ್ಲಿ ಕುಳಿತಿರುವ ಬೆಳಕಿನ ಪ್ರತಿಮೆಯಂತೆ ಆತ್ಮನಿರುವನು. ಮಲಗಿದರೆ ಮಲಗಿದಂತೆಯೂ, ನಿಂತರೆ ನಿಂತಂತೆಯೂ, ಆತ್ಮನು ಕಾಣುವನು. ಮೊದಲು ನಿಂತು ಕುಳಿತು ಅಭ್ಯಾಸ ಮಾಡು. ಹಾಗೆ ಧ್ಯಾನ ಮಾಡಲು ನಿನಗೆ ಅಭ್ಯಾಸವಾದ ಮೇಲೆ ನಿಂತರೂ ಕುಳಿತರೂ ಮಲಗಿದರೂ ತಿರುಗಾಡಿದರೂ ಯಾವಾಗಲೂ ಆತ್ಮನು ಹೊಳೆಯುವನು. ಗುಣೋಹಿತಾರ್ಥದಲ್ಲಿ ಇರುವನು. ಆತ್ಮಧ್ಯಾನದಿಂದ ನಾಲ್ಕು ರೀತಿಯ ಮನಸ್ಸು ಆತ್ಮರೂಪಿನೊಳಗೆ ಐಕ್ಯವಾದರೆ ಸಾಕು. ದೇಹವು ಹೇಗಿದ್ದರೂ ಮಿನುಮಿನುಗುವ ಆತ್ಮನು ಕಾಣುವನು. ಹೀಗೆ ತೋರುವುದು ಸಾರಭವ್ಯರಿಗಿರುವ ಒಂದು ಹೆಮ್ಮೆ! ಬೇರೆಯವರಿಗೆ ಇದಿಲ್ಲ.

"ಇದೇ ಜ್ಞಾನಸಾರವು; ಚಾರಿತ್ರ್ಯಸಾರವೂ ಇದೇ. ನವೀನವಾದ ಸಮ್ಯಕ್ ಸಾರವೂ ಇದೇ. ಎಲ್ಲರೂ ಮನ್ನಿಸುವ ತಪಸ್ಸಿನ ಸಾರವೂ ಇದೇ! ಇದನ್ನು ಅಮಲವಾದ ಆತ್ಮಧ್ಯಾನವೆಂದು ನಂಬು. ಮತಿ ಮೊದಲಾಗಿ ಕೈವಲ್ಯ ಬೋಧೆಯಲ್ಲಿ ಅಂತ್ಯವಾಗುವ ಪಂಚಜ್ಞಾನ, ವಿಶಾಲವಾದ ಅಷ್ಟಗುಣ ಎಲ್ಲವೂ ನಾನೇ. ಇದು ನನ್ನ ಆಣೆಯೆಂದು ನಂಬು. ಸ್ವಲ್ಪ ಸ್ವಲ್ಪವಾಗಿ ಕಾರ್ಮುಗಿಲು ಅಳಿದಾಗ ಸೂರ್ಯನ ಕಾಂತಿಯು ಹೆಚ್ಚಾಗಿ ತೋರುವಂತೆ ಹೆಚ್ಚಾಗಿರುವ ಕರ್ಮವು ಜರಿದಷ್ಟಕ್ಕೆ ಆಗುವ ಬೋಧವನ್ನು ಆತ್ಮನಿಗೆ ಐದು ರೀತಿಯಲ್ಲಿರುವುದೆಂದು ಹೇಳುವರು. ಒಂದಿಷ್ಟೂ ಇಲ್ಲದೆ ಮೋಡವೆಲ್ಲವೂ ಅಳಿದು ಹೋದಾಗ, ಸೂರ್ಯನು ತಳತಳಿಸುವಂತೆ ಆತ್ಮಯೋಗಿಯು ಪಂಚಾವರಣವನ್ನು ಮೆಟ್ಟಿದಾಗ ವಿಶ್ವವನ್ನೇ ತಿಳಿಯುವನು. ಆ ಅನುಭವವೇ ಮಹಾಬೋಧೆಯು! ಕಿಲುಬು ಜಾರಿದರೆ ಕನ್ನಡಿ ಕಾಣುವಂತೆ ನಿರ್ಮಲವಾದ ಆತ್ಮಯೋಗಿಯು ಧ್ಯಾನದಲ್ಲಿದ್ದು ಒಂಬತ್ತು ಕರ್ಮಗಳನ್ನು ಓಡಿಸುವನು! ಆಗ ಕಾಣುವ ಶಕ್ತಿಯೆ ಕೈವಲ್ಯ ದೃಷ್ಟಿ. ಈ ಧ್ಯಾನದಿಂದ ಇಪ್ಪತ್ತೊಂದು ಕರ್ಮಗಳನ್ನೂ ದೂರಮಾಡಲು ಅವು ಸೋರಿಹೋದಾಗ ಆತ್ಮನಲ್ಲಿ ಮನಸ್ಸು, ನೀರಿನಲ್ಲಿ ಉಪ್ಪು ಮಾಯವಾಗುವಂತೆ ಲೀನವಾಗುವುದು. ಅದನ್ನು ಚಾರಿತ್ರ್ಯವೆಂದು ಹೇಳುವರು. ರೋಗವು ನಾಶವಾದರೆ ರೋಗಿಯು ತ್ರಾಣಿಯಾಗುವನು. ಅದೇ ರೀತಿಯಲ್ಲಿ ಆತ್ಮಯೋಗಿಯು ಐದು ಅಂತರಾಯಗಳನ್ನು ಬಿಟ್ಟು ಬಿಡುವನು. ಆಗ ಮೂರು ಲೋಕವನ್ನೇ ಎನ್ನುವ ಶಕ್ತಿಯುಂಟಾಗುವುದು. ಅದೇ

ಅನಂತವೀರ್ಯ! ಗೋತ್ರ ಮತ್ತು ಕರ್ಮ — ಇವೆರಡೂ ನಾಶವಾದಾಗ ಆತ್ಮನು ಸಿದ್ಧಕ್ಷೇತ್ರದ ತುತ್ತ ತುದಿಗೆ ಮುಟ್ಟುವನು. ಅಲ್ಲಿಂದವನು ಭೂಮಿಗೆ ಬೀಳುವುದಿಲ್ಲ. ಅವನಿಗೆ ಗುರು ಲಘುತ್ವಗಳಿಲ್ಲ, ಚಿತ್ರದಂತೆ ಶೋಭಿಸುವನು. ವೇದನ ಮತ್ತು ಅಂಕಿತಗಳೆರಡನ್ನೂ ಧ್ಯಾನದಿಂದ ಭೇದಿಸಿದಾಗ ಅದುವೆ ಅಗ್ನಿಯೆಂಬ ಆಯುಧವು. ಆತ್ಮನಾಗ ಯಾವುದನ್ನೂ ಭೇದಿಸದೆ ಅವ್ಯಾಭಾದವೆಂಬ ಗುಣೋಹಿತಾರ್ಥದಲ್ಲಿ ಇರುವರು. ಆತ್ಮಧ್ಯಾನದಿಂದ ನಾಲ್ಕು ರೀತಿಯ ಆಯುವನ್ನು ಧರಿಸಿದಾಗ ಆತ್ಮನು ಯುಕ್ತಿಯಿಂದ ಹೆಚ್ಚು ಹೆಚ್ಚು ಸಿದ್ಧ ರೂಪಗಳನ್ನು ತನ್ನಲ್ಲೇ ಇಟ್ಟುಕೊಳ್ಳುವನು. ಅದರಿಂದ ಗಹನವಾದ ಗುಣದಿಂದ ಶೋಭಿಸುವನು. ಧ್ಯಾನದ ಉಪಾಯದಿಂದ ತೊಂಭತ್ತಮೂರು ನಾಮಗಳನ್ನು ಹರಿಹಂಚಾಗಿ ಮಾಡುವನು. ಪಂಚೇಂದ್ರಿಯಗಳಿಗೆ ಗೋಚರವಾಗದ ಒಂದು ಸೂಕ್ಷ್ಮವಾದ, ಸುಂದರವಾದ ರೀತಿಯಲ್ಲಿರುವನು.

ಹೀಗೆ ನೂರನಲ್ವತ್ತೆಂಟು ಕರ್ಮಗಳೆಲ್ಲವು ಸುಟ್ಟು ಸುರಿದುಹೋಗುವುದೇ ಆತ್ಮಯೋಗವು. ಅದರಿಂದಾಗಿ ಮೂರು ಲೋಕಗಳ ತುತ್ತ ತುದಿಯಲ್ಲಿರಬಹುದು. ಇದರಿಂದ ಬೇರೆಯಾಗಿರುವ ಮೋಕ್ಷಾಂಗವೇ ಇಲ್ಲ. ನಾನು ಅಲ್ಲಿಯೂ ಸಂಚರಿಸುವೆನು. ಸಿದ್ಧರು ಅಲ್ಲಿರುವರು. ಅದೇ ಬ್ರಹ್ಮಾನಂದವು. ನಾನಾರ್ಥಗಳನ್ನು ನಾಶಮಾಡಿ, ನೀನು ನಿನ್ನನ್ನೇ ನೋಡುತ್ತಿರು. ಆಗ ಅದೇ ನಿನ್ನನ್ನು ನಿವೃತ್ತಿಗೆ ಕೊಂಡು ಹೋಗುವುದು.

''ಹೆಚ್ಚು ಶಾಸ್ತ್ರಗಳನ್ನೋದಿ ತಪಸ್ಸು ಮಾಡಿದರೂ ಧ್ಯಾನವು ಸಾಧ್ಯವಾಗದಿದ್ದರೆ ಮುಕ್ತಿ ದೊರೆಯದು. ಸಾರಭವ್ಯರ ಕೆಲಸವಿದು; ಆದ್ದರಿಂದ ನೀನು ನಿತ್ಯವೂ ಧ್ಯಾನದಿಂದಲೇ ಅಲಂಕೃತನಾಗಿರು. ಮುಂದೆ ನಿನಗೆ ಮುಕ್ತಿಯು ಬೇಗನೆ ದೊರಕುವುದು. ಇಂದು ನಿನಗೆ ಐದು ಸಂಪತ್ತುಗಳು ಬಂದು ಸೇರುವುವು. ಅದಕ್ಕೆ ತಡವಿಲ್ಲ, ಹತ್ತಿರಕ್ಕೆ ಬಂದಿದೆ. ಈಗ ನಾನೂ ಆ ಐದು ಸಂಪತ್ತುಗಳ ಹೆಸರನ್ನು ಹೇಳುತ್ತಿರುವಾಗ, ನೀನು ಏಕಾತ್ಮಯೋಗವನ್ನು ಮಾಡು. ನಿನಗೆ ಆ ಪಂಚ ಸಂಪತ್ತುಗಳು ಬೇಗನೆ ಕಾಣುವುವು. ನೀನೇ ಅವುಗಳನ್ನು ತೂಗಿ ನೋಡುವೆ. ಯೋಚಿಸಿ ಕುಳಿತುಕೊಂಡಿರು. ಕಣ್ಣುಗಳನ್ನು ಮುಚ್ಚಿಕೊಂಡು ನೋಡು.''

ಎಂದು ಆ ಸ್ವಾಮಿ ಸೂಚಿಸಿದನು. ಆಗ ಭರತೇಶನು 'ಇಚ್ಛಾಮಿ' ಎಂದು ಧ್ಯಾನದ ಆಚಾರವನ್ನು ಹಿಡಿದರು.

ಚಕ್ರಿಯು, ಎದೆವರೆಗೆ ಹೆಗಲಿಗೇರಿದ್ದ ಮೇಲುದವನ್ನು ತೆಗೆದು, ಅದನ್ನು ಸೊಂಟಕ್ಕೆ ಬೀಸಿಬಿಟ್ಟನು. ಚಿನ್ನದ ಗೊಂಬೆ ಕುಳಿತುದೋ ಎಂಬಂತೆ ವಿದಿತವಾದ ಸಿದ್ಧಾಸನದಲ್ಲಿ ಕುಳಿತನು. ಆಮೇಲೆ ಗಾಳಿಯನ್ನು ಬ್ರಹ್ಮರಂಧ್ರಕ್ಕೆ ನಡೆಸಿದನು. ಅದರೊಂದಿಗೆ ಕಣ್ಣುಗಳನ್ನು ಮುಚ್ಚಿ, ಚಿತ್ತವನ್ನು ಏಳಲಿಕ್ಕೆ ಬಿಡದೆ ಹಂಸನಲ್ಲಿ ಕೂಡಿಸಿ ನೋಡಿದನು. ಒಳಗೆ ಪ್ರಕಾಶವು ಹೊಳೆಯಿತು. ಮೈಯ್ಯ ಮೇಲೆ ಉಡುಪುಗಳೂ ಆಭರಣಗಳೂ ಇದ್ದುವು. ಆದರೆ ಒಳಗೆ ಹಂಸನು ಬತ್ತಲೆಯಾಗಿದ್ದನು. ಆ ಕುಶಲಿಯಾದ ಭರತೇಶನು ಹಂಸವು ಹಾಲನ್ನೇ ಹೀರಿ ನೀರನ್ನು ಬಿಡುವಂತೆ ಮೈಯನ್ನು ಬಿಟ್ಟು ಪರಮಾತ್ಮನನ್ನು ಹಿಡಿದನು. ನೆಲಮಾಳಿಗೆಯೊಳಗೊಬ್ಬನು, ಯಾರೂ ಅರಿಯದಂತೆ ಅಡಗಿ ಕುಳಿತ ರೀತಿಯಲ್ಲಿ

ಒಳಗಿದ್ದವನು ದೀಪದಂತೆ ಬೆಳಗಿದನು. ಉಳಿದ ಯಾರಿಗೂ ಅದು ತಿಳಿಯದು. ಮೈ ತುಂಬ ತಿಂಗಳ ಬೆಳಕನ್ನು ಉಟ್ಟುಕೊಂಡಂತೆ, ಎಳೆ ಮಿಂಚಿನಂತಿರುವ, ರತ್ನದಂತಿರುವ, ಮುಕ್ತಿಕಾಂತೆಯನ್ನು ತಾನು ತೋಳು ತುಂಬ ತೊಟ್ಟುಕೊಂಡಿರುವಂತೆ ಚಕ್ರಿಗಾಯಿತು.

ಸಿದ್ಧರು ಆಕಾಶದಲ್ಲಿ ಹರಿದಾಡುವಂತೆ, ಲೋಕದ ಎಡೆಯೆಡೆಗಳಲ್ಲಿ ತಿರುಗಾಡುವಂತೆ, ಸಿದ್ಧರೊಡನೆ ಏಕಾಂತವಾಗಿರುವಂತೆ, ಭರತೇಶನು ಆತ್ಮನಲ್ಲಿದ್ದನು. ಆಗ ಅಲ್ಲಿ ಮಾತು, ಮನಸ್ಸು, ಇಂದ್ರಿಯಗಳಾವುವೂ ಇರಲಿಲ್ಲ, ಕರ್ಮವೆಂಬುದು ಒಂದಿಷ್ಟು ಇರಲಿಲ್ಲ. ಒಳಗಿದ್ದ ಆತ್ಮನು ಜ್ಯೋತಿಯ ರೂಪದಲ್ಲಿ ಜ್ಞಾನದ ರೂಪದಲ್ಲಿ ತೋರಿದನು. ಶುದ್ಧವಾದ ಬೆಳಕಿನಲ್ಲಿ ಆತ್ಮನು ಹೊಳೆದು ತೋರಿದರೆ ಕರ್ಮವು ಮುಚ್ಚಿದಾಗ ಮಸುಕಾಗುವನು; ಮತ್ತೆ ಮೊದಲಿನಂತೆ ಹೊಳೆಯುವನು. ಈ ರೀತಿಯಲ್ಲಿ ಭರತೇಶನು ಧ್ಯಾನದಲ್ಲಿದ್ದನು. ಹೆಚ್ಚು ಬೆಳಕಾಗುವುದೇ ಶುಕ್ಲಧ್ಯಾನವು. ಶುಕ್ಲಧ್ಯಾನವುಂಟಾದರೆ ಅದು ಕೆಡದೆ ಮುಂದುವರಿಯುವುದು. ಕಡಿಮೆ ಬೆಳಕಾಗಿರುವುದೇ ಧರ್ಮ ಸಂಧ್ಯಾನ. ಅದು ಒಮ್ಮೆ ಕಡಮೆಯಾಗಿ ಕಾಣುವುದು; ಮತ್ತೊಮ್ಮೆ ಹೆಚ್ಚಾಗಿ ಹೊಳೆಯುವುದು. ಹೊಳೆಯುತ್ತಿರುವಾಗ ಸಂತೋಷವಾಗುವುದು. ಆಗ ಕರ್ಮದ ಪಿಂಡವು ಬಳಬಳನೆ ಸೋರಿ ಹೋಗುವುದು. ಸುಜ್ಞಾನವು ಅರಳುವುದು. ಆ ಅನುಭವವು ಚಕ್ರಿಗೆ ಆಗುತ್ತಿತ್ತು ಅದನ್ನು ಜಿನನೂ ತಿಳಿಯುತ್ತಿದ್ದನು. ಆದರೆ ಹತ್ತಿರದಲ್ಲಿದ್ದ ಯಾರಿಗೂ ಅದು ತಿಳಿಯುತ್ತಿರಲಿಲ್ಲ.

ಅರಗಿನ ಮನೆಯ ಮಧ್ಯದಲ್ಲಿ ಒಂದಿಷ್ಟು ಕಿಚ್ಚನ್ನು ಹಚ್ಚಿದರೆ ಅದು ಕರಗಿಹೋಗುವಂತೆ, ವಿನುತವಾದ ಆತ್ಮದ ಬೆಂಕಿಯಿಂದ ಭರತೇಶನ ತೈಜಸ ಕಾರ್ಮಣ ದೇಹಗಳು ಕರಗಿ ಹೋಗುತ್ತಿದ್ದುವು. ಸಮಯದಿಂದ ಸಮಯಕ್ಕೆ, ಚಿತ್ಪಭೆಯು ಹೆಚ್ಚಿ, ಸುಮತಿ ಬೋಧಾವರಣವನ್ನು ನಿಮಿಷದಿಂದ ನಿಮಿಷಕ್ಕೆ ಸುಟ್ಟಿತು. ಆಗ ಅವನಿಗೆ ಸುಮತಿವಿಜ್ಞಾನ ಸಂಪತ್ತು ಲಭಿಸಿತು. ಪರರಿಂದ ಉಪದೇಶವಿಲ್ಲದೆ, ಶಾಸ್ತ್ರಗಳ ಅಧ್ಯಯನವಿಲ್ಲದೆ, ಸುಜ್ಞಾನವು ಒಳಗಿಂದೊಳಗೇ ಸ್ಫುರಿಸಿದರೆ – ಅದನ್ನು ವರಮತಿಬೋಧವೆನ್ನುವರು. ಅಂತಹ ಸುಜ್ಞಾನವು ಚಕ್ರಧರನಿಗೆ ದೊರೆಯಿತು. ಅದು ಹತ್ತಿರ ಬಂದೊಡನೆ ಧ್ಯಾನಾಗ್ನಿಯು ಶ್ರುತಾವರಣವನ್ನು ಹತ್ತಿಕೊಂಡಿತು. ಅದರಿಂದ ಶ್ರುತಾವರಣವು ಸುಲಭವಾಗಿ ಬೆಂದುಹೋಯಿತು. ಕೂಡಲೇ ಶ್ರುತಜ್ಞಾನವು ಚಕ್ರಿಯ ಹೃದಯದಲ್ಲಿ ಶೋಭಿಸತೊಡಗಿತು.

ಬುದ್ಧಿ ಪೂರ್ವಕವಾಗಿ ಶಾಸ್ತ್ರವನ್ನೋದಿ ತಿಳಿಯುವುದೇ ಶ್ರುತಬೋಧವೆನಿಸುವುದು. ಆ ಜ್ಞಾನವನ್ನು ಹದಿನಾಲ್ಕು ಪೂರ್ವಗಳೆಂದು ಎಣಿಸಿರುವರು. ಅದನ್ನು ಚತುರನಾದ ಭರತೇಶ್ವರನು, ಆತ್ಮಯೋಗದಲ್ಲಿ ಅರಿತನು. ಶ್ರೇಷ್ಠವಾದ ಆತ್ಮಯೋಗಾಗ್ನಿಯು ಕೂಡಲೇ ದೃಷ್ಟಿಬೋಧೆಯ ತಡೆಗಳನ್ನು ಹತ್ತಿಕೊಂಡು ಉರಿಯತೊಡಗಿತು. ಎವೆಯಿಕ್ಕುವಷ್ಟರಲ್ಲಿ ಅವು ಬೆಂದುಹೋದುವು. ಚಕ್ರೇಶ್ವರನಿಗೆ ಅವಧಿವಿಜ್ಞಾನದ ದೃಷ್ಟಿಗಳುಂಟಾದುವು. ಅವಧಿಯೆಂದರೆ ಸೇರಿಸುವುದೆಂದು ಅರ್ಥ. ಅದರಿಂದ ಭೂಮಿಗಳೆಲ್ಲವೂ ಕಾಣುತ್ತವೆ. ಆಗ ಅವನಿಗೆ ಸೇರಿಸಿ ಕಾಣುವ, ತಿಳಿಯುವ, ಎರಡು

ಅವಧಿ ಬೋಧಾಕ್ಷಿಗಳು ದೊರೆತುವು. ಹಿಂದಿನ ಜನ್ಮಗಳನ್ನು ಮುಂದಿನ ಜನ್ಮಗಳನ್ನು ಸರಿಯಾಗಿ ತಿಳಿಯುವ, ಕಾಣುವ ಹಿರಿಮೆಯು ಆ ನೃಪನ ಎದೆಯಲ್ಲಿ ನೆಲೆಗೊಂಡಿತೆಂದರೆ ಧ್ಯಾನದಿಂದ ಹೆಚ್ಚಿನ ತಪಸ್ಸುಂಟೇ? ಮೇಲೆ ಚೇತೋಜ್ಞಾನವಿರುವುದು. ಅದು ಗೃಹಸ್ಥನಿಗೆ ದೊರೆಯದು.

ಮನೋಹರವಾದ ಈ ಬೋಧಗಳು ನಾಲ್ಕು. ಅವು ಕ್ಷಾಯಿಕಗಳಲ್ಲ, ಅವುಗಳು ಕ್ಷಯವನ್ನು ಉಪಶಯನ ಮಾಡುತ್ತವೆ. ಬಟ್ಟೆಯನ್ನೂ ಹಳೆ ಹುಲ್ಲನ್ನೂ ಸುಟ್ಟಂತೆ, ಈ ನಾಲ್ಕು ಬೋಧಗಳೂ ಸುಟ್ಟೊಡನೆ ಹುಟ್ಟುತ್ತಿವೆ. ಕಟ್ಟಕಡೆಯ ಬೋಧವು ಹುಟ್ಟಿದಾಗ, ಯಾವ ತಡೆಯೂ ಇಲ್ಲದೆ ಅಂತರ್ಯದಲ್ಲಿ ಐಕ್ಯವಾಗುವುದು. ಆವರಣದ ಕ್ಷಯದಿಂದ ಕ್ಷಾಯಿಕವಾಗುವುದು. ಅವು ನಾಶಕಾರಕವಲ್ಲ, ಕೈವಲ್ಯ ಬೋಧಾಕ್ಷಿಗಳೂ ಕ್ಷಾಯಿಕಗಳೂ ಒಂದೇ ಆಗಿರುವ ಭಾವಗಳು. ಅವು ಭಿನ್ನವಲ್ಲ. ಇವುಗಳ ವರ್ಣನೆಯಿನ್ನು ಸಾಕು. ಆತ್ಮಯೋಗಾಗ್ನಿಯು ವಿಶ್ವಾಸ ಮತ್ತು ಮೋಹ ಕರ್ಮಗಳನ್ನು ಹತ್ತಿಕೊಂಡಂತೆ ಸುಡತೊಡಗಿತು. ಅದು ಪ್ರಕೃತಿಗಳ ಇರುವಿಕೆಯು ನಾಶವಾಗುವಂತೆ, ಮತ್ತೆ ತಲೆದೋರದಂತೆ, ಆ ಕರ್ಮಗಳನ್ನು ಸುಟ್ಟುಬಿಟ್ಟಿತು. ಪಥ್ಯವಲ್ಲದ ಅನಂತಾನುಬಂಧಿಯ ಮಿಥ್ಯಾಂಗವಾದ ನಾಲ್ಕು ಕಷಾಯಗಳನ್ನೂ ಮಿಥ್ಯೆ, ಸಮ್ಯಕ್ ಮಿಥ್ಯೆ, ಮತ್ತು ಸಮ್ಯಕ್ತ್ವ ಪ್ರಕೃತಿಗಳನ್ನೂ ಕೂಡ ಈ ಏಳನ್ನೂ ಯೋಗಾಗ್ನಿಯು ಸುಟ್ಟಿತು. ಸಿದ್ಧರ ಸಮ್ಯಕ್ತ್ವಕ್ಕೂ ಅರುಹನ ಸಮ್ಯಕ್ತ್ವಕ್ಕೂ ವೃದ್ಧಿ ಕ್ಷಯಗಳಿಲ್ಲ, ಅವರವರ ವೃದ್ಧಿಗೆ ಸರಿಯಾದ ಕ್ಷಾಯಕ ಸಮ್ಯಕ್ತ್ವ ಸಿದ್ಧಿಯನ್ನು ಚದುರನಾದ ಚಕ್ರಿಯು ಪಡೆದನು.

ಆತ್ಮನಿಂದ ಶ್ರೇಷ್ಠವಾದ ವಸ್ತುಗಳೇ ಇಲ್ಲ, ತನಗೆ ಆತ್ಮನಿಂದಲೇ ಮುಕ್ತಿಯೆಂಬುದನ್ನು ಆತ್ಮಾರ್ಥಿಯಾದ ಅವನು ತಿಳಿದುಕೊಂಡನು. ಅದೇ ದಿವ್ಯವಾದ ಸಮ್ಯಕ್ತ್ವವು. ಈ ರೀತಿಯಲ್ಲಿ ಭರತೇಶನಿಗೆ ಐದು ಸಂಪತ್ತುಗಳೂ ಕೈಗೂಡಿದುವು. ಹನ್ನೊಂದು ಕರ್ಮಗಳಂತು ನಾಶವಾದುವು. ಇನ್ನುಳಿದ ಕರ್ಮಗಳನ್ನು ಮುಂದೆ ತನ್ನಿಂದ ತಾನೇ ಕೆಲವು ದಿನಗಳಲ್ಲಿ ಖಂಡಿಸುವೆನೆಂದು ಅವನು ತನ್ನೊಳಗೆ ನಿಶ್ಚಯಿಸಿಕೊಂಡನು. ಇಂದಿಗೆ ಇಷ್ಟೇ ಲಾಭವೆಂದು ನಿಶ್ಚಯಿಸಿ ಹೃದಯ ಮಂದಿರದಲ್ಲಿರುವ ಚಿನ್ಮಯನಿಗೆ ವಂದಿಸಿ ಕಣ್ಣು ತೆರೆದನು. ಸಂತೋಷದಲ್ಲಿ ಎದ್ದು ನಿಂತವನೇ, — ''ಜಯಜಯ ತ್ರಿಭುವನದೊಡೆಯ, ನನ್ನೊಡೆಯ, ನಿನ್ನ ಕೃಪೆಯಿಂದ ಕರ್ಮಗಳನ್ನು ಜಯಿಸಿದೆನು. ಐದು ಸಂಪತ್ತುಗಳನ್ನು ಪಡೆದೆನು'' ಎಂದು ಸ್ವಾಮಿಯ ಚರಣಗಳಿಗೆ ತನ್ನ ಹಣೆಯನ್ನಿಟ್ಟು ವಂದಿಸಿದನು. ಆಗ ಸುರವಾದ್ಯ ಕೋಟಿಗಳು ಮೊಳಗಿದುವು. ಸುರರು ಸಂತೋಷದಿಂದ ಉಬ್ಬಿ ಹೂಮಳೆಯನ್ನು ಕರೆದರು. ಅಲ್ಲಿದ್ದ ಸಭೆಯೆಲ್ಲವೂ ಎದ್ದು ನಿಂತು ಸಂಭ್ರಮದಿಂದ ಜಯಘೋಷ ಮಾಡಿತು.

ಒಳಗೆ ಆತ್ಮ ಕಳೆ ಹೆಚ್ಚಿದಂತೆ ಭರತೇಶನ ದೇಹದಲ್ಲಿ ಹೊಸ ಕಾಂತಿಯು ಹೊಳೆಯತೊಡಗಿತು. ಅಲ್ಲಿದ್ದ ಕುಲಪುತ್ರರು ಅದನ್ನು ನೋಡಿ ಸಂತಸದಿಂದ ಕುಣಿದಾಡಿದರು. ಆದಿಜಿನನ ಚರಣಗಳಿಗೆ ನಮಸ್ಕಾರ ಮಾಡಿದರು.

"ಭರತ ರಾಜೇಂದ್ರ, ಭವ್ಯಾಂಬುಜ ಭಾಸ್ಕರ, ಪರಮೇಶನಗ್ರ ಕುಮಾರ, ಪರಮಾತ್ಮರಸಿಕ, ಕರ್ಮಾರಿ ಹೋ" ಎಂದು ವೇತ್ರಧರರು ಕೈಯೆತ್ತಿ ಹೊಗಳಿದರು. ಭರತೇಶನು, ಅರುಹನನ್ನು ಬೀಳ್ಕೊಂಡು ಮುನಿಗಳಿಗೆ ನಮಸ್ಕಾರ ಮಾಡಿ, ಸರ್ವರಿಗೂ ಶುಭವನ್ನು ಕೋರಿದನು. ಎಲ್ಲರೂ ಅವನನ್ನು ಭಾಪುರೆಯೆಂದು ಹೊಗಳುತ್ತಿರಲು ಅವನು ಪುತ್ರರೊಡಗೂಡಿ ತನ್ನ ಪುರಕ್ಕೆ ಹಿಂದಿರುಗಿದನು.

ದೇಹವನ್ನು ದಂಡಿಸದೆ ಚಿತ್ತವನ್ನು ದಂಡಿಸಿ, ತನ್ನಲ್ಲಿ ಒಮ್ಮೆಗೇ ನಿಂತು ಕರ್ಮಗಳನ್ನು ಒಮ್ಮೆಗೇ ನುಗ್ಗಿ ಒತ್ತುವಂತೆ ಭರತೇಶನು ದೂಡಿಬಿಟ್ಟನು. ಎಡಬಡ ಬಾಯಿಬಿಟ್ಟು ಅಧ್ಯಯನ ಮಾಡಿ ಗೋಣಗುಟ್ಟಿಕೊಂಡು ಶಾಸ್ತ್ರಿಗಳಾಗುತ್ತಾರೆ. ಅಂಥವರ ನಡತೆಯನ್ನೇ ನಗಿಸುವಂತೆ ಚಕ್ರಿಯು ಕ್ಷಣದಲ್ಲಿ ಶಾಸ್ತ್ರವೆಂಬ ಕಡಲನ್ನೇ ದಾಟಿಬಿಟ್ಟನು. ಅವಗಡಗಳನ್ನು ಉಂಟುಮಾಡುವಂತಹ ತಪಸ್ಸು ಮಾಡದೆ, ಬಹಳ ದಿನಗಳವರೆಗೆ ಮನಸ್ಸಿಗೆ ಆತಂಕಗಳನ್ನು ತಂದುಕೊಳ್ಳದೆ, ಆತ್ಮಾನುಭವಿಯಾದ ಚಕ್ರೇಶ್ವರನು ಕ್ಷಣದಲ್ಲೇ ಅವಧಿ ಬೋಧವನ್ನು ಪಡೆದನು. ಮಾಯೆಯನ್ನು ಒತ್ತಿ ಹಿಡಿದು, ದೇಹದಲ್ಲಿರುವ ಹಂಸಾಭಿಪ್ರಾಯನ್ನು ತಿಳಿದುಕೊಂಡು ಕ್ಷಾಯಿಕ ಉದಾತ್ತ ಸಮ್ಯಕ್ತ್ವವನ್ನು ಪಡೆದನು. ತನ್ನ ದೇಹದಲ್ಲೂ ತಲೆಯಲ್ಲೂ ವಸ್ತ್ರಭೂಷಣಗಳಿದ್ದರೂ ಚಿತ್‌ಪಿಂಡವನ್ನು ಬತ್ತಲೆಮಾಡಿ ಐದು ಸಂಪತ್ತುಗಳನ್ನು ಪಡೆದನು. ಈ ರೀತಿಯಲ್ಲಿ ಅವನು ಕಾಲವನ್ನು ಗೆದ್ದುಕೊಂಡು ತನ್ನ ಪುರದತ್ತ ಹೊರಟನು. ದೀಕ್ಷೆ ಪಡೆದಿರುವ ಮಕ್ಕಳನ್ನು ನೋಡುವೆನೆಂದು ಹೋದ ಭರತೇಶನು ಸಾಕ್ಷಾತ್ ಆತ್ಮನನ್ನೇ ನೋಡಿ. ಆ ಕ್ಷಣದಲ್ಲೇ ಪಂಚಸಂಪತ್ತುಗಳನ್ನು ಪಡೆದು ಅತಿದಕ್ಷನೆನಿಸಿಕೊಂಡನು. ಧ್ಯಾನವೇ ಅತಿ ಹೆಚ್ಚಿನ ತಪಸ್ಸು. ಅದು ಯೋಗಿಗೂ ಉಂಟು, ಹೊಸದಾಗಿರುವ ಗೃಹಸ್ಥನಿಗೂ ಉಂಟು. ಅದಕ್ಕೆ ತಾನೇ ದೃಷ್ಟಾಂತವೆಂದು ಭೂಮಿಗೆ ತಿಳಿಸುವಂತೆ ನರನಾಥನು ಅಲ್ಲಿಂದ ಅಯೋಧ್ಯೆಯ ಕಡೆಗೆ ನಡೆದನು. ತನ್ನನ್ನು ಅರಿತರೆ, ಎಲ್ಲವನ್ನೂ ಅರಿವನು. ಹೀಗೆ ತನ್ನನ್ನು ತಿಳಿಯುವವನೇ ತಾಪಸನು. ತನ್ನನ್ನು ನೋಡಿ ಇದನ್ನು ಎಲ್ಲರೂ ನಂಬುವುದೆಂದು ಎಲ್ಲರಿಗೂ ಸಾರುವಂತೆ ಸಾಗಿದನು. ಭರತೇಶನು ತನ್ನ ಪುತ್ರರನ್ನೂ ಹಲವು ಗಣಧರರನ್ನೂ ಕೂಡಿಕೊಂಡು ಹಲವು ವಿಮಾನಗಳನ್ನೇರಿ ಆಕಾಶಮಾರ್ಗದಿಂದ ಊರಿಗೆ ಮರಳಿದನು.

ಸೊಬಗನಾದ ಚಕ್ರವರ್ತಿಯು ಬರುತ್ತಿರುವಾಗ ಯುವರಾಜನಾದ ಅರ್ಕಕೀರ್ತಿಯು ಉಲ್ಲಾಸದಿಂದ ಏನನ್ನೋ ನೆನೆದು ಅಯ್ಯನೊಂದಿಗೆ ಹೇಳದೆಯೇ ಕೆಲವರೊಡನೆ ಪುರಕ್ಕೆ ಮಿಂಚಿನಂತೆ ಹೋದನು. ಅವನು ಮಿಂಚಿನಂತೆ ಊರಿಗೆ ಬಂದು ಮಂತ್ರಿಗಳಿಗೂ ಮಿತ್ರರಿಗೂ ಅಯ್ಯನು ಪಂಚ ಸಂಪತ್ತು ಪಡೆದುದನ್ನು ತಿಳಿಸಿದನು. ಆ ವಿಚಾರವನ್ನು ಅವನು ಉತ್ಕೃಷ್ಟವಾಗಿ ಹೇಳಿದಾಗ, ಕೇಳಿದ ಎಲ್ಲರಿಗೂ ರೋಮಾಂಚನವಾಯಿತು. ಒಡನೆಯೇ ನಗರದಲ್ಲಿ ತಳಿರುತೋರಣಗಳು ಕಾಣಿಸಿಕೊಂಡವು. ಧ್ವಜ ಪತಾಕೆಗಳು ಹಾರತೊಡಗಿದುವು. ದಿಕ್ಕುಗಳು ಬಿರಿಯುವಂತೆ ಭೇರಿಗಳು ಮೊಳಗಿದುವು. ಅರ್ಕಕೀರ್ತಿಯು, ಆನೆ, ಕುದುರೆ, ರಥಗಳೊಡನೆ ನೃಪರನ್ನೂ ಕೂಡಿಕೊಂಡು ವೈಭವದಿಂದ ಇದಿರುಗೊಳ್ಳಲು ಹೋದನು.

ಅವನು, ಅಯ್ಯನನ್ನು ಇದಿರುಗೊಂಡು ನಿವಾಳಿ ತೆಗೆದು ಚರಣಗಳಿಗೆ ನಮಸ್ಕರಿಸಿದನು. ಅದನ್ನು ನೋಡಿದ ತಮ್ಮಂದಿರೂ ಅಯ್ಯನಿಗೆ ನಿವಾಳಿ ತೆಗೆದು ಕಾಲಿಗೆರಗಿದರು. ಅರಸು ಮಕ್ಕಳೂ ಮಂತ್ರಿಗಳೂ ಸ್ನೇಹಿತರೂ ನಿವಾಳಿತೆಗೆದು ಚಕ್ರಿಗೆ ನಮಸ್ಕಾರ ಮಾಡಿದರು. ಪುರಜನರೂ ಪರಿಜನರೂ ನೋಡುತ್ತ ಕೈಮುಗಿಯುತ್ತಿರಲು ಭರತೇಶನು ಅವರನ್ನು ನೋಡುತ್ತ ಪುರದೊಳಗೆ ಬಂದನು. ಹೊಗಳುತ್ತಿರುವ ಸ್ತುತಿಪಾಠಕರನ್ನೂ, ಕಾವ್ಯ ಓದುತ್ತಿರುವ ಕವಿಗಳನ್ನೂ, ಮಂತ್ರಾಕ್ಷತೆಯ ಸೇಸೆ ಹಾಕುತ್ತಿರುವ ಬ್ರಾಹ್ಮಣರನ್ನೂ, ಭರತೇಶ್ವರನು ನೋಡುತ್ತ ನಗುತ್ತ ನಗರದ ರಾಜಬೀದಿಯಲ್ಲಿ ಬರುತ್ತಿದ್ದನು. ಆಗ ಗಾಯಕರು ಹಾಡುತ್ತಿದ್ದರು. ಮಲ್ಲರು ಸಾಧನೆ ಮಾಡುತ್ತಿದ್ದರು. ವೇಶ್ಯೆಯರು ಹಿಂಬಾಲಿಸುತ್ತಿದ್ದರು. 'ಪರಾಕು, ಅವಧಾನ ಜತನ', ಎಂದು ಸುವರ್ಣದಂಡ ಹಿಡಿದುಕೊಂಡ ಭಟರು ಎಚ್ಚರಿಸುತ್ತಿದ್ದರು. ಇವರನ್ನೆಲ್ಲ ನೋಡುತ್ತ ಭರತೇಶನು ಬರುತ್ತಿದ್ದನು. ಮಾಳಿಗೆಯನ್ನೇರಿ, ಪ್ರಾಕಾರದ ಗೋಡೆಯನ್ನೇರಿ ಪುರಸತಿಯರು ತನ್ನನ್ನು ನೋಡುತ್ತಿದ್ದರೂ ಚಕ್ರಿಯು ಅವರನ್ನು ನೋಡದೇ ಬರುತ್ತಿದ್ದನು. ಹಾಗೆ ಬಂದವನೇ ಕೊನೆಯ ಹಜಾರದಲ್ಲಿ ನಿಂತು, ನಂದನರನ್ನು ಬೀಳ್ಕೊಟ್ಟನು. ಸರ್ವರನ್ನೂ ಕೈಬೀಸಿ ಕಳುಹಿದನು. ಅನಂತರ ಸುಂದರನಾದ ಭರತೇಶನು ಉತ್ಸಾಹದಿಂದ ಅರಮನೆಯೊಳಗೆ ಹೋದನು.

ಹೊರಸೂಸುತ್ತಿರುವ ಹೊಸ ಕಾಂತಿಯಿಂದ ಹೊಳೆಯುತ್ತಿರುವ ವಲ್ಲಭನನ್ನು ಕಂಡು ರಾಣಿಯರು ಉತ್ಸಾಹದಿಂದ ಆರತಿಯೆತ್ತಿ ನಿವಾಳಿ ತೆಗೆದು ಪತಿಯ ಕಾಲುಹಿಡಿದರು. ಪಟ್ಟದ ರಾಣಿಯಾದ ಸುಭದ್ರೆಯು ಪತಿಯೆಡೆಗೆ ಹೋಗಿ ತನ್ನ ಹಾರವನ್ನೇ ತೆಗೆದು ನಿವಾಳಿಯಿಟ್ಟು ವಲ್ಲಭಗೆ ರತ್ನದಾರತಿಯನ್ನು ಬೆಳಗಿದಳು. ಭಕ್ತಿಯಿಂದ ಅವನ ಪಾದಗಳಲ್ಲಿ ಹಣೆ ಒತ್ತಿದಳು. ಹೊಳೆಯುತ್ತಿರುವ ಕಣ್ಣುಗಳ ಕಾಮಿನಿಯರನ್ನು ನೋಡಿ ಚಕ್ರಿಯು ಅವರೊಡನೆ ತನಗಾದ ಪಂಚಸಂಪತ್ತುಗಳ ವಿಚಾರವನ್ನು ತಿಳಿಸಿದನು. ಅವರೊಂದಿಗೆ ಸಂತೋಷದಲ್ಲಿದ್ದನು.

# ೨೦

# ತೀರ್ಥೇಶ ಪೂಜೆ

ಭರತೇಶನು ಪಂಚಸಂಪದವನ್ನು ಪಡೆದ ಮೇಲೆ ಒಂದು ದಿನ ಮೇಘೇಶನ ಮಗನನ್ನು ಕರೆಸಿ, ಮಂತ್ರಿಗಳೂ ಮಿತ್ರರೂ ಎಲ್ಲರೂ ಸಂತೋಷಪಡುವಂತೆ ಅವನನ್ನು ಕರುಣೆಯಿಂದ ಮಾತನಾಡಿಸಿದನು.

''ಇವನ ತಂದೆಗೆ ಜಯನೆಂದೂ, ಅಯೋಧ್ಯನೆಂದೂ ಎರಡು ಹೆಸರುಗಳಿದ್ದುವು. ಆ ಹೆಸರುಗಳನ್ನು ನಾವೇ ತೆಗೆದು ಅವನನ್ನು ಮೇಘೇಶ್ವರನೆಂದು ಕರೆದು, ವೀರಾಗ್ರಣಿಯೆಂಬ ಬಿರುದನ್ನು ಇತ್ತೆ, ಅವನು ಹೋದ ಮೇಲೆ ನಮಗೆ ಇವನೇ ಅವನು. ಇವನಿಗೆ ಪುರಾತನನಾದ ಅಯೋಧ್ಯಾಂಕನೆಂಬ ಹೆಸರೇ ಇರಲಿ ಎಂದವನೇ ಹೇಳಿದ್ದನು. ನಿನ್ನ ಸೇವೆಯನ್ನು ನೋಡಿ ನಿನ್ನ ಅಯ್ಯನಿಂದಲೂ ಅಧಿಕವಾದ ರೀತಿಯನ್ನು ನಿನಗೆ ಮಾಡುವೆನು. ಈಗ ನಿನ್ನ ಪಿತನ ಭಾಗ್ಯದಲ್ಲೇ ಇರು'' ಎಂದು ಹೇಳಿದ ಚಕ್ರೇಶ್ವರನು, 'ಇವನೇ ನಮ್ಮ ಪಡೆಯನ್ನು ನೋಡಲಿ' ಎಂದು ಸೇನಾಪತಿ ಪಟ್ಟಗಟ್ಟಿ ಅವನನ್ನು ಮನ್ನಿಸಿದನು. ಭುವನಾಗ್ರಗಣ್ಯನೆಂಬ ಮಾತಿಗಿದು ತಕ್ಕುದು. ಮೊದಲಿನ ಅನಂತವೀರ್ಯನೆಂಬ ಹೆಸರು ಹೋಗಿ ಅಯೋಧ್ಯನೆಂಬ ಹೆಸರಾಯಿತು. ಅಂದಿನಿಂದ ಆ ಕುಮಾರನು ಬೆಳೆದು ಯೌವನೋದಯವಾಯಿತು. ಅರಸು ಹಿಡಿದರೆ ಹುಲ್ಲು ಕೂಡ ಪರ್ವತವಾಗುವುದೆಂಬ ಮಾತು ತಪ್ಪುವುದೇ? ಮೇಘೇಶ ಕುಮಾರನು ಸೇನೆಗೆ ಅಗ್ರಣಿಯಾದನು. ಪುಣ್ಯವಂತರು ಮುಟ್ಟಿದರೆ ಮಣ್ಣು ಹೊನ್ನಾಗುವುದು.

ಹರುಷದಿಂದ ಕೆಲವು ಕಾಲ ಕಳೆಯಿತು. ಒಂದು ಇರುಳು ಕಡೆಯ ಜಾವದಲ್ಲಿ ಶ್ರೇಷ್ಠವಾದ ಮಂದರ ಪರ್ವತವು ಲೋಕದ ತುದಿಗೆ ಹಾರುವುದನ್ನು ಭರತೇಶನು ಸ್ವಪ್ನದಲ್ಲಿ ಕಂಡನು. ''ಶ್ರೀ ಹಂಸನಾಥ'' ಎಂದು ಕೂಡಲೇ ಎದ್ದು ಕುಳಿತನು. ಆಗ ಅವನ ಬಾಹುಗಳ ತೆಕ್ಕೆಯಲ್ಲಿದ್ದ ಪಟ್ಟದ ಅರಸಿ ಆ ಹೊತ್ತಿನಲ್ಲೇ ಭರತೇಶನ ಅಳುವನ್ನು ಕಂಡು, ಅವಳ ದೇಹವೇ ಕಂಪಿಸತೊಡಗಿತು.

''ಸ್ವಾಮಿ, ಕಷ್ಟವನ್ನು ಕಂಡೆನು'' ಎಂದು ಅವನನ್ನು ಅಪ್ಪಿಕೊಂಡು ಭಯಪಡುತ್ತ ಆ ಮನೋಹರಿಯು ಹೇಳಿದಳು. ಅದಕ್ಕೆ ''ಕೋಮಲೆ, ಹೆದರಬೇಡ'' ಎಂದು ತಾನೂ ಅವಳನ್ನು ತಬ್ಬಿಕೊಂಡು, ತಾನು ಮೊದಲು ಕಂಡ ಸ್ವಪ್ನವನ್ನು ಕೇಳಿದನು.

''ಅಬಲೆ, ನಾನೀಗಾಗಲೇ ಅವಧಿ ವಿಜ್ಞಾನದಿಂದ ಇದೇನೆಂದು ತಿಳಿದು ಕೊಂಡೆನು. ಇವು ವೃಷಭೇಶ್ವರನು ಇನ್ನು ಶಿವಲೋಕಕ್ಕೆ ಹೋಗುವ ಸೂಚನೆಗಳು.''

''ಹಾಗಾದರೆ ನಮಗೆ ಇನ್ನಾರು ಗತಿ?''

''ನಮಗಿನ್ನು ಹಂಸನಾಥನೆ ಗತಿ. ಅವನಂತೆ ನಾವೂ ಶಿವಲೋಕಕ್ಕೆ ಹೋಗುವ. ನಾವು ಆ ಭವದಲ್ಲಿ ಬಾಳುವುದೆಂಬುದೇ ಸ್ವಪ್ನ. ಈ ಸ್ವಪ್ನದ ಅವಗಡವನ್ನು ಲೆಕ್ಕಿಸಬಾರದು'' ಎಂದು ತನ್ನ ಮಡದಿಯನ್ನು ಸಂತೈಸಿ ತಾನು ತನ್ನ ಅವಧಿ ದೃಷ್ಟಿಯನ್ನು ಕೈಲಾಸಗಿರಿಗೆ ಅಟ್ಟಿದನು. ಪುರುದೇವನ ಇರವನ್ನು ಪ್ರತ್ಯಕ್ಷವಾಗಿ ಕಂಡನು. ಅವನು ಕೂಡ ನರನಾಥವೇಷದ ಶಿವನೇ ಆಗಿದ್ದನು. ಆದಿನಾಥನು ಸಮವಸರಣವನ್ನು ಬಿಟ್ಟು, ಕೈಲಾಸಗಿರಿಯ ಬೇರೊಂದು ವಿಮಲ ಶಿಲೆಯಲ್ಲಿ ಪೂರ್ವಕ್ಕೆ ಮೊಗಮಾಡಿ ಸಿದ್ಧಾಸನದಲ್ಲಿ ಕುಳಿತಿರುವುದನ್ನು ಕಂಡನು. ಇನ್ನು ಹದಿನಾಲ್ಕು ದಿನಗಳಲ್ಲಿ ಆದಿನಾಥನು ಮುಕ್ತಿಗೆ ಹೋಗುವನೆಂದು ಭರತೇಶನು ತನ್ನ ಹೃದಯದಲ್ಲೇ ತಿಳಿದು ಕೊಂಡನು.

ಅಷ್ಟರಲ್ಲಿ ಉದಯವಾಯಿತು.

ಭರತೇಶನು, ಸಭೆಗೆ ಹೋಗಿ ಸರ್ವರಿಗೂ ಆ ವೃತ್ತಾಂತವನ್ನು ಹೇಳಿದನು. ಅಲ್ಲಿ ಹಿರಿಯ ಮಗನು, ಮಂತ್ರಿ, ದಳಪತಿ, ಗೃಹಪತಿ, ಎಲ್ಲರೂ ತಾವು ಕಂಡ ಒಂದೊಂದು ಕನಸಿನ ಕಥೆ ಹೇಳಿದರು. ಅದನ್ನು ಕೇಳಿ, ಅವುಗಳೆಲ್ಲವೂ ಪುರುನಾಥನು ತೆರಳುವ ಸೂಚನೆಯೆಂದು ಚಕ್ರೇಶ್ವರ ಹೇಳಿದನು. ಭೂನಾಥನು ಮಾತನಾಡುವಷ್ಟರಲ್ಲೇ ಖೇಚರನೊಬ್ಬನು ವಿಮಾನದಲ್ಲಿ ಬಂದು ಇಳಿದನು. ಅದನ್ನು ತಿಳಿಸಲು ಆನಂದನೆಂಬವನು ಆಸ್ಥಾನಕ್ಕೆ ಬಂದನು. ತಮ್ಮ ಒಡೆಯನ ವಿಜ್ಞಾನಕ್ಕೆ ಆ ಸಭೆಯು ಮೆಚ್ಚಿತು.

ಆದಿನಾಥನನ್ನು ಪೂಜಿಸುವೆನೆಂದು ಭರತೇಶನು ನೆನೆದು, ಸುವಸ್ತುಗಳೊಂದಿಗೆ ಬರಬೇಕೆಂಬ ರಾಯಸಗಳನ್ನು ದಿಕ್ಕು ದಿಕ್ಕಿಗೆ ಆಯಾಸವಿಲ್ಲದೇ ಕಳುಹಿಸಿದನು. ''ತಂಗಿಯರು ಊರಲ್ಲಿರಲಿ, ಸಿಂಧುದೇವನೂ ಗಂಗಾದೇವನೂ ಬರಲಿ. ನಮಿರಾಜನೂ, ಭಾನುರಾಜನೇ ಮುಂತಾದವರೆಲ್ಲರೂ ಬರಲಿ, ಅಳಿಯಂದಿರೆಲ್ಲ ಕೈಲಾಸಗಿರಿಗೆ ಬರಲಿ. ಪುತ್ರಿಯರೆಲ್ಲರೂ ನಮ್ಮ ಮನೆಗೆ ಬಂದು ಇಲ್ಲಿರಲಿ'' ಎಂದು ಲೇಖನಗಳನ್ನು ಬರೆಯಿಸಿ ಕಳುಹಿಸಿದ ಮೇಲೆ ಸಾರ್ವಭೌಮನು ತನ್ನ ಅರಮನೆಗೆ ಹೋದನು.

''ನಾನು ಗಿರಿಯಲ್ಲಿ ತೀರ್ಥೇಶನನ್ನು ಪೂಜಿಸುತ್ತೇನೆ. ನೀವು ಇಲ್ಲಿ ನವೀನವಾದ ಆರತಿಗಳನ್ನು ತಯಾರಿಸಿ ಕಳುಹಿಸಿ. ಪೂರ್ಣವಾದ ಪುಣ್ಯವನ್ನೇ ಮಾಡಿಕೊಡುವುದು'' ಎಂದು ಒಳಗಿನ ಮಾನಿನಿಯರಿಗೆ ನೇಮಿಸಿದನು.

ಭೇರಿಯನ್ನು ಹೊಡೆಯಿಸಿ ಕೈಲಾಸ ಪರ್ವತದಿಂದ ಸ್ವಲ್ಪ ದೂರದಲ್ಲೇ ಸೇನೆಯನ್ನು ನಿಲ್ಲಿಸಿ, ಬ್ರಾಹ್ಮಣರು, ಆಪ್ತರು, ಆತ್ಮಜರು – ಎಲ್ಲರನ್ನೂ ಕೂಡಿಕೊಂಡು ದೊಡ್ಡ ವಿಮಾನವೇರಿ ಹೋದನು.

ಚಕ್ರೇಶನು ಮಳೆಯ ಗಾಳಿಯಂತೆ ಬರ್ರನೆ ಬಂದು ತಪ್ಪಲಿನಲ್ಲಿ ನಿಂತು, ಚಲುವಿಕೆಗಾಗಿ ಪೂಜೆ ಮಾಡುವೆನೆಂದು ತನ್ನೊಳಗೆ ಹೀಗೆಂದು ನೆನೆದನು.

''ಹಗಲಲ್ಲಿ ಪೂಜೆ, ರಾತ್ರಿಯಲ್ಲಿ ರಥೋತ್ಸವ ಸೊಗಸಾಗಿ ನಡೆಯಬೇಕು. ಅದಕ್ಕೆ ಯೋಚಿಸಿ, ತೇರುಗಳನ್ನು ಸಿದ್ಧಪಡಿಸು'' ಎಂದು ಆ ಕ್ಷಣದಲ್ಲೇ ವಿಶ್ವಕರ್ಮನಿಗೆ ನೇಮಕವಿತ್ತನು. ದಳಪತಿಯನ್ನು ಕರೆದು ''ಉಲುಪೆಯನ್ನು ತರಿಸಬೇಕು, ತೇರುಗಳನ್ನು ಸಿಂಗರಿಸಬೇಕು. ರಾಜರಿಗೆ ಹೇಳಿಕಳುಹಿಸಬೇಕು, ಹಲವು ವಿಮಾನಗಳನ್ನು ಖಚರರಿಗೆ

ಕಳುಹಿಸಬೇಕು'' ಎಂದು ಅವನನ್ನು ನೇಮಿಸಿದನು. ಗೃಹಪತಿಯನ್ನು ಕರೆದು ಜನಜಂಗುಳಿ ಪರಿಸೆಯವರನ್ನೆಲ್ಲ ತೃಪ್ತಿಪಡಿಸಬೇಕೆಂದು ಉದ್ಯೋಗಿಸಿದನು. ಗಂಗೆಯ ತಡಿಯಲ್ಲಿ ತನಗೆ ಏಕಭುಕ್ತಿಗಾಗಿ ಅನ್ನ ಮಾಡಬೇಕೆಂದು ಸೂವಾರಿಗೆ ಹೇಳಿದನು. ಯುವರಾಜನನ್ನು ಕರೆದು, 'ಅಣ್ಣ ಮುನಿಭುಕ್ತಿ ಆರೈಕೆಗಳು ನಿನ್ನದು. ರಾಜರ ವಿನಯೋಪಚಾರವೂ ನಿನಗೆ, ನನಗೆ ಪೂಜೆಯ ಧ್ಯಾನವೊಂದೇ. ಎಚ್ಚರಿಕೆ' ಎಂದು ತಿಳಿಸಿದನು. ಅಳಿಯಂದಿರು, ಅರಸು ಮಕ್ಕಳ, ಭೂರಿ ಬೋಜನದ ಹಾಗೂ ಬಿಡಾರದ ವ್ಯವಸ್ಥೆಯನ್ನು ಮಾಡಲು ಮಹಾಬಲ ರಾಜನನ್ನು ನಿಯಮಿಸಿದನು. ಮಂತ್ರಿ ಬುದ್ಧಿ ಸಾಗರನಿಗೆ ಬ್ರಾಹ್ಮಣರ ಭೋಜನ ಮತ್ತು ಶ್ರೀ ಬಲಿಗಳ ಚಿಂತೆಯನ್ನೂ ಮಾಕಾಳಸಿಗೆ ಬಂದ ಪರಿಸೆಯ ಆರೈಕೆಯನ್ನೂ ನೇಮಿಸಿದನು. ನಿತ್ಯ ಊರಿಗೆ ಹೋಗಿ ಆರತಿಗಳನ್ನು ತರಬೇಕೆಂದು ವೀರರಾದ ನಂಬುಗೆವಂತರಿಗೆ ಹೇಳಿದನು. ಮಹಾಜನರನ್ನು ಕರೆದು, ತಾನು ಪೂಜಿಸುತ್ತಿರುವಾಗ, ಅವರೆಲ್ಲರೂ ವಸ್ತುಗಳನ್ನು ಯೋಚಿಸಿ ವ್ಯಂತರ ಮತ್ತು ಖಗರಾಜರೊಡನೆ ಕೊಡಬೇಕೆಂದು ವ್ಯವಸ್ಥೆ ಮಾಡಿದನು. ಆದಿರಾಜನನ್ನು ಕರೆದು, 'ಇದು ಚಿಂತಿಸಿದುದನ್ನೆಲ್ಲ ಕೊಡುವ ಚಿಂತಾಮಣಿಯು. ನಿನ್ನ ಕೈಯಲ್ಲಿರಲಿ'' ಎಂದು ಸಂತೋಷದಿಂದ ಕೊಟ್ಟನು. ವೃಷಭರಾಜನನ್ನೂ ಹಂಸರಾಜನನ್ನೂ ಕರೆದು ವಿವಿಧ ವಸ್ತುಗಳನ್ನು ಕೊಡುವ ನವನಿಧಿಗಳನ್ನು ಅವರಿಬ್ಬರಿಗೂ ತೋರಿಸಿಕೊಟ್ಟನು. ಉಳಿದ ಮಕ್ಕಳನ್ನೂ ಅಳಿಯಂದಿರನ್ನೂ ಚಾಮರ ಸೇವೆಮಾಡಲು ನಿಯಮಿಸಿದನು. ನಿವಾಳಿಯಿಡುವ ಕೆಲಸವನ್ನು ಗೆಳೆಯರಿಗೆ ಕೊಟ್ಟನು.

ಕೆಲಸಗಳನ್ನೆಲ್ಲ ಹಂಚಿಕೊಟ್ಟು, ಭರತೇಶನು ಮೇಲೆ ನೋಡಿದನು. ದೇವನು ಆಗಲಿದ ದೇಗುಲದಂತೆ ಸಮವಸರಣವು ಇತ್ತು, ಮನೆಯ ಕಷ್ಟಗಳನ್ನು ಬಿಟ್ಟಿರುವ ವಿಸ್ಪೃಹನಂತೆ ಜಗದೀಶನು ಗಿರಿಯಲ್ಲಿದ್ದನು. ಹೊದಿಕೆಗಳನ್ನು ತೆಗೆದಿರುವ ಜನರೆಲ್ಲರ ಗಂಧಕುಟಿಗಳು ಆಕಾಶದಲ್ಲೆಲ್ಲ ತುಂಬಿದ್ದುವು. ದ್ವಾದಶಗಣಗಳು ಆಶ್ಚರ್ಯದಿಂದ ಪುರುದೇವನನ್ನು ನೋಡುತ್ತಿದ್ದರು. ಸಿದ್ಧ ಶಿಲೆಯಂತೆ ಶಿಲೆಯಿತ್ತು, ಅದರಲ್ಲಿ ಪಲ್ಯಂಕ ಯೋಗದಲ್ಲಿ ಬದ್ಧನಾಗಿ ಸಿದ್ಧನಂತೆ ದೇವನಿರುವುದನ್ನು ಕಂಡು ಭರತೇಶನು, 'ಜಿನಸಿದ್ಧ' ಎಂದು ತಲೆಯನ್ನು ತಗ್ಗಿಸಿದನು. ಜಿನನ ಎದುರಲ್ಲಿ ಮರುಕ ಹುಟ್ಟಲಿಲ್ಲ. ಆದ್ದರಿಂದ ಚಕ್ರವರ್ತಿಯು ಮರುಗುತ್ತಿರಲಿಲ್ಲ, ನಮಸ್ಕಾರ ಮಾಡಿ, ಮಹಾಪೂಜೆಗೆ ಸಿದ್ಧನಾದನು.

ಒಂದೆರಡು ದಿನ ಪೂಜೆ ಸಾಗುವಷ್ಟರಲ್ಲಿ ಖಗರೂ ವ್ಯಂತರರೂ ಒತ್ತಿ ಬಂದರು. ವೃಂದಾರಕರಿದ್ದಂತಹ ಹತ್ತಿರದ ರಾಜ್ಯದಿಂದ ಪರಿಸೆ ಬಂದು ಕೂಡಿತು. ಮೊದಲು ಕಡಲು ರಾಜ್ಯದ ಮಾಗಧನೂ ಕಡೆಯದಾಗಿ ವ್ಯಂತರ ರಾಜ್ಯದ ಹಿಮವಂತನೂ ಕಡುಪಿನ ಖಗರೂ ಪೂಜಾವಸ್ತುಗಳನ್ನು ತಂದರು. ನೃಪನು ಪ್ರೀತಿಪಟ್ಟನು. ನಮಿರಾಜ ವಿನಮಿರಾಜರೂ ಗಂಗಾದೇವ ಸಿಂಧೂದೇವರೂ ವಿಮಲರಾಜ, ಭಾನುರಾಜರೂ ಬಂದು ಚಕ್ರಿಗೆ ನಮಸ್ಕಾರ ಮಾಡಿ ಅವನೊಡನೆ ಪೂಜೆ ಮಾಡಲು ಬಯಸಿದಾಗ ಅವರೊಂದಿಗೆ ಸೇರಿ ಕೊಂಡು ಅವನು ಪೂಜೆ ಮಾಡಿದನು.

ಚಕ್ರಿಯು ಶುಚಿಯಾಗಿ ಕೋಟಾಕೋಟಿ ರೂಪತಾಳಿ ಕೈಲಾಸ ಗಿರಿಯಲ್ಲೆಲ್ಲ ತುಂಬಿ ನಿಂತುಕೊಂಡು ಖಚರರೂ ವ್ಯಂತರರೂ ವಿಪ್ರರೂ ವಸ್ತುಗಳನ್ನು ಕೊಟ್ಟಂತೆ ಪೂಜೆ ಮಾಡಿದನು. ಲೆಕ್ಕವಿಲ್ಲದಷ್ಟು ಹೊನ್ನ ಗಿಂಡಿಗಳನ್ನೆತ್ತಿ ಸಮ್ಯಕ್ ಮಂತ್ರವು ಶೋಭಿಸುತ್ತಿರುವಾಗ, ಸೊಕ್ಕಿನ ಆನೆಯು ನೀರನ್ನು ಸೂಸುವಂತೆ ಜಿನನ ಚರಣಗಳಿಗೆ ನೀರನ್ನು ಧಾರೆಧಾರೆಯಾಗಿ ಸುರಿದನು. ಭೂಮಿ, ಆಕಾಶ, ಪರ್ವತ – ಎಲ್ಲೆಲ್ಲೂ ಜನರು ತುಂಬಿ ಜಯಜಯವೆನ್ನುತ್ತಿದ್ದರು. ಚಕ್ರಿಯ ಮೂರೂವರೆ ಕೋಟಿ ವಾದ್ಯಗಳೂ ಅರುಹಂತನ ಹನ್ನೆರಡೂವರೆ ಕೋಟಿ ವಾದ್ಯಗಳೂ ಸಂಭ್ರಮದಿಂದ ಮೊಳಗಿದುವು. ಖಚರ, ಗಂಧರ್ವ, ನಾಗಕನ್ನೆಯರೆಲ್ಲರೂ ನೃತ್ಯವಾಡಿದರು. ಜಂಬೂದ್ವೀಪಕ್ಕೆ ಆಶ್ಚರ್ಯಕರವಾದ ಅವರ ಪೂಜೆಯ ಆಡಂಬರವು ತೊಡಗಿತು. ಜಲಧಾರೆಯಾದ ಮೇಲೆ ಶುದ್ಧವಾದ ಗಂಧವನ್ನು ತೆಗೆದು ಸುರಿಸಿದನು. ಆ ಬೆಟ್ಟವು ಗಂಧದಲ್ಲಿ ಮುಳುಗಿತು. ಆದರಿಂದದು ರಜತ ಗಿರಿಯಲ್ಲ; ಮಲಯಜಗಿರಿ ಎಂಬಂತೆ ಆಯಿತು. ಒಂದೇ ಸಮನೆ ಕೈಗಳಿಂದ ಗಂಧವನ್ನೆತ್ತಿ ಮೊಗೆದು ಮೊಗೆದು ಪೂಜಿಸಿದನು. ಗಂಧವೆಲ್ಲ ನೆಲಕ್ಕಿಳಿದು ನೆಲವೇ ಪರಿಮಳದಿಂದ ತುಂಬಿತು. ಅಲ್ಲಿ ನಿಂತಿರುವ ಪ್ರಜೆಗಳು ಜಯ ಜಯವೆನ್ನುತ್ತಿರುವಾಗ, ಹಲವು ಹಸ್ತಗಳಿಂದ ಅಕ್ಷತೆಯನ್ನು ಹಾಕಿದನು. ಬೆಳ್ಳಿ ಬೆಟ್ಟವು ಅಕ್ಕಿ ಬೆಟ್ಟವಾಯಿತು. ಸುರರೂ ಸಿದ್ಧರೂ ಯಕ್ಷರೂ ಜಯಜಯವೆನ್ನುತ್ತಿರುವಾಗ ವಿವಿಧ ಪುಷ್ಪಗಳನ್ನು ತೆಗೆತೆಗೆದು ಅರ್ಚನೆ ಮಾಡಿದನು. ಆಗ ರಜತಗಿರಿಯು ಹೊಸ ಹೂಗಳ ಪುಷ್ಪಗಿರಿಯಾಯಿತು. ಕಂಪು ಇಂಪು ಪೆಂಪು ಕೂಡಿದ ಕಜ್ಜಾಯದ ರಾಶಿಯನ್ನೇ ರಾಜನು ಅರ್ಚಿಸಿದಾಗ, ಕೈತಪ್ಪಿ ನೀರಿನಲ್ಲಿ ಬಿದ್ದ ಕಡಲೆಯಂತೆ ಕೂಡಲೇ ಪರ್ವತವು ತೋರವಾಯಿತು. ಪಂಚಕಜ್ಜಾಯವನ್ನೂ ಹಲವು ರೀತಿಯ ಹಣ್ಣುಗಳನ್ನೂ ಅರ್ಚನೆ ಮಾಡಿದಾಗ ಪಂಚವರ್ಣದ ಮೋಡಗಳು ಗಿರಿಗೆ ಕವಿದಂತಾಯಿತು. ರಾಣಿಯರೆಲ್ಲರು ರಚಿಸಿದ ಆರತಿಗಳನ್ನು ಅರುಹನಿಗೆತ್ತಿ ಬೆಳಗಿದನು. ನರರೂ ಜಯ ಜಯವೆನ್ನುತ್ತಿದ್ದರು. ಸೊಸೆಯರೂ ಪುತ್ರಿಯರೂ ಮಾಡಿದ ಆರತಿಗಳಿವೆಂದು, ರಸಿಕನಾದ ಚಕ್ರಿಯು ತನ್ನ ಅವಧಿಜ್ಞಾನದಿಂದ ತಿಳಿದು, ಸಂತೋಷದಿಂದ ನಗುತ್ತ ಜಿನೇಂದ್ರನಿಗೆ ಬೆಳಗಿದನು. ಶೋಭಿಸುತ್ತಿರುವ ಮೂವತ್ತೆರಡು ಸಾವಿರ ಪುತ್ರಿಯರೂ, ಲಕ್ಷರಾಣಿಯರೂ ಸೊಸೆಯರೂ ಹಲವರೂ ಕಳುಹಿಸಿದ ಆರತಿಗಳನ್ನೆಲ್ಲ ಭರತೇಶನು ಒಂದೇ ಬಾರಿಗೆ ನಿವಾಳಿಸಿದನು.

ಧೂಪವನ್ನು ಹಾಕಿದರು. ಧೂಪದ ಹೊಗೆಯು ಜಿನಕಾಂತಿ ಕೂಡಿ ಕೆಂಪಾಗಿ ಮೇಲೇರಿತು. ಆಗ ಅದು ಸ್ವರ್ಗಕ್ಕೆ ಇಟ್ಟ ಬಂಗಾರದ ಸೋಪಾನದಂತಾಯಿತು. ಚಕ್ರಿಯ ಕರಗಳಲ್ಲಿ ಅಪರಂಜಿ ಬಳ್ಳಿಯು ಹಬ್ಬುವಂತೆ, ಅಮರಾವತಿಗೆ ಮನಸ್ಸಿನ ಅನುರಾಗ ಹಾರುವಂತೆ ಧೂಪದ ಹೊಗೆಯು ರಂಜಿಸಿತು. ಫಲಗಳನ್ನು ಅರ್ಚಿಸಿದಾಗ, ಅವುಗಳು ಆ ಬೆಟ್ಟವನ್ನು ಬಳಸಿ ಬೆಟ್ಟಗಳಾದುವು. ಪರಿಸೆಯವರು ಮೇಲಿನ ಲೋಕವು ಪ್ರತಿಧ್ವನಿ ಮಾಡುವಂತೆ ಜಯ ಘೋಷಗೈದರು. ನೃಪತಿಯು ತೊಂಗಲು, ತೊಂಗಲಾಗಿ ಕೊನೆಕೊನೆಯಾಗಿ ದೊಡ್ಡ ದೊಡ್ಡ ಫಲಗಳನ್ನು ಅಂಗಜನನ್ನು ಸೋಲಿಸಿದ ಅರುಹಗೆ ಅರ್ಚಿಸಿದನು. ಬೆಟ್ಟ ತುಂಬಿಹೋಯಿತು. ಪರಿಸೆಗೆ ನಿಲ್ಲಲು ಎಡೆಯಿಲ್ಲದಂತೆ ಫಲಗಳು

ತುಂಬಿದ್ದುವು. ರಾಯನಾಗ ವ್ಯಂತರರನ್ನು ನೋಡಿದೊಡನೆ ಅವರು ಕೂಡಲೇ ಅವುಗಳನ್ನು ಗಂಗೆಯ ಮಧ್ಯಕ್ಕೆ ಬಿಸಾಡಿದರು. ಒಡನೆ ಹಿಂದಿನಂತೆ ಫಲಗಳ ಅರ್ಚನೆ ಮಾಡಿದನು. ಮೊದಲಿನಂತೆ ಹೆಚ್ಚಾಯಿತು. ವ್ಯಂತರರನ್ನು ನೋಡಿದೊಡನೆ ಅವರು ಅವುಗಳನ್ನೆಲ್ಲ ಮೊದಲಿನಂತೆ ಝಾಡಿಸಿ ಬಿಟ್ಟರು. ಫಲಗಳನ್ನು ನೀಡಿದಂತೆ ಭರತೇಶನು ಪೂಜೆ ಮಾಡುತ್ತಿದ್ದನು. ಇದನ್ನು ನೋಡುತ್ತ ಪರಿಸೆಯು ಜಯಜಯವೆನ್ನುತ್ತಾ ಕುಣಿದಾಡಿತು. ಅರುವತ್ತನಾಲ್ಕು ಸಾವಿರ ಕುಮಾರರಲ್ಲಿ ಕಿರಿಯರಲ್ಲಿ ದೀಕ್ಷೆಗೊಂಡವರ ಹೊರತು, ಮಿಕ್ಕಿನ ಮಕ್ಕಳೆಲ್ಲರೂ ಭಯಭಕ್ತಿಗಳಿಂದ ಚಾಮರವಿಕ್ಕಿದರು. ಕುಮಾರರೊಂದಿಗೆ ಮೂವತ್ತೆರಡು ಸಾವಿರ ಮಂದಿ ಅಳಿಯಂದಿರು ಶ್ವೇತಚಾಮರಗಳನ್ನು ದೇವಗಂಗೆಯ ತೆರೆಯಂತೆ, ಬೀಸುತ್ತಿದ್ದರು. ಅರುವತ್ತ ನಾಲ್ಕು ಚಾಮರಗಳನ್ನು ಬಿಟ್ಟು, ಅರುಹಂತನು ಶಿಲೆಯಲ್ಲಿ ಏಕಾಕಿಯಾಗಿರಲು ಚಕ್ರಿಯು ಲಕ್ಷಕ್ಕೆ ಸ್ವಲ್ಪ ಕಡಮೆಯಾಗುವಷ್ಟು ಚಾಮರಗಳನ್ನು ಬೀಸುವಂತೆ ಮಾಡಿದನು. ಇದರಿಂದ ಆ ಗಿರಿಯೇ ತುಂಬುವಂತೆ ಆಯಿತು. ಶ್ರೀ ಜಿನನಿಗೆ ಒಪ್ಪುವ ಪೂಜೆಯನ್ನೂ ರಾಜನು ಮಾಡುವ ಪೂಜೆಯ ಆನಂದವನ್ನೂ ನೋಡಿ ನೋಡಿ ಆಶ್ಚರ್ಯಪಡುತ್ತ ಸಖಿರೆಲ್ಲರೂ ಅಲ್ಲಲ್ಲಿ ನಿವಾಳಿಯನ್ನು ಇಡುತ್ತಿದ್ದರು. ಫಲಗಳ ಪೂಜೆಯನ್ನು ಮಾಡಿ, ರತ್ನದ ಚಿನ್ನದ ಫಲಗಳು ಮಂದರಗಿರಿಯಂತೆ ಬಿದ್ದಿರುವ ಹಾಗೆ ಮಾಡಿದನು. ಆಮೇಲೆ ಕೋಟಿ ಅರ್ಘ್ಯ ವನ್ನೆತ್ತಿದನು. ಎಲ್ಲರೂ ಒಲಿದು ಜಯಜಯವೆನ್ನುತ್ತಿದ್ದರು. ಪರಮನಿಗೆ ಅರ್ಘ್ಯವನ್ನೆತ್ತಿ ಇಟ್ಟಾಗ, ತುದಿಯಲ್ಲಿ ರಾಶಿಯಾಗಿ ಹಾಕಿದ ಕರ್ಪೂರವು ಉರಿಯುತ್ತಿರುವಾಗ ಗಿರಿಗೆ ಕಾಳ್ಗಿಚ್ಚು ಹಬ್ಬಿದಂತೆ ತೋರಿತು. ರಾಜರತ್ನನು, ರತ್ನದ ದೊಡ್ಡಗಿಂಡಿಗಳನ್ನೆತ್ತಿ ಭವದುಃಖಾಗ್ನಿಯ ಕಡಲೆಂದು ಜಗಕ್ಕೆ ನೂತನ ಮಂತ್ರವನ್ನು ಹೇಳಿ, ಆದಿಜಿನೇಶನಿಗೆ ಶಾಂತಿಧಾರೆಯನ್ನು ಮಾಡಿದನು. ಭರತೇಶನು ಕುಸುಮಗಳ ಮಳೆಯನ್ನೇ ಕರೆಯುತ್ತಿರುವಾಗ ದೇವತೆಗಳು ಜಯಜಯವೆಂದು ಹೂಮಳೆ ಕರೆದರು. ತೀರ್ಥೇಶನ ಮೇಲೆ ಭರತೇಶನು ರತ್ನವನ್ನು ಸುರಿಯುತ್ತಿದ್ದಾಗ ಪರಿಸೆಯು ಸಾಗರವೇ ತಳ್ಳಂಕಗೊಳ್ಳುವಂತೆ ಜಯಘೋಷ ಮಾಡಿತು.

ಚಕ್ರೇಶ್ವರನು ದ್ವಾದಶಗಣಗಳೊಂದಿಗೆ, ತನ್ನವರೊಂದಿಗೆ ಕೂಡಿಕೊಂಡು ಸ್ತೋತ್ರ ಮಂತ್ರಗಳನ್ನು ಉಚ್ಚರಿಸುತ್ತ ಆದಿನಾಥನಿಗೆ ಪ್ರದಕ್ಷಿಣೆಗೈದನು. ಅವನ ಆ ಸಂತೋಷಕ್ಕೆ ಸುರರಿಗೂ ಪ್ರೀತಿಯಾಯಿತು.

ಭರತೇಶನು ಜಿನನನ್ನು ಬೀಳ್ಕೊಂಡು, ಯೋಗಿಗಳನ್ನೂ ವಿಪ್ರರನ್ನೂ ರಾಜರನ್ನೂ ಸರ್ವ ಪ್ರಜೆಗಳನ್ನೂ ಅನುರಾಗವುಂಟಾಗುವಂತೆ ಅವರನ್ನು ನೋಡಿದನು. ಆದರಿಂದ ಅವರನ್ನು ತಣಿಸಿದನು. ಅವರೆಲ್ಲರನ್ನೂ ಅನಂತರ ಭೋಜನದಲ್ಲೂ ತಣಿಸಿದನು.

''ನನಗೆ ಪೂಜೆಯ ಚಿಂತೆ. ನಿಮಗಾದರೆ ನಿಮ್ಮ ಅಳಿಯನು ಎಲ್ಲವನ್ನೂ ಮಾಡುವನು'' ಎಂದು ಸವಿಯಾದ ನುಡಿಯಲ್ಲಿ ತನ್ನ ಬಾಂಧವರಾದ ನಮಿರಾಜ ಮುಂತಾದವರನ್ನು ಮನ್ನಿಸಿದನು. ಯುವರಾಜನಾದ ಬಾಹುಬಲಿಯ ಪುತ್ರನೂ ಯಜಮಾನರಾದ ಮಂತ್ರಿಗಳೂ ಅವರವರ ಇಚ್ಛೆಯನ್ನು ಅರಿತು ಎಲ್ಲರನ್ನೂ ತಣಿಸಿದರು.

ಭರತೇಶನ ಭಾಗ್ಯದಲ್ಲಿ ಆಲಸ್ಯವುಂಟೆ? ಮಾನವರು ದೇವತೆಗಳು ವ್ಯಂತರರು ಬ್ರಾಹ್ಮಣರು – ಮುಂತಾದವರ ಸಮೂಹಕ್ಕೆ ವಿನಯವನ್ನು ನುಡಿದನು. ಆಮೇಲೆ ತಾನು ಮಕ್ಕಳೊಡನೆ ಗಂಗೆಯ ದಂಡೆಯಲ್ಲಿ ಏಕಭುಕ್ತಿಯನ್ನು ಸ್ವೀಕರಿಸಿದನು.

ಈ ರೀತಿಯಲ್ಲಿ ಹಗಲು ಕಳೆಯಿತು. ಜಿನನ ಅಂಗ ಪ್ರಭೆಯಿಂದ ರಾತ್ರಿಯು ಹಗಲಿನಂತೆ ಇತ್ತು, ಕೂಡಿದ ಜಾತ್ರೆಯ ಜನವೆಲ್ಲ ಘಳಿಗೆಯ ಸನ್ನೆಯಿಂದ ಮಾತ್ರ ರಾತ್ರಿಯೆಂದು ತಿಳಿಯುತ್ತಿದ್ದರು. ಅವಧಿಬೋಧವುಳ್ಳ ಆಢ್ಯರೆಲ್ಲರೂ ಇದನ್ನು ಬಲ್ಲರು. ಆದರೆ ಸಾಮಾನ್ಯರು ಸನ್ನೆಯಿಂದಲೇ ಅರಿತುಕೊಂಡರು.

ಶಿವಶೈಲದಲ್ಲಿ ಭರತೇಶನು ನಿಂತನು. ತೇರಿನ ಗೌರವವೆದ್ದಿತು. ಕರು ಮಾಡದ ನಾಲ್ಕು ಸುತ್ತಿನಲ್ಲಿ ಹೆಚ್ಚು ಉದ್ದವಾಗಿಯೂ ಹೆಚ್ಚು ಹೆಚ್ಚು ತೋರವಾಗಿಯೂ ಇರುವ ಎಂಟು ತೇರುಗಳು ಎಂಟು ಗಿರಿಗಳಂತೆ ಭೂಮಿಯಲ್ಲಿ ಗಿರಿಗೊತ್ತಿ ನಿಂತಿದ್ದುವು. ಚಿನ್ನ ಬೆಳ್ಳಿಯಿಂದ ನಿರ್ಮಿತವಾದ ಆ ರಥಗಳಿಗೆ ಪಂಚರತ್ನದ ಕಲಶಗಳನ್ನೂ ಪ್ರಜ್ವಲಿಸುವ ನವರತ್ನ ಮಾಲೆಗಳನ್ನೂ ಅಳವಡಿಸಿದ್ದರು. ಝಲ್ಲಿ, ಪತಾಕೆ, ಪಟ್ಟಾವಳಿ, ಕನ್ನಡಿ, ಪಲ್ಲವ, ಸತ್ತಿಗೆ, ಘಂಟೆಗಳಿಂದಲೂ ಚಿನ್ನ ಬೆಳ್ಳಿಯ ಹೂಗಳ ಮಾಲೆಗಳಿಂದಲೂ ಶೋಭಿಸುವ ಆ ರಥಗಳು ದೇವಲೋಕದ ಕಲ್ಪವೃಕ್ಷಗಳಂತೆ ಇದ್ದುವು. ದೊಡ್ಡ ಪ್ರತಿಮೆಯಿಂದ ಸುರಗಿರಿಯಂತೆಯೂ, ರತ್ನಗಳಿಂದ ರೋಹಣಾದ್ರಿಯಂತೆಯೂ, ಎಳ ಎಸಳು ಎಸಳಾಗಿ ಹೊಳೆಯುತ್ತಿರುವ ಬೆಳಕಿನಿಂದ ಜ್ಯೋತಿ ರಂಗದ ಪಕ್ಷಿಗಳಂತೆಯೂ ಆ ರಥಗಳು ಹೊಳೆಯುತ್ತಿದ್ದುವು. ಮೇರುಪರ್ವತಕ್ಕೆ ಎಂಟು ಪರ್ವತಗಳು ಬಳಿಯಲ್ಲೇ ಗೋಡೆಯಂತಿರುವವೋ ಎಂಬಂತೆ, ರಜತಗಿರಿಗೆ ಎಂಟು ಪರ್ವತಗಳು ಹತ್ತಿರದಲ್ಲೇ ಒತ್ತಿ ಇರುವಂತೆ ಆ ಎಂಟು ತೇರುಗಳಿದ್ದುವು.

ಅಗಣಿತವಾದ ವಾದ್ಯಗಳು ಘೋಷಿಸುವಾಗ, ಜಗದ ಪ್ರಜೆಗಳೆಲ್ಲರೂ ಜಯಜಯವೆಂದು ಹೇಳುತ್ತಿರುವಾಗ, ಆಕಾಶವನ್ನು ಮುಟ್ಟುವವೋ ಎಂಬಂತಿರುವ ಆ ರಥಗಳು ಗಲಗಲವೆಂದು ಎಂಟು ದಿಕ್ಕುಗಳಿಗೂ ಚಲಿಸ ತೊಡಗಿದುವು. ಭರತ ರಾಜೇಂದ್ರನ ಬೆರಳ ಸನ್ನೆಯಂತೆ ಎಂಟು ದಿಕ್ಕುಗಳಿಗೆ ಎಂಟು ರಥಗಳು ಹರಿದುವು. ಎಂಟು ಕರ್ಮಗಳನ್ನು ತುಳಿದು, ಎಂಟು ಗುಣಗಳನ್ನು ಅಯ್ಯನು ಕೈಹಿಡಿದ ಬಲ್ಮೆಯನ್ನು ಎಂಟು ದಿಕ್ಕುಗಳಿಗೆ ಹೇಳಿ ಕಳುಹಿಸುವಂತೆ ಭರತೇಶನು ಎಂಟು ರಥಗಳನ್ನು ಎಂಟು ದಿಕ್ಕುಗಳಿಗೆ ಹೋಗುವಂತೆ ಕಳುಹಿಸಿದನು. ಹೂಮಳೆ ಸುರಿಯುತ್ತಿರುವಾಗ, ಉರಿಬಾಣಗಳು ಹರಿಯುತ್ತಿರುವಾಗ, ಗಿರಿ ಗರಿ ಗೀಕು ಗಿರ್ರೆಂದು ಗಾಲಿಗಳ ಸ್ವರವು ಕೇಳುತ್ತಿರುವಂತೆ ಆ ತೇರುಗಳು ಸರಿದುವು.

ಮೋಡಗಳ ಕೊನೆಯಲ್ಲಿ ತೆರಳುವುದಕ್ಕೆಂದೇ ವ್ಯಂತರರೂ ಖಗರೂ ಈ ತೇರುಗಳನ್ನು ರಚಿಸಿದರೆಂದು ಭರತೇಶನು ಯೋಚಿಸುತ್ತಿರುವಾಗಲೇ ಅವರೆಲ್ಲರ ಹೃದಯಕ್ಕೂ ಸಂತೋಷವನ್ನುಂಟು ಮಾಡಿದನು.

"ನನ್ನ ರಥವು ಭೂಮಿಯಲ್ಲಿ ಹರಿದು, ನಿಮ್ಮ ಈ ತೇರುಗಳು ಇನ್ನೂ ಉದ್ದದಲ್ಲಿ ತೆರಳಿದರೆ ಕಷ್ಟವೆ? ಜಿನ ಪೂಜೆ ಹೆಚ್ಚಿದಷ್ಟೂ ಉತ್ತಮವಾಗವುದು; ನನ್ನಾಣೆ ರಥವನ್ನು

ನಡೆಯಿಸಿರಿ. ನೀವು ಯಾರು? ನನ್ನವರೇ ಅಲ್ಲವೇ? ನೀವೇನು ಷಟ್ಖಂಡಭೂಮಿಯಿಂದ ಆಚೆಗೆ ಇರುವವರೇ? ನನ್ನ ಏಳಿಗೆಯೇ ನಿಮ್ಮದೆಂದು ನಡೆಯಿರಿ ಎಂದು ಭರತೇಶನು ನುಡಿದಾಗ ಅವರೆಲ್ಲರೂ ಉಬ್ಬಿದರು.

ಆಗ ದೇವ ದುಂದುಭಿ ಮೊಳಗಿತು. ದೇವ ನೃತ್ಯ ರಂಜಿಸಿತು. ಮೊದಲು ಸಿಂಧುದೇವನ ರಥ ಮುಂದೆ ಹೋಯಿತು. ಆ ವೈಭವದ ಹಿಂದಿನಲ್ಲೇ ಗಂಗಾದೇವನ ತೇರು ಆಕಾಶದಲ್ಲಿ ನಡೆಯಿತು. ಖೇಚರರ ನೃತ್ಯವಾದ್ಯಗಳೊಂದಿಗೆ ನಮಿರಾಜನ ರಥವು ಮುಂದುವರಿಯಿತು. ಆ ರೀತಿಯಲ್ಲಿ ಭೂಮಿಯ ಜನರೆಲ್ಲ ಹೊಗಳುತ್ತಿರುವಾಗ ವಿನಮಿ ರಾಜನ ರಥವು ಸಾಗಿತು. ಆಮೇಲೆ ಗಣಬದ್ಧರ ಮಣಿರಥವು ಗಗನದಲ್ಲಿ ಸಾಗಿತು. ಪಾತ್ರಗಳು ಕುಣಿಯುತ್ತಿರುವಾಗ ವಾದ್ಯಗಳು ಮೊಳಗುತ್ತಿರುವಾಗ ವ್ಯಂತರಾಗ್ರಣಿಯ ಮಹಾರಥವು ಮುಂದುಹೋಯಿತು. ಬಳಿಕ ವರತನುವಿನ ರಥವು ಸಾಗಿತು. ಪ್ರಭಾಸೇಂದ್ರನೂ ತನ್ನ ರಥವನ್ನು ಮುನ್ನಡೆಸಿಕೊಂಡು ಹೋದನು. ವಿಜಯಾರ್ಧ ದೇವನ ರಥವು ವಿಜಯಾರ್ಧ ಗಿರಿಯಂತೆ ಸಂತೋಷದಿಂದ ಹರಿದು ಹೋಯಿತು. ಹಿಮವಂತದೇವನ ರಥವು ಹಿಮಗಿರಿಯಂತೆ ಸಾಗಿತು. ಭೂಮಿಯು ಹೊಗಳುತ್ತಿರಲು ಕೃತಮಾಳನ ಮತ್ತು ನಾಟ್ಯಮಾಳನ ರಥಗಳು ಗಮಿಸಿದುವು.

ಹನ್ನೆರಡು ರಥಗಳು ಸರಿದುಹೋದಾಗ, ಭರತೇಶನು ಹನ್ನೆರಡು ಮಂದಿ ಕಾರ್ಯಕರ್ತರನ್ನು ಕರೆದು, ತನ್ನ ತೋರವಾದ ತೋಳುಗಳಿಂದ ಅವರನ್ನಪ್ಪಿಕೊಂಡು ಮನ್ನಣೆ ಇತ್ತು ''ಮಹಾ ರಮ್ಯವಾಯಿತು'' ಎಂದು ಹೇಳಿದನು. ''ಒಡೆಯನು ಉತ್ತಮನಾದರೆ ಎಲ್ಲರೂ ಓಲೈಸುತ್ತಾರೆ. ಎಲ್ಲರೂ ಉತ್ತಮ ಸುಖವನ್ನೆ ಪಡೆಯುತ್ತಾರೆ. ಇದಕ್ಕಿಂತ ಉತ್ತಮವಾದ ಸುಖ ಇನ್ನಾವುದು'' ಎಂದು ಮಾಗಧಾದಿ ರಾಜರು ಭರತೇಶನ ಅಡಿಗೆ ಎರಗಿದರು.

''ದೊಡ್ಡ ಆನೆಯು ಮುಂದೆ ನಡೆಯುವಾಗ ಉಳಿದ ಆನೆಗಳು ಅದನ್ನು ಹಿಂಬಾಲಿಸುತ್ತವೆ. ಅದರಂತೆ ನಾವೂ ದೇವರೊಡನೆ ಆತ್ಮಸುಖವನ್ನು ಪಡೆಯುತ್ತಿದ್ದೇವೆ'' ಎಂದು ಮೈದುನರು ನುಡಿದರು.

ದಿನದಿನಕ್ಕೆ ಹೊಸ ರಥಗಳು, ಉತ್ತಮ ತರದ ಪೂಜಾ ನೃತ್ಯಗಳು ನಡೆದುವು. ಅದರೊಂದಿಗೆ ರಸ ರಸಾಯನದ ಊಟವೂ ಸೇರಿತು. ಈ ರೀತಿ ಹದಿನಾಲ್ಕು ದಿನಗಳ ರಥೋತ್ಸವ ಜರಗಿತು.

ಕಡೆಯ ದಿನದ ಮೂರನೆಯ ಜಾವದಲ್ಲಿ ಭರತೇಶನು ಎಲ್ಲ ಕಡೆಗಳಿಂದಲೂ ಬಂದ ಪ್ರಜೆಗಳಿಗೆ ದರ್ಶನವಿತ್ತು ಸಂಘ ಪೂಜೆ ಮಾಡಲು ತೊಡಗಿದನು. ಎಂಭತ್ತನಾಲ್ಕು ಗಣಧರರಿಗೆ ಭಕ್ತಿಯಿಂದ ಮಣಿದು, ಅವರ ಅನುಮತಿಯಂತೆ ಲೆಕ್ಕವಿಲ್ಲದಷ್ಟು ಭವ್ಯ ಸಮೂಹಕ್ಕೆ ಮನ್ನಣೆ ಮಾಡಿದನು. ಜಪಸರ, ಪುಸ್ತಕ, ಠವಣೆಕೋಲು ಮುಂತಾದ ಸಾಮಗ್ರಿಗಳನ್ನೂ ವಸ್ತ್ರಗಳನ್ನೂ ತಪಸ್ವಿಗಳಿಗೂ ಆರ್ಜಿಕೆಯರಿಗೂ ಇತರ ವ್ರತಿಗಳಿಗೂ ಇತ್ತು ಉಪಚರಿಸಿದನು. ಬ್ರಾಹ್ಮಣ ಸಮುದಾಯಕ್ಕೆ ಚಿನ್ನರನ್ನಗಳನ್ನೂ ದಿವ್ಯ ವಸ್ತ್ರಗಳನ್ನೂ ಮನಸ್ಸು ತಣಿಯುವಂತೆ ಕೊಟ್ಟನು. ಅದೇ ರೀತಿಯಲ್ಲಿ ಕೋಟಿ ಬ್ರಾಹ್ಮಣ ದಂಪತಿಗಳಿಗೂ

ಉಡುಗೊರೆಯಿತ್ತು ಮನ್ನಿಸಿದನು. ಹೆಚ್ಚು ಹೆಚ್ಚಾಗಿ ದಾನಗಳನ್ನು ಪಡೆದ ಬ್ರಾಹ್ಮಣರೆಲ್ಲರೂ ಭರತೇಶನನ್ನು ಹರಸಿದರು. ''ನಮ್ಮ ಅರಸನು ಪರದಾರ ಸಹೋದರನು. ಪುತ್ರರೊಡನೆಯೂ ಒಡನಾಡಿಕೊಂಡು ಚಿರಕಾಲ ಬಾಳಲಿ'' ಎಂದವರು ಭರತಚಕ್ರೇಶ್ವರನನ್ನು ಕೊಂಡಾಡಿದರು.

ಮಾಗಧ, ಹಿಮವಂತ, ವ್ಯಂತರರೇ ಮೊದಲಾದವರಿಗೆ ಅತಿಯಾಗಿ ಸುಂದರವಾದ ರತ್ನಾಂಬರಗಳನ್ನು ಪ್ರೀತಿಯಿಂದ ಇತ್ತನು. ಚಿಂತಾರತ್ನವುಳ್ಳವರಿಗೆ ಅಸಾಧ್ಯವೆಂಬುದುಂಟೇ? ಆದೀಶನ ಅಂತ್ಯ ಪೂಜೆಯಲ್ಲಿ ಭರತೇಶನು ಅನಂತರ ಖಗಪತಿಗಳಿಗೂ ಭೂಪತಿಗಳಿಗೂ ವಸ್ತ್ರಾಭರಣಗಳನ್ನಿತ್ತು ತಣಿಸಿದನು. ಅರಸು ಮಕ್ಕಳು, ತನ್ನ ಮಕ್ಕಳು, ಅಳಿಯಂದಿರು, ಮುಂತಾದವರನ್ನು ಪ್ರೀತಿಯಿಂದ ಮನ್ನಿಸಿದ ಬಳಿಕ ಪರಿವಾರದವರಿಗೂ ಉಚಿತವಾದ ಮನ್ನಣೆಗಳನ್ನಿತ್ತನು. ಕೊನೆಯಲ್ಲಿ ಕುಮಾರರನ್ನು ಕರೆದು, ''ನೀವು ಈ ಪರಿಸೆಯನ್ನು ಇನ್ನಷ್ಟು ತಿದ್ದಿರಿ'' ಎಂದು ನೇಮಿಸಿದನು. ''ದಾನ ಪೂಜೆಗಳನ್ನು ಕೈಮುಟ್ಟಿ ಮಾಡದೆ ಬೇರೆಯವರಿಗೊಪ್ಪಿಸಿದರೆ, ಅದು ಸಲ್ಲದು. ನಾನಾದ ಮೇಲೆ ನೀವಲ್ಲವೆ? ಈಗ ನೀವಿದನ್ನು ತಿದ್ದಿರಿ'' ಎಂದು ಹೇಳಲು, ಪುತ್ರರು ಆ ನಿಯೋಗವನ್ನು ಮಾಡತೊಡಗಿದರು.

ಭರತೇಶನ ಸುತರೆಲ್ಲರೂ ಅಲ್ಪ ವಿಮಾನಗಳನ್ನು ಪಡೆದು, ಆಕಾಶದಲ್ಲಿ ಸುತ್ತುವರಿದು, ಆ ನೆಲದ ಪರಿಸೆಯನ್ನು ತಿದ್ದಿದರು. ಅವರ ಸಂಭ್ರಮವು ವರ್ಣನಾತೀತವಾಗಿತ್ತು! ಕೊಡುವ ಕೈಮೇಲೆ, ಕೊಳ್ಳುವ ಕೈ ಕೆಳಗೆ ಎಂಬ ಮಾತನ್ನು ರೂಪಿನಿಂದ ತೋರಿಸುವಂತೆ, ಭೂಮಿಯಲ್ಲಿ ನಿಂತು ಕೈಯೆತ್ತಿದವರಿಗೆ, ಅವರು ಗಗನದಿಂದಲೇ ಕೈಯಾಡಿಸಿ ಕೊಡುತ್ತಿದ್ದರು. ಕಡಲಿನಲ್ಲಿ ಹಡಗುಗಳು ಚರಿಸುವಂತೆ ಜಿನಕಾಂತಿ ಮಡುಗಟ್ಟಿದ ಆಕಾಶದಲ್ಲಿ ಹಲವು ವಿಮಾನಗಳು ಎಡೆಯಾಡುತ್ತಿರಲು, ಉಚಿತ ವಸ್ತುಗಳನ್ನು ಕೊಡುತ್ತಿದ್ದರು. ಫಳಿ, ಪಟ್ಟೆ, ಪುಲ್ಲಿ, ಚೀನಾಂಬರ, ಮೇಘ ವರ್ಣಕ ಮೊದಲಾದವುಗಳನ್ನು ವಸ್ತ್ರದ ಮಳೆಗರೆದಂತೆ ಎಲ್ಲರ ತಲೆಗಳಮೇಲೂ ಸುರಿದರು. ಮೂರು ರಾಯರ ಸಂಪತ್ತನ್ನೇ ವೆಚ್ಚ ಮಾಡುವಂತೆ ರೀವಿಯಿಂದ, ಅಶ್ವಾವಳಿ, ಹಂಸಾವಳಿ, ಲತಾವಳಿ, ಮಕರಾವಳಿ, ಶುಕ ಪಿಕಾವಳಿ ವಸ್ತ್ರಗಳನೂ, ಕಾಮನ ಸಂಪತ್ತನ್ನೂ ಜಿನೇಂದ್ರನು ಸೂರೆಗೆಟ್ಟಿ ಭಾವದಲ್ಲಿ ತಾವೂ ಸೂಸಿದರು. ಕುಡುಕ, ನೇವಳ, ಬಳಿ ಮೊದಲಾದ ಆಭರಣಗಳನ್ನು, ಪ್ರಜೆಗಳು ತಣಿಯುವಂತೆ, ಕಲ್ಪವೃಕ್ಷಗಳೇ ಮೇಲಿನಿಂದ ಸುರಿಸುವ ರೀತಿಯಲ್ಲಿ ತಾವು ನಡೆದಾಡಿ ಸುರಿದರು.

ಆದಿರಾಜನ ಕೈಯಲ್ಲಿದ್ದ ಚಿಂತಾರತ್ನವು ಬೇಕಾದ ವಸ್ತುಗಳನ್ನು ಕೊಡುತ್ತಿದ್ದುದರಿಂದ ಅವರು ವಿನೋದ ಮಾಡಿದಂತೆ ಆ ದೊಡ್ಡ ಸಂಘವನ್ನು ತಿದ್ದಿದರು. ಭರತೇಶನು ತನ್ನ ಇಬ್ಬರು ಪುತ್ರರಿಗೆ ಕೊಟ್ಟಿದ್ದ ನವನಿಧಿಗಳು ಬೇಡಿದುದನ್ನು ತವಕದಲ್ಲಿ ಕೊಡುತ್ತಿದ್ದುದರಿಂದ, ಒಂದೇ ನಿಮಿಷದಲ್ಲಿ ಅವರು ಪರಿಸೆಯನ್ನೇ ತಿದ್ದಿದರು. ಪಿಂಗಲ ನಿಧಿಯು ವಿವಿಧ ಭೂಷಣಗಳನ್ನು ಕೊಡುತ್ತಿತ್ತು; ಪದ್ಮನಿಧಿಯು ಜೋಡಿಜೋಡಿ ವಸ್ತುಗಳನ್ನು ಕೊಡುತ್ತಿತ್ತು, ಶಂಖನಿಧಿಯು ಬಂಗಾರದ ರಾಶಿಯನ್ನೇ ಕೊಡುತ್ತಿತ್ತು, ರತ್ನನಿಧಿಯು ರತ್ನಗಳನ್ನೇ ಕೊಡುತ್ತಿತ್ತು, ಪಾಂಡುಕನಿಧಿಯು ಬೇರೆ ಬೇರೆ ರಸಗಳನ್ನೂ

ಧಾನ್ಯಗಳನ್ನೂ ಕೊಡುತ್ತಿತ್ತು. ಇವುಗಳಿಂದ ಅವರು ಎಲ್ಲರಿಗೂ ಉಚಿತವಸ್ತುಗಳನ್ನಿತ್ತು ತಣಿಸಿದರು.

''ನಾವೂ ನೀವೂ ಪೂಜಕರು. ಆದ್ದರಿಂದ ನಿಮಗೆ ಮೊದಲು ಸಂಭಾವನೆಯಾಗಲಿಲ್ಲ. ಈಗಲಾದರೋ ಈ ದೊಡ್ಡ ಸಂಘವನ್ನು ತಿದ್ದಿಯಾಯಿತು. ಇನ್ನು ನಿಮಗೆ ಅರ್ಚಿ ಮಾಡುವೆವು'' ಎಂದು ಭರತೇಶನು ಮೈದುನರಿಗೆ ಹೇಳಿದನು.

''ಸಿಂಧುದೇವ ಹಿಡಿ; ಗಂಗಾದೇವ ಕೊಳ್ಳಿದನು'' ಎಂದು ತಾನು ಹಿಡಿದ ಹಿರಿಮೆಯ ವಸ್ತುಗಳನ್ನು ನೀಡಿದನು ಭರತೇಶ. ಆದರೆ ಅವರು ಹಿಡಿಯಲಿಲ್ಲ. ''ನೀವೂ ಒಪ್ಪಿಸಿಕೊಂಡರೆ ನಾನು ಕೊಳ್ಳುವೆನು'' ಎಂದು ಅವರನ್ನೊಡಂಬಡಿಸಿ, ಕೊಟ್ಟು ತಕ್ಕೈಸಿದನು; ಅವರು ಕೊಟ್ಟ ವಸ್ತುಗಳನ್ನು ಭರತೇಶನು ಒಡಂಬಟ್ಟು ಸ್ವೀಕರಿಸಿದನು. ''ನಮಿರಾಜ ಹಿಡಿ'' ಎಂದು ಭರತೇಶನು ಹೇಳಿದಾಗ, ನಮಿರಾಜನೇ, ವಸ್ತು ಪೆಟ್ಟಿಯೊಂದನ್ನು ನೀಡಿದನು.

''ಮೊದಲು ನೀನು ಹಿಡಿ''

''ನಿಮಗೆ ಮೊದಲು ಇರಲಿ''

ಹೀಗೆ ಅವರಿಬ್ಬರು ನಸುಹೊತ್ತು ನೀನೆ ತಾನೆಂದು ಹೋರಾಡಿದರು. ಅನಂತರ ಒಬ್ಬರಿಗೊಬ್ಬರು ಕೊಟ್ಟು ಒಬ್ಬರನ್ನೊಬ್ಬರು ಅಪ್ಪಿಕೊಂಡರು. ಅವರ ಈ ನಡತೆಯನ್ನು ನೋಡಿ ಎಲ್ಲರೂ ಸಂತೋಷಗೊಂಡರು.

ಬಳಿಕ ಭರತೇಶನು ವಿನಮಿರಾಜು, ಭಾನುರಾಜ, ವಿಮಲರಾಜರನ್ನು ಅಪ್ಪಿಕೊಂಡು ಅವರಿಗೆ ಉಡುಗೊರೆ ವಸ್ತುಗಳನ್ನಿತ್ತನು. ಅವರನ್ನೂ ವಿನೋದವಾಡಿ ಮನ್ನಿಸಿದನು. ಭಗಿನಿಯರು, ಸುತರು, ಅರಸು ಮಕ್ಕಳು, ಬುದ್ಧಿಸಾಗರ ಮತ್ತು ಎಲ್ಲ ಮಿತ್ರರನ್ನೂ ತಣಿಸಿದ ಭರತೇಶನು ಗೃಹಪತಿಯಾಗಿದ್ದ ಮಯನನ್ನೂ ದಳಪತಿಯಾಗಿದ್ದ ಮಾಕಾಳನನ್ನೂ ಮುಂತಾಗಿ ಎಲ್ಲರನ್ನೂ ಮನ್ನಿಸಿದನು. ಈ ಪರಿಸೆಯಿಂದ ಜಗದಲ್ಲಿ ದಾರಿದ್ರ್ಯವೇ ಇಲ್ಲದಂತಾಯಿತು. ಆ ರಾತ್ರಿ ಕೂಡ ತೇರುಗಳು ಹರಿದಾಡಿದವು. ಮಹಾ ಉತ್ಸವ ಜರಗಿತು.

ಭರತೇಶನು ಈ ಜನ್ಮದಲ್ಲಿನ್ನು ಪೂಜಿಸುವ ವ್ಯವಹಾರವೇ ಇಲ್ಲವೆನ್ನುವ ರೀತಿಯಲ್ಲಿ ಉದ್ಯಾಪನೆಯಾಯಿತು. ಹದಿನಾಲ್ಕು ದಿನ ಹಗಲಿರುಳು ನಾನಾ ವಾದ್ಯಗಳು ಮೊಳಗಿ ಭೂಮಿಯೇ ಬೆಡಗಾಯಿತು. ಗಂಗೆಯ ಸ್ಥಳದಲ್ಲಿ ಸಾಗರದಂತೆ ನೀರು ಉಬ್ಬಿ ಹರಿಯಿತು. ಅದು ಮೂಡಣ ಕಡಲನ್ನೂ ಮುಟ್ಟಿತು. ಈ ಉತ್ಸವವು ಒಂದೆರಡು ದಿನವಲ್ಲ. ಹದಿನಾಲ್ಕು ದಿನಗಳ ಪೂಜೆಗೆ ಸಂದ ವಸ್ತುಗಳನ್ನು ಮೀನು ಮೊಸಳೆ ತಿಂದರೂ ತೀರದ ಕಡಲನ್ನು ಸೇರಿ ತೇಲುತ್ತಿದ್ದುವು. ಇದು ಇನ್ನು ಯಾವಾಗ ತೀರುವುದೋ ಎಂಬಂತಿತ್ತು. ಗಂಧ ಪನ್ನೀರು ಪುಷ್ಪಗಳಿಂದ ಭೂಮಿಯೂ ಸುಗಂಧ ಪೂರ್ಣವಾಯಿತು. ಪರ್ವತವು ಪರಿಮಳ ಪೂರಿತವಾಯಿತು. ಅಲ್ಲಿ ಸುಳಿದ ಗಾಳಿಗೆ ಸಂದ ಗಂಧವಾಹಕವೆಂಬ ಹೆಸರು ಸುಂದರವಾಯಿತು.

ಸ್ವರ್ಗ ಪಥವನ್ನು ಪೂಜೆಗಳಲ್ಲಿ ಹಲವರು ಗಳಿಸಿಕೊಂಡರು. ನಕ್ಷತ್ರಗಳೂ ಭರತೇಶನ ಕೀರ್ತಿಯನ್ನು ಹೊಗಳಿದುವು. ರಥೋತ್ಸವವಾದ ಮೇಲೆ ಅದೇ ರಾತ್ರಿಯಲ್ಲಿ ದೇವೇಂದ್ರನು ಸ್ವರ್ಗದಿಂದ ಇಳಿದು ಬಂದನು. ದೇವತೆಗಳ ವಿಮಾನಗಳು ಬರುತ್ತಿರುವಾಗ, ಸುರವಾದ್ಯಗಳು ಮೊಳಗುತ್ತಿರುವಾಗ ತನ್ನ ಸತಿಯನ್ನೊಡಗೊಂಡು ತಾರಾದ್ರಿಯಂತಿರುವ ಹಿರಿದಾದ ಆನೆಯನ್ನೇರಿ ದೇವೇಂದ್ರನು ರಜತಗಿರಿಗೆ ಬಂದನು. ಅನರ್ಘ್ಯವಾದ ಭೂಷಣಗಳಿಂದಲೂ ರತ್ನಮುಕುಟದಿಂದಲೂ ಹೊರೆಹೊಮ್ಮುವ ದೇವೇಂದ್ರನ ಕಾಂತಿಯು ದಿಕ್ಕು ದಿಕ್ಕುಗಳನ್ನು ತುಂಬುತ್ತಿರುವಾಗ, ಅವನು ರಂಭೆ ಮೇನಕೆಯರ ಪಾತ್ರಗಳನ್ನು ನೋಡುತ್ತ ವಿಜೃಂಭಣೆಯಿಂದ ಬಂದನು. ಬಣ್ಣ ಹಾರದಿರುವ ಪ್ರಾಯ ಜಾರದಿರುವ ವೈಯ ಸ್ವರ್ಗದ ಹೆಣ್ಣುಗಳು ತಮ್ಮ ಬಿಡುಗಣ್ಣುಗಳು ಶೋಭಿಸುತ್ತಿರುವಾಗ, ನೋಟಕರ ಕಣ್ಣುಗಳನ್ನು ಕೈ ಸೆರೆಹಿಡಿಯುತ್ತ ಅವನೊಂದಿಗೆ ಬಂದರು. ಸರ್ವರೂ ಹಾಡುತ್ತ ಆಡುತ್ತ ಬರುತ್ತಿರುವಾಗ ಭರತೇಶನ ಚಕ್ರಿಯು ಅರ್ಚನೆಯ ಚಿಹ್ನೆಗಳನ್ನು ಮಾಡಿದನು. ಅದನ್ನು ನೋಡುತ್ತ ವಿಸ್ಮಯಪಡುತ್ತ ತಲೆಯನ್ನು ಅಲ್ಲಾಡಿಸುತ್ತ ದೇವೇಂದ್ರನು ಬಂದನು. ಪೂರ್ವಾಂಬುಧಿಯು ತುಂಬಿದುದನ್ನೂ ಅಖಿಲ ಭೂಮಿಯನ್ನೂ ಗಿರಿ ಮಾಡಿದಂತಿರುವ ತೇರುಗಳನ್ನೂ ನೋಡಿ ಅವನು ಹಿಗ್ಗಿದನು. ಧರೆಯ ಅಗಲದಲ್ಲಿ ತುಂಬಿರುವ ಪರಿಸೆಯನ್ನೂ ನೋಡಿ ಸಂತೋಷಗೊಂಡನು. ನೆಲವೂ ಗಿರಿಯೂ ಪರಿಮಳಗೊಳ್ಳುವಂತೆ ಹೊರಹೊಮ್ಮುತ್ತಿರುವ ಸುಗಂಧಕ್ಕೆ ಆನಂದಗೊಳ್ಳುತ್ತ ತನ್ನ ಪತ್ನಿಯೊಡಗೂಡಿ, ವಿಮಾನದಿಂದ ಇಳಿದು ರಜತಗಿರಿಯನ್ನು ಸೇರಿದನು.

ಅಲ್ಲಿ ಪುರುದೇವನಿಗೆ, ಮುನಿಗಳಿಗೆ ಸತಿಯೊಡಗೂಡಿ ನಮಸ್ಕಾರ ಮಾಡಿ ಸತಿಯನ್ನು ದೂರಕ್ಕೆ ಕಳುಹಿಸಿ ದೇವೇಂದ್ರನೊಬ್ಬನೇ ಭರತೇಶನ ಬಳಿಗೆ ಬಂದು, ಆ ಪೂಜಾವಿಧಿಗೆ ಮೆಚ್ಚಿದೆನೆಂದು ಅವನನ್ನು ಅಪ್ಪಿಕೊಂಡನು. ''ರೋಹಣ ಗಿರಿಯು ಅನರ್ಘ್ಯರತ್ನವನ್ನು ಪಡೆದಂತೆ ಜಿನದೇವನು ಮೂರು ಲೋಕಗಳೂ ಭಾಪು ಎಂದು ಹೊಗಳಿದ ಮಗನನ್ನು ಪಡೆದನು'' — ಎಂದು ಹೊಗಳಿದನು.

ಶ್ರೀ ಶಿಲೆಯಲ್ಲಿ ಪುರುದೇವನು ಆತ್ಮಯೋಗದಲ್ಲಿದ್ದನು. ರಜತಗಿರಿಯಲ್ಲೂ ಭೂಮಿಯಲ್ಲೂ ತುಂಬಿದ ಜನರೂ ಕೌಶಲ್ಯವು ಹೆಚ್ಚುವಂತೆ ಇದ್ದರು.

## ೨೧

# ಜಿನಮುಕ್ತಿಗಮನ

ಪರಮ ಪೂಜೋತ್ಸವದಲ್ಲಿ ರಾತ್ರಿ ಕಳೆದುಹೋಯಿತು. ಆಮೇಲೆ ಅರುಣೋದಯವಾಯಿತು. ಪರಿಸೆಯಲ್ಲಿದ್ದವರೆಲ್ಲರೂ ಸಂತೋಷದಿಂದ ''ಪುರು ಪರಮೇಶ್ವರ ಜಯ ಜಯ'' ಎಂದು ವಂದನೆ ಮಾಡಿದರು. ಅಷ್ಟರಲ್ಲಿ ಸೂರ್ಯ ಮೂಡಿದನು. ಸೂರ್ಯ ಮೂಡಿದರೇನು? ಕೋಟಿ ಚಂದ್ರ ಸೂರ್ಯಪ್ರಕಾಶನ ಮುಂದೆ, ಸೂರ್ಯನ ಮುಂದಿರುವ ಹಣತೆಯಂತೆ, ಕನಕ ಸೌಂದರ್ಯದ ಹರಿವಾಣದಂತೆ ಸೂರ್ಯನಿದ್ದನು. ಆದಿಜಿನನು ಘಾತಚತುಷ್ಟಯಗಳು ಮೊದಲೇ ನಷ್ಟವಾಗಿ ಪರಂಜ್ಯೋತಿಯಾಗಿದ್ದನು. ಆಗ ಹದಿನಾಲ್ಕು ಘಾತಿನಿರ್ಘಾತಿಗಳನ್ನು ನಾಶಮಾಡಲು ಆವನು ಸಿದ್ಧನಾದನು. ಅಂದು ಅರ್ವತ್ತಮೂರು ಕರ್ಮಗಳು ಘಾತಿಯಲ್ಲಿ ಬರಿದಾಗಿ ಹೋದುವು. ಈಗ ತುಂಬಿರುವ ಎಂಬತ್ತೈದನ್ನು ನಿರ್ಘಾತಿ ನಾಲ್ಕರಲ್ಲಿ ಓಡಿಸಲು ಅನುವಾದನು.

ಪುರುದೇವನ ಅಂಗವು ಕೊಂಕದೆ, ಮಿಸುಕದೆ, ನೇರವಾಗಿ ನಿಶ್ಚಲವಾಗಿ ಪಲ್ಲಂಕಿಯ ಮುದ್ರೆಯಲ್ಲಿತ್ತು, ತೇಂಕದ ಉಸಿರು, ಮುಚ್ಚಿದ ತುಟಿಗಳು, ಮುಚ್ಚಿದ ಕಣ್ಣುಗಳು ಈ ರೀತಿಯಲ್ಲಿ ಯೋಗಾಂಗದಲ್ಲಿದ್ದನು. ಕರ್ಮವನ್ನು ಜಯಿಸಿದವಗೆ, ಆತ್ಮ ವಸ್ತುವೇ ಸಾರವಾದುದು. ತನ್ನ ದಿವ್ಯ ಶರೀರ ಮುಂತಾದುವು ಅನ್ಯವೆಂಬುದು ಮೊದಲೇ ಮನಸ್ಸಿನಲ್ಲಾಗಿತ್ತು, ಜಗತ್ತಿನ ತುದಿಯನ್ನು ಏರಿದ್ದ ಸಿದ್ಧರೆಲ್ಲ ಆವನಿಗೆ ಪರರಾದರು. ಅವನಲ್ಲಿದ್ದ ಜಗದ ಜಂಜಡವು ಹರಿದುಹೋಯಿತು. ಮೂರು ಶರೀರಗಳನ್ನು ಜಾಡಿಸಿ, ಮುಕ್ತಿಗೆ ಹೋಗುವೆನೆಂದು ಸಿದ್ಧನಾದನು. ಆ ಸ್ವಾಮಿಯು ಪ್ರಜ್ವಲಿಸುವ ಕೊಡದಲ್ಲಿ ತುಂಬಿದ ಹಾಲಿನಂತೆ ನಿರ್ಮಲವಾಗಿ ಹೊಳೆಯುತ್ತಿರುವ ವಿಮಲವಾದ ಆತ್ಮನೊಂದಿಗೆ ಮೂಡಿ, ಮುಳುಗಿ ಆಡುತ್ತಿದ್ದನು. ವಿಶಾಲವಾದ ಕ್ಷೀರ ಸಮುದ್ರವನ್ನು ತಂದು ಒಂದು ಕೊಡದಲ್ಲಿ ತುಂಬಿದಂತೆ ದೇಹದಲ್ಲಿ ಅತ್ಯಂತ ವಿಮಲವಾದ ಆತ್ಮನು ಅಡಗಿರುವುದನ್ನು, ಆ ಸ್ವಾಮಿಯು ನೋಡುತ್ತಿದ್ದನು. ಆಕಾಶವನ್ನು ಒಂದು ಮಾರೆಂದು ಅಳೆಯುವಂತೆ, ಮೂರು ಲೋಕವನ್ನೂ ಚೋಟುದ್ದವೆಂದು ಅಳೆಯುವಂತೆ, ಕೋಟಿ ಸಾಗರಗಳನ್ನು ದಾಟುವಂತೆ ಆ ನಿರಾಕುಲನಾದ ಸ್ವಾಮಿಯ ಉನ್ನತಿಯು ಅಂತರಂಗದಲ್ಲಿತ್ತು, ದೇಹವೆಂಬ ಗಡಿಗೆಯಲ್ಲಿ ಇದ್ದ ಆತ್ಮನೆಂಬ ಹಾಲಿನ ಕಡಲಿಗೆ ಸಮ್ಯಕ್ತ್ವ ಗಿರಿಯನ್ನು ಕಡೆಗೋಲಾಗಿಟ್ಟು, ಚಿದ್ಭಾವದ ಹಗ್ಗದಿಂದ ಕಡೆಯುತ್ತಿರುವಂತೆ ಆವನ ಧ್ಯಾನವಿತ್ತು, ಅಲ್ಲಿ ಕೊಡ ಬೇರೆ, ಹಾಲು ಬೇರೆ, ಹಗ್ಗ ಬೇರೆ, ಕಡೆಯುವವರು ಬೇರೆ, ಎಂದಾಗಿರಲಿಲ್ಲ; ಕೊಡವೊಂದೇ ಬೇರಾಗಿತ್ತು ಮಿಕ್ಕವುಗಳನ್ನೆಲ್ಲ ತಾನೇ ಆಗಿ ಆ ಮಹಾಮಹಿಮನು ಕಡೆಯುತ್ತಲಿದ್ದನು.

ಎಂಟು ಗುಣಗಳಲ್ಲಿ ನಾಲ್ಕನ್ನು ಪಡೆದಾಯಿತು. ಇನ್ನುಳಿದ ನಾಲ್ಕು ಸದ್ಗುಣಗಳನ್ನು ಪಡೆಯಬೇಕೆಂದು ಗುಣ–ಗುಣ ಎಂಬ ಭೇದವು ಅಳಿದು ಹೋಗಿರುವ ಸ್ಥಿತಿಯಲ್ಲಿದ್ದು ತನ್ನನ್ನು ನೋಡಿಕೊಂಡು ದುರ್ಗುಣದ ಕರ್ಮವನ್ನು ಒತ್ತಿ ಕಳೆಯುತ್ತಿದ್ದನು. ಕರ್ಮವೇ ರೂಪವಾಗಿ ಕವಿದಿದ್ದ ತೈಜಸಕಾರ್ಮಣ ಶರೀರಗಳು ಹಿರಿದಾಗಿ ದಪ್ಪವಾಗಿದ್ದವುಗಳು, ಸಡಿಲಾಗಿ ತೆಳುವಾಗಿದ್ದು ಮೊತ್ತಮೊದಲಲ್ಲೇ ಪುರುದೇವನನ್ನು ಬಿಟ್ಟು ಹೋಗುತ್ತಿದ್ದುವು. ಬೆಳಗಿನಿಂದಲೇ ಮಾಯುವಂತೆ, ಬೆಳಗನ್ನೇ ದಾಟುವಂತೆ, ಬೆಳಗಿನಲ್ಲೇ ಓಕುಳಿಯಾಡುವಂತೆ ಬೆಳಗಿನಲ್ಲಿ ತೇಲಿಕೊಂಡು, ಮುಳುಗಿಕೊಂಡು, ಆ ಪರಮನು ತನ್ನೊಳಗೇ ತಾನಿದ್ದನು. ಅವನ ಧ್ಯಾನವೆಂದರೆ, ಬೆಳಗಿನ ಕಿರಣ ತೋರಿತು; ಕೂಡಲೇ ಮಾಸಿಹೋಯಿತು – ಎಂಬ ರೀತಿಯದಲ್ಲ; ಅದು ಪರಮ ಶುಕ್ಲ ಧ್ಯಾನವಾಗಿತ್ತು! ನಿರ್ಮಲಾತ್ಮನು ದೇಹವೆಲ್ಲ ತುಂಬಿ ಹೊರ ಹೊಮ್ಮುತ್ತಿದ್ದನು. ದೇಹವೆಂಬ ಕುಂಭವು ಒಡೆದು ಹೋಗಿ, ಹಾಲಿನ ಪ್ರವಾಹವು ಭೂಮಿಯಲ್ಲೆಲ್ಲ ಹರಿಯುವುದು ಎಂಬಂತೆ, ನಿರ್ಮಲವಾದ ಬೆಳಕನ್ನು ಹೊರಸೂಸುತ್ತಿತ್ತು. ಆ ಧ್ಯಾನದ ಘನತೆಯನ್ನು ಆ ಪರಮನೇ ಬಲ್ಲನು!

ಆಯುಷ್ಯಕರ್ಮಕ್ಕೆ ಮುಪ್ಪು ಬಂದಿತ್ತು. ವೇದನೀಯವನ್ನೂ ನಾಮಗೋತ್ರವನ್ನೂ ಮುಪ್ಪು ಮಾಡುವ ಉಪಾಯವನ್ನು ಸ್ವಾಮಿಯು ಮಾಡ ತೊಡಗಿದನು. ಮೂರು ಮಂದಿ ಅರಿಗಳನ್ನು ನಾಶಮಾಡಿ, ಒಬ್ಬ ಅರಿಯು ಶಕ್ತಿಗುಂದುವಂತೆ ಸೋಲಿಸಿ, ನಾಲ್ವರನ್ನೂ ಒಮ್ಮೆಲೇ ಸೋಲಿಸುವ ಶ್ರೇಷ್ಠ ತಂತ್ರವನ್ನು ಪ್ರಾರಂಭಿಸಿದನು. ಕೋಲಿನ ಆಕಾರದಲ್ಲಿ ಆತ್ಮನಿರುವನೆಂದು ತಿಳಿಯಲು ಎರಡು ಅಂಗಗಳಿಂದಲೂ ಆತನು ಹೊರಹೊಮ್ಮಲು ಅಣಿಯಾದನು. ಸ್ವಾಮಿಯ ದೇಹ ಕೋಲಿನಂತೆ ಇತ್ತು, ಆಗ ದಿವ್ಯಾತ್ಮನು ಕೆಳಗಿನ ಲೋಕವನ್ನೂ ಸಿದ್ಧ ಕ್ಷೇತ್ರವನ್ನೂ ಮುಟ್ಟಿಕೊಂಡು ತಂಪಾದ ಬೆಳಕನ್ನು ಬಿಂಬಿಸುತ್ತ ಹದಿನಾಲ್ಕು ರಜ್ಜುವಿನಷ್ಟು ಉದ್ದವಾಗಿ ಬಿದಿರಿನಂತೆ ನಿಂತಿದ್ದನು. ಆತ್ಮನು ತಾನು ಧರಿಸಿದ್ದ ದೇಹವನ್ನು ಮೊದಲೇ ಬಿಟ್ಟಿದ್ದರಿಂದ ಅವನಿಗೆ ಕೈ ಕಾಲುಗಳೆಂಬ ರೂಪವು ಈಗ ಇಲ್ಲ. ಮೂರು ಲೋಕಕ್ಕೂ ಒಂದೇ ಬೆಳಕಿನ ಕಂಭವನ್ನು ನೆಟ್ಟಂತೆ ಆತ್ಮನಿದ್ದನು. ಆ ಕ್ಷಣದಲ್ಲಿ ಆ ಪ್ರಗುಣಾತ್ಮನು, ಕವಾಟದಾಯತಕೆಂದು ಯೋಚಿಸಿದನು. ದಗದಗಿಸುತ್ತ ತೆಂಗುಬಡಗು ಆಗಿ ಜಗದ ಬಾಗಿಲು ಮುಚ್ಚಿ ನೀಡಿಕೊಂಡಿದ್ದನು. ಲೋಕದ ಏಳು ರಜ್ಜುವಿನ ಅಗಲದಲ್ಲಿ ಹದಿನಾಲ್ಕು ರಜ್ಜುವಿನ ಉದ್ದವಾಗಿ ಆ ನಿರಾಲ ಆತ್ಮನಿದ್ದನು. ಆತ್ಮನು ಪ್ರತರೆಗೆ ಹರಿಯಲಿ ಎಂದು ಆ ಗುರುವು ನೆನೆದನು. ಆ ಕ್ಷಣದಲ್ಲಿ ಮೂರು ಲೋಕದೊಳಗಿನ ಲೋಕವೆಂಬ ಅತಿ ದೀರ್ಘವಾದ ಗಡಿಗೆಯಲ್ಲಿ ಆತ್ಮನೆಂಬ ಅಮೃತವು ತುಂಬಿತು.

ಲೋಕವನ್ನು ಮಂಜು ಕವಿದು ತುಂಬುವಂತೆ ಸಂಜೀವಾತ್ಮನು ಕೂಡಲೇ ಮೂರು ಲೋಕಗಳಲ್ಲೂ ತುಂಬಿಕೊಂಡನು. ಆತ್ಮನು, ಹಾಗೆ ತುಂಬಿಕೊಂಡವನು ಮಾಸಿಹೋಗಿ ಲೋಕ ಪೂರಣೆಗೆ ಅನುವಾಗಲೆಂದು ಪರಂಜ್ಯೋತಿ ಸ್ವಾಮಿಯು ಭಾವಿಸಿದನು. ಆಗ ಮೊದಲ ಗಾಳಿಗಳು ಅಷ್ಟನ್ನು ಬಿಟ್ಟು ಒಳಗಿದ್ದು, ಮತ್ತೆ ಬೇಗನೆ ಗಾಳಿಗಳನ್ನು ಕೂಡಿಕೊಂಡು ಆಮೂಲಾಗ್ರವಾಗಿ ತುಂಬಿ, ಮೂರು ಲೋಕಗಳಿಗೂ ಮುಸುಕನ್ನು

ಹಾಕಿದಂತೆ ಆ ಪರಮಾತ್ಮನಿದ್ದನು. ಶಿಲೆಯಲ್ಲಿ ಔದಾರಿಕ ಶರೀರವು ಕವಿದಿತ್ತು, ಮೂರು ಲೋಕಗಳನ್ನು ಬಳಸಿಕೊಂಡು ತೈಜಸ ಕಾರ್ಮಣಗಳು ನೆಲಸಿದ್ದವು. ಅವುಗಳ ಮುಸುಕಿನಲ್ಲಿ ಪರಮಾತ್ಮ ಕಲೆಯು ವಿಶಾಲವಾಗಿತ್ತು ಪೂರ್ಣತೆಯ ಪ್ರತರಗೆ ವಿಶಾಲವಾಗಿ ಹಬ್ಬಿಕೊಂಡು ಬಂದು, ಕವಾಟ ದಂಡಾಕಾರವಾಗಿ, ಎಲ್ಲ ಆಟಗಳನ್ನೂ ತೋರೆದು, ಎಂದಿನಂತೆಯೇ ಆತ್ಮನು ದೇಹಕೂಟದಲ್ಲಿ ನೆಲೆಗೊಂಡನು. ಒದ್ದೆಯಾದ ಒಂದು ವಸ್ತ್ರವನ್ನು ಉದ್ದವಾಗಿ ಹರಡಿಹಾಕಿದರೆ, ಕೂಡಲೆ ನೀರು ಒಣಗುವಂತೆ, ಜಿನನು ಆತ್ಮ ವಸ್ತುವನ್ನು ಹಬ್ಬಿಸಲು ಕರ್ಮಗಳು ಎರಡು ಹನಿಗಳಾಗಿ ಆರಿಹೋದುವು.

ಮೂರು ಕರ್ಮಗಳೂ ಮತ್ತೆ ಆಯುಷ್ಯಕರ್ಮವೂ ಮೀರದೆ ಒಂದೇ ರೀತಿಯಲ್ಲಿ ವಿಶಾಲವಾಗಿ ಮೂರುದೇಹಗಳನ್ನೂ ಬಿಟ್ಟು ಸಿದ್ಧಲೋಕಕ್ಕೆ ಏರಲು ಪ್ರಾರಂಭವಾಯಿತು. ಕೂಡಲೇ ಸ್ವಾಮಿಯು ನಿಯತವಾದ ತ್ರಯೋದಶ ಸ್ಥಾನಿಯನ್ನು ದಾಟಿ, ಚತುರ್ದಶ ಸ್ಥಾನಿಗೇರಿದನು. ಅದು "ಅ ಇ ಉ ಋ ಲ್" ಎಂಬ ಐದು ಅಕ್ಷರಗಳ ಉಚ್ಚಾರಕ್ಕೆ ಆಶ್ರಯ ಸ್ಥಾನವು. ಅದನ್ನು ಅಲ್ಲಿ ನೆರವೇರಿಸಿದನು. ಆಗ ಒಮ್ಮೆಗೇ ಎಪ್ಪತ್ತೆರಡು ಕರ್ಮಗಳು ಜಾರಿದವು. ಒಡನೆಯೇ ಹದಿಮೂರು ಕರ್ಮಗಳೂ ಬಿದ್ದು ಹೋದುವು. ಫಕ್ಕನೆ ಮೂರುಶರೀರಗಳೂ ಮಾಯವಾದುವು. ಪರಬೊಮ್ಮನು ಆಗ ಲೋಕದ ತುತ್ತ ತುದಿಗೆ ಹಾರಿದನು. ಒಂದನ್ನು ಮೂರನೆಯ ಶುಕ್ಲಧ್ಯಾನವೆಂದು ಹೇಳುತ್ತಾರೆ. ಆ ಒಂದನ್ನೇ ನಾಲ್ಕನೆಯ ಶುಕ್ಲ ಧ್ಯಾನವೆಂದು ಸಾರಿ, ಸೊಗಸುಗೊಳಿಸುವರು. ಅದೊಂದು ನುಡಿಯ ಜಾಣ್ಮೆ! ತನ್ನಿಂದ ತನ್ನನ್ನು ನೋಡಿದನೆಂದು ಅದರ ಅರ್ಥ. ಮೂರು ಶರೀರಗಳು ಮಿಂಚಿನಂತೆ ಮಾಯವಾಗಲು, ಆದಿ ಜಿನನು ಮೂರು ಲೋಕದ ತುದಿಗೆ ಏಳು ರಜ್ಜುಗಳನ್ನೂ ದಾಟಿ ಒಮ್ಮೆಲೇ ಹಾರಿದನು. ಸ್ವಾಮಿಯು ಗಿರಿಯಲ್ಲಿ ಪಲ್ಯಂಕಯೋಗದಲ್ಲಿ ಬಿಟ್ಟ ದೇಹವು ಪಲ್ಯಂಕ ಸ್ಥಿತಿಯಲ್ಲಿ ಅಲ್ಲೇ ಇತ್ತು, ಸ್ವಾಮಿಯು ಪುರುಷಾಕಾರದಲ್ಲಿ ಇಂಬುಗೊಂಡನು. ಸಿದ್ಧಗೋಷ್ಠಿಯಲ್ಲಿ ಮುಕ್ತಿಗೆ ಅರಸನಾದನು. ತನುವಾತವೆಂಬ ಅಂತ್ಯದ ಗಾಳಿ ಮಂಡಲದಲ್ಲಿ ಸ್ವಾಮಿಯು ಎಣೆಯಿಲ್ಲದ ಸಿದ್ಧ ರಾಶಿಯಲ್ಲಿ ಜಿನನೆಂಬುದು ಅಳಿದು, ಸಿದ್ಧತ್ವವನ್ನು ಪಡೆದು ಆ ಪರಂಜ್ಯೋತಿಯ ಹಿರಿಮೆಯಲ್ಲಿದ್ದನು. ಎಂಟು ಕರ್ಮಗಳೂ ಕೂಡಿ ಅಳಿದು ಹೋದುವು. ಎಂಟು ಗುಣಗಳೂ ಐಕ್ಯಭಾವದಲ್ಲಿ ಕೂಡಿಕೊಂಡವು. ಆ ಸಿದ್ಧನು ಸಂಸಾರ ಸಾರವನ್ನು ದಾಟಿ ಎಂಟನೆಯ ಲೋಕದಲ್ಲಿ ನೆಲೆಯಾದನು. ಸಮ್ಯಕ್ತ್ವ ಬೋಧ ಸದ್ದರ್ಶನ ಮುಂತಾದ ಸಾಮ್ಯ ಗುಣಾಷ್ಟಕಗಳ ಪದವಿಯು ಸಿದ್ಧಿಯಾಯಿತು. ಅದು ತಿರುಗದ ಸ್ಥಿರವಾದ ಪದವಿ. ನಾಶವಾಗದ ಘನಸುಖ ಅದು. ಅದು ನರರಿಗೂ ಸುರರಿಗೂ ಉರಗರಿಗೂ ಅಸಾಧ್ಯ. ನಿರ್ಮಿಸಲು ಅಸಾಧ್ಯವಾದ ಮುಕ್ತಿ ಸಾಮ್ರಾಜ್ಯದಲ್ಲಿ ಸಿದ್ಧನಿರುತ್ತಿದ್ದನು.

ಆದಿಜಿನನು ನರರಿಗೂ ಸುರರಿಗೂ ಉರಗರಿಗೂ ಅವಶ್ಯವಾದ ಮುಕ್ತಿ ಸಾಮ್ರಾಜ್ಯದಲ್ಲಿ ಸಿದ್ಧನಾಗಿರುತ್ತಿದ್ದಾಗ, ಇತ್ತ ಆತನ ದೇಹವು ಮಾಯವಾಯಿತು. ವೃತ್ತಾಕಾರದ ಸಮವಸರಣ ಭೂಮಿಯು ಎಲ್ಲಿಗೆ ಹೋಯಿತೋ ಎನ್ನುವಂತೆ ಕಾಣದಾಯಿತು. ಕವಿದಿದ್ದ ಮೋಡಗಳ ಸಮೂಹ ಮಾಯವಾಗುವಂತೆ ಆಯಿತು.

ಸಮವಸರಣವು ಮಾಯವಾಗಲು ಸಂಭ್ರಮದ ಗಂಧಕುಟಿಗಳೂ ಆ ಕ್ಷಣದಲ್ಲೆ ತಮ್ಮ ಇಚ್ಛೆ ಬಂದತ್ತ ಸರಿದು ಹೋದುವು. ಆದೀಶನಿಲ್ಲದ ಮೇಲೆ ಅಲ್ಲಿ ಇನ್ನಾರು ಉಳಿಯುವರು?

ಭರತೇಶ ಚಕ್ರಿಯು, ತನ್ನ ಅಯ್ಯನ ಯೋಗವನ್ನು ನೋಡುತ್ತಿದ್ದನು. ಅರ್ಹಂತನು ಮೈ ಅಳಿದು ಮೇಲಕ್ಕೇರಿದಾಗ ಚಕ್ರಿಯ ಮೋರೆಯು ಕಂದಿತು. ಶೋಕವು ಚುಯ್ಯನೆ ಅವನ ಅಂತರ್ಯವನ್ನು ಸೇರಿಕೊಂಡಿತು. ಎಲ್ಲರ ಇದಿರಲ್ಲೇ ಅವನಿಗೆ ಮೂರ್ಛೆಯೇರಿ ಬಂತು. ತಾನು ಜಾರಿ ಬೀಳದಂತೆ ಆ ಗಂಭೀರನು ಒತ್ತಿ ತಡೆದುಕೊಂಡನು. ಪಿತಮೋಹವು ಮೀರಿದಾಗ ಎಷ್ಟು ತಡೆದರೂ ತಾಳಲಾರದೆ ಮೂರ್ಛೆಗೆ ಸಂದನು. ನಿಂತಿದ್ದವನಿಗೆ ಮೂರ್ಛೆ ತಟ್ಟುವುದು ತಿಳಿದಾಗ, ಮೌನದಿಂದ ಅಲ್ಲೇ ಕುಳಿತುಕೊಂಡು, ಕುಂದಣದ ಬೊಂಬೆಯಂತೆ ಕೆಳಗೆ ಬಿದ್ದನು. ತಂದೆಯ ಅಗಲಿಕೆಯ ಶೋಕವು ಸದರವೆ?

ಗೆಳೆಯರು ಶೈತ್ಯೋಪಚಾರದಿಂದ ಎಬ್ಬಿಸಿದಾಗ, ಎದ್ದು ಕುಳಿತು ಕೊಂಡು, ಕಣ್ಣೀರು ಸುರಿಸುತ್ತ ತಿಳಿವಳಿಕೆಯನ್ನೇ ತೊರೆದುಬಿಟ್ಟು, ತನ್ನಯ್ಯನು ಮೊದಲಿದ್ದ ಶಿಲೆಯತ್ತ ನೋಡಿ ನೋಡಿ ಶೋಕಿಸಿದನು.

''ಹಾ! ಹಾ! ಸ್ವಾಮಿ! ನನ್ನೊಡೆಯ! ನನ್ನ ಅಪ್ಪಾಜಿ! ಮೋಹಾಸುರನ ದರ್ಪಮಥನ ಮಾಡಿದವನೆ! ನನ್ನನ್ನು ಹೊರಗೆ ದೂಡಿ, ನೀನು ಮುಕ್ತಿಗೆ ಹೋಗುವುದೇ ಪುರಪರಮೇಶ್ವರಾ? ಪಟ್ಟವೆಂಬ ಪಾಶವನ್ನು ಕಟ್ಟಿ, ಒಂದು ಹೊರೆಯನ್ನು ಹೊರಿಸುವಂತೆ ರಾಜ್ಯವನ್ನು ಕೊಟ್ಟು ಕಟ್ಟ ಕಡೆಯಲ್ಲಿ ನನ್ನನ್ನು ಮುಕ್ತಿಗೆ ಮುಟ್ಟಿಸದೆ, ಈ ರೀತಿಯಲ್ಲಿ ಬಿಟ್ಟು ಹೋಗಬಹುದೇ ಮಹಾದೇವಾ? ನಾನು ಬೇಡಿದ ಅರ್ಥವನ್ನೆಲ್ಲ ಇತ್ತು ರಕ್ಷಣೆ ಮಾಡುತ್ತ ಬಂದು ಮತ್ತೆ ನೀನು ನನ್ನನ್ನು ಇಲ್ಲಿಬಿಟ್ಟು ಹೋಗುವುದೆಂದರೆ, ನಾನೇನು ಕಷ್ಟವನ್ನು ಮಾಡಿರುವೆ, ಪರಂಜ್ಯೋತಿಯೆ? ನಿನ್ನ ಸಭೆಯು ಎಲ್ಲಿ ಹೋಯಿತು? ನಿನ್ನ ದಿವ್ಯಶರೀರವೆಲ್ಲಿ ಹೋಯಿತು? ಇಲ್ಲಿದ್ದ ಗಂಧಕುಟಿಗಳು ಏನಾದುವು? ಬೆಳ್ಳಿಯ ಬೆಟ್ಟದ ಸೌಂದರ್ಯವೇ ಮಾಯವಾಯಿತು. ಇನ್ನೆಲ್ಲಿ ಉಳಿದವರ ಬದುಕು? ನಿನ್ನನ್ನು ಕಂಡ ಮೇಲಾದರೂ ನಾನಿಂದು ಎಲ್ಲವನ್ನೂ ತ್ಯಜಿಸಿ ದೀಕ್ಷೆಗೊಳ್ಳಬೇಡವೆ? ಆದೀಶ, ಈ ಪುಣ್ಯಕರ್ಮವೆ ನನ್ನನ್ನು ಹಿಡಿದುಕೊಂಡಿದೆ. ಹೊರಗೆ ಹೋಗಲು ಬಿಡುವುದಿಲ್ಲ, ಆಗಲಿ; ಇನ್ನು ದುಃಖಿಸಿದರೆ ಏನಾಗುವುದು. ನೀನಿತ್ತಿರುವ ಯೋಗಮಾರ್ಗದಲ್ಲೇ ನಾನೂ ಬರುವೆನು. ಶ್ರೀ ಗುರುಹಂಸನಾಥಾಯ ನಮೋಸ್ತು!''

ಎಂದು ತನ್ನ ಬೇಗೆಯನ್ನು ತಾನೇ ನಂದಿಸಿಕೊಂಡನು ಭರತೇಶ. ಆಗ ವೃಷಭ ಸೇನಾಚಾರ್ಯರು ಅವನನ್ನು ಸಮಾಧಾನಗೊಳಿಸಿದರು.

''ವೃಷಭೇಶನು ಹೋದರೇನಾಯಿತು? ಅವನು ಹೋದುದು ಈ ಚರ್ಮಾಕ್ಷಿಗಳಿಗೆ ಮಾತ್ರ. ಆತ್ಮಾಕ್ಷಿಗೆ ಇದೊಂದು ವಿಷಯವೇ ಅಲ್ಲ. ಸುಜ್ಞಾನಾರ್ಥವು ಹೆಚ್ಚಾದಾಗ ಅವನು ತೋರುವವನಲ್ಲವೇ? ನೀನಿಂತು ನೊಂದುಕೊಳ್ಳಬಾರದು. ''ನನ್ನಷ್ಟು ಪ್ರಯಾಸವಿಲ್ಲದೇ ನೀನು ವಿಜ್ಞಾನದಿಂದ ಮುಕ್ತಿಗೆ ಬರುವೆ''ಯೆಂದು ನಿನ್ನಯ್ಯ ನಿನಗೆ ಹೇಳಿದರಲ್ಲವೆ? ಸ್ವಲ್ಪ ತಾಳು. ನಿನ್ನ ಪಿತನನ್ನು ನೀನೇ ಕಾಣುವೆಯಂತೆ. ನಿನ್ನ ಅಯ್ಯನು ಸಿದ್ಧ ಲೋಕದಲ್ಲಿ ನೆಲೆಸಿರುವುದಕ್ಕೆ ನೀನು, ಆನಂದವನ್ನು ಹೆಚ್ಚಿಸಿಕೊಳ್ಳದೆ ಹೀಗೆ ಬದ್ಧರ ಹಾಗೆ

ನೊಂದುಕೊಳ್ಳುವುದೇ?'' ಎಂದು ವೃಷಭಸೇನಾಚಾರ್ಯರು ಭರತೇಶನಿಗೆ ವಿಶುದ್ಧಿಯನ್ನು ತೋರಿಸಿದರು.

''ಅದೊಂದು ಮಹಾತ್ಮ್ಯೆಯೇ ಸರಿ. ಆದರೆ ನಾನೇನು ಮಾಡಲಿ? ನನ್ನ ಮೋಹವು ನನ್ನನ್ನು ಕಾಡುತ್ತದೆ. ಅಯ್ಯನೆಂಬ ಸ್ನೇಹವು ಬಿಡುವುದಿಲ್ಲ. ಆದರಿಂದಾಗಿಯೇ ಒಂದಿಷ್ಟು ಮರುಕವುಂಟಾಯಿತು. ಜನನಿ ದೀಕ್ಷೆಯನ್ನು ಪಡೆದಾಗ, ತಮ್ಮನು ಮುಕ್ತಿಯನ್ನು ಹೊಂದಿದಾಗ, ಜಿನಸಭೆಯು ನನ್ನ ನೋವನ್ನು ತಡೆಯಿತು. ಈಗ ಜಿನನು ಇಲ್ಲದಾಗ ನೋವಾಗಲಾರದೆ? ಅದೇ ನೋವು ಕಾಣಿಸಿಕೊಂಡಿತು. ಈಗ ಮತ್ತೆ ಫಕ್ಕನೆ ಜಾರಿತು'' ಎಂದು ಭರತೇಶನು ನುಡಿದನು. ಏಷ್ಟೆಂದರೂ ಹೇಮವರ್ಣನಾದ ಭರತೇಶನು ನಿಪುಣನಲ್ಲವೆ!

''ಅಂತಹ ತಂದೆಯು ಅಗಲಿದಾಗ ಈ ಮಗನು ಹೇಗೆ ಸಹಿಸಬೇಕು? ಅವನು ನೊಂದುಕೊಳ್ಳುವುದು ಸಹಜವೇ ಸರಿ. ಆದರೆ ಅಂತರಂಗದಲ್ಲೇ ಅದನ್ನು ಸಂತೈಸಿಕೊಂಡದ್ದು ಅತ್ಯಂತ ವಿಸ್ಮಯವಾಗಿದೆ.'' ಎಂದು ಅಲ್ಲಿದ್ದ ಇಂದ್ರನು ನುಡಿದನು. ''ಬಹಳ ರಚನೆಗಳನ್ನು ನುಡಿಯಬಹುದು. ಆದರೆ ನುಡಿದಂತೆ ನಡೆಯಲು ಬರುವುದಿಲ್ಲ. ಭರತೇಶ, ನಿನ್ನ ನಡೆನುಡಿಗಳು ಸರಿಯಾಗಿದ್ದವು'' ಎಂದು ಸ್ವರ್ಗದ ರಾಜನು ಒಲಿದು ಮಾತನಾಡಿದನು. ''ಸುಖದಲ್ಲಿದ್ದಾಗ ಎಲ್ಲರೂ ಸುಖವಾಗಿರಬಹುದು. ಅಖಿಲವಾಗಿ ವ್ಯಾಕುಲವು ತಟ್ಟಿದಾಗ, ಮುಖವನ್ನು ಮುಚ್ಚುತ್ತಿರುವ ನೋವನ್ನು ಹೇಳುವುದೂ ಕಷ್ಟಸಾಧ್ಯ'' ಎಂದು ನಾಗೇಂದ್ರನು ಭರತೇಶನನ್ನು ಹೊಗಳಿದನು. ''ಆದೀಶನು ಅಮೃತಲೋಕದಲ್ಲಿರುವನು. ಇನ್ನು ನಮಗೆ ಇಲ್ಲಿಗೆ ಮಮತೆ ಏನು? ನಾವೂ ಅಲ್ಲಿಗೆ ಹೋಗುವ. ಉಂಟಾದ ಶೋಕವನ್ನು ಕ್ಷಮಿಸಿಕೊಂಡದ್ದೇ ಒಂದು ಅಚ್ಚರಿ'' ಎಂದು ನಮಿರಾಜನು ಸಮಯ ನೋಡಿ ನುಡಿದನು.

ಉಳಿದ ಮೈದುನರೂ, ರಾಜರೂ, ಸಹಾಯಕರೂ, ಕಳೆಯನ್ನು ತಿಳಿದು ಒಳ್ಳೆದನ್ನೇ ನುಡಿದರು. ಆಮೇಲೆ ಚಕ್ರೇಶ್ವರನು ಪನ್ನೀರಿನಿಂದ ಮುಖವನ್ನು ತೊಳೆದುಕೊಂಡು ಅಲ್ಲಿ ಸೇರಿದ ಎಲ್ಲರಿಗೂ ಹೀಗೆಂದು ಹೇಳಿದನು :

''ನೀವೆಲ್ಲರೂ ಬಂದು ಕೈಲಾಸನಾಥನ ಮಹೋತ್ಸವವನ್ನು ಲೇಸಾಗಿ ಮಾಡಿದಿರಿ. ಅದು ಪ್ರಜ್ವಲಿಸುವಂತೆ ನಡೆಸಿದಿರಿ. ಅದರಿಂದಾಗಿ ನನಗೆ ಒಂದಿಷ್ಟು ಆಸರು ಇಲ್ಲ. ನನಗೀಗ ಆನಂದವೇ. ಆರುಹನ ಸಭೆಯು ಮಾಯವಾದ ಮೇಲೆ ನನ್ನ ಸಿರಿಯೆಷ್ಟು ಹೆಚ್ಚಿನದು? ನನಗೆ ಅದು ಸಾಕೇ ಸಾಕು. ನೀವೆಲ್ಲ ನನಗೆ ಪರಮ ಬಂಧುಗಳಾಗಿ ಬಂದಿರಿ'' ಎಂದು ದೊರೆಗಳಿಗೆಲ್ಲ ಇಂಪಿನ ಮಾತುಗಳನ್ನಾಡಿದನು.

''ನೀವೂ, ನಾವು ಎಲ್ಲರೂ ಕೂಡಿ ಸ್ವಾಮಿಯನ್ನು ಪೂಜಿಸಿ, ಪಾವನರಾದೆವು. ಅದು ಹಾಗಿರಲಿ. ದೇವನ ಸ್ಮರಣೆ ಮಾಡುತ್ತ ನೀವೆಲ್ಲರೂ ನಿಮ್ಮ ಆವಾಸಕ್ಕೆ ಹೋಗಿರಿ'' ಎಂದು ಮೈದುನರನ್ನು ಅಪ್ಪಿಕೊಂಡನು, ಚಕ್ರೇಶ್ವರ. ತನಗೆ ನಮಸ್ಕಾರ ಮಾಡಿದ ಅಳಿಯಂದಿರನ್ನು ನೋಡಿ, ಸಂತೋಷದಿಂದ ಮಾತನಾಡಿಸಿ, ಬೀಳ್ಕೊಟ್ಟನು. ಬಹಳ

ಮಾತೇಕೆ? ಮಾಗಧಾದಿಗಳನ್ನೂ ಹಿಮವಂತಾದಿ ವ್ಯಂತರರನ್ನೂ ಖೇಚರರನ್ನೂ ಕಳುಹಿಸಿ ಕೊಟ್ಟನು. ಅವರೆಲ್ಲರೂ ತಮ್ಮ ಊರುಗಳಿಗೆ ಚದರಿಹೋದರು.

ದೇವೇಂದ್ರನನ್ನೂ ನಾಗೇಂದ್ರನನ್ನೂ ವಿನಯದಿಂದ ಮಾತನಾಡಿಸಿ, ಶ್ರೇಷ್ಠರಾದ ಯೋಗಿಗಳಿಗೆ ನಮಸ್ಕಾರ ಮಾಡಿ, ಭರತೇಶನು ತನ್ನ ಊರಿಗೆ ಹೊರಟನು. ಪರಿಸೆಯು ದಿಕ್ಕು ದಿಕ್ಕುಗಳಿಗೆ ಹರಿದು ಹೋಯಿತು. ಪುತ್ರರು, ಮಿತ್ರರು, ಪ್ರಧಾನರು ಮುಂತಾದ ಆಪ್ತರನ್ನೆಲ್ಲ ಕೂಡಿಕೊಂಡು, ಗುರುಹಂಸನಾಥನನ್ನು ಭಾವಿಸುತ್ತ ಜಾಣರ ಅರಸನು ತನ್ನ ಪುರಕ್ಕೆ ಹೊರಟನು. ವ್ಯವಹಾರ ಧರ್ಮಕ್ಕಾಗಿ ಉದ್ಯಾಪನೆಯನ್ನು ಮಾಡಿ ಹೃದ್ಯವಾದ ನಿಶ್ಚಯ ಧರ್ಮಕ್ಕೆ ಅನುಗುಣವಾಗಿ ಸದ್ಯೋಜಾತ ಚಿತ್ಕಲೆಯನ್ನು ಭಾವಿಸುತ್ತ ಆ ಶ್ರೇಷ್ಠನು ತನ್ನ ನಗರದತ್ತ ಹೊರಟನು. ಸುಖದುಃಖಗಳಿಗೆ ಎದೆ ಸೂರೆ ಹೋಗದೆ, ಪರಮಾತ್ಮ ಸುಖವೊಂದನ್ನು ಬಗೆದು, ಮೆಚ್ಚಿಕೊಂಡು ಸುಖವಾಗಿದ್ದು ನಾಳೆ ಮುಕ್ತಿಯನ್ನು ಸೇರುವ ಆ ಪರಮ ಸುಖಿಯಾದ ಚಕ್ರೇಶ್ವರನು ತನ್ನ ಪುರದತ್ತ ಹೊರಟನು. ಕನ್ನಡಿಯೊಳಗೆ ನಾನಾ ವಿಕೃತಿಗಳಾದರೂ ಕನ್ನಡಿ ಮಾತ್ರ ನಿಜವಾಗಿರುವಂತೆ ತನ್ನ ಕರ್ಮವು ತನ್ನನ್ನು ತಟ್ಟಿಯೂ ತಟ್ಟದಂತಿರುವ ಸುಪ್ರಸನ್ನನಾದ ಭರತನು ತನ್ನ ನಗರದತ್ತ ಹೊರಟನು. ಜಗತ್ತಿನ ಕಣ್ಣಿಗೆ ಭೂಮಿಯನ್ನು ಆಳುವಂತಿದ್ದರೂ ಅದೊಂದು ಹಗರಣವೆಂದು ನೋಡುತ್ತ ಸುಜ್ಞಾನ ರಾಜ್ಯವನ್ನೇ ಮನಮೆಚ್ಚಿ ಆಳುತ್ತಿರುವ ಪರಾಕ್ರಮಿಯು ಪುರದತ್ತ ಹೊರಟನು. ಇನ್ನು ದೇವೇಂದ್ರನು ನರ್ತಿಸುವನೆಂದು, ಅವನ ನರ್ತನದ ಭಾವಭಂಗಿಗಳ ನೋಡಲು ಬಯಸಿ ಭೂಮಿಯ ಜನರನ್ನೆಲ್ಲ ಬೇಗಬೇಗನೆ ಕಳುಹಿಸಿಕೊಟ್ಟು ಗಂಭೀರ ಪುರುಷನಾದ ಭರತನು ತನ್ನ ಊರಿಗೆ ಹೊರಟನು. ಅವನು ಆಕಾಶಮಾರ್ಗದಲ್ಲಿ ಬಂದು ಸಾಕೇತಪುರವನ್ನು ಪ್ರವೇಶಿಸಿ, ಜನರನ್ನೆಲ್ಲ ಕಳುಹಿಸಿಕೊಟ್ಟು ತಾನು ತನ್ನ ಅರಮನೆಯನ್ನು ಹೊಕ್ಕನು.

ಇತ್ತ ವ್ಯಾಕುಲದಿಂದ ಬಂದು ಕಾಲುಹಿಡಿದ ಹೆಂಡತಿಯರ ಶೋಕವನ್ನು ನಿವಾರಿಸಿ ಅವರನ್ನು ತಂಪುಮಾಡಿ, ಆ ಕಲಾವಿದನಾದ ಭರತೇಶನು ಅರಮನೆಯಲ್ಲಿದ್ದನು.

ಅತ್ತ ಗಿರಿಯಲ್ಲಿ ಇಂದ್ರನಿಗೆ ಲೀಲೆಯ ಭಾವ ಬಲಿಯಿತು. ಸ್ವಾಮಿಯು ಕರ್ಮವನ್ನು ಸುಟ್ಟ ರೀತಿಯನ್ನೊಂದು ರೂಪಕವಾಗಿ ಭೂಮಿಗೆ ತೋರುವೆನೆಂದು ಸಿದ್ಧನಾದನು. ಮೂರು ಹೋಮಕುಂಡಗಳನ್ನು ಮಾಡಿಸಿ, ಶ್ರೀಗಂಧವೇ ಮುಂತಾದ ಸೌಮ್ಯವಾದ ಕಟ್ಟಿಗೆಯನ್ನು ತುಂಬಿಸಿದನು. ಅದಕ್ಕೆ ಅಗ್ನಿಕುಮಾರನ ಮುಡಿ ಸೋಂಕಿದಾಗ ಅದು ಭುಗಿಭುಗಿಲೆಂದು ಉರಿಯ ತೊಡಗಿತು. ಕೂಡಲೇ ದೇವೇಂದ್ರನು ದೇವಲೋಕದ ಪರಿಮಳ ವಸ್ತುಗಳನ್ನು ತರಿಸಿ ತರ್ಪಣವಿತ್ತು ಹೋಮ ಮಾಡಿದನು. ಮೂರು ಕುಂಡಗಳೇ ಮೂರು ದೇಹಗಳ ಸೂಚನೆ. ಅಲ್ಲಿ ಉಪಯೋಗಿಸಿದ ಕಟ್ಟಿಗೆ ನೂರನಲ್ವತ್ತೆಂಟು ಪ್ರಕೃತಿ. ಏರಿದ ಅಗ್ನಿಯೇ ಧ್ಯಾನದ ಸೂಚನೆ. ಇದನ್ನೊಂದು ನಾಟ್ಯರೂಪಕವಾಗಿ ವಿನೋದಾರ್ಥಿಯಾದ ದೇವೇಂದ್ರನು ಮಾಡಿ ತೋರಿಸಿದನು. ಅರುಹನು ಕರ್ಮಗಳನ್ನು ಸುಟ್ಟು ಮುಕ್ತಿಗೆ ಸಂದ ಭಾಗ್ಯವು ತಮಗೂ ದೊರಕಲಿ ಎಂದು ಸುರರು ಹೋಮಭಸ್ಮವನ್ನು ಹಣೆಯಲ್ಲಿ, ಕೊರಳಲ್ಲಿ, ಎದೆಯಲ್ಲಿ, ತೋಳುಗಳಲ್ಲಿ ಸಂತೋಷದಿಂದ ಧರಿಸಿಕೊಂಡರು. ಕಡೆಯ ಕಲ್ಯಾಣವು ಈ ರೀತಿಯಲ್ಲಿ ಸಂಪೂರ್ಣವಾದುದರಿಂದ ಸ್ವಾಮಿಗೆ ಪಂಚ

ಕಲ್ಯಾಣಗಳನ್ನೂ ಮಾಡಿದ ತಾವು ಮುಕ್ತಿಯನ್ನೇ ಪಡೆದೆವು — ಎಂದು ದೇವತೆಗಳು ಸಂತೋಷಗೊಂಡರು.

"ಮೇನಕೆ ಬಾ, ರಂಬೆ ಬಾ. ತಿಲೋತ್ತಮೆ ಬಾ, ನನಗಿಂದು ಸುಮ್ಮಾನವಾಯಿತು" ಎಂದು ಕರೆದು ದೇವೇಂದ್ರನು ಅವರನ್ನು ಕೂಡಿಕೊಂಡು ಕುಣಿದನು. ಅವನ ಕುಣಿತಕ್ಕೆ ತಕ್ಕ ಸುಸಂಗೀತ ಹಿಮೇಳ ಸಜ್ಜಾಗಿ, ಮದ್ದಳೆ, ತಾಳಗಳೂ ಮೊಳಗಿದ್ದುವು. ದೇವೇಂದ್ರನೊಮ್ಮೆ ಹೆಣ್ಣುಗಳನ್ನು ಕೂಡಿಕೊಂಡು ಕುಣಿಯುವನು. ಒಮ್ಮೆ ತಾನೇ ಒಲಿದು ಕುಣಿಯುವನು. ಒಮ್ಮೆ ಬಹು ರೂಪ ತೋರಿ, ಕುಣಿದರೆ ಇನ್ನೊಮ್ಮೆ ಏಕಾಂಗಿಯಾಗಿಯೇ ಕುಣಿಯುವನು. ನೇರಾಗಿ ನರ್ತಿಸುವನು. ಸುತ್ತು ಸುತ್ತು ಡೊಂಕಾಗಿ ಕುಣಿಯುವನು. ಉರುಪ ನೇರು ಚಕ್ಕಡಿ ಬಿಂತುಗಳೆಂಬ ವಿವಿಧ ರೀತಿಯ ನಾಟ್ಯವಾಡಿದನು, ತಲೆಕೆಳಕಾಗಿ ಒಮ್ಮೆ ಕುಣಿದರೆ, ಮೀನಿನಂತೆ ಹೊಳೆದು ಆಕಾಶದಲ್ಲಿ ಹೊರಳುವನೊಮ್ಮೆ. ತನ್ನವರು ತನ್ನನ್ನು ಹುರಿದುಂಬಿಸಿ ಹೊಗಳುತ್ತಿರಲು ದೇವೇಂದ್ರನು ಅದಕ್ಕೆ ತಕ್ಕಂತೆ ಮೆಚ್ಚಿ ನರ್ತಿಸಿದನು.

"ನನ್ನ ಒಡೆಯನು ಮುಕ್ತಿಗೆ ಸಂದನು. ನನಗೆ ಅಧಿಕಾನುರಕ್ತಿಯಾಯಿತು. ಅದ್ದರಿಂದ ನನ್ನ ಭಕ್ತಿ ಆಡಿಸಿದಂತೆ ನರ್ತಿಸುವೆನು" ಎಂದು ದೇವೇಂದ್ರನು ಅತಿವ್ಯಕ್ತಿಯಾಗಿ ನೃತ್ಯವಾಡಿದನು. ದೇವೇಂದ್ರನು ಹೆಣ್ಣಾಸೆ ಕಟ್ಟಿ, ಕೇಶ ಶೃಂಗಾರಗಳಿಂದ ಶೋಭಾಯಮಾನವಾಗಿ ಬೆಟ್ಟದಲ್ಲಿ ಕುಣಿಯುತ್ತಿರಲು ಎಲ್ಲರೂ ಅವನನ್ನು ಪುರೆಯಿಟ್ಟು ಪ್ರಶಂಸಿಸಿದರು. ಆಗ ದೇವೇಂದ್ರನು ಅಲ್ಲಿದ್ದ ಗಣಧರರಿಗೆ ವಂದಿಸಿ, ನಾಗೇಂದ್ರನನ್ನು ಜೋತಿಷ್ಕರನ್ನು ಕಳುಹಿಸಿ ಕೊಟ್ಟು, ಅಮರ ಗಣಿಕೆಯರನ್ನು ಕೂಡಿಸಿಕೊಂಡು ಶಚಿಯೊಂದಿಗೆ ಆ ಕ್ಷಣದಲ್ಲೇ ಸ್ವರ್ಗವನ್ನು ಸೇರಿದನು.

ಅಂದು ಮಾಘ ಬಹುಳ ಚತುರ್ದಶಿ. ಆ ದಿನದಲ್ಲಿ ಆದಿ ತೀರ್ಥೇಶನು ಮುಕ್ತಿಗೆ ಸಂದನು. ಅಂದು ಮೂರು ಲೋಕಗಳ ಸರ್ವಜನರಿಗೂ ಹಗಲಿರುಳೆನ್ನದೆ ಪ್ರೀತಿ ಸಂತೋಷಗಳುಂಟಾದವು. ತೀರ್ಥೇಶನಿಗೆ ಜಿನನೆಂದೂ ಶಿವನೆಂದೂ ಹೆಸರುಂಟು. ಆದ್ದರಿಂದ ಅದನ್ನೇ "ಜಿನರಾತ್ರಿ, ಶಿವರಾತ್ರಿ" ಎಂದು ಮನುಷ್ಯರು ಮನ್ನಿಸುತ್ತಿದ್ದರು.

## ೨೨

# ರಾಜ್ಯಪಾಲನ

ಜಿನನು ಮುಕ್ತಿಗೆ ಹೋದ ಮೇಲೆ ಭರತೇಶನು ಅರಮನೆಗೆ ಬಂದು ತನ್ನ ತನುಜೆಯರೆಲ್ಲರನ್ನೂ ಮನ್ನಿಸಿ ವಿನಯದಿಂದ ಅವರವರ ಊರುಗಳಿಗೆ ಬೀಳ್ಕೊಟ್ಟನು. ಸಂತೋಷದ ಮುಖದಲ್ಲಿ ಮತ್ತೆ ಕೆಲವು ಕಾಲ ಕಳೆಯಿತು. ಹೀಗಿರಲು ಒಂದು ದಿನ ನಮಿರಾಜನೂ ವಿನಮಿರಾಜನೂ ದೀಕ್ಷೆಯನ್ನು ಪಡೆದ ಸಂಯಮದ ವಾರ್ತೆಯು ಬಂತು. ಆ ಕ್ಷಣದಲ್ಲೇ ಬಾಯತುಂಬುಲವನ್ನು ಉಗುಳಿದನು. ಕೊರಳ ಸೆರೆ ಬಿಗಿದು ಕಣ್ಣೀರು ಉಕ್ಕಿ ಬಂತು. ಆದರೆ ಹಾಗೆ ಉಕ್ಕಿ ಬರುವ ಕಣ್ಣೀರನ್ನು ಒತ್ತಿ ನಿಲ್ಲಿಸಿದನು. ಮೈದುನರು ಆಗಲಿದಾಗ ನೋವಾಗುವುದು ಸಹಜ. ಆದರೂ ಅದನ್ನು ಸಹಿಸಿದನು ಭರತೇಶನು. ಮತ್ತೆ ತನ್ನ ಅವಧಿಜ್ಞಾನದಿಂದ, ತನ್ನ ಅತ್ತೆಯರು ತಂಗಿಯರೊಂದಿಗೆ ಉತ್ತಮ ದೀಕ್ಷೆಯನ್ನು ಹೊಂದಿದುದನ್ನು ತಿಳಿದನು. ಇದನ್ನು ಮನಸ್ಸಿನಲ್ಲೇ ಕಂಡು ಹಾ – ಎಂದುಕೊಂಡನು. ತನ್ನ ಮೈದುನರು ಕನಕರಾಜ ಮತ್ತು ಶಾಂತರಾಜರನ್ನು ರಾಜ್ಯದಲ್ಲಿ ನಿಲ್ಲಿಸಿ ದೀಕ್ಷೆಯನ್ನು ಹೊಂದಿರುವುದು ಶ್ರೇಷ್ಠವಲ್ಲವೆ? ವಿನೋದವು ಒಂದಿಷ್ಟು ಜಾರಿದಾಗ ಮನಸ್ಸಿಗೆ ನೋವಾಯಿತು. ಆದರೂ ಸಂಸಾರವನ್ನು ತೊರೆದ ಘನತೆಗಾಗಿ ಮೆಚ್ಚಿದನು.

''ಅವರು ನನ್ನ ಸೋದರ ಮಾವಂದಿರ ಮಕ್ಕಳಲ್ಲವೆ? ಬೇರೆ ಸುಖದಲ್ಲಿರುವರು. ನನ್ನಿಂದಲೂ ಮುಂದುವರಿದ ಅವರಿಗೆ ನಮೋಸ್ತು'' ಎಂದು ಮನ್ನಿಸಿ ಕೈ ಮುಗಿದನು. ''ಅವರು ಶ್ರೀ ಕಚ್ಛಜಿನನಲ್ಲಿ ದೀಕ್ಷೆಗೊಂಡರು. ಅವರ ಕಾಂತೆಯರಿಗೂ ತಾಯಂದಿರಿಗೂ ಶ್ರೀ ಭುಜಬಲೀಶ್ವರರ ಸಮ್ಮುಖದಲ್ಲಿ ದೀಕ್ಷಾಕಾರ್ಯವು ನೆರವೇರಿತು. ಇದು ಲೇಸಾದುದು.'' ಭರತೇಶನು ಆಗಲೇ ಅರಮನೆಗೆಂದು ಹೋದನು. ಅಲ್ಲಿ ಸುಭದ್ರಾದೇವಿಯು ಹಿರಿದಾಗಿ ಶೋಕಿಸುತ್ತಿದ್ದಳು. ಅವಳನ್ನು ಸುಚಿರೋಕ್ತಿಗಳಿಂದ ಸಂತೈಸಿದನು. ಅಂತಹ ಜಾಣ್ಮೆ ಭರತೇಶನಿಗೇನೂ ಹೊಸತಲ್ಲ! ''ನಾನಿದ್ದೇನೆ ಅಂಜಬೇಡಿ'' ಎಂದು ಅಳಿಯಂದಿರ ಬಳಿಗೆ ಉತ್ತಮವಾದ ಮಾತುಗಳ ರಾಯಸವನ್ನು ಕಳುಹಿಸಿ ಅವರನ್ನೂ ಸಂತೈಸಿದನು. ಈ ರೀತಿ ಆ ಮಹೋದಾತ್ತನು ಸಂತೋಷದಲ್ಲಿ ಕಾಲ ಕಳೆಯುತ್ತಿದ್ದನು.

ಪರಹಿತವನ್ನೂ ಸ್ವಹಿತವನ್ನೂ ಆಚರಿಸುತ್ತ ರಜತಾದ್ರಿಯಲ್ಲಿ ಅಂದು ಅರುಹನ ವಾಸಸ್ಥಾನಗಳನ್ನು ನಿರ್ಮಿಸಿದ್ದರಷ್ಟೆ. ಅವುಗಳಿಗೆ ಇನ್ನು ಮುಂದೆ ಅಪಘಾತ ಬರಬಾರದಂತೆ ಭರತೇಶನು ಒಂದನ್ನು ಯೋಚಿಸಿದನು ''ಇನ್ನು ಮುಂದೆ ದಿನದಿಂದ ದಿನಕ್ಕೆ ಅತಿ ಕಷ್ಟ ಕಾಲವೇ ಬರುವುದು. ಕುಂದೆ ಇರದೆ ಶೋಭಿಸುತ್ತಿರುವ ಆ ಸುಂದರವಾದ ಮಂದಿರಗಳಿಗೆ ನರರು ಹೋಗಬಾರದೆಂದು ಒಂದು ತಂತ್ರವನ್ನು ಕೊಡಲೇ

ಕಂಡುಕೊಂಡನು. ನಡು ಬೆಟ್ಟದಿಂದ ಕೆಳಗೆ ಹಬ್ಬಿರುವುದು ಹಾಳಾಗಿ ಹೋಗುವಂತೆ ತನ್ನ ದಂಡದಿಂದ ಕೀಸಿ ಕುಡಿಯರು ಬಿತ್ತುವ ಕೂರಿಗೆ ಕೊಳದಂತೆ ಮಾಡಬೇಕೆಂದು ಯೋಚಿಸಿದನು. ಆಗಲೇ ಮಾಗಧೇಂದ್ರನನ್ನೂ ಭದ್ರಮುಖನನ್ನೂ ಬರಿಸಿಕೊಂಡನು. ಹಿರಿಯ ಕುಮಾರನಾದ ಅರ್ಕಕೀರ್ತಿಯನ್ನು ಮುಂದಿಟ್ಟುಕೊಂಡು ಸತ್ಕಾರವನ್ನು ಹೇಳಿ ಬೀಳ್ಕೊಟ್ಟನು. ಅವರು ಹೋದರು. ವಿಶ್ವಕರ್ಮನೂ ವ್ಯಂತರರೂ ಪರ್ವತವನ್ನು ಸುತ್ತಾಡಿ ಅದನ್ನು ಕೊರೆದರು. ಅದು ನೋಡುವವರಿಗೆ ಮದ್ದಳೆಯಂತೆ ಗಿಂಡಿಯಂತೆ ಕಂಡಿತು.

ಅಷ್ಟರಲ್ಲಿ ಯುವರಾಜನು ಇನ್ನೊಂದು ಕುಶಲವನ್ನು ಯೋಚಿಸಿದನು. ಆ ಗಿರಿಯ ಎಂಟು ದಿಕ್ಕುಗಳಲ್ಲೂ ಎಂಟು ಪಾದಗಳಂತೆ ನಿರ್ಮಿಸಲು ಭದ್ರಮುಖನಿಗೆ ಹೇಳಿದನು. ಕೊರೆದು ಮಾಡಿದ ಕಂಡಿಯಿಂದ ಕೆಳಗೆ ಎಂಟು ಕಂಬಗಳನ್ನು ಕಾಲುಗಳಂತೆ ಇರಿಸಿದನು. ನೋಡುವವರಿಗೆ ಅದೊಂದು ಆಯತವಾಗಿ ಕಂಡಿತು. ಅದಕ್ಕಾಗಿ ಅರ್ಕಕೀರ್ತಿಯನ್ನು ಕೊಂಡಾಡಿದರು. ಕಷ್ಟಕಾಲದಲ್ಲಿ ನರರು ನಮಸ್ಕಾರ ಮಾಡದಂತಾಯಿತು. ಒಮ್ಮೆ ನೋಡಿದರೆ ರಜತಾದ್ರಿಯಾಗಿ ತೋರಿತು. ಅದು ಅಷ್ಟಪಾದದ ಪರ್ವತದಂತೆ ಕಂಡಿತು. ಎಲ್ಲರೂ ಯುವರಾಜನ ಸೃಷ್ಟಿಯು ಸೋಜಿಗವೆಂದರು. ಅದರ ಹೊರವಲಯದಲ್ಲಿ ಒಂದು ಒಳ್ಳೆಯ ಕೋಟೆಯನ್ನು ನಿರ್ಮಿಸಬೇಕೆಂದು ಅರ್ಕಕೀರ್ತಿಯು ಮಯನಿಗೆ ತಿಳಿಸಿದನು. ಅದರಂತೆ ಮಯನು ಎರಕ ಹೊಯ್ದು ನಿರ್ಮಿಸಿದನು.

ಆ ಕಾರ್ಯಗಳನ್ನು ಮುಗಿಸಿ ಬಂದು ಅವರೆಲ್ಲರೂ ಭರತ ಚಕ್ರಿಗೆ ತಿಳಿಸಿ ನಮಸ್ಕರಿಸಿದರು. ಅವನು ಆಶ್ಚರ್ಯವಾಯಿತೆಂದು ಮಗನನ್ನು ಅಪ್ಪಿಕೊಂಡನು. ''ಶೌರ್ಯವನ್ನೇ ಮೆರೆದಿರಿ'' ಯೆಂದು ಮಯನಿಗೂ ಮಾಗಧೇಂದ್ರನಿಗೂ ಉಡುಗೊರೆ ಯಿತ್ತು ಮನ್ನಿಸಿದನು.

''ನಮ್ಮ ಕಾಲದಲ್ಲಿ ಪೂಜಿಸುವವರು ವಿಮಾನವನ್ನೇರಿ ಪೂಜಿಸಲಿ. ಖೇಚರರೂ ತಮಗೆ ತಾವೇ ಅರ್ಚಿಸುವರು. ನಮಗೆ ಅದರಿಂದ ಉಮ್ಮಳವಿಲ್ಲ. ಜಿನಾಲಯದ ರಕ್ಷೆಯು ಯುವರಾಜನಿಂದಾಯಿತು. ಕೆಳಗಿನ ಪರ್ವತದ ಬೆಳ್ಳಿಗೆ ಜಗಳ ಮಾಡುವರೆಂದು ಸಗರ ಪುತ್ರರು ಮುಂದೆ ನೀರಿನ ಕಣಿಯನ್ನು ಅಗೆಯುವರು'' ಎಂದೂ ತಿಳಿಸಿದನು.

ವ್ಯಂತರರ ರಾಜನು ಭರತೇಶನಿಂದ ಬೀಳ್ಕೊಂಡು ಹೋದನು. ಭರತೇಶನು ಯಾವ ರೀತಿಯ ಕುಂದೂ ಇಲ್ಲದೆ ರಾಜ್ಯವಾಳುತ್ತ ಸೌಖ್ಯದಿಂದ ವಿಶ್ರಾಂತಿಯಲ್ಲಿದ್ದನು. ಧರೆಯ ಚಿಂತೆಯನ್ನು ಮಂತ್ರೀಶ್ವರನು ತಾಳಿ ಕೊಂಡಿದ್ದನು. ಪರಿವಾರದವರನ್ನು ನೋಡಿಕೊಳ್ಳಲು ಅಯೋಧ್ಯಾಂಕನು ಸಿದ್ಧನಾಗಿದ್ದನು. ಪುರದ ತಳಾರಿಕೆಯನ್ನು ಮಾಕಾಳನು ಮಾಡುತ್ತಿದ್ದನು. ಅರಸುಮಕ್ಕಳ ರಾಜರ ಆರೈಕೆಯೆಲ್ಲವೂ ಯುವರಾಜನ ಪಾಲಿನದಾಗಿತ್ತು. ವ್ಯಂತರರೆಲ್ಲರ ಅಮಿತವಾದ ಆರೈಕೆಗೆ ಮಾಗಧನಿದ್ದನು. ಆನೆ ಕುದುರೆಗಳ ಶಾಲೆಯ ಮತ್ತು ಗೃಹಸೌಧಗಳ ಸಂಧಾನಕ್ಕೆ ವಿಶ್ವಕರ್ಮನಿದ್ದನು. ಸ್ನಾನ ಭೋಜನಗಳ ಕೆಲಸಗಳನ್ನು ಗೃಹಪತಿಯು ಯತ್ನದಿಂದ ನೋಡಿಕೊಳ್ಳುತ್ತಿದ್ದನು. ಭರತೇಶನು ಆತ್ಮಯೋಗದಲ್ಲಿದ್ದನು. ಭರತ ಚಕ್ರಿಯ ಕಾಲಾಳುಗಳು ಬಾಗಿಲ ಹೊರಗಿರುತ್ತಿದ್ದರು. ಶೂರರೂ, ವೀರರೂ ಆದವರು

ಒಳಗಿರುತ್ತಿದ್ದರು. ಭರತೇಶನು ಅರಮನೆಯಲ್ಲಿ ತರುಣಿಯರೊಂದಿಗೆ ಲೀಲಾ ಸುಯೋಗದಲ್ಲಿದ್ದನು. ಅವನಿಗೆ ವೈರಿಗಳೇ ಇರಲಿಲ್ಲ, ಸೌನಂದ ಖಡ್ಗ, ಸುದರ್ಶನ ಚಕ್ರ, ಮತ್ತು ಗಿರಿಯನ್ನೂ ಪುಡಿಮಾಡುವ ದಂಡಾಯುಧವಿದ್ದುದರಿಂದ ನಿರಂತರವೂ ಆತಂಕಗಳಿಲ್ಲದೇ ಇದ್ದನು. ದಂದಿನಲ್ಲಿ ಕೆಳಗೂ ಮೇಲೂ ಹೋಗಿ ಬಾಧೆಗಳನ್ನು ಪರಿಹರಿಸುವ ಛತ್ರ, ಚರ್ಮಗಳು ದಂಡನ್ನೆಲ್ಲ ಕಾಯುತ್ತಿರುವಾಗ ಅವನು ಪುರದಲ್ಲಿ ಖಂಡಿತವಾಗಿಯೂ ಲೀಲಾವಿನೋದಗಳಲ್ಲಿ ಮಗ್ನನಾಗಿರಲಾರನೇ? ಬಯಸಿದ ಅರ್ಥವನ್ನು ಕೊಡುವ ಚಿಂತಾಮಣಿಯೂ. ಹಿತವಾದುವೆಲ್ಲವನ್ನೂ ಕೊಡುವ ನವನಿಧಿಗಳೂ, ಗುಹೆಯಲ್ಲೂ ಪ್ರಭೆಯನ್ನು ತೋರುವ ಕಾಕಿಣಿಯೂ ಇರುವುದರಿಂದ ಭರತ ಚಕ್ರಿಯು ಅರಮನೆಯಲ್ಲೇ ಸುಖದಿಂದಿದ್ದನು.

ಹನ್ನೆರಡು ಗಾವುದ ಹಾರುವ ಕುದುರೆ, ಅತಿ ಗೌರವದ ಗಜರತ್ನ ಮತ್ತು ಪೂರ್ಣವಾಗಿ ಇಂದ್ರಿಯ ಸುಖವನ್ನು ನೀಡುವ ಸ್ತ್ರೀರತ್ನವೂ ಇರುವುದರಿಂದ ಆ ರಾಯನ ಆನಂದಕ್ಕೆ ಎಲ್ಲೆಯೇ ಇರಲಿಲ್ಲ. ಖಡ್ಗ, ದಂಡ, ಚಕ್ರ, ಕಾಣಿಕೆ, ಛತ್ರ, ಚರ್ಮ ಮತ್ತು ರಾರಾಜಿಸುವ ಚಿಂತಾಮಣಿಯೆಂದು ಹೆಸರಾದ ಏಳು ನಿರ್ಜೀವ ರತ್ನಗಳು ಮಹಾಕಾರ್ಯಗಳನ್ನೇ ಮಾಡುತ್ತಿರುವಾಗ ಅವನಿಗೆ ಎಣೆಯಾರು? ಮಯ, ಮಂತ್ರಿ, ಸೇನಾಪತಿ, ಗೃಹಪತಿ, ಸ್ತ್ರೀರತ್ನ, ಕುದುರೆ, ಗಜರತ್ನ ಎಂಬ ಏಳು ನಿಯಮಿತವಾದ ಸಜೀವ ರತ್ನಗಳೂ ಇರುವಾಗ ಭರತ ಚಕ್ರವರ್ತಿಯ ಭಾಗ್ಯಕ್ಕೆ ಸರಿಸಾಟಿ ಯಾವುದು? ಅವನಿಗೆ ಹದಿನಾಲ್ಕು ರತ್ನಗಳಿವೆ, ಒಂಬತ್ತು ನಿಧಿಗಳಿವೆ. ಪ್ರಸಿದ್ಧವಾದ ಮಹಾ ಸೇನೆಯುಂಟು. ಹೀಗಾಗಿ ಅವನಿಗೆ ಎದುರಾಗುವವರು ಯಾರಿದ್ದಾರೆ? ಅವನಿಗೆ ಕಷ್ಟವೆಂಬುದಿಲ್ಲ ಹಿರಿದೆಂಬುದೂ ಇಲ್ಲ, ಸದಮಲವಾದ ಆನಂದದಲ್ಲೇ ಇದ್ದನು. ಮೂರು ಸಮುದ್ರಗಳಿಂದಲೂ, ಹಿಮಪರ್ವತಗಳಿಂದಲೂ ಮೇರೆಯಾಗಿರುವ ಭೂಮಿಯು ಹೆಜ್ಜೆ ಹೆಜ್ಜೆಗೆ ಅವನ ಆಜ್ಞಾ ಬದ್ಧವಾಗಿರುವುದು. ಅಸಮ ವೀರರಾದ ಗಣಬದ್ಧರು ಅವನನ್ನು ಓಲೈಸುತ್ತಿದ್ದರು. ಆದ್ದರಿಂದ ಸುಖಿಯಾದ ಭರತೇಶನು ವಿಲಾಸದಲ್ಲಿದ್ದನು.

ಭರತೇಶನು ಆಳುತ್ತಿದ್ದಾಗ ದೇಶದಲ್ಲಿ ನಿತ್ಯವೂ ಮದುವೆ ಹಬ್ಬಗಳೂ, ಸಂತೋಷ ಜೋಕಾಲಿ ಉತ್ಸವಗಳೂ, ಜಾತ್ರೆ ಓಕುಳಿಯಾಟಗಳೂ ಜರುಗುತ್ತಿದ್ದುವು. ಅವುಗಳ ಗದ್ದಲವೇ ರಂಜನೆಯಾಗಿತ್ತು, ಅಯ್ಯೋ, ಹಾವಳಿ, ಕಿಚ್ಚು, ಬರ, ಸೂರೆ, ಮೊರೆ – ಎಂದು ಮುಂತಾದ ಹುಯ್ಲಲು ಆ ದೇಶದಲ್ಲಿರಲಿಲ್ಲ, ಮುಂದಲೆ ಹಿಡಿಯುವುದು ರತಿಯ ನಲ್ಲರಲ್ಲಿತ್ತಲ್ಲದೆ ಸಜ್ಜನರಲ್ಲಿರಲಿಲ್ಲ, ಕೊಲ್ಲಾಟವೆಂಬುದು ಪಗಡೆಯಲ್ಲಿ ಇತ್ತಲ್ಲದೆ ಭರತೇಶನ ರಾಜ್ಯದಲ್ಲಿ ಅದು ಇರಲಿಲ್ಲ, ನುಡಿ ತಪ್ಪು, ನಡೆ ತಪ್ಪು, ವಿರಹಿಗಳಲ್ಲಿ ಮಾತ್ರ ಇತ್ತು, ದಂಡ ಹಿಡಿಯುವುದು ಮುದುಕರು ಮಾತ್ರವಾಗಿತ್ತು, ಮತ್ತಾವ ರೀತಿಯ ದಂಡವೂ ಇರಲಿಲ್ಲ, ಜಡತೆಯೆಂಬುದು ಸುರತಾಂತ್ಯದ ನಿದ್ರೆಯಲ್ಲಿ ಅಲ್ಲದೆ ಮಿಕ್ಕವರಲ್ಲಿ ಇರುತ್ತಿರಲಿಲ್ಲ, ಊರು ಊರು, ಪುರ ಪುರ ಎಲ್ಲವೂ ಪ್ರಜೆಗಳಿಂದ ಕೂಡಿದ್ದುವು. ಈ ರೀತಿಯಲ್ಲಿ ಸಮುದ್ರದವರೆಗೂ ಜನತೆ ತುಂಬಿತ್ತು, ಸಂಪತ್ತಿನಿಂದ ತುಂಬಿದ ಅಗ್ರಹಾರಗಳಲ್ಲಿ ಶಾಸ್ತ್ರಾಭ್ಯಾಸದ ಬ್ರಾಹ್ಮಣರು ತುಂಬಿದ್ದರು.

ಆ ದೇಶದಲ್ಲಿ ಗಂಧಕುಟಿಗಳೂ ಚಾರಣರೂ ಆಗಾಗ್ಗೆ ಸಂಧಿಸುತ್ತಿದ್ದರು. ಭರತೇಶನಾಳುತ್ತಿದ್ದಾಗ ಅಲ್ಲಿ ಗಂಧವುಳ್ಳ ಗಜಗಳೂ, ಉತ್ತಮ ಜಾತಿಯ ಅಶ್ವಗಳೂ ಹುಟ್ಟುತ್ತಿದ್ದುವು. ಅಲ್ಲಲ್ಲಿ ರತ್ನಗಳು ಹುಟ್ಟುತ್ತಿದ್ದುವು. ಹೂಳಿದ್ದ ನಿಧಿ ನಗುತ್ತ ತೋರುತ್ತಿತ್ತು. ಅಲ್ಲಿ ಚಿನ್ನ ಹುಟ್ಟುವುದು ಒಂದು ವಿಶೇಷವೇ. ಆ ನಾಡಿನ ಕಾಡೆಲ್ಲವೂ ಶ್ರೀಗಂಧ ವೃಕ್ಷಗಳಿಂದಲೂ ಕರ್ಪೂರ ಬಾಳೆ ಮರಗಳಿಂದಲೂ ಕೂಡಿದ್ದುವು. ಅಲ್ಲಿ ಕಸ್ತೂರಿ ಮೃಗಗಳ ಗುಂಪೇ ಗುಂಪು. ಅಖಿಲ ದೇಶವೇ ತ್ಯಾಗಿಗಳಿಂದಲೂ ಕೂಡಿ ಸಂಪತ್ತಿನ ಕೋಡಿ ಹರಿಯುತ್ತಿತ್ತು. ಕೊಡ ಕೊಡ ಹಾಲು ಸುರಿಸುವ ಹಸುಗಳು ಅಲ್ಲಿದ್ದುವು. ನೋಡುವವರ ಕಣ್ಣನ್ನು ಕೂಡದಿರುವ ಕೋಮಲಾಂಗಿಯರೂ ಅಲ್ಲಿದ್ದರು. ಸುರಕನ್ನೆಯರನ್ನೂ ತಣ್ಣಗೆ ಮಾಡುವ ಪುರುಷರು ಆ ನಾಡಿನಲ್ಲಿ ತುಂಬಿದ್ದರು.

ನೈದಿಲೆ ತಾವರೆಗಳಿಂದ ಕಂಗೊಳಿಸುವ ಕೆರೆಗಳೂ. ಗಂಧಶಾಲಿ ಜೋತು ಅಲುಗುತ್ತಿದ್ದ ಗದ್ದೆಗಳೂ ಅಲ್ಲಿದ್ದುವು. ಪರಿಮಳದ ತಂಗಾಳಿ ಬೀಸುತ್ತಿರುವ ನಾನಾ ವನಗಳು ಅಲ್ಲಿದ್ದುವು. ಅಲ್ಲಿ ರಸದಾಳಿ ಮಲೆಯೇ ವಿರಾಜಿಸುತ್ತಿತ್ತು. ಊರೂರುಗಳಲ್ಲಿ ಅಮೃತಾನ್ನದ ಛತ್ರಗಳು, ದಾರಿಗಳಲ್ಲಿ ಎಳನೀರು ಸಕ್ಕರೆಯ ಅರವಟ್ಟಿಗೆಗಳು. ದೇಶದಲ್ಲಿ ಎಲ್ಲೆಲ್ಲೂ ವಾರ, ತಿಥಿ, ನೋಂಪು, ಮುನಿಭುಕ್ತಿ ಮತ್ತು ವಿಪ್ರಸತ್ಕಾರಗಳು ಒಪ್ಪುತ್ತಿದ್ದುವು. ಇಂದು ಕಲಿಯುಗವಾದುದರಿಂದ ಸುರರೂ, ವ್ಯಂತರರೂ ನರರ ಕಣ್ಣಿಗೆ ಗೋಚರಿಸುವುದಿಲ್ಲ. ಭರತೇಶನು ಆಳುತ್ತಿದ್ದ ಕೃತಯುಗದಲ್ಲಿ ಸುರರು ಅಲ್ಲಿ ಬೆರೆತು ಕೊಂಡಿದ್ದರು. ಆ ಸೌಭಾಗ್ಯವೇ ಸೌಭಾಗ್ಯ! ಜ್ಞಾನ ಕಲ್ಯಾಣಕ್ಕಾಗಿ ಈ ನಿರ್ವಾಣ ಕಲ್ಯಾಣಕ್ಕಾಗಿ ಈ ಭೂಮಿಗೆ ಅಮರರು ಬರುವಾಗ ಮಾನವರೆಲ್ಲರೂ ಅವರನ್ನು ನೋಡುತ್ತಿದ್ದು, ಕೂಡಲೇ ಅವರನ್ನು ಆರಾಧಿಸುತ್ತಿದ್ದರು. ಭರತೇಶ್ವರನು ರಾಜ್ಯಪಾಲನೆ ಮಾಡುತ್ತಿದ್ದ ಅಂದಿನ ಉತ್ಸವವು ಎಣೆ ಇಲ್ಲದುದಾಗಿದೆ.

ಭರತೇಶನು ರಾಜ್ಯಪಾಲನೆ ಮಾಡುತ್ತಿದ್ದಾಗ ಭೂಮಿಗೂ ಸ್ವರ್ಗಕ್ಕೂ ಒಡನಾಟ ನಡೆಯುತ್ತಿತ್ತು. ಸರ್ವ ದೇಶದಲ್ಲೂ ಸಿರಿ ತುಂಬಿತ್ತು. ಆದರೂ ಅವನು ಭೂಮಿಯನ್ನು ಆಳುವ ಚಿಂತೆಯು ಇಲ್ಲದೇ ಇರುವನು. ದೇವಾಲಯದ ಭಾರವನ್ನು ಗೋಡೆಯ ಕಂಬದ ಮೇಲಿಟ್ಟು ಇರುವ ದೇವರಂತೆ ಧರೆಯನ್ನಾಳುವ ತೊಂದರೆಯನ್ನು ಆಪ್ತರಿಗೆ ಸಂಯೋಗಿಸಿ ತಾನು ಸುಖವಾಗಿರುವನು. ಹೊರಗೆ ಕಾಲಾಳುಗಳ ಕೆಲಸವನ್ನು ತಿಳಿದುಕೊಳ್ಳುವನು. ಇಷ್ಟರು ತಂದು ಬಡಿಸಿದ ಬೋನವನ್ನು ಉಣ್ಣುವಂತೆ ಒಳಗೆ ಯುವತಿಯರೊಡನೆ ಪ್ರೀತಿಯಿಂದ ಇರುವನು. ತಪಸ್ವಿಯು ತನ್ನ ತಪೋವನವನ್ನು ಪೋಷಿಸುವ ಭಾರದಲ್ಲಿ ಜನರನ್ನೂ ಪೋಷಿಸುವನು. ಮುನಿಯು ವಿಜ್ಞಾನಿಯಾಗಿ ಶಿಷ್ಯನನ್ನು ನೋಡುವಂತೆ ಪುತ್ರರನ್ನು ನೋಡುತ್ತಿರುವನು. ಭಂಡಾರಿಗಳೇ ನೋಡುವಂತೆ ಭಂಡಾರ ಬೊಕ್ಕಸ ಮನೆಗಳನ್ನೂ ನೋಡುತ್ತಿರುವನು. ಇದನ್ನು ನೋಡಿದವರು ಅವುಗಳೆಲ್ಲವೂ ಭರತ ಚಕ್ರವರ್ತಿಯದೆಂದು ಹೇಳುವರು. ಆದರೆ ಅವನು 'ಬೇರು–ಗಂಡು' ಎಂಬ ರೀತಿಯಲ್ಲಿ ತನ್ನೊಳಗೇ ಭಾದಿಸುತ್ತಿರುವನು. ಪುಣ್ಯವನ್ನು ಸಂಪಾದಿಸುವುದಕ್ಕಾಗಿ ಜಾತ್ರೆಯನ್ನು ನೋಡುವಂತೆ ಆರು ಖಂಡಗಳ ಪದವಿಯನ್ನು ನಿಲ್ಲಿಸಿ ನೋಡುವನು. ಆದರೂ

ಅಡಿಗೆಯವನು ಮಿಂದು ಉಣ್ಣುವ ಹಾಗೆ ಅವನು ಅವುಗಳನ್ನು ಬೇರ್ಪಡಿಸಿ ನೋಡಿ ಭೋಗಿಸುತ್ತಿದ್ದನು. ಧರಿಸಿದ ದೇಹವನ್ನೇ ಬೇರೆಯೆಂದು ಭಾವಿಸುವ ಭರತೇಶನು ಪರವಸ್ತುವಿನ ಪ್ರೀತಿಗೆ ಸಿಕ್ಕುವನೇ? ಪರಮಾತ್ಮ ರಸಿಕನಾದ ಅವನ ಬಗೆಯನ್ನು ಭಾವಿಸುವುದೇ ಕಷ್ಟ. ಆ ರೀತಿಯಲ್ಲಿ ಅವನಿದ್ದನು. ಪುಣ್ಯಫಲವನ್ನು ತಾನು ಭೋಗಿಸುತ್ತಿದ್ದರೂ ಆತ್ಮಲಾವಣ್ಯವನ್ನು ಒಳಗೊಳಗೇ ನೋಡುತ್ತಿದ್ದನು, ಮುಕ್ತಿಯೆಂಬ ಅಭಿಪ್ರಾಯದಲ್ಲಿದ್ದು ಧನ್ಯನಾಗಿದ್ದನು ಭರತೇಶನು.

ಭರತೇಶನು ಹೊತ್ತು ಹೊಲಬುಗಳನ್ನು ತಿಳಿದು ತೊಂಭತ್ತಾರು ಸಾವಿರ ಹೆಣ್ಣುಗಳೊಂದಿಗೆ ರತಿಕೇಳಿಯಲ್ಲಿದ್ದು, ಅವರನ್ನು ತಣಿಸಿ, ತಾನೂ ತಣಿಯುತ್ತ ಸುಚಿತ್ತನಾಗಿದ್ದನು. ಖೇಚರ ಸತಿಯರು, ಮ್ಲೇಚ್ಛ ಸತಿಯರು, ಆರ್ಯಭೂಮಿಯ ಸತಿಯರು ಎಂದು ಮೂರು ರೀತಿಯವರು ಮೂವತ್ತೆರಡು ಸಾವಿರವಾದರೂ ರಾಣಿವಾಸದಲ್ಲಿ ಅವರೆಲ್ಲರೂ ಒಂದಾಗಿದ್ದರು. ಎಲ್ಲರಿಗೂ ಒಂದೊಂದು ಮಗುವುಂಟು. ಆದರೆ ಪಟ್ಟದ ವಲ್ಲಭೆಯಾದ ಸುಭದ್ರಾದೇವಿಗೊಬ್ಬಳಿಗೆ ಮಾತ್ರ ಶಿಶುವಿಲ್ಲ, ಆದ್ದರಿಂದ ಆಕೆಯ ದೇಹವು ಕುಂದಲಿಲ್ಲ, ಆಕೆಯಲ್ಲಿ ಅವನಿಗೆ ಮಹಾಸುಖವಾಗುತ್ತಿತ್ತು, ಎಲ್ಲ ಯೋನಿಗಳಲ್ಲೂ ಉತ್ಪತ್ತಿಯುಂಟು; ಆದರೆ ಶ್ರೇಷ್ಠವಾದ ಶಂಖಯೋನಿಯಲ್ಲಿ ಉತ್ಪತ್ತಿಯಿಲ್ಲ, ಆ ನೀರೆಯು ಶಂಖಯೋನಿಯಾದ್ದರಿಂದ ಅವಳು ಹೆರಿಗೆಯ ಬೇನೆಯನ್ನೇ ಬಿಟ್ಟಿರುವಳು.

ಎಲ್ಲ ಅರಸಿಯರಲ್ಲೂ ಕೂಡಿದ ಅವನಿಗೆ ಮತ್ತೆ ಆಕೆಯಲ್ಲಿ ನೆರೆಯದಿದ್ದರೆ ತೃಪ್ತಿಯಿಲ್ಲ, ಭರತೇಶನಿಗೆ ಧರೆಯ ಸಂಪತ್ತು ಒಂದು ತೂಕವಾದರೆ ಆ ಮನೋಹರಿಯೂ ಅದೇ ತೂಕದವಳು. ಆರು ಖಂಡದ ಪುರುಷರಲ್ಲಿ ಅವನು ಅಗ್ರಗಣ್ಯನು. ಆಕೆಯು ತರುಣಿಯರಲ್ಲಿ ಅಗ್ರಗಣ್ಯಳು. ಭರತೇಶನಿಗೆ ಅವಳು ದೇವೇಂದ್ರನಿಗೆ ದೊರೆತ ಶಚಿಯಂತೆ. ಧರಣೇಂದ್ರನಿಗೆ ದೊರೆತ ಪದ್ಮಾವತಿಯಂತೆ ಇದ್ದಳು. ಅವಳು ಮೊದಲಾಗಿ ಎಲ್ಲಾ ರಾಜಾಂಗನೆಯರೊಂದಿಗೆ ಬಹುಕಾಲ ಸುಖವನ್ನು ಅನುಭವಿಸುತ್ತಿದ್ದನು. ಆ ಯುವತಿಯರ ಮೈ ಆದರೂ ಒಂದಿಷ್ಟು ಸುಕ್ಕು ಗಟ್ಟಿ ಸಡಿಲವಾಯಿತು. ಆದರೆ ಭರತೇಶನಿಗೆ ಮಾತ್ರ ಹರೆಯವೇ ಮತ್ತೆ ಮತ್ತೆ ಬರುತ್ತಿತ್ತು, ಇದೊಂದು ವಿಚಿತ್ರ. ಪವನಾಭ್ಯಾಸ, ಯೋಗಾಭ್ಯಾಸ ಮತ್ತು ಧ್ಯಾನಮಾರ್ಗವನ್ನು ಅರಿತು ಆಚರಿಸುವವರಿಗೆ ಕಾಂತಿ ಬಾಡದು. (ಅಂಗಗಳು . ಜಗ್ಗಲಾರವು; ರೋಗವು ಹೊದ್ದಲಾರದು; ನವಯೌವನವೇ ವಿರಾಜಿಸುತ್ತಿರುವುದು. ಪ್ರಾಣವಾಯುವನ್ನೂ, ಅಪಾನವಾಯುವನ್ನೂ ಒತ್ತಿ ಹಿಡಿಯುವನು. ಆಗ ಕಟ್ಟಾಣಿಯಲ್ಲಿ ಬಿಂದು ನಿಲ್ಲುವುದು. ನಿತ್ಯವೂ ವೀಣಾನಾದವಾಗುವುದು. ಆದ್ದರಿಂದ ಹಂಸವನ್ನು ಕಾಣುವನು. ಅವನಿಗೆ ಅದು ಅಸಾಧ್ಯವೇ? ಒಪ್ಪುವ ಧ್ಯಾನದಿಂದಲೂ ಯೋಗದಿಂದಲೂ ವಾಯುವಿನ ಅಭ್ಯಾಸದಿಂದಲೂ ಕಪ್ಪಿನ ಮುರಿ ಮೀಸೆಯು ಮೆರೆದು, ಇಪ್ಪತ್ತೇಳು ಇಪ್ಪತ್ತೆಂಟು ವರುಷದ ಜವ್ವನದಲ್ಲಿ ತಪ್ಪದೇ ಬಹುಕಾಲವಿದ್ದನು.

ಅಂಗನೆಯರಲ್ಲಿ ನಸುಮುಪ್ಪು ತೋರಿದಾಗ. ಅವರಿಂದ ವ್ರತಮಾಡಿಸಿ, ಬಸದಿಯಲ್ಲಿ ಅರ್ಜಿಕೆಯರೊಂದಿಗೆ ಇರುವಂತೆ ಮಾಡಿ, ಹೊಸ ಹರೆಯದ ಸತಿಯರನ್ನೇ ಪ್ರೀತಿಸುತ್ತ ರಸಿಕ ರಾಜೇಂದ್ರನಾದ ಭರತೇಶನು ವಿರಾಜಿಸುತ್ತಿದ್ದನು. ಅವನು ಹಳೆಯ ಕುದುರೆಗಳನ್ನು ಬಿಡಿಸಿ, ಹೊಸ ಕುದುರೆಗಳನ್ನೇ ರಥಕ್ಕೆ ಕಟ್ಟುವಂತೆ, ಫಲಿತ ನಾರಿಯರನ್ನು ಜಾರಿಸುತ್ತ ಎಳೆಯರೊಂದಿಗೆ ಮಂಗಳವಾಗಿರುತ್ತಿದ್ದನು. ಪತಿಯು ಹರೆಯನಾಗಿರುವುದನ್ನೂ ತಾವು ಮುದುಕಿಯರಾಗಿರುವುದನ್ನೂ ನೋಡಿ ನಾಚಿಕೆಯಿಂದ ಚತುರೆಯರು ಬಸದಿಯನ್ನು ಸೇರುತ್ತಿದ್ದರು. ಭರತೇಶ ಚಕ್ರವರ್ತಿಗೆ ವ್ರತ ಸ್ವೀಕರಿಸುತ್ತೇವೆಂದು ಹೇಳಿದ ಹೆಂಡತಿಯರಿಗೆ ಲೇಸೆಂದು ಅಪ್ಪಣೆ ಕೊಡುತ್ತಿದ್ದನು. ರಾಜರು ರತಿಗೆ ತಕ್ಕ ಯೌವನೆಯರನ್ನು ತಂದಿತ್ತರೆ ನಸುನಗುತ್ತ ಅವರ ಕೈ ಹಿಡಿಯುತ್ತಿದ್ದನು. ಜರೆಬಂದು ಜರತಿಯರು ಜಾರಿದಾಗ, ನವ್ಯ ಸೌಂದರಿಯರು ಹತ್ತಿರ ಬಂದರೆ ಅದನ್ನು ಕಂಡು ಗುರು ಹಂಸನಾಥನ ಮಹಿಮೆ ಅದೆಂದು ಪ್ರೀತಿಯಿಂದ ಸ್ಮರಣೆ ಮಾಡುತ್ತ ಅವರನ್ನು ಕೈಕೊಳ್ಳುತ್ತಿದ್ದನು. ಚೊಕ್ಕ ಹೆಣ್ಣುಗಳು ಅಲ್ಲಲ್ಲಿ ಹುಟ್ಟಿದರೆ, ಪಕ್ಕದವರು ನೋಡಿ ಚಕ್ರವರ್ತಿಗಿದು ತಕ್ಕ ಹೆಣ್ಣೆಂದು ಪ್ರೀತಿಯಿಂದ ತಂದಿತ್ತರೆ ಸಂತೋಷದಿಂದ ಅವರನ್ನು ಮದುವೆಯಾಗುತ್ತಿದ್ದನು.

ದಿಕ್ಕು ದಿಕ್ಕುಗಳಿಂದ ಹೆಣ್ಣುಗಳು ಒಲಿದು ಬರುತ್ತಿದ್ದರು. ಅವರನ್ನೆಲ್ಲ ಹಸೆಗೆ ನಿಲ್ಲಿಸಿಕೊಂಡು ವಿವಾಹವಾಗುತ್ತಿದ್ದನು ಭರತೇಶನು. ಅವನು ದಿನ ದಿನಕ್ಕೂ ಹೊಸ ಮದುಮಗನಾಗುತ್ತಿದ್ದನು. ಅವನ ವೈಭವವನ್ನು ವರ್ಣಿಸಲು ಸಾಧ್ಯವಿಲ್ಲ, ತಮ್ಮ ಪತಿಗಳೊಂದಿಗೆ ಪುತ್ರಿಯರು ದೀಕ್ಷೆಗೊಳ್ಳುತ್ತಿದ್ದರು. ಪುತ್ರರೂ ದೀಕ್ಷೆಗೆ ಹೋಗುತ್ತಿದ್ದರು. ಧರೆಯನ್ನು ಸಾಧಿಸಿದ ಮೇಲೆ ಚಕ್ರವರ್ತಿಗೆ ಬೇಕಾಗಿರುವುದು ಸಂತಾನವೊಂದು. ಭರತ ಚಕ್ರವರ್ತಿಗೆ ತೊಂಭತ್ತಾರು ಸಾವಿರ ಮಕ್ಕಳಾದರು. ಪಟ್ಟದ ರಾಣಿಯಾದ ಸುಭದ್ರಾದೇವಿಯು ಖೇಚರಿ ಹೆಣ್ಣು. ಅವಳು ಬಂಜೆಯಾದರೂ ಸ್ತ್ರೀರತ್ನವಲ್ಲವೆ? ನರೆ ಜರೆ ಸೋಂಕದೆ, ಮಧ್ಯಮವೆಂಬ ಭಾವವು ಅವಳಲ್ಲಿ ಮೈಗೊಂಡು ಹಬ್ಬದಂತೆ ಬಹುಕಾಲ ಬೆಳೆದಳು.

ಸೊಕ್ಕಿನ ಜವ್ವನೆಯರ ಮೊತ್ತದಲ್ಲಿ ಆತುರ ಮಿಕ್ಕ ಪ್ರೀತಿಯುಂಟಾಗುವಂತೆ, ಮದಗಜವು ನೀರನ್ನು ಸೇರಿ ನೀರಾಟವಾಡುವಂತೆ, ಚೊಕ್ಕನಾದ ಭರತೇಶನು ಇರುತ್ತಿದ್ದನು. ಬಗೆಬಗೆಯ ಶೃಂಗಾರ–ಸೊಬಗುಗಳಿಂದ ಕೂಡಿದ ಅಚ್ಚ ಹೆಣ್ಣುಗಳ ಸಂಸರ್ಗದಲ್ಲಿದ್ದ ಭರತೇಶನು ಹೂದೋಟದ ಭೃಂಗದಂತೆ ಆನಂದಿಸುತ್ತಿದ್ದನು. ಇನಿದಾದ ಸ್ವರಕ್ಕೆ ಇನಿದಾರ ಸ್ವರ; ಒಳ ನೋಟಕ್ಕೆ ಒಳನೋಟ; ಸಂಚಿಗೆ ಸಂಚು – ಎಂಬಂತೆ ಮಿಂಚು ಹೆಣ್ಣುಗಳ ಒಡನಾಟದಲ್ಲಿ ಚಕ್ರಿ ಇದ್ದನು. ಅಂಚೆ ಹೆಣ್ಣುಗಳೊಡನೆ ಅರಸಂಚೆಯಂತೆ ಲೀಲೆ ಮಾಡುತ್ತಿದ್ದನು. ಭರತೇಶ ಸೋಂಕಿದೊಡನೆ ಸುದತಿಯರ ಎದೆಗುಟ್ಟು ಕಲಕಿಹೋಗಿ ಸೋಲಿನಲ್ಲಿ ಜಿನುಗುತ್ತಿದ್ದುವು. ಅವರನ್ನು ಥಕ್ಕನೆ ಮೂರ್ಛೆಗೊಳಿಸುವನು. ಕೂಡಲೇ ಆನಂದ ತುಳುಕಾಡುವಂತೆ ಎಚ್ಚರಿಸುವನು. ಬಗೆಬಗೆಯಾದ ಹೆಂಗಸರನ್ನು ತಿಳಿದುಕೊಂಡು, ಎಲ್ಲರ ಇಚ್ಛೆಗೆ ಸರಿಯಾಗಿ ರಮಿಸಿ ಮತ್ತೆ

ಅವರನ್ನು ತನ್ನ ಇಚ್ಛೆಗೆ ಸರಿಯಾಗಿ ತಂದುಕೊಂಡು ಮೋಹಿಸುತ್ತಿದ್ದನು. ಭರತರಾಜೇಂದ್ರನು ಅಂತಹ ಸುಗುಣನಾಗಿದ್ದನು.

ಒಮ್ಮೆ ಭರತೇಶನು ಸಾಲುಸಾಲಾಗಿರುವ ಹೆಂಗಸರನ್ನು ಹಲವು ರೂಪ ತಾಳಿ ಸಂಭೋಗಲೀಲೆಯಲ್ಲಿ ತೇಲಾಡಿದನು. ಆಗ ಅವನೊಬ್ಬ ಮೋಹನದ ಇಂದ್ರಜಾಲವಾಗಿದ್ದನು. ಚಕ್ರಿಯು ನೇರಾಣಿ ಬೊಂಬೆಗಳಂತೆ ಶೋಭಿಸುತ್ತಿರುವ ನೀರೆಯರ ಶರೀರ ಸಂಪರ್ಕ ಸುಖದಲ್ಲಿ ಭೂಮಿಯಲ್ಲಿ ಶ್ರೇಷ್ಠವಾದ ಪುಣ್ಯದ ಫಲವನ್ನೇ ಉಂಡು ಉಂಡು ತೀರಿಸುತ್ತಿದ್ದನು. ಭೂರಿದೇಶದ ಪರಿಸೆಯು ಪೂಜೆಯನ್ನು ಸ್ವೀಕರಿಸುವ ಹಾಗೆ ದೇಹಾರದಂತೆ ನಾರಿಯರೆಲ್ಲರೂ ಸಾರಿಬಂದು ಸಂಸರ್ಗ ಪೂಜೆಗೆ ಅನುಗೊಳಿಸಿದರು. ಭರತೇಶನು ಅವರ ಆ ಪೂಜೆಯನ್ನು ಸ್ವೀಕರಿಸಿದನು. ಹೀಗೆ ನಾರಿಯರೊಡನೆ ಆದಿಪುಂವೇದ ಕರ್ಮವು ಸೋರಿಹೋಗುವಂತೆ ಮಾಡುತ್ತಿದ್ದನು.

ಸಾಧನೆ ಮಾಡಿ ಶರೀರದ ಆಲಸ್ಯವನ್ನು ಕಳೆದುಕೊಂಡು ವಿಶೋಧಿಯಲ್ಲಿರುಪವನಂತೆ ಮಾಧುರ್ಯವಚನೆಯರ ಒಡನಾಟವಾಡಿ, ಜ್ಞಾನಿಯಾದ ಅವನು ಹಂಸ ಸಮಾಧಿಯಲ್ಲಿದ್ದನು. ಭೇದ ವಿಜ್ಞಾನಿಯ ಸುಖವೆಂಬುದು ಅಪಾದಿತ ಕರ್ಮನಿರ್ಜರಣೆ. ಅದು ಓದಿಗೆ ಕಾಣಿಸಿಕೊಳ್ಳದ ಕಲೆ. ಸ್ವ ಸಂವೇದನಾಗಮ್ಯವಾಗಿರುವುದು. ಮೊಲೆಯ ಮೇಲಿನ ಯೋಗಿಗಳುಂಟು. ಬೆಟ್ಟದ ಶಿಲೆಯ ಮೇಲಿರುವ ಮೋಹಿಗಳುಂಟು. ಲಲಿತಾತ್ಮಯೋಗದ ಶಕ್ತಿಯನ್ನು ಬಲ್ಲವರು ಯಾರು? ಅದೇನೂ ಗಲಭೆಯ ಮಾತಲ್ಲ, ಸರಸಿಜಾಕ್ಷಿಯರೊಡನೆ ಪ್ರೀತಿಯಿಂದಿರುತ್ತ ಮೂರೂವರೆ ಕೋಟಿ ಬಂಧುವರ್ಗಕ್ಕೆ ಸಂತೋಷವನ್ನುಂಟು ಮಾಡುತ್ತ, ಆರು ಖಂಡಗಳ ಜನರೂ 'ಜೀಯಾ' ಎಂದು ಹೇಳುವಂತೆ ಚಕ್ರಧರನು ಎಲ್ಲರ ಪ್ರೀತಿಗೂ ಪಾತ್ರನಾಗಿ ಅಯೋಧ್ಯೆಯಲ್ಲಿದ್ದನು.

ಹೀಗೆ ತನ್ನ ಕಣ್ಣಿನಿಂದಲೇ ಭೂಮಿಯನ್ನು ನೋಡುತ್ತ ಜ್ಞಾನವೆಂಬ ಕಣ್ಣುಗಳಿಂದ ವಿಮಲ ಹಂಸವನ್ನು ನೋಡುತ್ತ, ಅವನ ವಾಣಿಯನ್ನು ಆಲಿಸುತ್ತ ಭರತೇಶ ಚಕ್ರಿಯು ರಾಜ್ಯಪಾಲನೆ ಮಾಡುತ್ತ ಕಂಗೊಳಿಸಿದನು.

## ೨೩.

# ಭರತೇಶನಿರ್ವೇಗ

ಕೀರ್ತಿಗೆ ತ್ರಿಭುವನ ಸಾಲದು; ತೇಜಸ್ಸಿಗೆ ಸೂರ್ಯ ಸಾಟಿಯಲ್ಲ; ಎಂದು ಕೀರ್ತಿಸುವಂತೆ ಭರತೇಶನು ಭೂತಳದಲ್ಲಿ ನರರನ್ನೂ ಸುರರನ್ನೂ ಆಳುತ್ತಿದ್ದನು. ಚದುರಂಗದಲ್ಲಿ ಮಾತ್ರ ಅವನಿಗೆ ಎದುರು ನಿಲ್ಲುವವರಿದ್ದಾರಲ್ಲದೆ ಯುದ್ಧದಲ್ಲಿ ಎದುರು ನಿಲ್ಲುವವರು ಲೋಕದಲ್ಲೇ ಇಲ್ಲ. ಸಾಗರವು ರಾಜ್ಯದ ದಂಡೆಯನ್ನೊತ್ತಿ ಹಿಂತಿರುಗುವುದಲ್ಲದೆ ಮದದಿಂದ ನಾಡನ್ನು ಒತ್ತಿ ಮುಂದೆ ಬರುವ ದಕ್ಷರು ಯಾರೂ ಇಲ್ಲ. ರಾಜರು ಮೊದಲು ಅವನ ವೀರ್ಯಕ್ಕೆ ಸೋತರು; ಅದರೊಂದಿಗೆ ಅವನ ಶೃಂಗಾರಕ್ಕೂ ಔದಾರ್ಯಕ್ಕೂ ಸೋತರು. ರಾಜರತ್ನ ಶೇಖರನಾದ ಭರತೇಶನನ್ನು ಯಾವ ರೀತಿಯ ವೈರದ ವಾಸನೆಯೂ ಇಲ್ಲದೆ ರಾಜರೆಲ್ಲರೂ ಪ್ರೀತಿಯಿಂದ ಓಲೈಸುವರು. ಅವನ ಚೆಲುವಿಕೆಗೆ, ಶೃಂಗಾರಕ್ಕೆ, ಜಾಣ್ಮೆಗೆ ವಿಲಸಿತವಾದ ಗಂಭೀರ ಗುಣಕ್ಕೆ ಮೆಚ್ಚಿ ತಲೆದೂಗದವರು ತಳಲೋಕದಲ್ಲೂ, ನರಲೋಕದಲ್ಲೂ, ಸುರಲೋಕದಲ್ಲೂ ಒಬ್ಬರೂ ಇಲ್ಲ. ಪಂಚಸಂಪತ್ತು ಒಳಗಿರುತ್ತಿರುವಾಗ, ಹೊರಗೆ ಹೊರಳಾಡುವ ಸಮಸ್ತ ಭಾಗ್ಯವೂ ಇರುತ್ತಿರುವಾಗ, ಬಹು ಕಾಲದವರೆಗೆ ಕಾಂಚನಾಂಗನಾದ ಭರತಚಕ್ರಿಯು ಪ್ರಾಪಂಚಿಕ ಸಾಮ್ರಾಜ್ಯಲೀಲೆಯಲ್ಲಿದ್ದನು.

ಅಂದಿನ ಆಯುಷ್ಯವೆಂದರೆ ಎಂಭತ್ತನಾಲ್ಕು ಪೂರ್ವೆಗಳು. ಎಪ್ಪತ್ತು ಖರ್ವ ಮತ್ತು ಐವತ್ತಾರು ಅರ್ಬುದ ವರ್ಷ ತುಂಬಿದರೆ ಒಂದು ಪೂರ್ವೆಯಾಗುವುದು. ಅಂತಹ ಎಂಭತ್ತ ನಾಲ್ಕು ಲಕ್ಷ ಪೂರ್ವೆಗಳಷ್ಟು (ಐವತ್ತಾರು ಸಾವಿರ ಏಳನೂರು ಮಿಲಿಯ ವರ್ಷಗಳು) ಭರತೇಶನು ಇದ್ದನು. ಯೋಗ ಸಾಮರ್ಥ್ಯದಿಂದ ಅವನ ದೇಹವು ಸಡಿಲವಾಗಲಿಲ್ಲ. ನಸುಬಾಗಿದ ಮುರಿ ಮೀಸೆಯು ಮುಖಕ್ಕೆ ಅಲಂಕಾರವಾಗಿತ್ತು, ಬೀಗಿ ಬೆಳೆಯದ ಅಚ್ಚ ಜವ್ವನವು ತಪ್ಪದೆ ಇತ್ತು, ಅದರಿಂದಾಗಿ ನಿತ್ಯಭೋಗಿಯಾಗಿದ್ದನು. ತಾನು ಸಾಧಿಸಿದ ವಾಯುವಿದ್ಯೆಯಿಂದಲೋ, ಬ್ರಾಹ್ಮಣರ ಹರಕೆಯಿಂದಲೋ, ಜನನಿಯ ಆಶೀರ್ವಾದ ಫಲದಿಂದಲೋ, ಜಿನಸಿದ್ಧ ಹಂಸನಾಥನ ಹರಕೆಯೋ ಎನ್ನುವಂತೆ ಅವನ ಜವ್ವನ ಜಾರಲಿಲ್ಲ. ಚಿಂತೆಯೇ ಮುಪ್ಪು; ಸಂತೋಷವೇ ಜವ್ವವನೆಂಬ ಗಾದೆಯುಂಟಷ್ಟೆ. ಭರತೇಶನಿಗೆ ಚಿಂತೆಯಿಲ್ಲ, ಸದಾ ಸಂತೋಷವೇ! ಅದರಿಂದ ಅವನ ಪ್ರಾಯಕ್ಕೆ ಕಾಂತಿಗೂಡಿತ್ತು, ನರೆತ ಹೆಂಗಸರೊಡನೆ ನೆರೆದು ಆಡಿದರೆ ಮುಪ್ಪು ಬರುವುದು. ಸೌಂದರ್ಯದ ಜವ್ವನೆಯರೊಡನೆ ರಮಿಸುವವನಿಗೆ ಮುಪ್ಪು ಉಂಟೆ? ದಿನದಿನಕ್ಕೂ ಪ್ರಾಯವೇ ಸ್ಫುರಿಸುತ್ತಿತ್ತು.

ಆಯ್ದು ಆಯ್ದು ತಂದಿತ್ತ ಅಚ್ಚ ಹೆಂಗಸರನ್ನು ಆರಯ್ದು ಭೋಗಿಸುತ್ತ ಅವರಿಗೆ ಮುಪ್ಪು ಬಂದಾಗ, ಅವರನ್ನು ಬಿಟ್ಟು ಎಳೆ ಹೆಂಗಸರೊಡನಾಡುತ್ತಿದ್ದನು. ಆ ತರುಣಿಯರೊಂದಿಗೆ ಅರ್ತಿಯಿಂದಾಡುತ್ತ, ತನುವನ್ನು ಆವರಿಸಿದ್ದ ಮದವನ್ನು ಜಾರಿಸುತ್ತ ಇದ್ದರೂ ಗುರು ಹಂಸನಾಥನನ್ನು ನೋಡುತ್ತ ಜಾಣನಾದ ಭರತ ಚಕ್ರಿಯು ತನ್ನ ಕರ್ಮವನ್ನು ನಿರ್ಜರೆಯಾಗಿ ಮಾಡುತ್ತಿದ್ದನು. ಹೆಣ್ಣುಗಳ ಒಡನಾಟ ಬಯಸಿ, ಬಳಿಗೆ ಬಂದರೆ ಅವರ ಏಳಿಗೆಯನ್ನರಿತು ಮೋಹಿಸುತ್ತಿದ್ದನು. ಅದರೊಂದಿಗೆ ಓಲಗದ ವಸ್ತ್ರಾಲಂಕಾರ ಭೂಷಿತನಾಗಿ ಓಲಗದಲ್ಲಿ ಕುಳಿತು ರಾಜರನ್ನು ಓಲೈಸುತ್ತಿದ್ದನು.

ಭರತೇಶನು ಮತ್ತೊಂದು ದಿನ ಹಗಲು ಮೂವತ್ತೆರಡು ಸಾವಿರ ಮುಕುಟವರ್ಧನರು ತುಂಬಿದ ಓಲಗದಲ್ಲಿ ರಾರಾಜಿಸುತ್ತಿರಲು ಒಂದು ಸುಖಾವಾಪ್ತಿ ತೋರಿತು. ಮುಖಚಿತ್ರಕನು ಕನ್ನಡಿಯೊಂದನ್ನು ತಂದು, 'ಸ್ವಾಮಿ, ನಿನ್ನ ಮುಖಕ್ಕೆ ಇದು ಸರಿಯೋ ಅಲ್ಲವೋ ನೋಡು' ಎಂದು ಅವನೆದುರು ಕನ್ನಡಿ ಹಿಡಿದು ನಿಂತನು. ಹೊಳೆ ಹೊಳೆದು ಚಕ್ರಿಯು ನಿಟ್ಟಿಸುತ್ತಿರುವಾಗ ಮುಖವೂ ಎಡಬಲಗಳಿಗೆ ವಾಲುವಂತೆ ತೋರಿತು. ಭೂಮಿಯ ಒಡೆತನ ಸಾಕೆಂದು ಮನಸ್ಸಿನಲ್ಲಿ ಹೇಸಿ ತಲೆಯನ್ನು ಕೊಡಹುತ್ತಿರುವನೋ ಎಂಬಂತೆ ತೋರಿತು. ಚಿರಕಾಲದ ಬೇಟವನ್ನು ಮಾಡಿ, ಮೋಕ್ಷವನಿತೆಯು ಕರೆಯ ಕಳುಹಿಸಿದ ದೂತಿಯು ಹೇಳುವಂತೆ, ಆ ಸಮಯದಲ್ಲಿ ರಾಜೇಂದ್ರನ ಕೆನ್ನೆಯಲ್ಲೊಂದು ನೆರೆಯಿತ್ತು.

''ಧ್ಯಾನಯೋಗಾಂಗಿಗೆ ನೆರೆತೆರೆಯಾಗಲಾರದು. ಯಾವ ಕಾರಣದಿಂದ ಇದು ಕಾಣಿಸಿತು'' ಎಂದು ಭರತಚಕ್ರಿಯು ವಿಸ್ಮಯಗೊಂಡು, ಅವಧಿಜ್ಞಾನದಲ್ಲಿ ಅನುಮಾನಗೊಂಡು ತನ್ನ ಒಳಗನ್ನು ನೋಡಿದನು. ಆಯುಷ್ಯ ಕೊನೆಗೊಳ್ಳಲು ಮುಟ್ಟವಾಗಿದೆ; ತಾನು ನಾಳೆ ಮುಕ್ತಿಯನ್ನು ಸೇರುವ ರೀತಿಯಿತ್ತು; ಘಾತಿಯು ಆ ದಿನದಲ್ಲೇ ಜಾರುವಂತೆ ಬಳಿಗೆ ಬಂದು ತೋರುತ್ತಿತ್ತು. ಇದನ್ನೆಲ್ಲ ಭರತೇಶನು ತನ್ನೊಳಗೆ ತಾನು ಕಂಡನು.

''ಮರೆತಿದ್ದೆನು! ಆಪುದು. ಈ ನರೆಯು ಹುಟ್ಟಿ ನನ್ನನ್ನು ಎಚ್ಚರಿಸಿತಲ್ಲ'' ಎಂದು ಪುರುದೇವಕುಮಾರ ನಕ್ಕನು. ಆಗಲೇ ಮನಸ್ಸಿನಲ್ಲಿದ್ದ ಸಂಸಾರ ಸುಖದಾಸೆಯು ಹರಿದು ಹೋಯಿತು. ಮನಸ್ಸಿನಲ್ಲಿ ವಿರಕ್ತಿಯು ತುಂಬಿತು. ಮುಕ್ತಿಯು ಸನ್ನಿಧಿಯಾಯಿತು. ಸಂಸಾರಾಂಗವು ಬೇರೆ ರುಚಿಯನ್ನೇ ತೋರಿಸಿ ಹೊರಟುಹೋಯಿತು. 'ಕೆನ್ನೆಯಲ್ಲಿ ನರೆ ತೋರಿದ ಮೇಲೆ ಇನ್ನು ಕನ್ನೆಯರೊಂದಿಗೆ ಆಟವೇ? ಸಾಕು ಸಾಕು, ಧಿಕ್ಕಾರ, ಧಿಕ್ಕಾರ. ನನ್ನ ಚರಿತ್ರವೇ! ತಪಸ್ಸೆಂಬ ಹಾಲನ್ನು ಒಲಿದು ಸೇವಿಸದೆ, ಮುಗ್ಧರ ಹಾಗೆ ವಿಷಯಗಳೆಂಬ ವಿಷವನ್ನು ಉಂಡು ಬೆಂದು ಹೋದೆನು. ಹಾ ಸುಡು ಸುಡು, ನನ್ನ ನಡೆಯನ್ನು! ತಪಸ್ಸೆಂಬ ಹಾಲುಗಡಲಿನಲ್ಲಿ ಮೂಡಿ ಮುಳುಗದೆ ಜಡದೇಹ, ಸುಖವೆಂಬ ಉಪ್ಪು ಕಡಲಿನ ನೀರನ್ನು ಕುಡಿದು ಬಾಯಾರಿದೆ. ಅಯ್ಯಯ್ಯೋ! ಧ್ಯಾನದ ಪಾಯಸವುಂಡು, ಆತ್ಮನಲ್ಲಿ ಉಯ್ಯಾಲೆಯಾಡಿ ಸುಖಿಸದೆ, ಗುಯ್ಯಲು ಎತ್ತುವವರಂತೆ ದೇಹದ ಹೋರಾಟದಲ್ಲೇ ನಾನು ಗದ್ದಲವನ್ನೇ ಅನುಭವಿಸಿದೆ. ನೋಡು ನೋಡು, ನನ್ನ ಒಡಹುಟ್ಟಿದವರು ಮೀಸೆ

ಮೂಡುವಾಗಲೇ ದೀಕ್ಷೆಯನ್ನು ಪಡೆದರು. ಅಮೃತವನ್ನು ಸೇರಿದರು. ನಾನೊಬ್ಬನೇ ಈವರೆಗೆ ಆಟೆ ಈಟೆ ಜೋಲಿ ಮಾಡಿದೆ. ಒಡಹುಟ್ಟಿದವರ ಮಾತೇಕೆ? ತನ್ನ ಹೊಟ್ಟೆಯಲ್ಲೇ ಹುಟ್ಟಿದ ನನ್ನ ಮಕ್ಕಳು ಕಠಿಣವಾದ ದೀಕ್ಷೆಯಲ್ಲಿ ಸಿದ್ಧಿಯನ್ನು ಪಡೆದರು. ನನ್ನ ಜಡತೆಯನ್ನೇ ನೋಡು, ನೋಡು, ತಂದೆ ಮಾವಂದಿರು, ಅಕಂಪ ಮುಂತಾದ ಆಪ್ತರು, ಮೈದುನರು – ಎಲ್ಲರೂ ಅಮೃತಸಂಪದಕ್ಕೆ ಮುಂದಾದರು. ನಾನೊಬ್ಬನೇ ಹಿಂದಾದೆನು. ಅಯ್ಯೋ! ಹಾ, ಆಗಲಿ! ನಮ್ಮವರೆಲ್ಲ ಮುಕ್ತಿಗೆ ಮೊದಲೇ ಹೋಗಲಿ. ಅವರು ಮುಂದೆ ಹೋದರೇನು? ಹೋಗುತ್ತಿರುವ ಅವರೆಲ್ಲ ದಾರಿಯಲ್ಲಿ ಅಡೆತಡೆಗಳಿಂದ ಸುತ್ತಿಸಿಕೊಂಡರೆ ಮತ್ತೇನು? ಹೋಗುವ, ಮಾರ್ಗವಿದೊ ತೋರುತಿದೆ. ನನಗಾಗಿ ತಪಸ್ಸಿದೆ. ತಪಸ್ಸಿಗೆ ದೀಕ್ಷೆಯಾದವರಲ್ಲಿ ಸ್ವಪರತತ್ವಜ್ಞಾನವೂ ಉಂಟು. ವಿಮಲಾತ್ಮ ಯೋಗವೂ ಉಂಟು. ಆದ್ದರಿಂದ ಕರ್ಮವನ್ನು ಕ್ಷಯಿಸಿ ಮುಕ್ತಿಗೆ ಹೋಗುವೆನು.''

ಭರತೇಶನು ನಿರ್ಧಾರ ಮಾಡಿದನು. ಅದನ್ನು ಕಂಡು ಬುದ್ಧಿಸಾಗರ ಮಂತ್ರಿಯೆದ್ದು ಕೈ ಮುಗಿದನು. ''ಸ್ವಾಮಿ, ವೃದ್ಧಿಯಾಗುವ ಸಂಪತ್ತು ಇದು. ಈಗ ಈ ಸಿರಿಯಿಂದ ಸುಖಿಸು. ತಪಸ್ಸಿನ ಸುದ್ದಿ ಯಾಕೆ? ನಿನಗೇನು ಕಡಮೆಯಾಯಿತು? ಧರೆಯೆಲ್ಲ ಬಂದು ನಿನ್ನ ಪಾದಗಳಿಗೆ ನಮಸ್ಕರಿಸಿ ನಿಂತಿದೆ. ಮಾನವ ಲೋಕಕ್ಕೆ ಶ್ರೇಷ್ಠವಾದ ಸಿರಿಯನ್ನು ಬಿಟ್ಟು, ಸ್ವಾಮಿ, ನೀವೀಗ ವನನ್ನು ನೆನೆಯುತ್ತಿರುವಿರಿ?'' ಎಂದು ಬಿನ್ನವಿಸಿದನು.

''ಹಾಗಲ್ಲ ಬುದ್ಧಿ ಸಾಗರ, ಕೇಳು. ಅಂದು ಪುರುದೇವನು ತನಗೇನೂ ಇಲ್ಲವೆಂದು ತಪಸ್ಸಿಗೆ ಹೋದನೇ? ಬಲ್ಲವನಿಗೆ ಈ ದೇಹ ಸ್ಥಿರವಲ್ಲ, ಕುಟ್ಟಿ, ಹಿಡಿದುದಲ್ಲವೇ? ವಿರಕ್ತಿಯೊಂದು ಇಲ್ಲದವರಿಗೆ ತಪಸ್ಸು ಅತಿ ಭಾರವಾಗುವುದು. ಬಲ್ಲ ವಿರಕ್ತಿಗಾದರೆ, ತಪಸ್ಸೆಂದರೆ ಬೆಲ್ಲದಂತಲ್ಲವೇ? ತಿಳುವಳಿಕೆಯಿಲ್ಲದಾಗ ಕರ್ಮಗಳು ಕಲ್ಲಿನಂತೆ ಕಠಿಣವಾಗಿರುವುವು. ತಿಳಿದಾಗ ಅದೇನೂ ಕಠಿಣವಲ್ಲ, ಕರ್ಮದ ಮೂರು ಕಾಂಡಗಳನ್ನು ಗೆಲ್ಲಲಾರದ ನಾನು ಆರು ಖಂಡಗಳನ್ನು ಗೆದ್ದರೇನಾಯಿತು? ಮೂರು ರತ್ನಗಳೇ ಜೀವಕ್ಕೆ ಹಿತವು. ಹದಿನಾಲ್ಕು ಸೋರೆಯ ಮಣಿಗಳಲ್ಲಿ ಏನುಂಟು?'' ಎಂದು ಭರತೇಶನು ಬುದ್ಧಿ ಸಾಗರನಿಗೆ ಬುದ್ಧಿ ಹೇಳಿದನು,

''ಸ್ವಾಮಿಯ ಸೊಲ್ಲು ಕೇಳಿದಷ್ಟಕ್ಕೆ ಸಭೆಗೆಲ್ಲ ಅಮೃತವನ್ನು ಚೆಲ್ಲಿದಂತಾಯಿತು. ಇದರ ಮುಂದಿನ್ನು ಬೆಲ್ಲವೇಕೆ, ಸಿಹಿ ಯಾಕೆ? ಇದಕ್ಕೂ ಮೀರಿದ ಅಮೃತವಾದರೂ ಎಲ್ಲಿರುವುದು? ನಲ್ಲತನಕ್ಕೂ ಬಲ್ಲತನಕ್ಕೂ ಈ ಲೋಕದಲ್ಲಿ ಬೇರೆಯವರಿಲ್ಲ, ನಿನ್ನ ತಡತೆಗೆ ನಲ್ಲರೂ ನಾರಿಯರೂ ಒಲಿಯುವರು. ರಾಜೇಂದ್ರ, ಸುಳ್ಳು ಹೇಳುವವನು ನಾನಲ್ಲ, ಅರಿಯದೆ ನಾನೊಂದು ಹೇಳಿದೆನು. ನೀನು ಕಂಡಿರುವುದೇ ನಿಜವು. ನಾನು ಅದಕ್ಕೆ ಶರಣು. ನಮ್ಮ ತಪ್ಪುಗಳನ್ನು ಮರೆಯಬೇಕು ಸ್ವಾಮಿ'' ಎಂದು ಬುದ್ಧಿ ಸಾಗರ ಮಂತ್ರಿಯು ಚಕ್ರಿಯ ಪಾದಗಳಿಗೆ ಎರಗಿ ಕುಳಿತನು.

ಭರತೇಶನು ಆಗ ಬಳಿಯಲ್ಲಿದ್ದ ತನ್ನ ಹಿರಿಯ ಕುವರನನ್ನು ಕರೆದನು. ''ದೊಡ್ಡಣ್ಣ ಬಾ ಮಗನೇ, ನೀನು ರಾಜ್ಯವನ್ನು ವಹಿಸಿಕೊಂಡು ನನ್ನನ್ನು ದೀಕ್ಷೆಗೆ ಕಳುಹಿಸು'' ಎಂದು ಮಗನನ್ನು ಅಪ್ಪಿಕೊಂಡು ನುಡಿದನು. ಆ ನುಡಿಯನ್ನು ಕೇಳುತ್ತಲೇ ಮಗನು, ಬಳಬಳನೇ

ಸುರಿಯುತ್ತಾ ಇರುವ ಕಣ್ಣೀರಿನೊಂದಿಗೆ ಮೂರ್ಛೆ ಹೋದನು. ಅವನನ್ನು ಶೀತೋಪಚಾರದಿಂದ ಎಚ್ಚರಗೊಳಿಸಿದನು.

''ಕ್ಷತ್ರಿಯರು ಈ ರೀತಿಯಲ್ಲಿ ಭಯಪಡುವುದೇ? ಈ ಮರುಕವೇಕೆ? ಧೈರ್ಯದಿಂದ ನನ್ನನ್ನು ದೀಕ್ಷಾತಂತ್ರಕ್ಕೆ ಕಳುಹಿಸು.''

''ಆನೆಯ ಅಂಬಾರಿಯು ಮರಿಗೆ ಆದೀತೆ? ದೇವರು ಧರಿಸಿದ್ದ ರಾಜ್ಯಭಾರವನ್ನು ನಾನು ಹೊರುವೆನೆ? ಸ್ವಾಮಿ, ಹೀಗೇಕೆ ಸಂಭಾವಿಸುತ್ತಿರುವಿರಿ?''

''ಧರೆಯ ಭಾರವನ್ನು ತಾಳುವ ದಕ್ಷನಾಗಿರುವಿ ನೀನು. ಅದನ್ನು ತಿಳಿದೇ ನಾನಿಂತು ಹೇಳಿದೆ. ನೀನೇನು ಬಾಲಕನೇ? ನೀನು ಜವ್ವನಿಗನಲ್ಲವೇ? ಅಂದು ನಾನು ವೃಷಭರಾಜನನ್ನು ತೊಡೆಯೇರಿಸಿ ಕುಳಿತಿದ್ದಾಗ ಅವನು ತನಗೆ ಈ ಧರೆ ಭಾರವಾಗಿದೆಯೆಂದನು. ನೀನೀಗ ನಾನು ಧರೆಯನ್ನು ಧರಿಸಿದೆನೆಂದೆ. ಅದನ್ನೀಗ ಮರೆತೆಯಾ? ಈಗ ನನಗೆ ನೆರವಾಗು.''

''ದೇವಾ, ವಚನ ಸೌಭಾಗ್ಯದಿಂದ ನೀವು ನನ್ನನ್ನು ಉಬ್ಬಿಸಿ ಶುಚಿಗೆಟ್ಟಿರುವ ಈ ರಾಜ್ಯವನ್ನು ನನಗಿತ್ತು ತಾವು ಮಾತ್ರ ಶಿವಪದವನ್ನು ಬಯಸಿ ಹೋಗುವುದು ಉಚಿತವೇ? ಇಷ್ಟು ಕಾಲ ನೀವು ಇಷ್ಟವಾದ ಅನ್ನವನ್ನು ವಸ್ತ್ರಭೂಷಣಗಳನ್ನು ಕೊಡುತ್ತ ರಕ್ಷಿಸಿದಿರಿ. ಈ ಕಾಲದಲ್ಲಿ ಮಾತ್ರ ಈ ಭೂಮಂಡಲವನ್ನು ನನಗೆ ಕೊಡುವುದೇಕೆ? ಪ್ರಿಯವಾದ ಅರ್ಥವನ್ನೇ ಆಗಾಗ ಕೊಟ್ಟು ಇಷ್ಟು ದಿವಸ ನನ್ನನ್ನು ಕಾಪಾಡಿದ ತಾವು ಇಷ್ಟವಲ್ಲದ ಈ ರಾಜ್ಯವನ್ನು ನನಗೆ ಕೊಡಲು ನಾನು ಮಾಡಿದ ಕಷ್ಟವೇನು ಸ್ವಾಮಿ?''

''ಮಗನೇ ನೀನು ನುಡಿಜಾಣನೆಂದು ಬಲ್ಲೆನು. ಈ ರಾಜ್ಯವನ್ನಾಳಲು ಹೆಡ್ಡನಿಗೆ ಕಷ್ಟವಾಗುವುದು. ಕಡುಜಾಣನಿಗೆ ಕಷ್ಟವಲ್ಲ, ಇಷ್ಟವಾಗುವುದು. ಪಟ್ಟಕ್ಕೆ ಒಪ್ಪು.''

''ಮೋಕ್ಷರಾಜ್ಯವನ್ನು ದೇವರು ಬಯಸಿ ನನಗೆ ಈ ಕ್ಷೇತ್ರವನ್ನು ಕೊಟ್ಟರೆ, ಅದು ಯಾಕಾದೀತು? ದೀಕ್ಷೆಗೆ ಶರಣಾಗುವುದಕ್ಕೆ ನಾನೂ ಬರುವೆನು.''

''ಅಂದು ಅಪ್ಪಾಜಿ ನನಗೆ ರಾಜ್ಯವನ್ನಿತ್ತು ಮುನಿಯಾದನು. ಅದನ್ನು ನಾನೀಗ ನಿನಗೆ ಒಪ್ಪಿಸಬೇಕು. ಅದಕ್ಕೆ ನೀನೀಗ ಒಪ್ಪಬೇಕು. ಈಗ ಇದನ್ನು ಸಹಿಸಿಕೊಂಡು ಇನ್ನು ಮುಂದೆ ನಮ್ಮಂತೆ ತಪಸ್ಸಿಗೆ ಬರಬೇಕು. ಚೆನ್ನಾಗಿ ಬದುಕಿ ಗೆಲಲಿರುವ ಮಗನಿಗೆ ರಾಜ್ಯವನ್ನಿತ್ತು ಮುಕ್ತಿಗೆ ಸಲ್ಲಬೇಕೆಂದು ನಮ್ಮ ಕುಲಬಿರುದು. ಇದನ್ನು ನಾವು ಮೀರಬಹುದೆ? ನನ್ನನ್ನು ಮೊದಲು ಕಳುಹಿಸಿಕೊಡು. ನೀನು ಮತ್ತೆ ಬಾ.''

''ನರೆಯೊಂದು ಕಂಡರೇನಾಯಿತು? ತಪಸ್ಸಿಗೆ ಹೋಗಲು ದೇವರಿಗೆ ಇಷ್ಟು ತವಕವೇಕೆ? ಈಗ ಅದನ್ನು ಸಹಿಸಿಕೊಳ್ಳಿ. ಮತ್ತೆ ದೀಕ್ಷೆಯನ್ನು ತಾಳಬಹುದು.''

''ಇರಬಹುದಿತ್ತು ಅಣ್ಣಾ, ಆದರೆ ಆಯುಷ್ಯ ಮುಟ್ಟಲಿಕ್ಕಾಯಿತು. ಅದನ್ನು ಕೇಳಿಯೂ ಇಂದು ಇನ್ನು ನಾನು ಹೇಗೆ ಸಹಿಸಲಿ? ನಾಳೆ ಸೂರ್ಯೋದಯವಾಗಲು ಮುಕ್ತಿಗೆ ಹೋಗುವ ಪ್ರಾಪ್ತಿಯು ವಹಿಸಿರುವುದು.''

ಆ ನುಡಿಯನ್ನು ಕೇಳಿದಾಗ ಕುಮಾರನ ಎದೆಯು ಹವ್ವನೆ ಹಾರಿತು. ಸುಮ್ಮಾನ ಕುಂದಿತು. ''ನೀನು ಉತ್ತರ ಕೊಟ್ಟರೆ ನನ್ನಾಣೆ. ನಾನಿಲ್ಲಿ ನಿಲ್ಲೆನು'' ಎಂದು ಚಕ್ರೇಶ್ವರನು

ಮಗನ ಮಾತನ್ನು ಕಟ್ಟಿದನು. ''ಭೂಮಿಯ ದೊರೆತನವು ನಿನಗೆ. ಯುವರಾಜನ ಪಟ್ಟವು ಆದಿರಾಜನಿಗೆ. ಇನ್ನು ಉಳಿದ ಕುಮಾರರಿಗೆ ಉಂಬಳ ಕೊಡುವೆನು'' ಎಂದು ಪುತ್ರರ ಸಮೂಹವನ್ನು ನೋಡಿದನು.

''ವೃಷಭರಾಜ, ನಿನಗೆ ಯಾವ ನಾಡಿನ ಇಚ್ಛೆ?'' ಎಂದು ಕೇಳಿದರೆ, ''ಕೈವಲ್ಯವೆಂಬ ನಾಡಿನ ಇಚ್ಛೆ. ದೇವರೊಡನೆ ಬರುವೆನು; ಈ ನಾಡನ್ನು ಒಲ್ಲೆನು'' ಎಂದು ಕುಮಾರನು ವೀರವ್ರತವನ್ನೇ ಕೈಗೊಂಡನು. ಹಂಸರಾಜನಿಗೊಂದು ರಾಜ್ಯವೆಂದು ಹೇಳಿದಾಗ, ಅವನು ಸಂಶಯವಿಲ್ಲದೆ ಎದ್ದು ನಿಂತು, ''ನಾನು ಸಿದ್ಧಲೋಕವನ್ನಲ್ಲದೆ ಬೇರೆ ರಾಜ್ಯವನ್ನೊಲ್ಲೆನು; ಇದಕ್ಕೆ ಹಂಸನಾಥನೇ ಸಾಕ್ಷಿ'' ಎಂದು ದೃಢವಾಗಿ ನುಡಿದನು. ಉಳಿದ ಕುಮಾರರು ಮುಂದೆ ನಿಂತು ಕೈಗಳ ಮುಗಿದು, 'ಎಲೆ ಸ್ವಾಮಿ, ನಿನ್ನ ಜತೆಯಲ್ಲಿ ಬರುವೆವಲ್ಲದೇ ಇಲ್ಲಿ ಇರಲಾರೆವು' ಎಂದು ನಿಶ್ಚಲಚಿತ್ತರಾಗಿ ನುಡಿದರು. ಎಲ್ಲರನ್ನೂ ಪ್ರಾರ್ಥಿಸಿ ನಿಲ್ಲಿಸುವವರೆಗೆ ತನಗೆ ಹೊತ್ತಿಲ್ಲವೆಂದೆಣಿಸಿ ಭರತ ಚಕ್ರೇಶ್ವರನು ಗದ್ದುಗೆಯಿಂದ ಇಳಿದು ನೆಲದಲ್ಲಿ ನಿಂತನು. ಸಭೆಯೊಮ್ಮೆ ವಿಜೃಂಭಿಸಿತು.

ಭರತೇಶನು. ಅರ್ಕಕೀರ್ತಿ ರಾಜನ ಕೈಹಿಡಿದು, ಕರೆದೊಯ್ದು ಸಿಂಹ ಪೀಠದಲ್ಲಿ ಕುಳ್ಳಿರಿಸಿ, ತನ್ನ ಮಕುಟವನ್ನು ಅವನ ತಲೆಗಿಟ್ಟನು. ಬ್ರಾಹ್ಮಣ ಸಮೂಹವು ಜಯಜಯವೆಂದಿತು. ಅರ್ಕಕೀರ್ತಿರಾಜನ ಕೊರಳಿಗೆ ಹೂ ಮಾಲೆ ಹಾಕಿ, ಪಟ್ಟಕಟ್ಟಿ, ಭೂಮಿಗೊಡೆಯ ನೀನೆಂದು ವೀರಸೇನೆಯನ್ನು ಹಾಕಿ, ಜೋಲಿ ಮಾಡದೇ ಕುಮಾರನ ಉತ್ಸವವನ್ನು ಮುಗಿಸಿದನು. ಆದಿರಾಜನನ್ನು, ಆಮೇಲೆ ಕರೆದೊಯ್ದು ಬಳಿಯಲ್ಲಿರುವ ಪುಟ್ಟ ಗದ್ದುಗೆಯಲ್ಲಿ ಕುಳ್ಳಿರಿಸಿ, ಯುವರಾಜನೆಂದು ಹೂಮಾಲೆ ಹಾಕಿ, ಸೇಸೆಯಿಟ್ಟು ಅವನನ್ನು ಮನ್ನಿಸಿದನು. 'ಜನವಿದೆ, ಪರಿವಾರವಿದೆ, ದೇಶವಿದೆ, ಸರ್ವರನ್ನೂ ಅನುವರಿತು ಪಾಲಿಸು. ನನಗೆ ಹೆಚ್ಚು ಹೇಳಲು ವೇಳೆಯಿಲ್ಲ' ಎಂದು ಹಿರಿಯ ಕುಮಾರರೊಡನೆ ಸೂಚಿಸಿದನು. ಪುತ್ರರೆಲ್ಲರೂ ಕಂಬನಿ ಮಿಡಿಯುತ್ತಿದ್ದರು. 'ನನ್ನ ಹಂಬಲ ಬಿಟ್ಟು ನೀವು ಇವರ ಬೆಂಬಲವಿರಬೇಕು' ಎಂದು ಎಲ್ಲ ರಾಜರಿಗೂ ಕೈಬೀಸಿ ತಿಳಿಸಿದನು.

ಧರೆಯ ಜಂಜಡ ಹೋಯಿತು. ಆಮೇಲೆ ಭರತ ಚಕ್ರಿಯು ಅವರನ್ನು ಸತಿಯರಿವರು, ಮಂತ್ರಿಗಳಿವರು, ಮಕ್ಕಳಿವರು — ಎಂದು ಸ್ಮರಿಸಲಿಲ್ಲ. ಗುರು ಹಂಸನಾಥನನ್ನು ನೆನೆಯುತ್ತಾ ಆ ಕ್ಷಣದಲ್ಲೇ ಮುಂದೆ ನಡೆದನು.

ಕಣ್ಣೀರು ಸುರಿಸುತ್ತಾ ಅರ್ಕಕೀರ್ತಿರಾಜ, ಆದಿರಾಜರೇ ಮೊದಲಾದವರು ಮುಂದೆ ಹೋಗಿ ಅಡ್ಡಬಿದ್ದು ತಡೆದರು. ಆ ಮಕ್ಕಳು ತಂದೆಯ ಚರಣದಲ್ಲಿ ಮುಗ್ಗಿ ತಡೆದರು. ತಂದೆಯ ವಿರಹವನ್ನು ಯಾರು ಸಹಿಸಿ ಯಾರು? ಆದರೆ ಭರತೇಶ್ವರನು ಅವರನ್ನು ತನ್ನ ಮಕ್ಕಳೆಂದು ಮತ್ತೆ ನೋಡಲಿಲ್ಲ. ಅವರು ಕೂಗುತ್ತಿರಲಿಯೆಂದು ನೂಕಿ, ಗಜರಾಜನಂತೆ ಲೀಲೆಯಿಂದ ತಪೋವನದತ್ತ ನಡೆದನು. ಅವನನ್ನು ಹಿಂಬಾಲಿಸಿ ಸಭಾಜನರೂ ನಡೆದರು. ಅಷ್ಟರಲ್ಲಿ ಪಲ್ಲಕ್ಕಿಯನ್ನು ತಂದು ಹಿಡಿದರು. ಭರತೇಶನು ಸಂತೋಷದಿಂದ ಅದನ್ನು ಏರಿದನು.

ವಸುಧಾಧಿಪತಿ ದೀಕ್ಷೆಗೆ ಅಡಿಯಿಟ್ಟನೆಂದು ಕೇಳಿ ಸತಿಯರಿಗೆಲ್ಲ ವಿರಹವುಂಟಾಯಿತು. ಬಿಸಿಲಲ್ಲಿ ಬಿಸಾಡಿದ ಮಾವಿನ ಚಿಗುರಿನಂತೆ ಆದರು. ಅವರ ಜೀವನಕ್ಕೆ ಮೂರ್ಛೆ ತಟ್ಟಿತು. ಜೀವನವು ಕೂಡಲೇ ಹೋಗುವುದೇ? ಭರತೇಶನು ದೇಹ ಧರಿಸುವನೆಂದು ಆಸೆಯಿಂದ ಹೋಗಿ ನೋಡುವೆವೆಂಬ ಕಾತರದಿಂದ ತಳಮಳಗೊಂಡರು.

''ಅಯ್ಯಾ ಚಕ್ರವರ್ತಿಯ ಮಹಾಭಾಗ್ಯವು ಕಣ್ಣೆಡುವಷ್ಟರಲ್ಲಿ ಮಾಯವಾಯಿತು? ಈ ಪ್ರೀತಿಯನ್ನು ಸುಡುಸುಡು! ಅಯ್ಯಾ, ಕಷ್ಟ ಕಷ್ಟ. ಇವನಿಗೆ ಎದುರಿಲ್ಲ, ಎಣೆಯಿಲ್ಲ ಎಂಬ ಸಂಪತ್ತು ಇದ್ದ ಷಟ್ಖಂಡಪತಿಯ ಬದುಕು ಕ್ಷಣದಲ್ಲಿ ಬದಲಾಯಿತೇ? ಹಾ ಹಾ'' ಎಂದು ಎದೆಕರಗಿ ರಾಣಿಯರು ಮರುಗಿದರು.

''ಆಯುಷ್ಯ ಶೀರಿದ ಮೇಲೆ ಆತ್ಮನನ್ನು ಯಾರು ತಡೆಯುವರು? — ಎಂದು ನಮಗೆ ಕೋರಿ ನಿರೂಪಿಸುತ್ತಿದ್ದನಷ್ಟೆ. ತಾನು ಮಾತ್ರ ಇಂದು ಒಳಗಿನ ಆತ್ಮನನ್ನು ಅರಿತು, ಆ ದಾರಿ ತಿಳಿದು ನಮಗೆ ತಿಳಿಸದೇ ಹೋದನಷ್ಟೆ. ನಮಗೂ ದೀಕ್ಷೆಯೇ ಗತಿ. ಜಿನನಾಥನು ಇರುವಾಗ ಮನೆಯಲ್ಲಿದ್ದೆವು. ಅವನು ತಪೋವನಕ್ಕೆ ಹೊರಟ ಮೇಲೆ ಈ ಮನೆ ಸುಖವಲ್ಲ, ಅವನು ಹೋಗಿರುವ ಅಡವಿಯೇ ನಮಗೆ ಅನುಪಮವಾದ ಸುಖವು. ಕಣ್ಣು ಮನಸು, ತಣಿಸುವ ಹಾಗೆ ಸುಖಿಸಿದೆವು. ಇನ್ನು ಈ ಹೆಣ್ಣು ಜನ್ಮವನ್ನು ತಪಸ್ಸಿನಿಂದ ಬಣ್ಣಗೆಡಿಸಿ ಸ್ವರ್ಗವನ್ನು ಪಡೆಯುವ'' ಎಂದು ಜಾಣೆಯರಾದ ಹೆಣ್ಣುಗಳೆಲ್ಲ ಹೊರಡುವ ಕೆಲಸ ಮಾಡಿದರು. ಕೂದಲಿರುವ ಅಜ್ಜಿಯರೂ ಪಟ್ಟದ ರಾಣಿ, ಮುಂತಾದವರೆಲ್ಲರೂ ಮರುಕವನ್ನು ಬಿಟ್ಟು, ಧೈರ್ಯತಾಳಿ ದೀಕ್ಷೆಗೆ ಹೊರಟರು. ''ಸುಖದಲ್ಲಿ ಬಾಳಿದ ನಿಮ್ಮ ಅಯ್ಯನಂತೆ ಮೋಕ್ಷ ಸುಖವನ್ನೇ ಪಡೆಯಿರಿ – ಎಂದು ಮಕ್ಕಳನ್ನು ಹರಸಿದರು. ಸುಖಕ್ಕಾಗಿ ತಾವು ದೀಕ್ಷೆಯನ್ನು ಕೊಳ್ಳುವೆವು ಎಂದು ಎಲ್ಲ ನಾರಿಯರೂ ನಡೆದರು. ಕುಸುಮಾಜಿ, ಕುಂತಲಾವತಿಯರು ತಮ್ಮ ತುರುಬಿಗೆ ಪ್ರಸಿದ್ಧರಾದ ಅಜ್ಜಿಯರಾಗಿದ್ದರು. ಅವರು ಬಸಿಯುತ್ತಿರುವ ಕಂಬನಿಯಿಂದ ಪುತ್ರರನ್ನು ಹರಸಿ, ತಾಮಸವಿಲ್ಲದೆ ಮುಂದೆ ನಡೆದರು.

''ತಡೆಯಬಾರದು. ತಮ್ಮ ಪತಿಯ ಕೈಯಿದಲೇ ದೀಕ್ಷೆ ಪಡೆದು ಸುಖಿಗಳಾಗಲಿ'' ಎಂದು ಕುಮಾರರು ಕೂಡಲೇ ಪಲ್ಲಕ್ಕಿಯಲ್ಲಿ ತಮ್ಮ ತಾಯಂದಿರ ಕುಳ್ಳಿರಿಸಿ ಬಿಡುಗಡೆ ಕೊಟ್ಟರು. ತಮ್ಮಂದಿರೆಲ್ಲರೂ ತಪಸ್ಸಿಗೆ ಹೊರಟಾಗ, ಅವರ ಮಾನಿನಿಯರೂ ತಪಸ್ಸಿಗೆ ಹೊರಟರು. ಅವರನ್ನೂ ಜನನಿಯರೊಡನೆ ಪಲ್ಲಕ್ಕಿಯೇರಿಸಿ ಅಳುತ್ತ ಅಳುತ್ತ ಬೀಳ್ಕೊಟ್ಟರು.

ಭರತೇಶನು ಮುಂದೆ ಸಾಗುತ್ತಿದ್ದನು. ಹೆಂಗಸರು ಪರಿವಾರದವರು ಪ್ರಜೆಗಳು ಶೋಕಿಸುತ್ತ ಭರತೇಶನನ್ನು ಅನುಸರಿಸುತ್ತಿದ್ದರು. ಪುರದ ಕಾಂತೆಯರು ಮನೆಯ ಮದಿಲು ಮಾಡವನ್ನೇರಿ ನೋಡಿ ಗೋಳಿಡುತ್ತಿದ್ದರು.

''ಅಯ್ಯಾ ನಮ್ಮೊಡೆಯ, ಸಿರಿಯ ಕಾಮನ ಬಿಲ್ಲಿನಂತೆ ಕಂಡು ಈಗ ಫಕ್ಕನೆ ಜಾರಿ ಹೋಗುವೆಯಾ? ಈ ದೇಹ ಧರಿಸಿದವರ ಸುಖವು ಸುಡಲಿ. ಎಂದು ಹೆಂಗಸರು ಗೋಳಿಡುತ್ತಿದ್ದರು. ಮುಪ್ಪು ತೋರದೆ ಬಾಳಿದೆ. ಮುದ್ದುಮಡದಿಯರಿಗೆ ಒಂದು ಹೊತ್ತೂ ನೋವು ಆಗದಂತೆ ಅವರನ್ನು ಆಳಿದೆ. ಈ ಹೊತ್ತು ತೆಪ್ಪಗೆ ಅಡವಿಗೆ ಹೋಗುತ್ತೀಯ

ನಮ್ಮೊಡೆಯ, ನಮ್ಮಪ್ಪ'' ಎಂದು ಹಲವರು ಹಲುಬಿದರು. ''ಬೀದಿಯಲ್ಲಿ ನೀನು ನಡೆಯುತ್ತಿರುವುದನ್ನು ಕಂಡರೆ ಸ್ವರ್ಗವೇ ನಮಗೆ ದೊರೆತ ಸಂತೋಷವಾಗುತ್ತಿತ್ತು, ಅಯ್ಯೋ ನಮ್ಮ ಸಂಪತ್ತು ಹೋಯಿತೇ? ಹಾ ಹಾ'' ಎಂದು ಅಲ್ಲಲ್ಲಿ ದುಃಖಿಸಿದರು. ''ಹೆಂಡತಿಯರು, ಮಕ್ಕಳು, ಸೊಸೆಯರು – ಎಲ್ಲರನ್ನೂ ಕೂಡಿಕೊಂಡು ಷಟ್ಖಂಡವನ್ನು ಜಯಿಸಿದೆ. ಮತ್ತೆ ಈಗ ಅವರನ್ನೂ ತಪಸ್ಸಿಗೆ ಕರೆದೊಯ್ಯುವಿಯಾ?'' ಎಂದು ನಗರದ ನಾರೀ ತಂಡವೇ ಗೋಳಿಟ್ಟಿತು.

ಭರತೇಶನು ಶೋಕಿಸುತ್ತಿರುವವರ ಕಡೆಗೆ ನೋಡದೇ ಪರಾಕಿನಿಂದ ಪುರವನ್ನು ದಾಟಿದನು. ಭೀಕರವಾದ ಅರಣ್ಯವನ್ನು ಸೇರಿದನು. ಅವನನ್ನು ಅನುಸರಿಸಿದವರೆಲ್ಲರೂ ಅವನೊಂದಿಗೆ ಅರಣ್ಯವನ್ನು ಸೇರಿದರು. ಅಲ್ಲೇ ಒಂದು ಗಂಧದ ಮರವು ಕಂಗೊಳಿಸುತ್ತಿತ್ತು. ಅದರ ಮೂಲದಲ್ಲಿ ಒಂದು ತರವಾದ ಶಿಲೆಯಿತ್ತು. ಅಲ್ಲಿಯೇ ಭರತೇಶನಿದ್ದ ಪಲ್ಲಕ್ಕಿಯೂ ನಿಂತಿತು. ಬಳಿಯಲ್ಲಿದ್ದವರು ಜಯಜಯವೆನ್ನುತ್ತಿರಲು ಭರತೇಶನು ಪಲ್ಲಕ್ಕಿಯಿಂದಿಳಿದನು. ಶಿಲೆಯನ್ನೇರಿ ಓಜೆಯಿಂದ ನಿಂತನು. ಕಳಕಳಿಸಿ ಹೊಳೆವ ಮುಖದಿಂದ ಜನರನ್ನು ನೋಡಿದನು. ಬಳಿಗೆ ಬಂದವರೆಲ್ಲರೂ ಕೈಗಳ ಮುಗಿದು ನಿಂತರು. ಅವರ ಮುಖ ಕಾಂತಿಗುಂದಿತ್ತು. ಹತ್ತಿರ ಇದ್ದ ಅರ್ಕಕೀರ್ತಿ ಆದಿರಾಜರು ತಲೆತಗ್ಗಿಸಿದರು. ಉಳಿದ ನಂದನರ ಮುಖದಲ್ಲಿ ಕಳೆಯೇರಿತ್ತು. ಅದನ್ನು ನೋಡಿ ರಾಜೋತ್ತಮನಾದ ಭರತನು ನಸುನಗುತ್ತಿದ್ದನು. ಸ್ನೇಹಿತರು ಸಂತೋಷದಲ್ಲಿದ್ದರು. ರಾಜರೆಲ್ಲರೂ ಮುಖಕಾಂತಿಯಿಂದ ಇದ್ದರು. ಜಯಘೋಷ ಮಾಡುತ್ತಿರುವವರು ದೀಕ್ಷೆ ಪಡೆಯುವವರೆಂದು ತಿಳಿದು ಭರತೇಶನು ಅವರನ್ನೇ ನೋಡುತ್ತಿದ್ದನು. ಹೆಂಗಸರ ಪಲ್ಲಕ್ಕಿಯು ಕೊನೆಗೆ ಬಂದು ಬೇರೊಂದು ಪಂಗಡವಾಗಿ ನಿಂತಿತ್ತು.

ಅಷ್ಟರಲ್ಲಿ ಶೃಂಗಾರಯೋಗಿಯು ದೀಕ್ಷೆ ಪಡೆವೆನೆಂದು ತನ್ನ ಅಂತರಂಗದಲ್ಲೇ ಉದ್ಯೋಗಿಸಿದನು. ಅಲ್ಲಿ ನೆರೆದವರನ್ನು ದೂರಕ್ಕೆ ತೊಲಗಿಸಿದನು. ಪುತ್ರರೂ ಮಂತ್ರಿಗಳೂ ಅವನ ಬಳಿಯಲ್ಲಿದ್ದರು. ಅವರಿಗೂ ತನಗೂ ಮಧ್ಯದಲ್ಲಿ ಒಂದು ತೆರೆಯನ್ನು ಹಿಡಿಸಿ ದೀಕ್ಷೆಗೆ ಸಿದ್ಧನಾದನು.

## ೨೪

# ಧ್ಯಾನ ಸಾಮರ್ಥ್ಯ

ತೆರೆಯ ಮರೆಯಲ್ಲಿ ಬಂಧುರವಾದ ಶಿಲೆಯಲ್ಲಿ ಭರತೇಶನು ಸಿದ್ಧಾಸನದಲ್ಲಿ ಕುಳಿತನು. ತನಗೆ ಗುರುವಿಲ್ಲ ತನಗೆ ತಾನೇ ಗುರುವೆಂಬುದನ್ನು ಯೋಚಿಸಿದನು. ತನ್ನ ಆತ್ಮ ತನಗಲ್ಲದೆ, ಎರವು ತಂದ ದೇಹವು ತನಗಲ್ಲವೆಂಬುದನ್ನು ಬಲ್ಲವನಿಗೆ ಸಂಗದ ಗುಂಜು ಇಲ್ಲ, ಭಿನ್ನವಾಗಿರುವ ವಸ್ತುಗಳನ್ನು ಬೇರ್ಪಡಿಸಿ ಯೋಗೀಂದ್ರನೆಂಬ ಉನ್ನತಿಯನ್ನು ಪಡೆದನು. ಸಿದ್ಧರಲ್ಲೂ ಸಾಭರಣರೆಂಬುವರು ಇರುವಾಗ ವಸ್ತ್ರಾಭರಣಗಳಿದ್ದರೇನು? ಯಾವ ಲೋಭವೂ ಇಲ್ಲದೆ ರತ್ನದ, ಚಿನ್ನದ ಆಭರಣಗಳನ್ನೂ ವಸ್ತ್ರಗಳನ್ನೂ ಬಿಸುಟನು. ವಸ್ತ್ರಾಭರಣಗಳ ಒಪ್ಪವು ದೇಹಕ್ಕಲ್ಲದೆ, ದೇಹವಿಲ್ಲದ ಆತ್ಮನಿಗೆ ಅವುಗಳ ಒಪ್ಪವಿಲ್ಲ ಇದೇನು ಮೋಹ – ಎಂದು ಹೇಮವರ್ಣ ಭರತಯೋಗಿಯು ವಸ್ತ್ರಾಭರಣಗಳನ್ನು ಎಸೆದು ಒಪ್ಪಿದನು. "ನನಗೆ ಕೋಟಿ ಸೂರ್ಯಚಂದ್ರರ ಪ್ರಭೆಯಿರುವುದು. ಇವುಗಳೆಲ್ಲ ಕೀಟದ ದೇಹಕಾಂತಿ" ಎಂದು ಅವುಗಳನ್ನು ದಿಕ್ಕುದಿಕ್ಕಿಗೆ ಎಸೆದನು. ಆದಿಜಿನನಿಗೆ ಜಡೆಯಿದ್ದೂ ಕರ್ಮಕ್ಷಯವಾಗಿದೆ. ಅದೇ ರೀತಿ ಭರತಯೋಗಿಗೂ ಕೂದಲಿದ್ದರೆ ದೋಷವಿಲ್ಲ, ಆದರೂ ಉಪಚಾರಕ್ಕಾಗಿ 'ಲೋಚು' ಮಾಡಿಕೊಂಡನು. ಅವನು ಕೇಶದ ಲೋಚನೊಂದಿಗೆ ಮನಸ್ಸಿನ ಕ್ಲೇಶಗಳನ್ನೂ ಲೋಚು ಮಾಡಿದನು. ಅನಂತರ ಕಣ್ಣು ಮುಚ್ಚಿ ತನ್ನನ್ನೇ ನೋಡಲು ಸುಪ್ರಕಾಶವಾದ ಚೇತೋಜ್ಞಾನವಾಯಿತು.

ಆಸನದಲ್ಲಿ ಕುಳಿತ ಭರತಯೋಗಿಯು ಮುಚ್ಚಿದ ಕಣ್ಣುಗಳಿಂದ ಮಹಾ ಸಿದ್ಧಬಿಂಬದಂತೆ ಶೋಭಿಸುತ್ತಿದ್ದನು. ಹೊಳೆಯುತ್ತಿರುವ ಹೊರಗಿನ ಸಾಮಗ್ರಿಯಲ್ಲಿ ಮುನಿಯು ಒಳಗಿನ ಧ್ಯಾನದಲ್ಲಿ ನಿಂತನು. ಅಂಗ ಬೇರೆ, ಆತ್ಮ ಬೇರೆ ಎಂದು ಅನುಭವಿಸುತ್ತ ಅಂತರಂಗ ಸಾಮಗ್ರಿಯಿಂದ ಒಳಗೊಳಗೇ ಭಂಗುರವಾದ ಕರ್ಮಗಳನ್ನು ಅಷ್ಟಾಂಗ ಯೋಗಗಳ ಅನುಭವಗಳಿಂದ ಭಂಗಿಸುತ್ತಿದ್ದನು. ಅವನು ತನ್ನ ನಿಜವನ್ನೇ ನೋಡುತ್ತಿದ್ದನು. ಆಗ ಕರ್ಮಗಳು ಕೆಟ್ಟು ಕಂಡ ಕಡೆಗೆ ಓಡುತ್ತಿದ್ದುವು. ಅವನ ಆತ್ಮನಲ್ಲಿ ಸುಜ್ಞಾನವೂ ಸುಪ್ರಭೆಯೂ ಆನಂದವೂ ಒಂದರೊಡನೆ ಒಂದು ಕೂಡಿಕೊಂಡು ಮೂಡುತ್ತಿದ್ದುವು. ಭೂಮಿಯನ್ನು ಅಗೆದಷ್ಟಕ್ಕೆ ಒಳಗೆ ಹೂಳಿಟ್ಟ ಒಂದು ಮಾಣಿಕದ ಬೊಂಬೆ ಕಾಣುವಂತೆ, ಧ್ಯಾನಿಸುತ್ತಿದ್ದ ಹಾಗೆ ಕರ್ಮದ ಧೂಳು ಕದಲಿದಷ್ಟಕ್ಕೆ, ಒಳಗೆ ಆತ್ಮನು ಕಾಣುತ್ತಿದ್ದನು. ತೋಳಿನಷ್ಟು ತೋರದ ಮಳೆ ಸುರಿಯುತ್ತಿರುವಾಗ, ಮಣ್ಣಿನ ಗಿರಿಯು ಗಲಗಲನೆ ಜರಿದು ಬೀಳುವಂತೆ ಪರಮ ಹಂಸ ಧ್ಯಾನದ ಮೂಲಕ ಭೇದಿಸಿದಷ್ಟಕ್ಕೆ ಕರ್ಮದ ಪಿಂಡವು ಜರಿದು ಬೀಳುತ್ತಿತ್ತು. ಕಟ್ಟಿಗೆಯ ರಾಶಿಗೆ ಹಿಡಿದ ಬೆಂಕಿಯು ಉರಿಯುತ್ತ ಜ್ವಾಲೆಯು ಮೇಲೇರಿ ಹೋಗುವಂತೆ ಒಟ್ಟುಗೂಡಿದ್ದ ಕರ್ಮಗಳು

ಕ್ಷಣಕ್ಷಣಕ್ಕೆ ಮೇಲೇರುತ್ತಿದ್ದಂತೆ ಅವನ ಧ್ಯಾನಾಗ್ನಿಯ ಜ್ವಾಲೆಯೂ ತೀಕ್ಷ್ಣವಾಗುತ್ತಿತ್ತು ಧೀರನಾದ ದೀಕ್ಷೆಗೊಂಡವನು, ಮನಸ್ಸು ಸಂಸಾರವೆಂಬ ವೈರಿಗೆದುರಾಗಿ ದೇಹವೆಂಬ ಹೋಮಕುಂಡದಲ್ಲಿ ಘೋರ ಕರ್ಮಗಳ ಕಟ್ಟಿಗೆ ರಾಶಿ ಹಾಕಿ ಧ್ಯಾನಾಗ್ನಿಯಿಂದ ಉರಿಸಿ ಮಾರಣಹೋಮ ಮಾಡಿದನು.

ಎರಡು ಕಣ್ಣುಗಳನ್ನು ಮುಚ್ಚಿ, ಸುಜ್ಞಾನವೆಂಬ ದೊಡ್ಡ ಉರಿಗಣ್ಣನ್ನು ತೆರೆದು ಆತ್ಮ ಶಿವನು ವೈರಿಗಳಾದ ಕರ್ಮದನುಜರಿರುವ ಮೂರು ಅಂಗಗಳ ತ್ರಿಪುರಗಳನ್ನು ಸಂಹಾರ ಮಾಡುತ್ತಿದ್ದನು. ಪ್ರಳಯ ಕಾಲದ ಅಗ್ನಿಯಿಂದ ಭೂಮಿಯೇ ಬೆಂದು ಕುಪ್ಪಳಿಸುವಂತೆ ತಪೋಧನ ಭರತ ಯೋಗೀಂದ್ರನ ಒಳಗಿನ ಧ್ಯಾನಾಗ್ನಿಯಿಂದ ಸರ್ವಾಂಗಗಳಿಂದಲೂ ಕರ್ಮವು ಬೆಂದು ಇಳಿಯುತ್ತಿತ್ತು. ಅಂದು ಕವಾಟವನ್ನೊಡೆದು ಉರಿಯುತ್ತಿರುವ ಅಗ್ನಿಯನ್ನು ಕುದುರೆಯನ್ನೇರಿ ನೋಡಿದಂತೆ, ಇಂದು ಕರ್ಮಗಳನ್ನು ಸುಡುತ್ತಿರುವ ಅಗ್ನಿಯ ಭಾವವನ್ನು ನಿಂತು ನೋಡುತ್ತಿದ್ದನು. ಅಂದು ಗುಹೆಯ ಕತ್ತಲೆಯನ್ನು ಕಾಕಿಣಿಯಿಂದ ನಿವಾರಿಸಿದ ಶೋಭೆಯನ್ನು ಇನ್ನೂ ಬಿಟ್ಟಿಲ್ಲವೆಂಬಂತೆ ಧ್ಯಾನದ ಮಹಾಕಾಂತಿ ದೇಹದೊಳಗೆ ಬೆಳಗುತ್ತಿತ್ತು. ಭರತ ಚಕ್ರಿಯು ಚಕ್ರವನ್ನು ತೊರೆದು ಯೋಗೀಂದ್ರನಾದೊಡನೆ ಧ್ಯಾನಚಕ್ರವು ಉದಯಿಸಿತು. ಇನ್ನು ಅವನು ಮುಕ್ತಿಯನ್ನು ಆಳುವನು. ಇಂದ್ರನೇ ಮೊದಲಾದವರು ವಂದಿಸುವರು. ಭರತೇಶನಿಗೆ ಯಾವಾಗಲೂ ಸಂಪತ್ತೇ. ಭರತಯೋಗೀಂದ್ರನು ಹಂಸನಾಥನನ್ನು ನೋಡುತ್ತಿದ್ದನು. ಕೂಡಲೇ ಕರ್ಮವು ಧ್ವಂಸವಾಗುತ್ತಿತ್ತು. ಮುನಿಕುಲೋತ್ತಂಸನ ಈ ಧ್ಯಾನದ ವಿಕ್ರಮಕ್ಕನುಗುಣವಾಗಿ ಕಾಂತಿಯು ಪ್ರಜ್ವಲಿಸುತ್ತಿತ್ತು. ಕಟ್ಟವನ್ನು ಒಡೆಯಲು ಕೂಡಲೇ ನೀರು ಬಳಬಳನೆ ಇಳಿದು ಹೋಗುವಂತೆ ಬಂಧ ಒಡೆದೊಡನೆ ದೇಹದಲ್ಲಿ ತುಂಬಿದ್ದ ಕರ್ಮಜಲವು ದೇಹದಿಂದ ಇಳಿದುಹೋಯಿತು. ತಲೆಯಲ್ಲಿ ಹೊತ್ತಿರುವ ಮೂಡೆಗಳ ಕಟ್ಟು ಸಡಲಿದಾಗ ಧಾನ್ಯಗಳ ಒಕ್ಕು ನೆತ್ತಿಗೆ ಹಗುರಾಗುವಂತೆ ಕರ್ಮವು ಅತ್ತಿತ್ತ ಕದಲಿದಷ್ಟಕ್ಕೆ ಒಳಗೆ ಮನಸ್ಸಿಗೆ ಹಗುರವಾಗತೊಡಗಿತು. ಹಲವು ತೆರೆಗಳ ಮಧ್ಯದಲ್ಲಿರುವ ದೀಪದ ಪ್ರಭೆಯು ತೆರೆಯು ತೊಲಗಿದಷ್ಟಕ್ಕೆ ಹೆಚ್ಚು ಹೆಚ್ಚಾಗಿ ಹೊಳೆದು ತೋರುವಂತೆ ಪೈಸರಿಸಿದಂತೆ ಹಂಸಕಳೆಯು ದೇಹದ ಹೊರಗೂ ಬಿಂಬಿಸಿತು.

ಭರತಯೋಗೀಂದ್ರನು ಮೊದಲು ಆತ್ಮನೊಳಗಿರುವ ಅಕ್ಷರಗಳನ್ನು ಹೊಸ ರತ್ನ ಮಾಲೆಯಂತೆ ನೋಡುತ್ತಿದ್ದನು. ಆ ಕ್ಷಣದಲ್ಲೇ ಆ ಅಕ್ಷರಗಳು ಮಾಸಿಹೋದುವು. ಅದರೊಂದಿಗೆ ವಿಮಲವಾದ ಹಂಸವನ್ನು ನೋಡುವ ಕಲೆಯೇ ಹೆಚ್ಚಾಯಿತು. ಮೊದಲು ಹೆಚ್ಚಿನ ಪ್ರಭೆಯಿಲ್ಲದ್ದರಿಂದ ಧರ್ಮ ಧ್ಯಾನವು ಭಿನ್ನಾಕ್ಷರಗಳಾಗಿ ತೋರಿತು. ಆದರೆ ಅವು ಈಗ ಇಲ್ಲ. ಪರಮ ಶುಕ್ಲ ಧ್ಯಾನದಲ್ಲಿದ್ದುದರಿಂದ ಹಂಸನ ಉನ್ನತವಾದ ಕಳೆಯೇ ರಾರಾಜಿಸಿತು. ಚಂದ್ರನ ಮುಂದೆ ಶೋಭಿಸುವ ನಕ್ಷತ್ರಗಳು ಸೂರ್ಯನ ಮುಂದೆ ಶೋಭಿಸುತ್ತವೆಯೇ? ಅಂತೆಯೇ ಅಕ್ಷರಪ್ರಭೆಯಳಿದು ಅನುಪಮವಾದ ಆತ್ಮಕಾಂತಿ ಹೊಳೆಯಿತು. ವಿವಿಧವಾಗಿರುವ ಶಬ್ದಬ್ರಹ್ಮವು ಪರಬ್ರಹ್ಮದಲ್ಲಿ ಲೀನವಾಯಿತೋ

ಎಂಬಂತೆ ವ್ಯವಹಾರವು ಜಾರಿ, ನಿಶ್ಚಯವು ಏರಿ, ಹಂಸಾನುಭವದಲ್ಲಿದ್ದನು. ಅದರಿಂದವನು ಹಂಸಯೋಗಿಯಾದನು.

ದಿವ್ಯ ಯೋಗಿ ಭರತೇಶನು ಧ್ಯಾನ, ಧ್ಯೇಯ, ಧ್ಯಾನಿಸುವವ ಮತ್ತು ಧ್ಯಾನದ ಫಲವೆಂಬ ಇವು ನಾಲ್ಕೂ ತಾನೊಬ್ಬನೇ ಆಗಿ ತನ್ನಲ್ಲಿಯೇ ತನ್ಮಯನಾಗಿದ್ದನು. ಭೇದ ಸತ್ಕಾರಕವೆಂಬುದು ಬಂಧನ, ನಿರ್ಭೇದ ಸತ್ಕಾರಕವೆಂಬುದೇ ಮೋಕ್ಷ. ಆ ಕಲೆ ವೇದಸಿದ್ಧಾಂತಕ್ಕೆ ಅಸಾಧ್ಯವು. ಆ ಕಲೆಯಲ್ಲಿ ಸ್ವಸಂವೇದನಾಗವ್ಯನಾಗಿ ಭರತಯೋಗೀಂದ್ರನು ಮೆರೆದನು. ಅದನ್ನು ನುಡಿಗಳಲ್ಲಿ ತೋರಿಸುವುದು ಹೇಗೆ? ನುಡಿಯು ಪುದ್ಗಲವಾಗಿ ಜಡವಾಗಿದೆ. ಹಂಸವೇ ಜ್ಞಾನಿ. ಕೊನೆಯಲ್ಲಿ ಹಂಸವನ್ನು ಹಂಸನಿಂದಲೇ ತಿಳಿದನು. ಅದರ ಅನುಭವವನ್ನು ಹಿಡಿದ ಆತ್ಮನಿಗೆ ಆತ್ಮಸಿದ್ಧಿಯಾಗುವುದು. ಶಿರದಿಂದ ಚರಣಗಳವರೆಗೆ ವಿಮಲ ಸುಜ್ಞಾನವೇ ಪುರುಷರೂಪವಾಗಿ ಮೈತುಂಬಿ ಹೊರೆಯೇರುತ್ತಿತ್ತು. ಆ ಧ್ಯಾನದ ಸೊಬಗನ್ನು ಭರತಯೋಗೀಂದ್ರನೇ ಬಲ್ಲನು. ಅನ್ಯರಿಗೆ ಅರಿಯುವಂತಿಲ್ಲ. ನಗುವಂತೆ ಮುಖವಿತ್ತು; ಅಲುಗಾಡದೆ ದೇಹವಿತ್ತು, ಹೊರಸೂಸುತ್ತಿತ್ತು ಹೊಸ ಕಾಂತಿ. ಗುಣಸಂಪನ್ನನಾದ ಭರತಯೋಗೀಂದ್ರನನ್ನು ನೋಡಿ, ಆಶ್ಚರ್ಯದಿಂದ ಜನರೆಲ್ಲ ತುಟಿಯಲ್ಲಾಡಿಸದೆ ಮೌನವಾಗಿದ್ದರು. ಕರ್ಮವು ಬಳಬಳನೆ ಉದುರುತ್ತಿತ್ತು, ಒಳಗೆ ಚಿತ್‌ಪ್ರಭೆಯು ಚಳಚಳನೆ ಏರುತ್ತಿತ್ತು, ಬಾಲಸೂರ್ಯನಲ್ಲಿ ಐಕ್ಯವಾದಂತೆ ಯೋಗಿರತ್ನನಾದ ಭರತೇಶನು ಪರಮಾತ್ಮಕಳೆಯಲ್ಲಿದ್ದನು.

ನಾಡೆಲ್ಲವನ್ನೂ ಸುತ್ತಾಡಿ ತನ್ನ ಮನೆಯನ್ನು ಹೊಕ್ಕು ಆಲಸ್ಯ ಕಳೆಯುವವನಂತೆ, ಇಳೆಯ ಚಿಂತೆಯಲ್ಲೇ ಆಡಿದ ಭರತೇಶನೀಗ ತನ್ನ ಆತ್ಮದಲ್ಲೇ ನಿಂತು ವಿಶ್ರಾಂತಗೊಂಡನು. ಮೊದಲು ಅಸ್ಥಿರವಾದ ಈ ಭವನ, ಮೂರು ಲೋಕಗಳೆಂಬ ಪರಸ್ಥಾನಗಳಲ್ಲಿ ಆಡಿ, ಅವುಗಳೆಲ್ಲವೂ ದುಸ್ಸಾಧನಗಳೆಂದು ಅವುಗಳನ್ನು ತೊರೆದು, ಈಗ ಆತ್ಮರೂಪವೆಂಬ ಸ್ವಸ್ಥಾನದಲ್ಲಿರುವನು. ಭರತಚಕ್ರಿಗೆ ಮೂರು ಲೋಕಗಳಲ್ಲಿ ಸ್ಥಾನಲಾಭವು ಬಹಳ ಕಾಲದವರೆಗೂ ಹಲವು ಭಾರಿ ದೊರೆತಿದೆ. ಈಗ ಕಾಲಾನುಕಾಲಕ್ಕೆ ಆತ್ಮ ಸ್ಥಾನವು ದೊರಕಿತು. ಈ ಲಾಭಕ್ಕೆ ಅಧಿಕವಾದ ಲಾಭವಿಲ್ಲ. ಸಾಲುಸಾಲಾಗಿರುವ ನಾಡುಗಳನ್ನು ಈ ಮೊದಲು ಆಳಿದನು. ಅವುಗಳು ಸಾಯುವಂತಹ ಜೀವನವನ್ನೇ ತೋರಿ ಜಾರಿಹೋದುವು. ಆದರಿಂದ ಅವು ಕೀಳಾದ ನಾಡುಗಳೆಂದು ಅವುಗಳನ್ನು ತೊರೆದು ಈಗ ಆತ್ಮಕಳೆಯನ್ನು ಮೀರಿದ ನಾಡಿನಲ್ಲಿರುವನು. ಆ ನಾಡು ಇಂದು ತಾನು ತಾಳಿರುವ ಮೈಯಷ್ಟು ವಿಸ್ತಾರವಾಗಿರುವುದು. ನಾಳೆ ಮೂರು ಲೋಕದಷ್ಟು ವಿಸ್ತಾರವಾಗುವುದು. ಪರಮಾತ್ಮ ಸಾಮ್ರಾಜ್ಯವೇ ಸಾಕು. ಯೋಗಿರಾಜನೀಗ ಈ ನಾಡನ್ನು ಆಳುತ್ತಿರುವನು. ಮೊದಲು ಧರೆಯನ್ನು ಮಂತ್ರಿ ಸೇನಾಪತಿಗಳಿದ್ದು ಪರತಂತ್ರದಲ್ಲಿ ಆಳುತ್ತಿದ್ದನು. ಈಗ ಸಂತೃಪ್ತಿಪಡೆದ ಆತ್ಮರಾಜ್ಯವನ್ನು ತಾನೇ ಸ್ವತಂತ್ರದಲ್ಲಿ ಆಳುತ್ತಿರುವನು.

ಭರತೇಶನು ತನ್ನ ರಾಜ್ಯವನ್ನು ಎರವಿನ ರಾಜ್ಯವೆಂದು ಆಳಿದನು. ತನ್ನನ್ನು ಮಾತ್ರ ಸ್ಥಿರವೆಂದು ಕಂಡಿದ್ದನು. ಅವನು ಎರವು ಎಂದುದು ಎರವಾಯಿತು. ಸ್ಥಿರವು ಎಂಬುದು

ಸ್ಥಿರವಾಯಿತು. ಭರತೇಶನು ಕಂಡುದುದರಲ್ಲಿ ಹುಸಿಯುಂಟೆ? ತಾಯಿಯ ಪ್ರೀತಿ, ತಂದೆಯ ಪ್ರೀತಿ, ಮಕ್ಕಳ ಪ್ರೀತಿ, ಸ್ತ್ರೀಯರ ಪ್ರೀತಿ ಮುಂತಾದುವುಗಳನ್ನೆಲ್ಲ ನೋಡುವಾಗ ಮಾಯೆಯೆಂದೇ ನೋಡುತ್ತ ಆತ್ಮನಲ್ಲಿರುತ್ತಿದ್ದನು. ಭರತ ಚಕ್ರಿಯು ಕಂಡುದು ಹುಸಿಯಲ್ಲ, ಲೋಕ ಮೆಚ್ಚುವಂತೆ ಬಾಹ್ಯದಲ್ಲಿ ಪ್ರೀತಿಸುತ್ತ ಏಕಾಂತದೊಳಗೆ ಆತ್ಮಸುಖವನ್ನು ಸ್ವೀಕರಿಸುತ್ತಿದ್ದನು. ಅಂದಿನ ಸುವಿವೇಕವು ಇಂದಿಗೆ ಫಲವಾಯಿತು. ಒಂದಿಷ್ಟೂ ಪರಸಂಗವು ಸೋಂಕದೆ ಕರ್ಮವು ಬೇರೆ, ಆತ್ಮ ಬೇರೆಂದು ತಣಿದು, ತನ್ನಲ್ಲಿ ತಾನೇ ನಿಂತು ಭರತಯೋಗೀಂದ್ರ ನೋಡುತ್ತಿದ್ದನು. ಕರ್ಮದ ಗಣವೇ ಜಾರುತ್ತಿತ್ತು. ದೇಹ, ಚಿತ್ತ ಇಂದ್ರಿಯಗಳು, ವಚನ ಮತ್ತು ಕರ್ಮಗಳು ಬೇರೆ — ಇಂದ್ರನಿಂದ ಆರಾಧಿಸಲ್ಪಟ್ಟ, ಆತ್ಮ ಬೇರೆಂದು ತಾನು ಮಾತ್ರ ದ್ರವ್ಯಭಾವದಲ್ಲಿ ನಿರ್ಮಲನೆಂದು ಅವನು ತನ್ನನ್ನೇ ನೋಡುತ್ತಿದ್ದನು. ಶುದ್ಧನೆಂದು ನೋಡಿದರೆ ಆತ್ಮನು ಶುದ್ಧನಾಗಿ ಕಾಣುವನು. ಬದ್ಧನೆಂದು ನೋಡಿದರೆ ಬದ್ಧನಾಗಿ ಕಾಣುವನು. ಸಿದ್ಧಾಂತಕ್ಕೆ ಅದು ತೋರಲಾರದು. ಆತ್ಮನಿಂದ ಆತ್ಮನನ್ನು ನಿಬದ್ಧಿಸಲು ಆ ಕಲೆಯು ಕಾಣುವುದು. ಶಾಸ್ತ್ರಗಳು, ಆತ್ಮನ ಗುಣಗಳನ್ನು ಸೂಚಿಸುವುವು. ಅಲ್ಲದೆ ಯೋಚಿಸಿ ಸ್ಥಿರವನ್ನು ಹೇಳುವುವು. ಆದರೆ ಅನಿರ್ವಚನೀಯ ವಸ್ತುವನ್ನು ವಚನಗಳಿಂದ ಹೇಗೆ ತಿಳಿಸುವುದು? ಧ್ಯಾನಕ್ಕೆ ತೊಡಗಿದಾಗೊಮ್ಮೆ ಕರ್ಮ ಬೇರೆ, ತಾನು ಬೇರೆಂದು ಯೋಚಿಸಿದನು. ಆದರೆ ಧ್ಯಾನದಲ್ಲಿ ನಿಂತ ಮೇಲೆ ಆ ಚಿಂತೆಯು ಹೋಯಿತು. ಆಗ ಭರತ ಯೋಗೀಂದ್ರನು ಆತ್ಮದಲ್ಲೇ ತಲ್ಲೀನನಾಗಿದ್ದನು. ಗುರುಹಂಸನಾಥನೆಂಬ ನಾನೆಂಬ ಎರಡು ಸಂಕಲ್ಪಗಳಿದ್ದುದು ಮತ್ತೆ ಎರಡೂ ನಾಶವಾಗಿ ನಿರ್ವಿಕಲ್ಪದಲ್ಲಿ ಹೊಳೆಯುವ ಯೋಗಿಯಾಗಿ ತನ್ನಲ್ಲೇ ತಾನಿದ್ದನು.

ಭರತ ಯೋಗೀಂದ್ರನು ನಿರ್ವಿಕಲ್ಪ ಯೋಗದಲ್ಲಿದ್ದನು. ಆಗ ಕರ್ಮಗಳ ಸಮೂಹವೇ ಅಧೋಮುಖವಾಗಿ ಕುಸಿದು ಬೀಳತೊಡಗಿದುವು. ಆತ್ಮ ವಿಜ್ಞಾನವು ಸೊಬಗಿನಿಂದ ಮೇಲ್ಮೊಗವಾಗಿ ಸಾಗಿತು. ಹಿರಿಮೆಯ ಧ್ಯಾನದಲ್ಲಿ ತಪೋಧನವಾದ ಭರತ ಯೋಗೀಂದ್ರನಿರುವಾಗ ಮೂರು ಲೋಕಗಳು ಕಂಪಿಸಿದುವು. ಆಗ ಅವನು ತನ್ನ ಮನಸ್ಸನ್ನು ಮಿಡುಕಲು ಬಿಡದೆ ಅದು ಆತ್ಮನಲ್ಲೇ ಅಡಗಿರುವಂತೆಸಗಿ ನಿಷ್ಕಂಪವಾಗಿ ನಿಂತನು. ಅವನ ಹಂಸ ಧ್ಯಾನಕ್ಕೆ ಮೂರು ಲೋಕಗಳು ಮಿಡುಕಿದುವು!

ಇಂದ್ರನೂ ಅವನ ಸತಿಯೂ, ಮಂಚದಲ್ಲಿ ಕುಳಿತಿದ್ದರು. ಶಚೀದೇವಿ ತನ್ನ ಪತಿಗೊಂದು ಪುಷ್ಪವನ್ನು ನೀಡುತ್ತಿದ್ದಳು. ಮಂಚವು ಅಲುಗಿದಾಗ ಆ ಪುಷ್ಪ ಕೆಳಗೆ ಬಿತ್ತು, ಇಂದ್ರನು ಅದನ್ನೆತ್ತಿಕೊಂಡು, ''ಭರತೇಶನು ಮುನಿಯಾದನಲ್ಲೆ'' ಎಂದು ಆಶ್ಚರ್ಯಪಟ್ಟು ತನ್ನ ಅಂಗನೆಯರೊಡನೆ ಹೇಳಿದನು. ತಾವು ಕುಳಿತಿದ್ದ ಗದ್ದುಗೆಯು ಅಲ್ಲಾಡಿದಾಗ ಫಣೇಂದ್ರನು ತನ್ನ ಸತಿ ಪದ್ಮಾವತಿಯೊಡನೆ ''ಭರತೇಶನು ಮುನಿಯಾದನಲ್ಲೆ'' ಎಂದು ಅವಳನ್ನು ಅಪ್ಪಿಕೊಂಡು ನುಡಿದನು. ನಿಡುಗಲ್ಲಿನ ಮೇಲೊಂದು ಸಿಂಹವಿತ್ತು, ಆ ಕಲ್ಲು ನಡುಗಿದಾಗ ಸಿಂಹವು ತಲೆಕೆಳಗಾಗಿ ಬಿತ್ತು, ಬಿದ್ದ ಸಿಂಹವು ಬಿದ್ದಲ್ಲಿಯೇ ಎದ್ದು ನಿಂತು ಹಾರಿ ಆಚೆಗೆ ಸರಿದು ಒಪ್ಪವಾಗಿ ನಿಂತುಕೊಂಡಿತು.

ಗಾಳಿ ಬೀಸಿದಾಗ ಚಪ್ಪರಕ್ಕೆ ಹಬ್ಬಿದ ಲತೆಗಳು ಅಲ್ಲಾಡುವಂತೆ ಭೂಮಿ ಅಲ್ಲಾಡಿತು. ನಾಡು ಬೀಡುಗಳಲ್ಲಿದ್ದವರೂ ಆಶ್ಚರ್ಯಪಟ್ಟರು. ಭರತ ಯೋಗೀಂದ್ರನ ಧ್ಯಾನಶಕ್ತಿಯು ಹಾಗಿತ್ತು. ಭೋಗದಲ್ಲಿದ್ದು ವ್ಯಂತರರನ್ನೂ, ಖೇಚರರನ್ನೂ ತಲೆಬಾಗಿಸಿಕೊಂಡ ಪರಾಕ್ರಮಿ ಯೋಗಕ್ಕೆ ಮುಖ ಮಾಡಿದಾಗ ಮೂರು ಲೋಕಗಳು ಅಲ್ಲಾಡದೆ ಸುಮ್ಮನಿರುವುದು ಸಾಧ್ಯವೇ?

ಎಡೆಬಿಡದೆ ಚಿತ್ತಭೇಯು ಏರುತ್ತಿತ್ತು, ಕರ್ಮ ರೇಣುವು ಕೆಳಗೆ ಬೀಳುತ್ತಿತ್ತು, ಅದನ್ನು ಶ್ರೇಣಿಯಾರೋಹಣವೆನ್ನುವರು. ಆಗಮದಲ್ಲಿ ಹದಿನಾಲ್ಕು ಗುಣಸ್ಥಾನಯೋಗವನ್ನು ಹೇಳುತ್ತಾರೆ. ಅಧ್ಯಾತ್ಮದಲ್ಲಿ ಅವುಗಳನ್ನೇ ಭಾಗಿಸಿ ಮೂರು ಗುಣಸ್ಥಾನವೆಂದು ಪ್ರಯೋಗಿಸುವರು. ಬಹಿರಾತ್ಮನೆಂದು ಮೂರು ಮಾತಿನಲ್ಲಿ ಅಡಗಿಸುತ್ತಾರೆ. ಆದರೂ ಅದರಲ್ಲಿ ಹದಿನಾಲ್ಕು ತಾಣಗಳಿವೆ. ಮೊದಲು ಮೂವರು ಬಹಿರಾತ್ಮರು. ಆಮೇಲೆ ಒಂಬತ್ತು ಅಂತರಾತ್ಮರು ನಡುವಿನಲ್ಲಿರುವರು. ಕೊನೆಯಲ್ಲಿ ಇಬ್ಬರು ಪರಮಾತ್ಮರು. ಈ ಹದಿನಾಲ್ವರೂ ಮೊದಲಿನ ಮೂವರಲ್ಲಿ ಅಡಕವಾಗಿರುವರೆಂಬುದೇ ಸರಿಯಾದುದು. ಭರತೇಶನು ಬಹಿರಾತ್ಮನಲ್ಲ; ಅವನು ಅಂತರಾತ್ಮನು. ಅವನು ತನ್ನ ಸಾಹಸದಿಂದಲೇ ಪರಮಾತ್ಮನಾದನು. ಆಗಮವು ಅಧ್ಯಾತ್ಮ ಮಹಿಮೆಯಲ್ಲಿ ಅಡಗಿರುವುದು. ಭರತೇಶನು ರಾಜಸಂಪತ್ತನ್ನು ತೊರೆದು ಯೋಗಿಯಾದರೂ ರಾಜಮೋಡಿಯನ್ನು ಬಿಟ್ಟಿರಲಿಲ್ಲ. ತೇಜಸ್ವಿಯಾದ ಅವನು ಕರ್ಮದ ಸೇನೆಗೆದುರಾಗಿ ತಾಗಿದನು. ವಿಶ್ವತೋನೇತ್ರನಾದ ಭರತೇಶನು ಅಶ್ವರತ್ನವನ್ನು ಬಿಟ್ಟಿರೂ ಚಿತ್ತವೆಂಬ ಅಶ್ವವನ್ನೇರಿ, ಧ್ಯಾನವೆಂಬ ಖಡ್ಗವನ್ನು ಧರಿಸಿ, ವಿಶ್ವಕರ್ಮದ ಮೇಲೇರಿ ಹೋದನು. ಮುಖವನ್ನು ತೋರಿಸಿದಾಗಲೇ ಮೂರು ಆಯುಷ್ಯಗಳು ತಡೆದುವು. ಅದರಿಂದ ಸುಖಿಯಾದ ಭರತ ಯೋಗೀಂದ್ರನು ತನ್ನ ಚಿತ್ತಾಶ್ವವನ್ನು ಮುಂದಕ್ಕೆ ದೂಡಲು ಅಗ್ನಿಯನ್ನು ಕಂಡ ರಸದಂತೆ ಕುಗತಿ ಮುಂತಾದ ದುರ್ಮುಖಿ ಕರ್ಮಗಳು ಹದಿನಾರೂ ಜರಿದು ಹೋದುವು. ಮುಂದೊತ್ತುವಾಗ ಮೊದಲು ಎಂಟು ಕಷಾಯಗಳು ಬಿದ್ದುವು. ಕ್ಲೀಬನೆಂಬ, ಸ್ತ್ರೀವೇದವೆಂಬ ಎರಡು ಮಾತ್ರ ನಿಂತಿರಲು, ಛೀಯೆಂದು ಚೆದರಿಸಿದನು. ಆ ಕಲಿಯು ತನ್ನ ಖಡ್ಗದಿಂದ ಘಾತಿಸಿದಾಗ ಹೆಣ್ತೂ, ಷಂಡತನವೂ ಸರಿದುಹೋಯಿತು. ಭರತೇಶನು ಮುಂದಕ್ಕೆ ಏರಿದನು. ಆಗ ಅರತಿ, ಶೋಕ ಮುಂತಾದ ಆರು ಕಷಾಯಗಳು ಜಾರಿದುವು. ರಭಸದಿಂದ ಮತ್ತೂ ಮುಂದೊತ್ತಿದಾಗ ಪುಂವೇದವೂ ಕಂಗೆಟ್ಟು ಹಾರಿ ಹೋದುವು. ಮುನಿಸುಗಳು ಆ ವೀರನಿಗೆ ಒಮ್ಮೊಮ್ಮೆಯೂ ಎದುರು ತಲೆದೋರದಂತೆ ಓಡಿಹೋದುವು.

ಆದರೆ ಲೋಭವು ಮಾತ್ರ ನಿಂತಿತ್ತು, ಅದನ್ನು ಮಾಯೆಯೂ ಕೂಡಿ ಕೊಂಡಿತು. ಅದನ್ನು ಭರತೇಶನು ಮುಂದೊತ್ತಿದನು. ಆಗ ಲೋಭವು ಸಂದುಹೋಯಿತು. ಕೂಡಲೇ ಯೋಗಿಯು ಮೋಹರಾಕ್ಷಸನ ಆಯುಷ್ಯವನ್ನೇ ನಾಶಮಾಡುವಂತೆ ತುಳಿದೋಡಿಸಿ, ವಿಜಯಿಯಾದನು. ಭೇದ ರೋಧಗಳು ನಾಲ್ಕು; ಅವಧಿ ಲೋಚನದ ಒಂದು ರೋಧವು ಉಳಿದಿತ್ತು, ಉಳಿದ ಪ್ರಾಧೂರ್ತ ಪ್ರಕೃತಿಯನ್ನು ಎರಡು ಪೆಟ್ಟಿನಿಂದ ಒತ್ತಿ ಬೋಧಿಸುವೆನೆಂದು ಭರತಯೋಗೀಂದ್ರನು ಅನುವಾದನು. ಪ್ರಚಲೆಯೆಂಬ

ನಿದ್ರೆಯನ್ನೊಮ್ಮೆ ಧ್ಯಾನಖಡ್ಗದಿಂದ ಹೊಡೆದು ಪ್ರಚುರವಾಗಿರುವ ಐದು ಅಂತರಾಯಗಳನ್ನೂ ನಾಲ್ಕು ರೋಧಗಳನ್ನೂ ಒಂದೇ ಪೆಟ್ಟಿನಲ್ಲಿ ಹೊಡೆದು ಹಾಕಿದನು. ಅಷ್ಟರಲ್ಲಿ ಅರುವತ್ತ ಮೂರು ಕರ್ಮಗಳೂ ಜಾರಿಹೋದುವು. ಅದರಿಂದ ಅಂತರಾತ್ಮತೆಯನ್ನು ಮೀರಿ ನಿಂತನು ಭರತ ಯೋಗೀಂದ್ರನು. ಕೂಡಲೇ ಪರಮಾತ್ಮ ಸಂಪತ್ತು ತೋರಿತು. ಈಗ ಅವನು ಮುನಿಯಲ್ಲ, ಧೀರನು. ಆ ಕ್ಷಣದಲ್ಲೇ ಜಿನನಾದನು.

ಮನಸ್ಸು ವಾಹನವೆಂದೂ, ಧ್ಯಾನವೆಂದೂ, ಧ್ಯಾನವು ಖಡ್ಗವೆಂದೂ ಮುನಿಯು ಹೊಡೆದು ಮೇಲೇರಿದನೆಂದೂ ಹೇಳುವುದೆಲ್ಲ ಒಂದು ವಿಶೇಷ ರಚನೆಯಾಗಿದೆ. ತಾನು ತನ್ನನ್ನೇ ದಿಟ್ಟಿಸಿದರೆ ಕರ್ಮ ತಾನಾಗಿ ಹನಿಹನಿಯಾಗಿ ಕರಗಿ ಹೋಗುತ್ತದೆಯೆಂಬುದು ಸಹಜವಾದ ಅರ್ಥ. ಇಷ್ಟೆಲ್ಲವನ್ನು ಬರೆಯುವುದಕ್ಕೆ ಎಷ್ಟು ತಡವಾಗಬಹುದು. ಆದರೆ ಕರ್ಮವು ನಿರ್ಜರೆಯಾದ ಕಾಲವನ್ನು ಯೋಚಿಸಿ ನೋಡಿದರೆ, ಎರಡು ಗಳಿಗೆಗೆ ಒಂದಿಷ್ಟು ಕಡಮೆಯಲ್ಲದೆ ಹೆಚ್ಚಲ್ಲ. ಪರಮಾತ್ಮ ಯೋಗಶಕ್ತಿಯು ಅಷ್ಟು ಗಹನವಾದುದು. ನಾಲ್ಕು ಘಾತಿಗಳು ಅಳಿದಾಗ ಅನಂತ ಚತುಷ್ಟಯದ ಉದ್ಭೂತಿಯಾಯಿತು. ಅಲ್ಲಿ ಮತ್ತೆ ಐದು ಮಾತನ್ನು ಕೂಡಿಸಿ ಒಂಬತ್ತು ಲಬ್ಧಿಯೆಂದು ಹೇಳುತ್ತಾರೆ. ನಿರಂಜನನಾಗಿದ್ದ ಭರತಜಿನನಿಗೆ ಆ ವಿಭೂತಿಯು ಆಯಿತು.

ಕೈವಲ್ಯ ಸುಜ್ಞಾನ, ಕೈವಲ್ಯ ದರ್ಶನ, ಕೈವಲ್ಯ ಸುಖಶಕ್ತಿಯೆಂಬ ಅನಿವಾರ್ಯವಾದ ಅನಂತ ಚತುಷ್ಟಯಶ್ರೀಯು ಭರತಜಿನನ ವಶವಾದಳು. ಮದ, ನಿದ್ರೆ, ಹಸಿವು, ಮರಣ, ತೃಷೆ ಮೊದಲಾದ ಹದಿನೆಂಟು ದೋಷಗಳೂ ಜಾರಿದುವು. ನರರ, ಉರಗರ ಹಾಗೂ ದೇವತೆಗಳ ಅಗಣಿತವಾದ ಸುಖವನ್ನೂ ಮೀರಿದಂತಹ ನಿಜವಾದ ಸುಖವು ಅವನಿಗೆ ಲಭಿಸಿತು. ಆಗ ಅವನು ಮೂರು ಲೋಕಗಳ ಒಳಗನ್ನೂ, ಹೊರಗನ್ನೂ ಕಾಣುವಷ್ಟು ಒಮ್ಮೆಲೆ ಕಂಡನು. ಕಂಡಂತೆ ಅವುಗಳನ್ನು ಅರಿತುಕೊಂಡನು. ಮಣ್ಣಿನ ಬಟ್ಟಲೊಂದನ್ನು ಎತ್ತುವ ಹಾಗೆ ಶಕ್ತಿಯ ಜಾಣ್ಮೆಯು ಭರತಜಿನನಲ್ಲಿ ನೆಲೆಯಾಗಿ ನಿಂತಿತು.

ಕವಿದಿರುವ ಕರ್ಮದ ಮುಸುಕು ಅಳಿದಾಗ ಶುದ್ಧಾತ್ಮ ವಸ್ತುವಿನ ಚಿತ್ ಪ್ರಭೆಯು ಹೊರಹೊಮ್ಮಿತು. ಕೋಟಿ ಸೂರ್ಯಚಂದ್ರರ ಪ್ರಕಾಶವೂ ಅವನ ಮೈಯಿಂದ ಉಕ್ಕಿ ಆ ಕ್ಷಣದಲ್ಲೇ ಭುವನಗಳೆಲ್ಲ ತುಂಬಿತು. ಕರ್ಮವು ಸರಿದುಹೋದಂತೆ, ದೇಹವು ಲಘುವಾಗಿ ನಿರ್ಮಲ ಶಿಲೆಯಿಂದ ಕೂಡಿತು. ಆಗ ಸ್ವರ್ಣಕಾಂತಿಯ ಗಿರಿಯು ಹಾರುವಂತೆ ಪರಮ ಜ್ಯೋತಿರ್ಮಯನಾದ ಭರತ ಜಿನನು ಆಕಾಶಕ್ಕೆ ಹಾರಿದನು. ವಿಲಸಿತವಾದ ಸಿದ್ಧಲೋಕಕ್ಕೆ ದಾಳಿಯಿಡುವೆನೆಂದು ಬಯಸಿ ಪ್ರಸ್ಥಾನಗೈದಂತೆ ನೆಲದಿಂದ ಮೇಲೆ ಐದು ಸಾವಿರ ಮಾರಿನಲ್ಲಿ ಭರತಪರಮಾತ್ಮನು ನೆಲಸಿದನು. ತೆರೆಯನ್ನು ಹಿಡಿದು ಹತ್ತಿರ ಇದ್ದವರೆಲ್ಲರೂ ಆಗ ದೂರ ಸರಿದರು. ಕೈಗಳನ್ನು ಮುಗಿದು, ತಲೆಯೆತ್ತಿ ನೋಡುತ್ತ ಜಯಜಯವೆನ್ನುತ್ತಿದ್ದರು. ಭರತ ಜಿನೇಂದ್ರನು ಮೇಲೆ ಸ್ಥಿರವಾಗಿದ್ದನು.

''ಹಾ, ನೋಡು, ಭರತೇಶ ಜಿನನಾಥನ ಏಳಿಗೆಯನ್ನು ಕಂಡು ಅವನಿಗೆ ನಾವು ಮಣಿವ'' ಎಂದು ಇಂದ್ರನು ತನ್ನ ಶಚೀದೇವಿಯನ್ನೂ ದೇವತೆಗಳನ್ನೂ ಕೂಡಿಕೊಂಡು ಬಿಳಿ ಆನೆ ಐರಾವತವನ್ನೇರಿ ಬಂದು ಧರೆಗಿಳಿದನು. ಮೇಲಿನಿಂದ ಇಂದ್ರನು

ಬರುತ್ತಿರುವಾಗ ಪಾತಾಳದಿಂದ ಉರಗೇಂದ್ರನು ತನ್ನ ಸತಿಯಾದ ಪದ್ಮಾವತಿಯನ್ನೂ ತನ್ನ ಉರಗ ಪರಿವಾರವನ್ನೂ ಕೂಡಿಕೊಂಡು ದೇವತೆಗಳ ವಾದ್ಯಘೋಷವು ಮೊಳಗುತ್ತಿರಲು ಬಂದನು. 'ಜಯ ಜಯ ಭರತ ಜಿನೇಶ್ವರ, ಜಯ ಜಯ ಭವರೋಗ ವೈದ್ಯ, ಚೆಲುವರ ಚೆಲುವ ಜಯ ಜಯ,' ಎಂದು ಜಯಕಾರ ಮಾಡುತ್ತ ಆಕಾಶದಲ್ಲಿರುವ ಖೇಚರರೂ ಕಿನ್ನರರೂ ಕಿಂಪುರುಷರೂ ದಿಕ್ಕು ದಿಕ್ಕುಗಳಿಂದ ಬರುತ್ತಿದ್ದರು.

ಆ ಕ್ಷಣದಲ್ಲಿ ಕುಬೇರನು ಒಂದು ಗಂಧಕುಟಿಯನ್ನು ನಿರ್ಮಿಸಿ ಅಲ್ಲಿ ತಂದಿಟ್ಟನು. ಆ ಗಂಧಕುಟಿಯಲ್ಲಿ ಬಂಗಾರದ ತಾವರೆಯ ಕರ್ಣಿಕಾಗ್ರವನ್ನು ಒಂದಿಷ್ಟೂ ಸೋಂಕದೆ ಆ ಕಮಲಾಸನದಲ್ಲಿ ಪಾವನ ಪರಂಜ್ಯೋತಿ ಭರತ ಜಿನೇಂದ್ರನು ಒಪ್ಪಿದನು. ಪುರುನಾಥನ ಜೊತೆಯಲ್ಲಿದ್ದ ಜನರೂ ಚಾರಣರೂ ಬೇಗನೆ ಬಂದು ಭರತನಾಥನನ್ನು ಸೇರಿಕೊಂಡರು. ತಂದೆಯ ಸಿರಿ, ಮಗನಿಗೆ ಎಂಬ ಮಾತು ನಿಜವಾಯಿತು. ತಂದೆಯ ಮಂತ್ರಿ ಮಗನನ್ನು ಸೇರುವುದು ಚೆಂದವೆಂಬ ಕ್ರಮವನ್ನು ನೆನೆದು ತೇಜೋರಾಶಿ ಮುನಿ ಬಂದು ಭರತ ಜಿನೇಂದ್ರನಿಗೆ ವಂದಿಸಿ ಅಲ್ಲಿ ಕುಳಿತನು. ದೇವೇಂದ್ರನೂ, ಫಣೀಂದ್ರನೂ, ತಮ್ಮ ತಮ್ಮ ಸತಿಯರೊಂದಿಗೆ ಅವನ ಪಾದಗಳಿಗೆರಗಿ ಹಲವು ರೀತಿಯಿಂದ ಸ್ತುತಿಸಿದರು. ಆ ಪುಣ್ಯಧಾಮನನ್ನು ಪೂಜಿಸಿದರು. ದೇವತೆಗಳ ಸಮೂಹವೇ ಭಕ್ತಿಯನ್ನು ತೋರಿಸಿತು. ಆಗ ಭೂಮಿಯಲ್ಲಿ ನಿಂತವರು ಮುಂದೆ ಹೋಗಿ ಮೆಟ್ಟಿಲುಗಳನ್ನು ಹತ್ತಿದರು. ಅಲ್ಲಿ ಜಿನೇಶ್ವರರಿಗೆಲ್ಲ ಭಕ್ತಿಯಿಂದ ನಮಸ್ಕರಿಸಿದರು. ಸೂರ್ಯನನ್ನು ಕಂಡ ತಾವರೆಯಂತೆ ಅರ್ಕಕೀರ್ತಿ ಆದಿರಾಜರ ಮುಖವು ನಗೆಯಿಂದ ಅರಳಿತು. ಬಳಿಯಲ್ಲಿರುವಂತಹ ಸ್ನೇಹಿತರೆಲ್ಲ ಭರತಜಿನನನ್ನು ಕಂಡು ಸಂತೋಷದಲ್ಲಿ ಮುಳುಗಿದ್ದರು.

ಅಷ್ಟರಲ್ಲಿ 'ಎಲೆ ಸ್ವಾಮಿ, ಪರಮಾತ್ಮ ಸಿದ್ಧಿಯೆಂತು?' ಎಂದು ಇಂದ್ರನು ಕೈಗಳನ್ನು ಮುಗಿದನು. ಆಗ ಭರತ ಸರ್ವಜ್ಞನು ದಿವ್ಯಧ್ವನಿಯಿಂದ ಅದನ್ನು ವಿಸ್ತರಿಸಿದನು.

''ಇಂದ್ರ, ಆತ್ಮಸಿದ್ಧಿಯೆಂಬುದು ಅದೆಂತಹ ಗಣ್ಯವಾದುದೆಂದು ಕೇಳು. ಆತ್ಮ ಬೇರೆ, ಅಂಗ ಬೇರೆಯೆಂದು ಆತ್ಮನಿಂದಲೇ ಆತ್ಮನನ್ನು ನೋಡಿದರೆ ಆತ್ಮ ಸಿದ್ಧಿಯಾಗುವುದು. ಪಂಚಾಸ್ತಿಕಾಯದ ಷಡ್ದ್ರವ್ಯದಲ್ಲಿ ಸಪ್ತ ತತ್ವಗಳಿಂದ ಸ್ಪಷ್ಟವಾದ ನವಪದಾರ್ಥದಲ್ಲಿ ನಮಗೆ ಸ್ವೀಕರಿಸಲು ಯೋಗ್ಯವಾದವುಗಳಿವೆ. ಇನ್ನು ಉಳಿದ ಪ್ರಪಂಚವೆಲ್ಲವೂ ಹೇಯವಾಗಿದೆ. ಚೇತನವಾಗಲೀ, ಅಚೇತನವಾಗಲೀ, ಚೇತನದೊಡನೆ ಅಚೇತನವು ಪ್ರೀತಿಯಿಂದ ಮಿಶ್ರಿತವಾದಾಗ, ಎಲ್ಲವೂ ಪರವಸ್ತುವಾಗುತ್ತದೆ; ಎಲ್ಲವೂ ನಿಜವಸ್ತುವೆನಿಸುತ್ತದೆ. ಪರವಸ್ತುವಿನಲ್ಲಿ ಸುಖಪಡುವವರು ಪರಧರ್ಮಿಯರು. ಆತ್ಮನಲ್ಲಿ ನೆಲೆಗೊಂಡವರೇ ನಿಜವಾದ ಧರ್ಮಿಯರು. ಆದ್ದರಿಂದ ಪರರನ್ನು ಸೇರಿದರೆ ಅದೊಂದು ಬಂಧನ; ತನ್ನನ್ನೇ ಸೇರಿದರೆ ಮೋಕ್ಷವು. ಇದೊಂದು ಪರಮ ರಹಸ್ಯವಾಗಿದೆ.

''ದೇವರು, ತಾಪಸರು ಮತ್ತು ಶಾಸ್ತ್ರಗಳೆಂದು ಅವುಗಳನ್ನು ಎದುರಿಗಿಟ್ಟುಕೊಂಡು ಭಾವಿಸಿದರೆ, ಅದು ದೇಹದ ಸುಖವಾಗುವುದು. ಕೈವಲ್ಯ ಸುಖ ದೊರೆಯಬೇಕಾದರೆ ತನ್ನನ್ನೇ ನೋಡಬೇಕು. ಅನನ್ಯಭಾವನೆಯಿಂದ ಅದು ಆಗುವಂತಿಲ್ಲ. ಧ್ಯಾನವನ್ನು ಸಾಧಿಸುವಾಗ ಅನ್ಯ ವಸ್ತು ಸಂತಾನವು ಮೊದಲೇ ಹೋಗಬೇಕು. ತಾನು ತನ್ನಲ್ಲಿ ನಿಂತ

ಮೇಲೆ ಅನ್ಯಸಂಗವನ್ನು ಏನೂ ಉಳಿಯದಂತೆ ಬಿಡಬೇಕು. ಉಂಡರೇನು? ಉಟ್ಟು ಕೊಂಡರೇನು? ಭೋಗಗೊಂಡರೇನು? ಅವು ತನ್ನವೆಂದು ಯಾರು ಕಾಣುತ್ತಾರೋ ಅವರು ಕೆಡುವರು. ಅವು ತನ್ನವಲ್ಲ; ಅನ್ಯವು ಎಂಬ ದೃಢವಾದ ಮನಸ್ಸಿನಿಂದ ಭೋಗಿಸಿದರೂ ಅದರಿಂದ ಕೆಡುವುದಿಲ್ಲ. ಭಾವನೆಯಿಂದಲೇ ಆತ್ಮನನ್ನು ನೋಡುತ್ತ ಸುಖವನ್ನು ಸೇವಿಸುತ್ತ ಆ ವಸ್ತುವಿನಿಂದ ಹೊರತಾದುವೆಲ್ಲವೂ ಪರಕ್ಕೆ ಸಂಬಂಧಪಟ್ಟವುಗಳೆಂಬ ಭಾವನೆಯಿದ್ದರೆ ಯಾರೂ ಕೆಡುವುದಿಲ್ಲ.

''ಬಿರುಸಾದ ಕರ್ಮಬಂಧಿಗಳು ಬಾಹ್ಯ ಅರ್ಥವನ್ನು ತೊರೆದು ಆತ್ಮ ಸುಖವನ್ನು ಸಾಧಿಸುವರು. ಶ್ರೇಷ್ಠರಾದ ಮೃದುಕರ್ಮಿಗಳು ಬೇರೆಯಿದ್ದರೂ ಅವರು ತಮ್ಮಲ್ಲಿಯೇ ನಮಸ್ಕರಿಸಿಕೊಂಡು ಮೋಕ್ಷ ಪಡೆಯುವರು. ಪುರುನಾಥ ಭುಜಬಲಿನಾಥರು ಈ ಭವವನ್ನು ನಿಷ್ಠುರವಾದ ಯೋಗದಿಂದ ದೂಡಿದರು. ಆದರೆ ನಾವೀಗ ಮೃದುವಾದ ಯೋಗದಿಂದ ಭವವನ್ನು ದಾಟಿದೆವು. ಈ ರೀತಿಯನ್ನು ಪರೀಕ್ಷಿಸಿ ನೋಡು. ಧ್ಯಾನ ಸಾಮರ್ಥ್ಯವನ್ನು ಯಾರು ಬಲ್ಲರು? ತನ್ನನ್ನು ತಾನೇ ನೋಡಿದಾಗ ತನ್ನನ್ನೇ ತಾನು ತಿಳಿಯುವನು. ನಾನಾ ವಿಚಾರಗಳಿಗೆ ಕಟ್ಟಕಡೆಯ ಅನುಸಂಧಾನವು ಈ ರೀತಿಯಲ್ಲಿದೆ; ದಿನದಿಂದ ದಿನಕ್ಕೆ ಆತ್ಮಾನುಭವ ಸುಖವು ಹೆಚ್ಚಿದಷ್ಟಕ್ಕೆ ಶರೀರ ಸುಖವು ತಾನಾಗಿ ತಗ್ಗುವುದು. ಅಂಥವನು ತಾನಾಗಿ ಬಾಹ್ಯವನ್ನು ತೊರೆಯುವನು. ಆತ್ಮನನ್ನು ಸೇರಿಕೊಂಡು ಸುಖಿಯಾಗುವನು. ತನ್ನಲ್ಲಿ ತಾನು ನಿಂತರೆ. ಪಾಪವು ತಾನಾಗಿ ಜರಿದುಹೋಗುವುದು. ಭಿನ್ನವಾದ ದೇಹಗಳು ಬೇರೆಯಾಗುವುವು. ಅಷ್ಟಕ್ಕೆ ಆತ್ಮಸಿದ್ಧಿಯನ್ನು ಯಾರು ಕೊಡಬೇಕು? ತನ್ನ ಆತ್ಮಸಿದ್ಧಿಯನ್ನು ತಾನೇ ಪಡೆಯುತ್ತಾನೆ. ಪರಮಾಣು ಮಾತ್ರ ಪುದ್ಗಲವಸ್ತು, ಅವುಗಳನ್ನು ಒಂದರೊಡನೊಂದನ್ನು ಬೆರಸದೆ ಶ್ರೇಷ್ಠವಾದ ಆತ್ಮನು ಬೇರೆಯಾಗಿ ನಿಂತರೆ ಅದನ್ನು ಪರಮಾತ್ಮಸಿದ್ಧಿಯೆಂದು ಹೇಳುತ್ತಾರೆ.''

ಎಂದು ಭರತ ಜಿನೇಂದ್ರನು ಇಂದ್ರನಿಗೆ ತಿಳಿಸಿದನು. ಅಷ್ಟರಲ್ಲಿ ಭರತೇಶನ ಕುಮಾರರೂ ಸಖರೂ ಮಂತ್ರಿಗಳೂ ರಾಜರೂ ತಮಗೊಂದು ಕಾರ್ಯವಿದೆಯೆಂದು ಇಂದ್ರನೊಡನೆ ತಿಳಿಸಿದರು. ''ಸ್ವಾಮಿ ಸುರುಚಿರ ದೀಕ್ಷೆಯನ್ನು ಪಾಲಿಸಿ ನಮ್ಮನ್ನು ಉದ್ಧರಿಸಬೇಕು'' ಎಲ್ಲರೂ ವೃಷಭರಾಜನನ್ನೂ ಮುಂದೆ ಮಾಡಿಕೊಂಡು ಭರದಿಂದ ಭರತ ಜಿನೇಂದ್ರನಿಗೆ ಅಡ್ಡ ಬಿದ್ದರು.

'ಭವತು, ಉತ್ತಿಷ್ಠತಾ' ಎಂದು ಸ್ವಾಮಿಯ ದಿವ್ಯಧ್ವನಿಯು ಹೊರಹೊಮ್ಮಿತು. ಕೂಡಲೆ ಅವರೆಲ್ಲರೂ ಎದ್ದರು. ಇಂದ್ರ, ನಾಗೇಂದ್ರ ಮತ್ತು ಮಹಾಮುನಿಗಳೆಲ್ಲ ಉತ್ಸಾಹಗೊಳ್ಳುತ್ತಿರುವಾಗ ಭರತ ಜೀನೇಂದ್ರನು ದೀಕ್ಷೆಯನ್ನಿತ್ತನು. ರವಿಕೀರ್ತಿ ಮೊದಲಾದ ನೂರು ಮಂದಿಗೆ ಅಂದು ಆದಿಜಿನನು ದೀಕ್ಷೆ ಕೊಟ್ಟ ರೀತಿಯಲ್ಲೇ ಇಂದು ಇವರಿಗೆ ಭರತ ಸ್ವಾಮಿಯು ದೀಕ್ಷೆಯನ್ನಿತ್ತನು.

'ಅರುಹ. ನಮ್ಮ ಸತಿಯರಿಗೆ, ನಾದಿನಿಯರಿಗೆ ದೀಕ್ಷೆಯನ್ನು ಕರುಣಿಸು' ಎಂದು ಅರ್ಕಕೀರ್ತಿ ಆದಿರಾಜರು ಅಡ್ಡಬಿದ್ದಾಗ ಭರತ ಜಿನೇಶ್ವರನು ಏಳಿರೆಂದು ತಿಳಿಸಿದನು. ಆಗ ನಾಗೇಂದ್ರನ ಸತಿಯರೂ, ಇಂದ್ರನ ಸತಿಯರೂ ಕೂಡಿ ತೆರೆಯನ್ನು ಹಿಡಿದರು. ಮುನಿ ಆ

ಪುಣ್ಯವತಿಯರಾದ ಸತಿಯರನ್ನು ಕರೆದುಕೊಂಡು ಬಂದು ತೆರೆಯೊಳಗೆ ಸೇರಿಸಿದರು. ಸತಿಯರು ತಮ್ಮ ಆಭರಣಗಳನ್ನು ಕಳಚಿದರು. ಏರಿದ ಕಾಮವಿಕಾರಗಳನ್ನು ದೂರವಿಡುವಂತೆ ಅವರು ತಮ್ಮ ಹಾರ, ಪದಕ, ಕಡಗ, ಕಾಂಚೀದಾಮ, ಉಂಗುರಗಳನ್ನು ತೆಗೆದು ದೂರಕ್ಕೆ ಸೆದರು. ಕೊರಳಿನ ಏಕಸರ ಪಂಚಸರ, ತ್ರಿಸರಗಳನ್ನು ಹರಿದು ಮನ್ಮಥನ ಯಾವ ರೀತಿಯ ಮಾಟವೂ ತಮ್ಮತ್ತ ಬರಬಾರದು ಎಂದು ದಿಗ್ಬಂಧನ ಮಾಡುವಂತೆ ದಿಕ್ಕು ದಿಕ್ಕುಗಳಿಗೂ ಅವುಗಳನ್ನು ಬಿಸಾಡಿದರು. ಸೊಂಟದ ಚಿಂತಾಕು, ಕೊರಳಿನ ಚಿಂತಾಕು, ದೊಡ್ಡದಾಗಿರುವ ಮುಡಿಯ ಬಲೆಗಳನ್ನು ಆಮೇಲೆ ತೆಗೆದು ಬಿಸಾಡಿದರು. ಇನ್ನು ಅವುಗಳು ದೇಹಕ್ಕೆ ತೊಡಕೆಂದು ಚೆಲ್ಲಿಬಿಟ್ಟರು. ಹರಳೋಲೆ, ಮುತ್ತಿನ ಬೊಟ್ಟು, ಮೂಗುತಿ ರತ್ನಗಳಿರುವ ಮುತ್ತೈದೆಯ ಭೂಷಣವಾದ ತಾಳಿಬಂಧಿಯನ್ನು ತೆಗೆದು ನೆಲದಲ್ಲಿಟ್ಟರು. ಆಗ ಅವರು ಯಾವ ಯಾವ ಕಾಲಕ್ಕೂ ಸ್ತ್ರೀಜನ್ಮ ಬೇಡವೆಂದು ಭಾವಿಸಿದರು.

ಕೈಹಿಡಿದ ಗಂಡನು ಕೈಬಿಡಲು ತಮಗುಂಟಾದ ವಿರಹದ ಕೆಂಡವನ್ನೇ ಹೊರಗಿಡುವಂತೆ ಅವರು ರತ್ನಗೊಡೆಯನ್ನೂ ಮಾಣಿಕದ ಪೆಂಡೆಯಗಳನ್ನೂ ಕಂಡಕಡೆಗಳಲ್ಲಿ ಕೆದರಿದರು. ಸರಪಣಿ, ಪಿಲ್ಲಿ, ಪಾದಸರ, ಗೌಳಸರ, ಭುಜಕೀರ್ತಿ ಮುಂತಾದ ತರತರದ ಆಭರಣಗಳನ್ನು ಮರಳಿಗೆ ಸರಿಯಾಗಿ ಎಣಿಸಿ ಎಸೆದುಬಿಟ್ಟರು. ದೇಹಕ್ಕೂ ಜೀವಕ್ಕೂ ಅಲಂಕಾರವಾಗಿದ್ದ ಪುರುಷರತ್ನವನ್ನು ಅಗಲಿದವರು ಹರಳುಕಲ್ಲುಗಳನ್ನು ಹೊತ್ತು ಕೊಂಡಿರುವರೆ? ಬಿಸಾಡಿ ಬಿಟ್ಟರು. ಅದನ್ನು ನೋಡಿದ ಸುರಕಾಂತೆಯರೂ ಬೆರಗಾದರು. ದೇಹದ ಕಾಂತಿಯಲ್ಲಿ ವಿರಕ್ತಿಯಲ್ಲಿ ಚಿತ್ತದಲ್ಲಿ ಧೈರ್ಯದಲ್ಲಿ ಅವರು ಕ್ಷತ್ರಿಯ ರಮಣಿಯರಲ್ಲವೆ? ಸೂತ್ರಬದ್ಧವಾಗಿ ಧರಿಸಿದಂತಹ ಎಲ್ಲ ಆಭರಣಗಳನ್ನೂ ಹರಿದು ಬಿಸಾಡಿದರು. ಆ ಧೀರೆಯರು ಮೋಹವನ್ನು ಬಗ್ಗಿ ಒತ್ತುವಂತೆ ತಮ್ಮ ಕೈಗಳಲ್ಲಿದ್ದ ಬಳೆಗಳನ್ನು ಒತ್ತಿದರು. ಅವುಗಳೆಲ್ಲವು ನಳಿನರಿ ಗಗ್ಗರಿ ಘಣಿಘಳಿರೆಂದು ಪುಡಿಪುಡಿಯಾದುವು. ಅಂತು ಸತಿಯರು ಕರಗಳ ಕಂಕಣಗಳನ್ನು ಒಡೆದುಬಿಟ್ಟರು.

ಅತ್ತೆಯರನ್ನು ನೋಡಿ ಸೊಸೆಯರೂ ಸೊಸೆಯರ ಉನ್ನತದ ಧೈರ್ಯವನ್ನು ನೋಡಿ ಅತ್ತೆಯರೂ ಮೆಚ್ಚುತ್ತ, ಸಂಕಟವಿಲ್ಲದ ಸುಚಿತ್ತದಿಂದ ದೀಕ್ಷೆಯನ್ನು ತಾಳಿದರು. ಬಳೆಯೊಡೆದು ಆಭರಣಗಳನ್ನು ತೊರೆದು ದೀರ್ಘವಾದ ಕೇಶಗಳನ್ನು ಬೋಳಿಸುವಾಗ ಬಳಿಯಲ್ಲಿದ್ದವರು ಕಂಡು ಗೋಳಿಟ್ಟರು; ಆದರೆ ಜಿನಸಭೆಯಲ್ಲಿ ಶೋಕವಿರಲಿಲ್ಲ, ಎಲ್ಲವನ್ನೂ ಸಹಿಸಿಕೊಂಡಿದ್ದರು. ಮಾಣಿಕ್ಯಗಳನ್ನು ಬಿಸಾಡಿದ ಅವರ ಕೈಗಳಿಗೆ ಕಮಂಡಲು ಜಪಸರಗಳು ಬಂದುವು. ಆಗ ಅವರು ರಾಣಿಯರೆಂಬುದು ಹೋಗಿ, ಅಕ್ಕಗಳೆಂಬ ಹೊಸ ಹೆಸರನ್ನು ಪಡೆದುಕೊಂಡರು. ಈ ರೀತಿಯಲ್ಲಿ ಜಿನನು ಅವರ ಬಂಧನಗಳನ್ನು ಬಿಡಿಸಿ, ಅಕ್ಕಗಳೆಂಬ ಪಂಕ್ತಿಯಲ್ಲಿಟ್ಟನು. ಪಂಥದಿಂದ ಸಾಧನೆ ಮಾಡಿರೆಂದು ಹರಸಿದನು.

ಆಗ ತೆರೆಯು ಸರಿಯಿತು. ವಾದ್ಯಘೋಷವು ನಿಂತಿತು. ಒಂದೊಂದೆ ಬಿಳಿ ಸೀರೆ ಮಾತ್ರದಲ್ಲಿ ತಲೆಸೆರಗಿನ ಮುಸುಕಿನಲ್ಲಿ ಎಳೆತಲೆಯು ದೀಕ್ಷೆಗೊಂಡಂತೆ ಶಾಂತದಲ್ಲಿದ್ದರು. ನಾಗೇಂದ್ರನ ಸತಿಯರು, ಇಂದ್ರನ ಸತಿಯರು ಅವರಿಗೆ ಎರಗಿದರು. ಸಭೆಯು ನಮಿಸಿತು.

ದೇವತೆಗಳು ಆಕಾಶದಲ್ಲಿ ಕುಣಿದಾಡುತ್ತ ಪ್ರೀತಿಯಿಂದ ಪುಷ್ಪವೃಷ್ಟಿಯನ್ನು ಕರೆದರು. ಹೊಸ ಮುನಿಗಳು ಮುನಿಗೋಷ್ಠಿಯನ್ನು ಸೇರಿದರು. ಹೊಸತಾಗಿರುವ ಅಕ್ಕಗಳು ಕಂತಿಯರ ಬಳಿಗೆ ಹೋದರು. ಆ ವಾರ್ತೆಯು ಕ್ಷಣದಲ್ಲಿ ಹತ್ತು ದೆಸೆಗೆ ಹಬ್ಬಿತು.

ಚಕ್ರಿಯ ಸ್ತ್ರೀರತ್ನವು ನರಕಕ್ಕೆ ಹೋಗುವುದೆಂದು, ಕೆಲವರು ವಕ್ರ ನುಡಿದರು. ಆ ಮಾತು ಅಕ್ರಮವಾದುದು. ಪರಮ ಸಿದ್ಧಾಂತ ವಾಕ್ಯ ಕ್ರಮವೊಂದು ಬೇರೆಯೇ ಇದೆ. ದುರ್ಗತಿಗೆ ಹೋಗುವ ಚಕ್ರಿಯ ಸ್ತ್ರೀರತ್ನವು ದುರ್ಗತಿಗೆ ಹೋಗುವುದು – ಸಹಜ. ಸ್ವರ್ಗಕ್ಕೆ ಮುಕ್ತಿಗೆ ಹೋಗುವವರ ಸ್ತ್ರೀರತ್ನಕ್ಕೆ ಸ್ವರ್ಗವಿದೆ. ಇದು ಉತ್ತಮ ಸಿದ್ಧಾಂತ. ಪುರುಷರ ಪರಿಣಾಮಕ್ಕೆ ಅನುಸಾರವಾದ ಒಂದು ಪರಿಮಾಣವು ಸ್ತ್ರೀರತ್ನಕ್ಕೂ ಇದೆ. ಪುರುಷನು ಸೇರಿದ ಸದ್ಗತಿಯ ಅತ್ಯಲ್ಪ ದೂರವನ್ನು ಸೇರಿ ಸ್ತ್ರೀಯು ಸ್ಥಾನ ಪಡೆದು ಅಲ್ಲಿರುತ್ತಾಳೆ. ಸುತನು ಮೋಕ್ಷಗಾಮಿ; ಸೋದರ ಮೋಕ್ಷಗಾಮಿ; ಅದರ ಪ್ರತಿಯೇ ಭರತೇಶನೆಂದೆನ್ನುವಾಗ ಸತಿ ಸುಭದ್ರಾದೇವಿಯು ಸ್ವರ್ಗವನ್ನು ಸೇರುವ ಅರ್ಹತೆಯುಳ್ಳವಳಾಗಿ ಶ್ರೇಷ್ಠವಾದ ದೀಕ್ಷೆಯನ್ನು ಸ್ವೀಕರಿಸಿದಳು. ಭರತ ಚಕ್ರಿಯ ಹೊತ್ತ ಬೋವಿಗಳಿಗೆ ಸ್ವರ್ಗ ದೊರೆಯುವಾಗ ಕೂಡಿಕೊಂಡು ಬಾಳಿದ ಪಟ್ಟಮಹಿಷಿಗೆ ನರಕವುಂಟೆ? ಅವಳು ಶುದ್ಧ ಶರೀರೆಯಾಗಿದ್ದಳು. ಆಕೆಗೆ ಕಮಂಡಲು ಇಲ್ಲ, ಆದರೂ ಅಜ್ಜಿಕೆಗಳೊಂದಿಗೆ ಕೂಡಿದಳು. ಅರ್ಕಕೀರ್ತಿ ಆದಿರಾಜರು ಆಸ್ಥಾನದಲ್ಲಿದ್ದರು. ಭರತ ಜಿನೇಂದ್ರನು ಕಮಲಪೀಠದಲ್ಲಿದ್ದನು.

## ೨೫

# ಚಕ್ರೇಶ ಕೈವಲ್ಯ

ಹಂಸನಾಥ ಆರಾಧ್ಯನಾದ ಚಕ್ರಿಯು ಉನ್ನತ ಪದವನ್ನು ಪಡೆದನು. ಅದರೊಂದಿಗೆ ತನ್ನವರೂ ಉನ್ನತ ಪದವನ್ನು ಪಡೆಯುವಂತೆ ಮಾಡಿದನು. ನಡು ಹಗಲಲ್ಲೇ ಘಾತಿಕರ್ಮವನ್ನು ನಾಶಮಾಡಿ, ಅನಂತರ ತನ್ನವರಿಗೂ ದೀಕ್ಷೆ ಇತ್ತನು. ತಂದೆಯು ತಡಮಾಡದೆ ಕರ್ಮವನ್ನು ನಾಶಮಾಡಿದಾಗ, ತಾನು ಆಲಸ್ಯದಿಂದ ಇರುವುದು ಯೋಗ್ಯವಲ್ಲವೆಂದು ಛಲದಿಂದ ಸಾಧಿಸಿದನೋ ಎಂಬ ರೀತಿಯಲ್ಲಿ ವೀರನಾದ ಆ ಯೋಗಿಯು ಪರಮಾತ್ಮನಾದ. ಇದೊಂದು ವಿಚಿತ್ರವೇ ಸರಿ!

ಭರತೇಶನು ಚಿಕ್ಕವನಾಗಿರುವಾಗ ಪುರುದೇವನು ಮಗನ ಕೈಯ್ಯನ್ನು ನೋಡಿದ್ದನು. ಮಗನೂ ತಂದೆಯ ಕೈಯನ್ನು ನೋಡಿದ್ದನು. ಅವರಿಬ್ಬರೂ ಒಂದೇ ಎಂದು ಪುರುದೇವನು ಹೇಳಿದ್ದನು. ಇಂದಿಗೆ ಆ ಮಾತು ನಿಜವಾಯಿತು. ಚಂದ್ರಿಕಾದೇವಿ ಅಕ್ಕಗಳು ಸಂತೋಷದಲ್ಲಿ ಮುಳುಗಿದ್ದರು. ಇಂದ್ರನಿಂದ ಪೂಜಿಸಲ್ಪಟ್ಟ ಆರ್ಯೆಯರು ಎಲ್ಲರೂ ಸಂತೋಷದಿಂದ ಉಬ್ಬಿ ಹೋದರು. ಜಿನೇಂದ್ರನ ಆಸ್ಥಾನವೇ ಅವರನ್ನು ಹೊಗಳಿತು. ಇವರೆಲ್ಲ ದೀಕ್ಷೆ ಪಡೆದುದನ್ನು ಕಂಡು ನೆರೆದವರೆಲ್ಲರೂ ಚಿಂತೆಯಲ್ಲಿ ಮುಳುಗಿದರು.

ನಾಗರಮುನಿ, ಅನುಕೂಲಯೋಗಿ, ಬುದ್ಧಿಸಾಗರ, ದಕ್ಷಿಣಾರ್ಯ ಮುಂತಾದ ವರಿಗೂ ಆಗಲೇ ಅವಧಿ ಜ್ಞಾನವುಂಟಾಯಿತು. ಆಮೇಲೆ ಕುಮಾರರಿಗೂ ಆ ಹೊತ್ತಿನಲ್ಲೇ ಅವಧಿಜ್ಞಾನ ಮುಂತಾದ ಉತ್ತಮ ಸಿದ್ಧಿಗಳಾದುವು. ಕೂಡಲೇ ಅವರಿಗಾಗಿ ಗಂಧಕುಟಿಯನ್ನು ರಚಿಸಿದರು. ಅವರನ್ನು ನರರೂ ಉರಗರೂ ದೇವತೆಗಳೂ ಆರಾಧಿಸಿದರು.

ಸೂರ್ಯೋದಯವಾಗುವಾಗ ಆ ರಾತ್ರಿಯು ಕಳೆಯಿತು. ಆರಾಧ್ಯನಾದ ಭರತ ಸರ್ವಜ್ಞನು ದುರಿತಗಳಾಗಿರುವ ನಿರ್ಘಾತಿ ಕರ್ಮಗಳನ್ನು ನಾಶಮಾಡಲು ತೊಡಗಿದನು. ಅವನು ಗಂಧಕುಟಿಯನ್ನು ಬಿಟ್ಟು ಬಂದು ತಾನು ದೀಕ್ಷೆಗೊಂಡ ಶ್ರೀಗಂಧವೃಕ್ಷದ ಬುಡದಲ್ಲಿರುವ ಬಂಧುರವಾದ ಶಿಲೆಯಲ್ಲಿ ಪಲ್ಯಂಕ ಯೋಗಾಸನದಲ್ಲಿ ಕುಳಿತನು. ಪರಮೌದಾರಿಕ ದೇಹದಲ್ಲಿ ತುಂಬಿರುವ ಪರಮಾತ್ಮನೆಂಬ ಹಾಲುಕಡಲನ್ನು ಭೂಮಿಯಿಂದ ದೇವಲೋಕದ ತುದಿಗೆ ಎತ್ತುವೆನೆಂಬ ಧ್ಯಾನದಲ್ಲಿದ್ದನು. ಅವನ ಆಯುಷ್ಯವು ಹಗುರವಾಯಿತು. ಹೆಚ್ಚಾಗಿದ್ದ ಮೂರು ಕರ್ಮಗಳನ್ನು ಕಡಿಮೆ ಮಾಡಿ ಕೊಚ್ಚಿ ಬಿಡುವೆನೆಂದು ನಾಲ್ಕು ಘಾತಗಳನ್ನು ಹೊರದೂಡಲು ಬಯಸಿದನು. ಭರತನು ಹೇಳಿದಂತೆ ಕರ್ಮಗಳೆಲ್ಲ ಕಳೆದುಹೋಗುತ್ತಿದ್ದುವು. ಆತ್ಮನಿಂದಲೇ ಆತ್ಮನನ್ನು ಘನತೆಗೆ ಒಯ್ದನು. ಮೊತ್ತ ಮೊದಲು ಭರತಸರ್ವಜ್ಞನು ದಂಡದ ಆಕಾರವನ್ನು ನೆನೆದನು. ಆಗ

ಉತ್ತಮನಾದ ಆತ್ಮನು ದೇಹದಿಂದ ಹೊರಹೊಮ್ಮಿ ಜಗವೆಂಬ ಹಡಗಿನ ನಡುವೆ ಇರುವ ಕೂವೆ ಕಂಬದಂತೆ ನಿಂತಿದ್ದನು. ಆಗ ರಾಜಿಸುವ ಶಿಲೆಯ ಮೇಲೆ ತೈಜಸ ಕಾರ್ಮಣ ದೇಹಗಳನ್ನು ಕೂಡಿಕೊಂಡಿರುವ ಭರತೇಶನ ಬಾಹ್ಯಾಂಗವಿತ್ತು, ಆದರೆ ಆತನು ಮೂರು ಲೋಕಗಳ ಉದ್ದಕ್ಕೂ ಆವರಿಸಿ ನಿಂತಿದ್ದನು.

ಚಿತ್ತದ ಘನತೆಯು ಸೋಜಿಗವಾಗಿದೆ! ಮೂರು ಪಾಲು ದಪ್ಪದಲ್ಲಿ ಆದಿಯಿಂದ ಅಂತ್ಯದವರೆಗೆ ಔದಾರಿಕಾಂಗವನ್ನು ನೋಡಲು, ಹದಿನಾಲ್ಕು ರಜ್ಜುಗಳ ಉದ್ದವನ್ನು ಭೇದಿಸಿಕೊಂಡು ಆ ದಿವ್ಯವಸ್ತುವು ರಾರಾಜಿಸುತ್ತಿತ್ತು. ಅದನ್ನೇ ಕವಾಟವೆಂದು ಎತ್ತಿದನು. ಎತ್ತಿದ ಹಾಗೆಯೇ ಅದು ಜೊತೆಯಲ್ಲೇ ಬರುತ್ತಿತ್ತು, ಆಗ ಅದು ಮೊದಲಿನಂತೆಯೇ, ಮೂರು ಪಾಲಷ್ಟು ದಪ್ಪವಾಗಿರುವ ಈ ಲೋಕಕ್ಕೆ ಮುಚ್ಚಿದ ಬಾಗಿಲಿನ ಹಾಗೆ ಆಯಿತು. ದಕ್ಷಿಣದಿಂದ ಉತ್ತರಕ್ಕೆ ಏಳು ರಜ್ಜುವಿನ ಅಗಲದಲ್ಲಿ ಮೋಕ್ಷದಿಂದ ತಳಲೋಕದ ಕೆಳಗಿನವರೆಗೆ ದಿಟ್ಟಿಸಿ ನೋಡಲು, ಹದಿನಾಲ್ಕು ರಜ್ಜುವಿನ ಉದ್ದದಲ್ಲಿ ಆತ್ಮನು ಆ ಕ್ಷಣದಲ್ಲಿ ನಿಂತಿದ್ದನು. ಆಲಿಸಿ ಪ್ರತರೆಗೆಂದು ತೊಡಗಿದನು. ಆಗ ಮೂರು ಗಾಳಿಯಿಂದ ಆತ್ಮವಸ್ತುವು, ಒಳಗೆ ಮೂರು ಲೋಕ ತುಂಬಿ, ಮಹಾಕುಂಭ ತುಂಬಿದ ಹಾಲಿನಂತೆ ಇತ್ತು. ಹೇಗೆ ಎಳೆಬಿಸಿಲು, ಬಿಳಿಮುಗಿಲು, ಮಂಜು, ಬೆಳದಿಂಗಳು ಈ ಜಗವನ್ನು ಮುತ್ತಿಕೊಂಡಿರುತ್ತವೋ ಅದೇ ರೀತಿಯಲ್ಲಿ ಆತ್ಮನು ಮೂರು ಜಗವನ್ನೂ ತುಂಬಿ ಮೆರೆದಿದ್ದನು.

ಆತ್ಮನು, ಲೋಕಗಳ ಪರಿಪೂರ್ಣತೆಗಾಗಿ ಸುತ್ತಿಕೊಂಡಿರುವ ಮೂರು ಗಾಳಿಗಳನ್ನೂ ಎತ್ತಿದನು. ಮತ್ತೆ ಅದನ್ನು ಸೇರಿಕೊಂಡು ಮೂರು ಲೋಕಗಳಿಗೂ ಮುಸುಕಿಟ್ಟಿರುವ ವಿಸ್ತಾರದಂತೆ ನಿಂತಿದ್ದನು. ಆ ಸಮಯದಲ್ಲಿ ಮೊದಲಿನಿಂದ ಕೊನೆವರೆಗಿರುವ ಲೋಕವೆಲ್ಲವೂ ಶುದ್ಧಾತ್ಮನಲ್ಲಿ ಅಡಗಿತ್ತು. ಆಗ ಈ ಲೋಕಗಳೆಲ್ಲವೂ ದೇವರ ಉದರದಲ್ಲಿರುವುದೆಂಬ ಮಾತು ಎಲ್ಲ ಲೋಕಗಳಲ್ಲೂ ಹುಟ್ಟಿತ್ತು. ಎರಡು ಮೈಗಳಲ್ಲಿ ತುಂಬಿಕೊಂಡು ಲೋಕದಲ್ಲಿ ಹಬ್ಬಿದನು. ಸುಜ್ಞಾನಗಳೆರಡೂ ಆ ಲೋಕದ ಹೊರಗಿನ ಆಕಾಶವನ್ನು ಮುಸುಕಿದ್ದುವು. ಅದರಿಂದ ಹಂಸನು ಅದ್ವೈತವೆನ್ನುವಂತಿತ್ತು, ಗುರುಹಂಸ, ಶ್ರೀಹಂಸ ಮಹಾತ್ಮ್ಯವು ಪುರುನಾಥ ಭರತನಾಥರಿಗೆ ಪರಿಗಮ್ಯವಲ್ಲದೆ ನರರಿಗೆ ಗಮ್ಯವೇ? ಅದು ಧರೆಯನ್ನು ದಾಟಿ ಅತ್ತತ್ತಸಾಗಿತ್ತು.

ಷಟ್ಖಂಡಗಳಲ್ಲಿ ದಾಳಿಯಿಟ್ಟು, ಕೊನೆಯಲ್ಲಿ ಹಿಂತಿರುಗಿ ಬಂದ ಉರಿಯಕೊಡದಂತೆ ಮೂರು ಲೋಕಗಳಲ್ಲೂ ಸುತ್ತಾಡಿದ ಆ ಮಹಾಮಹಿಮನು ಕೊನೆಯಲ್ಲಿ ಮೊದಲಿದ್ದ ತನ್ನ ದೇಹದ ಕಡೆಗೆ ಅಡಿಯಿಟ್ಟನು. ಲೋಕಗಳಿಂದ ಪ್ರತರೆಗೆ ಇಳಿದು, ಮತ್ತೆ ಪ್ರವರ ಕವಾಟಕ್ಕೆ ಬಂದನು. ಆಮೇಲೆ ಆಲೋಚಿಸಿ, ದಂಡಾಕಾರವಾಗಿ ದೇಹವನ್ನು ಹೊಕ್ಕು ಮೊದಲಿನಂತೆ ಇದ್ದನು. ಜಾಣರೊಡೆಯನಾದ ಭರತನು ಹಿರಿದಾದ ಮಾತು, ಮನಸ್ಸು, ದೇಹಗಳ ಚಲನೆಯನ್ನು ಒತ್ತರಿಸುತ್ತ ಅವನ್ನು ಅಲ್ಪ ಅಲ್ಪವಾಗಿ ಮಾಡುತ್ತ, ಗೋತ್ರ, ನಾಮ, ವೇದನೆಗಳನ್ನು ಆಯುಷ್ಯಕ್ಕೆ ಸರಿಯಾಗಿ ಮಾಡಿದನು. ತುಂಬಿ ಕೊಂಡಿದ್ದ ಘಾತಿಯನ್ನು ನಾಶಮಾಡಲು ಕೂಡಲೇ ಜಿನನಾಮವೊದಗಿತು. ಅವನಿಗೆ ಅದುವೆ ತೀರ್ಥಂಕರ ನಾಮ.

ಆದು ಬಂದು ಕೂಡುವಾಗ ಉಳಿದ ಕರ್ಮಗಳನ್ನು ನಾಶಮಾಡುತ್ತಿದ್ದನು. ಅವನು ಶ್ರೇಷ್ಠರಾದ ವೀರರ ಯಜಮಾನನು. ಎಪ್ಪತ್ತೆರಡು ಕರ್ಮಗಳೂ ಒಮ್ಮೆಗೇ ಬಿದ್ದು ಹೋದುವು. ಅವುಗಳ ಜೊತೆಯಲ್ಲಿ ಹದಿಮೂರು ಕರ್ಮಗಳೂ ನಾಶವಾದುವು. ಸೆಳೆಮಿಂಚಿನಂತೆ ದೇಹವು ಬಯಲಾಗಲು ಆ ಸ್ವಾಮಿಯು ಜಗತ್ತಿನ ಮೇಲ್ಗಡೆಗೆ ನೆಗೆದನು.

ಯೋಗದಿಂದ ನಷ್ಟವಾದ ಕಾಲವನ್ನು ನೋಡುವಾಗ, ಕೂಡಿಸಿಟ್ಟ ವಿವರಣೆಗಳೆಲ್ಲವೂ ತೂಗಾಡತೊಡಗಿದುವು. ಅಷ್ಟರಲ್ಲಿ ಪಂಚ ಹ್ರಸ್ವಾಕ್ಷರಗಳನ್ನು ಓದುವಷ್ಟೇ ಕಾಲವನ್ನು ಹೊಂಚು ಹಾಕಿ ಮರ್ದಿಸಿದನು. ಸಮಯವೆನ್ನುವುದು ಸೂಕ್ಷ್ಮ ಕಾಲ. ಆದರಲ್ಲಿ ಒಂದೇ ಸಮಯದಲ್ಲಿ ಏಳು ರಾಜ್ಯಗಳನ್ನು ದಾಟಿ ಲೋಕದ ತುದಿಯಲ್ಲಿ ನೆಲೆಸಿದನು. ಹಂಸನು ಸಾಮಾನ್ಯ ಸಾಮರ್ಥ್ಯವುಳ್ಳವನಲ್ಲ. ಬದ್ಧವಾಗಿದ್ದ ಅಷ್ಟ ಕರ್ಮಗಳೂ ಅಳಿದು ಹೋದುವು. ಅದರೊಂದಿಗೆ ವಿಶುದ್ಧವಾದ ಅಷ್ಟಗುಣಗಳು ಬಂದು ಸೇರಿದುವು. ಆಗ ಉದ್ಧತವಾದ ನೃಪ, ಮುನಿ, ಜಿನ – ಎಂಬ ಎಲ್ಲ ಮಾತುಗಳೂ ಹೋದುವು.

ಆ ಹಂಸನಾಗ ಸಿದ್ಧನಾಗಿದ್ದನು. ಅವನು ಸಮ್ಯಕ್ತ್ವ, ಸುಜ್ಞಾನ, ಈಕ್ಷಣ, ಶಕ್ತಿ, ಸೂಕ್ಷ್ಮವಾದ ಆತ್ಮಾವಗಾಹ, ನಿರ್ಗುರು, ಲಘು ನಿರ್ಬಾಧೆಯೆಂಬ ಎಂಟು ದಿವ್ಯವಾದ ಅಷ್ಟಗುಣಗಳಲ್ಲಿ ಮೆರೆದನು. ಗಳಿ, ಪಡಿ, ಪ್ರತರೆ ಪೂರ್ಣವಾಗಿ ಖಾಲಿಯಾದಾಗ ಅವುಗಳೆಲ್ಲ ನಾಶವಾಗಿ ಅಚ್ಚು ಪುರುಷ ರೂಪಿನಲ್ಲಿ ಉಂಟಾದ ದೇಹಕ್ಕೆ ಒಂದಿಷ್ಟೂ ಕುಂದು ಬರದೆ ಇದ್ದ ರೀತಿಯಲ್ಲಿ ಆತ್ಮ ಮೋಕ್ಷದಲ್ಲಿ ನೆಲೆಗೊಂಡನು. ಭರತೇಶನೆಂಬ ದೇಹವು ಹೋದಾಗಲೇ ಅವನು ಸಿದ್ಧರ ಸಮೂಹವನ್ನು ಸೇರಿದನು. ಅದೊಂದು ಆಶ್ಚರ್ಯವೇ ಸರಿ! ತಾನು ತಿರುಗದಿರುವ ಹಾದಿಯಲ್ಲೇ ಹೋಗಿ ಆ ಸಿದ್ಧನು ಮುಕ್ತಿಯಲ್ಲಿ ನಿಂತಿದ್ದನು.

ಆ ಹೊತ್ತಿನಲ್ಲಿ ಮತ್ತೊಂದು ಆಶ್ಚರ್ಯವಾಯಿತು. ಐದು ಮಂದಿ ಮಕ್ಕಳೂ ಮೋಹಘಾತಿಯನ್ನು ನಾಶಮಾಡಿ ಉತ್ಸಾಹಗೊಂಡಿದ್ದರು. ಹಂಸಯೋಗಿ, ನಿರಂಜನ ಸಿದ್ಧ ಮುನಿ. ಮಹಾಂಶುಯೋಗಿ, ರತ್ನಮುನಿ, ಸಂಸುಖಮುನಿ ಮುಂತಾದ ಐದು ಮಂದಿಗೂ ಒಂದೇ ಬಾರಿ ಕೈವಲ್ಯ ಬೋಧೆಯು ಸಿದ್ಧಿಯಾಯಿತು. ಅವರು ಐದರೂ ಒಂದೇ ಬಾರಿ ಹುಟ್ಟಿದವರು. ಅವರಿಗೆ ಒಂದೇ ಬಾರಿ ಮಹಿಮೆಯೂ ಹುಟ್ಟಿತು. ಥಟ್ಟನೇ ಭರತೇಶನು ಮುಕ್ತಿಗೆ ಸಂದನೆಂದು ಅವರಿಗೆ ಒಂದಿಷ್ಟೂ ನೋವು ಹುಟ್ಟಲಿಲ್ಲ.

ತಂದೆಯು ಪಂಚಮಗತಿಯನ್ನು ಸೇರಲು, ಪಂಚಪುತ್ರರೂ ಘಾತಿಗಳಿಗೂ ಪಂಚತ್ವವೊದಗಿಸಿದರು. ಧರೆಯಲ್ಲಿ ಚಕ್ರಿಯ ಬದುಕು ಅಷ್ಟು ಚೆಲುವು. ಆಗ ಶ್ರೀಮಾಲೆಯಕ್ಕಗಳು, ವನಮಾಲೆಯಕ್ಕಗಳು, ಮಣಿದೇವಿಯಕ್ಕಗಳು, ಹೇಮಾಜಿ ಯಕ್ಕಗಳು, ಗುಣಮಾಲೆಯಕ್ಕಗಳು. ಮುಂತಾದವರೆಲ್ಲರೂ ಆಮೋದಗೊಂಡರು. ಉತ್ಸಾಹದಿಂದ ಉಬ್ಬಿದರು. ಮಕ್ಕಳನ್ನು ಹೆತ್ತವರು ಮಕ್ಕಳ ಸಿರಿಯನ್ನು ಕಂಡಾಗ ನಲ್ಮೆಯಿಂದ ಉಕ್ಕದಿರುವರೇ? ಉಳಿದ ಅಕ್ಕಗಳೂ ಸಂತೋಷಗೊಂಡರು. ದಶದಿಕ್ಕುಗಳ ಪರಿಶೆಯೂ ಇದನ್ನು ಹೊಗಳಿತು. ತಂದೆ ಹೋದ ದುಃಖವು ಅರ್ಕಕೀರ್ತಿ ಆದಿರಾಜರಿಗೆ

ಸಂಧಿಸಲಿಲ್ಲ. ಸೋದರರು ಒಂದೇ ಬಾರಿ ಉನ್ನತಿ ಪಡೆದುದಕ್ಕೆ ಆನಂದಿಸಿದರು. ದೊರೆಗಳಲ್ಲಿ ಕೆಲವರಿಗೆ, ಕುಮಾರರಲ್ಲಿ ಕೆಲವರಿಗೆ, ವಿಟ ಮುಂತಾದ ಭರತೇಶನ ಗೆಳೆಯರಿಗೆ ಅವಧಿಜ್ಞಾನ ಮುಂತಾದ ಸಂಪತ್ತುಗಳು ದೊರೆತವು. ಭರತೇಶನ ಬಳಿಯಲ್ಲಿದ್ದವರಿಗೆ ಅಂತಹ ಸಂಪತ್ತು ದೊರೆಯುವುದು ಕಷ್ಟವಲ್ಲ.

ಇದನ್ನು ನೋಡಿ ಮಾಗಧನು ಉಬ್ಬಿದನು, ''ನನ್ನೊಡೆಯನು ಈ ಧರೆಯಲ್ಲಿದ್ದಾಗ ಎಲ್ಲರಿಗೂ ಪ್ರೀತಿಯುಂಟು ಮಾಡಿದನು. ಈಗ ಹೋಗುವಾಗಲೂ ಎಲ್ಲರಿಗೂ ಆರ್ತಿಯನ್ನು ತೋರಿಸಿದನು'' ಎಂದು ಕೈಯೆತ್ತಿ ಹೊಗಳಿದನು. ವರತನು, ವಿಜಯಾರ್ಧದ ಹಿಮವಂತ ಮೊದಲಾದವರೂ ಭರತೇಶನನ್ನು ಸ್ಮರಿಸಿದರು. ಅದುದೆಲ್ಲವೂ ಲೇಸಾಯಿತೆಂದರು. ಸಿಂಧು ದೇವ, ಗಂಗಾದೇವರು ಕೂಡ ಚಕ್ರಿಯನ್ನು ಸ್ಮರಿಸಿದರು.

ಆ ಕ್ಷಣದಲ್ಲೇ ಅನುಪಮವಾದ ಐದು ಗಂಧಕುಟಿಯನ್ನು ಪಂಚಜಿನರಿಗಾಗಿ ರಚಿಸಿದರು. ನರರೂ ನಾಗರರೂ ಭರತಜಿನನನ್ನು ಅರ್ಚಿಸಿದರು. ಭರತಸರ್ವಜ್ಞನು ಮುಕ್ತಿಗೆ ಸಂದ ಶಿಲೆಯ ಹತಿರದಲ್ಲೇ ಇಂದ್ರನು ಹೋಮವನ್ನು ಮಾಡಿಸಿ, ಹರುಷದ ನೃತ್ಯವನಾಡಿಸಿದನು. ಅದನ್ನು ಅರ್ಕಕೀರ್ತಿ, ಆದಿರಾಜ ಮೊದಲಾದವರು ಪ್ರೀತಿಯಿಂದ ನೋಡುತ್ತಿದ್ದರು. ''ಭೂವಲಯದ ಭಾರವೆಲ್ಲಿ? ತೊಂಭತ್ತಾರು ಸಾವಿರ ಹೆಣ್ಣುಗಳೊಂದಿಗೆ ಆಡಿದ ಆಟವೆಲ್ಲಿ? ಕೈವಲ್ಯವು ಕ್ಷಣದಲ್ಲೇ ದೊರೆಯುವುದೆಲ್ಲಿ?'' ಎಂದು ನಾಗೇಂದ್ರನು ಭಾವಿಸಿ ಹೊಗಳಿದನು. ''ತನಗೆ ತಾನೇ ಗುರುವಾಗಿ ದೀಕ್ಷೆಯನ್ನು ಪಡೆದು, ತನ್ನಲ್ಲಿ ತನ್ನನ್ನೇ ಅವನು ನೋಡಿದನು. ಆ ರೀತಿಯಲ್ಲಿ ದೇಹವಳಿದು ಅಮರವಾದನು. ಅಹೋ ಭಾಪು! ಭಾಪು! ಭರತೇಶನು ತನ್ನ ದೇಹವನ್ನು ತಪಸ್ಸಿನಿಂದ ದಂಡಿಸಲಿಲ್ಲ, ಭಿಕ್ಷೆ ನೀಡಿರೆಂದು ಒಬ್ಬೊಬ್ಬರಿಗೆ ಕೈಯೊಡ್ಡಲಿಲ್ಲ, ಉಯ್ಯಾಲೆ ತೂಗಿದಂತೆ ಅಮೃತಕ್ಕೆ ಸಂದನು. ಗದ್ದುಗೆಯಿಳಿದು ಬಂದವನೇ ಕಾಮಲದ ಗದ್ದುಗೆಯನ್ನೇರಿ ಮೆರೆದನು. ಗಂಧಕುಟಿಯಲ್ಲಿದ್ದು ಮತ್ತೆ ಅದನ್ನೂ ಬಿಟ್ಟು ಅಮೃತಲೋಕಕ್ಕೆ ಹೋದನು. ನಮೋಸ್ತು! ತಪೋಮುದ್ರೆಯನ್ನು ಧರಿಸಿ ದೇಶದಲ್ಲಿ ಒಂದಿಷ್ಟೂ ತಿರುಗಾಡಲಿಲ್ಲ, ತಿರಿದು ಉಂಡುದೂ ಇಲ್ಲ, ಸಿರಿಯಲ್ಲಿದ್ದನು; ಸಿರಿಯಲ್ಲೇ ಹೋಗಿ ಮೋಕ್ಷದ ಸಿರಿಯನ್ನು ಪಡೆದನು. ಭಾಪು! ಭಾಪು.''

''ಇಷ್ಟು ಹೊಗಳಿದರೂ ಸಾಕಾಗದೆ? ಕಲಿಯುಗದ ರತ್ನಾಕರಸಿದ್ಧಗೂ ಹೊಗಳುವುದಕ್ಕೆ ಒಂದಿಷ್ಟು ಇರಲಿ. ಸಾಕು; ನಿಲ್ಲು'' ಎಂದು ಅಮರೇಂದ್ರನು ವಿನೋದಾರ್ಥದ ಮಾತು ಹೇಳಿದನು.

''ನಾನೆಷ್ಟರವನು? ಇನ್ನು ರತ್ನಾಕರ ಸಿದ್ಧನು ಬಣ್ಣಿಸುವುದಕ್ಕೆ ತಾನೆಷ್ಟರವನು? ನೀನೆಷ್ಟರವನು?'' ಎಂದು ನಾಗೇಂದ್ರನು ಆತ್ಮಾನಂದ ಮಿಗುವವರೆಗೂ ಭರತಸರ್ವಜ್ಞನನ್ನು ಹೊಗಳಿದನು.

''ಅಹುದಲ್ಲ! ಗುಣಕ್ಕೆ ಮತ್ಸರವಿಲ್ಲ, ಭರತಚಕ್ರಿಯ ಹಾಗೆ ಬಹು ಭಾರವನ್ನು ಧರಿಸಿದ್ದು, ಕ್ಷಣದಲ್ಲಿ ಸಹಜವಾಗಿ ಮುಕ್ತರಾದವರು ಯಾರಿದ್ದಾರೆ? ನೀನೆಷ್ಟೂ ಹೊಗಳಬಹುದು.'' ಎಂದು ಕೂಡಲೇ ದೇವೇಂದ್ರನು ನುಡಿದನು. ಆವನ ಹಾಗೆ ತನಗೂ

ಮುಕ್ತಿ ದೊರೆಯಲಿದೆಯೆಂದು ಆ ಭೂಮಿಯಲ್ಲಿದ್ದ ಹೋಮಭಸ್ಮವನ್ನು ಅಮರೇಂದ್ರನು ಪ್ರೀತಿಯಿಂದ ಧರಿಸಿ ಕೊಂಡನು. ನಾಗೇಂದ್ರನೂ ಆತುರದಿಂದ ಧರಿಸಿಕೊಂಡನು. ಆ ಭಸ್ಮವನ್ನು ಅಲ್ಲಿ ನೆರೆದಿದ್ದ ಅರ್ಕಕೀರ್ತಿ, ಆದಿರಾಜ ಮೊದಲಾದ ಸರ್ವರೂ ಭಕ್ತಿಯಿಂದ ಧರಿಸಿಕೊಂಡರು. ಭರತೇಶನ ಮೋಕ್ಷ ಕಲ್ಯಾಣವು ಜಗವನ್ನು ಉದ್ಧರಿಸಿತು. ಎಲ್ಲರೂ ಸುಖವನ್ನು ಪಡೆದರು.

ದೇಹವು ಇಲ್ಲದಾಗಲೂ ಗಂಧಕುಟಿಯೂ ಮಾಯವಾಯಿತು. ಮುನಿಗಳು, ಅಜ್ಜಿಗಳು ಮುಂತಾದವರು ಜಿನದೇವನತ್ತ ಹೋಗಿ ಮೊದಲಿನಂತೆ ಸುಖದಲ್ಲಿದ್ದರು. ದೇವೇಂದ್ರ, ನಾಗೇಂದ್ರ, ಗಂಗಾದೇವ, ಸಿಂಧೂದೇವ, ವ್ಯಂತರರೆಲ್ಲರೂ ಜಿನರಿಗೆ, ಆರ್ಯರಿಗೆ, ನಮಸ್ಕಾರ ಮಾಡಿದ ಅರ್ಕಕೀರ್ತಿ, ಆದಿರಾಜ ಮುಂತಾದವರನ್ನೆಲ್ಲ ಹರಸಿ, ಅವರೆಲ್ಲರೂ ತಮ್ಮ ತಮ್ಮ ಊರುಗಳಿಗೆ ಹೋದರು. ಅವರಂತೆಯೇ ಅರ್ಕಕೀರ್ತಿ ಆದಿರಾಜರೂ ಆಗ ತಮ್ಮ ಪುರಕ್ಕೆ ಮರಳಿಹೋದರು. ಗಂಧಕುಟಿಗಳೆಲ್ಲ ವಿವಿಧ ದೇಶಗಳಿಗೆ ಹರಿದು ಹೋದುವು.

ಮನೆಯನ್ನು ಮುಟ್ಟಿದೊಡನೆ ಮಾಗಧನು ತನ್ನ ಒಡೆಯನಾದ ಭರತನನ್ನು ನೆನೆದು ಮರುಕಗೊಂಡನು. ಜಿನಸಭೆಯಲ್ಲಿದ್ದಾಗ ಶೋಕವಿರಲಿಲ್ಲ, ಸುಮ್ಮನೆ ಹಿಂತೆರಳಿದನು. ಆದರೆ ಮನೆಯಲ್ಲಿ ಸಹಿಸಲಾಗಲಿಲ್ಲ.

''ಭರತ ಚಕ್ರೇಶ್ವರ, ಹಾ ಹಾ, ನನ್ನ ಸ್ವಾಮಿಯೆ. ದೇವೇಂದ್ರನನ್ನೂ ನಗುವಂತೆ ಮಾಡುವ ಗಂಭೀರನೆ, ಪುರುಷರೂಪದ ಕಲ್ಪತರುವೆ, ನೀನಿಂತು ಹೋಗುವುದೆ? ನಾವು ಕೆಟ್ಟೆವಲ್ಲ. ವೀರಕ್ಕೆ, ವಿನಯಕ್ಕೆ, ವಿದ್ಯಾ ಪರೀಕ್ಷೆಗೆ, ಉದಾರಕ್ಕೆ, ಶೃಂಗಾರಕ್ಕೆ, ಧೈರ್ಯಕ್ಕೆ ಈ ಜಗದಲ್ಲಿ ಪ್ರತಿಯಿಲ್ಲದ ಹೊಂತಕಾರಿ ನೀನು. ನೀನಿಲ್ಲದೆ ನಾನು ಕೆಟ್ಟೆನು. ಅಯ್ಯೋ, ಓಲಗದಲ್ಲಿ ನಿನ್ನನ್ನು ಕಂಡಾಗ ಸ್ವರ್ಗವೇ ಬಂದು ಓಲೈಸಿದಂತೆ ನನಗಾಗುತ್ತಿತ್ತು. ಈ ಊಳಿಗದವನನ್ನು ಬಿಟ್ಟು, ಹೀಗೆ ಬಿಸಾಡಿ ನೀನು ಮೋಕ್ಷಕ್ಕೆ ದಾಳಿ ಮಾಡಬಹುದೆ? ಹಾ, ನಾನು ಬಿನ್ನವಿಸಿಕೊಂಡರೆ ನೀನು ಕೇಳುವಿಯಾ? ನನ್ನನ್ನು ಸತ್ಯವಂತನೆಂದು ನೋಡುವೆಯಾ? ಅಲ್ಪ ಮನ್ನಣೆಯನ್ನೂ ಕೊಡಲಿಲ್ಲ, ನೀನು ಮುಕ್ತಿಗೆ ಹೋಗಿ ನನ್ನನ್ನು ಕೊಂದೆಯಲ್ಲವೆ ಸ್ವಾಮಿ?''

ಮಾಗಧನು ಅತ್ತ ಅಳುತ್ತಿದ್ದರೆ, ಇತ್ತ ಸಿಂಧುದೇವ, ಗಂಗಾದೇವರು ಸ್ವಲ್ಪ ದೂರ ಹೋಗುವಾಗಲೇ ಶೋಕಪಟ್ಟರು. ''ಭಾವ! ಅಯ್ಯೋ! ನೀನು ನಮ್ಮನ್ನು ಹೀಗೆ ಬಿಟ್ಟು, ಹೋಗುವುದೇ? ನಾವಿನ್ನು ಬಾಳುವುದೊಂದು ಬಯಕೆ? ನಮಗೆ ಸಾವಾದರೂ ಏಕೆ ಬರುವುದಿಲ್ಲ? ನಿನ್ನ ಮೈದುನರೆಂದು ನುಡಿದಾಗಲೇ ನಮಗೊಂದು ತೇಜಸ್ಸು ಬರುತ್ತಿತ್ತು, ಇನ್ನು ನಮಗೆ ಯಾದ ಬಲ್ಮೆ ಉಂಟು?'' ಎಂದವರು ಬಂಗಾರವನ್ನು ಕಳಕೊಂಡ ಲೋಭಿಯಂತೆ ದುಃಖಿಸಿದರು. ''ಹಾ ಚಕ್ರವರ್ತಿ! ನಾವು ಸೇವಕರೆಂದು ದೂರದಲ್ಲಿರಲು ಆ ಸೇವೆಗೆ ಮೆಚ್ಚಿ ನೀನೇ ನಮ್ಮೊಡನೆ ಭಾವಮೈದುನರೆಂದು ವಿನಯವನ್ನು ತೋರಿಸುತ್ತಿದ್ದವನು ಹೀಗೆ ಹೋಗುವುದೇ? ನಿನ್ನ ವಿನಯವನ್ನು ಹೇಗೆ ಮರೆಯುವುದು?''

ಎಂದು ಮರುಗುತ್ತ ತಮ್ಮ ದಾರಿಯಲ್ಲಿ ಮುಂದೆ ಸಾಗಿ, ತಮ್ಮ ಊರನ್ನು ಸೇರಿ, ಇದನ್ನೆಲ್ಲ ತಮ್ಮ ಹೆಂಡತಿಯರಿಗೆ ಹೇಳಿದರು. ಕೂಡಲೇ ಅಲ್ಲಿ ಅಳುವೆದ್ದಿತು.

''ಅಣ್ಣಾಜಿ ಕೆಟ್ಟೆವು. ಹಾಹಾ, ನೀನು ಬೆಂಕಿಯನ್ನು ನಮ್ಮ ಹೊಟ್ಟೆಗಿಟ್ಟೆಯಲ್ಲವೆ?'' ಎಂದು ಅವರು ಥಕ್ಕನೆ ಭೂಮಿಗೆ ಬಿದ್ದು ಉರುಳಿದರು. ಮತ್ತೆ ಚೇತರಿಸಿಕೊಂಡರು. ''ಹಾ ಅಣ್ಣ ನೀನೆಂಥ ಬಿಣ್ಣಗೆಕಾರನೋ. ಬಲ್ಲಿದರಿಗೆ ಬಲ್ಲಿದನಾಗಿದ್ದೆ. ಕಣ್ಣು ಮನಸ್ಸುಗಳು ಮೆಚ್ಚಿದ ಅರಸನಾಗಿದ್ದೆ. ಅಣ್ಣಾಜಿ ನಮ್ಮನ್ನು ಕೊಂದೆಯಲ್ಲ. ನಿನ್ನನ್ನು ತಡೆದು ಸಲುಗೆಯಿಂದ ನಿನ್ನ ಸೆರಗನ್ನು ಹಿಡಿಯುತ್ತಿದ್ದೆವು. ನಮ್ಮ ಮಾತನ್ನು ಒಂದಿಷ್ಟೂ ಮೀರುತ್ತಿರಲಿಲ್ಲ. ಕಡೆಯುಗವು ಮುಟ್ಟದಿದ್ದರೂ ನಮ್ಮ ಕಣ್ಣಿನ ಪ್ರೀತಿಯನ್ನು ಕೆಡಿಸಿ, ಈ ರೀತಿಯಲ್ಲಿ ಹೋಗಬಹುದೇ ಅಣ್ಣ? ನಿನ್ನ ಪಟ್ಟದ ರಾಣಿಯ ಪ್ರೇಮವೆಲ್ಲಿ ಹೋಯಿತು? ಒಡಹುಟ್ಟಿದ ನಮ್ಮ ಪ್ರೀತಿ ಏನಾಯಿತು? ಅರ್ಧದಾರಿಯಲ್ಲೇ ನಮ್ಮನ್ನು ಬಿಸಾಡಿಬಿಟ್ಟೆಯಲ್ಲ. ಇಂದು ಭೂಮಿಯ ಸಿರಿಯೇ ಹಾರಿಹೋಯಿತು. ನಮ್ಮ ತವರೂರಿನ ಕೊನೆ ಆಸೆಯೂ ಇಲ್ಲದಾಯಿತು. ಅಣ್ಣ ಕಡುಪಾಪಿಗಳಾದ ನಮ್ಮ ಕಣ್ಣು ಮುಂದೆ ನೀನಿರುವೆಯಾ? ನೀನು ಕನ್ನಡಿಯಂಥ ರೂಪಿನವನು?'' ಎಂದು ಬೆಟ್ಟವೇ ಬೇನೆಗೊಂಡಂತೆ ದುಃಖಿಸಿದರು.

ಅತ್ತ ದಿವಿಜೆಯರು ಅಳುತ್ತಿರಲು. ಇತ್ತ ಭರತೇಶನ ಕುಮಾರಿಯರು ಆ ವಾರ್ತೆಯನ್ನು ಕೇಳಿಯೇ ಮೂರ್ಛೆಹೋದರು. ಎಚ್ಚೆತ್ತೊಡನೆ ಅವರೂ ಶೋಕಿಸತೊಡಗಿದರು. 'ಅಪ್ಪಾಜಿ, ಹಾ. ನಮ್ಮನ್ನು ಹೀಗೆ ಬಿಸಾಡಿ ಜಗತ್ತಿನ ತುದಿಗೆ ಏರಿದಿರಾ?' ಎಂದು ಅವರ ಎದೆಯೇ ಬೆಂದುಹೋಯಿತು. ಬಿಸಿ ತುಪ್ಪ ತಿಂದ ಶಿಶುಗಳಂತೆ ಅವರು ದುಃಖಿಸಿದರು. ''ಅಪ್ಪಾಜಿ ಕುಮಾರರನ್ನು, ಸೊಸೆಯರನ್ನು, ಹೆಂಡತಿಯರನ್ನು, ಎಲ್ಲರನ್ನೂ ಸವರಿಬಿಟ್ಟು ಈ ರೀತಿಯಲ್ಲಿ ನಮ್ಮ ತವರು ಮನೆಯನ್ನು ಹಾಳುಮಾಡುವುದ ಷಟ್ಖಂಡಾಧಿಪತಿಯಾದ ನಿನಗೊಂದು ಬಲ್ಲವಿಕೆಯೆ? ಯಾವ ಯಾವ ಕೆಲಸಕ್ಕೂ ನೀನು ನಮ್ಮನ್ನು ಕರೆಸುತ್ತಿದ್ದೆ. ಈ ವೇಳೆಯಲ್ಲಿ ಮಾತ್ರ ಏಕೆ ಮರೆತೆ ಅಪ್ಪಾಜಿ? ಹಾ ನಮ್ಮ ವಿಧಿಯೇ?'' ಎಂದು ಮೂವತ್ತೆರಡು ಸಾವಿರ ಕುಮಾರಿಯರು ಅತ್ತರು.

ಅಲ್ಲಲ್ಲಿದ್ದ ಅಳಿಯಂದಿರೆಲ್ಲರೂ ಅತ್ತರು. ಹೆಣ್ಣನ್ನು ಕೊಟ್ಟ ಅರಸರೆಲ್ಲರೂ ಭರತೇಶನ ಗುಣಾತಿಶಯಗಳನ್ನು ಎಣಿಸಿ ದುಃಖಿಸಿದರು. ಬಾಹುಬಲಿಯ ಕುಮಾರರು ಮೂವರೂ ಈ ವಾರ್ತೆಯನ್ನು ಕೇಳಿದವರೇ ನೆಲಕ್ಕೆ ಬಿದ್ದು ಬಿಟ್ಟರು. ಭರತೇಶನು ದೀಕ್ಷೆಯನ್ನು ತಾಳಿದನೆಂದು ಕೇಳಿದೊಡನೆಯೇ ತಾವೂ ಹೋಗಿ ನೋಡಬೇಕೆಂದು ಪ್ರಯಾಣಕ್ಕೆ ಅಣಿಮಾಡುತ್ತಿರುವಾಗಲೇ ಮೋಕ್ಷ ಹೊಂದಿದನೆಂದು ತಿಳಿದು, ರೆಕ್ಕೆ ಮುರಿದ ಪಕ್ಷಿಯಂತೆ ಭೂಮಿಗೆ ಬಿದ್ದರು. ''ಅಯ್ಯೊ! ಹಾಹಾ ಕೆಟ್ಟೆವು! ನೀನೂ ಈ ರೀತಿಯಲ್ಲಿ ನಮ್ಮನ್ನು ವಿಚಾರಿಸದೆ ಹೋಗುವುದೇ ತಂದೆ? ಇಷ್ಟು ಬೇಗನೆ ಹೋದುದೇಕೆ?'' ಎಂದು ಅತಿಯಾಗಿ ದುಃಖಿಸಿದರು. ''ಹೆತ್ತ ತಾಯಿ ತಂದೆಗಳ ಹಂಗನ್ನು ನಾವು ತಿಳಿದವರಲ್ಲ. ನೀನೇ ನಮ್ಮನ್ನು ಎತ್ತಿ ರಕ್ಷಿಸಿದೆ. ಹೆಚ್ಚಾದ ಸಿರಿಯನ್ನೂ ಇತ್ತೆ. ನಮ್ಮನ್ನು ಸಂತೋಷದಲ್ಲಿ ನಡೆಸಿಕೊಂಡೆ.

ಕೊನೆಗೆ ಹೀಗೆ ಮಾಡುವುದೇ ಅಪ್ಪಾಜಿ? ಈ ಸಿರಿಯನ್ನು ಸುಡು ಸುಡು. ನಿನ್ನ ಕೈಯಲ್ಲೇ ದೀಕ್ಷೆ ಪಡೆಯುವ ಪುಣ್ಯವು ನಮಗೆ ಇಲ್ಲದೆ ಹೋಯಿತಲ್ಲ, ನಮ್ಮನ್ನು ಬಿಟ್ಟು ಹೋದೆಯಲ್ಲ'' ಎಂದು ಮೂವರೂ ಮಿಡುಕುತ್ತಿದ್ದರು.

ಶ್ರೀ ಜಿನಸಭೆಯನ್ನು ಬೀಳ್ಕೊಂಡು ಅರ್ಕಕೀರ್ತಿ, ಆದಿರಾಜರು ತಮ್ಮೊಡನೆ ಒಲೈಸಿಕೊಂಡಿರುವ ರಾಜರನ್ನೂ, ಸೇನೆಯನ್ನೂ ಬೀಳ್ಕೊಟ್ಟು ಪುರಪ್ರವೇಶಮಾಡಿದರು. ಪುರವು ಭಿಮ್ಮಗಿತ್ತು, ಪ್ರಜೆಗಳ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿತ್ತು, ಸುಮ್ಮನೆ ನೋಡುತ್ತ ದುಃಖಿಸುತ್ತ ಅವರು ತಮ್ಮ ಚಾವಡಿಯನ್ನು ಸೇರಿದರು. ತಂದೆಯು ಕುಳಿತುಕೊಂಡಿರುವ ಗದ್ದುಗೆಯನ್ನು ಕಾಣುತ್ತಲೇ ಎದೆಯ ಶೋಕವು ಭುಗಿಲೆಂದು ಎದ್ದಿತು. ಕಣ್ಣೀರು ಒತ್ತರಿಸಿ ಬಂತು. ''ಹಾ ಹಾ ಕೆಟ್ಟೆವು'' ಎಂದು ಬಾಯಿ ಬಿಟ್ಟು ಅತ್ತರು. ಅವರ ಧೈರ್ಯವು ಜಾರಿಹೋಯಿತು. ಓಜೆಯು ಹಾರಿಹೋಯಿತು. ನುಡಿಯ ಚಾತುರ್ಯವೂ ಮಾಯವಾಯಿತು. ತಂದೆಯ ರೂಪವು ಅಲ್ಲಿ ಇಲ್ಲದಿರಲು ಅವರಿಗೆ ಸೂರ್ಯನಿದ್ದೂ ಇರುಳಾಯಿತು.

''ಅಪ್ಪಾಜಿ ಎಲ್ಲಿದ್ದೆ? ಷಟ್ಖಂಡದ ಅರಸುಗಳು ಕಪ್ಪವನ್ನು ತಂದಿರುವರು. ಒಪ್ಪಿಸಿಕೊಳ್ಳಬೇಡವೆ? ಮುಖವನ್ನು ತೋರಿಸು. ಆಲಸ್ಯ ನಿನಗಿಲ್ಲ. ನಿನ್ನ ಚಾವಡಿಯಲ್ಲಿ ಯಾವಾಗಲೂ ಜನಸಂದಣಿ ತಪ್ಪಲಿಲ್ಲ. ಇಂದು ಹಾಳು ಸುರಿಯುತ್ತಿದೆ. ಇದನ್ನು ಹೇಗೆ ನೋಡುವೆವು? ನಿನ್ನನ್ನು ಕಾಣೆವು. ನನ್ನ ಸೋದರರೊಬ್ಬರೂ ಮೊದಲಿನ ಹಾಗೆ ಇಲ್ಲಿ ಸಂಚರಿಸುವುದಿಲ್ಲ. ರತ್ನದ ಚಾವಡಿಯು ಕಾಂತಿಗೆಟ್ಟಿದೆ. ಕೆಟ್ಟೆವು ನಾವು. ಅಯ್ಯೊ! ನಮಗೆ ಇನ್ನು ಯಾರು ಶರಣು'' ಹೀಗೆ ಅವರು ಅಳುತ್ತಿದ್ದು ತಮ್ಮ ಬೇಗೆಯನ್ನು ತಾವೇ ಸಂತೈಸಿಕೊಂಡರು. ಅಲ್ಲಿದ್ದ ಸೇವಕರು ಕಣ್ಣೀರು ಸುರಿಸಿದರು. ಅದನ್ನು ಕಂಡು ಎಲ್ಲರೂ ದುಃಖಿಸಿದರು.

ಭರತೇಶನ ಪುತ್ರರು ತಮಗೆ ಸಹಜವಾದ ರೀತಿಯಲ್ಲಿ ತಮ್ಮ ದುಃಖದ ಬೇಗೆಯನ್ನು ಸಹಿಸಿಕೊಂಡು ಸೇವಕರನ್ನೂ ಆಪ್ತರನ್ನೂ ಬೀಳ್ಕೊಟ್ಟು ತಮ್ಮ ಅಂತಃಪುರಗಳಿಗೆ ಹೋದರು. ಕಾವಲಿನಲ್ಲಿದ್ದವರು ತಮಗೆ ಪ್ರಿಯರಾದವರನ್ನು ಕಾಣುವಂತೆ ಅಲ್ಲಿದ್ದ ಭಾವೆಯರು ಅವರನ್ನು ಕಂಡರು. ''ಕಿಕ್ಕಿರಿದಿದ್ದ ಹೆಣ್ಣು ಪಡೆಯು ಹೋಗಿ ಈ ಮನೆಯು ರಾಕ್ಷಸರ ಪಟ್ಟಣವಾಗಿದೆ. ಇದರಲ್ಲಿ ಬಾಳುವುದು ಹೇಗೆ'' ಎಂದು ಅವರು ಅಡಿಕೊಂಡರು. ''ಎಲ್ಲರೂ ಜೊತೆಯಲ್ಲಿದ್ದು ಬಾಳುವುದೇ ಸುಖವು. ಆದರೆ ನಾವು ಮಾತ್ರ ಭೂಮಿಯಲ್ಲಿ ಉಳಿದೆವಲ್ಲ, ನಮ್ಮ ಅತ್ತೆಯರೂ, ನಮ್ಮ ಅಕ್ಕಂದಿರೂ, ಕಾಣುವುದಿಲ್ಲ. ಮಾವಾಜಿಯೂ ಇಲ್ಲ. ಅಯ್ಯೋ! ಈ ಸಂಪತ್ತೂ ಕ್ಷೀಣವಾಗಿ ಹೋಯಿತು.'' ಭರತ ಕುಮಾರರ ಸತಿಯರು ಅಳುತ್ತ ಅಳುತ್ತ ಹೇಳಿದರು.

ಭರತ ರಾಜನ ಸೊಸೆಯರು ಮಾತ್ರ ದುಃಖದಲ್ಲಿ ನೊಂದುದಲ್ಲ; ಊರಿನ ತರುಣಿಯರೂ ನಾಡಿನ ಹೆಣ್ಣುಗಳೂ ಪರಸ್ತ್ರೀಯರ ಸೋದರನಾದ ಭರತೇಶನು ಹೋದ ದುಃಖವನ್ನು ಸಹಿಸಲಾರದೆ ಕಂಗೆಟ್ಟರು. ''ಗಣ್ಯನಾದ ದೊರೆಯೆ, ನೀನು ಈ ರೀತಿಯಲ್ಲಿ

ಹೋಗುವುದೇ? ವಸ್ತ್ರವೊಡವೆಗಳು, ಮುತ್ತು ರತ್ನಗಳು, ಭೂಮಿ, ಬಂಗಾರಗಳು – ಎಂದು ಭೇದವಿಲ್ಲದೆ ದಾನವಮಾಡುವ ದೊರೆಯು ಹೋದೆಯಲ್ಲ'' ಎಂದು ಬ್ರಾಹ್ಮಣರು ಗೋಳಿಟ್ಟರು. ಭರತೇಶನು ಮುಕ್ತಿಗೆ ಸಂದ ವಾರ್ತೆಯನ್ನು ಕೇಳಿದ ದಾರಿಹೋಕರು, ನಾಡಿನ ಜನರು, ಪರಿವಾರ, ವಿದ್ವಾಂಸರು, ರಾಜಾಧಿರಾಜರು — ಎಲ್ಲರೂ ಹಗಲಿರಳು ಕಣ್ಣೀರು ಕರೆದು ಚಿಂತಿಸಿದರು.

ಮನುಷ್ಯರು ದುಃಖಿಸುವುದು ಹಾಗಿರಲಿ. ತಮ್ಮ ದೊರೆ ಇಲ್ಲವೆಂದು ಆನೆ ಕುದುರೆ ಹಸುಗಳೆಲ್ಲವೂ ಹುಲ್ಲು ತಿನ್ನದೆ, ನೀರು ಕುಡಿಯದೆ ಒಂದೆರಡು ದಿನಗಳವರೆಗೆ ದುಃಖಿಸುತ್ತಿದ್ದುವು. ವಿಜಯ ಪರ್ವತವೆಂಬ ಆನೆಯೂ ಪವನಂಜಯವೆಂಬ ಕುದುರೆಯೂ ಮೇವನ್ನು ಬಿಟ್ಟು ದೇಹವನ್ನು ತ್ಯಜಿಸಿ ದೇವತೆಗಳಾದುವು. ಭರತೇಶನ ಸ್ಪರ್ಶವು ಯಾರನ್ನೂ ರಕ್ಷಿಸುವುದು. ಮನೆಯೊಡೆಯನು ದೀಕ್ಷೆಗೊಂಡನೆಂದು ವಿಶ್ವಕರ್ಮನು ತನ್ನ ಮನೆಯಲ್ಲೇ ವ್ರತ ಮಾಡತೊಡಗಿದನು. ತನ್ನ ಹಿತಕ್ಕಾಗಿ ಅಯೋಧ್ಯಾಂಕನೂ ದೀಕ್ಷೆ ಪಡೆದನು. ಚಕ್ರ ಮುಂತಾದ ಏಳು ನಿರ್ಜೀವ ರತ್ನಗಳು ಯಥಾಕ್ರಮವಾಗಿ ನವನಿಧಿಯನ್ನು ಸೇರಿಕೊಂಡುವು. ಶುಕ್ರನು ಅಸ್ತಮಿಸುವಂತೆ ಅವುಗಳು ಇಲ್ಲದಾದುವು. ಭರತೇಶ ಚಕ್ರಿಯು ಇಲ್ಲವೆಂದ ಮೇಲೆ ಅವುಗಳೇಕಿರಬೇಕು? ಚಕ್ರಿಯ ಪುಣ್ಯದಿಂದ ಮಂದಿರದಲ್ಲಿ ಮೂಡಿದ ಅವುಗಳು ಅವನು ಹೋದಾಗ ತಾವೂ ಬಂದಂತೆ ಹೋದುವು. ಬಾಯಿ ಬಿಟ್ಟಿದ್ದ ವಜ್ರಕವಾಟುಗಳು ಕೂಡ ಮುಚ್ಚಿಕೊಂಡುವು.

ಇತ್ತ ಭರತೇಶ್ವರನಿಲ್ಲದೆ ಭೂಕಾಂತೆಯು ಭ್ರಮೆಯಿಂದ ಗೋಳಿಡುತ್ತಿರುವಾಗ ಅತ್ತ ಅವನು ಅಮೃತಕಾಂತೆಯೊಡನೆ ರಮಿಸುತ್ತಿದ್ದನು. ತನ್ನ ಶೃಂಗಾರವನ್ನು ಕೆಡಿಸಿಕೊಳ್ಳದೆ ತನ್ನನ್ನು ತಾನೇ ನೋಡಿ, ಕರ್ಮಗಳನ್ನು ನಾಶಮಾಡಿದಾಗ ಅವನ ಮೂರು ದೇಹಗಳೂ ಅಳಿದು ಶೃಂಗಾರಸಿದ್ಧನೆಂಬ ಹೆಸರಾಯಿತು. ಶೃಂಗಾರಸಿದ್ಧನು ಹೋಗುವಾಗ, ದೂರದಲ್ಲಿಂದಲೇ ನೋಡಿದ ಮುಕ್ತಿಕಾಂತೆಯ ದೂತಿಯರು ತಮ್ಮ ಒಡತಿಗೆ ಹೇಳಿದರು. ಅದನ್ನು ಕೇಳಿ ಮುಕ್ತಿಕಾಂತೆ ರೋಮಾಂಚಗೊಂಡು ತನ್ನ ಮಂಚದಿಂದೆದ್ದಳು. ಎದ್ದವಳೇ, ತನ್ನ ರಮಣನನ್ನು ಕರೆತಂದರೆಂದು ಆ ದೂತಿಯರಾದ ಕ್ಷಮೆಯನ್ನೂ ವಿರಕ್ತಿಯನ್ನೂ ಅಪ್ಪಿಕೊಂಡು ಮನ್ನಿಸಿ, ಆ ಕೆಳದಿಯರನ್ನು ಕೂಡಿಕೊಂಡು ವಿಕ್ರಮನನ್ನು ಎದುರುಗೊಳ್ಳಲು ಬಂದಳು.

ಹಲವು ಕಾಲದಿಂದ ಅವನ ಬೇಟಕ್ಕಾಗಿ ಕಾದು ಕುಳಿತ ಆ ಚಾಟು ಹೆಣ್ಣು ಈಗ ಅವನು ಕೂಟಕ್ಕಾಗಿ ಬಂದನೆಂದಾಗ ಉಬ್ಬದಿರುವಳೆ? ನಗು ನಗುತ ಬಂದು ಇದಿರುಗೊಂಡ ಆ ಸಂಭ್ರಮವೇ ಸಂಭ್ರಮ! ದಯೆ, ಶಾಂತಿ, ಕಾಂತಿ. ಸನ್ಮತಿ, ಶುದ್ಧಿ, ಬುದ್ಧಿಯೆನ್ನುವ ವಿಲಾಸಿನಿಯರು ಛತ್ರ, ಚಾಮರ, ಕಲಶ, ಕನ್ನಡಿ ಮೊದಲಾದುವುಗಳನ್ನು ಹಿಡಿದು ಅವಳೊಂದಿಗೆ ನಡೆದರು. ಸೊಗಸಾಗಿ ಸಿಂಗರಿಸಿಕೊಂಡ ವಿದ್ಯಾದೇವಿಯರು 'ಶೃಂಗಾರಧವಳ'ವನ್ನು ಹಾಡುತ್ತ ಮುಂದೆ ಸಾಗಿದರು. ಅವರ ಹಿಂದಿನಿಂದ ಶೃಂಗಾರರಸದ ಸೋನೆಯನ್ನು ಸುರಿಸುತ್ತ ದಿವ್ಯ ಶೃಂಗಾರೆಯಾದ ಮುಕ್ತಿಕಾಂತೆಯು

ಓಜೆಯಿಂದ ಬಂದಳು. ಕಲ್ಯಾಣದೇವಿಯರು ವೇಣು, ವೀಣೆ, ಸ್ವರ–ಮಂಡಲಗಳನ್ನು ಎತ್ತಿ ಹಾಡುತ್ತಿರಲು, ಜಾಣೆ ಪರಾಕು, ಅವಧಾನ, ಜತನ — ಎಂದು ವಾಣಿಯು ಘೋಷಿಸುತ್ತಿದ್ದಳು.

ಅಣಿಮಾದಿಸಿದ್ಧಿ ದೇವಿಯರು, ಮಣಿದು ಹಾವುಗೆಗಳನ್ನು ಮೆಟ್ಟಿಸುತ್ತ ಕೈ ಕೊಡುತ್ತ ಭೂಷಣಗಳು ಕೊಂಕಲು ಸರಿಪಡಿಸುತ್ತ ಒಡನಿದ್ದರು. 'ತಾಳ್ಮೆಯಿಂದ ನಡೆ, ತಾಳ್ಮೆಯಿಂದ ನುಡಿ, ನಿನ್ನ ರಮಣನು ಕಡು ಜಾಣ' ಎಂದು ಲಕ್ಷ್ಮಿಯು ಮುಕ್ತಿಕಾಂತೆಯ ಕಿವಿಯಲ್ಲಿ ಸೂಚಿಸಿದಳು. ಮುಕ್ತಿಕಾಂತೆಯ ಅಂಗಾಲ ಕಾಂತಿ ಮೂರು ಲೋಕಗಳನ್ನೂ ಮುಸುಕಿತ್ತು. ತನ್ನ ದಿವ್ಯಾಂಗದ ಕಾಂತಿಯನ್ನು ಕಂಡಾಗಲೇ ಶೃಂಗಾರಸಿದ್ಧನನ್ನು ಆ ಕಾಂತಿಯಲ್ಲಿ ಮುಳುಗಿಸಬೇಕೆಂಬ ಬೆಡಗಿನಿಂದ ಆ ಸೊಬಗೆಯು ಬಂದಳು. ಮುಕ್ತಿ ಕಾಂತೆಯ ಸೇವಕಿಯರಿಗೇ ಸೂರ್ಯಚಂದ್ರರ ಕಾಂತಿಯಿತ್ತು, ಅದರೊಂದಿಗೆ ಮಿಗಿಲಾದ ತನ್ನ ಕಾಂತಿಯೂ ಕೂಡಿ ಕೋಟಿ ಸೂರ್ಯ ಚಂದ್ರರ ಕಾಂತಿಯು ಸಾಂದ್ರವಾಗುವಂತೆ ಅವಳು ಬರುತ್ತಿದ್ದಳು. ಕಾಮಿನಿಯರಿಗೆ ತನ್ನ ಪುಷ್ಪ ಭಾಷಣಗಳನ್ನು ಎಸೆಯುವ ಕಾಮನು ಆ ಸೀಮೆಯಲ್ಲಿ ಸುಳಿದಾಡಲು ಯೋಗ್ಯನಾಗಿಲ್ಲ. ಕಾರಣ ಮುಕ್ತಿ ಕಾಂತೆಯ ದಾಸಿಯರು ಕೋಟಿಮದನರನ್ನು ತಮ್ಮ ಕಣ್ಣ ನೋಟದಿಂದಲೇ ನೇಮಿಸುತ್ತಿದ್ದರು. ಮುಕ್ತಿ ಕಾಂತೆಯ, ನಿರ್ಮಲ ಚರಣಗಳಿಂದ ಹಿಡಿದಾದ ಮುಡಿಯವರೆಗೆ ಸಂಜೀವನದ ಅಮೃತವೆ ರೂಪವಾದಂತೆ ಇರುವಳು. ಆದ್ದರಿಂದಲೇ ಅವಳು ಅಮೃತಕಾಮಿನಿ. ಆದ್ದರಿಂದಲೇ ಅವಳಿಗೆ ಹುಟ್ಟು, ಮುಪ್ಪು, ಸಾವುಗಳು ಅಂಟಿಕೊಳ್ಳುವುದಿಲ್ಲ. ಸುರಲೋಕದ ನರಲೋಕದ ನಾಗಲೋಕದ ಹೆಣ್ಣುಗಳೆಲ್ಲ ಅವಳ ತೊತ್ತುಗಳ ಕಾಲುಂಗುಷ್ಟಕ್ಕೆ ನಿವಾಳಿಯಾಗತಕ್ಕವರು. ಎಂದರೆ ಅವಳ ಸುರಸೌಂದರ್ಯದ ಸೊಬಗು ಅವರ್ಣನೀಯ.

"ಗುರುಹಂಸನಾಥನೆ, ನೋಡಲ್ಲಿ ಆ ಅಮೃತಕಾಂತೆಯ ಚೆಲುವನ್ನು! ಹಾ ಅದನ್ನು ಬಣ್ಣಿಸುವ ದಕ್ಷನಾರು?"

ಅತ್ತ ಮುಕ್ತಿಸತಿಯು ಬರುತ್ತಿದ್ದಾಗ, ಇತ್ತ ಶೃಂಗಾರ ಸಿದ್ಧನು ವಿಲಾಸದಿಂದ ಕಾಂತಿಯನ್ನು ಸೂಸುತ್ತ ಬರುತ್ತಿದ್ದನು. ಅವನ ಆ ಮಹಾ ವಿಲಾಸವು ವರ್ಣನಾತೀತವಾಗಿತ್ತು, ಮೂರು ಲೋಕದ ಸತಿಯರ ಸೋಂಕಿನಲ್ಲಿದ್ದರೂ ಭವಸಾಗರವು ಕ್ಷಣಿಕವೆಂದು ಕೊಕ್ಕರಿಸಿ, ಮೂರು ದೇಹಗಳನ್ನೂ ಬಿಟ್ಟು ಚಿತ್ಪ್ರಭೆಯೇ ದೇಹವಾಗಿ ಪತಿಯು ಬರುತ್ತಿದ್ದನು. ಆಗ ಅತ್ತಿತ್ತ ತಿರುಗಿ ನೋಡುವ ನೋಟವಿರಲಿಲ್ಲ, ಸುತ್ತಲೂ ಇರುವುದನ್ನು ತಿಳಿಯುವ ಮೋಡಿಯೊಂದಿತ್ತು, ಎಂದೆಂದೂ ಜಾರದಿರುವ ಪ್ರಾಯದವನಾಗಿ, ಮೂರು ಲೋಕಗಳನ್ನೂ ಮುಸುಕಿ ಮುಂದೊತ್ತುವ ಪ್ರಭೆಯನ್ನು ಬೀರುತ್ತ ಬಂದನು. ದೇವೇಂದ್ರ, ನಾಗೇಂದ್ರ, ನರೇಂದ್ರರೆಲ್ಲರ ಮತ್ತು ಮನ್ಮಥರ ಲಾವಣ್ಯ ಸಿರಿಯನ್ನು ತನ್ನ ಉಂಗುಷ್ಟದಿಂದ ತಿರಸ್ಕರಿಸುವಂತೆ ಬರುತ್ತಿದ್ದನು. ಅವನೆಂದರೆ ಜಾಣನು. ಚೆಲುವನು, ಮೂರು ಲೋಕವನ್ನೇ ಎತ್ತುವಂಥ ತ್ರಾಣ, ಮಹಾ ಸುಖಿ. ಕಂಡೊಡನೆಯೇ ಮುಕ್ತಿ ಸತಿಯನ್ನು ಸೋಲಿಸುವ ಬಿನ್ನಾಣದಿಂದ ಮೆರೆದು ಬರುತ್ತಿದ್ದನು.

ಜೊತೆಗಾರರು ಯಾರೂ ಇಲ್ಲದಿರುವ ಶೃಂಗಾರಸಿದ್ಧನು ತಾನೊಬ್ಬನೇ ವೀರ ಮೋಡಿಯಲ್ಲಿ ನಡೆದು ಬರುತ್ತ ಹತ್ತಿರಕ್ಕೆ ಸರಿದು ಮುಕ್ತಿಕಾಂತೆಯನ್ನು ಕಂಡನು. ಆಕೆಯೂ ಅವನನ್ನು ನೋಡಿದಳು. ಇಬ್ಬರಿಗೂ ಜುಮ್ಮನೆ ರೋಮಾಂಚನಗಳಾದುವು. ಕೂಡಲೇ ಬಿಗುಹೂ ಏರಿತು. ಸುಮ್ಮಾನವು ತಲೆಗೇರಿ ಮೂರ್ಛಿಸುವಂತೆ ಆಯಿತು. ಆಗ ಪರಬ್ರಹ್ಮನ ಶಕ್ತಿಯೇ ಜಾರಿತು. ಅದನ್ನು ಕಂಡು ಸರಸ್ವತಿಯೂ ಲಕ್ಷ್ಮಿಯೂ ಕೂಡಿ ಎದೆತಟ್ಟಿ "ನಿನ್ನ ಅರಸನಿಗೆ ಆರತಿಯನ್ನೆತ್ತು" ಎಂದು ಸೂಚಿಸಿದರು. ಮುಕ್ತಿಕಾಂತೆಯಾಗ ಶೃಂಗಾರಸಿದ್ಧನ ಪಾವುಗೆಗಳನ್ನು ಪರಿಹರಿಸಿ ಪತಿಯೆಡೆಯಲ್ಲಿ ನಿಂತಳು. ಸತಿಯರು ಕಲಶ ಕನ್ನಡಿಗಳನ್ನು ಹಿಡಿದು ನಿಂತಿದ್ದರು. ಅವನು ಅವರನ್ನು ನೋಡಲಿಲ್ಲ, ಮುಕ್ತಿ ಸತಿಯ ಮಾಲೆಯೆಂಬ ಚಿನ್ನದ ಕಲಶವನ್ನೂ ಮುಖವೆಂಬ ಮಣಿಯ ಕನ್ನಡಿಯನ್ನೂ ಸಂತೋಷದಿಂದ ನೋಡಿದನು. ಆಕೆ ಆರತಿಯೆತ್ತಿ ಹೊಸದಾದ ಮಂದಾರ ಮಾಲೆಯನ್ನು ಪತಿಯ ಕೊರಳಿಗೆ ಹಾಕಿದಳು. ನೆರೆದ ನಾರಿಯರೆಲ್ಲರೂ ಧವಳವನ್ನು ಹಾಡುತ್ತಿರಲು ಮುಕ್ತಿಕಾಂತೆಯು ಸಿದ್ಧ ದೇವನ ಪಾದಕಮಲಗಳಿಗೆರಗಿದಳು.

ಕಾಲಿಗೆರಗಿದಾಗ ಆಕೆಯ ಕೈ ಹಿಡಿದು ಎತ್ತಿ ನಿಲ್ಲಿಸುವ ಪ್ರೀತಿಯು ಸಿದ್ಧನಲ್ಲಿ ಉಂಟಾಯಿತು. ಆದರೂ ಅದನ್ನು ಮರೆತು ಸುಮ್ಮನೆ ನೋಡುತ್ತಿದ್ದನು. ಅವನೇಕೆ ಆ ರೀತಿಯಲ್ಲಿ ನೋಡುತ್ತಿದ್ದನೋ? ಅವನೇನನ್ನು ನೆನೆಯುತ್ತಿದ್ದನೋ? ಬಳಿಯವರೊಪ್ಪಿಸಿ ಕೊಡದೆ ತಾನಾಗಿ ಬಂದ ಹೆಣ್ಣನ್ನು ಹೇಗೆ ಕೈ ಹಿಡಿಯುವುದೆಂದು ಸುಮ್ಮನಿರುವನೇ? ಶ್ರೇಷ್ಠನಲ್ಲವೆ ಸಿದ್ಧನು. ಅವನು ನೋಡುತ್ತಿದ್ದ ರೀತಿಯನ್ನು ಅಲ್ಲಿದ್ದ ಸಖಿಯರು ತಿಳಿದುಕೊಂಡರು.

"ಸೋತು, ಕಾಲು ಹಿಡಿದ ಹೆಣ್ಣನ್ನು ಕೈ ಹಿಡಿದು ಸ್ವೀಕರಿಸು ಸ್ವಾಮಿ. ವಿಖ್ಯಾತೆಯನ್ನು ಯಾರು ಕೊಡಬೇಕು? ಅವಳ ತಾತನಾರು? ತಾಯಿ ಯಾರು? ತನ್ನಿಂದಲೇ ತಾನಾದ ವಿನೀತೆಯಲ್ಲವೆ ಆವಳು? ಅನು ಕಾಲವೂ ನಿನ್ನನ್ನೇ ಬಯಸಿ, ನೀನು ಬರುವ ದಾರಿಯನ್ನೇ ನೋಡುತ್ತಿದ್ದು, ನೀನು ಬಂದಾಗ ಬಳಿಗೆ ಬಂದು ಮಣಿದಿರುವ ರಮಣಿಯ ಕೈ ಹಿಡಿಯದ ನೋಡುತ್ತಿರುವ ನಿನ್ನ ರೀತಿಯಿದು ಹೊಸತು. ನಿಷ್ಕರುಣಿ. ಕಿವಿಯ ಆಸೆಯಿಂದ ಕೇಳಿ, ಕಣ್ಣಿನ ಕಾಮನೆಯಿಂದ ಕಂಡು, ಸವಿಯಾದ ಸಂಗಕ್ಕಾಗಿ ಬಯಸಿ, ಈಗ ಬಳಿಗೆ ಬಂದಿರುವ ಯುವತಿಯನ್ನು ತೆಗೆದು ಅಪ್ಪಿಕೊಳ್ಳದಿರುವ ನೀನು ಆತ್ಮಾನುಭವಿಯೇ? ಹಾ ಹಾ! ಈ ನಿನ್ನ ಪ್ರೇಯಸಿ ನಿನಗಾಗಿ ಸೋತು ಎರಗಿದವಳಲ್ಲವೆ? ನವಪ್ರೌಢತಿಯು ಮಹಾ ಪತಿಭಕ್ತೆ, ನೀನಾದರೋ ನಾಯಕೋತ್ತಮನು. ಸತ್ಕಲಾಪನು. ಅವಳನ್ನು ವರಿಸು" ಎಂದು ಅವರು ಕೇಳಿಕೊಂಡರು. ಸಿದ್ಧನು ಅದಕ್ಕೂ ನಗುತ್ತು ನಿಂತೇ ನೋಡುತ್ತಿದ್ದನು. ಅಷ್ಟರಲ್ಲಿ ಅವನ ಭಾವನೆಯಲ್ಲೇ ಇದ್ದ ಗುರು ಹಂಸನಾಥನು ತಾನೇ ಇತ್ತುದೆಂದೂ ಕೈ ಹಿಡಿಯೆಂದೂ ಹೇಳುತ್ತಿರುವಾಗಲೇ ಅವಳನ್ನು ಕೈ ಹಿಡಿದೆತ್ತಿ ತೋಳು ತುಂಬುವಂತೆ ಅಪ್ಪಿಕೊಂಡನು. ಅಲ್ಲಿದ್ದ ತರುಣಿಯರು ಸಂತೋಷದಿಂದ ಜಯ ಜಯವೆಂದರು. ಶೃಂಗಾರಸಿದ್ಧನಾಗಲೇ ಮುಕ್ತಿವನಿತೆಯನ್ನು ಕೈ ಹಿಡಿದುಕೊಂಡು ಸಜ್ಜೆಯ ಮನೆಗೆ ಭರದಿಂದ ನಡೆದನು. ಸರ್ವ

ಸೇವಕಿಯರೂ ಹೊರಗೆ ಉಳಿದರು. ಅವರಿಬ್ಬರೇ ಒಳಗೆ ಹೋದರು; ಆ ದಿವ್ಯ ಯೋಗಿಗಳು ತಮ್ಮ ಮನಸ್ಸಿನ ಆಳಲು ಆರುವವರೆಗೂ ನಿರ್ವಾಣರತಿಯಲ್ಲಿ ಸುಖಿಸಿದರು.

ಪರಮ ಸವ್ಯಕ್ತದ ಸೆಜ್ಜೆಮನೆಯಲ್ಲಿ ನಿರ್ಗುರು ಲಘುಗುಣದ ಮೇಲ್ಕಟ್ಟು ಆವರಿಸಿಕೊಂಡಿತ್ತು. ನಿರ್ಭಾಧಿಕ ಗುಣವೆಂಬ ತೆರೆಯಿತ್ತು. ಅವರು ಅದರೊಳಗೆ ಹೋದರು. ಅಲ್ಲಿ ದರ್ಶನವೆಂಬ ದೀವಟಿಗೆ ಉರಿಯುತ್ತಿತ್ತು, ಶಕ್ತಿ ಮಂಚದಲ್ಲಿ ಹೊಳೆಯುತ್ತಿರುವ ಸೂಕ್ಷ್ಮ ಗುಣದ ತಲೆಗಿಂಬು ಇತ್ತು. ಗಹನವಾದ ಹಾಸನ್ನು ಹಾಸಿದ್ದರು. ಅಲ್ಲಿ ಸುಜ್ಞಾನ ಸೌಂದರರು ಒಳಗೂಡಿದರು. ಮೈ ಮೈಯಲ್ಲಿ ಅಡುಗುವಂತೆ ಅಪ್ಪಿಕೊಂಡರು. ಸಕ್ಕರೆಯ ಸವಿಯನ್ನೂ ಮೀರಿಸುವ ತುಟಿಗಳ ಸವಿಯನ್ನು ಸವಿದರು. ಆ ಮನೋಹರ ಮೋಹಿಗಳು ಕೈಯ, ಮೈಯ ಕರೆ ಸೊಗಸಾಗುವಂತೆ ರಮಿಸಿದರು. ಮುಖವನ್ನು ನೋಡುವಾಗ ಮೂರು ಲೋಕದ ಮೋಹನವೇ ಮುಂದಿರುವಂತಿತ್ತು, ನಗೆಗಣ್ಣನ್ನು ನೋಡುವಾಗ ಶತಕೋಟಿ ಮನ್ಮಥರ ಓಲಗವನ್ನು ತಾನು ಆಳಿದಂತಿತ್ತು, ತನು ಸೋಂಕಿದಾಗ ಮೂರು ಲೋಕವನ್ನು ತುಂಬಿ ತುಳುಕುವ ಮೋಹನರಸವು ಹರಿಯಿತು. ಅವಳನ್ನು ನೋಡುವಾಗ ಲಾವಣ್ಯವೇ ತುಳುಕಾಡುತ್ತಿರುವ ರೂಪ. ಮನಸ್ಸಿನ ಭಾವವನ್ನು ಅರಿಯುವಾಗ ಅವಳ ಕೈವಲ್ಯ ದೃಗ್ಬೋಧವೇ ಬೇಕಲ್ಲದೆ ಉಳಿದ ಇಂದ್ರಿಯಗಳ ಸಮೂಹವು ಸಾಕಾಗುವುದಿಲ್ಲ. ಸರಸ, ಸಲ್ಲಾಪ, ಚುಂಬನ, ತೆಕ್ಕೆ, ನಗೆನೋಟ, ತವಕ, ಮುದ್ದಾಟ. ಬೆರಗು, ಬಿನ್ನಾಣ, ಲಲ್ಲೆ — ಇವೆಲ್ಲವುಗಳಲ್ಲೂ ಮುಕ್ತಿ ಕಾಂತೆಯು ಶೃಂಗಾರಸಿದ್ಧನೊಡನೆ ಬೆರೆತುಹೋಗಿದ್ದಳು. ಇಂದ್ರನ ವಧು, ಚಕ್ರಧರನ ಸ್ತ್ರೀರತ್ನ, ನಾಗೇಂದ್ರನ ಸತಿಯರಲ್ಲಾದ ಇಂದ್ರಿಯ ಸುಖವನ್ನಾಕೆಯು ಪಡೆದಿತ್ತಳು. ಅವಳ ಆಟಕ್ಕೆಣೆಯಿಲ್ಲ.

ಸಿದ್ಧನು ಮೂರು ಲೋಕಗಳಲ್ಲಿ ಅನಂತ ಜನ್ಮಗಳಲ್ಲಿ ತಾನು ಕಂಡು ಉಂಡಿರುವ ಸುಖಗಳನ್ನೆಲ್ಲ ಮರೆತನು. ಮುಕ್ತಿಕಾಂತೆಯು ನೆರೆದು ನೀಡಿದ ಆಟಕ್ಕೆ ಸೋತು ಅವಳೊಂದಿಗೆ ಏಕರಕವಾಗಿದ್ದನು. ಭ್ರಾಂತಿಪಟ್ಟು ಬಹಳ ಜನ್ಮಗಳಲ್ಲಿ ಬಹಳ ಸತಿಯರಲ್ಲೂ ರಮಿಸಿ ತೃಪ್ತಿಯಾಗದಿರುವ ಸಿದ್ಧನು ಅಮೃತಕಾಂತೆಯನ್ನು ಕೂಡಿದೊಡನೆ, ತಣ್ಣನೆ ತಳಿದು ವಿಶ್ರಾಂತಿಯಲ್ಲಿದ್ದನು. ಇಂದು ಒಡಗೂಡಿದಾಗಿನಿಂದ ಮೊದಲಾಗಿರುವ ಈ ಸಮಯಕ್ಕೆ ಇನ್ನು ಕೊನೆಯೆಂಬುದಿಲ್ಲ. ಅಮೃತಕಾಂತೆಯೊಡನೆ ಕೂಡಿದ ಸಿದ್ಧನು ಕೆಡದಂತಹ ಸಂಪತ್ತಿನಲ್ಲಿ ಕೂಡಿದ್ದನು. ಅವರಲ್ಲಿ ಎರಡೆಂಬುದು ಅಳಿದುಹೋಗಿ ಅಂದಿನಿಂದ ಒಂದೇ ರೂಪವಾಗಿದ್ದರು. ಅದನ್ನೇ ನೆರೆಮನೆಯಲ್ಲಿದ್ದ ಮುಕ್ತಿಕಾಂತೆಯರೂ ಸಿದ್ಧರೂ ನೋಡಿ ಸಂತೋಷಗೊಂಡರು. ಅವರು ಮೂರು ರತ್ನಗಳನ್ನೂ ಒಂದಾಗಿ ಕಂಡರು. ಅದನ್ನು ಅಮೃತಸ್ತ್ರೀರತ್ನದಲ್ಲೂ ಕಂಡರು. ನಮ್ಮ ಶೃಂಗಾರ ರತ್ನಾಕರ ಸಿದ್ಧನು ಹಂಸನಾಥನ ಮನೋರತ್ನಮಂಟಪವನ್ನು ಸೇರಿ ಶೋಭಿಸಿದನು.

ಈ ವರ್ಣನೆ ಸಾಕು. ಅವರು ಅಲ್ಲಿ ಆ ರೀತಿಯಲ್ಲಿ ಶೋಭಿಸುತ್ತಿರಲು ಇತ್ತ ಧರೆಯಲ್ಲಿ ಶೋಕಿಸುತ್ತಿರುವ ಹೆಂಗಸರನ್ನು ರಾಜಕುಮಾರರು ಸಮಾಧಾನ ಪಡಿಸಿದರೂ ಅವರೆಲ್ಲರೂ

ಕೂಡ ವ್ಯಾಕುಲದಲ್ಲೇ ಇದ್ದರು. ಯಾರಿಗೆ ಸಂಸಾರ ಸುಖವು ಸ್ಥಿರವಾಗಿದೆ? ಯಾರಿಗೆ ಕೈವಲ್ಯ ಸಿದ್ಧಿಯು ಕೇಡನ್ನುಂಟು ಮಾಡಿದೆ? ಹಂಸನಾಥನ ಭಕ್ತಿಯು ಏನನ್ನು ಕೊಡದು? ಆದ್ದರಿಂದ ಶ್ರೀ ಹಂಸನಾಥನೆ ಶರಣು. ಇನ್ನು ತಡವಿಲ್ಲದೆಯೇ ಅರ್ಕಕೀರ್ತಿ ಆದಿರಾಜರು ಪರಮ ದೀಕ್ಷೆಯನ್ನು ಪಡೆಯುವರು. ಕಲೆಕಾರರು ಅದನ್ನು ಅರ್ಕಕೀರ್ತಿ ವಿಜಯವೆಂದು ಕರೆಯುವರು. ತಲೆತೂಗಿ ಹೊಗಳುವರು.

ವಿಶ್ರಾಂತ ಒಡೆಯನಾದ ಭರತೇಶನ ನಿರ್ವಾಣ ಪೂಜೆಯನ್ನು ಇಂದ್ರನೇ ಮೊದಲಾದ ಕೋವಿದರು ಒಳ್ಳೇ ಕ್ರಮದಲ್ಲಿ ಪೂರೈಸಿ ಹೋದರು. ದೇಹವು ಒಂದಿಷ್ಟೂ ಜಗ್ಗದೆ ಬಹುಕಾಲ ಸುಖಿಸಿದ ಭರತೇಶನು ಥಕ್ಕನೆ ಮೋಕ್ಷದಲ್ಲಿ ಘನತೆಯನ್ನು ಪಡೆದನು. ಇದು ಭರತೇಶ್ವರನ ಕೈವಲ್ಯ ಸಿದ್ಧಿ ಮೋಕ್ಷ ವಿಜಯ.

## ೨೬

# ಸರ್ವರ ನಿರ್ವೇಗ

ಶ್ರೀ ಹಂಸ! ನಮೋ ಶ್ರೀ ಹಂಸ! ಭರತೇಶ್ವರನು ಮೋಹನ ಸಿದ್ಧಿ ಪಡೆದುದರ ಫಲವು ಅಮೋಘವಾಯಿತು. ಈ ಭೂಮಿಯಲ್ಲಿರುವ ದೇಹಿಗಳೆಲ್ಲರೂ ಪರಮ ವೈರಾಗ್ಯವನ್ನು ಪಡೆದರು. ಭೂಮಿಗೆ ಅಗ್ರಗಣ್ಯನಾದ ಭರತಚಕ್ರಿಯ ಭಾಗ್ಯವೇ ಹಾಗಾದ ಮೇಲೆ ತಮ್ಮ ಬದುಕು ಇನ್ನೇನು ಸ್ಥಿರವೇ ಎಂದು ಭಾವಿಸಿದರು. ಛೀ ತಮ್ಮ ಬದುಕು ತಮಗೇ ಬೇಡವೆಂದು ದೀಕ್ಷೆ ಗೊಂಡರು.

''ಆ ರೀತಿಯ ಅರಸನೇ, ಭೋಗವನ್ನು ತೊರೆದ ಮೇಲೆ ನಾವು ಈ ರೀತಿಯ ಜನರು ಸುಖಕ್ಕೆ ಸಿಕ್ಕುವುದೆಂದರೆ ಗೊಲ್ಲರ ವರ್ತನೆಯೇ ಆದೀತು'' ಎಂದು ಯೋಚಿಸಿದ ಕೋವಿದರು ಹೋಗಿ ತಪಸ್ವಿಗಳಾದರು. ''ಭರತೇಶನನಂತಹ ಜಾಣನು ಇಲ್ಲಿದ್ದುದನ್ನೂ ಈಗ ಹೋದುದನ್ನೂ ನಾವು ನೋಡಿ, ತಿಳಿದ ಮೇಲೂ ಮೈ ಮರೆತಿರುವುದು ಕುರುಬರ ನಡತೆಯಾದೀತು'' ಎಂದು ಸಂಸಾರದಲ್ಲಿರಲು ಅಸಹ್ಯಪಟ್ಟು ಮನೆ ಬಿಟ್ಟು ತಪಸ್ಸಿಗೆ ನಡೆದು ಬಿಟ್ಟರು. ಭರತೇಶನು ಇದ್ದಾಗ ಮನೆಯನ್ನು ಕಟ್ಟಿಕೊಂಡು ಬಾಳಬೇಕು. ಆ ರಾಜನು ಹೋದ ಮೇಲೆ ತಮಗೆ ತಿರಿದು ಉಣ್ಣುವುದೇ ಸುಖಕರವೆಂದುಕೊಂಡು ಹಲವರು ಸನ್ಯಾಸಿಗಳಾದರು. ಗಂಡು ಹೆಣ್ಣು ಎನ್ನದೆ ಎಲ್ಲರೂ ದೀಕ್ಷೆಗೊಳ್ಳುವುದನ್ನು ಕಂಡರೆ, ಅವರಿಗೆ ಆಮೇಲೆ ದೀಕ್ಷೆ ಕೊಡಲು ಈ ಭೂಮಿಯಲ್ಲಿ ಯಾರು ಉಳಿಯುವರಪ್ಪ — ಎಂದು ಹಲವರು ಒಟ್ಟುಗೂಡಿ ಯೋಚಿಸುವಂತಾಯಿತು. ಕರ್ಮವು ಸಡಿಲವಾದ ನರರೆಲ್ಲ ತಪಸ್ಸಿಗೆ ಹೋದರು. ಕರ್ಮವು ದೃಢವಾಗಿದ್ದವರೆಲ್ಲರೂ ಮನೆಗಳಲ್ಲಿದ್ದುಕೊಂಡು ನಿರ್ಮಲರಾದ ಮುನಿಗಳ ಅರ್ಚನೆ ಮಾಡಿದರು. ಧರ್ಮಕ್ಕೆ ಎಂದೆಂದೂ ದಾರಿದ್ರ್ಯವಿಲ್ಲ.

ಪೌದನಪುರದ ಅರಸನಾದ ಮಹಾಬಲರಾಜನು ತನ್ನ ತಮ್ಮಂದಿರನ್ನು ಕರೆದು ತಾನು ದೀಕ್ಷೆಗೊಳ್ಳುವೆನೆಂದೂ ಅವರು ಭೂಮಿಯನ್ನಾಳುತ್ತಿರಬೇಕೆಂದೂ ಸೂಚಿಸಿದಾಗ ಅವರೊಪ್ಪಲಿಲ್ಲ. ಆಗ ಅವರು ಮೂವರೂ ಒಟ್ಟಾಗಿ ಅರ್ಕಕೀರ್ತಿ ಆದಿರಾಜರಿಗೆ ತಿಳಿಸಿ ತಾವೂ ದೀಕ್ಷೆಗೊಳ್ಳುವೆವೆಂದು ಯೋಚಿಸಿದರು. ಅದರಂತೆ ಮಹಾಬಲರಾಜನು ತನ್ನ ತಮ್ಮಂದಿರಾದ ರತ್ನಬಲರಾಜ ಮತ್ತು ಸುಬಲರಾಜರನ್ನು ಕೂಡಿಕೊಂಡು ಅಯೋಧ್ಯೆಗೆ ಹೊರಟುಬಿಟ್ಟನು. ಅವರು ತಮ್ಮ ಅಗಣಿತ ಬಲವನ್ನೂ ವಾದ್ಯಗಳ ರಂಜನೆಯನ್ನೂ ಸೊಗಸಾದ ಅಲಂಕಾರಗಳನ್ನೂ ವರ್ಜಿಸಿ, ದುಃಖದಿಂದಲೇ ಶೃಂಗಾರ ಮಾಡಿಕೊಂಡವರಂತೆ ಅಯೋಧ್ಯೆಗೆ ಬಂದರು.

ಭರತಚಕ್ರಿ ಇದ್ದಾಗ ಇದ್ದ ಪುರದ ಸಂಪತ್ತೆಲ್ಲವೂ ನಂದಿಹೋಗಿರುವುದನ್ನು ಕಂಡು ತಾವು ನೊಂದುಕೊಂಡರು. ಆ ನಗರದಲ್ಲಿರುವುದಕ್ಕಿಂತ ಅರಣ್ಯದ ಮಂದಿರವೇ

ಲೇಸೆಂದುಕೊಂಡರು. ''ಅಯ್ಯೋ ಈ ಪುರದ ಸಂಪತ್ತನ್ನು ನಮ್ಮ ಅಯ್ಯನು ತನ್ನೊಡನೆ ಒಯ್ದನೇನು? ಅವನ ದೇಹವೊಂದು ಇಲ್ಲದಾಗ ಹೀಗಾಗಬಹುದೇ? ಅಯ್ಯಾ, ನೀನೇ ಇದನ್ನು ನೋಡು. ಈ ನಗರವು ಈ ರೀತಿಯಾದ ಮಾತೇನು? ನಾಡೆಲ್ಲವೂ ಕಳಗುಂದಿದೆ. ಈ ರೀತಿಯಾಗುವಂತೆ ಈ ಭೂಮಿಯನ್ನು ಆಳುವವರು ಯಾರಪ್ಪ?'' ಎಂದು ಅವರು ತಂದೆಯ ಗುಣವನ್ನು ನೆನೆದು ಹೆಮ್ಮೆಗೊಂಡರು. ಮುಂದೆ ಬರುತ್ತಿರುವಾಗ ಕಾಂತಿರಹಿತವಾದ ರತ್ನಗೋಪುರವೂ ಮಣಿಮಾಡವೂ ಕಾಣಿಸಿತು. ಅದನ್ನು ನೋಡಿದ ಅವರು, ತಮ್ಮ ಅಯ್ಯನೊಂದಿಗೆ ಇವುಗಳ ಶೃಂಗಾರವೂ ಹೋದುವೇ — ಎಂದುಕೊಂಡರು. ಅಯೋಧ್ಯೆಯ ಬಣ್ಣಗೆಟ್ಟ ರಾಜಗೃಹದಲ್ಲಿ ಪ್ರಜೆಗಳ ಕಣ್ಣೀರು ಹನಿಯುತ್ತಿತ್ತು ಇದನ್ನೆಲ್ಲ ನೋಡಿ, ಅಣ್ಣಂದಿರು ಇಲ್ಲಿರುವುದು ಆಶ್ಚರ್ಯವೇ ಸರಿ ಎಂದು ಅವರು ಭಾವಿಸುತ್ತ ಮುನ್ನಡೆದರು.

ಅವರು ದೂರದಲ್ಲೇ ತಮ್ಮ ಅಂದಳದಿಂದ ಇಳಿದರು. ನಡೆದು ಕೊಂಡೇ ಕಡೆಯ ಹಜಾರವನ್ನು ಹತ್ತಿದರು. ಅವರನ್ನು ದೂರದಿಂದಲೇ ನೋಡಿದ ಅರ್ಕಕೀರ್ತಿ ರಾಜೇಂದ್ರನು ಅವರು ಯಾರೆಂದು ಹತ್ತಿರವಿದ್ದವರೊಡನೆ ವಿಚಾರಿಸಿದನು. ಅವರು ಭರದಿಂದ ಹತ್ತಿರ ಬಂದಾಗ ನೋಡಿದನು. ತನ್ನ ಸೋದರರೆಂದು ತಿಳಿದನು. 'ತಂದೆಯು ಹೋದರೆ ಅವನೊಂದಿಗೆ ಅರಸುತನದ ಮೋಡಿಯನ್ನು ಅಟ್ಟಿದರೇ' ಎಂದು ದುಃಖಗೊಂಡನು. ''ಅಂದು ಅಯ್ಯನು ಹೆಚ್ಚಿನ ಆಭರಣಗಳ ಶೃಂಗಾರದಿಂದ ಬರುತ್ತಿದ್ದ ಇವರನ್ನು ಕಂಡಿದ್ದರೆ, ಇಂದು ನಾನು ದಾರಿದ್ರ್ಯ ರಸದಿಂದ ಬರುತ್ತಿರುವ ಅವರನ್ನು ಕಣ್ಣಾರೆ ಕಾಣುವಂತೆ ಆಯಿತಲ್ಲ, ಹಾ!'' ಎಂದು ಅರ್ಕಕೀರ್ತಿ ರಾಜನು ನೊಂದುಕೊಂಡು ನುಡಿದನು. ಆ ಮೂವರೂ ಅಣ್ಣನ ಬಳಿಗೆ ಬಂದು ನಿವಾಳಿಯಿಟ್ಟು, ಕಾಣಿಕೆ ಒಪ್ಪಿಸಿ ಸಾಷ್ಟಾಂಗವಾಗಿ ಅಡ್ಡಬಿದ್ದರು. ಸಹಿಸಲಾರದೆ ಮೂವರೂ ಗೋಳಿಟ್ಟರು.

''ಅಪ್ಪಾಜಿ ಎಲ್ಲಿ? ಅಯ್ಯನನ್ನು ಎಲ್ಲಿಗೆ ಕಳುಹಿಸಿದೆ? ನಮಗೆ ಒಂದು ಮಾತನ್ನು ಹೇಳುತ್ತಿದ್ದರೆ ಏನು ದೋಷವಾಗುತ್ತಿತ್ತು? ಅಣ್ಣಾಜಿ, ನಾವು ನಿಮಗೆ ಏನಾದರೂ ಸಲ್ಲದ ಕೆಲಸ ಮಾಡಿದ್ದೇವೆಯೇ?'' ಎಂದು ಅವನ ಮೃದು ಚರಣಗಳನ್ನು ಒತ್ತಿ ಹಿಡಿದು ಅತ್ತರು. ಆಗ ಅರ್ಕಕೀರ್ತಿಯ ಕಣ್ಣಿನಲ್ಲೂ ಕಣ್ಣೀರ ಕೋಡಿ ಹರಿಯಿತು. ''ನನ್ನಿಂದ ಮೋಸವಾಯಿತು. ನನ್ನನ್ನು ಕ್ಷಮಿಸಿ ಅಣ್ಣ!'' ಎಂದು ಆ ಮೂವರು ತಮ್ಮಂದಿರನ್ನೂ ಹಿಡಿದೆತ್ತಿ ಅಪ್ಪಿಕೊಂಡನು. ಅನಂತರ ಅವರು ಆದಿರಾಜನ ಅಡಿಗಳಿಗೂ ನಮಿಸಿದರು. ಅವನೂ ಅವರನ್ನು ದುಃಖದಿಂದಲೇ ಅಪ್ಪಿಕೊಂಡನು. ಅನಂತರ ಅವರನ್ನು ಸಮಾಧಾನಪಡಿಸಿ ಹತ್ತಿರದಲ್ಲೇ ಕುಳ್ಳಿರಿಸಿಕೊಂಡರು.

''ಅಣ್ಣ ಮಹಾಬಲರಾಜು ಕೇಳು. ಇನ್ನೂ ತಡವಾಗಲಿಲ್ಲ, ಒಡೆಯರೇನೋ ಬೇಗನೆ ಮೋಕ್ಷವನ್ನು ಪಡೆದರು. ಇಲ್ಲದಿದ್ದರೆ ನಾನು ನಿಮಗೆ ಸೂಚಿಸದಿರುತ್ತಿದ್ದೆನೇ? ಆಯುಷ್ಯ ಕೊನೆ ಮುಟ್ಟಲು ಬಂದುದರಿಂದ ಅಯ್ಯನು ಒತ್ತಾಯದಿಂದ ನನ್ನ ಮೇಲೆ ಈ ರಾಜ್ಯವನ್ನು ಹೊರಿಸಿ, ವಾಯುವೇಗದಿಂದ ಕರ್ಮಗಳನ್ನು ಸುಟ್ಟು ಕೈವಲ್ಯಶ್ರೀಯನ್ನು ಸೇರಿದನು'' ಎಂದು ಅರ್ಕಕೀರ್ತಿ ರಾಜನು ನುಡಿದನು.

''ದೇವರಿಂದ ಯಾವ ಕೊರತೆಯೂ ಆಗಿಲ್ಲ. ನಾವು ನಮಗಾದ ನೋವಿಗಾಗಿ ಇಷ್ಟು ಮಾತಾಡಿದೆವು. ನಾವು ಪುಣ್ಯಹೀನರಾದುದರಿಂದ ಅವರನ್ನು ನೋಡಲು ಆಗಲಿಲ್ಲವೆಂದು ಇಷ್ಟು ಹೇಳಿಕೊಂಡೆವು'' ಎಂದು ಮಹಾಬಲರಾಜನು ಅಣ್ಣನನ್ನು ಸಮಾಧಾನ ಗೊಳಿಸಿದನು. ''ಅಪ್ಪಾಜಿ ತೆರಳಿದರೆ ಏನಾಯಿತು? ಇನ್ನು ನೀವೇ ನಮಗೆ ಅಪ್ಪಾಜಿ. ಆದರಿಂದ ನಮ್ಮೊಂದು ಬಿನ್ನಹವುಂಟು. ಅದನ್ನು ದಯವಿಟ್ಟು ಲಾಲಿಸಿ'' ಎಂದು ಮಹಾರಾಜನು ಹೇಳುತ್ತಿರುವಾಗ ಆ ಮೂವರು ಸೋದರರೂ ಎದ್ದು ನಿಂತರು. 'ಜನಕ ಹೋದ ದಿನವೇ ನಮ್ಮ ಮನಸ್ಸಿನ ಸಂತೋಷವೂ ಹೋಯಿತು. ಮನಸ್ಸಿಗೆ ಮಹಾ ವ್ಯಥೆಯಾಯಿತು. ಈ ದೇಹ ಹಿಂಡು ಹೊರೆಯಾಗಿದೆ. ನೋಡುವಾಗ ಈ ಬಾಳು ಒಂದು ಕನಸಿನಂತೆ ತೋರುತ್ತದೆ. ಸಾಗರದಿಂದ ಹಿಮಗಿರಿಯವರೆಗಿನ ರಾಜ್ಯವನ್ನು ಆಳಿದ ಅಗ್ರಗಣ್ಯನ ಅಂತಹ ಆಡಂಬರವೇ ಅಳಿದು ಹೋದ ಮೇಲೆ ಉಂಬಳಿಯಾಗಿ ಬಂದ ನಮ್ಮ ಸಿರಿಯು ಸ್ಥಿರವೆಂದು ನಂಬುವುದು ಹೇಗೆ ಅಣ್ಣ? ಅಯ್ಯನ ಅವಧಿಜ್ಞಾನದಿಂದ ತನ್ನ ಆಯುಷ್ಯದ ಅಂತ್ಯವನ್ನು ತಾನೇ ತಿಳಿದುಕೊಂಡು ಮುಕ್ತಿಗೆ ನಡೆದನು. ನಮಗೆ ನಮ್ಮ ಆಯುಷ್ಯದ ಅಂತ್ಯವನ್ನು ಕಾಣುವ ಗೌರವವುಂಟೆ ಅಣ್ಣಾಜಿ? ನೀನೇ ಹೇಳು. ಒಡಲು ಕೆಡುವುದಲ್ಲದೆ ಆತ್ಮನು ಕೆಡನೆಂದು ನಮಗೆ ಅಯ್ಯ ಆಗಾಗ ಹೇಳುತ್ತಿದ್ದರು. ನಾಶವಾಗುವ ದೇಹವನ್ನೇ ನಂಬಿರುವುದು ಜಾಣರ ನಡತೆಯೇ ಹೇಳು? ಆದ್ದರಿಂದ ನಾವು ದೀಕ್ಷೆಗೆ ಹೋಗುತ್ತೇವೆ. ನಮ್ಮನ್ನು ಪ್ರೀತಿಯಿಂದ ಕಳುಹಿಸಿಕೊಡು'' ಎಂದು ಮತ್ತೊಮ್ಮೆ ಆ ಮೂವರೂ ಸಹೋದರರು ಅಣ್ಣಂದಿರ ಅಡಿಗಳಿಗೆರಗಿದರು.

ಆ ಮಾತು ಕೇಳಿ ಅರ್ಕಕೀರ್ತಿಯ ಎದೆಗೆ ದಿಗಿಲಾಯಿತು. ''ಏಳಿ ಏಳಿ ಇದಕ್ಕೆ ಆಲೋಚನೆ ಮಾಡುವ'' ಎಂದನು.

''ಅದನ್ನೊಪ್ಪುವಂತಿಲ್ಲ, ನಮ್ಮ ಬಿನ್ನಹಕ್ಕೆ ಒಪ್ಪಬೇಕು. ಇಲ್ಲವಾದರೆ ಏಳುವುದಿಲ್ಲ''

''ಇದಕ್ಕೀಗ ವಾದ ಬೇಡವಣ್ಣ, ಈಗ ನೀವು ಎದ್ದು ಕುಳಿತು ನಮ್ಮ ಮಾತು ಕೇಳಿ'' ಎಂದಾಗ ಅವರೆಲ್ಲರೂ ಎದ್ದರು.

''ನನ್ನ ಮಾತನ್ನು ನೀವು ತಿಳಿದುದು ಉತ್ತಮ ಕಾರ್ಯವೇ ಆಯಿತು. ಹಾಗೆ ನೀವು ಹೇಳಿದುದನ್ನೇ ಮಾಡಬಹುದು. ಅಯ್ಯನು ಹೋದ ಮೇಲೆ ಈ ಭೂಮಿಯನ್ನು ಆಳುವುದು ಸುಖವಲ್ಲ. ದೀಕ್ಷೆಯೇ ನಿಜವಾದ ಸುಖ. ಆದರೆ ಒಂದು ಮಾತಿದೆ. ಅರೆ ವರುಷವಿದ್ದು ಎಲ್ಲರ ದುಃಖವನ್ನೂ ನಿವಾರಿಸಿ, ನೀವು ನಾವು ಎಲ್ಲರೂ ಒಂದಾಗಿ ತಪಸ್ಸು ಮಾಡುವ. ಸ್ವಲ್ಪ ಸಮಾಧಾನ ಮಾಡಿಕೊಳ್ಳಿ'' ಎಂದು ತಮ್ಮಂದಿರಿಗೆ ನುಡಿದು ಆದಿದೇವನ ಅಭಿಮತ ಕೇಳಿದನು. ಅವನೂ ಅಣ್ಣಾಜಿಯ ಮಾತನ್ನೇ ಸಮರ್ಥಿಸಿ, ಅರ್ಧ ವರ್ಷ ಸಹಿಸಿಕೊಳ್ಳಲು ತಮ್ಮಂದಿರಿಗೆ ಸೂಚಿಸಿದನು.

''ಜೀವನಿಗೆ ಕ್ಷಣಕ್ಕೊಂದು ಪರಿಣಾಮವಲ್ಲವೆ? ಇಂದು ಕುಣಿದಾಡುತ್ತಿರುವ ವಿರಕ್ತಿಯು ತಣಿದರೆ, ಮತ್ತೆ ಬರಬಹುದೆ? ಆದುದರಿಂದ ಎಲ್ಲರನ್ನೂ ಸಮಾಧಾನಪಡಿಸಿ ನೀವು ಆಮೇಲೆ ದೀಕ್ಷೆಗೆ ನಿಧಾನವಾಗಿ ಬರಬಹುದು. ಆದರೆ ಈಗ ನಮ್ಮ ಮಾತನ್ನು ಮನ್ನಿಸಿ ನಮ್ಮನ್ನು ಮಾತ್ರ ತಪಸ್ಸಿಗೆ ಕಳುಹಿಸಿಕೊಡಿ'' ಎಂದು ಮತ್ತೊಮ್ಮೆ ಅವರ

ಪಾದಗಳಿಗೆ ಹಣೆ ಚಾಚಿದರು. ಅಪ್ಪಾಜಿಯಾಣೆ, ಅವರಿಬ್ಬರ ಪಾದಗಳ ಆಣೆ, ಎಂದು ಅವರು ತಮ್ಮನ್ನು ತಪಸ್ಸಿಗೆ ಬೇಡಿಕೊಂಡಾಗ ಅನಿವಾರ್ಯವಾಗಿ ಅಣ್ಣಂದಿರಿಬ್ಬರೂ ಒಪ್ಪಿದರು.

''ನೀವು ಮುಂದೆ ಹೋಗಿರಿ, ನಾವು ಹಿಂದಿನಿಂದ ಬರುವೆವು''

''ನಮ್ಮಮನೆಯಲ್ಲಿನಂದನರಿದ್ದಾರೆ. ಅವರನ್ನು ರಕ್ಷಿಸಿಕೊಳ್ಳಿ''

''ಈ ಹೊತ್ತು ನಮ್ಮ ಪಂಕ್ತಿಯಲ್ಲೇ ಕುಳಿತು ಊಟಮಾಡಿ; ನಾಳೆ ಸಂತೋಷದಿಂದ ನೀವು ಹೋಗುವುದು.''

''ತಂದೆಯ ಮನೆಯಲ್ಲವೆ. ಅನಂತರ ದುಃಖ ಹೆಚ್ಚುವುದು.''

ಎಂದು ನುಡಿದವರೇ ಅಣ್ಣಂದಿರಿಬ್ಬರ ಕಾಲುಗಳಿಗೆರಗಿ ಸಂತೋಷದಿಂದ ಉಬ್ಬಿ ಮುಂದೆ ನಡೆದರು. ಅವರ ಮುಖಗಳಲ್ಲಿ ಬಣ್ಣವೇರುತ್ತಿತ್ತು, ಇವರ ಮುಖಗಳಲ್ಲಿ ಕಣ್ಣೀರು ಇಳಿಯುತ್ತಿತ್ತು.

ಬಾಹುಬಲಿಯ ಪುತ್ರರು ಅತ್ತ ಹೋದ ಮೇಲೆ ಉಳಿದವರ ಕುಮಾರರೂ ದುಃಖದಿಂದಲೇ ಶೃಂಗಾರವಾದವರಂತೆ ಅರ್ಕಕೀರ್ತಿ ರಾಜನಲ್ಲಿಗೆ ಬಂದರು. ಅವರಂತೆ ಇವರೂ ತಮ್ಮ ಮನದ ಇಚ್ಛೆಯನ್ನು ತಿಳಿಸಿದರು. ವೃಷಭಸೇನೇಂದ್ರನ ಪುತ್ರನಾದ ಅನಂತಸೇನೇಂದ್ರ ಮುಂತಾದ ಹೊಂತಕಾರಿಗಳಾದ ತಮ್ಮಂದಿರು ಅಣ್ಣನ ಬಳಿಗೆ ಬಂದು ತಮ್ಮ ದುಃಖವನ್ನು ತೋಡಿಕೊಂಡರು. ತಬ್ಬಲಿಗಳಾಗಿದ್ದು ಅವರನ್ನು ರಕ್ಷಿಸಿದವನು ಭರತೇಶ್ವರನು. ಆದ್ದರಿಂದ ಅವರ ದುಃಖ ಇಮ್ಮಡಿಯಾಯಿತು. ಭರತ ಚಕ್ರವರ್ತಿ ಯಾದರೋ ರಕ್ಷಣೆ ಮಾಡುವ ಕಾಲದಲ್ಲಿ ಅವರನ್ನು ತನ್ನ ನಂದನರನ್ನು ಕಾಣುವಂತೆ ಕಂಡನು. ಆದ್ದರಿಂದ ಅವರು ದುಃಖದಿಂದ ತರಹರಿಸಿದರು. ಭರತ ಚಕ್ರವರ್ತಿಯು ತಮ್ಮನ್ನು ತೊರೆದು ಹೋದನೆಂದವರು ಮತ್ತಷ್ಟು ಮರುಗಿದರು. ಗಂಡುಗಳಾದರೂ ಹೆಣ್ಣುಗಳಂತೆ ಅತ್ತರು.

''ಯಾರ ನೋಂಪಿಯನ್ನು ಜರೆದೆವೋ? ಈ ಮೊದಲು, ಯಾವ ಸುಖಿಗಳನ್ನು ನಿಂದಿಸಿದೆವೊ! ಅಯ್ಯೊ! ಧೀರಯೋಗಿಯ ಕೈಯಿಂದ ದೀಕ್ಷೆಯನ್ನು ಪಡೆಯುವ ಭಾಗ್ಯವಿಲ್ಲದಾಯಿತಲ್ಲ. ಅಪ್ಪಾಜಿಯಿಂದ ದೀಕ್ಷೆಯನ್ನು ಪಡೆಯಲು ನಾವು ವೃಷಭೇಂದ್ರ ಮತ್ತು ಹಂಸೇಂದ್ರರ ಸುತರ ಹಾಗೆ ಪೌರುಷವಂತರಾಗಲಿಲ್ಲ. ಅಲ್ಪಪುಣ್ಯರಾದ ನಾವು ಬಯಸಿದ ಮಾತ್ರಕ್ಕೆ ಆ ಗುರುವು ನಮಗೆ ದೊರೆಯುವಂತಿಲ್ಲ. ಈ ಭೋಗವು ನಮಗಿನ್ನು ಸಾಕು. ನಾವು ದೀಕ್ಷೆಗೆ ಹೋಗುವೆವು.''

ಎಂದು ಅವರೆಲ್ಲರೂ ಅಣ್ಣನಿಗೆ ವಂದಿಸಿದರು. ಅರ್ಕಕೀರ್ತಿಯು ಅವರನ್ನು ತಡೆದು ದೀಕ್ಷೆಗೆ ಹೋಗುವುದು ಬೇಡವೆಂದು ನುಡಿದರೂ ಅವರು ಒಪ್ಪಲಿಲ್ಲ. ''ನೀವೀಗ ನಡೆದರೆ ನಿಮ್ಮ ಹಿಂದಿನಿಂದ ನಾವೂ ಬರುವೆವು. ನಮಗೆ ಯಾವುದರ ಆಸೆಯೂ ಇಲ್ಲ'' ಎಂದೂ ತಿಳಿಸಿದನು. ಅವರೆಲ್ಲರೂ ಮಕ್ಕಳ ಹೆಸರನ್ನು ಹೇಳಿ, ಅವರನ್ನೆಲ್ಲ ರಕ್ಷಿಸಬೇಕೆಂದು ಕೇಳಿಕೊಂಡು ಕೈ ಮುಗಿದು ಗುಂಪುಗೂಡಿದ ಹಕ್ಕಿಗಳು ಹಾರಿಹೋಗುವಂತೆ, ದಿಕ್ಕು ದಿಕ್ಕಿಗೆ ಹಾರಿಹೋದರು.

ಹೀಗೆ ಸೋದರರೆಲ್ಲರೂ ಹೋದ ಮೇಲೆ, ಆ ರಾಜನ ಸೋದರಿಯರನ್ನು ಕೂಡಿಕೊಂಡು ಮೈದುನರೆಲ್ಲರೂ ಬಂದರು. ಭಾವನಿಗಾದ ವಿಷಾದವನ್ನು ನಿವಾರಿಸಬೇಕೆಂದು ಅವರೆಲ್ಲರೂ ಬಂದಿದ್ದರು. ಕನಕರಾಜ, ಕಾಂತಿರಾಜ ಮುಂತಾದ ಮೈದುನರೆಲ್ಲರೂ ದುಃಖದಿಂದಲೇ ಸಿಂಗರಿಸಿ ಕೊಂಡಂತಿದ್ದರು. ಅವರ ವನಿತೆಯರ ಆಂದಣಾಗಳು ಅರಮನೆಯನ್ನು ಸೇರಿದುವು. ಅವರೆಲ್ಲರೂ ಭಾವನ ಸಭೆಯನ್ನು ಸೇರಿದರು. ಅವರನ್ನು ಕಂಡೊಡನೆ ಅರ್ಕಕೀರ್ತಿ ರಾಜೇಂದ್ರನು ಎದ್ದು ಅವರನ್ನು ಇದಿರುಗೊಳ್ಳಲು ಮುಂದೆ ಬರುತ್ತಿರುವಾಗಲೇ ಇವರೆಲ್ಲರೂ ಅವನ ಬಳಿಗೆ ಬಂದರು. ಕಂಬನಿ ಸುರಿಸುತ್ತಿರುವವರನ್ನು ಕಂಬನಿಯಿಂದಲೇ ಇದಿರುಗೊಂಡನು. ಅವರೆಲ್ಲರೂ ತಕ್ಕೈಸಿ ಅವನನ್ನು ಅಪ್ಪಿಕೊಂಡರು. ''ಓಜೆಯಿಂದ ಅವರೆಲ್ಲರೂ ಕುಳಿತರು. ಅರ್ಕಕೀರ್ತಿ ರಾಜೇಂದ್ರನನ್ನು ನೋಡುವಾಗಲೇ ವಾತ್ಸಲ ಒತ್ತರಿಸಿ ಬಂದಿತು. ''ಸೋಜಿಗವಲ್ಲವೇ ಮಾವಾಜಿಯ ನಡೆ'' ಎಂದವರು ನಡುಗುವ ಕೊರಳಿನಿಂದ ಕೇಳಿದರು. ಮನಸ್ಸಿನಲ್ಲೇ ಮಾವಾಜಿಯನ್ನು ಪೂಜಿಸಿದರು.

''ದೀಕ್ಷೆಯನ್ನು ಎಷ್ಟು ಬೇಗ ಪಡೆದರು; ಎಷ್ಟು ಬೇಗ ಕರ್ಮವನ್ನು ಸುಟ್ಟರು; ಎಷ್ಟು ಬೇಗ ದಕ್ಷತೆಯಿಂದ ವರ್ತಿಸಿದರು. ಮಾವಾಜಿಯು ಎಷ್ಟು ಬೇಗ ಮೋಕ್ಷಕ್ಕೆ ಹೋದರು. ಮಾವಾಜಿಯಂಥ ಅವಿಚ್ಛಿನ್ನ ಮಹಿಮರು ಯಾರಿದ್ದಾರೆ? ಅಂದು ಆರು ಖಂಡಗಳನ್ನು ಸಾಧಿಸುವಾಗ ಮಾವಾಜಿಯ ಶಕ್ತಿಯು ಒಂದಿಷ್ಟು ಕುಂದಿದಂತೆ ಆಗಿತ್ತು. ಆದರೆ ಮೂರು ಮುಕ್ಕಾಲು ಗಳಿಗೆಯಲ್ಲಿ ಮೋಕ್ಷವನ್ನು ಸೂರೆಗೊಂಡದ್ದು ವಿಚಿತ್ರವಾಗಿದೆ. ಅಂದು ಲೀಲೆಯಿಂದಲೇ ರಾಜ್ಯಗಳನ್ನು ಜಯಿಸಿದರು. ಇಂದು ಲೀಲೆಯಿಂದಲೇ ಮುಕ್ತಿಯನ್ನು ಆಳಿದರು. ಮಾವಾಜಿಯು ಕಾಲಕರ್ಮದ ಗಂಡನಲ್ಲದೆ ಕಾಲದೇಶಕ್ಕೆ ತಕ್ಕ ದೊರೆಯಲ್ಲ. ಎಲ್ಲ ಲೋಕಗಳೂ ಭಾಪುರೆಯೆಂದು ಹೊಗಳುತ್ತಿರಲು ಮುಕ್ತಿಗೆ ಹೋಗಿ, ನಮ್ಮೆಲ್ಲರಿಗೂ ಮಹಾ ಕೀರ್ತಿಯನ್ನುಂಟು ಮಾಡಿದರು. ಈ ಕೆಲಸಕ್ಕಾಗಿ ನಾವೆಲ್ಲರೂ ಸಂತೋಷ ಪಡಬೇಕಲ್ಲದೆ ವ್ಯಾಕುಲಗೊಳ್ಳುವುದು ಒಳಿತಲ್ಲ. ಈ ಸಂಸಾರದಲ್ಲಿ ಶಾಶ್ವತವಾಗಿ ಯಾರು ಇರುತ್ತಾರೆ? ಈಗ ಮಾವಾಜಿಯಿರುವ ಕ್ಷೇತ್ರವೇ ನಮಗೆ ಸ್ಥಿರವಾದುದು. ಒಂದು ಹೊತ್ತು ಇಲ್ಲಿ ಶ್ರಮಿಸಿ, ಮತ್ತೆ ಕೈವಲ್ಯಕ್ಕೆ ಹೋಗುವೆವು. ಮಾವಾಜಿ ಹೋದರೇನಾಯಿತು? ಹೋಗುವಾಗ ಅವರೇನಾದರೂ ಸಂವೇದನೆ ತೋರಿಸಿದರೆ? ಇಲ್ಲ, ನಮಗಾಗಿ ಒಂದಿಷ್ಟು ಆತ್ಮ ಸಂವೇದನೆ ತೋರಿಸಿದರು. ನಾವೂ ಅವರ ಹಾದಿಯಲ್ಲೇ ನಡೆದುಹೋಗುವ. ಈ ನೋವೇಕೆ?''

ಎಂದು ಮೈದುನರು ಭಾವನನ್ನು ಸಮಾಧಾನ ಮಾಡಿದರು. ಆಗ ಅರ್ಕಕೀರ್ತಿಯು ''ನಮಗೆ ನೋವೆಂಬುದಿಲ್ಲ, ಒಂದಿಷ್ಟು ನೋವಿದ್ದರೂ ನೀವು ಬಂದ ಕ್ಷಣವೇ ಹಾರಿಹೋಯಿತು. ಶ್ರಮದಿಂದ ಬಂದಿದ್ದೀರಿ. ನೀವೀಗ ಬಹಳವಾಗಿ ಬಳಲಿದ್ದೀರಿ. ಅಂದು ನೀವೆಲ್ಲರೂ ವೈಭವದಿಂದ ನಿಮ್ಮ ಮಾವನ ಮನೆಗೆ ಬಂದು ವೈಭವದಿಂದಲೇ ಹೋಗುತ್ತಿದ್ದಿರಿ. ಇಂದು ಮಾತ್ರ ಕ್ಷೋಭೆಯಿಂದ ಬಂದು ಬಳಲಿದ್ದೀರಿ.'' ಎಂದು ನುಡಿದನು.

''ನೀವಿಬ್ಬರಿದ್ದರೆ ನಮಗೆ ಪೂವಾಜಿಯಿದ್ದ ವೈಭವವಾಗುವುದು'' ಎಂದು ಹೇಳಿದ ಮೂವತ್ತೆರಡು ಸಾವಿರ ಮಂದಿ ಮೈದುನರೊಡನೆ, ಆದಿರಾಜನನ್ನು ಇರಿಸಿ, ಸೋದರಿಯರನ್ನು ಕಾಣುವೆನೆಂದು ಮಹಾರಾಜನಾದ ಅರ್ಕಕೀರ್ತಿಯು ಮನೆಯೊಳಗೆ ಹೋದನು. ಅಲ್ಲಿ ಶೋಕೋದಯವೇ ಮಸಗಿತು. ಕನಕಾವಳಿ, ರತ್ನಾವಳಿ ಮೊದಲಾದವರು ಘನ ಶೋಕದಿಂದ ಹನಿಯುತ್ತಿರುವ ಕಂಬನಿಯಿಂದ ಅಣ್ಣನ ಕಾಲುಗಳ ಮೇಲೆ ತೊಟ್ಟನೆ ಬಿದ್ದು ದುಃಖಿಸಿದರು.

''ಅಣ್ಣಾ ಜನಕನೆಲ್ಲಿದ್ದನು? ಅಂಬಿಕೆಯರು ಎಲ್ಲಿದ್ದರು? ಈ ಮನೆಯೇಕೆ ಭಿನ್ನಗಾಯ್ತು? ಮನುಮಾರ್ಗಿಯಾದ ನೀನಿರಲು ಇಂತಾಗಬಹುದೆ? ನಿನಗೆ ಏನೆಂದು ಬುದ್ಧಿ ಹೇಳಿದರು? ನಮ್ಮನ್ನು ನೆನೆಯದೆ ಯಾಕೆ ಹೋದರು? ಹಾ ನಮ್ಮ ವಿಧಿಯೇ?'' ತಂಗಿಯರ ಈ ಅಳಲಿನಿಂದ ಆ ಅಣ್ಣನ ಒಡಲು ಚುರ‍್ರೆಂದಿತು. ಸುರಿಯುತ್ತಿರುವ ಕಂಬನಿಯನ್ನು ಒರಸುತ್ತ ನರಳುತ್ತಿರುವ ಶೋಕವನ್ನು ತಡೆಯುತ್ತ ರಾಜೇಂದ್ರನು ಧೈರ್ಯದಿಂದ ಅವರ ಮುಖವನ್ನು ಹಿಡಿದೆತ್ತಿ ಅವರನ್ನು ಸಮಾಧಾನ ಪಡಿಸಿದನು.

''ಇನ್ನು ನೊಂದು ಮಾಡುವುದೇನಕ್ಕ? ಮೊದಲು ಮುಕ್ತಿಗೆ ಸಂದವರು, ಎಂದಿನಂತೆ ಬಂದು ನಮ್ಮನ್ನು ಮನ್ನಿಸುವರೆ? ಶೋಕದಿಂದ ಎದೆಗೆಡುವುದು, ಶೋಕವನ್ನು ತಡೆದುಕೊಳ್ಳಬೇಕು. ನಮ್ಮವರು ಶಿವಸುಖಕ್ಕಾಗಿ ಕಾರ್ಯವೆಸಗಿದರಲ್ಲದೆ ಭವಸುಖಕ್ಕಾಗಿ ಕಾರ್ಯವೆಸಗಲಿಲ್ಲ. ನಮಗೆ ಈ ನೋವಿನಿಂದಲೇ ಧೈರ್ಯವೂ ಸಂತೋಷವೂ ಉಂಟಾಗಬೇಕಲ್ಲದೆ ಅವಿವೇಕದಿಂದ ಶೋಕಿಸುವುದೇ? ಅವರು ಸಿರಿಬಿಟ್ಟು, ರಾಜ್ಯವನ್ನಾಳುವಂತೆ ದೇಹವನ್ನು ತೊರೆದು ಮೋಕ್ಷದಲ್ಲಿ ಮೆರೆಯುತ್ತಿದ್ದಾರೆ. ಅವರೇನೂ ಕೆಡಲಿಲ್ಲ. ತಂಗಿಯೇ ನಮಗಿಲ್ಲಿ ಮರುಕವುಂಟಾಗಬಾರದು. ಅಯ್ಯನು ಈ ಕೆಡುವ ರಾಜ್ಯವನ್ನು ಆಳುತ್ತಿರುವಾಗ ಸಿರಿಯನ್ನು ನೋಡಿ ಸಡಗರದಿಂದ ಹಿಗ್ಗಿದಿರಿ. ಕೆಡದಿರುವ ಮುಕ್ತಿಯನ್ನು ಆಳುತ್ತಿರುವಾಗ, ಮತಿವಂತೆಯರಾದ ನೀವು ಹಿಗ್ಗದೆ ದುಃಖಪಡುವುದೇ? ನಮ್ಮ ಅಯ್ಯನ ಶಕ್ತಿಯನ್ನು ನೋಡಿ, ಅವನು ತಪಸ್ಸಿನಿಂದ ಬಾಡಲಿಲ್ಲ. ಅರೆಗಳಿಗೆಯಲ್ಲಿ ಕರ್ಮವನ್ನು ಝಾಡಿಸಿ ಮುಕ್ತಿಗೆ ಹೋದನು. ಅದನ್ನು ಕಂಡು ಮೂರು ಲೋಕವೇ ಕೊಂಡಾಡಿತು. ನಮ್ಮಯ್ಯನೀಗ ಸುಖದಲ್ಲಿದ್ದಾನೆ. ಮುಂದೆ ನಮ್ಮವರೆಲ್ಲರೂ ಮುಕ್ತಿಗೆ ಹೋಗುವರು. ಅಕ್ಕ, ಇದಕ್ಕೆ ಉಮ್ಮಳಿಸಬೇಡಿ ಸೈರಿಸಿ. ನಾಳೆ ನಾವು ನಮ್ಮವರನ್ನೆಲ್ಲ ಅಲ್ಲಿ ಕಾಣಬಹುದು. ಅಂಗ ಕುಂದುವುದು; ಆಯುಸ್ಸು ಕುಂದುವುದು; ನನ್ನಾಣೆ ಶೋಕಿಸಬೇಡಿ. ಮಂಗಳವನ್ನುಂಟು ಮಾಡಿ. ನೀವು ಸುಮಂಗಲೆಯರಲ್ಲವೆ?'' ಎಂದು ತಂಗಿಯ ತಲೆಯನ್ನು ನೇವರಿಸಿ, ಅಳಲನ್ನು ಆರಿಸಿದನು.

''ಅಣ್ಣಾಜಿ ಮೊದಲು ವೇದನೆಯಾಯಿತು. ಈಗ ನಿನ್ನ ಮಾತುಗಳನ್ನು ಕೇಳಿ ಆ ನೋವು ಮಾಯವಾಯಿತು. ನಿನ್ನಾಣೆ ನೋವಿಲ್ಲ, ಆದಿ ದೇವರು, ನೀವು ಸುಖವಾಗಿ ಬಾಳುತ್ತಿರಬೇಕು'' ಎಂದು ಸೋದರಿಯರೆಲ್ಲರೂ ನಮಿಸಿದರು. ಬಳಿಕ ತಂಗಿಯರೆಲ್ಲ ಸ್ನಾನದೇವಾರ್ಚನೆಗಳನ್ನು ಮಾಡಲೆಂದು ತನ್ನ ಸತಿಯರಿಗೆ ಹೇಳಿ ಪ್ರೌಢನೃಪತಿಯಾದ ಅರ್ಕಕೀರ್ತಿಯು ತಿರುಗಿ ಆಸ್ಥಾನಕ್ಕೆ ಬಂದನು.

''ವೇಳೆಯಾಯಿತು; ನೀವು ಸ್ನಾನದೇವಾರ್ಚನೆಗೆ ಏಳಿರಿ'' ಎಂದು ಮೈದುನರನ್ನು ಕೇಳಿಕೊಂಡನು. ಅವರನ್ನು ತನ್ನ ಊಳಿಗದವರೊಡನೆ ಸಾಲು ಸಾಲಾಗಿರುವ ಮಜ್ಜನಗೃಹಗಳಿಗೆ ಕಳುಹಿಸಿದನು. ರಾಜೇಂದ್ರನು ತನ್ನ ತಮ್ಮನನ್ನೂ ಮೈದುನರನ್ನೂ ಕೂಡಿಸಿಕೊಂಡು ಮಜ್ಜನಗೈದು, ದೇವತಾರ್ಚನೆ ಮಾಡಿ. ಮನೆಯಲ್ಲಿ ಎಲ್ಲರೂ ಒಟ್ಟಾಗಿ ಆರೋಗಣೆಗೈದು ಭರತೇಶ ಚಕ್ರಿಯು ದೀಕ್ಷೆಗೆ ಹೋದ ದುಃಖವನ್ನು ಮರೆತನು.

''ನಮ್ಮನ್ನು ಬಿಟ್ಟು ನಮ್ಮವರೆಲ್ಲರೂ ದೀಕ್ಷೆಗೆ ಹೋದುದರಿಂದ ಮನೆಯೆಲ್ಲ ಬರಿದಾಗಿದೆ. ಕೆಲವು ದಿವಸ ನೀವು ಇಲ್ಲಿದ್ದು ನಮಗೆ ಸಂತೋಷವನ್ನುಂಟು ಮಾಡಿರಿ'' ಎಂದು ರಾಜೇಂದ್ರನು ಮೈದುನರನ್ನು ಬೇಡಿಕೊಂಡನು. ಅವರೂ ಆಗಲೆಂದು ಒಪ್ಪಿಕೊಂಡರು. ರಾಜೇಂದ್ರನು ಅವರಿಗೂ, ಅನುರಾಗದಿಂದ ಸೋದರಿಯರಿಗೂ ಭೋಗವಸ್ತುಗಳನ್ನಿತ್ತು ಮನ್ನಿಸಿದನು.

ಮರುದಿನ ಭಾನುರಾಜ, ವಿಮಲರಾಜ, ಕರಿಯ ಕಮಲರಾಜರೆಲ್ಲರೂ ಪುತ್ರ ಕಳತ್ರರೊಡಗೂಡಿ ಮರುಕದಿಂದ ಆ ಪುರಕ್ಕೆ ಬಂದರು. ಅರ್ಕಕೀರ್ತಿ, ಆದಿರಾಜರು ತಮ್ಮ ಸೋದರ ಮಾವಂದಿರು ಬರುವುದನ್ನು ತಿಳಿದು ತಾನೇ ಹೋಗಿ ಅವರನ್ನು ಇದಿರುಗೊಂಡರು. ಅನಂತರ ಅವರೆಲ್ಲರೂ ಹಲವು ರೀತಿಯಲ್ಲಿ ಮನ್ನಣೆ ಮಾಡಿದರು. ಅಂತಃಪುರದೊಳಗೂ ಹೆಂಗಸರಿಗೆ ಹೆಂಗಸರು ವಿನಯಮಾಡಿದರು. ಈ ರೀತಿಯಲ್ಲಿ ಅವರು ಹಲವು ದಿವಸವಿದ್ದರು. ಅದೇ ರೀತಿಯಲ್ಲಿ ದುಃಖದಿಂದ ಬಂದ ಮೂರೂವರೆ ಕೋಟಿ ಬಂಧುವರ್ಗದವರನ್ನೂ ತಮ್ಮ ಅಯ್ಯನಂತೆಯೇ ಆದರಿಸಿ ಗೌರವಿಸಿದರು.

# ೨೭

# ಸರ್ವರ ಮೋಕ್ಷ

ಅರ್ಕಕೀರ್ತಿ ರಾಜನು ಬಂದಿರುವ ಸಕಲ ಬಂಧುಗಳನ್ನೂ ಬೀಳ್ಕೊಟ್ಟು ಮತ್ತೊಂದು ಹಗಲಿನಲ್ಲಿ ಓಲಗದಲ್ಲಿರುವಾಗ ಹೊಸ ವಾರ್ತೆಯೊಂದು ಬಂದಿತು. ವಿಮಲರಾಜನು, ಭಾನುರಾಜನು ಮತ್ತು ಕಮಲರಾಜನು — ಇವರು ಮೂವರೂ ತಮ್ಮ ರಮಣಿಯರೊಂದಿಗೂ ಅಣುಗರೊಂದಿಗೂ ಕೂಡಿ ದೀಕ್ಷೆಯನ್ನು ಪಡೆದರೆಂಬುದೇ ಆ ವಾರ್ತೆ. ಅವರು ಅಳಿಯಂದಿರ ಆರೈಕೆಗಾಗಿ ಅರಮನೆಯೊಳಗೆ ಹೋದರು. ಅಲ್ಲಿ ಚಕ್ರಿಯ ಭಾಷೆಯು ಗಳಬಳವಾದುದನ್ನು ಕಂಡು ಅದರಿಂದಲೇ ನಿರ್ವೇಗವುಂಟಾಗಿ ದೀಕ್ಷೆಗೊಂಡರು. ಅದರೊಂದಿಗೇ ಇನ್ನೂ ಕೆಲವು ಬಾಂಧವರು ದೀಕ್ಷೆಗೊಂಡ ವೃತ್ತಾಂತವಲ್ಲಿಗೆ ಬಂತು. ಈ ಕ್ಷಣವೇ ಅರ್ಕಕೀರ್ತಿ ಆದಿರಾಜರಿಗೆ ಚಿತ್ತದಲ್ಲಿ ಪರಮ ವಿರಕ್ತಿಯುಂಟಾಯಿತು. ತಮ್ಮನ ಮುಖವನ್ನು ನೋಡಿ ಅಣ್ಣನು ನಕ್ಕನು. ತಮ್ಮನೂ ಅಣ್ಣನ ಮುಖವನ್ನು ನೋಡಿದನು.

''ನಮ್ಮವರೆಲ್ಲರೂ ಅಗ್ಗಳರು. ನಾವು ಮಾತ್ರ ಅಲ್ಪರು. ನಮಗೇಕೆ ಈ ಸುಮ್ಮಾನ; ಛೀ!''

''ತಮ್ಮ ನಿಜವನ್ನೇ ಹೇಳಿದೆ. ನೀನು ಅಲ್ಪನೇ? ನೀನು ಕೈಲಾಸನಾಥನ ತೇಜಸ್ಸುಳ್ಳವನು. ನಾನೇ ಅಲ್ಪನು; ಇನ್ನೂ ನಾಶವಾಗುತ್ತಿರುವೆನು. ಜನಕನ ನವನಿಧಿಗಳೂ ಹದಿನಾಲ್ಕು ರತ್ನಗಳೂ ಬಯಲಾದ ಮೇಲೂ ನಾನು ಈ ಮಹೇಂದ್ರ ಪದವಿಯನ್ನು ಪ್ರೀತಿಸಿರುವುದು ಅಧಃಪತನವು. ಒಡೆಯರು ಇದ್ದಾಗ ಯುವರಾಜ ಪದವಿಗಿದ್ದಷ್ಟು ಸಡಗರವು ಇರುವುದೇ ಈಗ? ಈ ನನ್ನ ಅಧಿರಾಜ ಪದವಿಯನ್ನು ಸುಡು ಸುಡು. ಮೊದಲು ಆರು ಖಂಡದ ರಾಜರು ಓಲೈಸಿದರೆ, ಇನ್ನು ಅಯೋಧ್ಯೆಯ ಸುತ್ತು ಮುತ್ತಿನ ರಾಜರು ಓಲೈಸುವರೆ? ಈ ಸಿರಿಯು ನಿಜವಾದ ಸಿರಿಯಲ್ಲ, ಛೀ, ಇದೊಂದು ಸಂಕಷ್ಟವು. ಹೆತ್ತ ತಂದೆಯ ಮಾತಿಗೆ ಉತ್ತರಗೊಡಬಾರದೆಂದು ಈ ಧರಣಿಯನ್ನು ಹೊತ್ತಲ್ಲದೆ ಉತ್ತಮವೆಂದು ಹೊತ್ತದ್ದಲ್ಲ, ಇನ್ನು ಇದನ್ನು ಇನ್ನೊಬ್ಬನಿಗೆ ಕೊಟ್ಟುಬಿಡುವೆನು'' ವಿವೇಕಿಯಾದ ಅರ್ಕಕೀರ್ತಿಯು ಯೋಚಿಸಿ ಹೇಳಿದನು.

ಭತ್ತದ ರಾಶಿಗಳಷ್ಟು ಹೊನ್ನರಾಶಿಗಳಿದ್ದುವು. ಹುಲ್ಲಿನ ಹಿರಿದಾದ ಬೆಣೆಗಳಷ್ಟು ಜಲ್ಲಿ ಪಟ್ಟೆಗಳ ಮೊಡ್ಡಾದ ಮೆದೆಗಳಿದ್ದುವು. ಅವನ್ನೆಲ್ಲ ಒಂದು ಹುಲ್ಲಿಗೆ ಸರಿಯಾಗಿ ಕಂಡನು — ಅರ್ಕಕೀರ್ತಿ. ಅಡಿಕೆಯ ಗುಪ್ಪೆಯಂತಿದ್ದ ಆಭರಣಗಳನ್ನೂ ಕಡಲ ದಡದಲ್ಲಿರುವ ಮರಳಿನಂತಿರುವ ಧಾನ್ಯ ಸಂಗ್ರಹವನ್ನೂ ಅರ್ಧ ಗೋಟಡಿಕೆಗಿಂತಲೂ ಕಡೆಯಾಗಿ ಕಂಡನು. ರತ್ನ ಖಚಿತವಾದ ಬಂಗಾರದ ಚಾವಡಿಯನ್ನೂ ಅರಮನೆಯನ್ನೂ ಹೋಳೆಯುವ

ನಾಟಕಶಾಲೆಯನ್ನೂ ಮಸಣದ ಮನೆಯೆಂದೂ ಸೆರೆಮನೆಯೆಂದೂ ಅರ್ಕಕೀರ್ತಿಯು ಯೋಚಿಸಿದನು. ಲಾವಣ್ಯವತಿಯರಾದ ಅವನ ಸತಿಯರೆಲ್ಲರೂ ಕುರೂಪಿ ಹೆಂಗಸರಾಗಿ ತೋರಿದರು. ಭೂವಲಯದ ಪಟ್ಟವೆಂಬುದು ಅವನಿಗೆ ನೆರೆಮನೆಯ ವೈಗಾವಲಿನಂತೆ ಕಂಡಿತು. ಭರತೇಶಚಕ್ರಿಯು ಆಳಿದುದೆಂದರೆ ಅದೊಂದು ಮಹಾಭಾಗ್ಯ. ಅದು ಚಕ್ರಿಯು ಮುಕ್ತಿಗೆ ಸಂದಮೇಲೆ ಕ್ರಿಯೆಗಳೆಲ್ಲವನ್ನೂ ಸಾಂಗಗೊಳಿಸಿದ ಮೇಲಿನ ಓಕುಳಿಯಂತೆ ಪರಾಕ್ರಮಿಯಾದ ಅರ್ಕಕೀರ್ತಿಗೆ ಆಗ ತೋರಿತು. ಆನೆ ಕುದುರೆಗಳ ಸೇನೆಯನ್ನೂ ಹಾಲಿನ ಮನೆಯನ್ನೂ ಎಲ್ಲವನ್ನೂ ಕಣ್ಣು ಕಟ್ಟಿನ ಆಟದಂತೆ ಬಗೆದನು. ಈ ಲೋಕದ ಅಧಿಕಾರವನ್ನು ಒಬ್ಬನ ಮೇಲಿರಿಸಿ ತಾನು ತೇಲಿ ಹೋಗುವೆನೆಂದು ಯೋಚಿಸಿದನು. ಅರ್ಕಕೀರ್ತಿಯ ಮಕ್ಕಳೆಲ್ಲರೂ ಅಲ್ಲಿ ನೆರೆದಿದ್ದರು. ಅವರಿಗೆ ಭೂಮಿಯ ಪಟ್ಟಗಟ್ಟುವುದೆಂದು ಯೋಚಿಸುವಾಗಲೇ ಅವರು ದೀಕ್ಷೆಗೊಳ್ಳುವ ವ್ರತ ಮಾಡಿದರು. ಅಲ್ಲಿ ನೆರೆದಿದ್ದ ತಮ್ಮನ ಮಕ್ಕಳೂ ರಾಜ್ಯವನ್ನೊಪ್ಪಿಕೊಳ್ಳದೆ ದೀಕ್ಷೆಗೆ ಒಪ್ಪಿಕೊಂಡರು. ಹೀಗೆ ಕುವರರಾರೂ ಒಪ್ಪದಿರುವಾಗ ಅರ್ಕಕೀರ್ತಿಯು ತನ್ನ ಕಿರಿಯ ಕುಮಾರರಿಬ್ಬರಿಗೆ ಆದಿರಾಜ ಪಟ್ಟವನ್ನು ಕಟ್ಟಿದನು. ಮನುರಾಜನೆಂಬ ತನ್ನ ಮಗನಿಗೆ ಅಧಿರಾಜ ಪದವಿಯನ್ನೂ, ಭೋಗರಾಜನೆಂಬ ತಮ್ಮನ ಮಗನಿಗೆ ಯುವರಾಜ ಪದವಿಯನ್ನೂ ಇತ್ತು ಅವರ ರಕ್ಷಣೆಗೆ ಆಪ್ತ ಜನರನ್ನು ನೇಮಿಸಿದನು. ಮನುರಾಜ, ಭೋಗರಾಜರ ಸೋದರ ಮಾವಂದಿರಾದ ಶುಭರಾಜ ಮತಿರಾಜರಿಗೆ ಅವರಿಂದ ವಿನಯವನ್ನು ಮಾಡಿಸಿ ಮಕ್ಕಳ ಕೈಯಿಂದ ಆ ಹಿರಿಯರಿಗೆ ಎಡೆಗಳನ್ನು ಕೊಡಿಸಿ ಗೌರವಿಸಿದನು. ಹಿತವಚನ ಹೇಳುವ ಹಿರಿಯರೆಲ್ಲರೂ ದೀಕ್ಷೆಗೆ ಸಿದ್ಧರಾಗಲು ಸನ್ಮತಿಯೆಂಬ ಮಂತ್ರಿಯನ್ನು ಮಾತ್ರ ಮಕ್ಕಳು ದೊಡ್ಡವರಾಗುವವರೆಗೆ ಅವರೊಡನಿದ್ದು ಆಮೇಲೆ ದೀಕ್ಷೆಗೆ ಬರುವಂತೆ ಒಪ್ಪಿಸಿದನು. ಅವನಿಗೆ ಭಾಗ್ಯವನ್ನಿತ್ತು ಗೌರವಿಸಿದನು.

''ಈ ನಾಡು ಬೀಡುಗಳನ್ನೂ, ಆನೆ ಕುದುರೆಗಳನ್ನೂ, ಪ್ರಜೆ ಪರಿವಾರದವರನ್ನೂ, ಭಂಡಾರ ಬೊಕ್ಕಸವನ್ನೂ ನೋಡಿಕೊಂಡು, ಸುಖವಾಗಿ ಬಾಳಿರಿ'' ಎಂದು ಅವರಿಗೆ ನಿರಾಶೆಯಿಂದ ಹೇಳಿದನು.

''ಆದಿದೇವರು, ತಪಸ್ಸಿಗೇಳು'' ಎಂದು ಅರ್ಕಕೀರ್ತಿ ಹೇಳುವ ಮೊದಲೇ ಉತ್ಸಾಹದಿಂದ ಆದಿರಾಜನು ಎದ್ದನು. ಪರಿವಾರದವರನ್ನು ಕೂಡಿಕೊಂಡು ಅವರು ನಡೆಯುತ್ತಿರುವಾಗ ಎದುರಲ್ಲಿ ಚಾಮರ ಬೊಂಬಾಳಗಳು ಸಿದ್ಧವಾಗಿದ್ದುವು. ಆ ಉನ್ನತವಾದ ಬೊಂಬಾಳವೆಂಬ ವಾಹನವನ್ನು ಅರ್ಕಕೀರ್ತಿಯು ಏರಿದನು. ಮತ್ತೊಂದನ್ನು ಅವನು ಆದಿರಾಜನೆದುರು ತಂದು ನಿಲ್ಲಿಸಿದರು. ಆದರೆ ಅವನು ಅದನ್ನು ಏರಲಿಲ್ಲ; ತನಗೆ ಪಲ್ಲಕ್ಕಿ ಮಾತ್ರ ಸಾಕೆಂದನು.

''ಚಾಮರ ಬೊಂಬಾಳಗಳು ಪಟ್ಟದ ರಾಜಗಲ್ಲದೆ ಯುವರಾಜನಿಗಲ್ಲ. ಇದು ಅವಿವೇಕದ ಆಚರಣೆ. ಇದನ್ನು ಯಾರೂ ಆಚರಿಸಲಾರರು.''

''ಮೋಕ್ಷಯಾನದಲ್ಲಿ ಇಂತಹ ದೋಷವಿಲ್ಲ, ಏರು''

''ದೀಕ್ಷೆಯನ್ನು ಹೊಂದುವವರೆಗೆ ರಾಜಾಂಗವನ್ನು ರಕ್ಷಿಸಬೇಕು. ಆದ್ದರಿಂದ ಅದನ್ನೊಲ್ಲೆನು.''

ಹಿರಿಯನು ಚಾಮರ ಬೊಂಬಾಳವನ್ನೇರಿ ಮುನ್ನಡೆಯಲು ಕಿರಿಯನು ಪಲ್ಲಕ್ಕಿಯನ್ನೇರಿ ಹಿಂಬಾಲಿಸಿದನು. ಪುತ್ರರೂ ಆಪ್ತರೂ ಪಲ್ಲಕ್ಕಿಯನ್ನೇರಿ ಹೊರಟರು. ಕುಮಾರರನ್ನು ಸಾಕಿದ ದಾದಿಯರಿಬ್ಬರು ಮಾತ್ರ ಅರಮನೆಯಲ್ಲಿ ನಿಂತರು. ಯುವತಿಯರು ಪಲ್ಲಕ್ಕಿಯನ್ನೇರಿ ಅವರು ಹಿಂದೆ ಸ್ವಲ್ಪ ದೂರದಲ್ಲೇ ಹಿಂಬಾಲಿಸಿದರು. ಆಗ ನಾಡಿನಲ್ಲೆಲ್ಲ ನಿರ್ವೇಗ ರಸವು ಪ್ರವಾಹದಂತೆ ಹರಿಯಿತು. ಅವರನ್ನು, ''ಬೇಕು, ಬೇಡ'' ಎಂದು ತಡೆಯುವವರು ಯಾರೂ ಇರಲಿಲ್ಲ, ಆದ್ದರಿಂದ ಅವರು ಮುನ್ನಡೆದರು. ಅವರು ನಾಡನ್ನು ದಾಟಿ ಕಾಡನ್ನು ಸೇರಿದರು. ಅಲ್ಲಿ ಶ್ರೀಗಂಧ ಚಂದನ ವೃಕ್ಷದೆಡೆಯಲ್ಲಿ ಅಗ್ರಜನು ತಾನೇರಿ ಬಂದ ಬೊಂಬಾಳದಿಂದ ಇಳಿದನು. ಅನುಜನೂ ಪಲ್ಲಕ್ಕಿಯಿಂದಿಳಿದನು. ಎಲ್ಲರೂ ಜಯಜಯವೆನ್ನುತ್ತ ಅವರ ಬಳಿ ಸೇರಿದರು. ಹೆಂಗಸರು ಮಾತ್ರ ಒಂದಿಷ್ಟು ದೂರ ನಿಂತರು.

ಅರ್ಕಕೀರ್ತಿ ಆದಿರಾಜರು, ಹಂಸನಾಥನೆ ಗುರುವೆಂದು ನಿಶ್ಚಯವಾಗಿ ನಿರ್ಧಾರ ಮಾಡಿದ್ದರು. ಆದ್ದರಿಂದ ಅವರು ದೀಕ್ಷೆಗಾಗಿ ಅನ್ಯರನ್ನು ಆಶ್ರಯಿಸಲಿಲ್ಲ, ತಾವೇ ದೀಕ್ಷೆಯನ್ನು ಧರಿಸುತ್ತಿದ್ದರು. ಎಷ್ಟೆಂದರೂ ಅವರು ಭರತೇಶ ಚಕ್ರಿಯ ಕುಮಾರರು. ತಂದೆಗೆ ತೆರೆ ಹಿಡಿದಂತೆ ಇವರಿಗೂ ತೆರೆ ಹಿಡಿದರು. ಇವರೂ ತಂದೆಯಂತೆಯೇ ದೀಕ್ಷೆ ಪಡೆದು ಧ್ಯಾನದಲ್ಲಿ ನಿಂತರು. ತಪಸ್ಸು ತಪಸ್ಸು ಎಂದವರು ಆಸೆ ಪಡಲಿಲ್ಲ, ಭರತೇಶನಂತೆ ದೀಕ್ಷೆ ಪಡೆದ ಅವರು, ಭರತೇಶನಂತೆಯೇ ಎರಡು ಗಳಿಗೆಯಲ್ಲಿ ಕರ್ಮಗಳ ತಾಮಸವನ್ನೊತ್ತಿ ಕಳೆದರು. ವಿಮಲವಾದ ವಿಶಾಲ ಶಿಲೆಯೊಂದರಲ್ಲಿ ಅವರಿಬ್ಬರೂ ಒಂದಿಷ್ಟು ಬೇರೆಯಾಗಿ ಪದ್ಮಾಸನದಲ್ಲಿ ನೆಟ್ಟಗೆ ಕುಳಿತರು. ಅವರ ದೇಹಗಳೆರಡೂ ರುಜುವಾಗಿ ವಿರಾಜಿಸುತ್ತಿದ್ದುವು. ಆಗ ಅವರು ಕಣ್ಣುಗಳನ್ನು ಮುಚ್ಚಿ ಮನದ ಭ್ರಾಂತಿಯನ್ನು ತಡೆದರು. ಅವರು ಕಣ್ಣು ಮುಚ್ಚಿದೊಡನೆಯೇ ಅವರ ಅಣ್ಣನೆಂಬ, ತಮ್ಮನೆಂಬ ಪ್ರೀತಿಯು ಜಾರಿಹೋಯಿತು. ಹೊಳೆಯುತ್ತಿರುವ ಮನಸ್ಸಿಗೆ ಒಳಗಿರುವ ಆತ್ಮನ ಬಣ್ಣವು ಬೇರೆಯಾಗಿ ಕಾಣಿಸಿತು. ಆ ಯೋಗಿಗಳಿಗೆ ಪರವಸ್ತುವಿನ ಸ್ನೇಹವು ಕೆಟ್ಟು ಹೋಗಿತ್ತು. ಸೋದರರೆಂಬ ಸ್ನೇಹವೂ ಜಾರಿತ್ತು, ಅವರಲ್ಲಿ ಪರಮಾತ್ಮ ಕಳೆಯು ಹೆಚ್ಚುತ್ತಿತ್ತು, ಕರ್ಮವು ಅವರನ್ನು ಜರ್ಜರಿಸುತ್ತಿತ್ತು, ಸ್ನೇಹವು ಸೋಂಕಿದಾಗ ಒಳಗಿನ ಬೆಂಕಿ ಉರಿಯುತ್ತದೆ. ಆದರೆ ಧ್ಯಾನಾಗ್ನಿಯ ಸ್ನೇಹ ಸೋಂಕಿದರೆ ಆ ಬೆಂಕಿ ನಂದುವುದು; ಈ ಸ್ನೇಹವನ್ನು ಬಿಟ್ಟಷ್ಟಕ್ಕೆ ಧ್ಯಾನ ದಾಹವು ಹೆಚ್ಚುವುದು. ಜಗತ್ತಿಗೆ ಇದೊಂದು ಆಶ್ಚರ್ಯ. ಅಲ್ಲಿ ಹೊರಗೆ ನಿಂತವರೆಲ್ಲ ಅವನು ಹಿರಿಯ ತಾಪಸ, ಇವನು ಕಿರಿಯ ತಾಪಸ ಎಂದು ನೋಡುತ್ತಿದ್ದರು. ಆದರೆ ಚಿತ್ಪ್ರಭೆಯು ಇಬ್ಬರಲ್ಲೂ ಸರಿಯಾಗಿ ವಿಕಾಸ ಹೊಂದುತ್ತಿದ್ದುದರಿಂದ ಅವರಲ್ಲಿ ಹಿರಿದು ಕಿರಿದು ಎಂಬುದೇ ಇಲ್ಲ, ಪ್ರಾಯದಲ್ಲಿ, ದೇಹದ ಅಂಗಗಳಲ್ಲಿ, ವಂಶದಲ್ಲಿ ಮರ್ತ್ಯರಾದವರಿಗೆ ಒಂದಿಷ್ಟು ಕುಂದು ಇರುವುದುಂಟು. ಆದರೆ ಪರಮಾರ್ಥದಲ್ಲಿ ಒಳಗೆ ಆತ್ಮನನ್ನು ನೋಡುತ್ತಿರುವಾಗ ಎಲ್ಲರೂ ಸರಿಸಮಾನರಲ್ಲದೆ

ಒಂದಿಷ್ಟೂ ಕೊರತೆಯಿಲ್ಲ. ಅವರಿಬ್ಬರೂ ಧ್ಯಾನ ನಿಷ್ಠುರರಾಗಿದ್ದರು. ಅದರಿಂದಾಗಿ ಧ್ಯಾನವು ಅರಳೆಯ ರಾಶಿಗೆ ಬಿದ್ದ ಕಿಡಿಯಂತೆ ದುರಿತ ರಾಶಿಯನ್ನು ಹತ್ತಿ ಉರಿಯತೊಗಿತು. ಆಮೇಲೆ ಆ ತಪೋಧನರಿಬ್ಬರೂ ಧ್ಯಾನದಲ್ಲಿ ಘಾತಿಕರ್ಮಗಳನ್ನು ತಾವಿಬ್ಬರೂ ಒಂದೇ ಬಾರಿ ಘಾತಿಸಿದರು. ಎರಡು ಗಳಿಗೆಗೆ ಸ್ವಲ್ಪ ಕಡಮೆಯ ಸಮಯದಲ್ಲಿ ಭವವನ್ನು ದಾಟುವ ತೇಜವು ಅವರ ಅಯ್ಯನದು. ಆ ಕೀರ್ತಿಯು ಅವನಿಗೆ ಇರಲೆಂದು ತಡೆದು ತಾವು ಐದೂವರೆ ಗಳಿಗೆಗೆ ಭವವನ್ನು ಸವರಿದರು. ಪಿತನು ದೀಕ್ಷೆಯನ್ನು ಪಡೆದೊಡನೆಯೇ ಶ್ರೇಣಿಗೇರಿದ್ದನು. ಆದರೆ ಸುತರು ನಾಲ್ಕುಗಳಿಗೆ ವಿಶ್ರಮಿಸಿ ಆಮೇಲೆ ತಮ್ಮ ಪಾಪಗಳನ್ನು ನಾಶ ಮಾಡಿದರು. ಕರ್ಕಶವಾಗಿರುವ ಪಾಪಗಳು ಸೋರಿಹೋಗಲು ಗುಣಗಳು ಸಾರಿ ಬಂದುವು. ಕೋಟಿ ಸೂರ್ಯಚಂದ್ರರ ಪ್ರಕಾಶವು ಪ್ರಜ್ವಲಿಸಿದೊಡನೆ ಅರ್ಕಕೀರ್ತಿ ಆದಿರಾಜ ಜಿನರಿಬ್ಬರೂ ಆಕಾಶಕ್ಕೆ ಹಾರಿದರು.

ಆಗ ದಿಕ್ಕು ದಿಕ್ಕುಗಳಿಂದಲೂ ನರರೂ ಉರಗರೂ ಸುರರೂ ಜಯ ಜಯವೆನ್ನುತ್ತ ಬಂದರು. ಅಷ್ಟರಲ್ಲಿ ಅವರಿಬ್ಬರಿಗೂ ಚೆಲುವಾದ ಎರಡು ಗಂಧಕುಟಿಗಳಾದುವು. ಆ ಜಿನರಿಬ್ಬರೂ ಕಮಲವನ್ನು ಮುಟ್ಟದಂತೆ ಕಮಲಾಸನದಲ್ಲಿ ಕುಳಿತರು. ಅಷ್ಟರಲ್ಲಿ ಸರ್ವರೂ ಬಂದು ಅವರ ಸ್ತೋತ್ರ ಮಾಡಿದರು. ಅದೊಂದು ಮಹೋತ್ಸವವಾಯಿತು. ದೇವೇಂದ್ರನಲ್ಲಿಗೆ ಬಂದು ಬೇಡಿದಾಗ ಹಿಂದೆ ಭರತ ಸರ್ವಜ್ಞನೂ ಹೇಳಿದಂತೆ ಹೇಳಿ, ಭರತ ಜಿನೇಂದ್ರನು ಕೊಟ್ಟಂತೆ ಎಲ್ಲರಿಗೂ ದೀಕ್ಷೆಯಿತ್ತರು. ಉದ್ದಂಡಮತಿ, ಅಷ್ಟಚಂದ್ರ, ಅಯೋಧ್ಯಾಂಕ ಮುಂತಾದವರೂ ಅಲ್ಲಿದ್ದ ಇತರ ರಾಜರೂ ಅವರಿಂದ ಎಣೆಯಿಲ್ಲದ ದೀಕ್ಷೆಯನ್ನು ಪಡೆದರು. ಹೀಗೆ ಅವರಿಬ್ಬರೂ ಭವವನ್ನು ಗೆದ್ದರು. ದೇವೇಂದ್ರನು ಜ್ಞಾನ ಕಲ್ಯಾಣವನ್ನು ನೆರವೇರಿಸಿ ಹೋದನು. ಅನಂತರ ಭವ್ಯರೂ ತಪೋಧನರೂ ತಮ್ಮ ಆನಂದವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಆ ಜೈನೇಂದ್ರರಿಬ್ಬರ ಸಭೆಗೆ ಬರುತ್ತಿದ್ದರು. ಶ್ರೀ ಕುಂತಲಾವತಿಯಕ್ಕಗಳೂ ಶ್ರೀ ಕುಸುಮಾವತಿಯಕ್ಕಗಳೂ ಅನುಗರು ಲೋಕಾಗ್ರಪದ ಪಡೆದರೆಂಬ ಸಂತೋಷದಲ್ಲಿದ್ದರು. ಆದರೆ ಈ ಜಿನರಿಬ್ಬರಿಗೂ ಇವರು ತಮ್ಮ ಜನನಿಯರೆಂಬ ಆಸೆಯಿರಲಿಲ್ಲ. ಅವರಿಗೆ ಮಾತ್ರ ತಮ್ಮ ತನುಜರೆಂಬ ಆಸೆಯೂ ಬಿಡಲಿಲ್ಲ, ಕರ್ಮವರ್ತನೆಯು ದೇಹವಿರುವವರೆಗೂ ಬಿಡುವುದಿಲ್ಲ.

ಇವರು ಈ ರೀತಿಯಲ್ಲಿರಲು ಅಂದು ಇವರಿಂದ ಬೀಳ್ಕೊಂಡ ಬಾಹುಬಲಿಯ ಮಕ್ಕಳಾದ ಮಹಾಬಲರಾಜ, ರತ್ನಬಲರಾಜ ಮತ್ತು ಸುಬಲರಾಜರೂ ಅವರಿಗಿಂತಲೂ ಹಿಂದಿನ ಅನಂತಸೇನೇಂದ್ರ ಮುಂತಾದವರೂ ಮೊದಲೇ ದೀಕ್ಷೆಯನ್ನು ಪಡೆದಿದ್ದರು. ಆದರೆ ಅರ್ಕಕೀರ್ತಿ ಆದಿರಾಜರು ಮಾತ್ರ ಹಂಸನಾಥನ ಗುರುವೆಂದು ತಾವೇ ದೀಕ್ಷೆಯನ್ನು ನಿರ್ವಹಿಸಿ ಕೊಂಡರು. ಉಳಿದ ಸರ್ವರೂ ಅವರ ಗಂಧಕುಟಿಗೆ ಹೋಗಿ ಜಿನಗುರುಗಳ ಮೂಲಕ ದೀಕ್ಷೆ ಪಡೆದರು. ಅಯ್ಯನ ಬೋಧೆಯನ್ನು ಕೇಳಿ ಅಯ್ಯನಂತೆಯೇ ಅನುದಿನವೂ ಆತ್ಮನನ್ನು ನೋಡಿ ಆ ಅಯ್ಯನಂತೆಯೇ ದೀಕ್ಷೆ ಪಡೆದರು. ತನ್ನ ಒಳಗನ್ನು ನೋಡಿ, ಅನುಭವಿಸುವವನಿಗೆ ಆತ್ಮನೇ ಗುರು; ಒಳಗಿನ ಅನುಭವವಿಲ್ಲದವರಿಗೆ ಬೇರೊಬ್ಬ ಗುರು ಬೇಕು. ಇದು ನಿಶ್ಚಯವಾದ ವ್ಯವಹಾರ ಕಲೆ.

ಇದೇ ಸ್ಯಾದ್ವಾದದ ಓಜೆ. ಕೊಟ್ಟ ವಸ್ತುವನ್ನು ಕಾಣದವನಾದರೆ ಆಪ್ತರನ್ನು ಕಟ್ಟಿಕೊಂಡು ಹುಡುಕುವುದು ಕ್ರಮ. ಕೂಡಲೇ ವಸ್ತುವನ್ನು ಕಂಡವನಿಗೆ ಅನ್ಯರ ಸಹಾಯವೇಕೆ? ಇವರು ಈ ರೀತಿಯಲ್ಲಿ ಮುಂದೆ ಹೋಗುತ್ತಿರುವುದನ್ನು ಕೇಳಿದ ಕನಕರಾಜ ಕಾಂತರಾಜ ಮೊದಲಾದ ಸರ್ವ ಮೈದುನರೂ ದೀಕ್ಷೆಗೊಂಡರು. ತಂದೆ ತಾಯಿ ಅತ್ತಿಗೆ ನಾದಿನಿ ಸಹೋದರರು ಅಂದೊಮ್ಮೆ ದೀಕ್ಷೆಗೆ ಹೋಗಿದ್ದರು. ಭಾವಾಜಿ, ರತ್ನಾಜಿ ಕನಕಾವಲಿ, ಮನುದೇವಿ ಮುಂತಾದ ತಂಗಿಯರೂ ತಮ್ಮ ಪತಿಗಳೊಂದಿಗೆ ಮಹಾ ವೈರಾಗ್ಯದಿಂದ ದೀಕ್ಷೆ ಪಡೆದರು. ಭರತೇಶನಿರುವಾಗ ಭರತಭೂಮಿಯಲ್ಲಿ ಸೌಂದರ್ಯ ಸಂಪತ್ತುಗಳೇ ಭರಿತವಾಗಿದ್ದುವು. ಆ ರಾಜನು ಹೋದಾಗ ಅವು ತಾವೂ ತೆರಳಿದವು. ಜಗವನ್ನು ವೈರಾಗ್ಯ ಶರಧಿಯೇ ಕವಿದು ಬಿಟ್ಟಿತು.

ಅಂದು ಜಾರಿದ ಮೋಹಕರ್ಮದೊಡನೆ ಮಮಕಾರವು ಹಾರಿ ಹೋಯಿತು. ಅವರು ನಿಸ್ಪೃಹರಷ್ಟೆ. ಬೇರೆಯಾಗಿರುವ ಅರ್ಕಕೀರ್ತಿ ಆದಿರಾಜರು ಬೆಡಗಿನಿಂದ ಭೂಮಿಯಲ್ಲಿ ಸಂಚರಿಸಿದರು. ಒಂದು ದಿಕ್ಕಿಗೆ ಅರ್ಕಕೀರ್ತಿನಾಥನ ಗಂಧಕುಟಿಯು ಸಾಗಿತು. ಬೇರೊಂದು ದಿಕ್ಕಿಗೆ ಆದಿನಾಥನ ಸಭೆ ಸಾಗಿತು. ಆಗ ನರರೂ ಸುರರೂ ಜಯಘೋಷಗೈದರು. ಇವರ ತಂದೆ ಘಾತಿಯನ್ನು ಘಾತಿಸಿದ ಮರುದಿನವೇ ಮುಕ್ತಿಗೆ ಸಂದನು. ಇವರು ಹಾಗಲ್ಲ. ತಂದೆಯು ಕೊನೆಯಲ್ಲಿ ದೀಕ್ಷೆಯನ್ನು ಧರಿಸಿದ್ದರೆ, ಇವರು ವಿಕಾಸಗೊಳ್ಳುವ ಹರೆಯದಲ್ಲೆ ದೀಕ್ಷೆಗೊಂಡರು. ತಮ್ಮ ದೀರ್ಘವಾದ ಆಯಸ್ಸು ತೀರುವವರೆಗೂ ಭೂಮಿಯಲ್ಲಿ ಸಂಚರಿಸಿ ಲೋಕಕ್ಕೆ ಆನಂದವನ್ನುಂಟು ಮಾಡಿದರು. ಕಾಳಿಂಗ, ಕಾಶ್ಮೀರ, ಲಾಟ, ಕರ್ನಾಟ, ಪಾಂಚಾಳ, ಸೌರಾಷ್ಟ್ರ, ನೇಪಾಳ, ಮಾಳವ ಮುಂತಾದ ದೇಶಗಳಲ್ಲಿ ಸಂಚರಿಸಿ ತಮ್ಮ ಬೋಧನೆಯಿಂದ ಸರ್ವರನ್ನೂ ಪಾಲಿಸಿದರು. ಹುರುಮುಂಜಿ, ಕಾಶಿ, ಹಮ್ಮೀರ, ಬಂಗಾಳ, ಬರ್ಬರ, ಸಿಂಧು, ಪಲ್ಲವ, ವಂಗದ, ತುರುಕಾಣ್ಯ ಮೊದಲಾದ ದೇಶಗಳಲ್ಲಿ ಸಂಚರಿಸಿ ಆತ್ಮಾಮೃತ ರಸವನ್ನೇ ಸುರಿಸಿದರು. ಅಲ್ಲಲ್ಲಿ ನವ್ಯ ಪೂಜೆಯನ್ನು ಮಾಡಿದರು. ಕರ್ತವ್ಯವೇನೆಂದು ಪ್ರಜೆಗಳು ತಮಗೆ ನಮಿಸಿ ಕೇಳಿಕೊಂಡಾಗ ಅವರಿಗೆ ದಿವ್ಯನಾದದಲ್ಲಿ ಆತ್ಮ ಸಿದ್ಧಿಯನ್ನು ತೋರಿಸಿ ಅವರನ್ನುದ್ಧರಿಸಿದರು. ಈ ರೀತಿಯಲ್ಲಿ ಬಹುಕಾಲವಿದ್ದು ಆಯುಷ್ಯ ಕೊನೆಮುಟ್ಟಿದಾಗ ಯೋಗದಲ್ಲಿ ನಿರತರಾದರು. ಅರ್ಕಕೀರ್ತಿನಾಥನು ರಜತಗಿರಿಗೆ ಬಂದು ನಿರ್ಘಾತಿಯನ್ನು ನಾಶಮಾಡಿ ಮುಕ್ತಿಗೆ ಸಂದನು. ಕೂಡಲೇ ದೇವೇಂದ್ರನು ಪ್ರೀತಿಯಿಂದ ಬಂದು ಅವನನ್ನು ಪೂಜಿಸಿದನು. ಕೆಲವು ದಿನಗಳ ಮೇಲೆ ಆದಿನಾಥನು ಅಲ್ಲಿಗೆ ಬಂದು ನಿರ್ಘಾತಿಯನ್ನು ನಾಶಮಾಡಿ ಮುಕ್ತಿಗೆ ಸಂದನು. ಎಲ್ಲರಂತೆ ಕಡೆಯ ಮಂಗಲವೂ ಆಯಿತು.

ವೃಷಭನಾಥ ಹಂಸನಾಥ ಮುಂತಾದ ಋಷಿಗಳು ಅಲ್ಲಲ್ಲಿ ಗಿರಿ, ವನ, ನದಿಗಳ ಒತ್ತಿನಲ್ಲಿ ಸಿದ್ಧಿ ಪಡೆದರು. ಅಕ್ಕಗಳು, ಅಜ್ಜಿಗಳು ಎಲ್ಲರೂ ಮನಮುಟ್ಟಿ ತಪಸ್ಸು ಮಾಡಿ ತಮ್ಮ ಸಿಕ್ಕಿನ ಹೆಣ್ಣು ಜನ್ಮವನ್ನು ಕಳೆದು ಗಂಡಾಗಿ ಸ್ವರ್ಗಲೋಕವನ್ನು ಸೇರಿದರು. ಪುರುನಾಥನು ಸ್ವರ್ಗವನ್ನು ಸೇರಿದ ಮೇಲೆ ಭರತೇಶನ ಮಾತೆಯರು ದೇವತೆಗಳಾದರು.

ಭರತೇಶನು ಸ್ವರ್ಗಕ್ಕೆ ಸಂದ ಬಳಿಕ ಅವನ ಅಂಗನಾರತ್ನವಾದ ಸುಭದ್ರಾ ದೇವಿಗೆ ಸ್ವರ್ಗದಲ್ಲಿ ಪುರುಷತ್ವವುಂಟಾಯಿತು. ಆಮೇಲೆ ಕಚ್ಛ ಮಹಾಕಚ್ಛರೇ ಮೊದಲಾದ ರಾಜರು ತೆರಳಿದರು. ಬಳಿಕ ಬಾಹುಬಲಿ, ನಮಿ, ವಿನಮಿ, ವೃಷಭಸೇನ, ಭರತೇಶರು ತೆರಳಿದರು. ಆದೀಶನು ಮೋಕ್ಷಕ್ಕೆ ಸಂದಾಗಲೇ ಪ್ರಣಯಚಂದ್ರನು, ಲೀಲೋದಯ ಗುಣವಸಂತಕರು, ಭರತೇಶನ ಅನುಮತದಿಂದ ದೀಕ್ಷಿತರಾಗಿ ಮುಕ್ತಿಗೆ ಸಂದರು. ದಕ್ಷಿಣ, ಸಾಗರ ಮುಂತಾದ ಎಂಟು ಮಂದಿ ಸಖರೂ ದಳಪತಿ ಮಂತ್ರಿಗಳೂ ಮೋಕ್ಷಕ್ಕೆ ಸಂದರು. ಮರೀಚಿಯೊಬ್ಬನ ಹೊರತಾಗಿ ಭರತೇಶನ ಮಕ್ಕಳೂ ತಮ್ಮಂದಿರೂ ಮುಕ್ತಿಯನ್ನು ಹೊಂದಿದರು. ಇದ್ದ ಅಳಿಯಂದಿರಲ್ಲಿ ಕೆಲವರು ಸ್ವರ್ಗಕ್ಕೆ ಹೋದರು. ಇನ್ನೂ ಕೆಲವರು ಕೈವಲ್ಯ ಪದವಿಗೇರಿದರು. ಹೆಣ್ಮಕ್ಕಳೂ ಉದ್ದಂಡ ತಪಸ್ಸು ಮಾಡಿ ಗಂಡಾಗಿ ಸ್ವರ್ಗಲೋಕ ಸೇರಿದರು. ವಿಮಲರಾಜ, ಕಮಲರಾಜ, ಭಾನುರಾಜರು ಮುಕ್ತಿಗೆ ಹೋದರು. ಉಳಿದ ಬಾಂಧವರೂ ಕ್ರಮವಾಗಿ ಸ್ವರ್ಗ ಸೇರಿದರು. ದೇವಕುಲಕ್ಕೆ ದೀಕ್ಷೆಯಿಲ್ಲ, ಆದ್ದರಿಂದ ಸಿಂಧುದೇವನೂ ಗಂಗಾದೇವನೂ ತಮ್ಮ ಭಾವನಾದ ಭರತೇಶನನ್ನು ಅಗಲಿ ಜೀವಿಸಿದರಲ್ಲದೆ ತಮ್ಮ ಸತಿಯರೊಂದಿಗೆ ತಮ್ಮ ರೀತಿಯ ದೀಕ್ಷಾಜೀವನವೆಸಗಿದರು. ಮಾಗಧಾದಿಗಳೆಲ್ಲರೂ ದೀಕ್ಷಿತರಾಗದೆ ತಡೆದರು. ಗುಣೋತ್ತಮನಾದ ಭರತೇಶನನ್ನು ಅಗಲಿ ಭೂಭಾಗದಲ್ಲಿ ಯಾರೂ ಜೀವಿಸಲಿಲ್ಲ.

ಭರತೇಶನು ಗುರುಹಂಸನಾಥನನ್ನು ಮೆಟ್ಟಿ ತನ್ನ ಚಿತ್ತದಲ್ಲೇ ನೋಡುತ್ತಿರುವನು. ಸಮುದ್ರವೇ ಮೇರೆಯಾಗಿರುವ ಭೂಮಿಯು ಅವನನ್ನು ಮೆಚ್ಚಿತ್ತು, ಆತ್ಮಾರಾಮನನ್ನು ಯಾರು ಮೋಹಿಸುವುದಿಲ್ಲ? ವಾಯುಸ್ತಂಭನಾದಿ ಸಾಮರ್ಥ್ಯದಿಂದ ಮುಪ್ಪು ಹೊದ್ದದಿರುವುದೊಂದು ಆಶ್ಚರ್ಯ! ಆದರೂ ತಮ್ಮ ಸತಿಯರಲ್ಲಿ ಮತ್ಸರವುಂಟಾಗ ಬಾರದೆಂದು ಎಲ್ಲರೊಂದಿಗೂ ಸರಸದಲ್ಲಿದ್ದು ಅವರನ್ನು ಆಳಿದ ಭರತೇಶನಿಗೆ ಎಲ್ಲರೂ ಎದೆಸೋತರು. ಲೌಕಿಕವನ್ನು ಬಿಟ್ಟು ಸರ್ವರೂ ಚಿತ್ತಶುದ್ಧಿಯನ್ನು ಪಡೆದರು. ದೀಕ್ಷೆಯನ್ನು ಕೊಟ್ಟು ಮನಃಶುದ್ಧರಾದರು. ಎಲ್ಲವನ್ನೂ ಹಿಡಿದುಕೊಂಡು ಭರತೇಶನಂತೆ ಮುಕ್ತಿಗೆ ಸಂದವರು ಯಾರಿದ್ದಾರೆ? ಅವನಂತೆ ಗುಟ್ಟನ್ನು ಒಡೆಯುವವರು ಯಾರೂ ಇಲ್ಲ. ಪ್ರಜೆಗಳನ್ನು ಪೊರೆಯುವ ಅವನ ಜೀವನವೇ ಅವನ ಆತ್ಮಸಿದ್ಧಿಗೆ ಮುನ್ನೋಟವಾಗಿತ್ತು. ಗೆಳೆಯರ ವಿನಯ, ಮಂತ್ರಿಗಳ ಆಲೋಚನೆ, ದಳಪತಿಗಳ ಸಲುಗೆ, ಸತ್ಕವಿಗಳ, ಬ್ರಾಹ್ಮಣರ ಸತ್ಕಾರ ಮುಂತಾದವು ಈ ಭೂಮಿಯಲ್ಲಿ ಇನ್ನೊಬ್ಬರಿಗಿಲ್ಲ. ತಂದೆ ತಾಯಿಗಳ ಭಕ್ತಿ, ತಂಗಿಯರ ಪ್ರೀತಿ, ಮೈದುನರ ಸರಸ, ತಮ್ಮ ತಂಗಿಯರ ಲಾಲನೆ, ಪತ್ನಿಯರ ಅನುಮೋದನೆಯ ಆಮೋದ ಭರತೇಶನಿಗಲ್ಲದೆ ಭೂಮಿಯಲ್ಲಿ ಅನ್ಯರಿಗಿಲ್ಲ. ಅವನು ಚಿಂತಿಸಿ ರಾಜ್ಯವಾಳಲಿಲ್ಲ, ತಪಸ್ಸಿನಲ್ಲಿ ಹಿಂದುಳಿದು ಮೋಕ್ಷ ಪಡೆದುದಲ್ಲ, ಸಂತೋಷ ದಲ್ಲಿದ್ದು ಸಂತೋಷದಲ್ಲೇ ಹೋದ ಆ ಹೊಂತಗಾರನಿಗೆ ಸರಿಸಮಾನರಿಲ್ಲ.

## ೨೮

# ಮಹಾಮಂಗಲ

ಮುಕ್ತರಾದವರೆಲ್ಲರೂ ಸರಿಸಮಾನರೇ, ಆಣೆ ಆತ್ಮಶಕ್ತಿಯನ್ನು ಅರಿತು ಮೊದಲು ಭೋಗದಲ್ಲೇ ಇದ್ದು ಕ್ಷಣದಲ್ಲೇ ಮುಕ್ತಿಗೆ ಸಂದ ಭರತೇಶನ ಯುಕ್ತಿಗೆ ಮಹಾಕವಿ ರತ್ನಾಕರ ವರ್ಣಿಯ ಎದೆಯೇ ಸೂರೆಹೋಯಿತು.

"ಇಬ್ಬರು ಅರಸಿಯರನ್ನು ಆಳಿದ ತಂದೆಯು ಸಾವಿರ ವರುಷ ತಪಸ್ಸು ಮಾಡಿ ಗೆದ್ದನು. ಆದರೆ ಲಕ್ಷ ಅಂಗನೆಯರನ್ನು ಆಳಿದ ಮಗನು ಕ್ಷಣದಲ್ಲೇ ಈ ರೀತಿಯಾದುದು ಆಶ್ಚರ್ಯವಷ್ಟೆ! ಪ್ರಥಮಾನುಯೋಗದಿಂದ ಶಲಾಕಾ ದೇಹವನ್ನು ಪಡೆದು ಅರುವತ್ತುಮೂರು ಮಂದಿಯಲ್ಲಿ ಆರಿಸಿಕೊಂಡ ಈ ಜಾಣರೊಡೆಯನನ್ನು ಪ್ರೀತಿಯಿಂದ ಹೊಗಳಿದನು. ಮನಸ್ಸಿನಲ್ಲೆ ಮೆಚ್ಚಿ ಹಂಸನಾಥನೊಳಗಿದ್ದು ಕ್ಷಣದಲ್ಲೇ ಮುಕ್ತಿಗೆ ಸಂದ ಭರತ ಭಾಸ್ಕರನನ್ನು ಹೊಗಳದಿದ್ದರೆ, ರತ್ನಾಕರಸಿದ್ಧನು ನಾಡಾಡಿಯಲ್ಲದೆ ಆತ್ಮಸುಖಿಯಾಗಿಲಾರ. ಶೃಂಗಾರಕ್ಕಾಗಿ ಕಷ್ಟದ ಕಥೆಗಳನ್ನು ಕೇಳಿ ಜನರು ಕೆಡಬಾರದೆಂದು ಅಂಗಸುಖಿಯಾದ ಮೋಕ್ಷ ಸುಖಿಯಾದ ಭರತೇಶನ ಕಾವ್ಯವನ್ನು ಇಷ್ಟು ಶೃಂಗಾರ ಕಟ್ಟಿ ಹೇಳಿದೆನು. ಶೃಂಗಾರಕ್ಕಾಗಿ, ದುರುಳರ, ಹಾದರದವರ, ನೀಚ ಸತಿಯರ ವಿರಚಿಸಲಿಲ್ಲ, ಬದಲು ಭರತ ಚಕ್ರಿಯ ಕಥೆಯನ್ನು ಹೇಳಿದೆನು. ಅವನ ಸತಿಯರ ಕಥೆಯನ್ನು ಹೇಳಿದೆನು. ಅದನ್ನು ಸ್ಮರಿಸಿದವರಿಗೆಲ್ಲ ಪುಣ್ಯವೊದಗುವುದು" ಎಂದು ರತ್ನಾಕರಸಿದ್ಧನೇ ಹೇಳಿದ್ದಾನೆ.

"ಈ ಕಥೆಯನ್ನು ನಾನು ಹೇಳಿದಾಗ, ಭೂಮಿಯಲ್ಲಿ ಅನೇಕರಿಗೆ ಹರುಷವಾಯಿತು. ಆದರೆ ನಾಲ್ಕೆಂಟು ಮಂದಿ ಪೋಷಕರು ಮನಸ್ಸಿನಲ್ಲೇ ವ್ಯಾಕುಲಪಟ್ಟರು. ನಾನಿದನ್ನು ಕೀರ್ತಿಗಾಗಿ ಬರೆದುದಲ್ಲ, ಕೀರ್ತಿ ತಾನಾಗಿಯೇ ಬರುತ್ತಿದೆ. ಆದರೆ ಕೆಲವರು ಧೂರ್ತರು ಕೀರ್ತಿಯನ್ನು ಬಯಸಿ ಕಣ್ಣಿಗೆ ಕುಸುರಾಗಿ ಪೇಚಾಡುತ್ತಾರೆ. ತಾವು ಕವಿತ್ವವನ್ನು ತೊಡಗುವರು. ಕಡೆಗೆ ಅದು ನಡೆಯುವಂತೆಯೂ ಇಲ್ಲ, ಕಿವಿಗೆ ಶೋಭಿಸುವಂತೆಯೂ ಇಲ್ಲ, ಕೂಡಲೆ ಅವರು ಹೊಸ ಕವಿತೆಯಿದು; ಇದನ್ನು ಬಿಟ್ಟುಬಿಡೆಂದು ಗಡಬಡಿಸುತ್ತಾರೆ. ಅವರು ಒಂದು ತಿಂಗಳೋದಿದ ಶಾಸ್ತ್ರ ನನಗೆ ಒಂದು ದಿವಸದಲ್ಲಿ ಕರಗತವಾಗುವುದು. ಬಾಹ್ಯರಚನೆಯಲ್ಲಿ ಏನುಂಟೆಂದು ಅದನ್ನು ಬಿಟ್ಟು, ಹಂಸನೊಳಗೆ ಅನುಭವಿಸುತ್ತಿರುವೆನು. ಹೆರವರ ನುಡಿಯಿಲ್ಲದೆ ನಾನು ಉಂಡುರುಳಿ ಭಟ್ಟಾಕರರಂತೆ ಇರುತ್ತಿದ್ದೆನು. ಅವರಾದರೂ ಪುಸ್ತಕಗಳನ್ನು ಸಂಗ್ರಹಿಸಿ ಹೊರೆಗಟ್ಟಿ ಭವಸೇನ ಗುರುಗಳಂತೆ ಆಡುತ್ತಿರುವರು. ದೇಹದಲ್ಲಿರುವ ಆತ್ಮನನ್ನು ಬತ್ತಲೆ ಮಾಡಿ ನಾನು ನೋಡುತ್ತಿದ್ದರೆ ಅವರು ತಮ್ಮ ದೇಹವನ್ನೇ ಬತ್ತಲೆ ಮಾಡಿ, ಮನಸ್ಸನ್ನು ಕತ್ತಲೆ ಮಾಡಿ ಗದ್ದಲ ಮಾಡುತ್ತ ಸುತ್ತುತ್ತಿರುವರು.

ಯಾವ ಯಾವ ರೀತಿಯಲ್ಲಿ ಮಾತನಾಡಿದರೂ ತಮ್ಮ ಕೀರ್ತಿಗೆ ಹಾನಿಯಾದಾಗ ನೊಂದುಕೊಂಡರಲ್ಲದೆ ನನ್ನ ಕಾವ್ಯವನ್ನು ತಮ್ಮ ಅಜ್ಞಾನದಿಂದ ಅಲ್ಲಸಲ್ಲೆಂದು ಜರೆದರು. ಪುರಾಣ ತರ್ಕದ ತಳ್ಳಿಯನ್ನು ತೋರಿ ಸೂರ್ಯನನ್ನು ಹಳಿದ ಗೂಗೆಯಂತೆ ಬೆಂದ ಬೆದೆಯಂತಾದರು. ನಾನು ಅವರನ್ನು ಪ್ರತಿಭಟಿಸದೆ ಮೌನವಾಗಿದ್ದೆ. ಅವರನ್ನು ವಿದ್ವಾಂಸರೂ ರಾಜರೂ ದೂರ ಮಾಡಿದರು.

ಧ್ಯಾನಕ್ಕೆ ಬೇಸರವಾದಾಗ ನನ್ನ ಆತ್ಮಲೀಲಾಸುವೃದ್ಧಿಗಾಗಿ ಈ ಕಾವ್ಯವನ್ನು ಹೇಳಿದೆನಷ್ಟೆ. ನಾನಿದನ್ನು ಒಬ್ಬರಿಗಾಗಿ ಮತ್ಸರದಿಂದ ಹೇಳಲಿಲ್ಲ. ನಾನು ಮೌನವಾಗಿರುವೆನು. ಹಂಸನಾಥನ ಶಕ್ತಿಯಿಂದ ಹೇಳಿದ ಕಾವ್ಯಕ್ಕೆ ಲೋಕದಲ್ಲಿ ಸಂಶಯವಿಲ್ಲ. ನಾನು ಸೂಚಿಸುವ ಮೊದಲೆ ಮುನಿಗಳೂ ರಾಜರೂ ವಿದ್ವಾಂಸರೂ ಈ ಕಾವ್ಯಕ್ಕೊಲಿದು ಕೊಂಡು ಹೋದರು.''

ಎಂದು ರತ್ನಾಕರಸಿದ್ಧನು ತಾನು ಹೊಸ ಕಾವ್ಯವನ್ನು ರಚಿಸಿದಾಗ ಸಾಹಿತ್ಯ ಲೋಕದಲ್ಲುಂಟಾದ ಪ್ರತಿಕ್ರಿಯೆಯ ಕುರಿತು ಸಿದ್ಧರೂ ತಲೆದೂಗುವಂತೆ ಎದೆ ಬಿಚ್ಚಿ ಹೇಳಿದ್ದಾನೆ. ಅದಕ್ಕೂ ಮೊದಲು, ಕಾವ್ಯದ ಆದಿಯಲ್ಲಿ ''ಪರಮ ಪರಂಜ್ಯೋತಿಗೆ ಕೋಟಿ ಚಂದ್ರಾದಿತ್ಯ ಕಿರಣ ಸುಜ್ಞಾನ ಪ್ರಕಾಶನಿಗೆ, ಸುರರ ಮುಕುಟಮಣಿರಂಜಿತ ಚರಣಾಬ್ಜನಿಗೆ, ಪ್ರಥಮ ಜಿನೇಶನಿಗೆ ಶರಣು'' ಎಂದು ನುಡಿದು; ''ಸಿದ್ಧರ, ಸತತ ವಿಶುದ್ಧರ, ಬೋಧಸಮೃದ್ಧರ, ನಾನೀಗ ನೆನೆದು ಸಿದ್ಧರಸದಲ್ಲಿ ಲೋಹವನ್ನು ಅದ್ದಿದಂತೆ ಆತ್ಮಸಿದ್ಧಿಯನ್ನು ಪಡೆಯುವೆನು'' ಎಂದು ಪಣತೊಟ್ಟಿದ್ದಾನೆ. ಅದಕ್ಕಾಗಿ, ವ್ಯವಹಾರ ನಿಶ್ಚಯವನ್ನು ತಿಳಿದು, ತಮ್ಮ ಆತ್ಮ ತತ್ವದ ನೆಮ್ಮಿ ನಿಜವನ್ನು ಸಾಧಿಸುವ ನವಕೋಟಿ ಮುನಿಗಳಲ್ಲಿ ಮೂವರ ಅಡಿಗಳಿಗೆರಗಿ, ತನ್ನ ವಿನಯವನ್ನು ವ್ಯಕ್ತಗೊಳಿಸಿದ್ದಾನೆ. ಅಲ್ಲದೆ ''ಪರಬೊಮ್ಮ; ತ್ರಿಭುವನಸಾರ; ಚಿದಂಬರ ಪುರುಷ; ನಿರಂಜನಸಿದ್ಧ; ದುರತಂಜಯ; ಹಂಸನಾಥ ನಮೋ; ಗುರುವೆ ಪ್ರತ್ಯಕ್ಷನಾಗು ನನಗೆ;'' ಎಂದು ಬೇಡಿಕೊಂಡಿದ್ದಾನೆ. ಆಮೇಲೆ ತಾನೇ ಕಾವ್ಯ ಬರೆಯತೊಡಗಿದೆನೆಂದು ಮುಚ್ಚು ಮರೆಯಿಲ್ಲದೆ ತಿಳಿಸಿದ್ದಾನೆ.

''ಗುರುವೆ, ಬಿನ್ನಹವಿದು. ಧ್ಯಾನಕ್ಕೆ ಬೇಸರವಾದಾಗ ನಿನ್ನನ್ನು ಆದಿಯನ್ನಾಗಿ ಮಾಡಿಕೊಂಡು ಕನ್ನಡದಲ್ಲೊಂದು ಕಥೆಯನ್ನು ಹೇಳುವೆನು. ನನ್ನೊಡೆಯಾ, ಅದು ನಿನ್ನ ಆಜ್ಞೆಯೇ. ಕಾವ್ಯಗಳಲ್ಲಿ ಓದುಗಬ್ಬ ಹಾಡುಗಬ್ಬವೆಂಬೆರಡು ತೆರನುಂಟೆಂದು ಹೇಳುತ್ತಾರೆ. ಆ ಎರಡು ರೀತಿಯ ಕಬ್ಬಗಳೂ ಕಬ್ಬಿನಂತಿರಬೇಕಲ್ಲದೆ ಬಿದಿರಿನಂತಿರಬಾರದೆಂದು ತಿಳಿಸಿ, ತಾನಂತಹ ಕಾವ್ಯ ರಚಿಸಬೇಕೆಂದು ಸರಸ್ವತಿಯನ್ನೇ ಕೇಳುತ್ತಾನೆ. ಆಕೆಯಾದರೋ ರಸವತ್ತಾದ ಕಬ್ಬಿನಂತಿರುವ ಕಾವ್ಯವನ್ನೇ ರಚಿಸೆಂದು ಹರಸಿದಳು. ಆದ್ದರಿಂದ ತನ್ನ ಕಾವ್ಯವನ್ನು —

ಅಯ್ಯಯ್ಯಾ ಚೆನ್ನಾದುದೆನೆ ಕನ್ನಡಿಗರು;
ರಯ್ಯಾಮಂಚಿದೆಯೆನೆ ತೆಲುಗಾ;
ಅಯ್ಯಯ್ಯ ಎಂಚ ಪೊರ್ಲಾಂಡೆಂದು ತುಳುವರು;
ಮೆಯ್ಯುಬ್ಬಿ ಕೇಳಬೇಕಣ್ಣಾ

ಎಂದು ತಿಳಿಸಿದ್ದಾನೆ. ''ನನ್ನ ಈ ಹಾಡಗಬ್ಬದಲ್ಲಿ ರಳ, ಕುಳ, ಶಿಥಿಲ. ಸಮಾಸ ಮುಂತಾದವುಗಳಲ್ಲಿ ಕೆಲವಿರಬಹುದು; ಕೆಲವು ಇಲ್ಲದಿರಲೂ ಬಹುದು. ಹಾಡುಗಬ್ಬಗಳಲ್ಲಿ ಇವುಗಳ ಕೋಟಲೆಯೇಕೆ? ವಸ್ತುಕಕ್ಕಿದ್ದರೆ ಸಕಲ ಲಕ್ಷಣಗಳೂ ಇರಬೇಕು. ವರ್ಣಕದಲ್ಲಿ ಒಂದಿಷ್ಟು ವಿಕಳವಾದರೂ ದೋಷವಿಲ್ಲ, ಸಕಲ ಲಕ್ಷಣಗಳಿಗಾಗಿ ಕಾವ್ಯವನ್ನು ಬಿರುಸು ಮಾಡಿದರೆ ಅದು ಪುಸ್ತಕದ ಬದನೆಕಾಯಿಯಾದೀತು. ಚಂದ್ರನಲ್ಲಿ ಕಪ್ಪುಂಟು. ಆದರೆ ಬೆಳದಿಂಗಳು ಕಂದಿ ಕುಂದದೆ ನಿರ್ಮಲವಾಗಿದೆ! ಒಂದು ವೇಳೆ ಉತ್ತಮ ಕಥೆಗೆ ಶಬ್ದದೋಷಗಳು ಸಂಧಿಸಿ ಬಂದರೂ, ಅದರಿಂದ ಕಾವ್ಯ ಧರ್ಮ ಮಾಸುವುದಿಲ್ಲ. ಆದ್ದರಿಂದ ಭವ್ಯರೇ ಕೇಳಿರಿ, ನಿಮಗೊಂದು ಉತ್ತಮವಾದ ಕಥೆಯನ್ನು ಮೃದುವಾಗಿ ಹೇಳುತ್ತೇನೆ. ಅದನ್ನು ಕೇಳಿದರೆ ನಿಮಗೆ ಆತ್ಮ ಸುಖವು ಇಂದೋ, ನಾಳೆಯೋ, ನಾಡಿದ್ದೋ, ದೊರೆಯುವುದು. ಶ್ರೀ ಭರತೇಶ ವೈಭವದ ಕಥೆಯಿಂದು ಕೇಳಿರಿ. ನಿಮಗೆ ಅಡಿಗಡಿಗೆ ಸೌಭಾಗ್ಯವಾದೀತು. ಶೋಭಾನವಾದೀತು. ಇಂದ್ರಪದವಿಯೂ ಬರಬಹುದು. ಕಟ್ಟಕಡೆಗೆ ಮೋಕ್ಷವೂ ದೊರೆಯಬಹುದು.''

''ಗಣನೆಯಿಲ್ಲದೆ ರಾಜ್ಯ ಸುಖದಲ್ಲಿ ಓಲಾಡಿ, ಧಾರಿಣಿಯೇ ಮೆಚ್ಚುವಂತೆ ಜಿನನಾಗಿ ಕ್ಷಣದಲ್ಲೇ ಕರ್ಮವನ್ನು ಸುಟ್ಟು ಜಿನನಾದ ರಾಜೇಂದ್ರನ ವೈಭವವನ್ನು ಲಾಲಿಸಿರಿ. ಆಗಮವೂ ಆಧ್ಯಾತ್ಮವೂ ಕೂಡಿಕೊಂಡು ಶೃಂಗಾರ, ತ್ಯಾಗ ಭೋಗಗಳ ಮೋಡಿ ಮೆರೆಯುವಂತೆ ಭೋಗಿಗಳ ಯೋಗಿಗಳ ಎದೆ ಜುಮ್ಮು ಜುಮ್ಮೆನ್ನುವಂತೆ ನೇಮದಿಂದ ಹೇಳುವೆನು. ಕಾವ್ಯಗಳಲ್ಲಿ ಹದಿನೆಂಟು ವರ್ಣನೆಗಳನ್ನು ರಚಿಸುತ್ತಾರೆ. ನಾನು ಹಾಗೆ ಹೇಳುವುದಿಲ್ಲ, ಉಚಿತಕ್ಕಾಗಿ ಎಷ್ಟು ಬೇಕೋ ಅಷ್ಟನ್ನು ಹೇಳುವೆನು. ನನಗಾದರೋ ಆಧ್ಯಾತ್ಮವೆ ನಿಚಿತವಾದ ಪ್ರಯೋಜನ. ಕೃತಿಯನ್ನು ಹೇಳುವವನು ಸಾಮಾನ್ಯನು ನಿಜ; ಆದರೆ ಕಾವ್ಯಪತಿ ಚಕ್ರಿಯು ಸಾಮಾನ್ಯನಲ್ಲ, ಈ ಕೃತಿಯನ್ನು ಆದಿನಾಥನ ಪ್ರೇಮದಿಂದ ಕೇಳಬೇಕು; ಕಾವ್ಯ ಕರ್ತೃವಿನ ದೋಷವನ್ನು ನೋಡಬೇಡಿ. ಈ ಪುಣ್ಯಕಥೆ ಪುಣ್ಯಜೀವಿಗಳಿಗೆ ಮೆಚ್ಚುವುದು. ಕಾಪುರುಷರಿಗೆ ಮೆಚ್ಚಲಾಗದು. ಪಾಪವನ್ನು ಕೆಡಿಸಿ, ಪುಣ್ಯವನ್ನು ಮಾಡಿ ಸ್ವರ್ಗಕ್ಕೆ ಹೋಗುವೆವೆನ್ನುವವರೆಲ್ಲರೂ ಕೇಳಿ. ಅದಕ್ಕಾಗಿ ಓಂನಮೋಯೆನ್ನಿ, ಜಿನಂ ನಮೋಯೆನ್ನಿ, ಸಿದ್ಧಂ ನಮೋಯೆನ್ನಿ, ಹಂಸಂ ನಮಾಮಿಯೆನ್ನಿ; ಹಾಗೆಂದ ಮೇಲೆ ಈ ಕಥೆಗೆ ''ಇಚ್ಛಾಮಿ ಎನ್ನಿ, ಇನ್ನು ಚೆನ್ನಾಗಿ ಕಥೆಯನ್ನು ಕೇಳಿ;'' ಎಂದು ಸ್ಪಷ್ಟವಾಗಿ ತಿಳಿಸಿದ್ದಾನೆ. ತನ್ನ ಕುರಿತೂ ತನ್ನ ಕಾವ್ಯದ ಕುರಿತೂ ಕಾವ್ಯದ ಕೊನೆಯಲ್ಲಿ ಹೀಗೆ ಹೇಳಿದ್ದಾನೆ :– ''ಕ್ಷತ್ರಿಯ ವಂಶದಲ್ಲಿ ಹುಟ್ಟಿದವನೆಂದು, ಕರ್ನಾಟ ಸುಕ್ಷೇತ್ರದವನೆಂದು, ಅಣ್ಣಗಳೆಂದು, ಲೋಕವು ನನ್ನ ಕುರಿತು ಹೇಳುತ್ತಿದೆ. ಇದು ನನ್ನ ಸಂಪತ್ತಲ್ಲ, ನನ್ನ ದೇಹದ ಸಂಪತ್ತೆಂದು ನಾನು ಹೇಳುತ್ತೇನೆ. ನಾನು ಸಿದ್ಧ ಪದಕ್ಕೆ ಸೋತವನಾದುದರಿಂದ ರತ್ನಾಕರಸಿದ್ಧನೆಂದು ಹೇಳಲು ಒಮ್ಮೊಮ್ಮೆ ಒಲಿಯುತ್ತೇನೆ. ಆದರೆ ಶುದ್ಧವಾದ ನಿಶ್ಚಯದಲ್ಲಿ ನಾನು ನಿತ್ಯವೂ ನಿರಂಜನ ಸಿದ್ಧನಾಗಿಯೇ ಇರುತ್ತೇನೆ. ರೋಗ ಜನನ ಮರಣಗಳಿರುವ ಜನಕನ ಹೆಸರನ್ನು ಲೋಕದಲ್ಲಿ ಹೇಳುತ್ತಾರೆ. ನಾನಾದರೋ, ಶ್ರೀ ಮಂದರಸ್ವಾಮಿ ನನ್ನ ಅಯ್ಯನೆಂದು ನಾನೇ ನೇಮಿಸಿಕೊಂಡು ಸುಖಪಡುತ್ತಿರುವೆನು. ನನಗೆ

ಅಂತಸ್ತುವೊಂದುಂಟು. ಅದನ್ನು ಸೂಚಿಸದಿರಲಾರೆ. ಉತ್ತಮ ಸಿದ್ಧಾಂತವನ್ನು ಕಂಡು, ಅದರೊಳಗಿನ ಭ್ರಾಂತಿಯನ್ನು ಲೋಕಕ್ಕೆ ಹಬ್ಬಿಸದೆ, ನಾನೇ ಏಕಾಂತದಲ್ಲಿದ್ದು ಆಚರಿಸುತ್ತಿರುವುದುಂಟು. ಆತ್ಮನ ಮಹಾತ್ಮೆಗೆ ಪರಿಮಿತಿಯಿಲ್ಲ, ಅದು ಹಾಗಿರಲಿ. ಶ್ರೀ ಶ್ರೀ ಚಾರುಕೀರ್ತಿ ಯೋಗೀಶ್ವರ ನನಗೆ ದೀಕ್ಷಾಗ್ರ ಗುರು. ಹಂಸನಾಥನೇ ಮೋಕ್ಷಾಗ್ರ ಗುರು. ಇದರಿಂದ ರತ್ನಾಕರ ಸಿದ್ಧನು ಅಖಂಡವಾದ ವ್ಯವಹಾರ ನಿಶ್ಚಯದಲ್ಲಿ ಅತಿ ದಕ್ಷನು. ದೇಶಿಗಣಾಗ್ರಣಿ ಶ್ರೀ ಶ್ರೀ ಚಾರುಕೀರ್ತ್ಯಾಚಾರ್ಯರು ಶ್ರೀ ಶುಚಿದೀಕ್ಷೆಯಿತ್ತಾಗ ಶ್ರೀ ಗುರು ಹಂಸನಾಥನು ನನ್ನಲ್ಲಿ ಪ್ರಕಾಶವಾಗಿ ನೆಲೆನಿಂತು ರಕ್ಷಿಸಿದನು. ಶ್ರೀ ಗುರು ಹಂಸನಾಥನ ಆಜ್ಞೆಯಂತೆ ಸಿದ್ಧರ ತಿರುಳನ್ನು ಅರಿತು ಆತ್ಮ ಲೀಲಾರ್ಥವಾಗಿ ಭರತೇಶ ವೈಭವವೆಂಬ ಈ ಕಾವ್ಯವನ್ನು ಹೇಳಿದೆನು. ಸುಖಿಗಳು ಇದನ್ನು ಆಲಿಸುವುದು. ಅದು ಕೂಡ ಅವರಿಗೆ ಬೇಕಾದರೆ ಆಲಿಸುವುದು. ಬೇಡವಾದರೆ ಪರಾಕು ಮಾಡುವುದು. ನನಗೆ ಅದರಿಂದ ವ್ಯಾಕುಲವೂ ಇಲ್ಲ; ಸಂತೋಷವೂ ಇಲ್ಲ; ನಾನು ನಿರಾಕಾಂಕ್ಷಿ. ಭೋಗವಿಜಯ ಮೊದಲಾಗಿ ದಿಗ್ವಿಜಯ, ಸುಯೋಗವಿಜಯ, ಮೋಕ್ಷವಿಜಯ ಈಗ ಕೊನೆಯಲ್ಲಿ ಅರ್ಕಕೀರ್ತಿ ವಿಜಯವಾಗಿರುವುದರಿಂದ ಪಂಚಕಲ್ಯಾಣದಿಂದ ಮನಸ್ಸಿಗೆ ನೆಮ್ಮದಿಯಾಯಿತು. ಈ ಪಂಚವಿಜಯಗಳನ್ನೋದಿದರೆ, ಕೇಳಿದರೆ, ಪಳಂಚಿ ಪ್ರಭಾವನೆ ಮಾಡಿದರೆ, ಪಂಚಕಲ್ಯಾಣಪೂರ್ವಕವಾಗಿ ಮುಕ್ತಿಗೆ ಮುಂದಾಗುವುದು. ಇದು ಸುಸಿದ್ಧಾಂತ. ಭರತೇಶ ವೈಭವಕ್ಕೆ ಎಣೆಯೇ ಎಂದು ಯಾರಾದರೂ ಪ್ರೀತಿಸಿದರೆ, ಭರತೇಶನು ಮೋಕ್ಷಕ್ಕೆ ಸಂದಂತೆ ಸಲ್ಲುವರು.

''ಈ ಜಿನಕಥೆಯನ್ನು ಕೇಳಿದವರ ಪಾಪದ ಬೀಜವೇ ನಿರ್ನಾಮವಾಗುವುದು. ಅವರಿಗೆ ತೇಜವಾಗುವುದು; ಪುಣ್ಯವುಂಟಾಗುವುದು, ಮುಂದೆ ಒಲಿದು ಅಪರಾಜಿತೇಶ್ವರನನ್ನು ಕಾಣುವರು. ಇದನ್ನು ಪ್ರೇಮದಿಂದ ಓದಿದರೆ, ಹಾಡಿದರೆ, ಕೇಳಿದರೆ, ಸಂತೋಷಗೊಳ್ಳುವರು. ಅನಂತರ ನಿಯಮದಿಂದ ಸುರರಾಗಿ ಮುಂದೆ ಶ್ರೀಮಂದರಸ್ವಾಮಿಯನ್ನು ಪ್ರೀತಿಯಿಂದ ಕಾಣುವರು.'' ಎಂದು ತನ್ನ ಕಾವ್ಯದ ಫಲಶ್ರುತಿಯನ್ನೂ ಕವಿ ರತ್ನಾಕರಸಿದ್ಧನೇ ಹೇಳಿದ್ದಾನೆ. ವೃಷಭಮಾಸದಲ್ಲಿ ತೊಡಗಿದ ಈ ಕೃತಿಯು ಕುಂಭಮಾಸದಲ್ಲಿ ಪೂರ್ಣವಾಯಿತೆಂದು ಹೇಳಿ, ''ವೃಷಭಾಂಕ ಹಂಸನಾಥನೇ ಜಯ! ಪರಮ ಪುರುಷನೆ ಚಿದಂಬರ ಪುರುಷ'' ಎಂದು ಮಹಾಮಂಗಲವೆಸಗಿದ್ದಾನೆ — ನಮ್ಮ ಮಹಾಕವಿ ರತ್ನಾಕರಸಿದ್ಧ, ತನ್ನ ಮಹಾಕಾವ್ಯ ಭರತೇಶ ವೈಭವಕ್ಕೆ.